# ಶ್ರೀಮದ್ವಾಲ್ಮೀಕಿ
# ರಾಮಾಯಣಮ್



## ಅರಣ್ಯಕಾಂಡಃ

(ಕನ್ನಡ ಅನುವಾದ ಸಹಿತ)

# ಶ್ರೀಮದ್ವಾಲ್ಮೀಕಿರಾಮಾಯಣಮ್

# ಅರಣ್ಯಕಾಂಡಃ

( ಕನ್ನಡ ಅನುವಾದ ಸಹಿತ )

ಮುನ್ನುಡಿ

**ಡಾ|| ಡಿ. ವಿ. ಗುಂಡಪ್ಪನವರಿಂದ**

ಅನುವಾದಕರು

**ವಿದ್ವಾನ್ ಎನ್. ರಂಗನಾಥಶರ್ಮಾ**

ಪ್ರಕಾಶಕರು

**ರಾಮಾಯಣ ಪ್ರಕಾಶನ ಸಮಿತಿ**

ನರಸಿಂಹರಾಜ ಕಾಲೊನಿ, ಬೆಂಗಳೂರು-೧೯

ಮೊದಲನೆಯ ಮುದ್ರಣ ೧೯೬೮
(೨,೫೦೦ ಪ್ರತಿಗಳು)

ಎರಡನೆಯ ಮುದ್ರಣ ೧೯೭೭
(೨,೫೦೦ ಪ್ರತಿಗಳು)

ಮೂರನೆಯ ಮುದ್ರಣ ೧೯೮೬
(೩,೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ
ರಾಮಾಯಣ ಪ್ರಕಾಶನ ಸಮಿತಿಯವು
(All Rights Reserved)

ಬೆಲೆ : ರೂ. ೬೦–೦೦

ಮುದ್ರಣಕಾರರು
ಪ್ರಭಾ ಮುದ್ರಣಾಲಯ
ಬಸವನಗುಡಿ, ಬೆಂಗಳೂರು–೪

# ಬಿನ್ನಹ

ಈಗ ಶ್ರೀಮದ್ರಾಮಾಯಣದ ಅರಣ್ಯಕಾಂಡವನ್ನು ಕನ್ನಡ ಅನುವಾದ ಸಹಿತವಾಗಿ ಪ್ರಕಟಿಸಿ ವಾಚಕರಿಗೆ ಅರ್ಪಿಸಲು ನಮಗೆ ಬಹಳ ಸಂತೋಷ ವಾಗುತ್ತದೆ.

ಇದುವರೆಗಿನ ನಮ್ಮ ಪ್ರಕಟನೆಗಳು ಕನ್ನಡಿಗರ ಮೆಚ್ಚುಗೆಯನ್ನು ಗಳಿಸಿ ಜನಪ್ರಿಯವಾಗಿ ಪ್ರಚಾರವಾಗುತ್ತಿವೆ. ವಾಚಕರ ಪ್ರೋತ್ಸಾಹದಿಂದ ನಮ್ಮ ಉದ್ದೇಶವು ಕೈಗೂಡಿ, ಶೀಘ್ರದಲ್ಲಿ ಇತರ ಕಾಂಡಗಳೂ ಹಸ್ತಗತ ವಾಗುತ್ತವೆಂದು ನಮ್ಮ ನಂಬಿಕೆ.

ಮುದ್ರಣದ ವೆಚ್ಚವು ಅಧಿಕವಾದ್ದರಿಂದ ಅರಣ್ಯಕಾಂಡದ ಬೆಲೆಯನ್ನು ಸ್ವಲ್ಪವಾಗಿ ಏರಿಸುವುದು ಅನಿವಾರ್ಯವಾಯಿತು. ಆದರೆ ಯಾವ ಲಾಭಾಂಶ ವನ್ನೂ ಸಮಿತಿಯು ವೈಯಕ್ತಿಕವಾಗಿ ಬಳಸಿಕೊಳ್ಳದೆ, ಎಲ್ಲವನ್ನೂ ಮುಂದಿನ ಪ್ರಕಟನೆಗಳಿಗೆ ಮಾತ್ರ ಉಪಯೋಗಿಸುವುದೆಂಬುದನ್ನು ಮಹಾಜನರು ಗಮನಿಸ ಬೇಕಾಗಿ ಪ್ರಾರ್ಥನೆ.

ಮಾನ್ಯ ವಿದ್ವಾಂಸರಾದ ಡಾ॥ ಡಿ. ವಿ. ಗುಂಡಪ್ಪನವರು ಹಿಂದಿನಂತೆಯೇ ಮಾರ್ಗದರ್ಶನವನ್ನು ನೀಡಿ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ವಿದ್ವಾನ್ ಎನ್. ರಂಗನಾಥಶರ್ಮರು ಲಲಿತಶೈಲಿಯಲ್ಲಿ ಅನುವಾದಮಾಡಿದ್ದಾರೆ. ಪ್ರಭಾ ಮುದ್ರಣಾಲಯದ ಶ್ರೀ ಡಿ. ಎಸ್. ಕೃಷ್ಣಾಚಾರ್ಯರು ತಪ್ಪಿಲ್ಲದಂತೆ ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ಸಮಿತಿಯು ಕೃತಜ್ಞತೆಯಿಂದ ವಂದನೆಗಳನ್ನರ್ಪಿಸುತ್ತದೆ.

ಬೆಂಗಳೂರು
31–3–1968

ಡಿ. ಸಿ. ಅನಂತರಾಮಯ್ಯ
ಕಾರ್ಯದರ್ಶಿ

## ಮೂರನೆಯ ಮುದ್ರಣ

ಎರಡನೆಯ ಮುದ್ರಣದ ಪ್ರತಿಗಳೆಲ್ಲವೂ ಮಾರಾಟವಾಗಿರುವುದರಿಂದ ಮೂರನೆಯ ಮುದ್ರಣವನ್ನು ಮಾಡಲಾಗಿದೆ.

ಇತ್ತೀಚೆಗೆ ಕಾಗದ ಮತ್ತು ಮುದ್ರಣ ವೆಚ್ಚ ಹೆಚ್ಚಾಗಿರುವುದರಿಂದ ಅರಣ್ಯಕಾಂಡದ ಬೆಲೆಯನ್ನು ಸ್ವಲ್ಪ ಏರಿಸುವುದು ಅನಿವಾರ್ಯವಾಗಿದೆ. ಇದನ್ನು ಮನಗಂಡು ವಾಚಕರು ಎಂದಿನಂತೆ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬೆಂಗಳೂರು
31-3-1986

ಡಿ. ಸಿ. ಅನಂತರಾಮಯ್ಯ,
ಕಾರ್ಯದರ್ಶಿ

## ರಾಮಾಯಣ ಪ್ರಕಾಶನ ಸಮಿತಿ

### ಸದಸ್ಯರು

೧. ಶ್ರೀ ಟಿ. ಆರ್. ಶಾಮಣ್ಣ
೨. ಶ್ರೀ ಎಸ್. ಎನ್. ಮೂರ್ತಿ
೩. ಶ್ರೀ ಹೆಚ್. ಸಿ. ನಂಜುಂಡಭಟ್ಟ
೪. ಶ್ರೀ ಬಿ. ಕೆ. ಅನಂತರಾಮಯ್ಯ
೫. ಶ್ರೀ ಹೆಚ್. ವಿ. ಅಪ್ರಮೇಯ
೬. ಶ್ರೀ ಎನ್. ರಂಗನಾಥಶರ್ಮಾ
೭. ಶ್ರೀ ಡಿ. ಸಿ. ಅನಂತರಾಮಯ್ಯ (ಕಾರ್ಯದರ್ಶಿ)

# ಮುನ್ನುಡಿ

ಮಹರ್ಷಿಶುಶ್ರೂಷಾಸಕ್ತಂ ತದ್ವೈರಿಧ್ವಂಸನೋದ್ಯತಮ್ ।
ಜಾನಕೀವಿರಹಾರ್ತಂ ಶ್ರೀರಾಮಂ ನೌಮಿ ಸಲಕ್ಷ್ಮಣಮ್ ॥

ಅಯೋಧ್ಯಾಕಾಂಡವನ್ನು ರಾಮಾಯಣಗ್ರಂಥದ ಹೃದಯಭಾಗವೆಂದು ವರ್ಣಿಸುವುದುಂಟಷ್ಟೇ ? ಅದೇ ರೂಪಕವನ್ನು ಮುಂದುವರಿಸಬೇಕೆನ್ನಿಸಿದರೆ, ಅರಣ್ಯಕಾಂಡವನ್ನು ರಾಮಾಯಣಹೃದಯದ ಅಂತರಂಗವೆನ್ನುವುದು ಯುಕ್ತವಾಗುತ್ತದೆ. ಹೃದಯಚಕ್ರದ ಹೊರಗಿನ ಸುತ್ತುಕಟ್ಟು ಅಯೋಧ್ಯಾಕಾಂಡದ ಕಥೆ. ಆ ಚಕ್ರದ ನಡುವಣ ನಾಭಿಕುಂಭ ಅರಣ್ಯಕಾಂಡದ ಕಥೆ.

ಈ ಎರಡು ಕಾಂಡಗಳೂ ಹೃದಯಭೇದಕಗಳಾದವು. ಅಯೋಧ್ಯಾಕಾಂಡದಲ್ಲಿ ಶ್ರೀರಾಮಮೂರ್ತಿಯೊಬ್ಬನು ನಮ್ಮ ಹೃದಯವಿದ್ರಾವಣಕ್ಕೆ ಕಾರಣಭೂತನಾದರೆ, ಅರಣ್ಯಕಾಂಡದಲ್ಲಿ ರಾಮಸೀತೆಯರಿಬ್ಬರಿಗಾದ ಘಟನೆಗಳೂ ಎದೆಯನ್ನು ಬಿರಿಯಿಸುವಂಥವು. ಸೀತೆಗೆ ಬಂದ ವಿಪತ್ತು ಹೆಚ್ಚು ಸಂಕಟಕರವಾದದ್ದೆಂದು ಕೆಲವರಿಗನ್ನಿಸಬಹುದು. ನಾನು ಅಂಥವರಲ್ಲೊಬ್ಬ.

ಎರಡು ಕಾಂಡಗಳಲ್ಲಿಯೂ ಇಬ್ಬರ ಸತ್ತ್ವಪರೀಕ್ಷೆಯು ಆಗುತ್ತದೆ. ಅಯೋಧ್ಯಾಕಾಂಡದಲ್ಲಿ ಎದ್ದುಕಾಣುವ ಸಂಗತಿ ಶ್ರೀರಾಮನ ಸತ್ಯಶ್ರದ್ಧೆ ಮತ್ತು ತ್ಯಾಗಸಿದ್ಧತೆ. ಸಹಜವಾಗಿ ತನಗೆ ಬರಬೇಕಾಗಿದ್ದ ರಾಜ್ಯವನ್ನು ಆತನು ಸತ್ಯದ ಕಾರಣದಿಂದ ಪರಿಗ್ರಹಿಸಲೊಲ್ಲದೆ ವನವಾಸಕ್ಕೆ ತೆರಳಿದ. ಈ ವಿರಕ್ತಿ ಮಹೋದಾರವಾದದ್ದು. ಅರಣ್ಯಕಾಂಡದಲ್ಲಿ ಎದ್ದುಕಾಣುವ ಸಂಗತಿ ಸೀತೆಯ ವ್ರತಪರಿಪಾಲನೆ ಮತ್ತು ಕಷ್ಟಸಹಿಷ್ಣುತೆ. ಆಕೆ ಎದುರಿಸಬೇಕಾಗಿದ್ದ ಸನ್ನಿವೇಶ ರಾಮನಿಗಿದ್ದುದಕ್ಕಿಂತ ಹೆಚ್ಚು ದಾರುಣವಾದದ್ದು.

ಅಯೋಧ್ಯಾಕಾಂಡದ ಪ್ರಸಂಗವಿಲ್ಲದೆ ರಾಮಾಯಣದ ಕಥಾರಂಭವಿಲ್ಲ. ಅರಣ್ಯಕಾಂಡವಿಲ್ಲದಿದ್ದರೆ ಕಥೆ ಅಲ್ಲಿಗೇ ಕುಂಟುಬೀಳುತ್ತಿತ್ತು. ವನವಾಸಕ್ಕಾಗಿ ಹೊರಟ ಶ್ರೀರಾಮನು ಹದಿನಾಲ್ಕು ವರ್ಷಗಳ ಕಾಲ ನಾನಾ ನದೀಪರ್ವತಗಳನ್ನೂ ನಾನಾ ಅರಣ್ಯಪ್ರದೇಶಗಳನ್ನೂ ನೋಡಿಕೊಂಡು ಪ್ರವಾಸ

ಸಂತೋಷಭರಿತನಾಗಿ ಅಯೋಧ್ಯೆಗೆ ಹಿಂದಿರುಗಬಹುದಾಗಿತ್ತು. ಅದು ದೇಶಾಟನೆಯ ವೃತ್ತಾಂತ (Travelogue) ಆಗುತ್ತಿತ್ತು. ಶ್ರೀರಾಮನನ್ನೂ ಸೀತಾಲಕ್ಷ್ಮಣರನ್ನೂ ಮಹಾದೇಶಸಂಚಾರಿಗಳೆಂದು (Great Travellers) ಲೋಕದಲ್ಲಿ ಪರಿಗಣಿಸಲಾಗುತ್ತಿತ್ತು. ಅವರನ್ನು ಮಹಾವೀರಪಂಕ್ತಿಯಲ್ಲಿ ಗಣಿಸಲು ಕಾರಣವಿರುತ್ತಿರಲಿಲ್ಲ. ರಾಮಾಯಣದ ಮುಖ್ಯವಿಷಯ ರಾವಣ ವಿನಾಶ, ಅಥವಾ ಧರ್ಮವಿರೋಧಿಯ ದಂಡನೆ. ಇದಕ್ಕೆ ಕಾರಣವೊದಗಿದ್ದು ರಾವಣನು ಮಾಡಿದ ಸೀತಾಪಹರಣದಿಂದ. ಆದದ್ದರಿಂದ ಕಥೆಯ ಬೀಜಾಂಕುರ ಅರಣ್ಯಕಾಂಡದಲ್ಲಿದೆಯೆಂದಾಗುತ್ತದೆ.

ಹೀಗೆ ವಸ್ತುಸಂಗತಿಯನ್ನೂ ತತ್ತ್ವವನ್ನೂ ಆಲೋಚಿಸಿ ನೋಡಿದರೆ, ಕಾವ್ಯಕ್ಕೆ ತಕ್ಕ ಹೆಸರು ಸೀತಾಯನವೆಂಬುದು ನ್ಯಾಯವಾಗುತ್ತದೆ. ಜಾನಕೀ ದೇವಿಗೆ ಆ ವಿಪತ್ತು ಬಾರದೆಹೋಗಿದ್ದಿದ್ದರೆ, ಅಥವಾ ಆಕೆಯಲ್ಲಿ ಅಂಥ ವ್ರತನಿಷ್ಠೆ ಇಲ್ಲದೆಹೋಗಿದ್ದಿದ್ದರೆ ರಾಮಕಥೆಯ ದಾರಿ ಬೇರೆಯಾಗಬೇಕಾಗಿತ್ತು. ಕಥೆಯ ಲೋಕೋತ್ತರರೂಪಕ್ಕೆ ವಸ್ತುವನ್ನೊದಗಿಸಿದವಳು ಸೀತಾದೇವಿ.

ಹೀಗೆ ಹೇಳಿದ್ದರಿಂದ ಶ್ರೀರಾಮನ ಮಹತ್ತ್ವಕ್ಕೇನೂ ಕುಂದಾಗ ಲಾರದು. ಆತನು ಮಹಾಧೀರನೆಂಬುದು ಕಥಾರಂಭದಲ್ಲಿಯೇ ನಮಗೆ ಪ್ರತ್ಯಕ್ಷವಾಗಿದೆ. ಆತನು ಹಾಗಾಗದೆ ಸೀತಾವಿರಹಾನಂತರದಲ್ಲಿ ಬೇರೆ ರೀತಿ ನಡೆದುಕೊಂಡಿದ್ದಿದ್ದರೆ ಕಥಾಸರಣಿ ರಾಮಸರಣಿಯಾಗುತ್ತಿರಲಿಲ್ಲ. ಶ್ರೀರಾಮನ ಏಕಪತ್ನೀವ್ರತ ಲೋಕಪೂಜ್ಯವಾದದ್ದು ಸರಿ. ಆದರೆ ಅದೊಂದರಿಂದಲೇ ರಾಮಾಯಣಕಥೆಗೆ ಅದರ ಸಮಗ್ರರೂಪ ಬರುವುದಾಗುತ್ತಿರಲಿಲ್ಲ. ಹೀಗೆ ಶ್ರೀರಾಮನ ಮಹಾವಿಜಯಕ್ಕೆ ಅವಕಾಶ ದೊರೆತದ್ದು ಸೀತಾದೇವಿಯ ತಪಸ್ವಿತೆಯಿಂದ. ಆ ತಪಸ್ವಿದಂಪತಿಗಳಲ್ಲಿ ಆಕೆಯ ಮಹತ್ತ್ವ ಹೆಚ್ಚಿನದೆಂದು ನನಗನ್ನಿಸುತ್ತದೆ.

*　　*　　*　　*

ಶ್ರೀರಾಮನ ಮುಖ್ಯ ಗುಣಗಳು ಸತ್ಯಶ್ರದ್ಧೆ, ಭೋಗವಿರಕ್ತಿ. ಸೀತಾ ದೇವಿಯ ಮುಖ್ಯ ಗುಣಗಳು ವ್ರತನಿಷ್ಠೆ, ಆತ್ಮಸಂಯಮ.

ಸೀತೆಯ ಅಂತರಂಗಸ್ವರೂಪ ನಮಗೆ ಅರಣ್ಯಕಾಂಡದ ಪ್ರಾರಂಭ ದಲ್ಲಿಯೇ ಗೋಚರವಾಗುತ್ತದೆ. ಶ್ರೀರಾಮನು ದಂಡಕಾರಣ್ಯದಲ್ಲಿ ನಾನಾ

ಋಷ್ಯಾಶ್ರಮಗಳ ಸಂದರ್ಶನಮಾಡಿ ಶರಭಂಗಮುನಿಯ ಆಶ್ರಮಕ್ಕೆ ಬಂದಾಗ ಅಲ್ಲಿ ನೆರೆದಿದ್ದ ಋಷಿಗಳು ಶ್ರೀರಾಮನಿಗೆ ತಮ್ಮ ಕಷ್ಟಗಳನ್ನು ಹೇಳಿಕೊಂಡು ರಾಕ್ಷಸಬಾಧೆಯಿಂದ ತಮ್ಮನ್ನು ಕಾಪಾಡಬೇಕೆಂದು ಬೇಡಿಕೊಂಡರಷ್ಟೆ? (ಸರ್ಗ ೬, ಪುಟಗಳು ೩೧–೩೩.) ಶ್ರೀರಾಮನು ಅದನ್ನು ಲಾಲಿಸಿ ಭರವಸೆ ಕೊಟ್ಟ ಮಾತಿನ ವಿನಯ ಆತನ ಸ್ವಭಾವವನ್ನು ವ್ಯಕ್ತಪಡಿಸುತ್ತದೆ (ಪುಟ ೩೪):

ನೈವಮರ್ಹಥ ಮಾಂ ವಕ್ತುಂ
ಆಜ್ಞಪ್ತೋಽಹಂ ತಪಸ್ವಿನಾಮ್ ।
ಕೇವಲೇನಾತ್ಮಕಾರ್ಯೇಣ
ಪ್ರವೇಷ್ಟವ್ಯಂ ಮಯಾ ವನಮ್ ॥

—ಸ. ೬, ಶ್ಲೋ. ೨೨

"ನಿಮ್ಮಿಂದ ನನಗೆ ಬರುವ ಮಾತು ಬೇಡಿಕೆಯಲ್ಲ; ಆಜ್ಞೆ. ನಾನು ಸ್ವಕರ್ತವ್ಯವಶನಾಗಿ ಕಾಡಿಗೆ ಬಂದಿದ್ದೇನೆ. ದುಷ್ಟದಂಡನೆ ನನಗೆ ಕರ್ತವ್ಯ ವಾಗಿಯೇ ಇದೆ."

ಶ್ರೀರಾಮನು ಹೀಗೆ ದೀಕ್ಷೆ ಕೈಕೊಂಡಮೇಲೆ ಅದಕ್ಕಾಗಿ ಶಸ್ತ್ರಾಸ್ತ್ರ ಧಾರಣ ಮಾಡತಕ್ಕದ್ದು ಅವಶ್ಯವಾಯಿತು. ಅದರಂತೆ ಶರಭಂಗಾಶ್ರಮದಿಂದ ಮುಂದೆ ನಡೆದು ಸುತೀಕ್ಷ್ಣಾಶ್ರಮಕ್ಕೆ ಬಂದಾಗ, ಮುಂದಿನ ಪ್ರಯಾಣಕ್ಕೆ ಸಿದ್ಧತೆಯಾಗಿ ರಾಮನು ಧನುರ್ಬಾಣಗಳನ್ನು ಕೈಗೆ ತೆಗೆದುಕೊಂಡಾಗ ಸೀತಾದೇವಿ ಶಂಕಿತಳಾದಳು. ಕೈಯಲ್ಲಿ ಆಯುಧ ಹಿಡಿದವನು ಅದನ್ನು ಉಪಯೋಗಿಸದಿರುವುದು ಅಸಂಭವ; ಶಸ್ತ್ರಸಂಪತ್ತು ಕ್ರೌರ್ಯಕ್ಕೆ ಪ್ರೇರಕ ವಾಗುತ್ತದೆ; ಕ್ರೌರ್ಯವು ಪಾಪ; ಹೀಗೆ ಪಾಪಪ್ರಚೋದಕವಾದ ಶಸ್ತ್ರಾಸ್ತ್ರ ಗಳನ್ನು ತಪಸ್ವಿಗಳು ತ್ಯಜಿಸಬೇಕು—ಎಂದು ಆಕೆ ಶ್ರೀರಾಮನಿಗೆ ಉಪದೇಶ ಮಾಡಿ ಒಂದು ಪುರಾತನವಾದ ಆಖ್ಯಾಯಿಕೆಯನ್ನು ಉದಾಹರಿಸುತ್ತಾಳೆ (ಸರ್ಗ ೯, ಪುಟ ೪೫). ಪಾಪಗಳಲ್ಲಿ ಮಹತ್ತಮವಾದವು ಮೂರು: (೧) ಅಸತ್ಯ, (೨) ಪರದಾರಾಭಿಗಮನ, (೩) ನಿಷ್ಕಾರಣವೈರ. ಇವುಗಳಲ್ಲಿ ಮೊದಲ ಎರಡಕ್ಕೂ ರಾಮನು ಅವಕಾಶಕೊಡತಕ್ಕವನಲ್ಲ. ಮೂರನೆಯ ಪಾಪ ಬಂದೀತೇನೋ ಎಂದು ಆಕೆಗೆ ಶಂಕೆ. ಆಕೆ ಹೇಳುತ್ತಾಳೆ (ಪುಟ ೪೯):

*

अग्निसंयोगवद्धेतुः
शस्त्रसंयोग उच्यते ।
स्नेहाच्च बहुमानाच्च
स्मारये त्वां न शिक्षये ॥

—ಸ. ೯, ಶ್ಲೋಕಗಳು ೨೩, ೨೪

“ನಾನು ನಿಮಗೆ ಬೋಧನೆ ಮಾಡುತ್ತಿಲ್ಲ. ನೀವು ತಿಳಿದಿರುವುದನ್ನೇ ಜ್ಞಾಪಕಕ್ಕೆ ತರುತ್ತಿದ್ದೇನೆ. ಶಸ್ತ್ರಸಹವಾಸವು ಅಗ್ನಿಯ ಸಹವಾಸದಂತೆ.”

स्त्रीचापलादेतदुदाहृतं मे
धर्मं च वक्तुं तव कस्समर्थः ।
विचार्य बुद्ध्या तु सहानुजेन
यद्रोचते तत् कुरु मा चिरेण ॥

—ಸ. ೯, ಶ್ಲೋ. ೩೩

ಇದು ಸೀತೆಯ ಮಾತಿನ ಮರ್ಯಾದೆ. ಆಕೆಯ ಮನಸ್ಸು ಎಷ್ಟು ಕೋಮಲವಾದದ್ದು, ಮತ್ತು ಎಷ್ಟು ಶುಚಿಯಾದದ್ದು—ಎಂಬುದು ಈ ವಾಕ್ಯಗಳಿಂದ ಧ್ವನಿತವಾಗುತ್ತದೆ. ಶುಚಿತೆ, ಸರಳತೆ, ಕೋಮಲತೆ—ಇವುಗಳ ಜೊತೆಗೆ ನಿಷ್ಠೆ, ಪಾಪಭೀತಿ, ಉದಾತ್ತಚಿಂತನೆ—ಇವು ಸೀತೆಯ ನೈಜ ಗುಣಗಳು. ಈ ಗುಣಗಳನ್ನು ನಾವು ನೆನಪಿನಲ್ಲಿರಿಸಿಕೊಂಡು ಮುಂದಿನ ಕಥೆಯನ್ನು ನೋಡಬೇಕು.

ಶ್ರೀರಾಮನು ಸುತೀಕ್ಷ್ಣಾಶ್ರಮದಿಂದ ಅಗಸ್ತ್ಯಾಶ್ರಮಕ್ಕೆ ಹೊರಡುವ ವೇಳೆಯಲ್ಲಿ ನುಡಿದ ಒಂದು ಮಾತು ಈಗ ಕ್ರಿಸ್ತಶಕ ೧೯೬೮ ರಲ್ಲಿ ನಾವು ಗಮನಿಸತಕ್ಕದ್ದಾಗಿದೆ (ಪುಟ ೪೨) :

अमार्गेणागतां लक्ष्मीं
प्राप्येवान्वयवर्जितः ॥

—ಸ. ೮, ಶ್ಲೋ. ೮

“ಕುಲಗೇಡಿಯಾದವನಿಗೆ ಅನ್ಯಾಯಮಾರ್ಗದಲ್ಲಿ ಸಂಪತ್ತು ಬಂದರೆ ಅವನ ದರ್ಪಾಹಂಕಾರಗಳನ್ನು ಸಹಿಸುವುದು ಲೋಕಕ್ಕೆ ಹೇಗೆ ಕಷ್ಟ

ವಾಗುವುದೋ ಹಾಗೆ ಸಹಿಸಲಶಕ್ಯವಾಗುವಂತೆ ಮಧ್ಯಾಹ್ನಕ್ಕೆ ಬರುತ್ತಿರುವ ಸೂರ್ಯನ ತಾಪ."

ಲಂಚಕೋರರೂ ಕಳ್ಳಪೇಟೆಯುವರೂ ಭುಜತಟ್ಟಿಕೊಳ್ಳಲಿ!

ಮುಂದೆ ಶ್ರೀರಾಮನು ಅಗಸ್ತ್ಯಾಶ್ರಮಕ್ಕೆ ಬಂದಾಗ ಅಲ್ಲಿ ನಡೆಯುವ ಮಾತುಕತೆಗಳು ರಮಣೀಯವಾಗಿವೆ.

* * *

ಅಗಸ್ತ್ಯರು ಉಪದೇಶಿಸಿದಂತೆ ಶ್ರೀರಾಮನು ಪಂಚವಟಿಯಲ್ಲಿ ನೆಲಸಿದ್ದಾಗ ನಡೆಯುತ್ತವೆ ಮುಖ್ಯ ಘಟನೆಗಳು. ಶೂರ್ಪಣಖಿ ರಾಮನನ್ನು ಕಂಡು ಮೋಹಿತಳಾಗಿ ಆತನಲ್ಲಿಗೆ ಬಂದು "ಭವ ಮೇ ಭರ್ತಾ" ಎಂದು ಯಾಚಿಸುತ್ತಾಳೆ. ರಾಮನು ಆಕೆಯ ಇಷ್ಟವನ್ನು ನಿರಾಕರಿಸುವಾಗ ಪರಿಹಾಸಚೇಷ್ಟೆಯ ಮಾತನಾಡುತ್ತಾನೆ (ಪುಟ ೧೧೧) :

ಅನುಜಸ್ತ್ವೇಷ ಮೇ ಭ್ರಾತಾ
ಶೀಲವಾನ್ ಪ್ರಿಯದರ್ಶನಃ ।
ಶ್ರೀಮಾನ್ ಅಕೃತದಾರಶ್ಚ
ಲಕ್ಷ್ಮಣೋ ನಾಮ ವೀರ್ಯವಾನ್ ॥

—ಸ. ೧೮, ಶ್ಲೋ. ೩

ಇಲ್ಲಿಯ "ಅಕೃತದಾರಃ" ಎಂಬ ಮಾತಿಗೆ ಕೆಲವುಂದಿ ವ್ಯಾಖ್ಯಾನಕಾರರು ಯುಕ್ತಿಯಿಂದ ಅರ್ಥಹೇಳಲು ವಿಪರೀತ ಶ್ರಮಪಟ್ಟಿದ್ದಾರೆ. ಮಾತಿನ ಸ್ವಾಭಾವಿಕವಾದ ಅರ್ಥ "ಮದುವೆಯಾಗದವನು" ಎಂದು. ಲಕ್ಷ್ಮಣನಿಗೆ ಮದುವೆಯಾಗಿತ್ತಲ್ಲ?—ಎಂಬುದು ಅವರ ಕಷ್ಟ! ರಾಮನು ಚೇಷ್ಟೆಮಾಡುತ್ತಿದ್ದನೆಂಬುದು ವ್ಯಾಖ್ಯಾನಕಾರರ ಮನಸ್ಸಿಗೆ ಬರಲಿಲ್ಲ. ಅಥವಾ ರಾಮನು ಚೇಷ್ಟೆಮಾಡಬಾರದೆಂಬುದು ಅವರ ಉದ್ದೇಶ. ಅಥವಾ, ಹಾಸ್ಯಕ್ಕಾಗಿ ಕೂಡ ಒಂದು ಅಸತ್ಯ ಅವನ ಬಾಯಿಂದ ಬಾರದೆಂಬುದು ಅವರ ತಾತ್ಪರ್ಯ. ಬೇರೆ ಸಂದರ್ಭದಲ್ಲಿ—ವಾಲಿಯ ಪ್ರಕರಣದಲ್ಲಿ—

ವಿವಾಹಕಾಲೇ ರತಿಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।

ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ
ಪಂಚಾನೃತಾನ್ಯಾಹುರಪಾತಕಾನಿ ||

—ಎಂಬ ಪುರಾತನೋಕ್ತಿಯಿಂದ ಐದು ಅಸತ್ಯಗಳನ್ನು ಸಮರ್ಥನೆ ಮಾಡಿದ ಮಹನೀಯರಿಗೆ ಆ ಪರಿಹಾಸವಾಕ್ಯದ ಆರನೆಯ ಅನೃತ ಅಸಹನೀಯ ವಾದದ್ದು ಚೋದ್ಯವಾಗಿದೆ. ಪಾಪವಲ್ಲದ ಅನೃತಗಳು ಎಷ್ಟೋ ಇವೆ. ಅಷ್ಟೇ ಅಲ್ಲ; ಅವು ಧರ್ಮಸಾಧಕಗಳೇ ಆಗುತ್ತವೆ. ಇದಕ್ಕೆ ದೃಷ್ಟಾಂತ ಗಳನ್ನು ಶ್ರೀಕೃಷ್ಣನು ಅರ್ಜುನನಿಗೆ ತೋರಿಸಿದ್ದಾನೆ. ಯಾವ ಮಾತು ಭೂತಹಿತಸಾಧಕವೋ ಅದು ಸತ್ಯ. ಯಾವ ಮಾತು ಮತ್ತೊಬ್ಬರಿಗೆ ಅನ್ಯಾಯಕಾರಿಯೋ ಹಿಂಸಾಕರವೋ ಅದು ಅಸತ್ಯ. ಈ ಮೂಲತತ್ತ್ವ ವನ್ನು ದೃಷ್ಟಿಯಲ್ಲಿರಿಸಿಕೊಂಡು ನೋಡಿದರೆ ಮೇಲಣ ಪರಿಹಾಸೋಕ್ತಿಯಲ್ಲಿ ದೋಷವೇನೂ ತೋರದು.

ವಾಲ್ಮೀಕಿಗಳಾದರೋ ಪ ರಿ ಹ ಸ ನ ಶೀ ಲ ರೆಂ ದು ಹತ್ತಾರು ಕಡೆ ಶ್ರೀಮದ್ರಾಮಾಯಣದಲ್ಲಿ ಕಂಡುಬರುತ್ತದೆ. ನಕ್ಕವರಿಗೆ ಸ್ವರ್ಗವಿಲ್ಲವೇನು ?

ಸ್ವರ್ಗಾಯತಿಂ ನ ಪರಿಹಾಸಕಥಾ ರುಣದ್ಧಿ ||

ಈ ಸಂದರ್ಭವೊಂದರಲ್ಲೇ ಅಲ್ಲ; ಇಂಥ ಅನೇಕ ಕಾವ್ಯಸಂದರ್ಭಗಳಲ್ಲಿ ನಮ್ಮ ಟೀಕಾಕಾರರು ಹಾಸ್ಯಾನುಭವಕ್ಕೆ ಅಸಮರ್ಥರಾಗಿ ನೀರಸವ್ಯಾಖ್ಯಾನ ಗಳನ್ನು ಮಾಡಿದ್ದಾರೆ.

ಶ್ರೀರಾಮನಿಂದ ಶೂರ್ಪಣಖಿಗೆ ಆದ ಪ್ರತೀಕಾರವನ್ನು ನೋಡಿ ನಗುವವರು ಆಕೆ ಶ್ರೀಕೃಷ್ಣನಲ್ಲಿ ಹಾಗೆ ಪ್ರಣಯಭಿಕ್ಷೆ ಬೇಡಿದ್ದಿದ್ದರೆ ಏನಾಗುತ್ತಿತ್ತೆಂಬುದನ್ನು ಊ ಹ ನ ತ ರ್ಕ ವಿ ಷ ಯ ಮಾಡಿಕೊಳ್ಳಬಹುದು. ಕುಬ್ಜೆ ಎಂಬವಳು ಕುರೂಪಿ. ಶೂರ್ಪಣಖಿಯು ಕುರೂಪಿಯಾಗಿದ್ದರೂ ಕಾಮರೂಪಿ: ರಮಣೀಯ ರೂಪವನ್ನು ತನ್ನ ಇಚ್ಛೆಯಂತೆ ತಾಳಬಲ್ಲವಳು. ತನ್ನನ್ನು ಬೇಡಬಂದ ಕುಬ್ಜೆಗೆ ಕೃಷ್ಣನು ರೂಪಸೌಂದರ್ಯವನ್ನು ಅನುಗ್ರಹಿಸಿ ಅವಳ ಇಷ್ಟವನ್ನು ಪೂರ್ತಿಮಾಡಿದನು :

ಏಷ್ಯಾಮಿ ತೇ ಗೃಹಂ ಸುಭ್ರೂಃ
ಪುಂಸಾಮಾಧಿವಿಕರ್ಶನಮ್ ।

ಸಾಧಿತಾರ್ಥೋಽಗ್ರಹಾಣಾಂ ನಃ
ಪಾಂಥಾನಾಂ ತ್ವಂ ಪರಾಯಣಮ್ ॥
—ಭಾಗವತ ದಶಮಸ್ಕಂಧ : ಸ. ೪೨, ಶ್ಲೋ. ೧೨

ಶೂರ್ಪಣಖಾ ಪ್ರಕರಣದ ಫಲಿತಾಂಶವೇ ರಾವಣನ ವಿರೋಧೋತ್ಪತ್ತಿ.

* * *

ಮುಂದಿನ ಕಥೆಯಾದ ಮಾರೀಚ ಪ್ರಕರಣದಲ್ಲಿ ವಾಲ್ಮೀಕಿಗಳ ನಿರ್ಮಾಣಪ್ರತಿಭೆ ಮುಗಿಲು ಮುಟ್ಟುತ್ತದೆ. ಮಾರೀಚ ಕಥಾ ಸಂವಿಧಾನ ಅತ್ಯಂತ ಕುತುಕವುಳ್ಳದ್ದು. ರಾವಣನ ಅನುಸಂಧಾನದೊಳಕ್ಕೆ ಮಾರೀಚ ನಂಥ ವ್ಯಕ್ತಿಯನ್ನು ತಂದಿರುವುದೇ ಒಂದು ದೊಡ್ಡ ಕಲ್ಪನೆ. ಕಥೆಯ ಮುಖ್ಯಧಾರೆಗೆ ಇದು ತೀರಾ ಅನಿವಾರ್ಯವಾದದ್ದೇನೂ ಅಲ್ಲ. ಬೇರೆ ಯಾವ ನೆವದಿಂದಲಾದರೂ—ಸ್ನಾನದ ನೆವದಿಂದ, ಪಾಕದ ನೆವದಿಂದ, ಪೂಜೆಯ ನೆವದಿಂದ—ಸೀತೆ ಏಕಾಕಿಯಾಗಿರುವಂತೆ ಕಥಾರಚನೆಯಾಗ ಬಹುದಿತ್ತು. ಈ ಸಂದರ್ಭದಲ್ಲಿ ಮಾರೀಚನ ಪ್ರವೇಶವು ಸ್ವಾರಸ್ಯಪರಿ ಪೋಷಕವಾಗಿದೆ.

ಮಾರೀಚನು ಹುಟ್ಟಿನಿಂದ ರಾಕ್ಷಸ. ಆದರೆ ಸ್ವಭಾವದಿಂದ ಅಷ್ಟು ಕೆಟ್ಟವನಲ್ಲ. ವಿಭೀಷಣನಂತೆ ಅವನು. ಅವರಿಬ್ಬರೂ ರಾವಣನ ಆಲೋಚನೆ ಅಧರ್ಮವಾದದ್ದೆಂದು ಬುದ್ಧಿ ಹೇಳಿದವರು. ಮಾರೀಚನ ಉಪದೇಶ ಹೀಗಿತ್ತು (ಪುಟ ೨೨೭) :

ತ್ವದ್ವಿಧಃ ಕಾಮವೃತ್ತೋ ಹಿ
ದುಶ್ಶೀಲಃ ಪಾಪಮಂತ್ರಿತಃ ।
ಆತ್ಮಾನಂ ಸ್ವಜನಂ ರಾಷ್ಟ್ರಂ
ಸ ರಾಜಾ ಹಂತಿ ದುರ್ಮತಿಃ ॥

—ಸ. ೩೭, ಶ್ಲೋ. ೭

ಆದರೆ ಮಾರೀಚನ ಧರ್ಮನಿಷ್ಠೆ ವಿಭೀಷಣನದರಷ್ಟು ದೃಢವಾದದ್ದಲ್ಲ. ಮಾರೀಚನು ಪೂರ್ವದಲ್ಲಿ ವಿಶ್ವಾಮಿತ್ರಾಶ್ರಮದಲ್ಲಿ ಬಾಲಕ ರಾಮನ ಬಾಣದ ರುಚಿ ಕಂಡಿದ್ದವನು. ಅವನ ಮನಸ್ಸಿನಲ್ಲಿ ರಾಮನನ್ನು ಕುರಿತು ಭಯ ಇದ್ದಿರಬೇಕು. ಅದರ ಜೊತೆಗೆ ಕೊಂಚ ಈರ್ಷ್ಯೆಯೂ ಇದ್ದಿರಬಹುದು.

ಅವನು ರಾವಣನ ಬಲಾತ್ಕಾರಕ್ಕೂ ದಾಕ್ಷಿಣ್ಯಕ್ಕೂ ಒಳಪಟ್ಟು ವಿಧೇಯನಾದ. ಅವನು ಮಾಯಾಮೃಗವಾಗಿ ಸುಳಿದಾಡಿ ಸೀತೆಯನ್ನೂ ರಾಮನನ್ನೂ ಸಹ ಮೋಹಗೊಳಿಸಿದ್ದರ ವರ್ಣನೆ ಶ್ರೀಮದ್ರಾಮಾಯಣದ ಅತ್ಯಂತ ಸುಂದರ ಪ್ರಕರಣಗಳಲ್ಲಿ ಒಂದಾಗಿ ಗಣ್ಯವಾಗಬೇಕಾದದ್ದು (ಪುಟ ೨೫೫-೬):

ರೂಪ್ಯೈರ್ಬಿಂದುಶತೈಶ್ಚಿತ್ರಃ ಭೂತ್ವಾ ಸ ಪ್ರಿಯದರ್ಶನಃ ।
ವಿಟಪೀನಾಂ ಕಿಸಲಯಾನ್ ಭಂಕ್ತ್ವಾದನ್ ವಿಚಚಾರ ಹ ॥
ಪುನರ್ಗತ್ವಾ ನಿವೃತ್ತಶ್ಚ ವಿಚಚಾರ ಮೃಗೋತ್ತಮಃ ।
ಗತ್ವಾ ಮುಹೂರ್ತಂ ತ್ವರಯಾ ಪುನಃ ಪ್ರತಿನಿವರ್ತತೇ ॥
ವಿಕ್ರೀಡಂಶ್ಚ ಕ್ವಚಿದ್ಭೂಮೌ ಪುನರೇವ ನಿಷೀದತಿ ।
ಆಶ್ರಮದ್ವಾರಮಾಗಮ್ಯ ಮೃಗಯೂಥಾನಿ ಗಚ್ಛತಿ ॥

—ಸ. ೪೨, ಶ್ಲೋಕಗಳು ೨೨, ೨೫, ೨೬

"ಮಾರೀಚವೇಷ", "ರಾವಣ ಸಂನ್ಯಾಸ"—ಇವು ಸಾಮಾನ್ಯ ಜನದ ಬಳಕೆಯ ಮಾತಿನಲ್ಲಿ ಬದುಕಿರುವ ಪದಗಳು: ಮಹಾಭಾರತದ ಶಕುನಿ ಮಾವ, ಮೈಸೂರು ಚರಿತ್ರೆಯ ಮೀರ್ ಸಾದಕ್—ಎಂಬ ಹೆಸರುಗಳ ಹಾಗೆ. ಕೃತ್ರಿಮ, ವಂಚನೆ, ಮೋಸ, ಠಕ್ಕು ಕಂಡ ಕಡೆ ಮಾರೀಚನ ಸ್ಮರಣೆ ಬರುತ್ತದೆ.

ಆ ಹೆಸರಿನಲ್ಲಿ ಒಂದು ಚೋದ್ಯ ಕಾಣುತ್ತದೆ. "ಮರೀಚಿ" ಎಂದರೆ ಸೂರ್ಯಕಿರಣ. ಸೂರ್ಯಕಿರಣವು ಮರುಭೂಮಿಯ ಮರಳಿನ ಹರವನ್ನು ಮುಟ್ಟಿದಾಗ ದೂರದಿಂದ ನೋಡುವವರಿಗೆ ಅಲ್ಲಿ ಒಂದು ಕೆರೆಯೋ ನದಿಯೋ ಇರುವಂತೆ ಭಾಸವಾಗುತ್ತದೆ. ಇದೇ ಬಿಸಿಲ್ಗುದುರೆ ಅಥವಾ ಮರೀಚಿಕೆ ಅಥವಾ ಮೃಗತೃಷ್ಣೆ. ಇದು ಬರಿಯ ಭ್ರಮೆ ಅಥವಾ ಭ್ರಾಂತಿ. ಆದದ್ದರಿಂದ "ಮಾರೀಚ" ಶಬ್ದಕ್ಕೆ ಭ್ರಾಂತಿಕಾರಕವಾದದ್ದು, ಮಾಯಾರೂಪದ್ದು—ಎಂದು ಅರ್ಥ. ಮರೀಚಿಕಾ ಎಂಬ ಅರ್ಥವನ್ನೇ ವಾಲ್ಮೀಕಿಗಳು ಉದ್ದೇಶದಲ್ಲಿರಿಸಿಕೊಂಡು ಮಾರೀಚ ಪಾತ್ರವನ್ನು ರಚಿಸಿದರೋ ಹೇಗೋ.

ಅದ್ವೈತ ವೇದಾಂತದಲ್ಲಿ ಮಾಯೆ ಎಂಬುದಕ್ಕೆ ಮರೀಚಿಕೆ ಅಥವಾ ಮೃಗತೃಷ್ಣೆ ಒಂದು ಪ್ರಸಿದ್ಧ ದೃಷ್ಟಾಂತ.

ಮೃಗತೃಷ್ಣಾಂಭಸಿ ಸ್ನಾತಃ
ಖಪುಷ್ಪಕೃತಶೇಖರಃ ।
ಏಷ ವಂಧ್ಯಾಸುತೋ ಯಾತಿ
ಶಶಶೃಂಗಧನುರ್ಧರಃ ॥

“ ಈ ಬಂಜೆಯ ಮಗನು ಮರಳ್ಗಾಡಿನ ಬಿಸಿಲ್ಗುದುರೆಯ ನೀರಿನಲ್ಲಿ ಸ್ನಾನಮಾಡಿ, ಗಗನಕುಸುಮದಿಂದ ಅಲಂಕೃತನಾಗಿ, ಮೊಲದ ಕೊಂಬಿನ ಬಿಲ್ಲುಬಾಣಗಳನ್ನು ಹಿಡಿದು ಬರುತ್ತಿದ್ದಾನೆ.”

ಇದರಲ್ಲಿ ಎಲ್ಲವೂ ಕಾಲ್ಪನಿಕ ಪದಾರ್ಥಗಳು ; ವಾಸ್ತವಿಕಗಳಲ್ಲ. ಬರಿಯ ತೋರಿಕೆಗಳು, ಗಟ್ಟಿ ತಿರುಳಲ್ಲ. ಜಗತ್ತೂ ಹಾಗೆ ಒಂದು ಬಗೆಯ ತೋರಿಕೆ ಅಥವಾ ಭ್ರಾಂತಿಪರಂಪರೆಯೆಂದು ಭಾವ.

* * *

ಮಾರೀಚವಧೆಯ ಕಾಲದಲ್ಲಿಯೇ ಪಂಚವಟಿಯ ಮತ್ತೊಂದು ಪ್ರದೇಶ ದಲ್ಲಿ ರಾಮನ ಪರ್ಣಶಾಲೆಯಲ್ಲಿ ರಾವಣನಿಂದ ಸೀತಾಪಹಾರವಾಯಿತು. ಆಗ ಸೀತಾರಾವಣರಿಗೆ ನಡೆದ ವಾಗ್ವಾದದ ರೀತಿ ಗಮನವಿರಿಸಿ ಓದಬೇಕಾದದ್ದು (ಸರ್ಗಗಳು ೪೭, ೪೮).

ಶ್ರೀರಾಮನು ತನ್ನ ಆಶ್ರಮಕ್ಕೆ ಹಿಂದಿರುಗಿ ಸೀತಾದೇವಿಯನ್ನು ಕಾಣದೆ ಕಳವಳಗೊಂಡು ಲಕ್ಷ್ಮಣನನ್ನು ಆಕ್ಷೇಪಿಸಿದ ಸಂದರ್ಭ ನಮ್ಮ ದೃಷ್ಟಿಯಲ್ಲಿರಬೇಕಾದದ್ದು. ಆಗ ಲಕ್ಷ್ಮಣನಿಗಾದ ಉಭಯಸಂಕಟದ ಸ್ಮರಣೆ ಅನೇಕ ಮಂದಿಗೆ ಅವರವರ ಜೀವಿತಸಂದರ್ಭಗಳಲ್ಲಿ ಬಂದಿವೆ. ಲಕ್ಷ್ಮಣನಿಗೆ ಒಂದು ಕಡೆ ಅತ್ತಿಗೆಯ ಮುನಿಸು, ಇನ್ನೊಂದು ಕಡೆ ಅಣ್ಣನ ಮುಳಿಸು. ಆತ ಯಾರ ಮಾತಿನಂತೆ ನಡೆಯಬೇಕಾಗಿತ್ತು ? ಆ ಇಬ್ಬರ ವಾದಗಳೂ ಅವರವರ ದೃಷ್ಟಿಗಳಿಂದ ಯುಕ್ತಗಳಾಗಿಯೇ ಇವೆ. ಅವರ ಉದ್ವೇಗದಲ್ಲಿ, ಅವನ ದೃಷ್ಟಿಯೂ ಒಂದಿರಬಹುದೆಂದು ಅವರಿಬ್ಬರಿಗೂ ತೋರದೆಹೋಯಿತು. ಧರ್ಮಸೇವಕನಾದವನು ಹೀಗೆ ಉಭಯಪಕ್ಷದ ನಿಷ್ಠುರಕ್ಕೆ ಸಿಕ್ಕುವುದು ಎಷ್ಟೋ ವೇಳೆ ಅನಿವಾರ್ಯವಾಗುತ್ತದೆ. ಧರ್ಮೈಕದೃಷ್ಟಿಯುಳ್ಳವನು ಪೂಜ್ಯರಾದ ಇಬ್ಬರ ಮಾತನ್ನೂ ಬದಿಗಿರಿಸಿ ತನಗೆ ಯುಕ್ತವೆನಿಸಿದ ದಾರಿಯನ್ನೇ ಹಿಡಿಯಬೇಕಾಗುತ್ತದೆ. ಇಬ್ಬರು

ಪೂಜ್ಯರಿಗೂ ತಲೆಬಾಗಿ ಹಾಗೆಯೇ ಅವರನ್ನು ಎದುರಿಸಿ ತನ್ನ ಮನಸ್ಸಾಕ್ಷಿ ಯಂತೆ ನಡೆದದ್ದು ಲಕ್ಷ್ಮಣನ ಮಹಾಗುಣ. ಆತನ ಸ್ವಾತಂತ್ರ್ಯವೂ ಧೈರ್ಯಸ್ಥೈರ್ಯಗಳೂ ಧರ್ಮನಿಷ್ಠೆಯುಳ್ಳವರಿಗೆ ಸರ್ವದಾ ನೆನಪಿನಲ್ಲಿರ ಬೇಕಾದದ್ದು.

ಅಲ್ಲಿಂದ ಮುಂದಕ್ಕೆ ಸೀತಾನ್ವೇಷಣೆಯ ಕಥೆ. ಆ ಪ್ರಕರಣದಲ್ಲಿ ರಾಮಲಕ್ಷ್ಮಣರು ಅರಣ್ಯದಲ್ಲಿ ಕಂಡ ಪ್ರಕೃತಿಸೌಂದರ್ಯಗಳನ್ನು ವಾಲ್ಮೀಕಿ ಗಳು ಮನೋಹರವಾದ ಶ್ಲೋಕಗಳಲ್ಲಿ ಚಿತ್ರಿಸಿದ್ದಾರೆ. ರಾಮಲಕ್ಷ್ಮಣರು ಕರ್ಣಾಟಕದೇಶದ ಪಂಪಾಸರೋವರದ ಬಳಿ ಬಂದು ಸೇರಿದುದರ ಕಥನ ದೊಡನೆ ಅರಣ್ಯಕಾಂಡ ಸಮಾಪ್ತವಾಗುತ್ತದೆ.

* * *

ವಿದ್ವಾನ್ ಶ್ರೀ ಎನ್. ರಂಗನಾಥಶರ್ಮರವರು ಈ ರಸವತ್ತಾದ ಅರಣ್ಯಕಾಂಡವನ್ನು ತಮಗೆ ಸಹಜವಾಗಿ ಬಂದಿರುವ ಸರಳ ಸುಂದರ ಶೈಲಿ ಯಲ್ಲಿ ಅನುವಾದಮಾಡಿದ್ದಾರೆ. ಅನೇಕ ವ್ಯಾಖ್ಯಾನಗಳನ್ನು ಶೋಧಿಸಿ ರಸಪುಷ್ಟಿಗೆ ಅನುಕೂಲವಾಗುವ ಅರ್ಥವನ್ನು ಹಿಡಿದಿದ್ದಾರೆ. ಅನುವಾದವನ್ನು ನಾನು ಅಲ್ಲಲ್ಲಿ ಓದಿಸಿ ಕೇಳಿ ಮೆಚ್ಚಿಕೊಂಡಿದ್ದೇನೆ. ಕನ್ನಡ ಮಹಾಜನಗಳು ಇದನ್ನು ಕೃತಜ್ಞತೆಯಿಂದ ಸ್ವೀಕರಿಸುವರೆಂದು ನಂಬಿದ್ದೇನೆ.

— — —

ಒಟ್ಟಿನಲ್ಲಿ ಅರಣ್ಯಕಾಂಡವು ಕರುಣಪ್ರಧಾನವಾದ ಪ್ರಕರಣ. ಇತರ ರಸಗಳು ಅಲ್ಲಿಲ್ಲವೆಂದಲ್ಲ ; ವೀರಾದ್ಭುತಶೃಂಗಾರಗಳು ಅಷ್ಟಿಷ್ಟು ಇವೆ.

ಕರುಣವು ಇತರ ಕಾಂಡಗಳಲ್ಲಿ ಇಲ್ಲವೆಂದೂ ಅಲ್ಲ. ಅಯೋಧ್ಯಾಕಾಂಡ ದಲ್ಲಿಯೂ ಉತ್ತರಕಾಂಡದಲ್ಲಿಯೂ ಕರುಣವು ಹೊಳೆಹೊಳೆಯಾಗಿ ಹರಿಯು ತ್ತದೆ. ಆದರೆ ಅರಣ್ಯಕಾಂಡದಲ್ಲಿ ಕರುಣದ ಹೊಳೆಯಲ್ಲಿ ನೆರೆ ಬಂದಿದೆ.

ಕರುಣವೆಂದರೆ ಏನು ? ಇನ್ನೊಬ್ಬರ ಕಷ್ಟವನ್ನು ನಾವು ಕಂಡಾಗ "ಅಯ್ಯೋ ಪಾಪ !" ಎನ್ನುವಂತೆ ಮಾಡುವ ಗುಣ. ಅದೇ ಕನಿಕರ.

ಕರುಣಪ್ರೇರಣೆಯಲ್ಲಿ ಎರಡು ಅಂತರಂಗಪ್ರವೃತ್ತಿಗಳು ಮಿಳಿತವಾಗಿರು ತ್ತವೆ. ಅವೆರಡೂ ಪ್ರತಿಯೊಬ್ಬ ಮನುಷ್ಯನಲ್ಲಿಯೂ ನೈಜವಾಗಿರುವ ಪ್ರವೃತ್ತಿಗಳೇ. ಒಂದು ಸಹಾನುಭವದ್ದು ; ಇನ್ನೊಂದು ನ್ಯಾಯವಿಚಾರದ್ದು.

ಒಂದಾನೊಂದು ಸನ್ನಿವೇಶದಲ್ಲಿ ನಮಗೆ ಸುಖವೋ ದುಃಖವೋ ಆದಾಗ ಆ ಅಥವಾ ಅಂಥ ಸನ್ನಿವೇಶದಲ್ಲಿ ಸುಖವೋ ದುಃಖವೋ ಆಗುತ್ತದೆಂದು ಭಾವಿಸಿಕೊಳ್ಳುತ್ತೇವೆ. ಈ ಸ್ವಾನುಭವಪರಾವರ್ತನೆಯೇ ಎಲ್ಲ ಲೋಕಬಾಂಧವ್ಯಕ್ಕೂ ತಳಹದಿ. ನಮ್ಮ ಮೈ ನೋಯಿಸಿದ್ದು ಇತರರನ್ನೂ ನೋಯಿಸುತ್ತದೆ. ನಮ್ಮ ಬಾಯಿಗೆ ಸಿಹಿಯಾದದ್ದು ಇನ್ನೊಬ್ಬರ ಬಾಯಿಗೂ ಸವಿಯಾಗುತ್ತದೆ. ನಮ್ಮ ಬೆನ್ನು ಸವರಿಕೊಂಡು ಇನ್ನೊಬ್ಬರ ಬೆನ್ನು ತಡವುತ್ತೇವೆ. ನಮ್ಮ ಮೈ ಚಿವುಟಿಕೊಂಡು ಇನ್ನೊಬ್ಬರ ಮೈ ಚಿವುಟಹೊರಡುತ್ತೇವೆ. ಈ ಸ್ವಾನುಭವಪರಾವರ್ತನೆಯೇ ನಮ್ಮ ಲೋಕಪರಿಜ್ಞಾನದಲ್ಲಿ ಪ್ರಥಮ ಭಾಗ. ಅದರ ಪ್ರತಿಚ್ಛಾಯೆಯಾದ ಪರಾನುಭವಸ್ವಯಮಂಗೀಕಾರವೇ ಎರಡನೆಯ ಭಾಗ. ಇನ್ನೊಬ್ಬರು ನೋವುಪಡುತ್ತಿರುವಾಗ ನಾವು ಅವರೊಡನೆ ಕೂಡಿ ನೋವುಪಡುತ್ತೇವೆ. ಅನ್ಯರ ದುಃಖವನ್ನು ನಮ್ಮದು ಮಾಡಿಕೊಳ್ಳುತ್ತೇವೆ. ಅನ್ಯರ ಸಂತೋಷ–ವ್ಯಸನಗಳಲ್ಲಿ ನಾವು ಭಾಗಿಗಳಾಗುತ್ತೇವೆ. ಇದೇ ಸಹಾನುಭೂತಿ. ಅದೇ ಅನುಕಂಪೆ, ದಯೆ, ಕನಿಕರ, ಸ್ವಾನುಭವದ ಮೂಲಕ ಅನ್ಯಾನುಭವದ ಅರಿವು. ಅನ್ಯಮನೋಭಾವದ ಅರಿವಾದಮೇಲೆ ಅನ್ಯರೊಡನೆ ಅನುಭವಸಹಭಾಗಿತೆ. ಇದು ಆತ್ಮೌಪಮ್ಯವರ್ತನೆಯ ಮೂಲ. ಆತ್ಮೌಪಮ್ಯವೇ ಲೋಕಸಂಗ್ರಹನೀತಿಯ ಅಂತರ್ಯ.

ಆತ್ಮೌಪಮ್ಯೇನ ಸರ್ವತ್ರ
ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ
ಸ ಯೋಗೀ ಪರಮೋ ಮತಃ ॥

—ಭಗವದ್ಗೀತೆ: ಅ. ೬, ಶ್ಲೋ. ೩೨

ಅನುಭೂತಿಯೂ ಅನುಕಂಪೆಯೂ ಹೃದಯದ ಕಾರ್ಯ. ಅದರ ಜೊತೆಗೆ ಸೇರತಕ್ಕದ್ದು ಬುದ್ಧಿಯ ಕಾರ್ಯವಾದ ಯುಕ್ತಾಯುಕ್ತವಿವೇಚನೆ. ಯಾವ ಸಂದರ್ಭದಲ್ಲಿ ಕರುಣವು ಯುಕ್ತವಾಗುತ್ತದೆ? ಅದು ಎಷ್ಟುಮಟ್ಟಿಗೆ? —ಇದು ನ್ಯಾಯವಿಚಾರ. ಕರುಣವು ನ್ಯಾಯಸಮ್ಮತವಾಗಬೇಕು. ನ್ಯಾಯವು ಪಾತ್ರಾಪಾತ್ರವಿವೇಕದಿಂದ ಬರುತ್ತದೆ. ಹಸಿವು ಎಲ್ಲರಿಗೂ ಕಷ್ಟವೇ. ಆದರೆ ಮೂರು ವರ್ಷದ ಮಗು, ಮುವ್ವತ್ತು ವರ್ಷದ ಬಲಿಷ್ಠ—

ಈ ಇಬ್ಬರಲ್ಲಿ ಯಾರ ಕಷ್ಟ ಹೆಚ್ಚಿನದು? ಸಹಿಸುವ ಸಾಮರ್ಥ್ಯ ಯಾರಿಗೆ ಕಡಮೆಯೋ ಅವರಿಗೆ ಹೆಚ್ಚು ಕನಿಕರ ಸಲ್ಲುತ್ತದೆ. ಅಡವಿಯ ಅಲೆದಾಟ ಎಲ್ಲರಿಗೂ ಆಯಾಸವೇ. ಆದರೆ ಅರಮನೆಯ ಅಭ್ಯಾಸವಿರುವವರಿಗೆ ಆಯಾಸ ಹೆಚ್ಚು. ಹೀಗೆ ಪ್ರಸಕ್ತಮನುಷ್ಯನ ಬಲಾಬಲಗಳಿಂದ, ಅವನಿಗಿರುವ ಆವಶ್ಯಕತೆಯನ್ನನುಸರಿಸಿ ಕರುಣವನ್ನು ಹಂಚುತ್ತೇವೆ.

ಸೀತಾದೇವಿಯ ವಿಷಯದಲ್ಲಿ ಕರುಣೋತ್ಪಾದಕಗಳಾದ ಸಂಗತಿಗಳು ಅನೇಕವಿವೆ. ಹೆಂಗಸು, ಅಬಲೆ, ಆಕೆಗೆ ಕನಿಕರ ಸಲ್ಲಬೇಕಾದದ್ದು—ಎಂಬುದು ಸರ್ವಸಾಮಾನ್ಯವಾದ ಮಾತು. ಅದನ್ನು ಬದಿಗಿರಿಸಿ ಮಿಕ್ಕ ಸಂಗತಿಗಳನ್ನು ನೋಡೋಣ. (೧) ಆಕೆ ಮಹಾರಾಜನ ಮಗಳು; ಮಹಾರಾಜನ ಸೊಸೆ. ಕಷ್ಟನಿಷ್ಠುರಗಳನ್ನರಿಯದವಳು. ಅಂಥವಳಿಗೆ ಈ ಪಾಡು ಬರಬಹುದೆ? (೨) ಆಕೆ ತಪಸ್ವಿನಿ: ಸತ್ಯ, ಇಂದ್ರಿಯಶೌಚ, ಅಹಿಂಸೆ—ಈ ಮೂರು ವ್ರತಗಳನ್ನು ಹಿಡಿದಿದ್ದವಳು. ಅಂಥವಳಿಗೆ ಕಷ್ಟವೆ? (೩) ಅದೂ ಒಬ್ಬ ದುರಾತ್ಮನ ಕೈಯಿಂದ ಕಷ್ಟವೆ? (೪) ಆ ಕಷ್ಟವಾದರೂ ಎಂಥಾದ್ದು? ಆಕೆಯ ಆಜನ್ಮವ್ರತಕ್ಕೆ ಭಂಗದ ಭಯ ಬರಬಹುದೆ? ಶಿವಶಿವ ಎನ್ನುತ್ತದೆ ಮನಸ್ಸು. ಶ್ರೀರಾಮನ ಆರ್ತಪ್ರಲಾಪಗಳಲ್ಲಿ ನಾವೂ ಸೇರಿಕೊಳ್ಳುತ್ತೇವೆ.

ಎಲ್ಲ ಕರುಣಪ್ರಸಂಗಗಳಲ್ಲಿಯೂ ಒಂದು ನ್ಯಾಯಾಪೇಕ್ಷೆಯ ಅಂಕುರ ಸೇರಿಕೊಂಡಿರುತ್ತದೆ—ಎಂದು ಮೇಲೆ ಹೇಳಿದೆ. ಶ್ರೀರಾಮನಲ್ಲಿ ಅಂಥ ನ್ಯಾಯಾಕಾಂಕ್ಷೆ ತುಂಬಿತ್ತು. ಆತನು ಸ್ವಭಾವದಿಂದ ಸರಸಿ, ಪ್ರಕೃತಿಯ ಸೌಮ್ಯಸೌಂದರ್ಯಗಳಲ್ಲಿ ಲೀನವಾದ ಮನಸ್ಸುಳ್ಳವನು. ಅಂಥವನ ಮನಸ್ಸು ಹೇಗಿತ್ತೆಂಬುದನ್ನು ವಾಲ್ಮೀಕಿಗಳು ಮನೋಹರವಾದ ವಾಗ್ವರ್ಣ ಗಳಿಂದ ಚಿತ್ರಿಸಿದ್ದಾರೆ.

ತತೋ ಮಹದ್ವರ್ತ್ಮ ಸುದೂರಸಂಕ್ರಮಃ
    ಕ್ರಮೇಣ ಗತ್ವಾ ಪ್ರತಿಕೂಲಧನ್ವನಮ್ ।
ದದರ್ಶ ಪಂಪಾಂ ಶುಭದರ್ಶಕಾನನಾಮ್
    ಅನೇಕ ನಾನಾವಿಧಪಕ್ಷಿಜಾಲಕಾಮ್ ॥

—ಸ. ೭೫, ಶ್ಲೋ. ೩೦

ಕರುಣದಲ್ಲಿ ಅನ್ಯಕಷ್ಟಸಹಾನುಭವ, ಅನ್ಯಾರ್ಥಕ ನ್ಯಾಯಚಿಂತನೆ—ಇವು ಅಂತರ್ಗತವಾಗಿರುತ್ತವೆಂದು ಹೇಳಿದೆ. ಆ ಕಾರಣದಿಂದಲೇ ಕರುಣವು ಶೋಕವಾಗುತ್ತದೆ. "ಅಯ್ಯೋ! ಸೀತಮ್ಮನಿಗೆ ಹೀಗಾಯಿತೆ! ಎಂಥ ಅನ್ಯಾಯ! ಎಂಥ ಘೋರ!"—ಎಂದು ನಾವು ಅನುತಾಪಪಡುತ್ತೇವೆ. ಈ ಶೋಕದಲ್ಲಿ ಒಂದು ಮಾನವೀಯತೆಯ ಉತ್ಕೃಷ್ಟಭಾವ ಅಡಗಿದೆ. ಆದದ್ದರಿಂದಲೇ ಅದು ಹೃದ್ಯವಾಗಿ ರಸವೆನಿಸಿಕೊಳ್ಳುತ್ತದೆ. ನಾವು ಇಂಥ ಪ್ರಸಂಗವನ್ನು ಮತ್ತೆಮತ್ತೆ ಕುತೂಹಲದಿಂದ ನೋಡುತ್ತೇವೆ. ಹೀಗೆ ಕಾವ್ಯದ ಶೋಕರಸವು ಜೀವಶೋಧಕವಾಗುತ್ತದೆ. ಬಹುಶಃ ಇದನ್ನು ನೆನೆದೇ ಅರಿಸ್ಟಾಟಲ್ ತಾತ್ತ್ವಿಕನು ಕಾವ್ಯದಲ್ಲಿಯ ಶೋಕರಸವನ್ನು (Tragedy) ಅಂತರಂಗವಿರೇಚಕ (Catharsis) ಎಂದು—ಜೀವಮಲಶೋಧಕ—ಎಂದು ಕರೆದಿದ್ದಾನೆ. ಸೀತೆಯನ್ನು ನೆನೆದು ನಾವು ಕನಿಕರಪಟ್ಟಷ್ಟೂ ಅದು ನಮ್ಮ ಹೃದಯಕ್ಕೆ ಪಾವಕವಾಗುತ್ತದೆ.

ಡಿ. ವಿ. ಜಿ.

# ನಿವೇದನೆ

ಶ್ರೀರಾಮನ ಕೃಪೆಯಿಂದ ಅರಣ್ಯಕಾಂಡದ ಅನುವಾದಕಾರ್ಯವು ಪೂರ್ಣವಾಯಿತು. ಹಿಂದಿನಂತೆ ವಾಚಕಮಹನೀಯರ ಔದಾರ್ಯ ಪ್ರೋತ್ಸಾಹಗಳು ನನ್ನ ಲೇಖನಿಗೆ ಬಲವನ್ನು ನೀಡಿವೆ. ಆದ್ದರಿಂದ ಲೇಖನಿಗೆ ತೊಡಕಿನ ಅರಣ್ಯಕಾಂಡದಲ್ಲಿ ಪ್ರವೇಶಿಸಿ ಪಾರಾಗಲು ಸಾಧ್ಯವಾಯಿತು. ಈ ಬೆಂಬಲದಿಂದಲೇ ಅದು ಕಿಷ್ಕಿಂಧೆಯ ಇಕ್ಕಟ್ಟಿನಲ್ಲಿ ಹಾದುಹೋದೀತು; ಸಮುದ್ರವನ್ನು ದಾಟಿ ಯುದ್ಧರಂಗದಲ್ಲಿಯೂ ಇಳಿದೀತು.

ಸಮ್ಮಾನ್ಯರಾದ ಡಾ|| ಡಿ. ವಿ. ಗುಂಡಪ್ಪನವರು ಈ ಅನುವಾದವನ್ನು ಅಲ್ಲಲ್ಲಿ ಓದಿಸಿ ಕೇಳಿ ಸಂತೋಷಿಸಿದ್ದಾರೆ. ಕೆಲವು ಸಂದೇಹಗಳನ್ನು ಪರಿಹರಿಸಿ ಸೂಕ್ತವಾದ ಮಾರ್ಗವನ್ನು ತಿಳಿಸಿದ್ದಾರೆ. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಡಿ. ಸಿ. ಅನಂತರಾಮಯ್ಯನವರು ಹಲವಾರು ಕಾರ್ಯಕಲಾಪಗಳ ನಡುವೆಯೂ ಬಿಡುವುಮಾಡಿಕೊಂಡು, ಸಂಸ್ಕೃತಮೂಲವನ್ನು ಕನ್ನಡಲಿಪಿ ಯಲ್ಲಿ ಬರೆದುಕೊಟ್ಟು ಉಪಕರಿಸಿದ್ದಾರೆ. ರಾಮಾಯಣ ಪ್ರಕಾಶನ ಸಮಿತಿ ಯವರು ಪ್ರೀತಿವಿಶ್ವಾಸಗಳಿಂದ ಮುದ್ರಿಸಿ ಪ್ರಕಟಿಸಿದ್ದಾರೆ. ಈ ಮಹನೀಯ ರೆಲ್ಲರಿಗೂ ನಾನು ಕೃತಜ್ಞತೆಯಿಂದ ವಂದನೆಗಳನ್ನರ್ಪಿಸುತ್ತೇನೆ.

ಬೆಂಗಳೂರು
ಕೀಲಕ–ಯುಗಾದಿ–ಶುಕ್ರವಾರ
೨೯–೩–೧೯೬೮

**ಎನ್. ರಂಗನಾಥಶರ್ಮಾ**
ಅನುವಾದಕ

# ಅನುಕ್ರಮಣಿಕೆ


| ಸರ್ಗ | ವಿಷಯ | ಪುಟ |
|---|---|---|
| ೧ | ಮಹರ್ಷಿಸಂಗಃ (ಶ್ರೀರಾಮನು ದಂಡಕಾರಣ್ಯದಲ್ಲಿದ್ದ ಋಷಿಗಳ ಆಶ್ರಮಕ್ಕೆ ಹೋಗುವುದು) ... | ೧ |
| ೨ | ವಿರಾಧಸಂರೋಧಃ (ವಿರಾಧನು ಸೀತೆಯನ್ನು ಅಪಹರಿಸುವುದು) ... | ೬ |
| ೩ | ವಿರಾಧಪ್ರಹಾರಃ (ವಿರಾಧನೊಡನೆ ಯುದ್ಧ) ... | ೧೧ |
| ೪ | ವಿರಾಧನಿಖನನಮ್ (ವಿರಾಧನನ್ನು ಹಳ್ಳದಲ್ಲಿ ಹೂಳುವುದು) ... | ೧೬ |
| ೫ | ಶರಭಂಗಬ್ರಹ್ಮಲೋಕಪ್ರಸ್ಥಾನಮ್ (ಶರಭಂಗಮುನಿಗಳು ಅಗ್ನಿಪ್ರವೇಶ ಮಾಡಿ ಬ್ರಹ್ಮಲೋಕಕ್ಕೆ ಹೋಗುವುದು) ... | ೨೩ |
| ೬ | ರಕ್ಷೋವಧಪ್ರತಿಜ್ಞಾನಮ್ (ರಾಕ್ಷಸರನ್ನು ವಧಿಸುವೆನೆಂದು ಶ್ರೀರಾಮನಿಂದ ಋಷಿಗಳಿಗೆ ಅಭಯಪ್ರದಾನ) ... | ೩೧ |
| ೭ | ಸುತೀಕ್ಷ್ಣಾಶ್ರಮಃ (ಶ್ರೀರಾಮನು ಸುತೀಕ್ಷ್ಣಮುನಿಗಳನ್ನು ಕಾಣುವುದು) | ೩೬ |
| ೮ | ಸುತೀಕ್ಷ್ಣಾಭ್ಯನುಜ್ಞಾ (ಸುತೀಕ್ಷ್ಣರ ಅನುಜ್ಞೆಯಿಂದ ಮುಂದಕ್ಕೆ ಪ್ರಯಾಣ) ... | ೪೦ |
| ೯ | ಸೀತಾಧರ್ಮಾವೇದನಮ್ (ಸೀತೆಯು ಶ್ರೀರಾಮನಿಗೆ ಅಹಿಂಸಾಧರ್ಮವನ್ನು ನಿವೇದಿಸುವುದು) .. | ೪೪ |
| ೧೦ | ರಕ್ಷೋವಧಸಮರ್ಥನಮ್ (ರಾಕ್ಷಸರ ಸಂಹಾರವು ಧರ್ಮವೆಂದು ಶ್ರೀರಾಮನು ತಿಳಿಸುವುದು) ... | ೫೧ |
| ೧೧ | ಅಗಸ್ತ್ಯಾಶ್ರಮಃ (ಅಗಸ್ತ್ಯಮುನಿಗಳ ಆಶ್ರಮಕ್ಕೆ ಪ್ರಯಾಣ) ... | ೫೬ |
| ೧೨ | ಅಗಸ್ತ್ಯದರ್ಶನಮ್ (ಅಗಸ್ತ್ಯರು ವೈಷ್ಣವಧನುಸ್ಸು ಮೊದಲಾದ್ದನ್ನು ಶ್ರೀರಾಮನಿಗೆ ಕೊಡುವುದು) ... | ೭೨ |
| ೧೩ | ಪಂಚವಟೀಗಮನಮ್ (ಪಂಚವಟಿಗೆ ಶ್ರೀರಾಮಾದಿಗಳ ಪ್ರಯಾಣ) ... | ೭೯ |
| ೧೪ | ಜಟಾಯುಸಂಗಮಃ (ಶ್ರೀರಾಮನಿಗೆ ಜಟಾಯುವಿನ ಪರಿಚಯ) ... | ೮೪ |
| ೧೫ | ಪಂಚವಟೀಪರ್ಣಶಾಲಾ (ಪಂಚವಟಿಯಲ್ಲಿ ಪರ್ಣಶಾಲೆಯನ್ನು ನಿರ್ಮಿಸಿ ವಾಸಮಾಡುವುದು) ... | ೯೧ |
| ೧೬ | ಹೇಮಂತವರ್ಣನಮ್ (ಹೇಮಂತವರ್ಣನೆ ; ಭರತನ ಗುಣಗಳ ಸ್ಮರಣೆ) | ೯೬ |

| ಸರ್ಗ | ವಿಷಯ | ಪುಟ |
|---|---|---|
| ೧೭ | ಶೂರ್ಪಣಖಾಭಾವಾವಿಷ್ಕರಣಮ್ (ಶೂರ್ಪಣಖಿಯು ಶ್ರೀರಾಮನನ್ನು ಕಂಡು ಕಾಮಮೋಹಿತಳಾಗುವುದು) ... | ೧೦೫ |
| ೧೮ | ಶೂರ್ಪಣಖಾವಿರೂಪಣಮ್ (ಲಕ್ಷ್ಮಣನು ಶೂರ್ಪಣಖಿಯನ್ನು ವಿರೂಪಗೊಳಿಸುವುದು) ... | ೧೧೧ |
| ೧೯ | ಖರಕ್ರೋಧಃ (ಶೂರ್ಪಣಖಿಯ ದೂರನ್ನು ಕೇಳಿ ಖರನು ಕ್ರುದ್ಧನಾಗುವುದು) ... | ೧೧೬ |
| ೨೦ | ಚತುರ್ದಶರಕ್ಷೋವಧಃ (ಖರನು ಕಳಿಸಿದ ಹದಿನಾಲ್ಕು ಮಂದಿ ರಾಕ್ಷಸರನ್ನು ಶ್ರೀರಾಮನು ಸಂಹರಿಸುವುದು) ... | ೧೨೨ |
| ೨೧ | ಖರಸಂಧುಕ್ಷಣಮ್ (ಪುನಃ ಶೂರ್ಪಣಖಿಯು ಖರನನ್ನು ರೇಗಿಸುವುದು) | ೧೨೭ |
| ೨೨ | ಖರಸಂನಾಹಃ (ಖರನು ಹದಿನಾಲ್ಕು ಸಾವಿರ ಮಂದಿ ರಾಕ್ಷಸರೊಡನೆ ಯುದ್ಧಕ್ಕೆ ಹೊರಡುವುದು) ... | ೧೩೧ |
| ೨೩ | ಉತ್ಪಾತದರ್ಶನಮ್ (ಖರನ ರಣಯಾತ್ರೆಯ ಸಮಯದಲ್ಲಿ ಉತ್ಪಾತಗಳಾಗುವುದು) ... | ೧೩೬ |
| ೨೪ | ರಾಮಖರಬಲಸಂನಿಕರ್ಷಃ (ಶ್ರೀರಾಮನು ಖರನ ಸೈನ್ಯವನ್ನು ಕಂಡು ಯುದ್ಧಕ್ಕೆ ಸಿದ್ಧನಾಗುವುದು) ... | ೧೪೩ |
| ೨೫ | ಖರಸೈನ್ಯಾವಮರ್ದಃ (ಖರನ ಸೈನ್ಯದೊಡನೆ ಶ್ರೀರಾಮನ ಯುದ್ಧ) ... | ೧೫೦ |
| ೨೬ | ದೂಷಣಾದಿವಧಃ (ದೂಷಣನೇ ಮೊದಲಾದ ರಾಕ್ಷಸರ ವಧೆ) ... | ೧೫೮ |
| ೨೭ | ತ್ರಿಶಿರೋವಧಃ (ತ್ರಿಶಿರನ ವಧೆ) ... | ೧೬೫ |
| ೨೮ | ಖರರಾಮಸಂಪ್ರಹಾರಃ (ಶ್ರೀರಾಮನಿಗೂ ಖರನಿಗೂ ಯುದ್ಧ) ... | ೧೬೯ |
| ೨೯ | ಖರಗದಾಭೇದನಮ್ (ಶ್ರೀರಾಮನು ಖರನ ಗದೆಯನ್ನು ಕತ್ತರಿಸುವುದು) | ೧೭೫ |
| ೩೦ | ಖರಸಂಹಾರಃ (ಶ್ರೀರಾಮನಿಂದ ಖರನ ಸಂಹಾರ) ... | ೧೮೦ |
| ೩೧ | ರಾವಣಖರವೃತ್ತೋಪಲಂಭಃ (ಖರನು ಹತನಾದನೆಂದು ಅಕಂಪನನು ರಾವಣನಿಗೆ ತಿಳಿಸುವುದು) ... | ೧೮೮ |
| ೩೨ | ಶೂರ್ಪಣಖೋದ್ಯಮಃ (ಶೂರ್ಪಣಖಿಯು ಲಂಕೆಗೆ ಬಂದು ರಾವಣನನ್ನು ಕಾಣುವುದು) ... | ೧೯೮ |
| ೩೩ | ರಾವಣನಿಂದಾ (ಶೂರ್ಪಣಖಿಯು ರಾವಣನನ್ನು ನಿಂದಿಸುವುದು) ... | ೨೦೩ |

| ಸರ್ಗ | ವಿಷಯ | ಪುಟ |
|---|---|---|
| ೩೪ | ಸೀತಾಹರಣೋಪದೇಶಃ (ಸೀತೆಯನ್ನು ಅಪಹರಿಸೆಂದು ಶೂರ್ಪಣಖಿಯು ರಾವಣನಿಗೆ ಹೇಳುವುದು) ... | ೨೦೮ |
| ೩೫ | ಮಾರೀಚಾಶ್ರಮಪುನರ್ಗಮನಮ್ (ರಾವಣನು ಮಾರೀಚನ ಆಶ್ರಮಕ್ಕೆ ಪುನಃ ಹೋಗುವುದು) ... | ೨೧೩ |
| ೩೬ | ಸಹಾಯ್ಯೈಷಣಾ (ರಾವಣನು ಸೀತಾಪಹಾರಕ್ಕಾಗಿ ಮಾರೀಚನ ನೆರವನ್ನು ಬಯಸುವುದು) ... | ೨೨೧ |
| ೩೭ | ಅಪ್ರಿಯಪಥ್ಯವಚನಮ್ (ರಾವಣನಿಗೆ ಮಾರೀಚನ ಹಿತೋಪದೇಶ) ... | ೨೨೬ |
| ೩೮ | ರಾಮಾಸ್ತ್ರಮಹಿಮಾ (ಮಾರೀಚನು ರಾಮಾಸ್ತ್ರಮಹಿಮೆಯನ್ನು ರಾವಣನಿಗೆ ತಿಳಿಸುವುದು) ... | ೨೩೧ |
| ೩೯ | ಸಾಹಾಯ್ಯಕಾನಭ್ಯುಪಗಮಃ (ಮಾರೀಚನು ರಾವಣನಿಗೆ ಸಹಾಯಕನಾಗಲು ಒಪ್ಪದಿರುವುದು) ... | ೨೩೭ |
| ೪೦ | ಮಾಯಾಮೃಗರೂಪ ಪರಿಗ್ರಹ ನಿರ್ಬಂಧಃ (ಮಾರೀಚನು ಮಾಯಾಮೃಗವಾಗಿ ತನಗೆ ನೆರವಾಗಬೇಕೆಂದೂ ಇಲ್ಲದಿದ್ದರೆ ಅವನನ್ನು ಕೊಲ್ಲುವುದಾಗಿಯೂ ರಾವಣನು ಬೆದರಿಸುವುದು) ... | ೨೪೨ |
| ೪೧ | ರಾವಣನಿಂದಾ (ಮಾರೀಚನು ರಾವಣನನ್ನು ನಿಂದಿಸಿ ಸೀತಾಪಹಾರವು ಅನರ್ಥಕಾರಿಯೆಂದು ತಿಳಿಸುವುದು) ... | ೨೪೮ |
| ೪೨ | ಸ್ವರ್ಣಮೃಗಪ್ರೇಕ್ಷಣಮ್ (ಮಾರೀಚನು ಸ್ವರ್ಣಮೃಗವಾಗಿ ಬರಲು ಸೀತಾದೇವಿಯು ಅದನ್ನು ನೋಡಿ ಅಚ್ಚರಿಗೊಳ್ಳುವುದು) ... | ೨೫೨ |
| ೪೩ | ಲಕ್ಷ್ಮಣಶಂಕಾಪ್ರತಿಸಮಾಧಾನಮ್ (ಅದು ಮಾಯಾಮೃಗವೆಂದು ಹೇಳಿದ ಲಕ್ಷ್ಮಣನಿಗೆ ಶ್ರೀರಾಮನು ಸಮಾಧಾನಹೇಳುವುದು) ... | ೨೫೮ |
| ೪೪ | ಮಾರೀಚವಂಚನಾ (ಮಾರೀಚನು ವಂಚನೆಯಿಂದ ಶ್ರೀರಾಮನನ್ನು ಬಹುದೂರ ಕರೆದುಕೊಂಡುಹೋಗುವುದು ; ಶ್ರೀರಾಮನಿಂದ ಬಾಣಪ್ರಯೋಗ) ... | ೨೬೮ |
| ೪೫ | ಸೀತಾಪಾರುಷ್ಯಮ್ (ಶ್ರೀರಾಮನಿಗೆ ವಿಪತ್ತು ಸಂಭವಿಸಿದೆಯೆಂಬ ಶಂಕೆಯಿಂದ ಸೀತೆಯು ಲಕ್ಷ್ಮಣನಿಗೆ ಕಠೋರವಚನವನ್ನಾಡುವುದು) ... | ೨೭೩ |
| ೪೬ | ರಾವಣಭಿಕ್ಷುಸತ್ಕಾರಃ (ಭಿಕ್ಷುವೇಷದಿಂದ ಬಂದ ರಾವಣನಿಗೆ ಸೀತೆಯ ಸತ್ಕಾರ) ... | ೨೮೧ |

| ಸರ್ಗ | ವಿಷಯ | ಪುಟ |
| --- | --- | --- |
| ೪೭ | ರಾವಣಾಧಿಕ್ಷೇಪಃ (ರಾವಣನ ದುರುದ್ದೇಶವನ್ನರಿತು ಸೀತೆಯು ಅವನನ್ನು ಧಿಕ್ಕರಿಸುವುದು) ... | ೨೮೯ |
| ೪೮ | ರಾವಣವಿಕತ್ಥನಮ್ (ರಾವಣನ ಆತ್ಮಪ್ರಶಂಸೆ) ... | ೨೯೯ |
| ೪೯ | ಸೀತಾಪಹರಣಮ್ (ರಾವಣನು ಸೀತೆಯನ್ನು ಬಲಾತ್ಕಾರದಿಂದ ಅಪಹರಿಸಿ ಕೊಂಡು ಲಂಕೆಗೆ ಹೊರಡುವುದು) ... | ೩೦೪ |
| ೫೦ | ಜಟಾಯುರಭಿಯೋಗಃ (ಜಟಾಯುವು ರಾವಣನಿಗೆ ಬುದ್ಧಿವಾದವನ್ನು ಹೇಳಿ ಯುದ್ಧಸಂನದ್ಧನಾಗುವುದು) ... | ೩೧೨ |
| ೫೧ | ಜಟಾಯುರಾವಣಯುದ್ಧಮ್ (ಜಟಾಯುರಾವಣರ ಯುದ್ಧ ; ಜಟಾಯು ವಿನ ರೆಕ್ಕೆ ಮತ್ತು ಕಾಲುಗಳನ್ನು ರಾವಣನು ಕತ್ತರಿಸುವುದು) ... | ೩೧೭ |
| ೫೨ | ಸೀತಾವಿಕ್ರೋಶಃ (ರಾವಣನು ಅಳುತ್ತಿದ್ದ ಸೀತೆಯನ್ನು ಹಿಡಿದೆಳೆದು ಆಕಾಶಮಾರ್ಗದಲ್ಲಿ ಒಯ್ಯುವುದು) ... | ೩೨೬ |
| ೫೩ | ರಾವಣಭರ್ತ್ಸನಮ್ (ಸೀತೆಯು ರಾವಣನನ್ನು ನಿಂದಿಸುವುದು) ... | ೩೩೪ |
| ೫೪ | ಲಂಕಾಪ್ರಾಪಣಮ್ (ರಾವಣನು ಸೀತೆಯನ್ನು ಲಂಕೆಗೆ ಒಯ್ಯುವುದು)... | ೩೩೯ |
| ೫೫ | ಸೀತಾವಿಲೋಭನೋದ್ಯಮಃ (ರಾವಣನು ಸೀತೆಗೆ ತನ್ನ ವೈಭವವನ್ನು ತೋರಿಸಿ ತನ್ನನ್ನು ವರಿಸುವಂತೆ ಕೇಳಿಕೊಳ್ಳುವುದು) ... | ೩೪೫ |
| ೫೬ | ವತ್ಸರಾವಧಿಕರಣಮ್ (ರಾವಣನು ಸೀತೆಗೆ ಹನ್ನೆರಡು ತಿಂಗಳು ಅವಧಿ ಯನ್ನಿತ್ತು ಅಶೋಕವನದಲ್ಲಿ ಇರಿಸುವುದು) ... | ೩೫೨ |
| ೫೭ | ರಾಮಪ್ರತ್ಯಾಗಮನಮ್ (ಶ್ರೀರಾಮನು ಮಾರೀಚನನ್ನು ಕೊಂದು ಚಿಂತಾಕುಲನಾಗಿ ಹಿಂದಿರುಗುವುದು) ... | ೩೫೯ |
| ೫೮ | ಅನಿಮಿತ್ತದರ್ಶನಮ್ (ಸೀತೆಯನ್ನು ಪುನಃ ಕಾಣುವುದು ದುರ್ಲಭ ವೆಂದೆಣಿಸಿ ಶ್ರೀರಾಮನ ವಿಲಾಪ) ... | ೩೬೪ |
| ೫೯ | ಲಕ್ಷ್ಮಣಾಗಮನವಿಗರ್ಹಣಮ್ (ಸೀತೆಯೊಬ್ಬಳನ್ನೇ ಬಿಟ್ಟು ಬಂದುದ ಕ್ಕಾಗಿ ಶ್ರೀರಾಮನು ಲಕ್ಷ್ಮಣನನ್ನು ಆಕ್ಷೇಪಿಸುವುದು) ... | ೩೬೮ |
| ೬೦ | ರಾಮೋನ್ಮಾದಃ (ಶ್ರೀರಾಮನು ಸೀತಾವಿರಹದಿಂದ ಉನ್ಮಾದವಶನಾಗು ವುದು) ... | ೩೭೪ |
| ೬೧ | ಸೀತಾನ್ವೇಷಣಮ್ (ಸೀತೆಯನ್ನು ಹುಡುಕಿ ಕಾಣದೆ ಶ್ರೀರಾಮನ ದುಃಖ; ಲಕ್ಷ್ಮಣನ ಸಾಂತ್ವನ) ... | ೩೮೧ |
| ೬೨ | ರಾಘವವಿಲಾಪಃ (ಲಕ್ಷ್ಮಣನೆದುರಿಗೆ ಶ್ರೀರಾಮನ ವಿಲಾಪ) ... | ೩೮೭ |

| ಸರ್ಗ | ವಿಷಯ | ಪುಟ |
|---|---|---|
| ೬೩ | ದುಃಖಾನುಚಿಂತನವ್ (ಸೀತೆಯನ್ನು ಸ್ಮರಿಸಿಕೊಂಡು ಶ್ರೀರಾಮನ ದುಃಖ ; ಲಕ್ಷ್ಮಣನ ಸಮಾಧಾನ) ... | ೩೯೧ |
| ೬೪ | ರಾಮಕ್ರೋಧಃ (ಸೀತೆಯನ್ನು ಕಾಣದೆ ಶ್ರೀರಾಮನು ಕ್ರುದ್ಧನಾಗಿ ಜಗತ್ತನ್ನು ನಾಶಮಾಡಲು ಉದ್ಯುಕ್ತನಾಗುವುದು) ... | ೩೯೭ |
| ೬೫ | ಕ್ರೋಧಸಂಹಾರಪ್ರಾರ್ಥನಾ (ಕ್ರೋಧವನ್ನು ಉಪಸಂಹರಿಸಬೇಕೆಂದು ಶ್ರೀರಾಮನಲ್ಲಿ ಲಕ್ಷ್ಮಣನ ಪ್ರಾರ್ಥನೆ) ... | ೪೧೧ |
| ೬೬ | ಔಚಿತ್ಯಪ್ರಬೋಧನಮ್ (ಲಕ್ಷ್ಮಣನು ಶ್ರೀರಾಮನನ್ನು ಸಂತೈಸಿ ಔಚಿತ್ಯ ವನ್ನು ತಿಳಿಸುವುದು) ... | ೪೧೫ |
| ೬೭ | ಗೃಧ್ರರಾಜದರ್ಶನವ್ (ಜಟಾಯುವಿನ ದರ್ಶನ ; ರಾವಣವೃತ್ತಾಂತ ಶ್ರವಣ) ... | ೪೧೯ |
| ೬೮ | ಜಟಾಯುಃಸಂಸ್ಕಾರಃ (ಜಟಾಯುವಿನ ಮರಣ ; ಶ್ರೀರಾಮನಿಂದ ಅವನ ಸಂಸ್ಕಾರ) ... | ೪೨೪ |
| ೬೯ | ಕಬಂಧಗ್ರಾಹಃ (ಅಯೋಮುಖಿ ಎಂಬ ರಾಕ್ಷಸಿಯ ಪ್ರಸಂಗ ; ಕಬಂಧನು ಶ್ರೀರಾಮಲಕ್ಷ್ಮಣರನ್ನು ಬಂಧಿಸುವುದು) ... | ೪೩೨ |
| ೭೦ | ಕಬಂಧಬಾಹುಚ್ಛೇದಃ (ಕಬಂಧನ ಬಾಹುಗಳನ್ನು ಛೇದಿಸುವುದು) ... | ೪೪೧ |
| ೭೧ | ಕಬಂಧಶಾಪಾಖ್ಯಾನವ್ (ಕಬಂಧನು ತನ್ನ ಶಾಪವೃತ್ತಾಂತವನ್ನು ತಿಳಿಸುವುದು) ... | ೪೪೫ |
| ೭೨ | ಸೀತಾಧಿಗಮೋಪಾಯಃ (ಸುಗ್ರೀವನ ನೆರವಿನಿಂದ ಸೀತೆಯನ್ನು ಪಡೆಯ ಬಹುದೆಂದು ಕಬಂಧನು ಹೇಳುವುದು) ... | ೪೫೧ |
| ೭೩ | ಋಷ್ಯಮೂಕಮಾರ್ಗಕಥನವ್ (ಕಬಂಧನು ಋಷ್ಯಮೂಕದ ಮಾರ್ಗ ವನ್ನು ತಿಳಿಸಿ ಸ್ವರ್ಗಕ್ಕೆ ಹೋಗುವುದು) ... | ೪೫೭ |
| ೭೪ | ಶಬರೀಸ್ವರ್ಗಪ್ರಾಪ್ತಿಃ (ಶಬರಿಯ ಸತ್ಕಾರ ; ಅವಳು ಸದ್ಗತಿಯನ್ನು ಪಡೆ ಯುವುದು) ... | ೪೬೫ |
| ೭೫ | ಪಂಪಾದರ್ಶನವ್ (ಶ್ರೀರಾಮಲಕ್ಷ್ಮಣರು ಪಂಪಾಸರೋವರದ ಬಳಿಗೆ ಹೋಗುವುದು ; ಅದರ ವರ್ಣನೆ) ... | ೪೭೨ |
| | ಅನುಬಂಧ ... | ೪೭೯ |


## ಚಿತ್ರಗಳು


| | | |
|---|---|---|
| ೧ | ಲಕ್ಷ್ಮಣನು ಶೂರ್ಪಣಖಿಯನ್ನು ವಿರೂಪಗೊಳಿಸುವುದು ... | ೧೧೨ |
| ೨ | ಶಬರಿಯ ಸತ್ಕಾರ. ... | ೪೬೮ |

# ಪ್ರಾರ್ಥನೆ

ದಂಡಕಾರಣ್ಯವಾಸಾಯ ಖಂಡಿತಾಮರಶತ್ರವೇ ।
ಗೃಧ್ರರಾಜಾಯ ಭಕ್ತಾಯ ಮುಕ್ತಿದಾಯಾಸ್ತು ಮಂಗಲಮ್ ॥

ಅಂಭೋಧರಶ್ಯಾಮಲಮಂಬುಜಾಕ್ಷಂ
ಧನುರ್ಧರಂ ವೀರಜಟಾಕಲಾಪಮ್ ।
ಪಾರ್ಶ್ವದ್ವಯೇ ಲಕ್ಷ್ಮಣಮೈಥಿಲೀಭ್ಯಾಂ
ನಿಷೇವ್ಯಮಾಣಂ ಪ್ರಣಮಾಮಿ ರಾಮಮ್ ॥

ವಿಮಲಕಮಲನೇತ್ರಂ ವಿಸ್ಫುರನ್ನೀಲಗಾತ್ರಂ
ತಪನಕುಲಪವಿತ್ರಂ ದಾನವಧ್ವಾಂತಮಿತ್ರಮ್ ।
ಭುವನಶುಭಚರಿತ್ರಂ ಭೂಮಿಪುತ್ರೀಕಲತ್ರಂ
ದಶರಥವರಪುತ್ರಂ ನೌಮಿ ರಾಮಾಖ್ಯಮಿತ್ರಮ್ ॥

॥ ಶ್ರೀಃ ॥

# ಶ್ರೀಮದ್ವಾಲ್ಮೀಕಿರಾಮಾಯಣಮ್

## ಅರಣ್ಯಕಾಂಡಃ

### ಪ್ರಥಮಃ ಸರ್ಗಃ

ಮಹರ್ಷಿಸಂಗಃ

**ಪ್ರವಿಶ್ಯ ತು ಮಹಾರಣ್ಯಂ ದಂಡಕಾರಣ್ಯಮಾತ್ಮವಾನ್ ।**
**ದದರ್ಶ ರಾಮೋ ದುರ್ಧರ್ಷಸ್ತಾಪಸಾಶ್ರಮಮಂಡಲಮ್ ॥ ೧**

**ಕುಶಚೀರಪರಿಕ್ಷಿಪ್ತಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮಾವೃತಮ್ ।**
**ಯಥಾ ಪ್ರದೀಪ್ತಂ ದುರ್ದರ್ಶಂ ಗಗನೇ ಸೂರ್ಯಮಂಡಲಮ್ ॥ ೨**

**ಶರಣ್ಯಂ ಸರ್ವಭೂತಾನಾಂ ಸುಸಂಮೃಷ್ಟಾಜಿರಂ ಸದಾ ।**
**ಮೃಗೈರ್ಬಹುಭಿರಾಕೀರ್ಣಂ ಪಕ್ಷಿಸಂಘೈಃ ಸಮಾವೃತಮ್ ॥ ೩**

## ಅರಣ್ಯಕಾಂಡ

### ಸರ್ಗ ೧

ಶ್ರೀರಾಮನು ದಂಡಕಾರಣ್ಯದಲ್ಲಿದ್ದ ಋಷಿಗಳ ಆಶ್ರಮಕ್ಕೆ ಹೋಗುವುದು ;
ಋಷಿಗಳ ಸತ್ಕಾರ

ಧೀರನೂ ಅಜೇಯನೂ ಆದ ಶ್ರೀರಾಮನು ವಿಶಾಲವಾದ ದಂಡಕಾರಣ್ಯವನ್ನು ಪ್ರವೇಶಿಸಿ, ಅಲ್ಲಿದ್ದ ತಪಸ್ವಿಗಳ ಆಶ್ರಮಗಳನ್ನು ಕಂಡನು. ಅಲ್ಲಲ್ಲಿ ಹರಡಿದ್ದ ದರ್ಭೆಗಳೂ ನಾರುಬಟ್ಟೆಗಳೂ ಗೋಚರಿಸುತ್ತಿದ್ದವು. ತಪೋಜನ್ಯವಾದ ತೇಜೋವಿಶೇಷದಿಂದ ಆಶ್ರಮಮಂಡಲವು ಸೂರ್ಯಮಂಡಲದಂತೆ ವಿರಾಜಿಸುತ್ತಿತ್ತು (೧-೨). ಅದು ಸಕಲಪ್ರಾಣಿಗಳಿಗೂ ನಿರ್ಭಯವಾದ ಆಶ್ರಯಸ್ಥಾನವಾಗಿತ್ತು. ಆಶ್ರಮದ ಅಂಗಳವನ್ನು ಚೆನ್ನಾಗಿ ಗುಡಿಸಿ ಬಳಿದು ಚೊಕ್ಕಟವಾಗಿಟ್ಟದ್ದರು. ನಾನಾಬಗೆಯ

ಪೂಜಿತಂ ಚೋಪನೃತ್ತಂ ಚ ನಿತ್ಯಮಪ್ಸರಸಾಂ ಗಣೈಃ ।
ವಿಶಾಲೈರಗ್ನಿಶರಣೈಃ ಸ್ರುಗ್ಭಾಂಡೈರಜಿನೈಃ ಕುಶೈಃ ॥ ೪

ಸಮಿದ್ಭಿಸ್ತೋಯಕಲಶೈಃ ಫಲಮೂಲೈಶ್ಚ ಶೋಭಿತಮ್ ।
ಆರಣ್ಯೈಶ್ಚ ಮಹಾವೃಕ್ಷೈಃ ಪುಣ್ಯೈಃ ಸ್ವಾದುಫಲೈರ್ಯುತಮ್ ॥ ೫

ಬಲಿಹೋಮಾರ್ಚಿತಂ ಪುಣ್ಯಂ ಬ್ರಹ್ಮಘೋಷನಿನಾದಿತಮ್ ।
ಪುಷ್ಪೈರ್ವನ್ಯೈಃ ಪರಿಕ್ಷಿಪ್ತಂ ಪದ್ಮಿನ್ಯಾ ಚ ಸಪದ್ಮಯಾ ॥ ೬

ಫಲಮೂಲಾಶನೈರ್ದಾಂತೈಶ್ಚೀರಕೃಷ್ಣಾಜಿನಾಂಬರೈಃ ।
ಸೂರ್ಯವೈಶ್ವಾನರಾಭೈಶ್ಚ ಪುರಾಣೈರ್ಮುನಿಭಿರ್ವೃತಮ್ ॥ ೭

ಪುಣ್ಯೈಶ್ಚ ನಿಯತಾಹಾರೈಃ ಶೋಭಿತಂ ಪರಮರ್ಷಿಭಿಃ ।
ತದ್ಬ್ರಹ್ಮಭವನಪ್ರಖ್ಯಂ ಬ್ರಹ್ಮಘೋಷನಿನಾದಿತಮ್ ॥ ೮

---

ಮೃಗಗಳೂ ಹಕ್ಕಿಗಳೂ ಸಂಚರಿಸುತ್ತಿದ್ದವು (೩). ಅಪ್ಸರೆಯರು (ಆಶ್ರಮಪ್ರದೇಶದ ಚೆಲುವಿಗೆ ಮರುಳಾಗಿ) ಬಂದು ಆ ಸ್ಥಳವನ್ನು ಗೌರವದಿಂದ ಕಾಣುತ್ತ, ಸಮೀಪದಲ್ಲಿ ನರ್ತಿಸುತ್ತಿದ್ದರು. ಆಶ್ರಮಗಳಲ್ಲಿ ವಿಶಾಲವಾದ ಯಜ್ಞಶಾಲೆಗಳಿದ್ದವು. ಸ್ರುಕ್ ಮೊದಲಾದ ಯಜ್ಞಪಾತ್ರೆಗಳೂ ಕೃಷ್ಣಾಜಿನ, ದರ್ಭೆ, ಸಮಿತ್ತು, ಜಲಕುಂಭ, ಫಲಮೂಲಾದಿಗಳೂ ತುಂಬಿದ್ದವು. ಕಾಡಿನಲ್ಲಿರುವ ದೊಡ್ಡದೊಡ್ಡ ಮರಗಳೂ ಅಶ್ವತ್ಥ, ಬಿಲ್ವಾದಿ ಪುಣ್ಯವೃಕ್ಷಗಳೂ ಸಿಹಿಹಣ್ಣುಗಳನ್ನು ಕೊಡುವ ಮಾವು ಮೊದಲಾದ ಮರಗಳೂ ಬೆಳೆದಿದ್ದವು (೪–೫). ಬಲಿಹರಣಗಳನ್ನೂ ವೈಶ್ವದೇವಾದಿ ಹೋಮಗಳನ್ನೂ ಮಾಡಿದ್ದರಿಂದ ಆ ಪುಣ್ಯಾಶ್ರಮವು ಶೋಭಿಸುತ್ತಿತ್ತು. ವೇದಘೋಷವು ಮೊರೆಯುತ್ತಿತ್ತು. ಎಲ್ಲೆಲ್ಲಿಯೂ ವನಕುಸುಮಗಳು ಹರಡಿದ್ದವು. ತಾವರೆಯ ಕೊಳಗಳು ರಂಜಿಸುತ್ತಿದ್ದವು (೬). ಆಶ್ರಮಗಳಲ್ಲಿದ್ದ ಮುನಿಗಳು ಫಲಮೂಲಗಳನ್ನು ಭಕ್ಷಿಸುತ್ತ ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿದ್ದರು. ಜಿತೇಂದ್ರಿಯರಾದ ಆ ವೃದ್ಧತಪಸ್ವಿಗಳು ಸೂರ್ಯನಂತೆಯೂ ಅಗ್ನಿಯಂತೆಯೂ ತೇಜಸ್ಸಿನಿಂದ ಜ್ವಲಿಸುತ್ತಿದ್ದರು (೭). ಪುಣ್ಯಾತ್ಮರೂ ಆಹಾರನಿಯಮವುಳ್ಳವರೂ ಆದ ಮಹರ್ಷಿಗಳಿಂದ ಶೋಭಿತವಾಗಿ, ವೇದಘೋಷಗಳಿಂದ ಪ್ರತಿಧ್ವನಿಸುತ್ತಿದ್ದ ಆಶ್ರಮವು ಬ್ರಹ್ಮಲೋಕದಂತೆ ಕಾಣುತ್ತಿತ್ತು. ಬ್ರಹ್ಮಜ್ಞಾನಿಗಳೂ ಮಹಾತ್ಮರೂ

ಬ್ರಹ್ಮವಿದ್ಭಿರ್ಮಹಾಭಾಗೈರ್ಬ್ರಾಹ್ಮಣೈರುಪಶೋಭಿತಮ್ ।
ತದ್ದೃಷ್ಟ್ವಾ ರಾಘವಃ ಶ್ರೀಮಾಂಸ್ತಾಪಸಾಶ್ರಮಮಂಡಲಮ್ ॥ ೯

ಅಭ್ಯಗಚ್ಛನ್ಮಹಾತೇಜಾ ವಿಜ್ಯಂ ಕೃತ್ವಾ ಮಹದ್ಧನುಃ ।
ದಿವ್ಯಜ್ಞಾನೋಪಪನ್ನಾಸ್ತೇ ರಾಮಂ ದೃಷ್ಟ್ವಾ ಮಹರ್ಷಯಃ ॥ ೧೦

ಅಭ್ಯಗಚ್ಛಂಸ್ತಥಾ ಪ್ರೀತಾ ವೈದೇಹೀಂ ಚ ಯಶಸ್ವಿನೀಮ್ ।
ತೇ ತಂ ಸೋಮಮಿವೋದ್ಯಂತಂ ದೃಷ್ಟ್ವಾ ವೈ ಧರ್ಮಚಾರಿಣಃ ॥

ಲಕ್ಷ್ಮಣಂ ಚೈವ ದೃಷ್ಟ್ವಾ ತು ವೈದೇಹೀಂ ಚ ಯಶಸ್ವಿನೀಮ್ ।
ಮಂಗಲಾನಿ ಪ್ರಯುಂಜಾನಾಃ ಪ್ರತ್ಯಗೃಹ್ಣನ್ ದೃಢವ್ರತಾಃ ॥ ೧೨

ರೂಪಸಂಹನನಂ ಲಕ್ಷ್ಮೀಂ ಸೌಕುಮಾರ್ಯಂ ಸುವೇಷತಾಮ್ ।
ದದೃಶುರ್ವಿಸ್ಮಿತಾಕಾರಾ ರಾಮಸ್ಯ ವನವಾಸಿನಃ ॥ ೧೩

ವೈದೇಹೀಂ ಲಕ್ಷ್ಮಣಂ ರಾಮಂ ನೇತ್ರೈರನಿಮಿಷೈರಿವ ।
ಆಶ್ಚರ್ಯಭೂತಾನ್ ದದೃಶುಃ ಸರ್ವೇ ತೇ ವನಚಾರಿಣಃ ॥ ೧೪

---

ಆದ ಬ್ರಾಹ್ಮಣರು ಅಲ್ಲಿ ವಾಸವಾಗಿದ್ದರು. ಅಂಥ ತಪಸ್ವಿಗಳ ಆಶ್ರಮಗಳನ್ನು ಕಂಡು ಶ್ರೀರಘುನಾಥನು ಮಹತ್ತರವಾದ ತನ್ನ ಕೋದಂಡದ ಹೆದೆಯನ್ನು ಸಡಲಿಸಿ ಮುಂದೆ ಬಂದನು (೮–೯). ದಿವ್ಯಜ್ಞಾನಸಂಪನ್ನರಾದ ಆ ಮಹರ್ಷಿಗಳು ಶ್ರೀರಾಮನನ್ನೂ ವೈದೇಹಿಯನ್ನೂ ಲಕ್ಷ್ಮಣನನ್ನೂ ನೋಡಿ ಸಂಪ್ರೀತರಾದರು. ಆ ಗೊಂಡಾರಣ್ಯದಲ್ಲಿ ಪೂರ್ಣಚಂದ್ರನೇ ಮೂಡಿಬಂದನೋ ಎಂಬಂತಿದ್ದ ಶ್ರೀರಾಮ ಚಂದ್ರನನ್ನು ನೋಡಿ, ವ್ರತನಿಷ್ಠರಾದ ಆ ಋಷಿಗಳು ಮುಂದೆ ಬಂದು, ಅವರೆಲ್ಲ ರಿಗೂ ಆಶೀರ್ವಾದಮಾಡಿ ಸ್ವಾಗತಿಸಿದರು (೧೦–೧೨). ವನವಾಸಿಗಳಾದ ಆ ಮುನಿಗಳು ಶ್ರೀರಾಮನ ರೂಪಲಾವಣ್ಯ ಅಂಗಸೌಷ್ಠವ ಸೌಕುಮಾರ್ಯಗಳನ್ನೂ ಅವನ ಮನೋಹರವಾದ ಆಕೃತಿಯನ್ನೂ ಕಂಡು ಬೆರಗಾದರು. ವನಚಾರಿ ಗಳೆಲ್ಲರೂ ಸೀತಾರಾಮಲಕ್ಷ್ಮಣರ ಪರಮರಮಣೀಯವಾದ ಸೌಂದರ್ಯವನ್ನು ಕಂಡು ಆಶ್ಚರ್ಯಪಡುತ್ತ ಎವೆಯಿಕ್ಕದೆ ನೋಡುತ್ತ ನಿಂತರು (೧೩–೧೪). ಆಮೇಲೆ

*

ಅತ್ರೈನಂ ಹಿ ಮಹಾಭಾಗಾಃ ಸರ್ವಭೂತಹಿತೇ ರತಮ್ ।
ಅತಿಥಿಂ ಪರ್ಣಶಾಲಾಯಾಂ ರಾಘವಂ ಸಂನ್ಯವೇಶಯನ್ ॥ ೧೫

ತತೋ ರಾಮಸ್ಯ ಸತ್ಕೃತ್ಯ ವಿಧಿನಾ ಪಾವಕೋಪಮಾಃ ।
ಆಜಹ್ರುಸ್ತೇ ಮಹಾಭಾಗಾಃ ಸಲಿಲಂ ಧರ್ಮಚಾರಿಣಃ ॥ ೧೬

ಮೂಲಂ ಪುಷ್ಪಂ ಫಲಂ ವನ್ಯಮಾಶ್ರಮಂ ಚ ಮಹಾತ್ಮನಃ ।
ನಿವೇದಯಿತ್ವಾ ಧರ್ಮಜ್ಞಾಸ್ತತಃ ಪ್ರಾಂಜಲಯೋಽಬ್ರುವನ್ ॥ ೧೭

ಧರ್ಮಪಾಲೋ ಜನಸ್ಯಾಸ್ಯ ಶರಣ್ಯಸ್ತ್ವಂ ಮಹಾಯಶಾಃ ।
ಪೂಜನೀಯಶ್ಚ ಮಾನ್ಯಶ್ಚ ರಾಜಾ ದಂಡಧರೋ ಗುರುಃ ॥ ೧೮

ಇಂದ್ರಸ್ಯೇಹ ಚತುರ್ಭಾಗಃ ಪ್ರಜಾ ರಕ್ಷತಿ ರಾಘವ ।
ರಾಜಾ ತಸ್ಮಾದ್ವರಾನ್ ಭೋಗಾನ್ ಭುಂಕ್ತೇ ಲೋಕನಮಸ್ಕೃತಃ ॥

ತೇ ವಯಂ ಭವತಾ ರಕ್ಷ್ಯಾ ಭವದ್ವಿಷಯವಾಸಿನಃ ।
ನಗರಸ್ಥೋ ವನಸ್ಥೋ ವಾ ತ್ವಂ ನೋ ರಾಜಾ ಜನೇಶ್ವರಃ ॥ ೨೦

---

ಸಮಸ್ತಪ್ರಾಣಿಗಳ ಹಿತದಲ್ಲಿ ನಿರತನಾಗಿ ಸಂಮಾನ್ಯ ಅತಿಥಿಯಾಗಿ ಬಂದ ರಾಘವನನ್ನು ಋಷಿಗಳು ಪರ್ಣಶಾಲೆಗೆ ಕರೆದೊಯ್ದು ಕುಳ್ಳಿರಿಸಿದರು. ಅಗ್ನಿಯಂತೆ ವರ್ಚಸ್ವಿಗಳಾಗಿದ್ದ ಆ ಮಹರ್ಷಿಗಳು ಶ್ರೀರಾಮನನ್ನು ಸತ್ಕರಿಸುವುದಕ್ಕಾಗಿ ಜಲವನ್ನು ತಂದಿಟ್ಟರು (೧೫–೧೬). ಹಾಗೆಯೇ ವನದಲ್ಲಿ ದೊರೆಯುವ ಫಲಮೂಲ ಪುಷ್ಪಾದಿಗಳನ್ನು ಶ್ರೀರಾಮನಿಗೆ ಅರ್ಪಿಸಿ "ಶ್ರೀರಾಮ, ಇದು, ಈ ಆಶ್ರಮ— ಎಲ್ಲವೂ ನಿನ್ನದೇ" ಎಂದು ನುಡಿದರು. ಅನಂತರ ಅವರು ಕೈಮುಗಿದುಕೊಂಡು "ಹೇ ರಾಘವ, ನೀನು ಧರ್ಮಪಾಲಕನಾಗಿದ್ದೀಯೆ. ಆರ್ತರಾದ ಜನರೆಲ್ಲರಿಗೂ ಆಶ್ರಯದಾತೃವಾಗಿದ್ದೀಯೆ. ಕೀರ್ತಿಶಾಲಿಯಾದ ನೀನು ನಮ್ಮೆಲ್ಲರಿಗೂ ಪೂಜ್ಯನು; ರಾಜನೆಂದು ಸಂಮಾನ್ಯನು. ದುಷ್ಟರನ್ನು ನಿಗ್ರಹಿಸುವ ಪ್ರಭು ನೀನು (೧೭–೧೮). ರಾಜನು ಇಂದ್ರನ ನಾಲ್ಕನೆಯ ಒಂದು ಭಾಗವೆನಿಸಿಕೊಂಡು ಪ್ರಜೆಗಳನ್ನು ಕಾಪಾಡುತ್ತಾನೆ. ಆದ್ದರಿಂದಲೇ ರಾಜನು ಶ್ರೇಷ್ಠವಾದ ಭೋಗವನ್ನು ಅನುಭವಿಸುತ್ತ ಲೋಕವಂದ್ಯನಾಗಿರುತ್ತಾನೆ (೧೯). ಹೇ ರಘುನಾಥ, ನಾವು ನಿನ್ನ ರಾಜ್ಯದಲ್ಲಿ ವಾಸಮಾಡುವ ಪ್ರಜೆಗಳು. ನಿನ್ನ ರಕ್ಷಣೆಗೆ ಒಳಪಟ್ಟವರು. ನೀನು

ನ್ಯಸ್ತದಂಡಾ ವಯಂ ರಾಜನ್ ಜಿತಕ್ರೋಧಾ ಜಿತೇಂದ್ರಿಯಾಃ ।
ರಕ್ಷಿತವ್ಯಾಸ್ತ್ವಯಾ ಶಶ್ವದ್ಗರ್ಭಭೂತಾಸ್ತಪೋಧನಾಃ ॥ ೨೧

ಏವಮುಕ್ತ್ವಾ ಫಲೈರ್ಮೂಲೈಃ ಪುಷ್ಪೈರ್ವನ್ಯೈಶ್ಚ ರಾಘವಮ್ ।
ಅನ್ಯೈಶ್ಚ ವಿವಿಧಾಹಾರೈಃ ಸಲಕ್ಷ್ಮಣಮಪೂಜಯನ್ ॥ ೨೨

ತಥಾನ್ಯೇ ತಾಪಸಾಃ ಸಿದ್ಧಾ ರಾಮಂ ವೈಶ್ವಾನರೋಪಮಾಃ ।
ನ್ಯಾಯವೃತ್ತಾ ಯಥಾನ್ಯಾಯಂ ತರ್ಪಯಾಮಾಸುರೀಶ್ವರಮ್ ॥ ೨೩

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಚತುರ್ವಿಂಶತಿಸಹಸ್ರಿಕಾಯಾಂ ಸಂಹಿತಾಯಾಂ ಅರಣ್ಯಕಾಂಡೇ
ಪ್ರಥಮಃ ಸರ್ಗಃ

ಪಟ್ಟಣದಲ್ಲಿದ್ದರೂ ವನದಲ್ಲಿದ್ದರೂ ನೀನೇ ನಮಗೆ ರಾಜ. ನೀನೇ ಪ್ರಜೆಗಳಿಗೆ ಅಧಿಪತಿ. ಮಹಾರಾಜ, ನಾವು ಕ್ರೋಧವನ್ನು ಬಿಟ್ಟವರು. ಇಂದ್ರಿಯಗಳನ್ನು ಗೆದ್ದವರು. ಆದಕಾರಣ ನಾವು ಶಾಪಾದಿಗಳಿಂದ ದುಷ್ಟರನ್ನು ದಂಡಿಸುವುದಿಲ್ಲ. ತಪಸ್ಸು ಮಾತ್ರವೇ ನಮ್ಮ ಧನ. ನಿನ್ನ ಮಕ್ಕಳೆಂದು ತಿಳಿದು ನಮ್ಮನ್ನು ನೀನು ರಕ್ಷಿಸಬೇಕು" ಎಂದು ಪ್ರಾರ್ಥಿಸಿಕೊಂಡರು (೨೦–೨೧). ಹೀಗೆ ನುಡಿದು ಆ ತಪಸ್ವಿಗಳು ಶ್ರೀರಾಮಲಕ್ಷ್ಮಣರಿಗೂ ಸೀತಾದೇವಿಗೂ ಫಲಮೂಲಪುಷ್ಪಗಳನ್ನೂ ವಿವಿಧ ಭೋಜ್ಯಗಳನ್ನೂ ಕೊಟ್ಟು ಸತ್ಕರಿಸಿದರು. ಸದಾಚಾರಸಂಪನ್ನರೂ ಅಣಿಮಾದಿ ಸಿದ್ಧಿಯುಳ್ಳವರೂ ಆದ ಆ ತಪೋಧನರು ಪ್ರಭುವಾದ ಶ್ರೀರಾಮಚಂದ್ರನನ್ನು ವಿಧಿಪೂರ್ವಕವಾಗಿ ಸತ್ಕರಿಸಿ ಸಂತೋಷಪಡಿಸಿದರು (೨೨–೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಒಂದನೆಯ ಸರ್ಗ

## ದ್ವಿತೀಯಃ ಸರ್ಗಃ

### ವಿರಾಧಸಂರೋಧಃ

ಕೃತಾತಿಥ್ಯೋಽಥ ರಾಮಸ್ತು ಸೂರ್ಯಸ್ಯೋದಯನಂ ಪ್ರತಿ ।
ಆಮಂತ್ರ್ಯ ಸ ಮುನೀನ್ ಸರ್ವಾನ್ ವನಮೇವಾನ್ವಗಾಹತ ॥ ೧

ನಾನಾಮೃಗಗಣಾಕೀರ್ಣಂ ಶಾರ್ದೂಲವೃಕಸೇವಿತಮ್ ।
ಧ್ವಸ್ತವೃಕ್ಷಲತಾಗುಲ್ಮಂ ದುರ್ದರ್ಶಸಲಿಲಾಶಯಮ್ ॥ ೨

ನಿಷ್ಕೂಜನಾನಾಶಕುನಿ ಝಿಲ್ಲಿಕಾಗಣನಾದಿತಮ್ ।
ಲಕ್ಷ್ಮಣಾನುಚರೋ ರಾಮೋ ವನಮಧ್ಯಂ ದದರ್ಶ ಹ ॥ ೩

ವನಮಧ್ಯೇ ತು ಕಾಕುತ್ಸ್ಥಸ್ತಸ್ಮಿನ್ ಘೋರಮೃಗಾಯುತೇ ।
ದದರ್ಶ ಗಿರಿಶೃಂಗಾಭಂ ಪುರುಷಾದಂ ಮಹಾಸ್ವನಮ್ ॥ ೪

### ಸರ್ಗ ೨

ವಿರಾಧನೆಂಬ ರಾಕ್ಷಸನು ರಾಮಲಕ್ಷ್ಮಣರನ್ನು ಕೆಣಕಿ
ಸೀತೆಯನ್ನು ಅಪಹರಿಸುವುದು

ಹೀಗೆ ಶ್ರೀರಾಮನು ಋಷಿಗಳ ಆತಿಥ್ಯವನ್ನು ಸ್ವೀಕರಿಸಿ, ಆ ದಿನ ಋಷ್ಯಾಶ್ರಮದಲ್ಲಿದ್ದನು. ಮಾರನೆಯ ದಿನ ಸೂರ್ಯೋದಯವಾಗಲು, ಆತನು ಸಮಸ್ತ ಮುನಿಗಳನ್ನು ಬೀಳ್ಕೊಂಡು ದಂಡಕಾರಣ್ಯದೊಳಗೆ ಮುಂದಕ್ಕೆ ಹೋದನು (೧). ಅಲ್ಲಿ ನಾನಾಬಗೆಯ ಕಾಡುಮೃಗಗಳು ಅಲೆಯುತ್ತಿದ್ದವು. ಮರ, ಬಳ್ಳಿ, ಪೊದೆಗಳು ಉರುಳಿಬಿದ್ದಿದ್ದವು. ಜಲಾಶಯಗಳನ್ನು ಕಾಣುವುದೇ ಅಶಕ್ತವಾಗಿತ್ತು (೨). (ವಿರಾಧನೆಂಬ ರಾಕ್ಷಸನ ಭಯದಿಂದ) ಅಲ್ಲಿದ್ದ ವಿವಿಧ ಪಕ್ಷಿಗಳು ಕೂಗುತ್ತಿರಲಿಲ್ಲ. ಜೀರುಂಡೆಗಳು ಮಾತ್ರ ಝೀ ಎಂದು ಶಬ್ದಮಾಡುತ್ತಿದ್ದವು. ಇಂಥ ದಟ್ಟವಾದ ಅಡವಿಯನ್ನು ಲಕ್ಷ್ಮಣಸಮೇತನಾದ ಶ್ರೀರಾಮನು ಕಂಡನು (೩). ಘೋರ ಮೃಗಗಳಿಂದ ತುಂಬಿದ್ದ ಆ ವನಮಧ್ಯದಲ್ಲಿ ಪರ್ವತಶಿಖರದಷ್ಟು ಉನ್ನತಶರೀರನಾಗಿ ನರಭಕ್ಷಕನಾದ ಒಬ್ಬ ರಾಕ್ಷಸನು ಶ್ರೀರಾಮನಿಗೆ ಕಾಣಿಸಿಕೊಂಡನು. ಆ ರಾಕ್ಷಸನು

**ಗಂಭೀರಾಕ್ಷಂ ಮಹಾವಕ್ತ್ರಂ ವಿಕಟಂ ವಿಷಮೋದರಮ್ ।**
**ಬೀಭತ್ಸಂ ವಿಷಮಂ ದೀರ್ಘಂ ವಿಕೃತಂ ಘೋರದರ್ಶನಮ್ ॥ ೫**

**ವಸಾನಂ ಚರ್ಮ ವೈಯಾಘ್ರಂ ವಸಾರ್ದ್ರಂ ರುಧಿರೋಕ್ಷಿತಮ್ ।**
**ತ್ರಾಸನಂ ಸರ್ವಭೂತಾನಾಂ ವ್ಯಾದಿತಾಸ್ಯಮಿವಾಂತಕಮ್ ॥ ೬**

**ತ್ರೀನ್ ಸಿಂಹಾಶ್ಚತುರೋ ವ್ಯಾಘ್ರಾನ್ ದ್ವೌ ವೃಷೌ ಪೃಷತಾನ್ ದಶ ।**
**ಸವಿಷಾಣಂ *ವಸಾದಿಗ್ಧಂ ಗಜಸ್ಯ ಚ ಶಿರೋ ಮಹತ್ ॥ ೭**

**ಅವಸಜ್ಯಾಯಸೇ ಶೂಲೇ ವಿನದಂತಂ ಮಹಾಸ್ವನಮ್ ।**
**ಸ ರಾಮಂ ಲಕ್ಷ್ಮಣಂ ಚೈವ ಸೀತಾಂ ದೃಷ್ಟ್ವಾಥ ಮೈಥಿಲೀಮ್ ॥ ೮**

**ಅಭ್ಯಧಾವತ ಸಂಕ್ರುದ್ಧಃ ಪ್ರಜಾಃ ಕಾಲ ಇವಾಂತಕಃ ।**
**ಸ ಕೃತ್ವಾ ಭೈರವಂ ನಾದಂ ಚಾಲಯನ್ನಿವ ಮೇದಿನೀಮ್ ॥ ೯**

---

ಗಟ್ಟಿಯಾಗಿ ಗರ್ಜಿಸುತ್ತಿದ್ದನು (೪). ಅವನ ಕಣ್ಣುಗಳು ಒಳಗೆ ಸೇರಿಕೊಂಡಿದ್ದವು. ಮುಖವು ಬಹಳ ದೊಡ್ಡದಾಗಿತ್ತು. ದೇಹವು ವಿಕಟಾಕಾರವಾಗಿ ಡೊಂಕಿತ್ತು. ಹೊಟ್ಟೆಯು ಕೆಲವು ಕಡೆ ಉಬ್ಬಿ ಕೆಲವು ಕಡೆ ಹಳ್ಳವಾಗಿತ್ತು. ನೋಡಲು ಜುಗುಪ್ಸೆಯಾಗುವ ಆಕೃತಿ. ಆತನ ಅಂಗಗಳು ಒಂದಕ್ಕೊಂದು ಹೊಂದಿಕೆಯಾಗದಂತೆ ವಿಕರಾಳವಾಗಿದ್ದವು. ಆತನು ಎತ್ತರವಾಗಿದ್ದ ಒಬ್ಬ ಕುರೂಪಿ. ನೋಡಲು ಭಯಂಕರ (೫). ಆ ರಾಕ್ಷಸನು ಕೊಬ್ಬು ಮೆತ್ತಿದ್ದ ಒಂದು ಹುಲಿಯ ಚರ್ಮವನ್ನು ಮೈಗೆ ಸುತ್ತಿಕೊಂಡಿದ್ದನು. ಮೈಮೇಲೆ ನೆತ್ತರನ್ನು ಸುರಿದುಕೊಂಡಿದ್ದನು. ಸಕಲ ಪ್ರಾಣಿಗಳೂ ಅವನಿಗೆ ಹೆದರಿ ಓಡುತ್ತಿದ್ದವು. ಬಾಯನ್ನು ತೆರೆದುಕೊಂಡು ಬಂದ ಯಮನೋ ಎಂಬಂತೆ ಅವನು ಕಾಣಿಸುತ್ತಿದ್ದನು (೬). ಆ ರಾಕ್ಷಸನು ಒಂದು ಕಬ್ಬಿಣದ ಶೂಲದಲ್ಲಿ ಮೂರು ಸಿಂಹಗಳು, ನಾಲ್ಕು ಹುಲಿಗಳು, ಎರಡು ಹೋರಿಗಳು, ಹತ್ತು ಜಿಂಕೆಗಳು ಮತ್ತು ಕೋರೆಹಲ್ಲುಗಳಿಂದ ಕೂಡಿ ಮಾಂಸಸಾರದಿಂದ ದಿಗ್ಧವಾದ ಆನೆಯ ಒಂದು ತಲೆ–ಇವನ್ನು ಚುಚ್ಚಿ ಹಿಡಿದುಕೊಂಡು ತಾರಸ್ವರದಲ್ಲಿ ಅಬ್ಬರಿಸಿ ಕೂಗುತ್ತಿದ್ದನು. ಆತನಿಗೆ ಶ್ರೀರಾಮಲಕ್ಷ್ಮಣರೂ ಸೀತಾದೇವಿಯೂ ಗೋಚರಿಸಿದರು (೭–೮). ಕೂಡಲೆ ಆ ರಾಕ್ಷಸನು ಕ್ರುದ್ಧನಾಗಿ ನೆಲವು ನಡುಗು

---

* ವಸಾ = ಮಾಂಸ (ಗೋವಿಂದರಾಜೀಯ)

**ಅಂಕೇನಾದಾಯ ವೈದೇಹೀಮುಪಕ್ರಮ್ಯ ತತೋಽಬ್ರವೀತ್ ।**
**ಯುವಾಂ ಜಟಾಚೀರಧರೌ ಸಭಾರ್ಯೌ ಕ್ಷೀಣಜೀವಿತೌ ॥ ೧೦**

**ಪ್ರವಿಷ್ಟೌ ದಂಡಕಾರಣ್ಯಂ ಶರಚಾಪಾಸಿಧಾರಿಣೌ ।**
**ಕಥಂ ತಾಪಸಯೋರ್ವಾಂ ಚ ವಾಸಃ ಪ್ರಮದಯಾ ಸಹ ॥ ೧೧**

**ಅಧರ್ಮಚಾರಿಣೌ ಪಾಪೌ ಕೌ ಯುವಾಂ ಮುನಿದೂಷಕೌ ।**
**ಅಹಂ ವನಮಿದಂ ದುರ್ಗಂ ವಿರಾಧೋ ನಾಮ ರಾಕ್ಷಸಃ ॥ ೧೨**

**ಚರಾಮಿ ಸಾಯುಧೋ ನಿತ್ಯಮೃಷಿಮಾಂಸಾನಿ ಭಕ್ಷಯನ್ ।**
**ಇಯಂ ನಾರೀ ವರಾರೋಹಾ ಮಮ ಭಾರ್ಯಾ ಭವಿಷ್ಯತಿ ॥ ೧೩**

**ಯುವಯೋಃ ಪಾಪಯೋಶ್ಚಾಹಂ ಪಾಸ್ಯಾಮಿ ರುಧಿರಂ ಮೃಧೇ ।**
**ತಸ್ಯೈವಂ ಬ್ರುವತೋ ಧೃಷ್ಟಂ ವಿರಾಧಸ್ಯ ದುರಾತ್ಮನಃ ॥ ೧೪**

---

ವಂತೆ ಭೀಕರವಾಗಿ ಒಮ್ಮೆ ಗರ್ಜಿಸಿ, ಪ್ರಳಯಕಾಲದಲ್ಲಿ ಯಮನು ಪ್ರಜೆಗಳಮೇಲೆ ಧಾವಿಸಿಬರುವಂತೆ ಸೀತಾರಾಮಲಕ್ಷ್ಮಣರ ಕಡೆಗೆ ಅಟ್ಟಿಸಿಕೊಂಡು ಬಂದನು. ಬಂದವನೇ ಅವನು ಸೀತಾದೇವಿಯ ಸೊಂಟಕ್ಕೆ ಕೈಹಾಕಿ ಅವಳನ್ನು ಸ್ವಲ್ಪದೂರ ಸೆಳೆದೊಯ್ದು (ಹಿಂದಿರುಗಿ ನೋಡುತ್ತ) ಹೀಗೆಂದನು : " ಎಲೈ ಯಾರು ನೀವು ? ಜಟೆಯನ್ನು ಕಟ್ಟಿ ನಾರುಬಟ್ಟೆಯನ್ನುಟ್ಟಿದ್ದೀರಿ; ಹೆಂಗಸೊಬ್ಬಳನ್ನು ಕರೆತಂದಿದ್ದೀರಿ; ನಿಮ್ಮ ಆಯುಸ್ಸು ಮುಗಿಯಿತು (೯–೧೦). ಧನುರ್ಬಾಣಗಳನ್ನೂ ಖಡ್ಗಗಳನ್ನೂ ಧರಿಸಿ ದಂಡಕಾರಣ್ಯಕ್ಕೆ ಬಂದಿದ್ದೀರಲ್ಲ? ನೀವು ತಾಪಸರಾಗಿದ್ದರೆ ಈ ತರುಣಿಯೊಡನೆ ವಾಸಮಾಡುವುದಾದರೂ ಏಕೆ ? ನೀವು ಅಧರ್ಮನಿರತರಾದ ಪಾಪಿಗಳು ! ನೀವಿಬ್ಬರೂ ಮುನಿಧರ್ಮಕ್ಕೆ ವಿರುದ್ಧವಾಗಿ ನಡೆಯುವ ದುಷ್ಟರು. ನಾನು ವಿರಾಧನೆಂಬ ರಾಕ್ಷಸ (೧೧–೧೨). ಈ ದುರ್ಗಮವಾದ ಅರಣ್ಯದಲ್ಲಿ ಆಯುಧ ಧಾರಿಯಾಗಿ ಸಂಚರಿಸುತ್ತಿದ್ದೇನೆ. ಯಾವಾಗಲೂ ಋಷಿಗಳ ಮಾಂಸವನ್ನು ಭಕ್ಷಿಸುತ್ತ ತಿರುಗುತ್ತಿದ್ದೇನೆ. ಈ ಸುಂದರಿಯಾದ ತರುಣಿಯು ನನ್ನ ಹೆಂಡತಿ ಯಾಗುವಳು (೧೩). ಈಗ ನಿಮ್ಮೊಡನೆ ಯುದ್ಧಮಾಡಿ ನಿಮ್ಮಿರ್ವರ ನೆತ್ತರನ್ನು ಕುಡಿಯುವೆನು ' ಎಂದು ದುರಾತ್ಮನಾದ ವಿರಾಧನು ಎದೆಸೊಕ್ಕಿನಿಂದ ಮಾತ ನಾಡಿದನು. ದುರಹಂಕಾರದ ಈ ಮಾತನ್ನು ಕೇಳಿ ದಿಗ್ಭ್ರಾಂತಳಾದ ಜಾನಕಿಯು ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ ಹೆದರಿಕೆಯಿಂದ ನಡುಗುತ್ತಿದ್ದಳು.

ಶ್ರುತ್ವಾ ಸಗರ್ವಿತಂ ವಾಕ್ಯಂ ಸಂಭ್ರಾಂತಾ ಜನಕಾತ್ಮಜಾ ।
ಸೀತಾ ಪ್ರಾವೇಪತೋದ್ವೇಗಾತ್ ಪ್ರವಾತೇ ಕದಲೀ ಯಥಾ ॥ ೧೫
ತಾಂ ದೃಷ್ಟ್ವಾ ರಾಘವಃ ಸೀತಾಂ ವಿರಾಧಾಂಕಗತಾಂ ಶುಭಾಮ್ ।
ಅಬ್ರವೀಲ್ಲಕ್ಷ್ಮಣಂ ವಾಕ್ಯಂ ಮುಖೇನ ಪರಿಶುಷ್ಯತಾ ॥ ೧೬
ಪಶ್ಯ ಸೌಮ್ಯ ನರೇಂದ್ರಸ್ಯ ಜನಕಸ್ಯಾತ್ಮಸಂಭವಾಮ್ ।
ಮಮ ಭಾರ್ಯಾಂ ಶುಭಾಚಾರಾಂ ವಿರಾಧಾಂಕೇ ಪ್ರವೇಶಿತಾಮ್ ॥
ಅತ್ಯಂತಸುಖಸಂವೃದ್ಧಾಂ ರಾಜಪುತ್ರೀಂ ಯಶಸ್ವಿನೀಮ್ ।
ಯದಭಿಪ್ರೇತಮಸ್ಮಾಸು ಪ್ರಿಯಂ ವರವೃತಂ ಚ ಯತ್ ॥ ೧೮
ಕೈಕೇಯ್ಯಾಸ್ತು ಸುಸಂಪನ್ನಂ ಕ್ಷಿಪ್ರಮದ್ಯೈವ ಲಕ್ಷ್ಮಣ ।
ಯಾ ನ ತುಷ್ಯತಿ ರಾಜ್ಯೇನ ಪುತ್ರಾರ್ಥೇ ದೀರ್ಘದರ್ಶಿನೀ ॥ ೧೯
ಯಯಾಹಂ ಸರ್ವಭೂತಾನಾಂ ಹಿತಃ ಪ್ರಸ್ಥಾಪಿತೋ ವನಮ್ ।
ಅದ್ಯೇದಾನೀಂ ಸಕಾಮಾ ಸಾ ಯಾ ಮಾತಾ ಮಮ ಮಧ್ಯಮಾ ॥ ೨೦

---

ಮಂಗಳಾಂಗಿಯಾದ ಸೀತಾದೇವಿಯು ವಿರಾಧನ ಹಿಡಿತಕ್ಕೆ ಸಿಕ್ಕಿರುವುದನ್ನು ಕಂಡು ಶ್ರೀರಾಮನ ಮುಖವು ಬಾಡಿತು. ಅವನು ಲಕ್ಷ್ಮಣನನ್ನು ಕುರಿತು "ತಮ್ಮ, ಜನಕಮಹಾರಾಜನ ಮಗಳೂ ಸದಾಚಾರಸಂಪನ್ನಳೂ ಆದ ನನ್ನ ಪತ್ನಿಯು ವಿರಾಧನ ಕೈಗೆ ಸಿಕ್ಕಿಬಿದ್ದಿರುವುದನ್ನು ನೋಡು (೧೫–೧೭). ಇವಳು ಸುಖಸಮೃದ್ಧಿಯಿಂದ ಬೆಳೆದ ರಾಜಪುತ್ರಿ; ಕೀರ್ತಿಶಾಲಿನಿಯಾಗಿ ಬೆಳಗಿದವಳು. ಲಕ್ಷ್ಮಣ, ಕೈಕೇಯಿಯ ಅಪೇಕ್ಷೆ ಕೈಗೂಡಿಹೋಯಿತು! ವರದ ನೆವದಿಂದ ನಮಗೆ ಏನಾಗಲೆಂದು ಅವಳು ಬಯಸಿದ್ದಳೋ ಅದು ಈಗಲೇ ನೆರವೇರಿತು! ಕೈಕೇಯಿಯು ದೂರದರ್ಶಿನಿ. ತನ್ನ ಮಗನಿಗೆ ರಾಜ್ಯ ಬಂದರೆ ಸಾಕೆಂದು ಅವಳು ತೃಪ್ತಳಾಗಲಿಲ್ಲ (೧೮–೧೯). ಸಕಲಪ್ರಾಣಿಗಳಿಗೂ ನಾನು ಹಿತವನ್ನು ಕೋರುತ್ತಿದ್ದರೂ ನನ್ನನ್ನು ಅವಳು ಕಾಡಿಗೆ ಕಳಿಸಿದಳು. ನನಗೆ ಮಧ್ಯಮಾಂಬೆಯಾದ* ಅವಳ

---

* ಶ್ರೀರಾಮನಿಗೆ ಕೈಕೇಯಿಯು 'ಕನೀಯಸೀ ಮಾತಾ', 'ಮಧ್ಯಮಾ ಮಾತಾ' ಎಂದು ಅಲ್ಲಲ್ಲಿ ಹೇಳಿದೆ. ಕೌಸಲ್ಯೆಗಿಂತ ಅವಳು ಚಿಕ್ಕವಳಾದ್ದರಿಂದ 'ಕನೀಯಸೀ' ಎಂದೂ, ದಶರಥನಿಗೆ ಬಹುಮಂದಿ ಪತ್ನಿಯರಿದ್ದುದರಿಂದ ಕೈಕೇಯಿ 'ಮಧ್ಯಮಾ' ಆಗುವಳೆಂದೂ ವ್ಯಾಖ್ಯಾನಕಾರರ ಹೇಳಿಕೆ ಇದೆ. ಈ ಶಬ್ದಗಳಿಗೆ ಚಿಕ್ಕತಾಯಿ, ಮಲತಾಯಿ ಎಂಬ ಸಾಮಾನ್ಯಾರ್ಥವನ್ನು ಹೇಳುವುದು ಉತ್ತಮ.

ಪರಸ್ಪರ್ಶಾತ್ತು ವೈದೇಹ್ಯಾ ನ ದುಃಖತರಮಸ್ತಿ ಮೇ ।
ಪಿತುರ್ವಿಯೋಗಾತ್ ಸೌಮಿತ್ರೇ ಸ್ವರಾಜ್ಯಹರಣಾತ್ತಥಾ ॥ ೨೧

ಇತಿ ಬ್ರುವತಿ ಕಾಕುತ್ಸ್ಥೇ ಬಾಷ್ಪಶೋಕಪರಿಪ್ಲುತೇ ।
ಅಬ್ರವೀಲ್ಲಕ್ಷ್ಮಣಃ ಕ್ರುದ್ಧೋ ರುದ್ಧೋ ನಾಗ ಇವ ಶ್ವಸನ್ ॥ ೨೨

ಅನಾಥ ಇವ ಭೂತಾನಾಂ ನಾಥಸ್ತ್ವಂ ವಾಸವೋಪಮಃ ।
ಮಯಾ ಪ್ರೇಷ್ಯೇಣ ಕಾಕುತ್ಸ್ಥ ಕಿಮರ್ಥಂ ಪರಿತಪ್ಯಸೇ ॥ ೨೩

ಶರೇಣ ನಿಹತಸ್ಯಾದ್ಯ ಮಯಾ ಕ್ರುದ್ಧೇನ ರಕ್ಷಸಃ ।
ವಿರಾಧಸ್ಯ ಗತಾಸೋರ್ಹಿ ಮಹೀ ಪಾಸ್ಯತಿ ಶೋಣಿತಮ್ ॥ ೨೪

ರಾಜ್ಯಕಾಮೇ ಮಮ ಕ್ರೋಧೋ ಭರತೇ ಯೋ ಬಭೂವ ಹ ।
ತಂ ವಿರಾಧೇ ಪ್ರಮೋಕ್ಷ್ಯಾಮಿ ವಜ್ರೀ ವಜ್ರಮಿವಾಚಲೇ ॥ ೨೫

ಮಮ ಭುಜಬಲವೇಗವೇಗಿತಃ
ಪತತು ಶರೋಽಸ್ಯ ಮಹಾನ್ ಮಹೋರಸಿ ।

---

ಅಭಿಲಾಷೆ ಈಗ ನೆರವೇರಿತು. ಏಕೆಂದರೆ, ವೈದೇಹಿಗೆ ಪರಪುರುಷನ ಸ್ಪರ್ಶವಾಯಿತೆಂಬುದಕ್ಕಿಂತ ನನಗೆ ಹೆಚ್ಚು ದುಃಖಕರವಾದುದು ಇನ್ನೊಂದಿಲ್ಲ. ಪಿತೃವಿಯೋಗಕ್ಕಿಂತಲೂ ರಾಜ್ಯಭ್ರಂಶಕ್ಕಿಂತಲೂ ನನಗೆ ಹೆಚ್ಚು ಸಂಕಟವಾಗುತ್ತಿದೆ" ಎಂದು ಹೇಳಿದನು (೨೦–೨೧). ಶ್ರೀರಾಮನು ಶೋಕಾವಿಷ್ಟನಾದನು ; ಅವನ ಕಣ್ಣುಗಳಲ್ಲಿ ನೀರು ತುಂಬಿತು. ಆಗ ಲಕ್ಷ್ಮಣನು ಸಂಕ್ರುದ್ಧನಾಗಿ ಕೆಣಕಿದ ಕೃಷ್ಣಸರ್ಪದಂತೆ ಫೂತ್ಕರಿಸುತ್ತ "ಅಣ್ಣ, ಸಕಲ ಜೀವಜಾತಗಳಿಗೂ ಪ್ರಭುವಾಗಿ ದೇವೇಂದ್ರನಂತೆ ವಿರಾಜಿಸುವ ನೀನು ಅನಾಥನಂತೆ ಶೋಕಿಸಬಹುದೆ? ಸೇವಕನಾದ ನಾನಿಲ್ಲವೆ? (೨೨–೨೩). ನನ್ನ ಕೋಪ ಉಕ್ಕುತ್ತಿದೆ. ಇಗೋ, ಈ ಬಾಣದಿಂದ ವಿರಾಧನ ಪ್ರಾಣವನ್ನು ಹೀರುತ್ತೇನೆ. ಆ ರಾಕ್ಷಸನ ನೆತ್ತರನ್ನು ನೆಲವು ಕುಡಿಯುವುದು. ಹಿಂದೆ ನಿನ್ನ ರಾಜ್ಯವನ್ನು ಬಯಸಿದನೆಂದು ಭರತನಮೇಲೆ ಯಾವ ಸಿಟ್ಟು ನನ್ನ ನೆತ್ತಿಗೇರಿತ್ತೋ, ಅದನ್ನೀಗ ವಿರಾಧನಮೇಲೆ ಕಾರುವೆನು. ಇಂದ್ರನ ವಜ್ರಾಯುಧವು ಬೆಟ್ಟವನ್ನು ಬಡಿಯುವಂತೆ ನನ್ನ ಸಿಟ್ಟು ಈತನನ್ನು ಅಪ್ಪಳಿಸುವುದು (೨೪–೨೫). ನನ್ನ ಭುಜಬಲವೇಗದಿಂದ ಚಿಮ್ಮಿಹೋದ ಈ ಮಹಾಸ್ತ್ರವು

ವ್ಯಪನಯತು ತನೋಶ್ಚ ಜೀವಿತಂ
ಪತತು ತತಃ ಸ ಮಹೀಂ ವಿಘೂರ್ಣಿತಃ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಿತೀಯಃ ಸರ್ಗಃ

---

## ತೃತೀಯಃ ಸರ್ಗಃ

### ವಿರಾಧಪ್ರಹಾರಃ

ಅಥೋವಾಚ ಪುನರ್ವಾಕ್ಯಂ ವಿರಾಧಃ ಪೂರಯನ್ ವನಮ್ ।
ಆತ್ಮಾನಂ ಪೃಚ್ಛತೇ ಬ್ರೂತಂ ಕೌ ಯುವಾಂ ಕ್ವ ಗಮಿಷ್ಯಥಃ ॥ ೧

ತಮುವಾಚ ತತೋ ರಾಮೋ ರಾಕ್ಷಸಂ ಜ್ವಲಿತಾನನಮ್ ।
ಪೃಚ್ಛಂತಂ ಸುಮಹಾತೇಜಾ ಇಕ್ಷ್ವಾಕುಕುಲಮಾತ್ಮನಃ ॥ ೨

---

ಆ ರಾಕ್ಷಸನ ಎದೆಯನ್ನು ಕೊರೆದು ಅವನ ಜೀವವನ್ನು ದೇಹದಿಂದ ಹೊರಗೆ ಎಳೆದುಹಾಕುವುದು. ಅವನು ಗಿರ್ರೆಂದು ನೆಲಕ್ಕೆ ಒರಗುವನು" ಎಂದು ಆರ್ಭಟಿಸಿದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎರಡನೆಯ ಸರ್ಗ

---

## ಸರ್ಗ ೩

### ವಿರಾಧನೊಡನೆ ಯುದ್ಧ

ಆಗ ವಿರಾಧನು ಅಡವಿಯೆಲ್ಲವೂ ಮೊಳಗುವಂತೆ ಗಟ್ಟಿಯಾಗಿ "ಎಲೈ, ಕೇಳುವ ಪ್ರಶ್ನೆಗೆ ಉತ್ತರ ಹೇಳಿರಿ; ನೀವೀರ್ವರು ಯಾರು? ಎಲ್ಲಿಗೆ ಹೋಗುತ್ತಿದ್ದೀರಿ?" ಎಂದು ಕೇಳಿದನು (೧). ಮಹಾತೇಜಸ್ವಿಯಾದ ಶ್ರೀರಾಮನು ಉರಿಮೋರೆಯ ಆ ರಾಕ್ಷಸನನ್ನು ನೋಡಿ ತನ್ನ ಇಕ್ಷ್ವಾಕುವಂಶವನ್ನು ತಿಳಿಸಿದ

ಕ್ಷತ್ರಿಯೌ ವೃತ್ತಸಂಪನ್ನೌ ವಿದ್ಧಿ ನೌ ವನಗೋಚರೌ ।
ತ್ವಾಂ ತು ವೇದಿತುಮಿಚ್ಛಾವಃ ಕಸ್ತ್ವಂ ಚರಸಿ ದಂಡಕಾನ್ ॥ ೩

ತಮುವಾಚ ವಿರಾಧಸ್ತು ರಾಮಂ ಸತ್ಯಪರಾಕ್ರಮಮ್ ।
ಹಂತ ವಕ್ಷ್ಯಾಮಿ ತೇ ರಾಜನ್ನಿಬೋಧ ಮಮ ರಾಘವ ॥ ೪

ಪುತ್ರಃ ಕಿಲ ಜವಸ್ಯಾಹಂ ಮಮ ಮಾತಾ ಶತಹ್ರದಾ ।
ವಿರಾಧ ಇತಿ ಮಾಮಾಹುಃ ಪೃಥಿವ್ಯಾಂ ಸರ್ವರಾಕ್ಷಸಾಃ ॥ ೫

ತಪಸಾ ಚಾಪಿ ಮೇ ಪ್ರಾಪ್ತಾ ಬ್ರಹ್ಮಣೋ ಹಿ ಪ್ರಸಾದಜಾ ।
ಶಸ್ತ್ರೇಣಾವಧ್ಯತಾ ಲೋಕೇಽಚ್ಛೇದ್ಯಾಭೇದ್ಯತ್ವಮೇವ ಚ ॥ ೬

ಉತ್ಸೃಜ್ಯ ಪ್ರಮದಾಮೇನಾಮನಪೇಕ್ಷೌ ಯಥಾಗತಮ್ ।
ತ್ವರಮಾಣೌ ಪಲಾಯೇಥಾಂ ನ ವಾಂ ಜೀವಿತಮಾದದೇ ॥ ೭

ತಂ ರಾಮಃ ಪ್ರತ್ಯುವಾಚೇದಂ ಕೋಪಸಂರಕ್ತಲೋಚನಃ ।
ರಾಕ್ಷಸಂ ವಿಕೃತಾಕಾರಂ ವಿರಾಧಂ ಪಾಪಚೇತಸಮ್ ॥ ೮

---

ನಲ್ಲದೆ "ಎಲೈ ರಾಕ್ಷಸ, ನಾವೀರ್ವರೂ ಸದಾಚಾರನಿಷ್ಠರಾದ ಕ್ಷತ್ರಿಯರು, ಕಾರಣಾಂತರದಿಂದ ಅರಣ್ಯಕ್ಕೆ ಬಂದಿದ್ದೇವೆಂದು ತಿಳಿದುಕೊ. ಆದರೆ ನೀನು ಯಾರೆಂಬುದನ್ನು ನಾವು ತಿಳಿಯಬೇಕಾಗಿದೆ. ಈ ದಂಡಕಾರಣ್ಯದಲ್ಲಿ ಅಲೆಯುತ್ತಿರುವ ನೀನು ಯಾರು?" ಎಂದು ಕೇಳಿದನು (೨–೩). ಆಗ ವಿರಾಧನು ಸತ್ಯಸಂಧನಾದ ಶ್ರೀರಾಮನನ್ನುದ್ದೇಶಿಸಿ "ಓಹೊ! ಹೇಳುತ್ತೇನೆ, ಕೇಳು: ನಾನು ಜವನ ಪುತ್ರ. ನನ್ನ ತಾಯಿ ಶತಹ್ರದೆ. ಈ ಜಗತ್ತಿನಲ್ಲಿರುವ ಸಕಲ ರಾಕ್ಷಸರೂ ನನ್ನನ್ನು ವಿರಾಧನೆಂದು ಕರೆಯುತ್ತಾರೆ. (ಅವರೆಲ್ಲರಿಗೂ ನನ್ನ ಪರಿಚಯವಿದೆ) (೪–೫). ನನ್ನ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಅವಧ್ಯನಾಗುವಂತೆ ವರವನ್ನು ಪಡೆದಿದ್ದೇನೆ. ಈ ಲೋಕದಲ್ಲಿ ಯಾವ ಆಯುಧದಿಂದಲೂ ನನ್ನನ್ನು ಕತ್ತರಿಸಲೂ ಸಾಧ್ಯವಿಲ್ಲ, ಸೀಳಲೂ ಸಾಧ್ಯವಿಲ್ಲ (೬). ನೀವು ಈ ತರುಣಿಯ ಆಸೆಯನ್ನು ಬಿಟ್ಟು ಬಂದ ದಾರಿ ಹಿಡಿದು ಬೇಗನೆ ಇಲ್ಲಿಂದ ತೊಲಗಿರಿ. ನಿಮ್ಮ ಜೀವವನ್ನು ಉಳಿಸುತ್ತೇನೆ!" ಎಂದು ಹೇಳಿದನು (೭). ಶ್ರೀರಾಮನ ನೇತ್ರಗಳು ಕೆಂಪಡರಿದವು. ಆತನು ಕುರೂಪಿಯೂ ದುರ್ಬುದ್ಧಿಯೂ ಆದ ಆ ರಾಕ್ಷಸನನ್ನು

ಕ್ಷುದ್ರ ಧಿಕ್ ತ್ವಾಂ ತು ಹೀನಾರ್ಥಂ ಮೃತ್ಯುಮನ್ವೇಷಸೇ ಧ್ರುವಮ್ ।
ರಣೇ ಸಂಪ್ರಾಪ್ಸ್ಯಸೇ ತಿಷ್ಠ ನ ಮೇ ಜೀವನ್ ಗಮಿಷ್ಯಸಿ ॥ ೯

ತತಃ ಸಜ್ಯಂ ಧನುಃ ಕೃತ್ವಾ ರಾಮಃ ಸುನಿಶಿತಾನ್ ಶರಾನ್ ।
ಸುಶೀಘ್ರಮಭಿಸಂಧಾಯ ರಾಕ್ಷಸಂ ನಿಜಘಾನ ಹ ॥ ೧೦

ಧನುಷಾ ಜ್ಯಾಗುಣವತಾ ಸಪ್ತ ಬಾಣಾನ್ ಮುಮೋಚ ಹ ।
ರುಕ್ಮಪುಂಖಾನ್ ಮಹಾವೇಗಾನ್ ಸುಪರ್ಣಾನಿಲತುಲ್ಯಗಾನ್ ॥ ೧೧

ತೇ ಶರೀರಂ ವಿರಾಧಸ್ಯ ಭಿತ್ತ್ವಾ ಬರ್ಹಿಣವಾಸಸಃ ।
ನಿಪೇತುಃ ಶೋಣಿತಾದಿಗ್ಧಾ ಧರಣ್ಯಾಂ ಪಾವಕೋಪಮಾಃ ॥ ೧೨

ಸ ವಿದ್ಧೋ ನ್ಯಸ್ಯ ವೈದೇಹೀಂ ಶೂಲಮುದ್ಯಮ್ಯ ರಾಕ್ಷಸಃ ।
ಅಭ್ಯದ್ರವತ್ ಸುಸಂಕ್ರುದ್ಧಸ್ತದಾ ರಾಮಂ ಸಲಕ್ಷ್ಮಣಮ್ ॥ ೧೩

ಸ ವಿನದ್ಯ ಮಹಾನಾದಂ ಶೂಲಂ ಶಕ್ರಧ್ವಜೋಪಮಮ್ ।
ಪ್ರಗೃಹ್ಯಾಶೋಭತ ತದಾ ವ್ಯಾತ್ತಾನನ ಇವಾಂತಕಃ ॥ ೧೪

---

ಕುರಿತು "ಥೂ ನೀಚ, ದುರುಳನಾದ ನಿನಗೆ ಧಿಕ್ಕಾರ! ನೀನು ಮೃತ್ಯುವನ್ನು ಹುಡುಕಿಕೊಂಡು ಬಂದಂತೆ ಕಾಣುತ್ತದೆ. ಯುದ್ಧದಲ್ಲಿ ಆ ಮೃತ್ಯು ನಿನಗೆ ದೊರಕುತ್ತದೆ, ನಿಲ್ಲು; ನನ್ನೆದುರಿಗೆ ನೀನು ಜೀವಸಹಿತನಾಗಿ ಮುಂದೆ ಹೋಗಲಾರೆ" ಎಂದು ಹೇಳುತ್ತ, ತನ್ನ ಧನುಸ್ಸಿಗೆ ಹೆದೆಯೇರಿಸಿ ಅತಿಶೀಘ್ರದಲ್ಲಿ ತೀಕ್ಷ್ಣಾಸ್ತ್ರಗಳನ್ನು ಹೂಡಿ ರಾಕ್ಷಸನಮೇಲೆ ಪ್ರಯೋಗಿಸಿದನು (೮–೧೦). ಶ್ರೀರಾಮನು ಸುವರ್ಣಪುಂಖಗಳುಳ್ಳ ಏಳು ಬಾಣಗಳನ್ನು ವಿರಾಧನಮೇಲೆ ಬಿಟ್ಟನು. ಆ ಬಾಣಗಳು ಗರುಡನಂತೆಯೂ ಬಿರುಗಾಳಿಯಂತೆಯೂ ರಭಸದಿಂದ ನುಗ್ಗಿ ವಿರಾಧನ ದೇಹವನ್ನು ಭೇದಿಸಿದವು. ನವಿಲುಗರಿಗಳನ್ನು ಹೆಣೆದಿದ್ದ ಸುವರ್ಣಪುಂಖದ ಆ ಬಾಣಗಳು ವಿರಾಧನ ರಕ್ತದಿಂದ ತೊಯ್ದು ಅಗ್ನಿಯಂತೆ ಜ್ವಲಿಸುತ್ತ ನೆಲದಮೇಲೆ ಬಿದ್ದವು (೧೧–೧೨). ಹೀಗೆ ಗಾಯಗೊಂಡ ಆ ರಾಕ್ಷಸನು ಸೀತೆಯನ್ನು ಅಲ್ಲಿಯೇ ಬಿಟ್ಟು ಶೂಲವನ್ನು ಎತ್ತಿಕೊಂಡು ರಾಮಲಕ್ಷ್ಮಣರೆಡೆಗೆ ಕೋಪದಿಂದ ಧಾವಿಸಿದನು. ಇಂದ್ರಧ್ವಜದಂತೆ ಉನ್ನತವಾಗಿದ್ದ ಶೂಲವನ್ನು ನೆಗಹಿಕೊಂಡು ಗಟ್ಟಿಯಾಗಿ

ಅಥ ತೌ ಭ್ರಾತರೌ ದೀಪ್ತಂ ಶರವರ್ಷಂ ವವರ್ಷತುಃ ।
ವಿರಾಧೇ ರಾಕ್ಷಸೇ ತಸ್ಮಿನ್ ಕಾಲಾಂತಕಯಮೋಪಮೇ ॥ ೧೫

ಸ ಪ್ರಹಸ್ಯ ಮಹಾರೌದ್ರಃ ಸ್ಥಿತ್ವಾಜೃಂಭತ ರಾಕ್ಷಸಃ ।
ಜೃಂಭಮಾಣಸ್ಯ ತೇ ಬಾಣಾಃ ಕಾಯಾನ್ನಿಷ್ಪೇತುರಾಶುಗಾಃ ॥ ೧೬

ಸ್ಪರ್ಶಾತ್ತು ವರದಾನೇನ ಪ್ರಾಣಾನ್ ಸಂರುಧ್ಯ ರಾಕ್ಷಸಃ ।
ವಿರಾಧಃ ಶೂಲಮುದ್ಯಮ್ಯ ರಾಘವಾವಭ್ಯಧಾವತ ॥ ೧೭

ತಚ್ಛೂಲಂ ವಜ್ರಸಂಕಾಶಂ ಗಗನೇ ಜ್ವಲನೋಪಮಮ್ ।
ದ್ವಾಭ್ಯಾಂ ಚಿಚ್ಛೇದ ಬಾಣಾಭ್ಯಾಂ ರಾಮಃ ಶಸ್ತ್ರಭೃತಾಂ ವರಃ ॥ ೧೮

ತದ್ರಾಮವಿಶಿಖಚ್ಛಿನ್ನಂ ಶೂಲಂ ತಸ್ಯ ಕರಾದ್ಭುವಿ ।
ಪಪಾತಾಶನಿನಾ ಛಿನ್ನಂ ಮೇರೋರಿವ ಶಿಲಾತಲಮ್ ॥ ೧೯

---

ಅಬ್ಬರಿಸುತ್ತ ಆ ರಾಕ್ಷಸನು ಬರುವಾಗ, ಯಮನೇ ಬಾಯಿತೆರೆದುಕೊಂಡು ಬರುತ್ತಿರುವನೋ ಎಂಬಂತೆ ಕಾಣಿಸಿತು (೧೩–೧೪). ಪ್ರಳಯಕಾಲದಲ್ಲಿ ಸರ್ವನಾಶಕ್ಕಾಗಿ ಹೊರಟ ಯಮನೋ* ಎಂಬಂತೆ ಬರುತ್ತಿದ್ದ ಆ ರಾಕ್ಷಸನಮೇಲೆ ಅಣ್ಣತಮ್ಮಂದಿರಿಬ್ಬರೂ ತೀಕ್ಷ್ಣಾಸ್ತ್ರಗಳ ವೃಷ್ಟಿಯನ್ನೇ ಸುರಿಸಿದರು. ಭಯಂಕರಾಕೃತಿಯ ಆ ರಾಕ್ಷಸನು ಮಧ್ಯದಲ್ಲಿ ನಿಂತು ಅಟ್ಟಹಾಸವನ್ನು ಮಾಡಿ, ಒಮ್ಮೆ ತನ್ನ ಮೈಯನ್ನು ಉಬ್ಬಿಸಿದನು. ಕೂಡಲೆ ಅವನ ಮೈಯಲ್ಲಿ ನೆಟ್ಟಿದ್ದ ಅಸ್ತ್ರಗಳು ಕಳಚಿಬಿದ್ದವು (೧೫–೧೬). ಬ್ರಹ್ಮದೇವನ ವರದಾನದ ಬಲದಿಂದ ಆ ವಿರಾಧನ ಪ್ರಾಣ ಉಳಿಯಿತು. ಆತನು ಉಸಿರನ್ನು ಬಿಗಿಹಿಡಿದು ಶೂಲವನ್ನೆತ್ತಿಕೊಂಡು ರಾಮಲಕ್ಷ್ಮಣರನ್ನು ಅಟ್ಟಿಸಿಕೊಂಡು ಬಂದನು. ಅಗ್ನಿಯಂತೆ ಪ್ರಜ್ವಲಿಸುತ್ತ ವಜ್ರಾಯುಧದಂತೆ ಆಕಾಶದಲ್ಲಿ ಕಂಗೊಳಿಸುತ್ತಿದ್ದ ಆ ಶೂಲವನ್ನು, ಧನುರ್ಧಾರಿಗಳಲ್ಲಿ ಶ್ರೇಷ್ಠನೆನಿಸಿದ ಶ್ರೀರಾಮನು ಎರಡು ಬಾಣಗಳಿಂದ ಕತ್ತರಿಸಿ ಕೆಡವಿದನು (೧೭–೧೮). ರಾಮಾಸ್ತ್ರದಿಂದ ವಿಚ್ಛಿನ್ನವಾದ ಆ ಶೂಲವು ಸಿಡಿಲಿನ ಹೊಡೆತ

---

* ಕಾಲಾಂತಕಯಮೋಪಮೇ = ಕಾಲ, ಅಂತಕ, ಯಮ ಎಂದು ಮರಣಾಧಿಕಾರಿಗಳು ಮೂವರು. ದೇಹದಿಂದ ಜೀವವನ್ನು ಬೇರ್ಪಡಿಸುವವನು ಕಾಲ, ಜೀವವನ್ನು ಒಯ್ಯುವವನು ಅಂತಕ, ಪುಣ್ಯಪಾಪಗಳನ್ನು ವಿವೇಚಿಸುವವನು ಯಮ–ಎಂದು ಮಹೇಶ್ವರ ತೀರ್ಥರು ಹೇಳುತ್ತಾರೆ.

ತೌ ಖಡ್ಗೌ ಕ್ಷಿಪ್ರಮುದ್ಯಮ್ಯ ಕೃಷ್ಣಸರ್ಪೋಪಮೌ ಶುಭೌ ।
ತೂರ್ಣಮಾಪತತಸ್ತಸ್ಯ ತದಾ ಪ್ರಾಹರತಾಂ ಬಲಾತ್ ॥ ೨೦

ಸ ವಧ್ಯಮಾನಃ ಸುಭೃಶಂ ಬಾಹುಭ್ಯಾಂ ಪರಿರಭ್ಯ ತೌ ।
ಅಪ್ರಕಂಪ್ಯೌ ನರವ್ಯಾಘ್ರೌ ರೌದ್ರಃ ಪ್ರಸ್ಥಾತುಮೈಚ್ಛತ ॥ ೨೧

ತಸ್ಯಾಭಿಪ್ರಾಯಮಾಜ್ಞಾಯ ರಾಮೋ ಲಕ್ಷ್ಮಣಮಬ್ರವೀತ್ ।
ವಹತ್ವಯಮಲಂ ತಾವತ್ ಪಥಾನೇನ ತು ರಾಕ್ಷಸಃ ॥ ೨೨

ಯಥಾ ಚೇಚ್ಛತಿ ಸೌಮಿತ್ರೇ ತಥಾ ವಹತು ರಾಕ್ಷಸಃ ।
ಅಯಮೇವ ಹಿ ನಃ ಪಂಥಾ ಯೇನ ಯಾತಿ ನಿಶಾಚರಃ ॥ ೨೩

ಸ ತು ಸ್ವಬಲವೀರ್ಯೇಣ ಸಮುತ್ಕ್ಷಿಪ್ಯ ನಿಶಾಚರಃ ।
ಬಾಲಾವಿವ ಸ್ಕಂಧಗತೌ ಚಕಾರಾತಿಬಲೋದ್ಧತಃ ॥ ೨೪

ತಾವಾರೋಪ್ಯ ತತಃ ಸ್ಕಂಧಂ ರಾಘವೌ ರಜನೀಚರಃ ।
ವಿರಾಧೋ ನಿನದನ್ ಘೋರಂ ಜಗಾಮಾಭಿಮುಖೋ ವನಮ್ ॥ ೨೫

---

ದಿಂದ ಉರುಳಿಬೀಳುವ ಮೇರುಪರ್ವತದ ಶಿಲೆಯಂತೆ, ವಿರಾಧನ ಕೈಯಿಂದ ಕೆಳಗೆ ಬಿದ್ದಿತು. ವಿರಾಧನು ಮುಂದೆ ನುಗ್ಗಿಬಂದನು. ಥಟ್ಟನೆ ರಾಮಲಕ್ಷ್ಮಣರು ಕೃಷ್ಣಸರ್ಪಗಳಂತಿದ್ದ ತಮ್ಮ ಖಡ್ಗಗಳನ್ನು ಹಿರಿದು ರಾಕ್ಷಸನನ್ನು ಬಲವಾಗಿ ಹೊಡೆದರು (೧೯–೨೦). ಹೀಗೆ ಅವರು ಬಾಣಗಳಿಂದ ಒಂದೇಸಮನೆ ಪ್ರಹರಿಸುತ್ತಿದ್ದರೂ ಘೋರಾಕೃತಿಯ ಆ ರಾಕ್ಷಸನು ಅಚಲರಾಗಿ ನಿಂತಿದ್ದ ಆ ರಾಮಲಕ್ಷ್ಮಣರನ್ನು ಎರಡುತೋಳುಗಳಿಂದಲೂ ಔಚಿ ಹಿಡಿದುಕೊಂಡು ಹೊರಟುಹೋಗಲು ಯತ್ನಿಸಿದನು. ವಿರಾಧನ ಉದ್ದೇಶವನ್ನರಿತು ಶ್ರೀರಾಮನು ಲಕ್ಷ್ಮಣನನ್ನು ಕುರಿತು "ಸೌಮಿತ್ರಿ, ಈತನು ನಮ್ಮನ್ನು ಈ ದಾರಿಯಲ್ಲಿ ಹೊತ್ತುಕೊಂಡುಹೋಗಲು ಬಯಸಿದ್ದಾನೆ. (ಒಳ್ಳೆಯದೇ ಆಯಿತು) ಹಾಗೆಯೇ ಮಾಡಲಿ. ನಾವು ಹೋಗಬೇಕಾದ ದಾರಿಯಲ್ಲಿಯೇ ಇವನು ಹೋಗುತ್ತಿದ್ದಾನೆ" ಎಂದನು (೨೧–೨೩). ಆಗ ಬಲೋದ್ಧತನಾದ ಆ ವಿರಾಧನು ಬಾಲಕರನ್ನು ಎತ್ತಿಕೊಳ್ಳುವಂತೆ ರಾಮಲಕ್ಷ್ಮಣರನ್ನೆತ್ತಿ ತನ್ನ ಹೆಗಲಿನಮೇಲೆ ಕುಳ್ಳಿರಿಸಿಕೊಂಡು ಭೀಕರವಾಗಿ ಗರ್ಜಿಸುತ್ತ ಅರಣ್ಯದೊಳಕ್ಕೆ ಹೊರಟನು (೨೪–೨೫). ಅರಣ್ಯವಾದರೋ ನಾನಾಬಗೆಯ

ವನಂ ಮಹಾಮೇಘನಿಭಂ ಪ್ರವಿಷ್ಟೋ
ದ್ರುಮೈರ್ಮಹದ್ಭಿರ್ವಿವಿಧೈರುಪೇತಮ್ ।
ನಾನಾವಿಧೈಃ ಪಕ್ಷಿಶತೈರ್ವಿಚಿತ್ರಂ
ಶಿವಾಯುತಂ ವ್ಯಾಲಮೃಗೈರ್ವಿಕೀರ್ಣಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತೃತೀಯಃ ಸರ್ಗಃ

---

## ಚತುರ್ಥಃ ಸರ್ಗಃ

### ವಿರಾಧನಿಖನನಮ್

ಹ್ರಿಯಮಾಣೌ ತು ತೌ ದೃಷ್ಟ್ವಾ ವೈದೇಹೀ ರಾಮಲಕ್ಷ್ಮಣೌ ।
ಉಚ್ಚೈಃಸ್ವರೇಣ ಚುಕ್ರೋಶ ಪ್ರಗೃಹ್ಯ ಸುಭುಜಾ ಭುಜೌ ॥ ೧

ಏಷ ದಾಶರಥೀ ರಾಮಃ ಸತ್ಯವಾನ್ ಶೀಲವಾನ್ ಶುಚಿಃ ।
ರಕ್ಷಸಾ ರೌದ್ರರೂಪೇಣ ಹ್ರಿಯತೇ ಸಹಲಕ್ಷ್ಮಣಃ ॥ ೨

---

ಮಹಾವೃಕ್ಷಗಳಿಂದ ನಿಬಿಡವಾಗಿ ಮಹಾಮೇಘದಂತೆ ವಿಶಾಲವಾಗಿಯೂ ಕಪ್ಪಾಗಿಯೂ ಇದ್ದಿತು. ನೂರಾರುಬಗೆಯ ಪಕ್ಷಿಗಳಿಂದಲೂ ನರಿಗಳಿಂದಲೂ ಕಾಡುಮೃಗಗಳಿಂದಲೂ ತುಂಬಿದ್ದಿತು. ಅಂಥಾ ಅರಣ್ಯವನ್ನು ವಿರಾಧನು ಪ್ರವೇಶಿಸಿದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂರನೆಯ ಸರ್ಗ

---

## ಸರ್ಗ ೪

### ವಿರಾಧನನ್ನು ಹಳ್ಳದಲ್ಲಿ ಹೂಳುವುದು

ಈ ರೀತಿಯಲ್ಲಿ ವಿರಾಧನು ರಾಮಲಕ್ಷ್ಮಣರನ್ನು ಹೊತ್ತುಕೊಂಡು ಹೋಗುತ್ತಿರುವುದನ್ನು ಕಂಡು, ಸೀತಾದೇವಿಯು ತನ್ನ ನಲ್ತೋಳುಗಳನ್ನೆತ್ತಿ ಗಟ್ಟಿಯಾಗಿ ಕೂಗಿಕೊಂಡಳು : "ಅಯ್ಯೋ ! ಶ್ರೀರಾಮನನ್ನು ರಾಕ್ಷಸನು ಹೊತ್ತುಕೊಂಡು ಹೋಗುತ್ತಿರುವನಲ್ಲ ! ಈ ದಶರಥಪುತ್ರನು ಸತ್ಯಸಂಧ ; ಶೀಲವಂತ ; ಮನೋ

ಮಾಂ ವೃಕಾ ಭಕ್ಷಯಿಷ್ಯಂತಿ ಶಾರ್ದೂಲಾ ದ್ವೀಪಿನಸ್ತಥಾ ।
ಮಾಂ ಹರೋತ್ಸೃಜ್ಯ ಕಾಕುತ್ಸ್ಥೌ ನಮಸ್ತೇ ರಾಕ್ಷಸೋತ್ತಮ ॥ ೩

ತಸ್ಯಾಸ್ತದ್ವಚನಂ ಶ್ರುತ್ವಾ ವೈದೇಹ್ಯಾ ರಾಮಲಕ್ಷ್ಮಣೌ ।
ವೇಗಂ ಪ್ರಚಕ್ರತುರ್ವೀರೌ ವಧೇ ತಸ್ಯ ದುರಾತ್ಮನಃ ॥ ೪

ತಸ್ಯ ರೌದ್ರಸ್ಯ ಸೌಮಿತ್ರಿರ್ಬಾಹುಂ ಸವ್ಯಂ ಬಭಂಜ ಹ ।
ರಾಮಸ್ತು ದಕ್ಷಿಣಂ ಬಾಹುಂ ತರಸಾ ತಸ್ಯ ರಕ್ಷಸಃ ॥ ೫

ಸ ಭಗ್ನಬಾಹುಃ ಸಂವಿಗ್ನೋ ನಿಪಪಾತಾಶು ರಾಕ್ಷಸಃ ।
ಧರಣ್ಯಾಂ ಮೇಘಸಂಕಾಶೋ ವಜ್ರಭಿನ್ನ ಇವಾಚಲಃ ॥ ೬

ಮುಷ್ಟಿಭಿರ್ಜಾನುಭಿಃ ಪದ್ಭಿಃ ಸೂದಯಂತೌ ತು ರಾಕ್ಷಸಮ್ ।
ಉದ್ಯಮ್ಯೋದ್ಯಮ್ಯ ಚಾಪ್ಯೇನಂ ಸ್ಥಂಡಿಲೇ ನಿಷ್ಪಿಪೇಷತುಃ ॥ ೭

ಸ ವಿದ್ಧೋ ಬಹುಭಿರ್ಬಾಣೈಃ ಖಡ್ಗಾಭ್ಯಾಂ ಚ ಪರಿಕ್ಷತಃ ।
ನಿಷ್ಪಿಷ್ಟೋ ಬಹುಧಾ ಭೂಮೌ ನ ಮಮಾರ ಸ ರಾಕ್ಷಸಃ ॥ ೮

---

ವಾಕ್ಕಾಯಗಳಲ್ಲಿ ಶುಚಿಯಾದವನು. ಘೋರಾಕಾರದ ಈ ರಾಕ್ಷಸನು ಈತನನ್ನೂ ಲಕ್ಷ್ಮಣನನ್ನೂ ಹಿಡಿದೊಯ್ಯುತ್ತಿರುವನಲ್ಲ! (೧–೨). ಇನ್ನು ನನ್ನನ್ನು ತೋಳಗಳೋ ಹುಲಿಗಳೋ ಚಿರತೆಗಳೋ ಭಕ್ಷಿಸುತ್ತವೆ. ಓ ರಾಕ್ಷಸೋತ್ತಮ! ರಾಮಲಕ್ಷ್ಮಣರನ್ನು ಬಿಟ್ಟು ನನ್ನನ್ನೇ ಒಯ್ದು ಕೊಂದುಬಿಡು. ಇಗೋ, ನಿನಗೆ ಕೈಮುಗಿಯುತ್ತೇನೆ!" ಎಂದು ಗೋಳಾಡಿದಳು. ಅವಳ ವಿಲಾಪವನ್ನು ಕೇಳಿ ವೀರರಾದ ರಾಮಲಕ್ಷ್ಮಣರು ಆ ದುರುಳನನ್ನು ವಧಿಸಲು ತ್ವರೆಮಾಡಿದರು (೩–೪). ಸೌಮಿತ್ರಿಯು ಆ ರಾಕ್ಷಸನ ಎಡದೋಳನ್ನು ಕತ್ತರಿಸಿಬಿಟ್ಟನು. ಶ್ರೀರಾಮನು ಅವನ ಬಲದೋಳನ್ನು ಕೂಡಲೆ ಕತ್ತರಿಸಿಹಾಕಿದನು. ಹೀಗೆ ತೋಳುಗಳೆರಡೂ ಕತ್ತರಿಸಿಹೋಗಲು ಕಪ್ಪುಮೋಡದಂತೆ ಕಾಣುತ್ತಿದ್ದ ಆ ರಾಕ್ಷಸನು, ವಜ್ರಾಯುಧ ನಿರ್ಭಿನ್ನವಾದ ಪರ್ವತದಂತೆ ನೆಲದಮೇಲೆ ತತ್ತರಿಸಿಬಿದ್ದನು (೫–೬). ಆಗ ರಾಮಲಕ್ಷ್ಮಣರು ವಿರಾಧನನ್ನು ತಮ್ಮ ಮುಷ್ಟಿಗಳಿಂದಲೂ ಮೊಣಕಾಲುಗಳಿಂದಲೂ ಪಾದಗಳಿಂದಲೂ ಮೇಲಿಂದಮೇಲೆ ಗುದ್ದಿ ತಿವಿದು ತುಳಿದು ನೆಲದಮೇಲೆ ತೀಡಿದರು. ಆದರೇನು! ವಿವಿಧ ಬಾಣಗಳಿಂದ ಹೊಡೆದರೂ ಖಡ್ಗಗಳಿಂದ

ತಂ ಪ್ರೇಕ್ಷ್ಯ ರಾಮಃ ಸುಭೃಶಮವಧ್ಯಮಚಲೋಪಮಮ್ ।
ಭಯೇಷ್ವಭಯದಃ ಶ್ರೀಮಾನಿದಂ ವಚನಮಬ್ರವೀತ್ ॥ ೯

ತಪಸಾ ಪುರುಷವ್ಯಾಘ್ರ ರಾಕ್ಷಸೋಽಯಂ ನ ಶಕ್ಯತೇ ।
ಶಸ್ತ್ರೇಣ ಯುಧಿ ನಿರ್ಜೇತುಂ ರಾಕ್ಷಸಂ ನಿಖನಾವಹೇ ॥ ೧೦

ಕುಂಜರಸ್ಯೇವ ರೌದ್ರಸ್ಯ ರಾಕ್ಷಸಸ್ಯಾಸ್ಯ ಲಕ್ಷ್ಮಣ ।
ವನೇಽಸ್ಮಿನ್ ಸುಮಹಚ್ಛ್ವಭ್ರಂ ಖನ್ಯತಾಂ ರೌದ್ರಕರ್ಮಣಃ ॥ ೧೧

ಇತ್ಯುಕ್ತ್ವಾ ಲಕ್ಷ್ಮಣಂ ರಾಮಃ ಪ್ರದರಃ ಖನ್ಯತಾಮಿತಿ ।
ತಸ್ಥೌ ವಿರಾಧಮಾಕ್ರಮ್ಯ ಕಂಠೇ ಪಾದೇನ ವೀರ್ಯವಾನ್ ॥ ೧೨

ತಚ್ಛ್ರುತ್ವಾ ರಾಘವೇಣೋಕ್ತಂ ರಾಕ್ಷಸಃ ಪ್ರಶ್ರಿತಂ ವಚಃ ।
ಇದಂ ಪ್ರೋವಾಚ ಕಾಕುತ್ಸ್ಥಂ ವಿರಾಧಃ ಪುರುಷರ್ಷಭಮ್ ॥ ೧೩

ಹತೋಽಹಂ ಪುರುಷವ್ಯಾಘ್ರ ಶಕ್ರತುಲ್ಯಬಲೇನ ವೈ ।
ಮಯಾ ತು ಪೂರ್ವಂ ತ್ವಂ ಮೋಹಾನ್ನ ಜ್ಞಾತಃ ಪುರುಷರ್ಷಭ ॥ ೧೪

---

ಕಡಿದರೂ ಭೂಮಿಯಲ್ಲಿ ಉರುಳಿಸಿ ಹೊರಳಿಸಿ ನೆಜ್ಜುಗುಜ್ಜಾಗಿ ಕುಕ್ಕಿದರೂ ಆ ರಾಕ್ಷಸನು ಸಾಯಲಿಲ್ಲ! (೭–೮). ಹೀಗೆ ಏನು ಮಾಡಿದರೂ ಸಾಯದೆ ಬೆಟ್ಟದಂತೆ ಬಿದ್ದಿದ್ದ ವಿರಾಧನನ್ನು ನೋಡಿ, ಅಭಯಪ್ರದನಾದ ಶ್ರೀರಾಮನು ಲಕ್ಷ್ಮಣನನ್ನು ಕುರಿತು "ಹೇ ವೀರಾಗ್ರಣಿ, ಈ ರಾಕ್ಷಸನಿಗೆ ತಪೋಬಲವಿದೆ. ಆದ್ದರಿಂದ ಈತನನ್ನು ಶಸ್ತ್ರಬಲದಿಂದ ಜಯಿಸಿ ಸಂಹರಿಸಲು ಸಾಧ್ಯವಿಲ್ಲ, ಇವನನ್ನು ನೆಲದಲ್ಲಿ ಹೂತುಬಿಡೋಣ (೯–೧೦). ಭಯಂಕರನಾದ ಈ ರಾಕ್ಷಸನು ಸಲಗ ದಂತೆ ಬೃಹದಾಕಾರನಾಗಿದ್ದಾನೆ. ಲಕ್ಷ್ಮಣ, ಇವನನ್ನು ಹೂಳಲು ಈ ಅರಣ್ಯ ದಲ್ಲಿ ಒಂದು ದೊಡ್ಡ ಹಳ್ಳವನ್ನು ಅಗೆದುಬಿಡು" ಎಂದನು. ಹೀಗೆ ಹೇಳಿ ಪರಾಕ್ರಮಿಯಾದ ಶ್ರೀರಾಮನು ಆ ವಿರಾಧನ ಕತ್ತನ್ನು (ಅವನು ಅಲ್ಲಾಡದಂತೆ) ಕಾಲಿನಿಂದ ಮೆಟ್ಟಿ ನಿಂತನು (೧೧–೧೨). ಈ ಮಾತನ್ನು ಕೇಳಿಸಿಕೊಳ್ಳುತ್ತಿದ್ದ ಆ ರಾಕ್ಷಸನು ಪುರುಷೋತ್ತಮನಾದ ಕಾಕುತ್ಸ್ಥನನ್ನು ಕುರಿತು ವಿನಯದಿಂದ ಈ ರೀತಿ ನುಡಿದನು: "ಹೇ ಪುರುಷಶ್ರೇಷ್ಠ, ನಿನ್ನ ಪರಾಕ್ರಮ ದೇವೇಂದ್ರನ ಪರಾಕ್ರಮಕ್ಕೆ ಸಮಾನವಾದದ್ದು. ನಿನ್ನಿಂದ ನಾನು ಹತನಾದಂತೆಯೇ ಸರಿ.

ಕೌಸಲ್ಯಾ ಸುಪ್ರಜಾ ತಾತ ರಾಮಸ್ತ್ವಂ ವಿದಿತೋ ಮಯಾ ।
ವೈದೇಹೀ ಚ ಮಹಾಭಾಗಾ ಲಕ್ಷ್ಮಣಶ್ಚ ಮಹಾಯಶಾಃ ॥ ೧೫

ಅಭಿಶಾಪಾದಹಂ ಘೋರಾಂ ಪ್ರವಿಷ್ಟೋ ರಾಕ್ಷಸೀಂ ತನುಮ್ ।
ತುಂಬುರುರ್ನಾಮ ಗಂಧರ್ವಃ ಶಪ್ತೋ ವೈಶ್ರವಣೇನ ಹ ॥ ೧೬

ಪ್ರಸಾದ್ಯಮಾನಶ್ಚ ಮಯಾ ಸೋಽಬ್ರವೀನ್ಮಾಂ ಮಹಾಯಶಾಃ ।
ಯದಾ ದಾಶರಥೀ ರಾಮಸ್ತ್ವಾಂ ವಧಿಷ್ಯತಿ ಸಂಯುಗೇ ॥ ೧೭

ತದಾ ಪ್ರಕೃತಿಮಾಪನ್ನೋ ಭವಾನ್ ಸ್ವರ್ಗಂ ಗಮಿಷ್ಯತಿ ।
ಇತಿ ವೈಶ್ರವಣೋ ರಾಜಾ ರಂಭಾಸಕ್ತಂ ಪುರಾನಘ ॥ ೧೮

ಅನುಪಸ್ಥೀಯಮಾನೋ ಮಾಂ ಸಂಕ್ರುದ್ಧೋ ವ್ಯಾಜಹಾರ ಹ ।
ತವ ಪ್ರಸಾದಾನ್ಮುಕ್ತೋಽಹಮಭಿಶಾಪಾತ್ ಸುದಾರುಣಾತ್ ॥ ೧೯

ಭುವನಂ ಸ್ವಂ ಗಮಿಷ್ಯಾಮಿ ಸ್ವಸ್ತಿ ವೋಽಸ್ತು ಪರಂತಪ ।
ಇತೋ ವಸತಿ ಧರ್ಮಾತ್ಮಾ ಶರಭಂಗಃ ಪ್ರತಾಪವಾನ್ ॥ ೨೦

---

ಅಜ್ಞಾನದಿಂದ ಮೊದಲು ನಿನ್ನ ಸ್ವರೂಪವನ್ನು ನಾನು ತಿಳಿಯದೆಹೋದೆನು (೧೩–೧೪). ಅಪ್ಪಾ–ಶ್ರೀರಾಮ ! ನಿನ್ನನ್ನು ಹಡೆದ ಕೌಸಲ್ಯಾದೇವಿ ಪುಣ್ಯಾತ್ಮಳು. ಈಗ ನಿನ್ನ ವಿಷಯ ತಿಳಿಯಿತು. ಆ ವೈದೇಹಿಯು ಎಂಥ ಮಹಾಭಾಗ್ಯಶಾಲಿನಿ ಯೆಂಬುದೂ ಲಕ್ಷ್ಮಣನು ಎಂಥಾ ಕೀರ್ತಿಶಾಲಿಯೆಂಬುದೂ ಈಗ ಗೊತ್ತಾಯಿತು (೧೫). ನಾನು ಒಂದು ಶಾಪಕ್ಕೆ ಒಳಗಾಗಿ ಘೋರವಾದ ರಾಕ್ಷಸದೇಹವನ್ನು ಪಡೆದೆನು. ನಾನು ತುಂಬುರು ಎಂಬ ಗಂಧರ್ವ. ಕುಬೇರನಿಂದ ನನಗೆ ಶಾಪ ಬಂದಿತು. ಆಗ ನಾನು ಕುಬೇರನಿಗೆ ಕನಿಕರವುಂಟಾಗುವಂತೆ ಬೇಡಿಕೊಳ್ಳಲು, ಅವನು "ದಶರಥಪುತ್ರನಾದ ಶ್ರೀರಾಮನು ಯುದ್ಧದಲ್ಲಿ ಸಂಧಿಸಿ ನಿನ್ನನ್ನು ಸಂಹರಿಸಿ ದಾಗ ನಿನಗೆ ಮೊದಲಿನ ಸ್ಥಿತಿ ಬರುವುದು. ಆಗ ನೀನು ಪುನಃ ಸ್ವರ್ಗವನ್ನು ಸೇರುವೆ" ಎಂದು ಪರಿಹಾರವನ್ನು ಹೇಳಿದನು (೧೬–೧೮). ಶ್ರೀರಾಮ, ನಾನು ಒಮ್ಮೆ ರಂಭೆಯಲ್ಲಿ ಆಸಕ್ತನಾಗಿ ಕುಬೇರನನ್ನು ಸಕಾಲದಲ್ಲಿ ಸೇವೆಮಾಡಲಿಲ್ಲ. ಆದರಿಂದ ಕ್ರುದ್ಧನಾಗಿ ಕುಬೇರನು ನನಗೆ ಈ ರೀತಿಯಲ್ಲಿ ಶಾಪವನ್ನು ಕೊಟ್ಟನು. ಈಗ ನಿನ್ನ ಅನುಗ್ರಹದಿಂದ ದಾರುಣವಾದ ಆ ಶಾಪದ ಬಿಡುಗಡೆಯಾಯಿತು.

*

ಅಧ್ಯರ್ಧಯೋಜನೇ ತಾತ ಮಹರ್ಷಿಃ ಸೂರ್ಯಸಂನಿಭಃ ।
ತಂ ಕ್ಷಿಪ್ರಮಭಿಗಚ್ಛ ತ್ವಂ ಸ ತೇ ಶ್ರೇಯೋ ವಿಧಾಸ್ಯತಿ ॥ ೨೧

ಅವಟೇ ಚಾಪಿ ಮಾಂ ರಾಮ ಪ್ರಕ್ಷಿಪ್ಯ ಕುಶಲೀ ವ್ರಜ ।
ರಕ್ಷಸಾಂ ಗತಸತ್ತ್ವಾನಾಮೇಷ ಧರ್ಮಃ ಸನಾತನಃ ॥ ೨೨

ಅವಟೇ ಯೇ ನಿಧೀಯಂತೇ ತೇಷಾಂ ಲೋಕಾಃ ಸನಾತನಾಃ ।
ಏವಮುಕ್ತ್ವಾ ತು ಕಾಕುತ್ಸ್ಥಂ ವಿರಾಧಃ ಶರಪೀಡಿತಃ ॥ ೨೩

ಬಭೂವ ಸ್ವರ್ಗತಿಂ ಪ್ರಾಪ್ತೋ ನ್ಯಸ್ತದೇಹೋ ಮಹಾಬಲಃ ।
ತಚ್ಛ್ರುತ್ವಾ ರಾಘವೋ ವಾಕ್ಯಂ ಲಕ್ಷ್ಮಣಂ ವ್ಯಾದಿದೇಶ ಹ ॥ ೨೪

ತತಃ ಖನಿತ್ರಮಾದಾಯ ಲಕ್ಷ್ಮಣಃ ಶ್ವಭ್ರಮುತ್ತಮಮ್ ।
ಅಖನತ್ ಪಾರ್ಶ್ವತಸ್ತಸ್ಯ ವಿರಾಧಸ್ಯ ಮಹಾತ್ಮನಃ ॥ ೨೫

ತಂ ಮುಕ್ತಕಂಠಂ ನಿಷ್ಪಿಷ್ಯ ಶಂಕುಕರ್ಣಂ ಮಹಾಸ್ವನಮ್ ।
ವಿರಾಧಂ ಪ್ರಾಕ್ಷಿಪಚ್ಛ್ವಭ್ರೇ ನದಂತಂ ಭೈರವಸ್ವನಮ್ ॥ ೨೬

---

ಇನ್ನು ನಾನು ನನ್ನ ಲೋಕಕ್ಕೆ ಹೊರಟುಹೋಗುವೆನು. ಹೇ ವೀರಾಗ್ರಣಿ, ನಿಮ್ಮೆಲ್ಲರಿಗೂ ಮಂಗಳವಾಗಲಿ ! ಸ್ವಲ್ಪ ದೂರದಲ್ಲಿ ಧರ್ಮಾತ್ಮನೂ ತೇಜಸ್ವಿಯೂ ಆದ ಶರಭಂಗಮುನಿಯು ವಾಸಮಾಡುತ್ತಿದ್ದಾನೆ (೧೯–೨೦). ಇಲ್ಲಿಗೆ ಸುಮಾರು ಒಂದೂವರೆ ಗಾವುದ ದೂರದಲ್ಲಿ ಸೂರ್ಯನಂತೆ ಕಂಗೊಳಿಸುವ ಆ ಮಹರ್ಷಿ ಇದ್ದಾನೆ. ನೀನು ಶೀಘ್ರವಾಗಿ ಅಲ್ಲಿಗೆ ಹೋಗಿ ಅವನನ್ನು ಭೇಟಿಮಾಡು. ಆತನು ನಿನಗೆ ಶ್ರೇಯಸ್ಸನ್ನುಂಟುಮಾಡುವನು (೨೧). ಶ್ರೀರಾಮ, ನನ್ನನ್ನು ಒಂದು ಹಳ್ಳದಲ್ಲಿ ನಿಃಶಂಕೆಯಿಂದ ತಳ್ಳಿಹೋಗು. ಸತ್ತುಹೋದ ರಾಕ್ಷಸರನ್ನು ಹಳ್ಳದಲ್ಲಿ ಹೂಳುವುದು ಸನಾತನವಾದ ಪದ್ಧತಿ. ಹೀಗೆ ಹೂಳಲ್ಪಟ್ಟವರಿಗೆ ಸದ್ಗತಿಯುಂಟು" ಎಂದು ನುಡಿದು ಬಲಶಾಲಿಯಾದ ವಿರಾಧನು ಶರಹತಿಯಿಂದ ನರಳುತ್ತ ಮೃತಪ್ರಾಯನಾದನು (೨೨–೨೩). ಆ ಮಾತನ್ನು ಕೇಳಿ ಶ್ರೀರಾಮನು ಹಳ್ಳವನ್ನು ತೋಡುವಂತೆ ಲಕ್ಷ್ಮಣನಿಗೆ ಸೂಚಿಸಿದನು. ಲಕ್ಷ್ಮಣನು ಗುದ್ದಲಿಯನ್ನು ಹಿಡಿದು ವಿರಾಧನ ಪಕ್ಕದಲ್ಲಿಯೇ ಒಂದು ದೊಡ್ಡ ಹಳ್ಳವನ್ನು ತೋಡಿದನು. ವಿರಾಧನ ಕತ್ತನ್ನು ಮೆಟ್ಟಿ ನಿಂತಿದ್ದ ಶ್ರೀರಾಮನು ತನ್ನ ಪಾದವನ್ನು ಹಿಂದಕ್ಕೆ

ತಮಾಹವೇ ನಿರ್ಜಿತಮಾಶುವಿಕ್ರಮೌ
ಸ್ಥಿರಾವುಭೌ ಸಂಯತಿ ರಾಮಲಕ್ಷ್ಮಣೌ ।
ಮುದಾನ್ವಿತೌ ಚಿಕ್ಷಿಪತುರ್ಭಯಾವಹಂ
ನದಂತಮುತ್ಕ್ಷಿಪ್ಯ ಬಿಲೇ ತು ರಾಕ್ಷಸಮ್ ॥ ೨೭

ಅವಧ್ಯತಾಂ ಪ್ರೇಕ್ಷ್ಯ ಮಹಾಸುರಸ್ಯ ತೌ
ಶಿತೇನ ಶಸ್ತ್ರೇಣ ತದಾ ನರರ್ಷಭೌ ।
ಸಮರ್ಥ್ಯ ಚಾತ್ಯರ್ಥವಿಶಾರದಾವುಭೌ
ಬಿಲೇ ವಿರಾಧಸ್ಯ ವಧಂ ಪ್ರಚಕ್ರತುಃ ॥ ೨೮

ಸ್ವಯಂ ವಿರಾಧೇನ ಹಿ ಮೃತ್ಯುರಾತ್ಮನಃ
ಪ್ರಸಹ್ಯ ರಾಮೇಣ ವಧಾರ್ಥಮೀಪ್ಸಿತಃ ।
ನಿವೇದಿತಃ ಕಾನನಚಾರಿಣಾ ಸ್ವಯಂ
ನ ಮೇ ವಧಃ ಶಸ್ತ್ರಕೃತೋ ಭವೇದಿತಿ ॥ ೨೯

ತದೇವ ರಾಮೇಣ ನಿಶಮ್ಯ ಭಾಷಿತಂ
ಕೃತಾ ಮತಿಸ್ತಸ್ಯ ಬಿಲಪ್ರವೇಶನೇ ।

---

ತೆಗೆದುಕೊಂಡನು. ಆಮೇಲೆ ಗರ್ದಭಾಕಾರನಾಗಿದ್ದ ಆ ರಾಕ್ಷಸನನ್ನು ಹೊರಳಿಸಿ—ಅವನು ಭೈರವಧ್ವನಿಯಿಂದ ಅರಚಿಕೊಳ್ಳುತ್ತಿರಲು—ಅವನನ್ನು ಹಳ್ಳಕ್ಕೆ ತಳ್ಳಿದರು (೨೪–೨೬). ಹೀಗೆ ರಣರಂಗದಲ್ಲಿ ದೃಢವಿಕ್ರಮರಾದ ರಾಮಲಕ್ಷ್ಮಣರು ಭೀಕರನಾದ ವಿರಾಧನನ್ನು ಜಯಿಸಿ ಅವನನ್ನು ಹಳ್ಳದೊಳಕ್ಕೆ ಎಸೆದು ಸಂತುಷ್ಟರಾದರು (೨೭). ಹರಿತವಾದ ಆಯುಧಗಳ ಹೊಡೆತಕ್ಕೆ ಆ ರಾಕ್ಷಸನು ಸಾಯಲಾರನೆಂಬುದನ್ನರಿತು ಅವರೀರ್ವರೂ ಆತನನ್ನು ಕಂದಕದೊಳಗೆ ಎಸೆದು ಕೊಂದರು. ಆ ವಿರಾಧನು ತನಗೆ ಶ್ರೀರಾಮನಿಂದ ಮರಣವಾಗಲೆಂದು ಬಯಸಿದನು. ಆದ್ದರಿಂದಲೇ ಆ ವನಚಾರಿಯು ಶಸ್ತ್ರದಿಂದ ತನ್ನನ್ನು ಕೊಲ್ಲಲು ಅಶಕ್ಯವೆಂಬುದನ್ನು ತಿಳಿಸಿದನು (೨೮–೨೯). ಅದರಂತೆ ಶ್ರೀರಾಮನು ಅವನನ್ನು ಕಂದಕದೊಳಗೆ ತಳ್ಳಬೇಕೆಂದು ನಿಶ್ಚಯಿಸಿದನು. ಕಂದಕದಲ್ಲಿ ತಳ್ಳುವಾಗ ಆ ರಾಕ್ಷಸನು ವನವೆಲ್ಲವೂ ಮೊಳಗುವಂತೆ ಅರಚಿಕೊಂಡನು. ಶ್ರೀರಾಮಲಕ್ಷ್ಮಣರು ಆತನನ್ನು

ಬಿಲಂ ಚ ರಾಮೇಣ ಬಲೇನ ರಕ್ಷಸಾ
ಪ್ರವೇಶ್ಯಮಾನೇನ ವನಂ ವಿನಾದಿತಮ್ ॥ ೩೦

ಪ್ರಹೃಷ್ಟರೂಪಾವಿವ ರಾಮಲಕ್ಷ್ಮಣೌ
ವಿರಾಧಮುಗ್ರಂ ಪ್ರದರೇ ನಿಖಾಯ ತಮ್ ।
ನನಂದತುರ್ವೀತಭಯೌ ಮಹಾವನೇ
ಶಿಲಾಭಿರಂತರ್ದಧತುಶ್ಚ ರಾಕ್ಷಸಮ್ ॥ ೩೧

ತತಸ್ತು ತೌ ಕಾರ್ಮುಕಖಡ್ಗಧಾರಿಣೌ
ನಿಹತ್ಯ ರಕ್ಷಃ ಪರಿಗೃಹ್ಯ ಮೈಥಿಲೀಮ್ ।
ವಿಜಹ್ರತುಸ್ತೌ ಮುದಿತೌ ಮಹಾವನೇ
ದಿವಿ ಸ್ಥಿತೌ ಚಂದ್ರದಿವಾಕರಾವಿವ ॥ ೩೨

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುರ್ಥಃ ಸರ್ಗಃ

ಹಳ್ಳಕ್ಕೆ ಎಸೆದು ಅದರಮೇಲೆ ಕಲ್ಲುಗಳ ರಾಶಿಯನ್ನು ಹಾಕಿ ಮುಚ್ಚಿದರು (೩೦–೩೧). ಹೀಗೆ ಅವರಿಬ್ಬರೂ ಸೇರಿ ರಾಕ್ಷಸನನ್ನು ಸಂಹರಿಸಿ ಸಂತುಷ್ಟರಾಗಿ ಮೈಥಿಲಿಯನ್ನು ಕರೆದುಕೊಂಡು ಹೊರಟರು. ಧನುಸ್ಸನ್ನೂ ಖಡ್ಗವನ್ನೂ ಧರಿಸಿದ್ದ ಆ ವೀರರು ಆಕಾಶದಲ್ಲಿ ಸೂರ್ಯಚಂದ್ರರು ಸಂಚರಿಸುವಂತೆ, ಆ ಮಹಾರಣ್ಯದಲ್ಲಿ ಸಂಚರಿಸುತ್ತಿದ್ದರು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಾಲ್ಕನೆಯ ಸರ್ಗ

## ಪಂಚಮಃ ಸರ್ಗಃ

### ಶರಭಂಗಬ್ರಹ್ಮಲೋಕಪ್ರಸ್ಥಾನಮ್

ಹತ್ವಾ ತು ತಂ ಭೀಮಬಲಂ ವಿರಾಧಂ ರಾಕ್ಷಸಂ ವನೇ ।
ತತಃ ಸೀತಾಂ ಪರಿಷ್ವಜ್ಯ ಸಮಾಶ್ವಾಸ್ಯ ಚ ವೀರ್ಯವಾನ್ ॥ ೧

ಅಬ್ರವೀಲ್ಲಕ್ಷ್ಮಣಂ ರಾಮೋ ಭ್ರಾತರಂ ದೀಪ್ತತೇಜಸಮ್ ।
ಕಷ್ಟಂ ವನಮಿದಂ ದುರ್ಗಂ ನ ಚ ಸ್ಮ ವನಗೋಚರಾಃ ॥ ೨

ಅಭಿಗಚ್ಛಾಮಹೇ ಶೀಘ್ರಂ ಶರಭಂಗಂ ತಪೋಧನಮ್ ।
ಆಶ್ರಮಂ ಶರಭಂಗಸ್ಯ ರಾಘವೋಽಭಿಜಗಾಮ ಹ ॥ ೩

ತಸ್ಯ ದೇವಪ್ರಭಾವಸ್ಯ ತಪಸಾ ಭಾವಿತಾತ್ಮನಃ ।
ಸಮೀಪೇ ಶರಭಂಗಸ್ಯ ದದರ್ಶ ಮಹದದ್ಭುತಮ್ ॥ ೪

ವಿಭ್ರಾಜಮಾನಂ ವಪುಷಾ ಸೂರ್ಯವೈಶ್ವಾನರೋಪಮಮ್ ।
ಅವರುಹ್ಯ ರಥೋತ್ಸಂಗಾತ್ಸಕಾಶೇ ವಿಬುಧಾನುಗಮ್ ॥ ೫

### ಸರ್ಗ ೫

ಶರಭಂಗಮುನಿಗಳ ಆಶ್ರಮವನ್ನು ಸೇರುವುದು. ಶರಭಂಗಮುನಿಗಳು ಅಗ್ನಿಪ್ರವೇಶಮಾಡಿ ಬ್ರಹ್ಮಲೋಕಕ್ಕೆ ಹೋಗುವುದು.

ಈ ರೀತಿಯಲ್ಲಿ ಶ್ರೀರಾಮನು ಭೀಮಪರಾಕ್ರಮಿಯಾದ ವಿರಾಧನನ್ನು ದಂಡಕಾರಣ್ಯದಲ್ಲಿ ಸಂಹರಿಸಿ, ಜಾನಕಿಯನ್ನು ಅಪ್ಪಿಕೊಂಡು, ಅವಳನ್ನು ಸಂತೈಸಿದನು. ಆಮೇಲೆ ತೇಜಸ್ವಿಯಾದ ತಮ್ಮನ ಕಡೆಗೆ ತಿರುಗಿ “ಲಕ್ಷ್ಮಣ, ಈ ಅರಣ್ಯದಲ್ಲಿರುವುದು ಬಹಳ ಕಷ್ಟ. ಇದು ದುರ್ಗಮವಾಗಿದೆ. ನಮಗೆ ಅರಣ್ಯದಲ್ಲಿದ್ದು ಬಳಕೆಯಿಲ್ಲ (೧–೨). ಬೇಗನೆ ತಪೋಧನರಾದ ಶರಭಂಗಮುನಿಗಳನ್ನು ದರ್ಶನ ಮಾಡೋಣ” ಎಂದು ಹೇಳಿ, ಶರಭಂಗಮುನಿಗಳ ಆಶ್ರಮದ ಕಡೆಗೆ ಹೊರಟನು. ಅಲ್ಲಿ, ತಪಸ್ಸಿನಿಂದ ಪರಿಶುದ್ಧಚಿತ್ತರೂ ದೇವತಾಸದೃಶರೂ ಆದ ಶರಭಂಗಮಹರ್ಷಿಗಳ ಸಮೀಪದಲ್ಲಿ ಒಂದು ಅದ್ಭುತವು ಗೋಚರಿಸಿತು (೩–೪). ಸೂರ್ಯನೋ ಅಥವಾ ಅಗ್ನಿಯೋ ಎಂಬಂತೆ ತೇಜೋಮಯವಾದ ಒಂದು ಆಕೃತಿಯು

ಅಸಂಸ್ಪೃಶಂತಂ ವಸುಧಾಂ ದದರ್ಶ ವಿಬುಧೇಶ್ವರಮ್ ।
ಸುಪ್ರಭಾಭರಣಂ ದೇವಂ ವಿರಜೋಽಂಬರಧಾರಿಣಮ್ ॥ ೬

ತದ್ವಿಧೈರೇವ ಬಹುಭಿಃ ಪೂಜ್ಯಮಾನಂ ಮಹಾತ್ಮಭಿಃ ।
ಹರಿಭಿರ್ವಾಜಿಭಿರ್ಯುಕ್ತಮಂತರಿಕ್ಷಗತಂ ರಥಮ್ ॥ ೭

ದದರ್ಶಾದೂರತಸ್ತಸ್ಯ ತರುಣಾದಿತ್ಯಸಂನಿಭಮ್ ।
ಪಾಂಡರಾಭ್ರಘನಪ್ರಖ್ಯಂ ಚಂದ್ರಮಂಡಲಸಂನಿಭಮ್ ॥ ೮

ಅಪಶ್ಯದ್ವಿಮಲಂ ಛತ್ರಂ ಚಿತ್ರಮಾಲ್ಯೋಪಶೋಭಿತಮ್ ।
ಚಾಮರವ್ಯಜನೇ ಚಾಗ್ರ್ಯೇ ರುಕ್ಮದಂಡೇ ಮಹಾಧನೇ ॥ ೯

ಗೃಹೀತೇ ವರನಾರೀಭ್ಯಾಂ ಧೂಯಮಾನೇ ಚ ಮೂರ್ಧನಿ ।
ಗಂಧರ್ವಾಮರಸಿದ್ಧಾಶ್ಚ ಬಹವಃ ಪರಮರ್ಷಯಃ ॥ ೧೦

ಅಂತರಿಕ್ಷಗತಂ ದೇವಂ ವಾಗ್ಭಿರಗ್ರ್ಯಾಭಿರೀಡಿರೇ ।
ಸಹ ಸಂಭಾಷಮಾಣೇ ತು ಶರಭಂಗೇಣ ವಾಸವೇ ॥ ೧೧

---

ಕಾಣಿಸಿತು. ಸಮೀಪದಲ್ಲೊಂದು ರಥವು ನಿಂತಿದ್ದಿತು. ದೇವತೆಗಳು ನೆರೆದಿದ್ದರು. ಸಾಕ್ಷಾತ್ ದೇವೇಂದ್ರನೇ ರಥದಿಂದಿಳಿದು ಭೂಮಿಯನ್ನು ಮುಟ್ಟದೆ ಆಕಾಶದಲ್ಲಿ ನಿಂತಿರುವುದನ್ನು ಶ್ರೀರಾಮನು ನೋಡಿದನು. ಸ್ವಚ್ಛವಾದ ವಸ್ತ್ರವನ್ನುಟ್ಟು ಝಗಝಗಿಸುವ ಆಭರಣಗಳನ್ನು ಇಂದ್ರನು ತೊಟ್ಟಿದ್ದನು (೫–೬). ಅವನಂತೆಯೇ ಇದ್ದ ಮಹಾತ್ಮರಾದ ಅನೇಕ ದೇವತೆಗಳು ಆ ವಿಬುಧೇಶ್ವರನನ್ನು ಓಲೈಸುತ್ತ ನಿಂತಿದ್ದರು. ಹಸುರುಬಣ್ಣದ ಕುದುರೆಗಳನ್ನು ಹೂಡಿದ ದಿವ್ಯರಥವು ಅಂತರಿಕ್ಷದಲ್ಲಿ ನಿಂತಿತ್ತು (೭). ಸೂರ್ಯನಂತೆ ಅದು ಬೆಳಗುತ್ತಿತ್ತು. ಮತ್ತು ಬಿಳಿಯ ಮೋಡದಂತೆ ಹೊಳೆಯುತ್ತ, ಚಂದ್ರಮಂಡಲದಂತೆ ಕಂಗೊಳಿಸುತ್ತ, ಬಣ್ಣಬಣ್ಣದ ಹೂಮಾಲೆಗಳಿಂದ ರಂಜಿಸುತ್ತಿದ್ದ ಒಂದು ಶ್ವೇತಚ್ಛತ್ರವನ್ನು ದೇವೇಂದ್ರನ ಶಿರಸ್ಸಿನ ಮೇಲೆ ಹಿಡಿಯಲಾಗಿತ್ತು (೮). ಅಲ್ಲದೆ ಇಬ್ಬರು ಅಪ್ಸರೆಯರು ಚಿನ್ನದ ಹಿಡಿ ಕೈಯುಳ್ಳ ಅಮೂಲ್ಯವಾದ ಎರಡು ಚಾಮರಗಳನ್ನು ಆತನ ಶಿರಸ್ಸಿನ ಎರಡು ಪಾರ್ಶ್ವಗಳಲ್ಲಿಯೂ ಬೀಸುತ್ತಿದ್ದರು. ದೇವಗಂಧರ್ವರೂ ಸಿದ್ಧಪುರುಷರೂ ದೇವರ್ಷಿಗಳೂ ಆತನನ್ನು ಉತ್ತಮ ಸ್ತುತಿಗಳಿಂದ ಸ್ತೋತ್ರಮಾಡುತ್ತಿದ್ದರು. ಆ ದೇವೇಂದ್ರನು

ದೃಷ್ಟ್ವಾ ಶತಕ್ರತುಂ ತತ್ರ ರಾಮೋ ಲಕ್ಷ್ಮಣಮಬ್ರವೀತ್ |
ರಾಮೋಽಥ ರಥಮುದ್ದಿಶ್ಯ ಲಕ್ಷ್ಮಣಾಯ ಪ್ರದರ್ಶಯನ್ || ೧೨
ಅರ್ಚಿಷ್ಮಂತಂ ಶ್ರಿಯಾ ಜುಷ್ಟಮದ್ಭುತಂ ಪಶ್ಯ ಲಕ್ಷ್ಮಣ |
ಪ್ರತಪಂತಮಿವಾದಿತ್ಯಮಂತರಿಕ್ಷಗತಂ ರಥಮ್ || ೧೩
ಯೇ ಹಯಾಃ ಪುರುಹೂತಸ್ಯ ಪುರಾ ಶಕ್ರಸ್ಯ ನಃ ಶ್ರುತಾಃ |
ಅಂತರಿಕ್ಷಗತಾ ದಿವ್ಯಾಸ್ತ ಇಮೇ ಹರಯೋ ಧ್ರುವಮ್ || ೧೪
ಇಮೇ ಚ ಪುರುಷವ್ಯಾಘ್ರಾ ಯೇ ತಿಷ್ಠಂತ್ಯಭಿತೋ ರಥಮ್ |
ಶತಂ ಶತಂ ಕುಂಡಲಿನೋ ಯುವಾನಃ ಖಡ್ಗಪಾಣಯಃ || ೧೫
ವಿಸ್ತೀರ್ಣವಿಪುಲೋರಸ್ಕಾಃ ಪರಿಘಾಯತಬಾಹವಃ |
ಶೋಣಾಂಶುವಸನಾಃ ಸರ್ವೇ ವ್ಯಾಘ್ರಾ ಇವ ದುರಾಸದಾಃ || ೧೬
ಉರೋದೇಶೇಷು ಸರ್ವೇಷಾಂ ಹಾರಾ ಜ್ವಲನಸಂನಿಭಾಃ |
ರೂಪಂ ಭಿಭ್ರತಿ ಸೌಮಿತ್ರೇ ಪಂಚವಿಂಶತಿವಾರ್ಷಿಕಮ್ || ೧೭
ಏತದ್ಧಿ ಕಿಲ ದೇವಾನಾಂ ವಯೋ ಭವತಿ ನಿತ್ಯದಾ |
ಯಥೇಮೇ ಪುರುಷವ್ಯಾಘ್ರಾ ದೃಶ್ಯಂತೇ ಪ್ರಿಯದರ್ಶನಾಃ || ೧೮

---

ಅಂತರಿಕ್ಷದಲ್ಲಿ ನಿಂತುಕೊಂಡು ಶರಭಂಗಮುನಿಗಳೊಡನೆ ಮಾತನಾಡುತ್ತಿದ್ದುದನ್ನು ಶ್ರೀರಾಮನು ನೋಡಿದನು (೯–೧೧). ಅವನು ಲಕ್ಷ್ಮಣನಿಗೆ ಆ ದಿವ್ಯರಥವನ್ನು ತೋರಿಸುತ್ತ "ಲಕ್ಷ್ಮಣ, ಅದ್ಭುತವಾದ ಆ ರಥವನ್ನು ನೋಡು! ಎಷ್ಟು ಕಾಂತಿಯುಕ್ತವಾಗಿ ಜ್ವಲಿಸುತ್ತಿದೆ! ಉರಿಯುವ ಸೂರ್ಯನಂತೆ ಅಂತರಿಕ್ಷದಲ್ಲಿ ನಿಂತಿದೆ! (೧೨–೧೩). ಪೂರ್ವದಲ್ಲಿ ನಾವು ಇಂದ್ರನ ಕುದುರೆಗಳ ವಿಷಯವಾಗಿ ಕೇಳಿದ್ದೆವಲ್ಲ! ಅಂತರಿಕ್ಷದಲ್ಲಿ ನಿಂತಿರುವ ಈ ದಿವ್ಯಾಶ್ವಗಳು ಇಂದ್ರನವೇ ಸರಿ. ಈ ರಥದ ಇಕ್ಕೆಲದಲ್ಲಿ ನೂರಾರು ಮಂದಿ ಮಹಾಪುರುಷರು ನಿಂತಿದ್ದಾರೆ. ಎಲ್ಲರೂ ಕುಂಡಲಧಾರಿಗಳೂ ಖಡ್ಗಹಸ್ತರೂ ಆದ ಯುವಕರು (೧೪–೧೫). ಇವರಿಗೆ ಎಷ್ಟು ವಿಶಾಲವಾದ ವಕ್ಷಃಸ್ಥಳವಿದೆ! ಪರಿಘದಂತೆ ನೀಳವಾದ ತೋಳು! ರಕ್ತಾಂಬರವನ್ನುಟ್ಟಿರುವ ಇವರೆಲ್ಲರೂ ಹುಲಿಗಳಂತೆ ದುರ್ಧರ್ಷರಾಗಿದ್ದಾರೆ. ಎಲ್ಲರ ಎದೆಯಮೇಲೂ ಹಾರಗಳು ಅಗ್ನಿಯಂತೆ ಮಿರುಗುತ್ತಿವೆ. ಲಕ್ಷ್ಮಣ, ಇವರೆಲ್ಲರೂ ಇಪ್ಪತ್ತೈದುವರ್ಷದ ಪ್ರಾಯದವರಂತೆ ಕಾಣುತ್ತಿದ್ದಾರೆ (೧೬–೧೭). ದೇವತೆಗಳಿಗೆ

ಇಹೈವ ಸಹ ವೈದೇಹ್ಯಾ ಮುಹೂರ್ತಂ ತಿಷ್ಠ ಲಕ್ಷ್ಮಣ ।
ಯಾವಜ್ಜಾನಾಮ್ಯಹಂ ವ್ಯಕ್ತಂ ಕ ಏಷ ದ್ಯುತಿಮಾನ್ ರಥೇ ॥ ೧೯

ತಮೇವಮುಕ್ತ್ವಾ ಸೌಮಿತ್ರಿಮಿಹೈವ ಸ್ಥೀಯತಾಮಿತಿ ।
ಅಭಿಚಕ್ರಾಮ ಕಾಕುತ್ಸ್ಥಃ ಶರಭಂಗಾಶ್ರಮಂ ಪ್ರತಿ ॥ ೨೦

ತತಃ ಸಮಭಿಗಚ್ಛಂತಂ ಪ್ರೇಕ್ಷ್ಯ ರಾಮಂ ಶಚೀಪತಿಃ ।
ಶರಭಂಗಮನುಜ್ಞಾಪ್ಯ ವಿಬುಧಾನಿದಮಬ್ರವೀತ್ ॥ ೨೧

ಇಹೋಪಯಾತ್ಯಸೌ ರಾಮೋ ಯಾವನ್ಮಾಂ ನಾಭಿಭಾಷತೇ ।
ನಿಷ್ಠಾಂ ನಯತು ತಾವತ್ತು ತತೋ ಮಾಂ ದ್ರಷ್ಟುಮರ್ಹತಿ ॥ ೨೨

ಜಿತವಂತಂ ಕೃತಾರ್ಥಂ ಚ ದ್ರಷ್ಟಾಹಮಚಿರಾದಿಮಮ್ ।
ಕರ್ಮ ಹ್ಯನೇನ ಕರ್ತವ್ಯಂ ಮಹದನ್ಯೈಃ ಸುದುಷ್ಕರಮ್ ॥ ೨೩

ನಿಷ್ಪಾದಯಿತ್ವಾ ತತ್ ಕರ್ಮ ತತೋ ಮಾಂ ದ್ರಷ್ಟುಮರ್ಹತಿ ।
ಅಥ ವಜ್ರೀ ತಮಾಮಂತ್ರ್ಯ ಮಾನಯಿತ್ವಾ ಚ ತಾಪಸಮ್ ॥ ೨೪

---

ಯಾವಾಗಲೂ ಇದೇ ವಯಸ್ಸು ಇರುತ್ತದೆ. ಸುಂದರಾಕೃತಿಯ ಈ ಪುರುಷರನ್ನು ನೋಡಿದರೆ ದೇವತೆಗಳಂತೆಯೇ ತೋರುವುದು. ಲಕ್ಷ್ಮಣ, ನೀನು ಸೀತೆಯೊಡನೆ ಇಲ್ಲಿಯೇ ಸ್ವಲ್ಪಹೊತ್ತು ನಿಂತಿರು. ನಾನು ಹೋಗಿ ಈ ರಥದಲ್ಲಿ ಬಂದಿರುವ ತೇಜಸ್ವಿಯು ಯಾರೆಂಬುದನ್ನು ಸರಿಯಾಗಿ ತಿಳಿಯುವೆನು" ಎಂದು ಹೇಳಿದನು (೧೮–೧೯). ಅಲ್ಲಿಯೇ ಇರಬೇಕೆಂದು ಲಕ್ಷ್ಮಣನಿಗೆ ತಿಳಿಸಿ ಶ್ರೀರಾಮನು ಶರಭಂಗಾಶ್ರಮದ ಸಮೀಪಕ್ಕೆ ಹೊರಟನು. ಅಷ್ಟರಲ್ಲಿ ದೇವೇಂದ್ರನು, ಆಶ್ರಮಕ್ಕೆದುರಾಗಿ ಶ್ರೀರಾಮನು ಬರುತ್ತಿರುವುದನ್ನು ಕಂಡು, ಶರಭಂಗಮುನಿಗಳಿಗೆ ಅದನ್ನು ಸೂಕ್ಷ್ಮವಾಗಿ ತಿಳಿಸಿ, ದೇವತೆಗಳನ್ನು ಕುರಿತು ಹೀಗೆಂದನು (೨೦–೨೧) : "ಇಗೋ! ಇಲ್ಲಿ ಶ್ರೀರಾಮನು ಬರುತ್ತಿದ್ದಾನೆ. ಅವನು ನನ್ನೊಡನೆ ಸಂಭಾಷಿಸುವುದಕ್ಕೆ ಮೊದಲು ತನ್ನ ಪ್ರತಿಜ್ಞೆಯನ್ನು ಪೂರೈಸಲಿ. ಆಮೇಲೆ ನನ್ನನ್ನು ನೋಡುವುದು ಲೇಸು. ಅವನು ಜಯಶಾಲಿಯಾಗಿ ತನ್ನ ಕಾರ್ಯವನ್ನು ಸಾಧಿಸಿದ ಮೇಲೆ ಶೀಘ್ರದಲ್ಲಿಯೇ ಆತನ ದರ್ಶನಮಾಡುವೆನು. ಇತರರಿಗೆ ಅಸಾಧ್ಯವಾದ ಒಂದು ಮಹಾಕಾರ್ಯವನ್ನು ಶ್ರೀರಾಮನು ನೆರವೇರಿಸಬೇಕಾಗಿದೆ (೨೨–೨೩). ಅದನ್ನು ಸಾಧಿಸಿದಮೇಲೆ ನನ್ನನ್ನು ನೋಡುವುದು ಯುಕ್ತ" ಹೀಗೆ ಹೇಳಿ

**ರಥೇನ ಹರಿಯುಕ್ತೇನ ಯಯೌ ದಿವಮರಿಂದಮಃ ।**
**ಪ್ರಯಾತೇ ತು ಸಹಸ್ರಾಕ್ಷೇ ರಾಘವಃ ಸಪರಿಚ್ಛದೇ ॥ ೨೫**
**ಅಗ್ನಿಹೋತ್ರಮುಪಾಸೀನಂ ಶರಭಂಗಮುಪಾಗಮತ್ ।**
**ತಸ್ಯ ಪಾದೌ ಚ ಸಂಗೃಹ್ಯ ರಾಮಃ ಸೀತಾ ಚ ಲಕ್ಷ್ಮಣಃ ॥ ೨೬**
**ನಿಷೇದುಃ ಸಮನುಜ್ಞಾತಾ ಲಬ್ಧವಾಸಾ ನಿಮಂತ್ರಿತಾಃ ।**
**ತತಃ ಶಕ್ರೋಪಯಾನಂ ತು ಪರ್ಯಪೃಚ್ಛತ್ ಸ ರಾಘವಃ ॥ ೨೭**
**ಶರಭಂಗಶ್ಚ ತತ್ಸರ್ವಂ ರಾಘವಾಯ ನ್ಯವೇದಯತ್ ।**
**ಮಾಮೇಷ ವರದೋ ರಾಮ ಬ್ರಹ್ಮಲೋಕಂ ನಿನೀಷತಿ ॥ ೨೮**
**ಜಿತಮುಗ್ರೇಣ ತಪಸಾ ದುಷ್ಪ್ರಾಪಮಕೃತಾತ್ಮಭಿಃ ।**
**ಅಹಂ ಜ್ಞಾತ್ವಾ ನರವ್ಯಾಘ್ರ ವರ್ತಮಾನಮದೂರತಃ ॥ ೨೯**

---

ದೇವೇಂದ್ರನು ಶರಭಂಗಮುನಿಗಳನ್ನು ಆದರದಿಂದ ಬೀಳ್ಕೊಂಡು ದಿವ್ಯಾಶ್ವಗಳನ್ನು ಹೂಡಿದ ರಥವನ್ನೇರಿ ತನ್ನ ಪರಿವಾರದೊಂದಿಗೆ ಸ್ವರ್ಗಕ್ಕೆ ಹೊರಟುಹೋದನು* (೨೪–೨೫). ಇತ್ತ ಶ್ರೀರಾಮನು (ದೇವೇಂದ್ರನು ಹೊರಟುಹೋದ್ದರಿಂದ) ಸೀತಾ ಲಕ್ಷ್ಮಣರನ್ನು ಕರೆದುಕೊಂಡು ಆಶ್ರಮಕ್ಕೆ ಬಂದನು. ಶಾಲೆಯಲ್ಲಿದ್ದ ಶರಭಂಗ ಮುನಿಗಳ ಪಾದಗಳನ್ನು ಮುಟ್ಟಿ ಅವರೆಲ್ಲರೂ ನಮಸ್ಕರಿಸಿದರು (೨೬). ಆ ಮಹರ್ಷಿ ಗಳ ಸೂಚನೆಯಂತೆ ಅವರ ಸಮೀಪದಲ್ಲಿ ಎಲ್ಲರೂ ಕುಳಿತರು. ಆಗ ಶರಭಂಗ ಮುನಿಗಳು ತಮ್ಮ ಆಶ್ರಮದಲ್ಲಿ ಉಳಿದುಕೊಂಡು ಭೋಜನಾದಿಗಳನ್ನು ಸ್ವೀಕರಿಸ ಬೇಕೆಂದು ಹೇಳಿ ಸೀತಾಲಕ್ಷ್ಮಣರನ್ನು ಸತ್ಕರಿಸಿದರು. ಆಗ ರಾಘವನು ದೇವೇಂದ್ರನ ಆಗಮನದ ವಿಷಯವಾಗಿ ಪ್ರಶ್ನೆಮಾಡಲು, ಶರಭಂಗರು ಅದೆಲ್ಲವನ್ನೂ ಹೀಗೆ ವಿವರಿಸಿದರು : "ಶ್ರೀರಾಮ, ವರಪ್ರದನಾದ ಇಂದ್ರನು ನನ್ನನ್ನು ಬ್ರಹ್ಮಲೋಕಕ್ಕೆ ಕರೆದೊಯ್ಯಲು ಬಂದಿದ್ದನು (೨೭–೨೮). ಉಗ್ರವಾದ ತಪಸ್ಸಿನಿಂದ ನಾನು

---

* ಶ್ರೀರಾಮನೊಡನೆ ಇಂದ್ರನು ಮಾತನಾಡದಿರಲು ಮೂರು ಕಾರಣಗಳನ್ನು ಊಹಿಸುತ್ತಾರೆ:

೧. ಶ್ರೀರಾಮನು ದೈವಾಂಶಪುರುಷನೆಂಬುದು ಜನರಿಗೆ ತಿಳಿಯದಿರಲಿ.

೨. ಶ್ರೀರಾಮನು ಕಷ್ಟದಲ್ಲಿದ್ದಾನೆ; ತಾನು ವೈಭವದಲ್ಲಿದ್ದುಕೊಂಡು ಅವನೊಡನೆ ಸಂಭಾಷಿಸುವುದು ಯುಕ್ತವಲ್ಲ.

೩. ಶ್ರೀರಾಮನೊಡನೆ ಮಾತನಾಡಿದ್ದು ತಿಳಿದರೆ ರಾವಣನು ಕೋಪಿಸಿಕೊಂಡಾನು.

ಬ್ರಹ್ಮಲೋಕಂ ನ ಗಚ್ಛಾಮಿ ತ್ವಾಮದೃಷ್ಟ್ವಾ ಪ್ರಿಯಾತಿಥಿಮ್ ।
ತ್ವಯಾಹಂ ಪುರುಷವ್ಯಾಘ್ರ ಧಾರ್ಮಿಕೇಣ ಮಹಾತ್ಮನಾ ॥ ೩೦
ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವಸೇವಿತಮ್ ।
ಅಕ್ಷಯಾ ನರಶಾರ್ದೂಲ ಮಯಾ ಲೋಕಾ ಜಿತಾಃ ಶುಭಾಃ ॥ ೩೧
ಬ್ರಾಹ್ಮ್ಯಾಶ್ಚ ನಾಕಪೃಷ್ಠ್ಯಾಶ್ಚ ಪ್ರತಿಗೃಹ್ಣೀಷ್ವ ಮಾಮಕಾನ್ ।
ಏವಮುಕ್ತೋ ನರವ್ಯಾಘ್ರಃ ಸರ್ವಶಾಸ್ತ್ರವಿಶಾರದಃ ॥ ೩೨
ಋಷಿಣಾ ಶರಭಂಗೇಣ ರಾಘವೋ ವಾಕ್ಯಮಬ್ರವೀತ್ ।
ಅಹಮೇವಾಹರಿಷ್ಯಾಮಿ ಸರ್ವಲೋಕಾನ್ ಮಹಾಮುನೇ ॥ ೩೩
ಆವಾಸಂ ತ್ವಹಮಿಚ್ಛಾಮಿ ಪ್ರದಿಷ್ಟಮಿಹ ಕಾನನೇ ।
ರಾಘವೇಣೈವಮುಕ್ತಸ್ತು ಶಕ್ರತುಲ್ಯಬಲೇನ ವೈ ॥ ೩೪
ಶರಭಂಗೋ ಮಹಾಪ್ರಾಜ್ಞಃ ಪುನರೇವಾಬ್ರವೀದ್ವಚಃ ।
ಇಹ ರಾಮ ಮಹಾತೇಜಾಃ ಸುತೀಕ್ಷ್ಣೋ ನಾಮ ಧಾರ್ಮಿಕಃ ॥ ೩೫

---

ಬ್ರಹ್ಮಲೋಕವನ್ನು ಸಾಧಿಸಿಕೊಂಡಿದ್ದೇನೆ. ಇಂದ್ರಿಯಜಯವಿಲ್ಲದವರು ಅದನ್ನು ಪಡೆಯಲಾರರು. ಹೇ ಪುರುಷೋತ್ತಮ, ನೀನು ಆಶ್ರಮದ ಸಮೀಪಕ್ಕೆ ಬಂದಿರುವುದು ನನಗೆ ತಿಳಿಯಿತು. ನಿನ್ನಂಥ ಪ್ರಿಯನಾದ ಅತಿಥಿಯು ಬರುತ್ತಿರುವಾಗ ನಿನ್ನನ್ನು ನೋಡದೆ ಬ್ರಹ್ಮಲೋಕಕ್ಕೆ ಹೋಗಲು ನನಗೆ ಮನಸ್ಸು ಬರಲಿಲ್ಲ (೨೯–೩೦). ಧರ್ಮನಿಷ್ಠನೂ ಮಹಾತ್ಮನೂ ಆದ ನಿನ್ನ ದರ್ಶನವನ್ನು ಮಾಡಿ, ದೇವತೆಗಳಿಗೂ ಪೂಜ್ಯವಾದ ಬ್ರಹ್ಮಲೋಕಕ್ಕೆ ಹೋಗಬೇಕೆಂದಿದ್ದೇನೆ. ಶ್ರೀರಾಮ, ಅಕ್ಷಯವಾದ ಅನೇಕ ಪುಣ್ಯಲೋಕಗಳನ್ನು ನಾನು ಸಾಧಿಸಿದ್ದೇನೆ. ಅವು ಬ್ರಹ್ಮಲೋಕಕ್ಕೂ ಸ್ವರ್ಗಕ್ಕೂ ಸೇರಿದ ಭೋಗಭೂಮಿಗಳು. ಅವುಗಳೆಲ್ಲವನ್ನೂ ನಿನಗೆ ಅರ್ಪಿಸಬೇಕೆಂದಿದ್ದೇನೆ*; ಸ್ವೀಕರಿಸು" ಎಂದು ನುಡಿದರು (೩೧–೩೨). ಶರಭಂಗ ಮುನಿಗಳು ಹೀಗೆ ಹೇಳಲು ಸರ್ವಶಾಸ್ತ್ರವಿಶಾರದನಾದ ಶ್ರೀರಾಮನು "ಮಹರ್ಷಿಗಳೆ, ಆ ಸಮಸ್ತಲೋಕಗಳನ್ನೂ ನಾನೇ ಸಂಪಾದಿಸಿಕೊಳ್ಳುವೆನು. ನನಗೆ ಬೇಕಾಗಿರುವುದು ಈ ಅರಣ್ಯದಲ್ಲಿ ವಾಸಮಾಡಲು ಒಂದು ಸ್ಥಳವು ಮಾತ್ರ" ಎಂದು ಹೇಳಿದನು (೩೩–೩೪). ಆಗ ಮಹಾಪ್ರಾಜ್ಞರಾದ ಶರಭಂಗಮುನಿಗಳು

---

* ಅನುಬಂಧವನ್ನು ನೋಡಿ.

**ವಸತ್ಯರಣ್ಯೇ ಧರ್ಮಾತ್ಮಾ ಸ ತೇ ವಾಸಂ ವಿಧಾಸ್ಯತಿ ।**
**ಸುತೀಕ್ಷ್ಣಮಭಿಗಚ್ಛ ತ್ವಂ ಶುಚೌ ದೇಶೇ ತಪಸ್ವಿನಮ್ ॥ ೩೬**

**ರಮಣೀಯೇ ವನೋದ್ದೇಶೇ ಸ ತೇ ವಾಸಂ ವಿಧಾಸ್ಯತಿ ।**
**ಇಮಾಂ ಮಂದಾಕಿನೀಂ ರಾಮ ಪ್ರತಿಸ್ರೋತಾಮನುವ್ರಜ ॥ ೩೭**

**ನದೀಂ ಪುಷ್ಪೋಡುಪವಹಾಂ ತತ್ರ ತತ್ರ ಗಮಿಷ್ಯಸಿ ।**
**ಏಷ ಪಂಥಾ ನರವ್ಯಾಘ್ರ ಮುಹೂರ್ತಂ ಪಶ್ಯ ತಾತ ಮಾಮ್ ॥ ೩೮**

**ಯಾವಜ್ಜಹಾಮಿ ಗಾತ್ರಾಣಿ ಜೀರ್ಣಾಂ ತ್ವಚಮಿವೋರಗಃ ।**
**ತತೋಽಗ್ನಿಂ ಸುಸಮಾಧಾಯ ಹುತ್ವಾ ಚಾಜ್ಯೇನ ಮಂತ್ರವಿತ್ ॥ ೩೯**

**ಶರಭಂಗೋ ಮಹಾತೇಜಾಃ ಪ್ರವಿವೇಶ ಹುತಾಶನಮ್ ।**
**ತಸ್ಯ ರೋಮಾಣಿ ಕೇಶಾಂಶ್ಚ ದದಾಹಾಗ್ನಿರ್ಮಹಾತ್ಮನಃ ॥ ೪೦**

---

“ಶ್ರೀರಾಮ, ಈ ಕಾಡಿನಲ್ಲಿ ಸುತೀಕ್ಷ್ಣರೆಂಬ ಧಾರ್ಮಿಕರೂ ವರ್ಚಸ್ವಿಗಳೂ ಆದ ಋಷಿಗಳೊಬ್ಬರಿದ್ದಾರೆ. ಅವರು ನಿನಗೆ ವಾಸಯೋಗ್ಯವಾದ ಸ್ಥಳವನ್ನು ಕಲ್ಪಿಸಿ ಕೊಡುವರು. ನೀನು ಅವರ ಬಳಿಗೆ ಹೋಗು. ಆ ತಪಸ್ವಿಗಳು ಸ್ವಚ್ಛವಾಗಿಯೂ ರಮಣೀಯವಾಗಿಯೂ ಇರುವ ಒಂದು ವನಪ್ರದೇಶದಲ್ಲಿ ನಿನಗೆ ವಾಸಸ್ಥಾನವನ್ನು ತೋರಿಸುವರು (೩೫–೩೬). ಇದೋ, ಇಲ್ಲಿ ಮಂದಾಕಿನೀನದಿಯು ಹರಿಯುತ್ತಿದೆ. ಅದರ ಪ್ರವಾಹಕ್ಕೆ ಎದುರುಮುಖವಾಗಿ ನದೀತೀರವನ್ನು ಹಿಡಿದು ನೀನು ಹೋಗಬೇಕು. ಅಲ್ಲಲ್ಲಿ ಕೆಲವು ಹೊಳೆಗಳನ್ನು ದಾಟಬೇಕಾಗುವುದು. ಅವುಗಳಲ್ಲಿ ಹೂಗಳು ತೆಪ್ಪದಂತೆ ದಟ್ಟವಾಗಿ ತೇಲಿಬರುತ್ತವೆ! ಅದೇ ಸುತೀಕ್ಷ್ಣರ ಆಶ್ರಮಕ್ಕೆ ಹೋಗಬೇಕಾದ ದಾರಿ” ಎಂದು ನುಡಿದು ದಾರಿಯನ್ನು ತಿಳಿಸಿದರು (೩೭–೩೮). ಆಮೇಲೆ “ವತ್ಸ, ಶ್ರೀರಾಮ, ಸ್ವಲ್ಪಕಾಲದವರೆಗೆ ನನ್ನನ್ನು ನೋಡುತ್ತಿರು. ಹಾವು ತನ್ನ ಹಳೆಯ ಪರೆಯನ್ನು ಬಿಡುವಂತೆ ನಾನು ಈ ದೇಹವನ್ನು ತ್ಯಜಿಸಿಬಿಡುವೆನು” ಎಂದು ಹೇಳಿ ಮಂತ್ರಜ್ಞರಾದ ಶರಭಂಗಮುನಿಗಳು ವಿಧಿಪೂರ್ವಕವಾಗಿ ಅಗ್ನಿಯಲ್ಲಿ ಆಜ್ಯಾಹುತಿಯನ್ನಿತ್ತು ಜ್ವಾಲೆಯನ್ನೆಬ್ಬಿಸಿದರು (೩೯). ಅನಂತರ ತೇಜಸ್ವಿಗಳಾದ ಆ ಶರಭಂಗಮುನಿಗಳು ಅಗ್ನಿಯಲ್ಲಿ ಪ್ರವೇಶಿಸಿ ಬಿಟ್ಟರು. ಕೂಡಲೆ ಅವರ ರೋಮಗಳು, ತಲೆಗೂದಲು, ಜೀರ್ಣವಾದ ಚರ್ಮ,

ಜೀರ್ಣಾಂ ತ್ವಚಂ ತಥಾಸ್ಥೀನಿ ಯಚ್ಚ ಮಾಂಸಂ ಸಶೋಣಿತಮ್ ।
ರಾಮಸ್ತು ವಿಸ್ಮಿತೋ ಭ್ರಾತ್ರಾ ಭಾರ್ಯಯಾ ಚ ಸಹಾತ್ಮವಾನ್ ॥ ೪೧

ಸ ಚ ಪಾವಕಸಂಕಾಶಃ ಕುಮಾರಃ ಸಮಪದ್ಯತ ।
ಉತ್ಥಾಯಾಗ್ನಿಚಯಾತ್ತಸ್ಮಾಚ್ಛರಭಂಗೋ ವ್ಯರೋಚತ ॥ ೪೨

ಸ ಲೋಕಾನಾಹಿತಾಗ್ನೀನಾಮೃಷೀಣಾಂ ಭಾವಿತಾತ್ಮನಾಮ್ ।
ದೇವಾನಾಂ ಚ ವ್ಯತಿಕ್ರಮ್ಯ ಬ್ರಹ್ಮಲೋಕಂ ವ್ಯರೋಹತ ॥ ೪೩

ಸ ಪುಣ್ಯಕರ್ಮಾ ಭವನೇ ದ್ವಿಜರ್ಷಭಃ
ಪಿತಾಮಹಂ ಸಾನುಚರಂ ದದರ್ಶ ಹ ।
ಪಿತಾಮಹಶ್ಚಾಪಿ ಸಮೀಕ್ಷ್ಯ ತಂ ದ್ವಿಜಮ್
ನನಂದ ಸುಸ್ವಾಗತಮಿತ್ಯುವಾಚ ಹ ॥ ೪೪

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚಮಃ ಸರ್ಗಃ

---

ಮೂಳೆ, ಮಾಂಸ, ರಕ್ತ-ಎಲ್ಲವೂ ಬೆಂಕಿಯಲ್ಲಿ ಸುಟ್ಟು ಭಸ್ಮವಾದವು! ಶ್ರೀರಾಮನು ಸೀತಾಲಕ್ಷ್ಮಣರೊಡನೆ ವಿಸ್ಮಯದಿಂದ ಇದನ್ನು ನೋಡುತ್ತ ನಿಂತಿದ್ದನು! (೩೯-೪೧). ಅಷ್ಟರಲ್ಲಿ ಅಗ್ನಿಜ್ವಾಲೆಯ ಮಧ್ಯದಿಂದ ಇನ್ನೊಬ್ಬ ಅಗ್ನಿಯೋ ಎಂಬಂತೆ ಬೆಳಗುತ್ತ ತರುಣನೊಬ್ಬನು ಪುಟಿದೆದ್ದನು! ಆತನೇ ಶರಭಂಗ ಮಹರ್ಷಿ! (೪೨). (ಇವರೆಲ್ಲರೂ ನೋಡುತ್ತಿದ್ದಂತೆ ಶರಭಂಗರು ಅಂತರಿಕ್ಷಾಭಿಮುಖವಾಗಿ ಹೊರಟು) ಆಹಿತಾಗ್ನಿಗಳೂ ಮಹಾತ್ಮರಾದ ಋಷಿಗಳೂ ದೇವತೆಗಳೂ ಪಡೆಯತಕ್ಕ ಲೋಕಗಳೆಲ್ಲವನ್ನೂ ದಾಟಿ ಬ್ರಹ್ಮಲೋಕವನ್ನು ಸೇರಿದರು (೪೩). ಅಲ್ಲಿ ಪುಣ್ಯಶಾಲಿಗಳಾದ ಆ ಮುನಿಶ್ರೇಷ್ಠರಿಗೆ ಪರಿವಾರಸಮೇತನಾದ ಬ್ರಹ್ಮದೇವನ ದರ್ಶನವಾಯಿತು. ಬ್ರಹ್ಮದೇವನು ಸಂತೋಷದಿಂದ ಶರಭಂಗರನ್ನು ಸ್ವಾಗತಿಸಿ ಆದರಿಸಿದನು (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐದನೆಯ ಸರ್ಗ

---

## ಷಷ್ಠಃ ಸರ್ಗಃ

### ರಕ್ಷೋವಧಪ್ರತಿಜ್ಞಾನಮ್

ಶರಭಂಗೇ ದಿವಂ ಯಾತೇ ಮುನಿಸಂಘಾಃ ಸಮಾಗತಾಃ ।
ಅಭ್ಯಗಚ್ಛಂತ ಕಾಕುತ್ಸ್ಥಂ ರಾಮಂ ಜ್ವಲಿತತೇಜಸಮ್ ॥ ೧

ವೈಖಾನಸಾ ವಾಲಖಿಲ್ಯಾಃ ಸಂಪ್ರಕ್ಷಾಲಾ ಮರೀಚಿಪಾಃ ।
ಅಶ್ಮಕುಟ್ಟಾಶ್ಚ ಬಹವಃ ಪತ್ರಾಹಾರಾಶ್ಚ ತಾಪಸಾಃ ॥ ೨

ದಂತೋಲೂಖಲಿನಶ್ಚೈವ ತಥೈವೋನ್ಮಜ್ಜಕಾಃ ಪರೇ ।
ಗಾತ್ರಶಯ್ಯಾ ಅಶಯ್ಯಾಶ್ಚ ತಥೈವಾನವಕಾಶಿಕಾಃ ॥ ೩

ಮುನಯಃ ಸಲಿಲಾಹಾರಾ ವಾಯುಭಕ್ಷಾಸ್ತಥಾಪರೇ ।
ಆಕಾಶನಿಲಯಾಶ್ಚೈವ ತಥಾ ಸ್ಥಂಡಿಲಶಾಯಿನಃ ॥ ೪

ತಥೋರ್ಧ್ವವಾಸಿನೋ ದಾಂತಾಸ್ತಥಾರ್ದ್ರಪಟವಾಸಸಃ ।
ಸಜಪಾಶ್ಚ ತಪೋನಿತ್ಯಾಸ್ತಥಾ ಪಂಚತಪೋಽನ್ವಿತಾಃ ॥ ೫

## ಸರ್ಗ ೬

### ಶರಭಂಗಾಶ್ರಮದಲ್ಲಿದ್ದ ಋಷಿಗಳು ರಾಕ್ಷಸರಿಂದಾಗುವ ಬಾಧೆಯನ್ನು ಶ್ರೀರಾಮನಿಗೆ ತಿಳಿಸುವುದು. ಶ್ರೀರಾಮನ ಅಭಯಪ್ರದಾನ

ಹೀಗೆ ಶರಭಂಗಮುನಿಗಳು ಬ್ರಹ್ಮಲೋಕವನ್ನೈದಲು, ಆಶ್ರಮದಲ್ಲಿದ್ದ ಋಷಿಗಳೆಲ್ಲರೂ ಗುಂಪಾಗಿ ಕಲೆತು ಮಹಾತೇಜಸ್ವಿಯಾದ ಶ್ರೀರಾಮನ ಬಳಿಗೆ ಬಂದರು. ಅವರಲ್ಲಿ ವೈಖಾನಸ, ವಾಲಖಿಲ್ಯ, ಸಂಪ್ರಕ್ಷಾಲ, ಮರೀಚಿಪ, ಅಶ್ಮಕುಟ್ಟ, ಪತ್ರಾಹಾರ—ಎಂಬ ಹೆಸರನ್ನು ಪಡೆದು ವಿವಿಧರೀತಿಯ ತಪೋನಿಷ್ಠೆಯಲ್ಲಿದ್ದ ಋಷಿಗಳಿದ್ದರು (೧–೨). ಕೆಲವರು ದಂತೋಲೂಖಲಿ, ಉನ್ಮಜ್ಜಕ, ಗಾತ್ರಶಯ್ಯ, ಅನವಕಾಶಿಕ, ಸಲಿಲಾಹಾರ, ವಾಯುಭಕ್ಷ, ಆಕಾಶನಿಲಯ, ಸ್ಥಂಡಿಲಶಾಯಿ, ಊರ್ಧ್ವವಾಸಿ, ದಾಂತ, ಆರ್ದ್ರಪಟ, ಸಜಪ, ತಪೋನಿತ್ಯ, ಪಂಚತಪ—ಎಂಬ

ಸರ್ವೇ ಬ್ರಾಹ್ಮ್ಯಾ ಶ್ರಿಯಾ ಜುಷ್ಟಾ ದೃಢಯೋಗಾಃ ಸಮಾಹಿತಾಃ ।
ಶರಭಂಗಾಶ್ರಮೇ ರಾಮಮಭಿಜಗ್ಮುಶ್ಚ ತಾಪಸಾಃ ॥ ೬

ಅಭಿಗಮ್ಯ ಚ ಧರ್ಮಜ್ಞಾ ರಾಮಂ ಧರ್ಮಭೃತಾಂ ವರಮ್ ।
ಊಚುಃ ಪರಮಧರ್ಮಜ್ಞಮೃಷಿಸಂಘಾಃ ಸಮಾಹಿತಾಃ ॥ ೭

ತ್ವಮಿಕ್ಷ್ವಾಕುಕುಲಸ್ಯಾಸ್ಯ ಪೃಥಿವ್ಯಾಶ್ಚ ಮಹಾರಥ ।
ಪ್ರಧಾನಶ್ಚಾಸಿ ನಾಥಶ್ಚ ದೇವಾನಾಂ ಮಘವಾನಿವ ॥ ೮

ವಿಶ್ರುತಸ್ತ್ರಿಷು ಲೋಕೇಷು ಯಶಸಾ ವಿಕ್ರಮೇಣ ಚ ।
ಪಿತೃವ್ರತತ್ವಂ ಸತ್ಯಂ ಚ ತ್ವಯಿ ಧರ್ಮಶ್ಚ ಪುಷ್ಕಲಃ ॥ ೯

ತ್ವಾಮಾಸಾದ್ಯ ಮಹಾತ್ಮಾನಂ ಧರ್ಮಜ್ಞಂ ಧರ್ಮವತ್ಸಲಮ್ ।
ಅರ್ಥಿತ್ವಾನ್ನಾಥ ವಕ್ಷ್ಯಾಮಸ್ತಚ್ಚ ನಃ ಕ್ಷಂತುಮರ್ಹಸಿ ॥ ೧೦

ಅಧರ್ಮಸ್ತು ಮಹಾಂಸ್ತಾತ ಭವೇತ್ತಸ್ಯ ಮಹೀಪತೇಃ ।
ಯೋ ಹರೇದ್ಬಲಿಷಡ್ಭಾಗಂ ನ ಚ ರಕ್ಷತಿ ಪುತ್ರವತ್ ॥ ೧೧

ಹೆಸರನ್ನು ಪಡೆದ ತಪೋನಿಷ್ಠರು* (೩–೫). ಅವರೆಲ್ಲರೂ ಬ್ರಹ್ಮವರ್ಚಸಯುಕ್ತರೂ ಯಮನಿಯಮಾದಿ ಯೋಗಾನುಷ್ಠಾನತತ್ಪರರೂ ಏಕಾಗ್ರಚಿತ್ತರೂ ಆಗಿದ್ದರು. ಶರಭಂಗಾಶ್ರಮದಲ್ಲಿದ್ದ ಆ ತಪಸ್ವಿಗಳು ಪರಮಧರ್ಮಿಷ್ಠನಾದ ಶ್ರೀರಾಮನ ಬಳಿಗೆ ಬಂದು ಹೀಗೆ ನಿವೇದಿಸಿದರು (೬–೭) : "ಎಲೈ ವೀರಾಗ್ರೇಸರನೆ, ನೀನು ಇಕ್ಷ್ವಾಕುವಂಶದಲ್ಲಿ ಅತ್ಯಂತ ಮುಖ್ಯನಾಗಿರುವೆಯಲ್ಲದೆ ಸಕಲ ಜಗತ್ತಿಗೂ ಒಡೆಯನಾಗಿರುವೆ. ದೇವತೆಗಳಲ್ಲಿ ಇಂದ್ರನಿರುವಂತೆ, ನೀನು ಕೀರ್ತಿಪರಾಕ್ರಮಗಳಿಂದ ಮೂರು ಲೋಕಗಳಲ್ಲಿಯೂ ಪ್ರಖ್ಯಾತನಾಗಿದ್ದೀಯೆ. ಪಿತೃಭಕ್ತಿಯೂ ಸತ್ಯಧರ್ಮಗಳೂ ನಿನ್ನಲ್ಲಿ ಪುಷ್ಕಳವಾಗಿ ನೆಲೆಸಿವೆ (೮–೯). ಹೇ ಸ್ವಾಮಿ, ನಮಗೆ ಒಂದು ಕಾರ್ಯವಾಗಬೇಕಾದ್ದರಿಂದ ಮಹಾತ್ಮನೂ ಧರ್ಮವತ್ಸಲನೂ ಆದ ನಿನ್ನ ಸಮೀಪಕ್ಕೆ ಬಂದು ಹೇಳಿಕೊಳ್ಳುತ್ತಿದ್ದೇವೆ. ಅದಕ್ಕಾಗಿ ನಮ್ಮನ್ನು ಕ್ಷಮಿಸು. ಶ್ರೀರಾಮ, ರಾಜನು ಪ್ರಜೆಗಳ ಸಂಪಾದನೆಯಲ್ಲಿ ಆರನೆಯ ಒಂದು ಭಾಗವನ್ನು ತೆರಿಗೆಯೆಂದು ತೆಗೆದುಕೊಳ್ಳುತ್ತಾನೆ. ಆದ್ದರಿಂದ ಅವನು ಪ್ರಜೆಗಳನ್ನು ಮಕ್ಕಳಂತೆ

* ಈ ಹೆಸರುಗಳ ವಿವರಣೆಗಾಗಿ ಅನುಬಂಧವನ್ನು ನೋಡಿ.

ಯುಂಜಾನಃ ಸ್ವಾನಿವ ಪ್ರಾಣಾನ್ ಪ್ರಾಣೈರಿಷ್ಟಾನ್ ಸುತಾನಿವ ।
ನಿತ್ಯಯುಕ್ತಃ ಸದಾ ರಕ್ಷನ್ ಸರ್ವಾನ್ ವಿಷಯವಾಸಿನಃ ॥ ೧೨

ಪ್ರಾಪ್ನೋತಿ ಶಾಶ್ವತೀಂ ರಾಮ ಕೀರ್ತಿಂ ಸ ಬಹುವಾರ್ಷಿಕೀಮ್ ।
ಬ್ರಹ್ಮಣಃ ಸ್ಥಾನಮಾಸಾದ್ಯ ತತ್ರ ಚಾಪಿ ಮಹೀಯತೇ ॥ ೧೩

ಯತ್ ಕರೋತಿ ಪರಂ ಧರ್ಮಂ ಮುನಿರ್ಮೂಲಫಲಾಶನಃ ।
ತತ್ರ ರಾಜ್ಞಶ್ಚತುರ್ಭಾಗಃ ಪ್ರಜಾ ಧರ್ಮೇಣ ರಕ್ಷತಃ ॥ ೧೪

ಸೋಽಯಂ ಬ್ರಾಹ್ಮಣಭೂಯಿಷ್ಠೋ ವಾನಪ್ರಸ್ಥಗಣೋ ಮಹಾನ್ ।
ತ್ವನ್ನಾಥೋಽನಾಥವದ್ರಾಮ ರಾಕ್ಷಸೈರ್ವಧ್ಯತೇ ಭೃಶಮ್ ॥ ೧೫

ಏಹಿ ಪಶ್ಯ ಶರೀರಾಣಿ ಮುನೀನಾಂ ಭಾವಿತಾತ್ಮನಾಮ್ ।
ಹತಾನಾಂ ರಾಕ್ಷಸೈರ್ಘೋರೈರ್ಬಹೂನಾಂ ಬಹುಧಾ ವನೇ ॥ ೧೬

---

ಕಾಪಾಡಬೇಕು. ಇಲ್ಲದಿದ್ದರೆ ಮಹತ್ತರವಾದ ಅಧರ್ಮವು ಅವನಿಗೆ ಗಂಟುಬೀಳುತ್ತದೆ (೧೦–೧೧). ರಾಜನು ತನ್ನ ರಾಜ್ಯದಲ್ಲಿರುವ ಪ್ರಜೆಗಳೆಲ್ಲರನ್ನೂ ಸದಾ ಜಾಗರೂಕನಾಗಿ ರಕ್ಷಿಸುವುದಕ್ಕೆ ಪ್ರಯತ್ನಿಸಬೇಕು. ತನ್ನ ಪ್ರಾಣಗಳಂತೆಯೂ ಪ್ರಾಣಕ್ಕಿಂತ ಪ್ರಿಯರಾದ ಪುತ್ರರಂತೆಯೂ ಪ್ರಜೆಗಳನ್ನು ಪಾಲಿಸತಕ್ಕವನು ಬಹುಕಾಲದವರೆಗೆ ಸ್ಥಿರವಾಗಿ ನಿಲ್ಲುವ ಕೀರ್ತಿಯನ್ನು ಗಳಿಸುತ್ತಾನೆ. ಅನಂತರ ಬ್ರಹ್ಮಲೋಕವನ್ನು ಪಡೆದು ಅಲ್ಲಿಯೂ ಪೂಜಿಸಲ್ಪಡುತ್ತಾನೆ (೧೨–೧೩). ಫಲಮೂಲಗಳನ್ನು ತಿಂದುಕೊಂಡು ತಪಸ್ಸನ್ನಾಚರಿಸುವ ಮುನಿಯು ಎಷ್ಟು ಧರ್ಮವನ್ನು ಸಂಪಾದಿಸುವನೋ ಅದರಲ್ಲಿ ನಾಲ್ಕನೆಯ ಒಂದು ಭಾಗವು* ಧರ್ಮನಿಷ್ಠನಾಗಿ ಪ್ರಜೆಗಳನ್ನು ಪಾಲಿಸುವ ರಾಜನಿಗೆ ಸಲ್ಲುತ್ತದೆ (೧೪). ಶ್ರೀರಾಮ, ಬ್ರಹ್ಮಜ್ಞಾನಿಗಳಿಂದ ತುಂಬಿರುವ ಈ ವಾನಪ್ರಸ್ಥರ ಗುಂಪನ್ನು ನೋಡು. ರಾಕ್ಷಸರಿಂದ ಇವರಿಗೆ ಬಹಳ ಪೀಡೆಯಾಗುತ್ತಿದೆ. ನೀನು ಪ್ರಭುವಾಗಿದ್ದರೂ ಇವರು ದಿಕ್ಕಿಲ್ಲದವರಂತೆ ಆಗಿದ್ದಾರೆ ವನದಲ್ಲಿ ಧ್ಯಾನನಿಷ್ಠರಾದ ಈ ಮುನಿಗಳನ್ನು ಕ್ರೂರಿಗಳಾದ ರಾಕ್ಷಸರು ಎಷ್ಟೆಷ್ಟು ವಿಧದಲ್ಲಿ ಹೊಡೆದು ಬಡಿದು ಗಾಯಗೊಳಿಸಿದ್ದಾರೆ! ಶ್ರೀರಾಮ,

---

* ಅನುಬಂಧವನ್ನು ನೋಡಿ.

ಪಂಪಾನದೀನಿವಾಸಾನಾಮನು ಮಂದಾಕಿನೀಮಪಿ ।
ಚಿತ್ರಕೂಟಾಲಯಾನಾಂ ಚ ಕ್ರಿಯತೇ ಕದನಂ ಮಹತ್ ॥ ೧೭

ಏವಂ ವಯಂ ನ ಮೃಷ್ಯಾಮೋ ವಿಪ್ರಕಾರಂ ತಪಸ್ವಿನಾಮ್ ।
ಕ್ರಿಯಮಾಣಂ ವನೇ ಘೋರಂ ರಕ್ಷೋಭಿರ್ಭೀಮಕರ್ಮಭಿಃ ॥ ೧೮

ತತಸ್ತ್ವಾಂ ಶರಣಾರ್ಥಂ ಚ ಶರಣ್ಯಂ ಸಮುಪಸ್ಥಿತಾಃ ।
ಪರಿಪಾಲಯ ನೋ ರಾಮ ವಧ್ಯಮಾನಾನ್ನಿಶಾಚರೈಃ ॥ ೧೯

ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ ।
ಪರಿಪಾಲಯ ನಃ ಸರ್ವಾನ್ ರಾಕ್ಷಸೇಭ್ಯೋ ನೃಪಾತ್ಮಜ ॥ ೨೦

ಏತಚ್ಛ್ರುತ್ವಾ ತು ಕಾಕುತ್ಸ್ಥಸ್ತಾಪಸಾನಾಂ ತಪಸ್ವಿನಾಮ್ ।
ಇದಂ ಪ್ರೋವಾಚ ಧರ್ಮಾತ್ಮಾ ಸರ್ವಾನೇವ ತಪಸ್ವಿನಃ ॥ ೨೧

ನೈವಮರ್ಹತ ಮಾಂ ವಕ್ತುಮಾಜ್ಞಾಪ್ಯೋಽಹಂ ತಪಸ್ವಿನಾಮ್ ।
ಕೇವಲೇನಾತ್ಮಕಾರ್ಯೇಣ ಪ್ರವೇಷ್ಟವ್ಯಂ ಮಯಾ ವನಮ್ ॥ ೨೨

---

ಇವರ ದೇಹವನ್ನು ನೀನೇ ಬಂದು ನೋಡು ! (೧೫–೧೬). ಪಂಪಾನದೀತೀರದಲ್ಲಿಯೂ ಮಂದಾಕಿನಿಯ ದಂಡೆಯಲ್ಲಿಯೂ ಚಿತ್ರಕೂಟದ ತಪ್ಪಲುಗಳಲ್ಲಿಯೂ ವಾಸವಾಗಿರುವ ತಪಸ್ವಿಗಳಿಗೆ ಬಹಳ ಕಿರುಕುಳವಾಗುತ್ತಿದೆ. ರಾಕ್ಷಸರು ಭೀಕರವಾದ ಕೃತ್ಯವನ್ನೆಸಗುತ್ತಿದ್ದಾರೆ. ಈ ಕಾಡಿನಲ್ಲಿರುವ ತಪಸ್ವಿಗಳಿಗೆ ಘೋರವಾದ ಹಿಂಸೆಯನ್ನು ಕೊಡುತ್ತಿದ್ದಾರೆ. ನಾವು ಇದನ್ನು ತಡೆದುಕೊಳ್ಳಲಾರೆವು(೧೭–೧೮). ಆದ್ದರಿಂದ ಅನಾಥರಕ್ಷಕನಾದ ನಿನ್ನನ್ನು ಮರೆಹೊಕ್ಕಿದ್ದೇವೆ. ಶ್ರೀರಾಮ, ನಮ್ಮನ್ನು ಪರಿಪಾಲಿಸು ; ಈ ನಿಶಾಚರರ ಕಾಟವನ್ನು ತಪ್ಪಿಸು. ಹೇ ರಾಜಪುತ್ರ, ವೀರಾಗ್ರಣಿ, ಈ ಜಗತ್ತಿನಲ್ಲಿ ನಿನ್ನನ್ನು ಬಿಟ್ಟರೆ ನಮಗೆ ಬೇರೆ ಗತಿ ಇಲ್ಲ. ಈ ರಾಕ್ಷಸರ ಉಪದ್ರವದಿಂದ ನಮ್ಮನ್ನು ರಕ್ಷಿಸು " ಎಂದು ಪ್ರಾರ್ಥಿಸಿದರು (೧೯–೨೦). ಆಗ ಧರ್ಮಾತ್ಮನಾದ ಕಾಕುತ್ಸ್ಥನು ತಪೋನಿಷ್ಠರಾದ ಆ ಮುನಿಗಳನ್ನು ಕುರಿತು " ಮಹರ್ಷಿಗಳೆ, ತಾವು ನನಗೆ ಈ ರೀತಿಯಲ್ಲಿ (ದೈನ್ಯದಿಂದ) ಹೇಳಬಾರದು. ಹೀಗೆ ಮಾಡೆಂದು ನನಗೆ ತಾವು ಆಜ್ಞಾಪಿಸಬೇಕು. ನನ್ನ ಸ್ವಕಾರ್ಯಕ್ಕಾಗಿ—ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ನಾನು ಹೇಗಿದ್ದರೂ ಈ ಅರಣ್ಯವನ್ನು

ವಿಪ್ರಕಾರಮಪಾಕ್ರಷ್ಟುಂ ರಾಕ್ಷಸೈರ್ಭವತಾಮಿಮಮ್ ।
ಪಿತುಸ್ತು ನಿರ್ದೇಶಕರಃ ಪ್ರವಿಷ್ಟೋಽಹಮಿದಂ ವನಮ್ ॥　೨೩

ಭವತಾಮರ್ಥಸಿದ್ಧ್ಯರ್ಥಮಾಗತೋಽಹಂ ಯದೃಚ್ಛಯಾ ।
ತಸ್ಯ ಮೇಽಯಂ ವನೇ ವಾಸೋ ಭವಿಷ್ಯತಿ ಮಹಾಫಲಃ ॥　೨೪

ತಪಸ್ವಿನಾಂ ರಣೇ ಶತ್ರೂನ್ ಹಂತುಮಿಚ್ಛಾಮಿ ರಾಕ್ಷಸಾನ್ ।
ಪಶ್ಯಂತು ವೀರ್ಯಮೃಷಯಃ ಸಭ್ರಾತುರ್ಮೇ ತಪೋಧನಾಃ ॥　೨೫

ದತ್ತ್ವಾಽಭಯಂ ಚಾಪಿ ತಪೋಧನಾನಾಂ
ಧರ್ಮೇ ಧೃತಾತ್ಮಾ ಸಹ ಲಕ್ಷ್ಮಣೇನ ।
ತಪೋಧನೈಶ್ಚಾಪಿ ಸಭಾಜ್ಯವೃತ್ತಃ
ಸುತೀಕ್ಷ್ಣಮೇವಾಭಿಜಗಾಮ ವೀರಃ ॥　೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಷ್ಠಃ ಸರ್ಗಃ

ಪ್ರವೇಶಿಸಬೇಕಾಗಿತ್ತು (೨೧–೨೨). ಈಗ ರಾಕ್ಷಸರಿಂದ ನಿಮಗೆ ಸಂಭವಿಸಿದ ಹಿಂಸೆಯನ್ನು ಪರಿಹರಿಸುವುದಕ್ಕೂ ನಾನು ಬಂದದ್ದು ಉಪಯುಕ್ತವಾಗಲಿ. ನನ್ನ ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ನಾನು ಈ ಅರಣ್ಯಕ್ಕೆ ಬಂದಿದ್ದೇನೆ. ಆಕಸ್ಮಿಕವಾಗಿ ನಿಮ್ಮೆಲ್ಲರ ಅಭೀಷ್ಟವನ್ನು ನೆರವೇರಿಸುವುದಕ್ಕೂ ನಾನು ಬಂದಂತಾಯಿತು. ಒಟ್ಟಿನಲ್ಲಿ ಈ ವನವಾಸದಿಂದ ನನಗೆ ಮಹತ್ತರವಾದ ಫಲವುಂಟು (೨೩–೨೪). ಮಹಾತ್ಮರೆ, ತಪೋಧನರಾದ ನಿಮ್ಮನ್ನು ಪೀಡಿಸುವ ರಾಕ್ಷಸರನ್ನು ರಣರಂಗದಲ್ಲಿ ಸಂಹರಿಸಬೇಕೆಂದು ಸಂಕಲ್ಪಿಸಿದ್ದೇನೆ. ನನ್ನ ಮತ್ತು ನನ್ನ ತಮ್ಮನ ಪರಾಕ್ರಮವೆಷ್ಟೆಂಬುದನ್ನು ನೀವೇ ಕಾಣುವಿರಿ" ಎಂದು ನುಡಿದನು (೨೫). ಹೀಗೆ ಧರ್ಮನಿಷ್ಠನಾದ ಶ್ರೀರಾಮನು ಆ ತಪಸ್ವಿಗಳಿಗೆ ಅಭಯವನ್ನಿತ್ತನು. ತಪಸ್ವಿಗಳಿಗೂ ಸಮ್ಮಾನನೀಯವಾದ ಚಾರಿತ್ರವುಳ್ಳ ಆ ವೀರನು, ಅನಂತರ, ಸೀತಾಲಕ್ಷ್ಮಣರೊಡನೆ ಸುತೀಕ್ಷ್ಣಮುನಿಗಳ ಆಶ್ರಮಕ್ಕೆ ಪ್ರಯಾಣಮಾಡಿದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಆರನೆಯ ಸರ್ಗ

*

## ಸಪ್ತಮಃ ಸರ್ಗಃ

### ಸುತೀಕ್ಷ್ಣಾಶ್ರಮಃ

ರಾಮಸ್ತು ಸಹಿತೋ ಭ್ರಾತ್ರಾ ಸೀತಯಾ ಚ ಪರಂತಪಃ ।
ಸುತೀಕ್ಷ್ಣಸ್ಯಾಶ್ರಮಪದಂ ಜಗಾಮ ಸಹ ತೈರ್ದ್ವಿಜೈಃ ॥ ೧

ಸ ಗತ್ವಾ ದೂರಮಧ್ವಾನಂ ನದೀಸ್ತೀರ್ತ್ವಾ ಬಹೂದಕಾಃ ।
ದದರ್ಶ ವಿಪುಲಂ ಶೈಲಂ ಮಹಾಮೇಘಮಿವೋನ್ನತಮ್ ॥ ೨

ತತಸ್ತದಿಕ್ಷ್ವಾಕುವರೌ ಸಂತತಂ ವಿವಿಧೈರ್ದ್ರುಮೈಃ ।
ಕಾನನಂ ತೌ ವಿವಿಶತುಃ ಸೀತಯಾ ಸಹ ರಾಘವೌ ॥ ೩

ಪ್ರವಿಷ್ಟಸ್ತು ವನಂ ಘೋರಂ ಬಹುಪುಷ್ಪಫಲದ್ರುಮಮ್ ।
ದದರ್ಶಾಶ್ರಮಮೇಕಾಂತೇ ಚೀರಮಾಲಾಪರಿಷ್ಕೃತಮ್ ॥ ೪

ತತ್ರ ತಾಪಸಮಾಸೀನಂ ಮಲಪಂಕಜಟಾಧರಮ್ ।
ರಾಮಃ ಸುತೀಕ್ಷ್ಣಂ ವಿಧಿವತ್ತಪೋಧನಮಭಾಷತ ॥ ೫

## ಸರ್ಗ ೭

### ಶ್ರೀರಾಮನು ಸುತೀಕ್ಷ್ಣಮುನಿಗಳನ್ನು ಕಾಣುವುದು. ಆ ರಾತ್ರಿ ಆಶ್ರಮದಲ್ಲಿ ವಾಸ

ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸುತೀಕ್ಷ್ಣರ ಆಶ್ರಮಕ್ಕೆ ಪ್ರಯಾಣ ಮಾಡುವಾಗ ಆ ಬ್ರಾಹ್ಮಣರೂ ಜೊತೆಯಲ್ಲಿ ಹೋದರು. ಅವನು ನೀರಿನಿಂದ ತುಂಬಿದ ಅನೇಕ ಹೊಳೆಗಳನ್ನು ದಾಟಿ ಬಹುದೂರ ಹೋದಮೇಲೆ ಮಹಾ ಮೇಘದಂತೆ ಉನ್ನತವಾಗಿದ್ದ ಒಂದು ಶೈಲವನ್ನು ಕಂಡನು (೧–೨). ಇಕ್ಷ್ವಾಕು ವಂಶಶ್ರೇಷ್ಠರಾದ ಆ ರಾಮಲಕ್ಷ್ಮಣರು ವಿವಿಧವೃಕ್ಷಗಳಿಂದ ದಟ್ಟವಾಗಿ ಆ ಶೈಲಕ್ಕೆ ಹೊಂದಿಕೊಂಡಿದ್ದ ಒಂದು ವನವನ್ನು ಸೀತೆಯೊಡನೆ ಪ್ರವೇಶಿಸಿದರು (೩). ಆ ಘೋರಾರಣ್ಯದಲ್ಲಿ ಒಂದು ಕಡೆ ಹೂಹಣ್ಣುಗಳು ವಿಪುಲವಾಗಿದ್ದ ಒಂದು ಆಶ್ರಮ ವನ್ನು ಶ್ರೀರಾಮನು ಕಂಡನು. ಅಲ್ಲಿ ನಾರುಬಟ್ಟೆಗಳನ್ನು ಸಾಲಾಗಿ ಆರಹಾಕಿದ್ದರು.

ರಾಮೋಽಹಮಸ್ಮಿ ಭಗವನ್ ಭವಂತಂ ದ್ರಷ್ಟುಮಾಗತಃ ।
ತನ್ಮಾಭಿವದ ಧರ್ಮಜ್ಞ ಮಹರ್ಷೇ ಸತ್ಯವಿಕ್ರಮ ॥ ೬

ಸ ನಿರೀಕ್ಷ್ಯ ತತೋ ವೀರಂ ರಾಮಂ ಧರ್ಮಭೃತಾಂ ವರಮ್ ।
ಸಮಾಶ್ಲಿಷ್ಯ ಚ ಬಾಹುಭ್ಯಾಮಿದಂ ವಚನಮಬ್ರವೀತ್ ॥ ೭

ಸ್ವಾಗತಂ ಖಲು ತೇ ವೀರ ರಾಮ ಧರ್ಮಭೃತಾಂ ವರ ।
ಆಶ್ರಮೋಽಯಂ ತ್ವಯಾ ಪ್ರಾಪ್ತಃ ಸನಾಥ ಇವ ಸಾಂಪ್ರತಮ್ ॥ ೮

ಪ್ರತೀಕ್ಷಮಾಣಸ್ತ್ವಾಮೇವ ನಾರೋಹೇಽಹಂ ಮಹಾಯಶಃ ।
ದೇವಲೋಕಮಿತೋ ವೀರ ದೇಹಂ ತ್ಯಕ್ತ್ವಾ ಮಹೀತಲೇ ॥ ೯

ಚಿತ್ರಕೂಟಮುಪಾದಾಯ ರಾಜ್ಯಭ್ರಷ್ಟೋಽಸಿ ಮೇ ಶ್ರುತಃ ।
ಇಹೋಪಯಾತಃ ಕಾಕುತ್ಸ್ಥ ದೇವರಾಜಃ ಶತಕ್ರತುಃ ॥ ೧೦

ಉಪಾಗಮ್ಯ ಚ ಮಾಂ ದೇವೋ ಮಹಾದೇವಃ ಸುರೇಶ್ವರಃ ।
ಸರ್ವಾನ್ ಲೋಕಾನ್ ಜಿತಾನಾಹ ಮಮ ಪುಣ್ಯೇನ ಕರ್ಮಣಾ ॥೧೧

---

ಆ ಆಶ್ರಮದಲ್ಲಿ ತಪಸ್ವಿಗಳಾದ ಸುತೀಕ್ಷ್ಣರನ್ನು ಶ್ರೀರಾಮನು ದರ್ಶನಮಾಡಿದನು. (ನಿರಂತರವಾಗಿ ತಪೋನಿರತರಾದ್ದರಿಂದ ದೇಹಶುದ್ಧಿಯಿಲ್ಲದೆ) ಆ ಮುನಿಗಳ ದೇಹವು ಕೊಳೆಯಾಗಿತ್ತು. ಜಡ್ಡುಗಟ್ಟಿದ ಜಟೆಯನ್ನು ಅವರು ಧರಿಸಿದ್ದರು (೪–೫). ಶ್ರೀರಾಮನು ವಿಧಿಪೂರ್ವಕವಾಗಿ ಅವರನ್ನು ಸಮೀಪಿಸಿ "ಭಗವನ್, ನಾನು ರಾಮನೆಂಬುವವನು. ನಿಮ್ಮ ದರ್ಶನಕ್ಕಾಗಿ ಬಂದಿದ್ದೇನೆ. ನೀವು ಧರ್ಮಜ್ಞರು. ಸತ್ಯನಿಷ್ಠರಾದ ಮಹರ್ಷಿಗಳೆ, ನನ್ನನ್ನು ಹರಸಿರಿ" ಎಂದು ನುಡಿದನು (೬). ಆಗ ಸುತೀಕ್ಷ್ಣರು ಶ್ರೀರಾಮನನ್ನು ನಿರೀಕ್ಷಿಸಿನೋಡಿ ಅವನನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡು "ರಾಮ, ಹೇ ಪರಾಕ್ರಮಿ, ಧಾರ್ಮಿಕಶ್ರೇಷ್ಠನಾದ ನಿನಗೆ ಸದಾ ಸ್ವಾಗತ. ಈ ಆಶ್ರಮಕ್ಕೆ ಬಂದೆಯಲ್ಲ! ಈಗ ಇದು ಸನಾಥವಾಯಿತು! (೭–೮). ನಿನ್ನನ್ನೇ ನಾನು ಪ್ರತೀಕ್ಷಿಸುತ್ತಿದ್ದೆ. ಆದ್ದರಿಂದ ಈ ದೇಹವನ್ನು ಇಲ್ಲಿಯೇ ತ್ಯಜಿಸಿ ದೇವಲೋಕವನ್ನೇರದೆ ತಡೆದುಕೊಂಡಿದ್ದೆ. ರಾಜ್ಯವನ್ನು ಪರಿತ್ಯಜಿಸಿ ಬಂದಿದ್ದೀಯೆ ಎಂಬುದನ್ನು ನೀನು ಚಿತ್ರಕೂಟಕ್ಕೆ ಬಂದಮೇಲೆ ನಾನು ಕೇಳಿದೆನು. ಕಾಕುತ್ಸ್ಥ, ದೇವೇಂದ್ರನು ಇಲ್ಲಿಗೆ ಬಂದಿದ್ದನು (೯–೧೦). ದೇವೋತ್ತಮನಾದ ಆ ಸುರೇಶ್ವರನು ನನ್ನ ಪುಣ್ಯಕರ್ಮದಿಂದ ಸಮಸ್ತಪುಣ್ಯಲೋಕ

ತೇಷು ದೇವರ್ಷಿಜುಷ್ಟೇಷು ಜಿತೇಷು ತಪಸಾ ಮಯಾ ।
ಮತ್ಪ್ರಸಾದಾತ್ ಸಭಾರ್ಯಸ್ತ್ವಂ ವಿಹರಸ್ವ ಸಲಕ್ಷ್ಮಣಃ ॥ ೧೨

ತಮುಗ್ರತಪಸಾ ಯುಕ್ತಂ ಮಹರ್ಷಿಂ ಸತ್ಯವಾದಿನಮ್ ।
ಪ್ರತ್ಯುವಾಚಾತ್ಮವಾನ್ ರಾಮೋ ಬ್ರಹ್ಮಾಣಮಿವ ವಾಸವಃ ॥ ೧೩

ಅಹಮೇವಾಹರಿಷ್ಯಾಮಿ ಸ್ವಯಂ ಲೋಕಾನ್ ಮಹಾಮುನೇ ।
ಆವಾಸಂ ತ್ವಹಮಿಚ್ಛಾಮಿ ಪ್ರದಿಷ್ಟಮಿಹ ಕಾನನೇ ॥ ೧೪

ಭವಾನ್ ಸರ್ವತ್ರ ಕುಶಲಃ ಸರ್ವಭೂತಹಿತೇ ರತಃ ।
ಆಖ್ಯಾತಃ ಶರಭಂಗೇಣ ಗೌತಮೇನ ಮಹಾತ್ಮನಾ ॥ ೧೫

ಏವಮುಕ್ತಸ್ತು ರಾಮೇಣ ಮಹರ್ಷಿರ್ಲೋಕವಿಶ್ರುತಃ ।
ಅಬ್ರವೀನ್ಮಧುರಂ ವಾಕ್ಯಂ ಹರ್ಷೇಣ ಮಹತಾಪ್ಲುತಃ ॥ ೧೬

ಅಯಮೇವಾಶ್ರಮೋ ರಾಮ ಗುಣವಾನ್ ರಮ್ಯತಾಮಿಹ ।
ಋಷಿಸಂಘಾನುಚರಿತಃ ಸದಾ ಮೂಲಫಲಾನ್ವಿತಃ ॥ ೧೭

---

ಗಳೂ ನನಗೆ ವಶವಾಗಿವೆಯೆಂದು ಹೇಳಿದ್ದಾನೆ. ದೇವರ್ಷಿಗಳಿರುವ ಆ ಲೋಕಗಳು ತಪೋಬಲದಿಂದ ನನಗೆ ಕೈಗೂಡಿವೆ. ಶ್ರೀರಾಮ, ನಾನು ಸಂತೋಷದಿಂದ ಅವುಗಳನ್ನು ನಿನಗೆ ಕೊಡುವೆನು. ನೀನು ಪತ್ನೀಸಮೇತನಾಗಿ ಲಕ್ಷ್ಮಣನೊಡನೆ ಅಲ್ಲಿ ವಿಹರಿಸು " ಎಂದು ಹೇಳಿದರು (೧೧–೧೨). ಶ್ರೀರಾಮನಾದರೋ ಜಿತೇಂದ್ರಿಯ (ಆಸೆಗೆ ಒಳಗಾಗದವನು). ಆತನು ಉಗ್ರತಪಸ್ವಿಗಳೂ ಸತ್ಯವಾದಿಗಳೂ ಆದ ಸುತೀಕ್ಷ್ಣಮಹರ್ಷಿಗಳನ್ನು ನೋಡಿ, ಇಂದ್ರನು ಬ್ರಹ್ಮದೇವನಿಗೆ ನಿವೇದಿಸುವಂತೆ " ಮಹಾತ್ಮರೆ, ಪುಣ್ಯಲೋಕಗಳನ್ನು ನಾನೇ ಸಂಪಾದಿಸಿಕೊಳ್ಳುತ್ತೇನೆ. ನನಗೆ ಬೇಕಾದದ್ದು ಈ ಅರಣ್ಯದಲ್ಲಿ ಒಂದು ವಾಸಸ್ಥಳ. ನೀವು ಸಕಲವಿಷಯಗಳಲ್ಲಿಯೂ ನಿಷ್ಣಾತರೆಂದೂ ಸರ್ವಪ್ರಾಣಿಗಳಲ್ಲಿ ದಯಾಪರರೆಂದೂ ಗೌತಮವಂಶೀಯರಾದ ಶರಭಂಗಮುನಿಗಳು ಹೇಳಿದ್ದಾರೆ " ಎಂದನು (೧೩–೧೫). ಆಗ ಕೀರ್ತಿಶಾಲಿಗಳಾದ ಸುತೀಕ್ಷ್ಣಮುನಿಗಳು ಸಂತುಷ್ಟರಾಗಿ ಮಧುರವಾಣಿಯಿಂದ " ಶ್ರೀರಾಮ, ಈ ಆಶ್ರಮವೇ ನಿನಗೆ ಅನುಕೂಲವಾಗಿದೆ. ಇಲ್ಲಿ ನೆಮ್ಮದಿಯಾಗಿ ಇರಬಹುದು.

ಇಮಮಾಶ್ರಮಮಾಗಮ್ಯ ಮೃಗಸಂಘಾ ಮಹಾಯಶಃ ।
ಅಟಿತ್ವಾ ಪ್ರತಿಗಚ್ಛಂತಿ ಲೋಭಯಿತ್ವಾಕುತೋಭಯಾಃ ॥ ೧೮

ನಾನ್ಯೋ ದೋಷೋ ಭವೇದತ್ರ ಮೃಗೇಭ್ಯೋಽನ್ಯತ್ರ ವಿದ್ಧಿ ವೈ ।
ತಚ್ಛ್ರುತ್ವಾ ವಚನಂ ತಸ್ಯ ಮಹರ್ಷೇರ್ಲಕ್ಷ್ಮಣಾಗ್ರಜಃ ॥ ೧೯

ಉವಾಚ ವಚನಂ ಧೀರೋ ವಿಕೃಷ್ಯ ಸಶರಂ ಧನುಃ ।
ತಾನಹಂ ಸುಮಹಾಭಾಗ ಮೃಗಸಂಘಾನ್ ಸಮಾಗತಾನ್ ॥ ೨೦

ಹನ್ಯಾಂ ನಿಶಿತಧಾರೇಣ ಶರೇಣಾಶನಿವರ್ಚಸಾ ।
ಭವಾಂಸ್ತತ್ರಾಭಿಷಜ್ಯೇತ ಕಿಂ ಸ್ಯಾತ್ ಕೃಚ್ಛ್ರತರಂ ತತಃ ॥ ೨೧

ಏತಸ್ಮಿನ್ನಾಶ್ರಮೇ ವಾಸಂ ಚಿರಂ ತು ನ ಸಮರ್ಥಯೇ ।
ತಮೇವಮುಕ್ತ್ವೋಪರಮಂ ರಾಮಃ ಸಂಧ್ಯಾಮುಪಾವಿಶತ್ ॥ ೨೨

ಅನ್ವಾಸ್ಯ ಪಶ್ಚಿಮಾಂ ಸಂಧ್ಯಾಂ ತತ್ರ ವಾಸಮಕಲ್ಪಯತ್ ।
ಸುತೀಕ್ಷ್ಣಸ್ಯಾಶ್ರಮೇ ರಮ್ಯೇ ಸೀತಯಾ ಲಕ್ಷ್ಮಣೇನ ಚ ॥ ೨೩

---

ಬೇಕಾದಷ್ಟು ಮಂದಿ ಋಷಿಗಳಿದ್ದಾರೆ. ಫಲಮೂಲಗಳು ಸಮೃದ್ಧಿಯಾಗಿವೆ (೧೬–೧೭). ಆದರೆ ಇಲ್ಲಿ ಮೃಗಗಳು ಹಿಂಡುಹಿಂಡಾಗಿ ಅಲೆಯುತ್ತಬರುತ್ತವೆ. ಅವು ನಿರ್ಭಯವಾಗಿ ಸಂಚರಿಸುತ್ತ (ತಮ್ಮ ರೂಪಚೇಷ್ಟಾದಿಗಳಿಂದ) ಮರುಳು ಗೊಳಿಸಿ ನಮ್ಮ ಸಮಾಧಿಗೆ ಅಡ್ಡಿಯನ್ನು ತಂದು ಹೊರಟುಹೋಗುತ್ತವೆ. ಈ ಮೃಗಗಳ ಹಾವಳಿಯೊಂದನ್ನು ಬಿಟ್ಟರೆ ಇಲ್ಲಿ ಇನ್ನಾವ ತೊಂದರೆಯೂ ಇಲ್ಲವೆಂದು ತಿಳಿ" ಎಂದರು (೧೮–೧೯). ಆಗ ಲಕ್ಷ್ಮಣಾಗ್ರಜನು "ಮಹರ್ಷಿಗಳೆ, ಸಂದರ್ಭ ಒದಗಿದರೆ ಈ ಧನುಸ್ಸಿಗೆ ಹೆದೆಯೇರಿಸಿ ಸಿಡಿಲಿನಂತಿರುವ ನನ್ನ ನಿಶಿತಾಸ್ತ್ರ ಗಳಿಂದ ಆ ಮೃಗಗಳನ್ನು ನಾನು ಕೊಲ್ಲಬಲ್ಲೆ. ಆದರೆ ಅದರಿಂದ ನಿಮ್ಮ ಮನಸ್ಸಿಗೆ ಬಹಳ ವ್ಯಥೆಯಾದೀತು. ಅದಕ್ಕಿಂತಲೂ ಹೆಚ್ಚಿನ ದುಷ್ಕೃತ್ಯವೇನಿದ್ದೀತು? (೨೦–೨೧). ಆದ್ದರಿಂದ ಈ ಆಶ್ರಮದಲ್ಲಿ ನಾನು ದೀರ್ಘಕಾಲ ಇರುವುದು ಸರಿಯೆನಿಸುವುದಿಲ್ಲ" ಎಂದು ಹೇಳಿ ಸುಮ್ಮನಾದನು. ಅನಂತರ ಸಾಯಂಕಾಲದ ಸಂಧ್ಯಾಕಾರ್ಯವನ್ನಾಚರಿಸಿ ಸುತೀಕ್ಷ್ಣರ ಸುಂದರವಾದ ಆ ತಪೋವನದಲ್ಲಿ ಸೀತಾ

ತತಃ ಶುಭಂ ತಾಪಸಭೋಜ್ಯಮನ್ನಂ
ಸ್ವಯಂ ಸುತೀಕ್ಷ್ಣಃ ಪುರುಷರ್ಷಭಾಭ್ಯಾಮ್ ।
ತಾಭ್ಯಾಂ ಸುಸತ್ಕೃತ್ಯ ದದೌ ಮಹಾತ್ಮಾ
ಸಂಧ್ಯಾನಿವೃತ್ತೌ ರಜನೀಮವೇಕ್ಷ್ಯ ॥ ೨೪

ಇತಿ ಶ್ರೀಮದ್ರಾಮಾಯಣೇ ಉತ್ತರಕಾಂಡೇ ಸಪ್ತಮಃ ಸರ್ಗಃ

---

## ಅಷ್ಟಮಃ ಸರ್ಗಃ

ಸುತೀಕ್ಷ್ಣಾಭ್ಯನುಜ್ಞಾ

ರಾಮಸ್ತು ಸಹಸೌಮಿತ್ರಿಃ ಸುತೀಕ್ಷ್ಣೇನಾಭಿಪೂಜಿತಃ ।
ಪರಿಣಾಮ್ಯ ನಿಶಾಂ ತತ್ರ ಪ್ರಭಾತೇ ಪ್ರತ್ಯಬುಧ್ಯತ ॥ ೧

---

ಲಕ್ಷ್ಮಣರೊಡನೆ ಉಳಿದುಕೊಂಡನು (೨೨–೨೩). ಸಂಜೆಯು ಕಳೆದು ರಾತ್ರಿಯಾಯಿತು. ಸುತೀಕ್ಷ್ಣಮುನಿಗಳು ಪುರುಷಶ್ರೇಷ್ಠರಾದ ರಾಮಲಕ್ಷ್ಮಣರಿಗೂ (ಸೀತೆಗೂ) ತಾಪಸಯೋಗ್ಯವಾದ ಆಹಾರವನ್ನು ತಾವೇ ತಂದುಕೊಟ್ಟು ಆದರದಿಂದ ಸತ್ಕರಿಸಿದರು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಏಳನೆಯ ಸರ್ಗ

---

## ಸರ್ಗ ೮

ಶ್ರೀರಾಮನು ಸುತೀಕ್ಷ್ಣಮುನಿಗಳ ಅನುಜ್ಞೆಯನ್ನು ಪಡೆದು
ಮುಂದಕ್ಕೆ ಹೊರಡುವುದು

ಶ್ರೀರಾಮನು ಸುತೀಕ್ಷ್ಣಮುನಿಗಳಿಂದ ಸತ್ಕೃತನಾಗಿ ಸೀತಾಲಕ್ಷ್ಮಣರೊಡನೆ ಆ ರಾತ್ರಿಯನ್ನು ತಪೋವನದಲ್ಲಿ ಕಳೆದನು. ಬೆಳಗಾಯಿತು ಅವನ್ನು

ಉತ್ಥಾಯ ತು ಯಥಾಕಾಲಂ ರಾಘವಃ ಸಹ ಸೀತಯಾ ।
ಉಪಾಸ್ಪೃಶತ್ ಸುಶೀತೇನ ಜಲೇನೋತ್ಪಲಗಂಧಿನಾ ॥ ೨

ಅಥ ತೇಽಗ್ನಿಂ ಸುರಾಂಶ್ಚೈವ ವೈದೇಹೀ ರಾಮಲಕ್ಷ್ಮಣೌ ।
ಕಲ್ಯಂ ವಿಧಿವದಭ್ಯರ್ಚ್ಯ ತಪಸ್ವಿಶರಣೇ ವನೇ ॥ ೩

ಉದಯಂತಂ ದಿನಕರಂ ದೃಷ್ಟ್ವಾ ವಿಗತಕಲ್ಮಷಾಃ ।
ಸುತೀಕ್ಷ್ಣಮಭಿಗಮ್ಯೇದಂ ಶ್ಲಕ್ಷ್ಣಂ ವಚನಮಬ್ರುವನ್ ॥ ೪

ಸುಖೋಷಿತಾಃ ಸ್ಮ ಭಗವಂಸ್ತ್ವಯಾ ಪೂಜ್ಯೇನ ಪೂಜಿತಾಃ ।
ಆಪೃಚ್ಛಾಮಃ ಪ್ರಯಾಸ್ಯಾಮೋ ಮುನಯಸ್ತ್ವರಯಂತಿ ನಃ ॥ ೫

ತ್ವರಾಮಹೇ ವಯಂ ದ್ರಷ್ಟುಂ ಕೃತ್ಸ್ನಮಾಶ್ರಮಮಂಡಲಮ್ ।
ಋಷೀಣಾಂ ಪುಣ್ಯಶೀಲಾನಾಂ ದಂಡಕಾರಣ್ಯವಾಸಿನಾಮ್ ॥ ೬

ಅಭ್ಯನುಜ್ಞಾತುಮಿಚ್ಛಾಮಃ ಸಹೈಭಿರ್ಮುನಿಪುಂಗವೈಃ ।
ಧರ್ಮನಿತ್ಯೈಸ್ತಪೋದಾಂತೈರ್ವಿಶಿಖೈರಿವ ಪಾವಕೈಃ ॥ ೭

---

ಸಕಾಲದಲ್ಲೆದ್ದು ನೈದಿಲೆಗಳ ಕಂಪನ್ನು ಬೀರುತ್ತಿದ್ದ ತಣ್ಣೀರಿನಲ್ಲಿ ಸೀತಾದೇವಿಯೊಡನೆ ಸ್ನಾನಮಾಡಿದನು (೧–೨). ಅನಂತರ ಶುಚೀಭೂತರಾದ ಸೀತಾರಾಮಲಕ್ಷ್ಮಣರು ಆ ತಪೋವನದಲ್ಲಿ ವಿಧಿವತ್ತಾಗಿ ಪ್ರಾತಃಕಾಲದ ಅಗ್ನಿಕಾರ್ಯವನ್ನೂ ದೇವತಾರ್ಚನೆಯನ್ನೂ ಮಾಡಿದರು. ಅಷ್ಟರಲ್ಲಿ ಸೂರ್ಯನು ಉದಯೋನ್ಮುಖನಾದುದನ್ನು ಕಂಡು, ಅವರೆಲ್ಲರೂ ಸುತೀಕ್ಷ್ಣರ ಬಳಿಗೆ ಹೋಗಿ ವಂದಿಸಿ ವಿನಯದಿಂದ ಹೀಗೆಂದರು (೩–೪): "ಮಹಾತ್ಮರೆ, ನಾವು ರಾತ್ರಿಯನ್ನು ಸುಖವಾಗಿ ಕಳೆದೆವು. ಪೂಜ್ಯರಾದ ನೀವು ನಮ್ಮನ್ನು ಆದರದಿಂದ ನೋಡಿಕೊಂಡಿರಿ. ನಾವು ತಮ್ಮ ಅನುಜ್ಞೆಯನ್ನು ಬೇಡುತ್ತೇವೆ; ಮುಂದಕ್ಕೆ ಹೋಗುವೆವು. ನಮ್ಮೊಡನೆ ಬಂದ ಮುನಿಗಳು ತ್ವರೆಪಡಿಸುತ್ತಿದ್ದಾರೆ. ದಂಡಕಾರಣ್ಯದಲ್ಲಿರುವ ಪುಣ್ಯಾತ್ಮರಾದ ಋಷಿಗಳೆಲ್ಲರ ಆಶ್ರಮಗಳನ್ನೂ ನೋಡಬೇಕೆಂದು ನಮಗೆ ಕುತೂಹಲವುಂಟಾಗಿದೆ (೫–೬). ಧರ್ಮನಿಷ್ಠರೂ ಜಿತೇಂದ್ರಿಯರೂ ಜ್ವಾಲೆಯಿಲ್ಲದ ಅಗ್ನಿಯಂತೆ (ಬೂದಿ ಮುಚ್ಚಿದ ಕೆಂಡದಂತೆ) ಮಹಿಮಾನ್ವಿತರೂ ಆದ ಈ ಮುನಿಗಳೂ ನಾವೂ ತಮ್ಮ

ಅವಿಷಹ್ಯಾತಪೋ ಯಾವತ್ ಸೂರ್ಯೋ ನಾತಿವಿರಾಜತೇ ।
ಅಮಾರ್ಗೇಣಾಗತಾಂ ಲಕ್ಷ್ಮೀಂ ಪ್ರಾಪ್ಯೇವಾನ್ವಯವರ್ಜಿತಃ ॥ ೮

ತಾವದಿಚ್ಛಾಮಹೇ ಗಂತುಮಿತ್ಯುಕ್ತ್ವಾ ಚರಣೌ ಮುನೇಃ ।
ವವಂದೇ ಸಹಸೌಮಿತ್ರಿಃ ಸೀತಯಾ ಸಹ ರಾಘವಃ ॥ ೯

ತೌ ಸಂಸ್ಪೃಶಂತೌ ಚರಣಾವುತ್ಥಾಪ್ಯ ಮುನಿಪುಂಗವಃ ।
ಗಾಢಮಾಲಿಂಗ್ಯ ಸಸ್ನೇಹಮಿದಂ ವಚನಮಬ್ರವೀತ್ ॥ ೧೦

ಅರಿಷ್ಟಂ ಗಚ್ಛ ಪಂಥಾನಂ ರಾಮ ಸೌಮಿತ್ರಿಣಾ ಸಹ ।
ಸೀತಯಾ ಚಾನಯಾ ಸಾರ್ಧಂ ಛಾಯಯೇವಾನುವೃತ್ತಯಾ ॥ ೧೧

ಪಶ್ಯಾಶ್ರಮಪದಂ ರಮ್ಯಂ ದಂಡಕಾರಣ್ಯವಾಸಿನಾಮ್ ।
ಏಷಾಂ ತಪಸ್ವಿನಾಂ ವೀರ ತಪಸಾ ಭಾವಿತಾತ್ಮನಾಮ್ ॥ ೧೨

ಸುಪ್ರಾಜ್ಯಫಲಮೂಲಾನಿ ಪುಷ್ಪಿತಾನಿ ವನಾನಿ ಚ ।
ಪ್ರಶಾಂತಮೃಗಯೂಥಾನಿ ಶಾಂತಪಕ್ಷಿಗಣಾನಿ ಚ ॥ ೧೩

---

ಅನುಮತಿಗಾಗಿ ಕಾದಿದ್ದೇವೆ (೭). ತಡಮಾಡಿದರೆ ಸೂರ್ಯನು ಮೇಲಕ್ಕೇರಿ ತಡೆಯಲಾರದಷ್ಟು ತಾಪವನ್ನು ಕೊಡುತ್ತ ಉರಿಯುವನು. ದುರ್ಮಾರ್ಗದಿಂದ ಪಡೆದ ಸಂಪತ್ತಿನಿಂದ ಬೀಗುವ ಕುಲಹೀನನಂತೆ ಜನರನ್ನು ಪೀಡಿಸುವನು. ಅಷ್ಟರೊಳಗೆ ನಾವು ಪ್ರಯಾಣಮಾಡಬೇಕೆಂದಿದ್ದೇವೆ" ಎಂದು ಹೇಳಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸುತೀಕ್ಷ್ಣರ ಪಾದಗಳಿಗೆ ನಮಸ್ಕರಿಸಿದನು (೮–೯). ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತಿದ್ದ ರಾಮಲಕ್ಷ್ಮಣರನ್ನು ಆ ಮುನಿಶ್ರೇಷ್ಠರು ಎತ್ತಿ ಗಾಢವಾಗಿ ಆಲಂಗಿಸಿಕೊಂಡು ವಾತ್ಸಲ್ಯದಿಂದ ಹೀಗೆಂದರು: "ರಾಮ, ನಿನ್ನ ದಾರಿ ಸುಗಮವಾಗಲಿ! ಈ ಸೌಮಿತ್ರಿ, ನೆರಳಿನಂತೆ ನಿನ್ನನ್ನು ಅನುವರ್ತಿಸುವ ಸೀತೆ—ಇವರೊಡನೆ ಸುಖವಾಗಿ ಹೋಗಿಬಾ (೧೦–೧೧). ಈ ದಂಡಕಾರಣ್ಯದಲ್ಲಿ ತಪಸ್ಸಿನಿಂದ ಚಿತ್ತದ ಏಕಾಗ್ರತೆಯನ್ನು ಸಂಪಾದಿಸಿರುವ ತಪಸ್ವಿಗಳಿದ್ದಾರೆ. ರಮಣೀಯವಾಗಿರುವ ಅವರ ಆಶ್ರಮಗಳನ್ನು ನೋಡಿಬಾ. ಆ ವನಗಳಲ್ಲಿ ಫಲಮೂಲಗಳೂ ಪುಷ್ಪಗಳೂ ಸಮೃದ್ಧವಾಗಿ ಬೆಳೆದಿರುತ್ತವೆ.

ಫುಲ್ಲಪಂಕಜಷಂಡಾನಿ ಪ್ರಸನ್ನಸಲಿಲಾನಿ ಚ ।
ಕಾರಂಡವವಿಕೀರ್ಣಾನಿ ತಟಾಕಾನಿ ಸರಾಂಸಿ ಚ ॥ ೧೪

ದ್ರಕ್ಷ್ಯಸೇ ದೃಷ್ಟಿರಮ್ಯಾಣಿ ಗಿರಿಪ್ರಸ್ರವಣಾನಿ ಚ ।
ರಮಣೀಯಾನ್ಯರಣ್ಯಾನಿ ಮಯೂರಾಭಿರುತಾನಿ ಚ ॥ ೧೫

ಗಮ್ಯತಾಂ ವತ್ಸ ಸೌಮಿತ್ರೇ ಭವಾನಪಿ ಚ ಗಚ್ಛತು ।
ಆಗಂತವ್ಯಂ ತ್ವಯಾ ತಾತ ಪುನರೇವಾಶ್ರಮಂ ಮಮ ॥ ೧೬

ಏವಮುಕ್ತಸ್ತಥೇತ್ಯುಕ್ತ್ವಾ ಕಾಕುತ್ಸ್ಥಃ ಸಹಲಕ್ಷ್ಮಣಃ ।
ಪ್ರದಕ್ಷಿಣಂ ಮುನಿಂ ಕೃತ್ವಾ ಪ್ರಸ್ಥಾತುಮುಪಚಕ್ರಮೇ ॥ ೧೭

ತತಃ ಶುಭತರೇ ತೂಣೀ ಧನುಷೀ ಚಾಯತೇಕ್ಷಣಾ ।
ದದೌ ಸೀತಾ ತಯೋರ್ಭ್ರಾತ್ರೋಃ ಖಡ್ಗೌ ಚ ವಿಮಲೌ ತತಃ ॥ ೧೮

ಆಬಧ್ಯ ಚ ಶುಭೇ ತೂಣೀ ಚಾಪೌ ಚಾದಾಯ ಸಸ್ವನೌ ।
ನಿಷ್ಕ್ರಾಂತಾವಾಶ್ರಮಾದ್ಗಂತುಮುಭೌ ತೌ ರಾಮಲಕ್ಷ್ಮಣೌ ॥ ೧೯

---

ಶಾಂತಸ್ವಭಾವದ ಮೃಗಗಳು ಹಿಂಡುಹಿಂಡಾಗಿವೆ. ಪಕ್ಷಿಗಳೂ ಸಹ ಜಗಳವಾಡದೆ ಶಾಂತವಾಗಿದೆ (೧೨–೧೩). ಅಲ್ಲಲ್ಲಿ ಚಿಕ್ಕ ಕೆರೆಗಳೂ ಸರೋವರಗಳೂ ಇವೆ. ಅವುಗಳಲ್ಲಿ ತಾವರೆಗಳು ಅರಳಿರುತ್ತವೆ. ನೀರು ತಿಳಿಯಾಗಿರುತ್ತದೆ. ನೀರುಕೋಳಿ ಗಳು ವಿಹರಿಸುತ್ತವೆ. ಕಣ್ಮನಗಳನ್ನು ಸೂರೆಗೈಯುವ ಗಿರಿನದಿಗಳನ್ನೂ ನವಿಲುಗಳ ಕೇಕಾರವದಿಂದ ಮೋಹಕವಾದ ಕಾನನಗಳನ್ನೂ ನೀನು ನೋಡಬಹುದು (೧೪–೧೫). ವತ್ಸ–ಲಕ್ಷ್ಮಣ, ನೀನೂ ಹೋಗಿಬಾ. ವತ್ಸ–ರಾಮ, ನೀವೆಲ್ಲರೂ ಮತ್ತೊಮ್ಮೆ ನನ್ನ ಆಶ್ರಮಕ್ಕೆ ತಪ್ಪದೆ ಬರಬೇಕು" ಎಂದರು. ಶ್ರೀರಾಮನು ಹಾಗೆಯೇ ಆಗಲೆಂದು ನುಡಿದು ಲಕ್ಷ್ಮಣಸಹಿತನಾಗಿ ಸುತೀಕ್ಷ್ಣರಿಗೆ ಪ್ರದಕ್ಷಿಣ ವನ್ನು ಮಾಡಿ ಹೊರಡಲು ಸಿದ್ಧನಾದನು (೧೬–೧೭). ಆಗ ವಿಶಾಲಾಕ್ಷಿಯಾದ ವೈದೇಹಿಯು ಬತ್ತಳಿಕೆ, ಧನುಸ್ಸು ಮತ್ತು ಖಡ್ಗಗಳನ್ನು ಆ ಅಣ್ಣತಮ್ಮಂದಿರಿಗೆ ತಂದುಕೊಟ್ಟು ಪ್ರಯಾಣಕ್ಕೆ ಅನುಕೂಲಪಡಿಸಿದಳು (೧೮). ಆಗ ಶ್ರೀರಾಮ ಲಕ್ಷ್ಮಣರು ಬತ್ತಳಿಕೆಗಳನ್ನು ಹೆಗಲಿಗೆ ಬಿಗಿದುಕಟ್ಟಿ ಧನುಸ್ಸುಗಳನ್ನು ಜೇಗೈಯುತ್ತ

ಶ್ರೀಮಂತೌ ರೂಪಸಂಪನ್ನೌ ದೀಪ್ಯಮಾನೌ ಸ್ವತೇಜಸಾ ।
ಪ್ರಸ್ಥಿತೌ ಧೃತಚಾಪೌ ತೌ ಸೀತಯಾ ಸಹ ರಾಘವೌ ॥ ೨೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಮಃ ಸರ್ಗಃ

---

## ನವಮಃ ಸರ್ಗಃ

### ಸೀತಾಧರ್ಮಾವೇದನಮ್

ಸುತೀಕ್ಷ್ಣೇನಾಭ್ಯನುಜ್ಞಾತಂ ಪ್ರಸ್ಥಿತಂ ರಘುನಂದನಮ್ ।
ಹೃದ್ಯಯಾ ಸ್ನಿಗ್ಧಯಾ ವಾಚಾ ಭರ್ತಾರಮಿದಮಬ್ರವೀತ್ ॥ ೧

---

ಆಶ್ರಮದಿಂದ ಹೊರಟರು. ರೂಪವಂತರೂ ತೇಜಸ್ವಿಗಳೂ ಆದ ಆ ರಘುಕುಲ ಶ್ರೇಷ್ಠರು ಧನುರ್ಧಾರಿಗಳಾಗಿ ಸೀತಾದೇವಿಯೊಡನೆ ಮುಂದಕ್ಕೆ ಪ್ರಯಾಣ ಮಾಡಿದರು (೧೯–೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಂಟನೆಯ ಸರ್ಗ

---

## ಸರ್ಗ ೯

ವೈರಬುದ್ಧಿಯಿಲ್ಲದ ರಾಕ್ಷಸರನ್ನು ಕೊಲ್ಲುವುದು ಧರ್ಮವಲ್ಲವೆಂದೂ ಆಯುಧಪಾಣಿಗಳಾಗಿ ದಂಡಕಾರಣ್ಯಕ್ಕೆ ಹೋದರೆ ಅಂಥ ಸಂದರ್ಭ ಒದಗುವುದೆಂದೂ ಸೀತಾದೇವಿಯು ಶ್ರೀರಾಮನಿಗೆ ನಿವೇದಿಸುವುದು

ಹೀಗೆ ಸುತೀಕ್ಷ್ಣಮುನಿಗಳ ಅನುಜ್ಞೆಯನ್ನು ಪಡೆದು ರಘುನಂದನನು ಪ್ರಯಾಣಮಾಡಿದನು. ಆಗ (ದಾರಿಯಲ್ಲಿ) ಸೀತಾದೇವಿಯು ತನ್ನ ಪತಿಯನ್ನು

ಅಯಂ ಧರ್ಮಃ ಸುಸೂಕ್ಷ್ಮೇಣ ವಿಧಿನಾ ಪ್ರಾಪ್ಯತೇ ಮಹಾನ್ ।
ನಿವೃತ್ತೇನ ತು ಶಕ್ಯೋಽಯಂ ವ್ಯಸನಾತ್ ಕಾಮಜಾದಿಹ ॥ ೨

ತ್ರೀಣ್ಯೇವ ವ್ಯಸನಾನ್ಯತ್ರ ಕಾಮಜಾನಿ ಭವಂತ್ಯುತ ।
ಮಿಥ್ಯಾವಾಕ್ಯಂ ಗುರುತರಃ ತಸ್ಮಾದ್ಗುರುತಮೇ ಉಭೇ ॥ ೩

ಪರದಾರಾಭಿಗಮನಂ ವಿನಾ ವೈರಂ ಚ ರೌದ್ರತಾ ।
ಮಿಥ್ಯಾವಾಕ್ಯಂ ನ ತೇ ಭೂತಂ ನ ಭವಿಷ್ಯತಿ ರಾಘವ ॥ ೪

ಕುತೋಽಭಿಲಷಣಂ ಸ್ತ್ರೀಣಾಂ ಪರೇಷಾಂ ಧರ್ಮನಾಶನಮ್ ।
ತವ ನಾಸ್ತಿ ಮನುಷ್ಯೇಂದ್ರ ನ ಚಾಭೂತ್ತೇ ಕದಾಚನ ॥ ೫

ಮನಸ್ಯಪಿ ತಥಾ ರಾಮ ನ ಚೈತದ್ವಿದ್ಯತೇ ಕ್ವಚಿತ್ ।
ಸ್ವದಾರನಿರತಸ್ತ್ವಂ ಚ ನಿತ್ಯಮೇವ ನೃಪಾತ್ಮಜ ॥ ೬

ಧರ್ಮಿಷ್ಠಃ ಸತ್ಯಸಂಧಶ್ಚ ಪಿತುರ್ನಿರ್ದೇಶಕಾರಕಃ ।
ತ್ವಯಿ ಸತ್ಯಂ ಚ ಧರ್ಮಶ್ಚ ತ್ವಯಿ ಸರ್ವಂ ಪ್ರತಿಷ್ಠಿತಮ್ ॥ ೭

---

ಕುರಿತು ಮನಸ್ಸಿಗೆ ಹಿಡಿಯುವಂತೆ ಪ್ರೇಮದಿಂದ ಮಧುರವಾಗಿ ನುಡಿದಳು (೧) : "ಆರ್ಯಪುತ್ರ, ನೀನು ಮಹತ್ತರವಾದ ಧರ್ಮಮಾರ್ಗವನ್ನು ಹಿಡಿದಿದ್ದೀಯೆ. ಅತ್ಯಂತ ಸೂಕ್ಷ್ಮವಾಗಿ ವಿಚಾರಮಾಡಿದರೆ ಮಾತ್ರ ಈ ಧರ್ಮಮಾರ್ಗದಲ್ಲಿ ನಡೆಯಲು ಸಾಧ್ಯ. ಕಾಮಜನ್ಯವಾದ ವ್ಯಸನವನ್ನು ತೊರೆದವನು ಧರ್ಮವನ್ನು ಆಚರಿಸಬಲ್ಲ (೨). ಕಾಮಜನ್ಯವಾದ ವ್ಯಸನಗಳು ಮೂರು : ಸುಳ್ಳುಹೇಳುವುದು, ಪರಸ್ತ್ರೀಗಮನ ಮತ್ತು ವೈರಕಾರಣವಿಲ್ಲದೆ ಮಾಡುವ ಪರಹಿಂಸೆ. ಇವುಗಳಲ್ಲಿ ಸುಳ್ಳಿಗಿಂತ ಉಳಿದ ಎರಡು ವ್ಯಸನಗಳು ಬಹಳ ದೊಡ್ಡವು. ಶ್ರೀರಾಮ, ರಘುಕುಲೋತ್ಪನ್ನನಾದ ನೀನು ಹಿಂದೆ ಎಂದೂ ಸುಳ್ಳಾಡಿದವನಲ್ಲ. ಮುಂದೆ ಆಡತಕ್ಕವನಲ್ಲ(೩–೪). ಧರ್ಮಹಾನಿಕರವಾದ ಪರಸ್ತ್ರೀವ್ಯಸನವು ನಿನ್ನ ಬಳಿಯಾದರೂ ಸುಳಿದೀತೆ? ಪುರುಷೋತ್ತಮನಾದ ನಿನ್ನಲ್ಲಿ ಅದು ಎಂದಿಗೂ ತಲೆದೋರದು. ಹಿಂದೆ ಇರಲೂ ಇಲ್ಲ. ನೀನು ಮನಸ್ಸಿನಲ್ಲಿಯೂ ಅದನ್ನು ಸಂಕಲ್ಪಿಸಿದವನಲ್ಲ. ರಾಜಪುತ್ರ, ನೀನು ಯಾವಾಗಲೂ ನಿನ್ನ ಪತ್ನಿಯೊಬ್ಬಳನ್ನೇ ಪ್ರೇಮಿಸುತ್ತ ಬಂದಿದ್ದೀಯೆ (೫–೬). ಧರ್ಮಮಾರ್ಗವನ್ನು ಬಿಡದೆ ಸತ್ಯಸಂಧನಾಗಿದ್ದೀಯೆ.

ತಚ್ಚ ಸರ್ವಂ ಮಹಾಬಾಹೋ ಶಕ್ಯಂ ಧರ್ತುಂ ಜಿತೇಂದ್ರಿಯೈಃ ।
ತವ ವಶ್ಯೇಂದ್ರಿಯತ್ವಂ ಚ ಜಾನಾಮಿ ಶುಭದರ್ಶನ ॥ ೮

ತೃತೀಯಂ ಯದಿದಂ ರೌದ್ರಂ ಪರಪ್ರಾಣಾಭಿಹಿಂಸನಮ್ ।
ನಿರ್ವೈರಂ ಕ್ರಿಯತೇ ಮೋಹಾತ್ತಚ್ಚ ತೇ ಸಮುಪಸ್ಥಿತಮ್ ॥ ೯

ಪ್ರತಿಜ್ಞಾತಸ್ತ್ವಯಾ ವೀರ ದಂಡಕಾರಣ್ಯವಾಸಿನಾಮ್ ।
ಋಷೀಣಾಂ ರಕ್ಷಣಾರ್ಥಾಯ ವಧಃ ಸಂಯತಿ ರಕ್ಷಸಾಮ್ ॥ ೧೦

ಏತನ್ನಿಮಿತ್ತಂ ಚ ವನಂ ದಂಡಕಾ ಇತಿ ವಿಶ್ರುತಮ್ ।
ಪ್ರಸ್ಥಿತಸ್ತ್ವಂ ಸಹ ಭ್ರಾತ್ರಾ ಧೃತಬಾಣಶರಾಸನಃ ॥ ೧೧

ತತಸ್ತ್ವಾಂ ಪ್ರಸ್ಥಿತಂ ದೃಷ್ಟ್ವಾ ಮಮ ಚಿಂತಾಕುಲಂ ಮನಃ ।
ತ್ವದ್ವೃತ್ತಂ ಚಿಂತಯಂತ್ಯಾ ವೈ ಭವೇನ್ನಿಃಶ್ರೇಯಸಂ ಮಹತ್ ॥ ೧೨

ನ ಹಿ ಮೇ ರೋಚತೇ ವೀರ ಗಮನಂ ದಂಡಕಾನ್ ಪ್ರತಿ ।
ಕಾರಣಂ ತತ್ರ ವಕ್ಷ್ಯಾಮಿ ವದಂತ್ಯಾಃ ಶ್ರೂಯತಾಂ ಮಮ ॥ ೧೩

---

ಆದ್ದರಿಂದಲೇ ತಂದೆಯ ಆಜ್ಞೆಯನ್ನು ಪಾಲಿಸುತ್ತಿದ್ದೀಯೆ. ಸತ್ಯ, ಧರ್ಮ ಮುಂತಾದ ಸಕಲಸದ್ಗುಣಗಳೂ ನಿನ್ನಲ್ಲಿ ನೆಲೆಸಿವೆ. ಜಿತೇಂದ್ರಿಯರಿಗೆ ಮಾತ್ರ ಇಂಥ ಗುಣಗಳನ್ನು ಪಾಲಿಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ನೀನು ಜಿತೇಂದ್ರಿಯನೆಂಬುದು ನನಗೆ ಗೊತ್ತಿದೆ (೭–೮). ಆದರೆ...., ನಿಷ್ಕಾರಣವಾಗಿ ಪರಹಿಂಸೆಮಾಡುವುದೆಂಬ ಇನ್ನೊಂದು ವ್ಯಸನ ಉಂಟಷ್ಟೆ? ಅದು ಭಯಂಕರ ವಾದದ್ದು. ಅದು ಅವಿಚಾರದಿಂದ ಸಂಭವಿಸುತ್ತದೆ. ಈ ಮೂರನೆಯ ವ್ಯಸನ ಈಗ ನಿನಗೆ ಒದಗಿದೆಯೆಂದು ನನಗನ್ನಿಸುತ್ತದೆ. ವೀರಾಗ್ರಣಿ, ದಂಡಕಾರಣ್ಯದಲ್ಲಿ ವಾಸಿಸುವ ಋಷಿಗಳನ್ನು ರಕ್ಷಿಸುವುದಕ್ಕಾಗಿ ರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸುತ್ತೇನೆಂದು ಪ್ರತಿಜ್ಞೆಮಾಡಿದ್ದೀಯೆ (೯–೧೦). ಅದಕ್ಕೋಸ್ಕರವೇ ಧನುರ್ಬಾಣಗಳನ್ನು ಧರಿಸಿ ತಮ್ಮನೊಡನೆ ಈ ದಂಡಕಾರಣ್ಯವನ್ನು ಪ್ರವೇಶಿಸಿದ್ದೀಯೆ. ಹೀಗೆ ನೀನು ಬಂದುದನ್ನು ಕಂಡು ನನ್ನ ಮನಸ್ಸಿನಲ್ಲಿ ಚಿಂತೆಯು ಆವರಿಸಿದೆ. ನಿನಗೆ ಉತ್ತಮವಾದ ಶ್ರೇಯಸ್ಸಾಗಲೆಂದು ಹಾರೈಸುತ್ತಿರುವ ನನಗೆ ವ್ಯಥೆಯಾಗಿದೆ (೧೧–೧೨). ಶ್ರೀರಾಮ, ನೀನು ಈ ದಂಡಕಾರಣ್ಯದಲ್ಲಿ ಇನ್ನೂ ಮುಂದಕ್ಕೆ

ತ್ವಂ ಹಿ ಬಾಣಧನುಷ್ಪಾಣಿರ್ಭ್ರಾತ್ರಾ ಸಹ ವನಂ ಗತಃ ।
ದೃಷ್ಟ್ವಾ ವನಚರಾನ್ ಸರ್ವಾನ್ ಕಚ್ಚಿತ್ ಕುರ್ಯಾಃ ಶರವ್ಯಯಮ್॥

ಕ್ಷತ್ರಿಯಾಣಾಂ ಚ ಹಿ ಧನುರ್ಹುತಾಶಸ್ಯೇಂಧನಾನಿ ಚ ।
ಸಮೀಪತಃ ಸ್ಥಿತಂ ತೇಜೋ ಬಲಮುಚ್ಛ್ರಯತೇ ಭೃಶಮ್ ॥ ೧೫

ಪುರಾ ಕಿಲ ಮಹಾಬಾಹೋ ತಪಸ್ವೀ ಸತ್ಯವಾಕ್ ಶುಚಿಃ ।
ಕಸ್ಮಿಂಶ್ಚಿದಭವತ್ ಪುಣ್ಯೇ ವನೇ ರತಮೃಗದ್ವಿಜೇ ॥ ೧೬

ತಸ್ಯೈವ ತಪಸೋ ವಿಘ್ನಂ ಕರ್ತುಮಿಂದ್ರಃ ಶಚೀಪತಿಃ ।
ಖಡ್ಗಪಾಣಿರಥಾಗಚ್ಛದಾಶ್ರಮಂ ಭಟರೂಪಧೃತ್ ॥ ೧೭

ತಸ್ಮಿಂಸ್ತದಾಶ್ರಮಪದೇ ನಿಶಿತಃ ಖಡ್ಗ ಉತ್ತಮಃ ।
ಸ ನ್ಯಾಸವಿಧಿನಾ ದತ್ತಃ ಪುಣ್ಯೇ ತಪಸಿ ತಿಷ್ಠತಃ ॥ ೧೮

ಸ ತಚ್ಛಸ್ತ್ರಮನುಪ್ರಾಪ್ಯ ನ್ಯಾಸರಕ್ಷಣತತ್ಪರಃ ।
ವನೇ ತಂ ವಿಚರತ್ಯೇವ ರಕ್ಷನ್ ಪ್ರತ್ಯಯಮಾತ್ಮನಃ ॥ ೧೯

---

ಹೋಗುವುದು ನನಗೆ ಇಷ್ಟವಿಲ್ಲ. ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು: ನೀನಾದರೋ ತಮ್ಮನೊಡನೆ ಧನುರ್ಬಾಣಗಳನ್ನು ಹಿಡಿದು ಕಾಡಿಗೆ ಬಂದಿದ್ದೀಯೆ. ಇಲ್ಲಿ ಸಂಚರಿಸುವ ರಾಕ್ಷಸರನ್ನು ಕಂಡಾಗ ನೀನು ಬಾಣವನ್ನು ಪ್ರಯೋಗಿಸುವ ಸಂದರ್ಭವು ಬರಬಹುದು (೧೩–೧೪). ಕ್ಷತ್ರಿಯನ ಬಳಿ ಧನುಸ್ಸಿರುವುದು, ಬೆಂಕಿಯ ಹತ್ತಿರ ಸೌದೆ ಇರುವುದು—ಎರಡೂ ಒಂದೇ. ಅವು ಸಮೀಪದಲ್ಲಿರುವ ಕ್ಷತ್ರಿಯನ ಮತ್ತು ಬೆಂಕಿಯ ತೇಜೋಬಲಗಳನ್ನು ಹುರಿದುಂಬಿಸುತ್ತವೆ. ಶ್ರೀರಾಮ, ಹಿಂದೆ ಒಂದು ಪುಣ್ಯಾರಣ್ಯದಲ್ಲಿ ಋಷಿಯೊಬ್ಬನಿದ್ದನಂತೆ. ಅಲ್ಲಿ ಮೃಗ ಪಕ್ಷಿಗಳು ವಿಹರಿಸುತ್ತಿದ್ದವು ಆ ತಪಸ್ವಿಯು ಸತ್ಯಸಂಧನಾಗಿ ಶುಚಿಯಾಗಿದ್ದನು (೧೫–೧೬). ಶಚೀಪತಿಯಾದ ಇಂದ್ರನು ಆ ಋಷಿಯ ತಪಸ್ಸಿಗೆ ವಿಘ್ನವನ್ನು ತರಬೇಕೆಂದು ಉದ್ದೇಶಿಸಿ, ಒಬ್ಬ ಭಟನ ವೇಷದಲ್ಲಿ ಖಡ್ಗಪಾಣಿಯಾಗಿ ಆಶ್ರಮಕ್ಕೆ ಬಂದನು. ಅಲ್ಲಿ ತಪಸ್ಸುಮಾಡುತ್ತಿದ್ದ ಆ ಋಷಿಗೆ ತನ್ನ ಹರಿತವಾದ ಖಡ್ಗವನ್ನು ಕೆಲವು ಕಾಲ ಇಟ್ಟುಕೊಂಡಿರುವಂತೆ ನ್ಯಾಸವಾಗಿ ಒಪ್ಪಿಸಿದನು (೧೭–೧೮). ತನ್ನಲ್ಲಿ ಆ ಭಟನು ಇಟ್ಟ ವಿಶ್ವಾಸವನ್ನು ಕಾಪಾಡಿಕೊಳ್ಳಬೇಕೆಂದು, ಆ ತಪಸ್ವಿಯು

ಯತ್ರ ಗಚ್ಛತ್ಯುಪಾದಾತುಂ ಮೂಲಾನಿ ಚ ಫಲಾನಿ ಚ ।
ನ ವಿನಾ ಯಾತಿ ತಂ ಖಡ್ಗಂ ನ್ಯಾಸರಕ್ಷಣತತ್ಪರಃ ॥ ೨೦

ನಿತ್ಯಂ ಶಸ್ತ್ರಂ ಪರಿವಹನ್ ಕ್ರಮೇಣ ಸ ತಪೋಧನಃ ।
ಚಕಾರ ರೌದ್ರೀಂ ಸ್ವಾಂ ಬುದ್ಧಿಂ ತ್ಯಕ್ತ್ವಾ ತಪಸಿ ನಿಶ್ಚಯಮ್ ॥ ೨೧

ತತಃ ಸ ರೌದ್ರೇಽಭಿರತಃ ಪ್ರಮತ್ತೋಽಧರ್ಮಕರ್ಶಿತಃ ।
ತಸ್ಯ ಶಸ್ತ್ರಸ್ಯ ಸಂವಾಸಾಜ್ಜಗಾಮ ನರಕಂ ಮುನಿಃ ॥ ೨೨

ಏವಮೇತತ್ ಪುರಾವೃತ್ತಂ ಶಸ್ತ್ರಸಂಯೋಗಕಾರಣಮ್ ।
ಅಗ್ನಿಸಂಯೋಗವದ್ಧೇತುಃ ಶಸ್ತ್ರಸಂಯೋಗ ಉಚ್ಯತೇ ॥ ೨೩

ಸ್ನೇಹಾಚ್ಚ ಬಹುಮಾನಾಚ್ಚ ಸ್ಮಾರಯೇ ತ್ವಾಂ ನ ಶಿಕ್ಷಯೇ ।
ನ ಕಥಂಚನ ಸಾ ಕಾರ್ಯಾ ಗೃಹೀತಧನುಷಾ ತ್ವಯಾ ॥ ೨೪

---

ಖಡ್ಗವನ್ನು ಜೋಪಾನವಾಗಿ ನೋಡಿಕೊಳ್ಳುತ್ತಿದ್ದನು. ಅವನು ಅದನ್ನು ಎಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದನೆಂದರೆ–ಫಲಮೂಲಗಳನ್ನು ತರುವುದಕ್ಕೆ ಹೊರಗೆ ಹೊರಟಾಗ ಖಡ್ಗವನ್ನು ತನ್ನೊಡನೇ ಒಯ್ಯುತ್ತಿದ್ದನು (೧೯–೨೦). ಹೀಗೆ ಆ ತಪಸ್ವಿಯು ಸದಾ ಶಸ್ತ್ರಧಾರಿಯಾದ್ದರಿಂದ ತಪಸ್ಸಿನಲ್ಲಿ ಆಸಕ್ತಿಯು ಕಡಿಮೆಯಾಯಿತು. ಅವನ ಬುದ್ಧಿಯಲ್ಲಿ ಭಯಂಕರವಾದ ರಜೋಗುಣವು ಮನೆಮಾಡಿತು. ಕಡೆಗೆ ಅವನು ವಿವೇಕಭ್ರಷ್ಟನಾಗಿ ಹಿಂಸಾಕಾರ್ಯದಲ್ಲಿ ನಿರತನಾದನು. ಅಧರ್ಮವು ಅವನನ್ನು ತನ್ನ ಕಡೆಗೆ ಜಗ್ಗಿತು. ಮುನಿಯಾಗಿದ್ದವನು ಈ ರೀತಿಯಲ್ಲಿ ಶಸ್ತ್ರದ ಸಹವಾಸದಿಂದ ನರಕಕ್ಕೆ ಹೋದನಂತೆ! (೨೧–೨೨). ಹೀಗೆ ಆಯುಧವನ್ನು ಹಿಡಿದದ್ದು ಅಧರ್ಮಕ್ಕೆ ಕಾರಣವಾಯಿತೆಂದು ಪುರಾತನ ಕಥೆಯುಂಟು. ಆಯುಧಗಳ ಸಹವಾಸ ಬೆಂಕಿಯೊಡನೆ ಚೆಲ್ಲಾಟವಾಡಿದಂತೆ ಅನರ್ಥಹೇತುವೆಂದು ಹಿರಿಯರು ಹೇಳುತ್ತಾರೆ. ಆದ್ದರಿಂದ, ಆರ್ಯಪುತ್ರ, ಪ್ರೇಮದಿಂದಲೂ ನಿನಗೆ ನನ್ನಲ್ಲಿರುವ ಸಲಿಗೆಯಿಂದಲೂ ಈ ಮಾತನ್ನು ನಾನು ಹೇಳುತ್ತಿದ್ದೇನೆ. ನಿನಗೆ ಗೊತ್ತಿರುವುದನ್ನೇ ನೆನಪುಮಾಡಿಕೊಡುತ್ತಿದ್ದೇನೆಯೇ ವಿನಾ ಹೊಸದಾಗಿ ಏನನ್ನೂ ಹೇಳಿಕೊಡುತ್ತಿಲ್ಲ (೨೩–೨೪).

ಬುದ್ಧಿರ್ವೈರಂ ವಿನಾ ಹಂತುಂ ರಾಕ್ಷಸಾನ್ ದಂಡಕಾಶ್ರಿತಾನ್ ।
ಅಪರಾಧಂ ವಿನಾ ಹಂತುಂ ಲೋಕಾನ್ ವೀರ ನ ಕಾಮಯೇ ॥ ೨೫

ಕ್ಷತ್ರಿಯಾಣಾಂ ತು ವೀರಾಣಾಂ ವನೇಷು ನಿಯತಾತ್ಮನಾಮ್ ।
ಧನುಷಾಂ ಕಾರ್ಯಮೇತಾವದಾರ್ತಾನಾಮಭಿರಕ್ಷಣಮ್ ॥ ೨೬

ಕ್ವ ಚ ಶಸ್ತ್ರಂ ಕ್ವ ಚ ವನಂ ಕ್ವ ಚ ಕ್ಷಾತ್ರಂ ತಪಃ ಕ್ವ ಚ ।
ವ್ಯಾವಿದ್ಧಮಿದಮಸ್ಮಾಭಿರ್ದೇಶಧರ್ಮಸ್ತು ಪೂಜ್ಯತಾಮ್ ॥ ೨೭

ತದಾರ್ಯ ಕಲುಷಾ ಬುದ್ಧಿರ್ಜಾಯತೇ ಶಸ್ತ್ರಸೇವನಾತ್ ।
ಪುನರ್ಗತ್ವಾ ತ್ವಯೋಧ್ಯಾಯಾಂ ಕ್ಷತ್ರಧರ್ಮಂ ಚರಿಷ್ಯಸಿ ॥ ೨೮

ಅಕ್ಷಯಾ ತು ಭವೇತ್ ಪ್ರೀತಿಃ ಶ್ವಶ್ರೂಶ್ವಶುರುಯೋರ್ಮಮ ।
ಯದಿ ರಾಜ್ಯಂ ಪರಿತ್ಯಜ್ಯ ಭವೇಸ್ತ್ವಂ ನಿರತೋ ಮುನಿಃ ॥ ೨೯

---

ನೀನು ಧನುಸ್ಸನ್ನು ಹಿಡಿದು ದಂಡಕಾರಣ್ಯದಲ್ಲಿ ಇರುವ ರಾಕ್ಷಸರನ್ನು ನಿಷ್ಕಾರಣವಾಗಿ ಸಂಹರಿಸುವುದು ಸರ್ವಥಾ ಯುಕ್ತವಲ್ಲ. ವೀರಾಗ್ರಣಿ, ನಮಗೆ ತಪ್ಪುಮಾಡದೆ ಇರತಕ್ಕವರನ್ನು ಕೊಲ್ಲುವುದು ನನಗೆ ಇಷ್ಟವಿಲ್ಲ. (೨೫.) ವನವಾಸಿಗಳಾದ ಋಷಿಗಳು ಕಷ್ಟದಲ್ಲಿದ್ದರೆ, ಅವರನ್ನು ರಕ್ಷಿಸುವುದು ಕ್ಷಾತ್ರಧರ್ಮವನ್ನವಲಂಬಿಸಿದ ವೀರರ ಕರ್ತವ್ಯ. ಅದು ಅವರ ಧನುಸ್ಸು ಮಾಡಬೇಕಾದ ಕಾರ್ಯ. (ಈಗ ನಮ್ಮ ಪರಿಸ್ಥಿತಿಯಾದರೋ ಹಾಗಿಲ್ಲ) (೨೬). ಶಸ್ತ್ರವೆಲ್ಲಿ, ಅರಣ್ಯವೆಲ್ಲಿ, ಕ್ಷತ್ರಿಯಧರ್ಮವೆಲ್ಲಿ, ತಪಸ್ಸೆಲ್ಲಿ! ಇವು ಪರಸ್ಪರವಿರುದ್ಧವಾದವು. ನಾವಿರುವುದು ಅರಣ್ಯದಲ್ಲಿ. ಈಗ ಅರಣ್ಯಧರ್ಮವಾದ ತಪಸ್ಸಿಗೆ ನಾವು ಮಾನ್ಯತೆಯನ್ನು ಕೊಡಬೇಕು (೨೭). ಆದ್ದರಿಂದ ಆರ್ಯಪುತ್ರ, ಈಗ ಶಸ್ತ್ರವನ್ನು ಹಿಡಿದರೆ ಬುದ್ಧಿಯು ಕೆಡುವುದು. ಮುಂದೆ ಅಯೋಧ್ಯೆಗೆ ಹೋದಮೇಲೆ ನೀನು ಕ್ಷತ್ರಿಯೋಚಿತಧರ್ಮವನ್ನು ಪಾಲಿಸಬಹುದು. ನೀನು ರಾಜ್ಯದ ಚಿಂತೆಯನ್ನೇ ಹಚ್ಚಿಕೊಳ್ಳದೆ ತಪೋನಿರತನಾಗಿ ಮುನಿಯೇ ಆಗಿಬಿಟ್ಟರಂತೂ ನನ್ನ ಅತ್ತೆ ಮಾವಂದಿರಿಗೆ* ಬಹಳ ಆನಂದವೇ ಆಗುವುದು (೨೮-೨೯). ಏಕೆಂದರೆ,

* ಇಲ್ಲಿ ಅತ್ತೆಯೆಂದರೆ ಕೈಕೇಯಿಯೆಂದು ಕೆಲವರು ಹೇಳುತ್ತಾರೆ. ಆ ಪಕ್ಷದಲ್ಲಿ ಸೀತೆಯ ಮಾತು ಚುಚ್ಚುನುಡಿಯಾಗಬಹುದು. ಅವಳ ಆಶಯ ಸರಳವೂ ಹಾರ್ದವೂ ಆಗಬೇಕಾದರೆ, ಅತ್ತೆಯೆಂದರೆ ಕೌಸಲ್ಯೆಯೆಂದು ತಿಳಿಯಬೇಕು.

ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಮ್ ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥ ೩೦

ಆತ್ಮಾನಂ ನಿಯಮೈಸ್ತೈಸ್ತೈಃ ಕರ್ಶಯಿತ್ವಾ ಪ್ರಯತ್ನತಃ ।
ಪ್ರಾಪ್ಯತೇ ನಿಪುಣೈರ್ಧರ್ಮೋ ನ ಸುಖಾಲ್ಲಭ್ಯತೇ ಸುಖಮ್ ॥ ೩೧

ನಿತ್ಯಂ ಶುಚಿಮತಿಃ ಸೌಮ್ಯ ಚರ ಧರ್ಮಂ ತಪೋವನೇ ।
ಸರ್ವಂ ಹಿ ವಿದಿತಂ ತುಭ್ಯಂ ತ್ರೈಲೋಕ್ಯಮಪಿ ತತ್ತ್ವತಃ ॥ ೩೨

ಸ್ತ್ರೀಚಾಪಲಾದೇತದುದಾಹೃತಂ ಮೇ
ಧರ್ಮಂ ಚ ವಕ್ತುಂ ತವ ಕಃ ಸಮರ್ಥಃ ।
ವಿಚಾರ್ಯ ಬುದ್ಧ್ಯಾ ತು ಸಹಾನುಜೇನ
ಯದ್ರೋಚತೇ ತತ್ ಕುರು ಮಾ ಚಿರೇಣ ॥ ೩೩

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ನವಮಃ ಸರ್ಗಃ

ಧರ್ಮದಿಂದಲೇ ಅರ್ಥ; ಧರ್ಮದಿಂದಲೇ ಸುಖ. ಸಕಲ ಅಭೀಷ್ಟವೂ ಧರ್ಮದಿಂದ ಕೈಗೂಡುತ್ತದೆ. ಈ ಜಗತ್ತು ಧರ್ಮದ ತಳಹದಿಯಮೇಲೆ ನಿಂತಿದೆ. ಆದ್ದರಿಂದ ವಿಚಾರಶೀಲರು ನಾನಾಸಿಯಮಗಳಿಂದ ದೇಹಬುದ್ಧಿಗಳನ್ನು ಪ್ರಯತ್ನ ಪೂರ್ವಕವಾಗಿ ದಂಡಿಸಿ ಧರ್ಮವನ್ನು ಆರ್ಜಿಸುತ್ತಾರೆ. ಶ್ರಮಪಡದೆ ಸುಖದಿಂದ ಸುಖ ದೊರೆಯದು (೩೦-೩೧). ಆರ್ಯಪುತ್ರ, ಯಾವುದಾದರೊಂದು ತಪೋವನದಲ್ಲಿ ಸೌಮ್ಯಬುದ್ಧಿಯಿಂದ ನೆಲೆಸು. ನಿರ್ಮಲಚಿತ್ತನಾಗಿ ಸದಾ ಧರ್ಮ ವನ್ನಾಚರಿಸಬೇಕೆಂದು ಬೇಡುತ್ತೇನೆ. ಆದರೆ ನಿನಗೆ ತಿಳಿಯದ ವಿಷಯವೇನಿದೆ ? ಮೂರುಲೋಕದ ತಿರುಳನ್ನು ಬಲ್ಲವನು ನೀನು (೩೨). ಹೆಂಗಸರಿಗೆ ಸಹಜ ವಾದ ಚಾಪಲ್ಯದಿಂದ ನಾನು ಹೀಗೆ ಹೇಳಿಬಿಟ್ಟೆನು ! ನಿನಗೆ ಧರ್ಮದ ಸ್ವರೂಪ ವನ್ನು ಹೇಳಿಕೊಡಲು ಯಾರಿಗೆ ಸಾಮರ್ಥ್ಯ ಉಂಟು ? ನಿನ್ನ ತಮ್ಮನೊಡನೆ ಪರ್ಯಾಲೋಚಿಸಿ ನಿನಗೆ ಇಷ್ಟಬಂದಂತೆ ನಡೆಸು" ಎಂದಳು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಒಂಬತ್ತನೆಯ ಸರ್ಗ

## ದಶಮಃ ಸರ್ಗಃ

### ರಕ್ಷೋವಧಸಮರ್ಥನಮ್

ವಾಕ್ಯಮೇತತ್ತು ವೈದೇಹ್ಯಾ ವ್ಯಾಹೃತಂ ಭರ್ತೃಭಕ್ತಯಾ ।
ಶ್ರುತ್ವಾ ಧರ್ಮೇ ಸ್ಥಿತೋ ರಾಮಃ ಪ್ರತ್ಯುವಾಚಾಥ ಮೈಥಿಲೀಮ್ ॥

ಹಿತಮುಕ್ತಂ ತ್ವಯಾ ದೇವಿ ಸ್ನಿಗ್ಧಯಾ ಸದೃಶಂ ವಚಃ ।
ಕುಲಂ ವ್ಯಪದಿಶಂತ್ಯಾ ಚ ಧರ್ಮಜ್ಞೇ ಜನಕಾತ್ಮಜೇ ॥ ೨

ಕಿಂ ತು ವಕ್ಷ್ಯಾಮ್ಯಹಂ ದೇವಿ ತ್ವಯೈವೋಕ್ತಮಿದಂ ವಚಃ ।
ಕ್ಷತ್ರಿಯೈರ್ಧಾರ್ಯತೇ ಚಾಪೋ ನಾರ್ತಶಬ್ದೋ ಭವೇದಿತಿ ॥ ೩

ಮಾಂ ಸೀತೇ ಸ್ವಯಮಾಗಮ್ಯ ಶರಣ್ಯಾಃ ಶರಣಂ ಗತಾಃ ।
ತೇ ಚಾರ್ತಾ ದಂಡಕಾರಣ್ಯೇ ಮುನಯಃ ಸಂಶಿತವ್ರತಾಃ ॥ ೪

## ಸರ್ಗ ೧೦

### ಶ್ರೀ ರಾಮನು ತನ್ನ ಪ್ರತಿಜ್ಞಾನುಸಾರವಾಗಿ ರಾಕ್ಷಸರನ್ನು ಕೊಲ್ಲುವುದೇ ಧರ್ಮವೆಂದು ಸೀತಾದೇವಿಗೆ ಹೇಳುವುದು

ವೈದೇಹಿಯು ಪತಿಭಕ್ತಿಯಿಂದ ಈ ಮಾತನ್ನು ಹೇಳಲು, ಧರ್ಮನಿಷ್ಠನಾದ ಶ್ರೀರಾಮನು ಹೀಗೆಂದನು : "ದೇವಿ, ನೀನು ಹಿತವಾದ ಮಾತನ್ನೇ ನುಡಿದೆ. ನನ್ನಲ್ಲಿರುವ ಪ್ರೇಮದಿಂದ ಪ್ರೇಮಕ್ಕೆ ಯೋಗ್ಯವಾದ ಮಾತನ್ನಾಡಿದೆ. ಜಾನಕಿ, ನೀನು ದೊಡ್ಡವಂಶದಲ್ಲಿ ಹುಟ್ಟಿದವಳು. ಧರ್ಮವನ್ನು ಬಲ್ಲವಳು (೧-೨). ಆದರೆ ನಾನು ಹೇಳಬೇಕಾದ ಒಂದಂಶ ಉಂಟು : ಜನರು ಕಷ್ಟದಿಂದ ಗೋಳಾಡಬಾರದು ; ಅವರನ್ನು ರಕ್ಷಿಸುವುದಕ್ಕಾಗಿ ಕ್ಷತ್ರಿಯರು ಧನುಸ್ಸನ್ನು ಹಿಡಿಯಬೇಕೆಂದು ನೀನೇ ಹೇಳಿದೆಯಲ್ಲವೆ ? ದಂಡಕಾರಣ್ಯದಲ್ಲಿ ವ್ರತನಿಷ್ಠರಾದ ಋಷಿಗಳು ಬಹಳ ಕಷ್ಟದಲ್ಲಿ ಇದ್ದಾರೆ. ಅವರಿಗೆ ರಕ್ಷಣೆ ಬೇಕಾಗಿದೆ. ಅವರೆಲ್ಲರೂ

*

ವಸಂತೋ ಧರ್ಮನಿರತಾ ವನೇ ಮೂಲಫಲಾಶನಾಃ ।
ನ ಲಭಂತೇ ಸುಖಂ ಭೀತಾ ರಾಕ್ಷಸೈಃ ಕ್ರೂರಕರ್ಮಭಿಃ ॥ ೫

ಕಾಲೇ ಕಾಲೇ ಚ ನಿರತಾ ನಿಯಮೈರ್ವಿವಿಧೈರ್ವನೇ ।
ಭಕ್ಷ್ಯಂತೇ ರಾಕ್ಷಸೈರ್ಭೀಮೈರ್ನರಮಾಂಸೋಪಜೀವಿಭಿಃ ॥ ೬

ತೇ ಭಕ್ಷ್ಯಮಾಣಾ ಮುನಯೋ ದಂಡಕಾರಣ್ಯವಾಸಿನಃ ।
ಅಸ್ಮಾನಭ್ಯವಪದ್ಯೇತಿ ಮಾಮೂಚುರ್ದ್ವಿಜಸತ್ತಮಾಃ ॥ ೭

ಮಯಾ ತು ವಚನಂ ಶ್ರುತ್ವಾ ತೇಷಾಮೇವಂ ಮುಖಾಚ್ಚ್ಯುತಮ್ ।
ಕೃತ್ವಾ ಚರಣಶುಶ್ರೂಷಾಂ ವಾಕ್ಯಮೇತದುದಾಹೃತಮ್ ॥ ೮

ಪ್ರಸೀದಂತು ಭವಂತೋ ಮೇ ಹ್ರೀರೇಷಾ ಹಿ ಮಮಾತುಲಾ ।
ಯದೀದೃಶೈರಹಂ ವಿಪ್ರೈರುಪಸ್ಥೇಯೈರುಪಸ್ಥಿತಃ ॥ ೯

ಕಿಂ ಕರೋಮೀತಿ ಚ ಮಯಾ ವ್ಯಾಹೃತಂ ದ್ವಿಜಸಂನಿಧೌ ।
ಸರ್ವೈರೇತೈಃ ಸಮಾಗಮ್ಯ ವಾಗಿಯಂ ಸಮುದಾಹೃತಾ ॥ ೧೦

---

ಬಂದು ನನ್ನನ್ನು ಮರೆಹೊಕ್ಕಿದ್ದಾರೆ (೩-೪). ಅವರು ಧರ್ಮಾತ್ಮರು. ಕಾಡಿನಲ್ಲಿ ಫಲಮೂಲಗಳನ್ನು ತಿನ್ನುತ್ತಾ ತಮ್ಮ ಪಾಡಿಗೆ ತಾವು ಇದ್ದಾರೆ. ಕ್ರೂರಾತ್ಮರಾದ ರಾಕ್ಷಸರಿಂದ ಅವರಿಗೆ ಹೆದರಿಕೆಯಾಗಿದೆ. ನೆಮ್ಮದಿಯೇ ಇಲ್ಲದಂತಾಗಿದೆ. ಆ ತಪಸ್ವಿಗಳು ಕಾಲಕಾಲದಲ್ಲಿ ವಿಧಿನಿಯಮಗಳನ್ನು ಪಾಲಿಸುತ್ತ ಅರಣ್ಯದಲ್ಲಿದ್ದಾರೆ. ನರಮಾಂಸಭಕ್ಷಕರಾದ ಭಯಂಕರ ರಾಕ್ಷಸರು ಅವರನ್ನು ತಿಂದು ಹಾಕುತ್ತಿದ್ದಾರಲ್ಲ ! (೫-೬). ಹೀಗೆ ಹಿಂಸೆಗೆ ಗುರಿಯಾದ ಮುನಿಗಳು ನನ್ನ ಬಳಿಗೆ ಬಂದು ರಕ್ಷಣೆಯನ್ನು ಬೇಡಿದ್ದಾರೆ. ಅವರ ಬಾಯಿಂದ 'ಶರಣಾಗತರಾಗಿದ್ದೇವೆ' ಎಂಬ ಮಾತು ಹೊರಟಿತು. ಅಂಥ ಮಾತನ್ನು ನಾನು ಕೇಳಿದೆ ! ನಾನು ಅವರ ಪಾದಗಳಿಗೆ ಅಡ್ಡಬಿದ್ದು "ಮಹರ್ಷಿಗಳೆ, ಪ್ರಸನ್ನರಾಗಿರಿ. ನಿಮ್ಮ ಮಾತನ್ನು ಕೇಳಿ ನನಗೆ ಬಹಳ ನಾಚಿಕೆಯಾಗುತ್ತಿದೆ. ಪೂಜಾರ್ಹರಾದ ನಿಮ್ಮಂಥ ಬ್ರಾಹ್ಮಣೋತ್ತಮರು ಬಂದು ನನ್ನಲ್ಲಿ ಯಾಚಿಸಬೇಕಾಯಿತೆ ? (೭-೯). ನಾನು ಮಾಡಬೇಕಾದ್ದನ್ನು ಆಜ್ಞಾಪಿಸಬೇಕು" ಎಂದು ನಿವೇದಿಸಿ

ರಾಕ್ಷಸೈರ್ದಂಡಕಾರಣ್ಯೇ ಬಹುಭಿಃ ಕಾಮರೂಪಿಭಿಃ ।
ಅರ್ದಿತಾಃ ಸ್ಮ ಭೃಶಂ ರಾಮ ಭವಾನ್ನಸ್ತ್ರಾತುಮರ್ಹತಿ ॥ ೧೧

ಹೋಮಕಾಲೇಷು ಸಂಪ್ರಾಪ್ತಾಃ ಪರ್ವಕಾಲೇಷು ಚಾನಘ ।
ಧರ್ಷಯಂತಿ ಸುದುರ್ಧರ್ಷಾ ರಾಕ್ಷಸಾಃ ಪಿಶಿತಾಶನಾಃ । ೧೨

ರಾಕ್ಷಸೈರ್ಧರ್ಷಿತಾನಾಂ ಚ ತಾಪಸಾನಾಂ ತಪಸ್ವಿನಾಮ್ ।
ಗತಿಂ ಮೃಗಯಮಾಣಾನಾಂ ಭವಾನ್ನಃ ಪರಮಾ ಗತಿಃ ॥ ೧೩

ಕಾಮಂ ತಪಃಪ್ರಭಾವೇಣ ಶಕ್ತಾ ಹಂತುಂ ನಿಶಾಚರಾನ್ ।
ಚಿರಾರ್ಜಿತಂ ತು ನೇಚ್ಛಾಮಸ್ತಪಃ ಖಂಡಯಿತುಂ ವಯಮ್ ॥ ೧೪

ಬಹುವಿಘ್ನಂ ತಪೋ ನಿತ್ಯಂ ದುಶ್ಚರಂ ಚೈವ ರಾಘವ ।
ತೇನ ಶಾಪಂ ನ ಮುಂಚಾಮೋ ಭಕ್ಷ್ಯಮಾಣಾಶ್ಚ ರಾಕ್ಷಸೈಃ ॥ ೧೫

---

ಕೊಂಡೆನು. ಆಗ ಅವರೆಲ್ಲರೂ ಒಟ್ಟಾಗಿ "ರಾಮ, ಈ ದಂಡಕಾರಣ್ಯದಲ್ಲಿ ಕಾಮರೂಪಿಗಳಾದ ಬಹುಮಂದಿ ರಾಕ್ಷಸರಿದ್ದಾರೆ. ಅವರಿಂದ ನಾವು ಕಷ್ಟಕ್ಕೆ ಸಿಕ್ಕಿ ಬಹಳ ಹಿಂಸೆಪಡುತ್ತಿದ್ದೇವೆ. ನೀನೇ ನಮ್ಮನ್ನು ಉಳಿಸಬೇಕು (೧೦-೧೧). ಪ್ರತಿದಿನವೂ ನಾವು ಅಗ್ನಿಹೋತ್ರವನ್ನಾಚರಿಸುವಾಗಲೂ ದರ್ಶಪೌರ್ಣಮಾಸಾದಿ ಯಜ್ಞಗಳನ್ನು ಆಚರಿಸುವಾಗಲೂ ಅವರು ಬಂದು, ಹೋಮವು ನಡೆಯದಂತೆ ನಮ್ಮನ್ನು ಪೀಡಿಸುತ್ತಾರೆ. ನಮ್ಮಿಂದ ಅವರನ್ನು ಎದುರಿಸಲು ಶಕ್ಯವಲ್ಲ. ಆ ರಾಕ್ಷಸರು ಮಾಂಸಾಹಾರಿಗಳು. ತಾಪಸರಾದ ನಾವು ಅವರ ಹಿಂಸೆಗೆ ಗುರಿಯಾಗಿ ದಿಕ್ಕಿಲ್ಲದವರಾಗಿದ್ದೇವೆ. ನಮ್ಮ ಗತಿಯೇನೆಂದು ಚಿಂತಿಸುತ್ತಿದ್ದ ನಾವು ನಿನ್ನ ಮರೆಹೊಕ್ಕಿದ್ದೇವೆ. ನೀನೇ ನಮಗೆ ಪರಮಗತಿ (೧೨-೧೩). ತಪಃಪ್ರಭಾವದಿಂದ ಆ ನಿಶಾಚರರನ್ನು ನಾಶಮಾಡುವ ಸಾಮರ್ಥ್ಯವೇನೋ ನಮಗಿದೆ. ಆದರೆ ಬಹುಕಾಲದಿಂದ ಕಷ್ಟಪಟ್ಟು ಸಂಪಾದಿಸಿದ ತಪೋಮಹಿಮೆಯನ್ನು ಹೀಗೆ ಹಾಳುಮಾಡಿಕೊಳ್ಳಲು ನಮಗೆ ಇಚ್ಛೆ ಇಲ್ಲ. ರಾಘವ, ತಪಸ್ಸಿಗೆ ಯಾವಾಗಲೂ ವಿಘ್ನಗಳು ಬಹಳ. ತಪಸ್ಸನ್ನಾಚರಿಸುವುದು ಬಹು ಕಠಿಣ. ಆದ್ದರಿಂದ ರಾಕ್ಷಸರು ನಮ್ಮನ್ನು ತಿಂದು ತೇಗಿದರೂ ಅವರನ್ನು ಶಪಿಸದೆ ಇದ್ದೇವೆ. (೧೪-೧೫).

ತದರ್ದ್ಯಮಾನಾನ್ ರಕ್ಷೋಭಿರ್ದಂಡಕಾರಣ್ಯವಾಸಿಭಿಃ ।
ರಕ್ಷ ನಸ್ತ್ವಂ ಸಹ ಭ್ರಾತ್ರಾ ತ್ವನ್ನಾಥಾ ಹಿ ವಯಂ ವನೇ ॥ ೧೬

ಮಯಾ ಚೈತದ್ವಚಃ ಶ್ರುತ್ವಾ ಕಾರ್ತ್ಸ್ನ್ಯೇನ ಪರಿಪಾಲನಮ್ ।
ಋಷೀಣಾಂ ದಂಡಕಾರಣ್ಯೇ ಸಂಶ್ರುತಂ ಜನಕಾತ್ಮಜೇ ॥ ೧೭

ಸಂಶ್ರುತ್ಯ ಚ ನ ಶಕ್ಷ್ಯಾಮಿ ಜೀವಮಾನಃ ಪ್ರತಿಶ್ರವಮ್ ।
ಮುನೀನಾಮನ್ಯಥಾ ಕರ್ತುಂ ಸತ್ಯಮಿಷ್ಟಂ ಹಿ ಮೇ ಸದಾ ॥ ೧೮

ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್ ।
ನ ತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥ ೧೯

ತದವಶ್ಯಂ ಮಯಾ ಕಾರ್ಯಮೃಷೀಣಾಂ ಪರಿಪಾಲನಮ್ ।
ಅನುಕ್ತೇನಾಪಿ ವೈದೇಹಿ ಪ್ರತಿಜ್ಞಾಯ ತು ಕಿಂ ಪುನಃ ॥ ೨೦

---

ಈ ದಂಡಕಾರಣ್ಯದಲ್ಲಿ ನೆಲಸಿದ ರಾಕ್ಷಸರ ಹಾವಳಿಯಿಂದ ನರಳುತ್ತಿರುವ ನಮ್ಮನ್ನು, ರಾಮ, ನೀನೂ ನಿನ್ನ ತಮ್ಮನೂ ಸೇರಿ ರಕ್ಷಿಸಬೇಕು. ಈ ಕಾಡಿನಲ್ಲಿ ನೀನೇ ನಮಗೆ ರಕ್ಷಕ" ಎಂದು ಹೇಳಿದರು. ನಾನು ಅವರ ಮಾತನ್ನಾಲಿಸಿ, ಜಾನಕಿ, ಈ ಅರಣ್ಯದಲ್ಲಿರುವ ಋಷಿಗಳನ್ನು ಸರ್ವವಿಧದಲ್ಲಿಯೂ ರಕ್ಷಿಸುವುದಾಗಿ ಮಾತುಕೊಟ್ಟಿದ್ದೇನೆ (೧೬-೧೭). ಹೀಗೆ ಋಷಿಗಳಿಗೆ ಮಾತುಕೊಟ್ಟು ಅದನ್ನು ಎಂದಿಗೂ ಮುರಿಯಲಾರೆನು. ಈ ದೇಹದಲ್ಲಿ ಪ್ರಾಣವಿರುವವರೆಗೂ ಅನ್ಯಥಾ ಆಗಲಾರದು. ಸರ್ವದಾ ನನಗೆ ಸತ್ಯಪಾಲನೆಯೇ ಇಷ್ಟವಾದದ್ದೆಂದು ನೀನು ಬಲ್ಲೆ. ಸೀತೆ, ಸಮಯಬಂದರೆ ನನ್ನ ಪ್ರಾಣವನ್ನಾದರೂ ತೊರೆದೇನು ; ನಿನ್ನನ್ನಾದರೂ ಲಕ್ಷ್ಮಣನನ್ನಾದರೂ ಬಿಟ್ಟೇನು. ಆದರೆ ಮಾತುಕೊಟ್ಟಮೇಲೆ ನನ್ನ ಪ್ರತಿಜ್ಞೆಯನ್ನು ಮಾತ್ರ ಎಂದಿಗೂ ತ್ಯಜಿಸಲಾರೆ. ಅದರಲ್ಲಿಯೂ ಬ್ರಹ್ಮಜ್ಞಾನಿಗಳಿಗೆ ಮಾತುಕೊಟ್ಟು ತಪ್ಪುವೆನೆ ? (೧೮-೧೯). ಆದ್ದರಿಂದ, ವೈದೇಹಿ, ಋಷಿಗಳು ಬಂದು ಕೇಳಿಕೊಳ್ಳದಿದ್ದರೂ ಅವರನ್ನು ರಕ್ಷಿಸುವುದು ನನ್ನ ಅವಶ್ಯ ಕರ್ತವ್ಯ. ಹೀಗಿರುವಾಗ ಅವರು ಬಂದು ಹೇಳಿದಮೇಲೆ—ನಾನು ಅವರಿಗೆ ಮಾತುಕೊಟ್ಟಮೇಲೆ — ಇದು ನನ್ನ ಕರ್ತವ್ಯವೇ ಎಂಬುದರಲ್ಲಿ ಸಂದೇಹ

ಮಮ ಸ್ನೇಹಾಚ್ಚ ಸೌಹಾರ್ದಾದಿದಮುಕ್ತಂ ತ್ವಯಾನಘೇ ।
ಪರಿತುಷ್ಟೋಽಸ್ಮ್ಯಹಂ ಸೀತೇ ನ ಹ್ಯನಿಷ್ಟೋಽನುಶಿಷ್ಯತೇ ॥ ೨೧

ಸದೃಶಂ ಚಾನುರೂಪಂ ಚ ಕುಲಸ್ಯ ತವ ಚಾತ್ಮನಃ ।
ಸಧರ್ಮಚಾರಿಣೀ ಮೇ ತ್ವಂ ಪ್ರಾಣೇಭ್ಯೋಽಪಿ ಗರೀಯಸೀ ॥ ೨೨

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಸೀತಾಂ ಪ್ರಿಯಾಂ ಮೈಥಿಲರಾಜಪುತ್ರೀಮ್ ।
ರಾಮೋ ಧನುಷ್ಮಾನ್ ಸಹ ಲಕ್ಷ್ಮಣೇನ
ಜಗಾಮ ರಮ್ಯಾಣಿ ತಪೋವನಾನಿ ॥ ೨೩

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದಶಮಃ ಸರ್ಗಃ

ವೇನು ?(೨೦), ಪ್ರಿಯೆ-ಸೀತೆ, ನನ್ನ ಮೇಲಿನ ಪ್ರೇಮದಿಂದಲೂ ಸಲಿಗೆಯಿಂದಲೂ ಈ ಮಾತನ್ನು ನೀನು ಹೇಳಿದ್ದೀಯೆ. ನನಗೆ ಬಹಳ ಆನಂದವಾಯಿತು. ಪ್ರೀತಿ ಪಾತ್ರರಿಗಲ್ಲವೆ ಹಿತವಾದ ನುಡಿಯನ್ನು ಹೇಳಬೇಕಾದದ್ದು ? ಇತರರಿಗೆ ಯಾರು ಹೇಳುತ್ತಾರೆ ? (೨೧). ದೇವಿ, ನಿನ್ನ ಸೌಜನ್ಯಕ್ಕೂ ನಿನ್ನ ವಂಶಕ್ಕೂ ಅನುರೂಪ ವಾದ ತೂಕವುಳ್ಳ ಮಾತನ್ನು ಆಡಿದ್ದೀಯೆ. ನನ್ನ ಸಹಧರ್ಮಚಾರಿಣಿ ನೀನು ; ನನ್ನ ಪ್ರಾಣಕ್ಕಿಂತಲೂ ಪ್ರಿಯಳು ನೀನು" ಎಂದನು. ಮಹಾತ್ಮನಾದ ಶ್ರೀರಾಮನು ತನ್ನ ಪ್ರೇಯಸಿಯಾದ ಜನಕರಾಜಪುತ್ರಿಗೆ ಹೀಗೆ ಹೇಳಿ, ಧನುಸ್ಸನ್ನು ಹಿಡಿದು ಲಕ್ಷ್ಮಣಸಮೇತನಾಗಿ, ರಮಣೀಯವಾದ ತಪೋವನಗಳ ಕಡೆಗೆ ಪ್ರಯಾಣಮಾಡಿದನು. (೨೨–೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹತ್ತನೆಯ ಸರ್ಗ

## ಏಕಾದಶಃ ಸರ್ಗಃ

### ಅಗಸ್ತ್ಯಾಶ್ರಮಃ

ಅಗ್ರತಃ ಪ್ರಯಯೌ ರಾಮಃ ಸೀತಾ ಮಧ್ಯೇ ಸುಮಧ್ಯಮಾ ।
ಪೃಷ್ಠತಸ್ತು ಧನುಷ್ಪಾಣಿರ್ಲಕ್ಷ್ಮಣೋಽನುಜಗಾಮ ಹ ॥ ೧

ತೌ ಪಶ್ಯಮಾನೌ ವಿವಿಧಾನ್ ಶೈಲಪ್ರಸ್ಥಾನ್ ವನಾನಿ ಚ ।
ನದೀಶ್ಚ ವಿವಿಧಾ ರಮ್ಯಾ ಜಗ್ಮತುಃ ಸೀತಯಾ ಸಹ ॥ ೨

ಸಾರಸಾಂಶ್ಚಕ್ರವಾಕಾಂಶ್ಚ ನದೀಪುಲಿನಚಾರಿಣಃ ।
ಸರಾಂಸಿ ಚ ಸಪದ್ಮಾನಿ ಯುಕ್ತಾನಿ ಜಲಜೈಃ ಖಗೈಃ ॥ ೩

ಯೂಥಬದ್ಧಾಂಶ್ಚ ಪೃಷತಾನ್ ಮದೋನ್ಮತ್ತಾನ್ ವಿಷಾಣಿನಃ ।
ಮಹಿಷಾಂಶ್ಚ ವರಾಹಾಂಶ್ಚ ನಾಗಾಂಶ್ಚ ದ್ರುಮವೈರಿಣಃ ॥ ೪

ತೇ ಗತ್ವಾ ದೂರಮಧ್ವಾನಂ ಲಂಬಮಾನೇ ದಿವಾಕರೇ ।
ದದೃಶುಃ ಸಹಿತಾ ರಮ್ಯಂ ತಟಾಕಂ ಯೋಜನಾಯತಮ್ ॥ ೫

## ಸರ್ಗ ೧೧

ಪಂಚಾಪ್ಸರವೆಂಬ ಸರೋವರದ ವೃತ್ತಾಂತ; ತಪೋವನನಿವಾಸ; ಸುತೀಕ್ಷ್ಣರ ಆಶ್ರಮಕ್ಕೆ ಪುನರಾಗಮನ; ಅಗಸ್ತ್ಯಮುನಿಗಳ ಆಶ್ರಮಕ್ಕೆ ಪ್ರಯಾಣ

ಮುಂದೆ ಶ್ರೀರಾಮನೂ ಅವನ ಹಿಂದೆ ಸುಂದರಿಯಾದ ಸೀತೆಯೂ ಹೋಗುತ್ತಿದ್ದರು. ಅವರ ಹಿಂದೆ ಲಕ್ಷ್ಮಣನು ಧನುಷ್ಪಾಣಿಯಾಗಿ ನಡೆದನು. ಬಗೆಬಗೆಯಾದ ಬೆಟ್ಟದ ತಪ್ಪಲುಗಳನ್ನೂ ಕಾಡುಗಳನ್ನೂ ಅಂದವಾದ ಅನೇಕ ಹೊಳೆಗಳನ್ನೂ ಅವರು ನೋಡುತ್ತ ನಡೆದರು (೧-೨). ಹೊಳೆಗಳ ಮರಳು ದಿಣ್ಣೆಗಳಲ್ಲಿ ಸಾರಸಗಳೂ ಚಕ್ರವಾಕಗಳೂ ನಲಿಯುತ್ತಿದ್ದವು. ಕೊಳಗಳಲ್ಲಿ ತಾವರೆಗಳೂ ನೀರುಹಕ್ಕಿಗಳೂ ರಂಜಿಸುತ್ತಿದ್ದವು. ಜಿಂಕೆಗಳು ಅಲ್ಲಲ್ಲಿ ಹಿಂಡು ಹಿಂಡಾಗಿ ಅಲೆಯುತ್ತಿದ್ದವು. ಚಂದವಾದ ಕೊಂಬುಗಳುಳ್ಳ ಕಾಡುಕೋಣಗಳೂ ಸಂಚರಿಸುತ್ತಿದ್ದವು. ಆನೆಗಳು ಮರಗಳನ್ನುರುಳಿಸುತ್ತಿದ್ದವು (೩-೪). ಅವೆಲ್ಲವನ್ನೂ

ಪದ್ಮಪುಷ್ಕರಸಂಬಾಧಂ ಗಜಯೂಥೈರಲಂಕೃತಮ್ ।
ಸಾರಸೈರ್ಹಂಸಕಾದಂಬೈಃ ಸಂಕುಲಂ ಜಲಚಾರಿಭಿಃ ॥ ೭

ಪ್ರಸನ್ನಸಲಿಲೇ ರಮ್ಯೇ ತಸ್ಮಿನ್ ಸರಸಿ ಶುಶ್ರುವೇ ।
ಗೀತವಾದಿತ್ರನಿರ್ಘೋಷೋ ನ ತು ಕಶ್ಚನ ದೃಶ್ಯತೇ ॥ ೭

ತತಃ ಕೌತೂಹಲಾದ್ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ಮುನಿಂ ಧರ್ಮಭೃತಂ ನಾಮ ಪ್ರಷ್ಟುಂ ಸಮುಪಚಕ್ರಮೇ ॥ ೮

ಇದಮತ್ಯದ್ಭುತಂ ಶ್ರುತ್ವಾ ಸರ್ವೇಷಾಂ ನೋ ಮಹಾಮುನೇ ।
ಕೌತೂಹಲಂ ಮಹಜ್ಜಾತಂ ಕಿಮಿದಂ ಸಾಧು ಕಥ್ಯತಾಮ್ ॥ ೯

ವಕ್ತವ್ಯಂ ಯದಿ ಚೇದ್ವಿಪ್ರ ನಾತಿಗುಹ್ಯಮಪಿ ಪ್ರಭೋ ।
ತೇನೈವಮುಕ್ತೋ ಧರ್ಮಾತ್ಮಾ ರಾಘವೇಣ ಮುನಿಸ್ತದಾ ॥ ೧೦

ಪ್ರಭಾವಂ ಸರಸಃ ಕೃತ್ಸ್ನಮಾಖ್ಯಾತುಮುಪಚಕ್ರಮೇ ।
ಇದಂ ಪಂಚಾಪ್ಸರೋ ನಾಮ ತಟಾಕಂ ಸಾರ್ವಕಾಲಿಕಮ್ ॥ ೧೧

---

ನೋಡುತ್ತ ಸೀತಾರಾಮಲಕ್ಷ್ಮಣರು ಬಹುದೂರ ಹೋದರು. ಸೂರ್ಯನು ಇಳಿಯುತ್ತಿರಲು ಸಂಜೆಯಾಗುತ್ತ ಬಂದಿತು. ಅಷ್ಟರಲ್ಲಿ ಯೋಜನ ವಿಸ್ತಾರವಾಗಿದ್ದ ರಮಣೀಯವಾದ ಒಂದು ಸರೋವರವು ಅವರಿಗೆ ಗೋಚರಿಸಿತು. ಅದರಲ್ಲಿ ಕೆಂದಾವರೆಗಳೂ ಬಿಳಿಯ ಕಮಲಗಳೂ ತುಂಬಿದ್ದವು. ಆನೆಗಳ ಹಿಂಡು (ನೀರಿಗಾಗಿ) ಇಳಿದಿತ್ತು. ಸಾರಸ, ರಾಜಹಂಸ, ಕಲಹಂಸ–ಮುಂತಾದ ಜಲಚರಗಳಿಂದ ಆ ತಟಾಕವು ಅಂದವಾಗಿತ್ತು (೫-೭). ಆ ಕೊಳದಲ್ಲಿ ತಿಳಿನೀರು ಸಮೃದ್ಧವಾಗಿತ್ತು. ಆಶ್ಚರ್ಯವೇನೆಂದರೆ, ಅಲ್ಲಿ ಸಂಗೀತಧ್ವನಿಯೂ ವಾದ್ಯಘೋಷವೂ ಕೇಳಿಸುತ್ತಿತ್ತು ! ಯಾರೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ ! ಅದೇನಿರಬಹುದೆಂದು ಶ್ರೀರಾಮಲಕ್ಷ್ಮಣರಿಗೆ ಕುತೂಹಲವಾಯಿತು. ಆಗ ಶ್ರೀರಾಮನು ತಮ್ಮೊಡನೆ ಬಂದಿದ್ದ ಧರ್ಮಭೃತನೆಂಬ ಮುನಿಯನ್ನು ಕುರಿತು "ಮುನಿಗಳೆ, ಇದೇನಿದು ಅದ್ಭುತ ! ಇದನ್ನು ಕೇಳಿ ನಮಗೆ ಬಹಳ ಕುತೂಹಲ ಹುಟ್ಟಿದೆ. ಇದೇನೆಂಬುದನ್ನು ದಯವಿಟ್ಟು ಹೇಳೋಣವಾಗಬೇಕು. (೭-೯) ಇದು ಹೇಳಬಹುದಾದ ವಿಷಯವಾಗಿದ್ದರೆ—ಅಷ್ಟೇನೂ ರಹಸ್ಯವಲ್ಲದಿದ್ದರೆ, ಮುನಿಗಳೆ, ಇದೇನೆಂದು ತಿಳಿಸಿರಿ" ಎಂದನು. ಆಗ ಧರ್ಮಾತ್ಮನಾದ ಆ ಮುನಿಯು

ನಿರ್ಮಿತಂ ತಪಸಾ ರಾಮ ಮುನಿನಾ ಮಾಂಡಕರ್ಣಿನಾ |
ಸ ಹಿ ತೇಪೇ ತಪಸ್ತೀವ್ರಂ ಮಾಂಡಕರ್ಣಿರ್ಮಹಾಮುನಿಃ || ೧೨

ದಶ ವರ್ಷಸಹಸ್ರಾಣಿ ವಾಯುಭಕ್ಷೋ ಜಲಾಶ್ರಯಃ |
ತತಃ ಪ್ರವ್ಯಥಿತಾಃ ಸರ್ವೇ ದೇವಾಃ ಸಾಗ್ನಿಪುರೋಗಮಾಃ ೧೩

ಅಬ್ರುವನ್ ವಚನಂ ಸರ್ವೇ ಪರಸ್ಪರಸಮಾಗತಾಃ |
ಅಸ್ಮಾಕಂ ಕಸ್ಯಚಿತ್ಸ್ಥಾನಮೇಷ ಪ್ರಾರ್ಥಯತೇ ಮುನಿಃ || ೧೪

ಇತಿ ಸಂವಿಗ್ನಮನಸಃ ಸರ್ವೇ ತೇ ತ್ರಿದಿವೌಕಸಃ |
ತತ್ರ ಕರ್ತುಂ ತಪೋವಿಘ್ನಂ ದೇವೈಃ ಸರ್ವೈರ್ನಿಯೋಜಿತಾಃ || ೧೫

ಪ್ರಧಾನಾಪ್ಸರಸಃ ಪಂಚ ವಿದ್ಯುಚ್ಚಲಿತವರ್ಚಸಃ |
ಅಪ್ಸರೋಭಿಸ್ತತಸ್ತಾಭಿರ್ಮುನಿರ್ದೃಷ್ಟಪರಾವರಃ || ೧೬

ನೀತೋ ಮದನವಶ್ಯತ್ವಂ ಸುರಾಣಾಂ ಕಾರ್ಯಸಿದ್ಧಯೇ |
ತಾಶ್ಚೈವಾಪ್ಸರಸಃ ಪಂಚ ಮುನೇಃ ಪತ್ನೀತ್ವಮಾಗತಾಃ || ೧೭

---

ಸರೋವರದ ಮಹಿಮೆಯೆಲ್ಲವನ್ನೂ ತಿಳಿಸಲಾರಂಭಿಸಿದನು: "ಶ್ರೀರಾಮ, ಇದು ಪಂಚಾಪ್ಸರವೆಂಬ ತಟಾಕ. ಯಾವಾಗಲೂ ಇಲ್ಲಿ ಹೀಗೆಯೆ ಶಬ್ದವು ಕೇಳಿಸುತ್ತದೆ. ಮಾಂಡಕರ್ಣಿಯೆಂಬ ಮುನಿಯು ತನ್ನ ತಪೋಬಲದಿಂದ ಇದನ್ನು ನಿರ್ಮಿಸಿದ್ದಾನೆ. ಅವನು ಬಹುಕಾಲ ತೀವ್ರವಾದ ತಪಸ್ಸನ್ನಾಚರಿಸುತ್ತಿದ್ದನು (೧೦-೧೨). ಹತ್ತುಸಾವಿರ ವರ್ಷಗಳವರೆಗೆ ಗಾಳಿಯನ್ನು ಮಾತ್ರ ಸೇವಿಸುತ್ತ ನೀರಲ್ಲಿ ನಿಂತು ತಪಸ್ಸು ಮಾಡಿದನು. ಆಗ ಅಗ್ನಿಯೇ ಮೊದಲಾದ ದೇವತೆಗಳು ಚಿಂತಾಕ್ರಾಂತರಾಗಿ ಎಲ್ಲರೂ ಕಲೆತು "ಅಬ್ಬಾ ! ಈ ಮುನಿಯು ನಮ್ಮಲ್ಲಿ ಯಾರದೋ ಒಬ್ಬ ದೇವತೆಯ ಪದವಿಯನ್ನು ಕಸಿದುಕೊಳ್ಳುವುದಕ್ಕಾಗಿ ಪ್ರಯತ್ನಿಸಿದ್ದಾನೆ" ಎಂದು ಆಲೋಚಿಸುತ್ತ ವಿಷಣ್ಣರಾದರು (೧೩-೧೪). ಆಮೇಲೆ ದೇವತೆಗಳೆಲ್ಲರೂ ಸೇರಿ ಆ ಮುನಿಯ ತಪಸ್ಸಿಗೆ ಕಲ್ಲುಹಾಕಬೇಕೆಂದೆಣಿಸಿ, ಮಿಂಚಿನಂತೆ ಮಿರುಗುವ ಐವರು ಸುಂದರಿಯರಾದ ಅಪ್ಸರೆಯರನ್ನು ಆ ಕಾರ್ಯಕ್ಕಾಗಿ ನೇಮಿಸಿದರು. ದೇವಕಾರ್ಯಸಿದ್ಧಿಗಾಗಿ ಅವರು ಮುನಿಯನ್ನು ಮನ್ಮಥನ ವಶವಾಗುವಂತೆ ಮಾಡಿದರು. ಮಾಂಡಕರ್ಣಿಯು ಜೀವಪರಮಾತ್ಮರ ಸ್ವರೂಪ

ತಟಾಕೇ ನಿರ್ಮಿತಂ ತಾಸಾಮಸ್ಮಿನ್ನಂತರ್ಹಿತಂ ಗೃಹಮ್ ।
ತಥೈವಾಪ್ಸರಸಃ ಪಂಚ ನಿವಸಂತ್ಯೋ ಯಥಾಸುಖಮ್ ॥ ೧೮

ರಮಯಂತಿ ತಪೋಯೋಗಾನ್ಮುನಿಂ ಯೌವನಮಾಸ್ಥಿತಮ್ ।
ತಾಸಾಂ ಸಂಕ್ರೀಡಮಾನಾನಾಮೇಷ ವಾದಿತ್ರನಿಃಸ್ವನಃ ॥ ೧೯

ಶ್ರೂಯತೇ ಭೂಷಣೋನ್ಮಿಶ್ರೋ ಗೀತಶಬ್ದೋ ಮನೋಹರಃ ।
ಆಶ್ಚರ್ಯಮಿತಿ ತಸ್ಯೈತದ್ವಚನಂ ಭಾವಿತಾತ್ಮನಃ ॥ ೨೦

ರಾಘವಃ ಪ್ರತಿಜಗ್ರಾಹ ಸಹ ಭ್ರಾತ್ರಾ ಮಹಾಯಶಾಃ ।
ಏವಂ ಕಥಯಮಾನಸ್ಯ ದದರ್ಶಾಶ್ರಮಮಂಡಲಮ್ ॥ ೨೧

ಕುಶಚೀರಪರಿಕ್ಷಿಪ್ತಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮಾವೃತಮ್ ।
ಪ್ರವಿಶ್ಯ ಸಹ ವೈದೇಹ್ಯಾ ಲಕ್ಷ್ಮಣೇನ ಚ ರಾಘವಃ ॥ ೨೨

ಉವಾಸ ಮುನಿಭಿಃ ಸರ್ವೈಃ ಪೂಜ್ಯಮಾನೋ ಮಹಾಯಶಾಃ ।
ತಥಾ ತಸ್ಮಿನ್ ಸ ಕಾಕುತ್ಸ್ಥಃ ಶ್ರೀಮತ್ಯಾಶ್ರಮಮಂಡಲೇ ॥ ೨೩

---

ವನ್ನು ಬಲ್ಲ ತತ್ತ್ವಜ್ಞಾನಿಯಾಗಿದ್ದರೂ ಅಪ್ಸರೆಯರ ಮೋಹಪಾಶಕ್ಕೆ ಒಳಗಾದನು. ಪಂಚ ಅಪ್ಸರೆಯರೂ ಆತನಿಗೆ ಪತ್ನಿಯರಾದರು (೧೫-೧೭). ರಾಘವ, ಈ ಸರೋವರದ ಕೆಳಗಡೆ ಆ ಅಪ್ಸರೆಯರಿಗಾಗಿ ವಾಸಭವನವು ನಿರ್ಮಿತವಾಗಿದೆ. ಆ ಮುನಿಯು ತಪೋಬಲದಿಂದ ತಾರುಣ್ಯವನ್ನು ಪಡೆದಿದ್ದಾನೆ. ಐವರು ಅಪ್ಸರೆಯರೂ ಅಲ್ಲಿ ಸುಖವಾಗಿದ್ದು ಮಾಂಡಕರ್ಣಿಯನ್ನು ಸಂತೋಷಪಡಿಸುತ್ತಿದ್ದಾರೆ. ಅವರು ಕ್ರೀಡಿಸುವಾಗ ಈ ವಾದ್ಯಧ್ವನಿ ಬರುತ್ತದೆ. ಒಡವೆಗಳ ಕುಲುಕುಲು ಶಬ್ದ, ಸಂಗೀತದ ಇಂಚರ—ಇವೆಲ್ಲ ಅವರದು" ಎಂದು ನುಡಿದನು (೧೮-೧೯). ಆ ಮುನಿಯ ವಚನವನ್ನಾಲಿಸಿ ಶ್ರೀರಾಮಲಕ್ಷ್ಮಣರು 'ಆಹಾ ! ಆಶ್ಚರ್ಯ ! ' ಎಂದು ಉದ್ಗರಿಸಿದರು. ಧರ್ಮಭೃತನು ಹೀಗೆ ಕಥೆಯನ್ನು ಹೇಳುತ್ತಿರಲು, ಮುಂದೆ ಅನೇಕ ಆಶ್ರಮಗಳಿರುವ ಒಂದು ತಪೋವನವು ಶ್ರೀರಾಮನಿಗೆ ಕಾಣಿಸಿತು. ದರ್ಭೆ, ನಾರುಬಟ್ಟೆಗಳು ಹರಡಿದ್ದವು. ಅದು ಬ್ರಹ್ಮತೇಜಸ್ಸಿನಿಂದ ವಿರಾಜಿಸುತ್ತಿತ್ತು. ಶ್ರೀರಾಮನು ಸೀತಾಲಕ್ಷ್ಮಣರೊಡನೆ ಪ್ರವೇಶಿಸಿದನು (೨೦-೨೨). ಅಲ್ಲಿದ್ದ ಸಕಲಮುನಿಗಳೂ ಇವರನ್ನು ಸ್ವಾಗತಿಸಿ ಸತ್ಕರಿಸಿದರು. ಕೀರ್ತಿಶಾಲಿಯಾದ

ಉಷಿತ್ವಾ ತು ಸುಖಂ ತತ್ರ ಪೂಜ್ಯಮಾನೋ ಮಹರ್ಷಿಭಿಃ ।
ಜಗಾಮ ಚಾಶ್ರಮಾಂಸ್ತೇಷಾಂ ಪರ್ಯಾಯೇಣ ತಪಸ್ವಿನಾಮ್ ॥

ತೇಷಾಮುಷಿತವಾನ್ ಪೂರ್ವಂ ಸಕಾಶೇ ಸ ಮಹಾಸ್ತ್ರವಿತ್ ।
ಕ್ವಚಿತ್ಪರಿದಶಾನ್ ಮಾಸಾನೇಕಂ ಸಂವತ್ಸರಂ ಕ್ವಚಿತ್ ॥ ೨೫

ಕ್ವಚಿಚ್ಚ ಚತುರೋ ಮಾಸಾನ್ ಪಂಚ ಷಟ್ ಚಾಪರಾನ್ ಕ್ವಚಿತ್ ।
ಅಪರತ್ರಾಧಿಕಂ ಮಾಸಾದಪ್ಯರ್ಧಮಧಿಕಂ ಕ್ವಚಿತ್ ॥ ೨೬

ತ್ರೀನ್ ಮಾಸಾನಷ್ಟ ಮಾಸಾಂಶ್ಚ ರಾಘವೋ ನ್ಯವಸತ್ಸುಖಮ್ ।
ಏವಂ ಸಂವಸತಸ್ತಸ್ಯ ಮುನೀನಾಮಾಶ್ರಮೇಷು ವೈ ॥ ೨೭

ರಮತಶ್ಚಾನುಕೂಲ್ಯೇನ ಯಯುಃ ಸಂವತ್ಸರಾ ದಶ ।
ಪರಿವೃತ್ಯ ಚ ಧರ್ಮಜ್ಞೋ ರಾಘವಃ ಸಹ ಸೀತಯಾ ॥ ೨೮

ಸುತೀಕ್ಷ್ಣಸ್ಯಾಶ್ರಮೇ ಶ್ರೀಮಾನ್ ಪುನರೇವಾಜಗಾಮ ಹ ।
ಸ ತಮಾಶ್ರಮಮಾಸಾದ್ಯ ಮುನಿಭಿಃ ಪ್ರತಿಪೂಜಿತಃ ॥ ೨೯

---

ಕಾಕುತ್ಸ್ಥನು ಮಹರ್ಷಿಗಳಿಂದ ಸತ್ಕೃತನಾಗಿ ಅಲ್ಲಿ ವಾಸವಾಗಿದ್ದನು. ಆ ತಪಸ್ವಿಗಳ ಆಶ್ರಮಗಳಲ್ಲಿ ಸಂಚರಿಸುತ್ತ ಅವರೊಡನೆ ಒಂದಲ್ಲ ಒಂದು ಆಶ್ರಮದಲ್ಲಿ ಕಾಲವನ್ನು ಕಳೆದನು (೨೩-೨೪). ಅಸ್ತ್ರವಿದ್ಯಾವಿಶಾರದನಾದ ಆ ಧೀರನು ಕೆಲವು ಆಶ್ರಮಗಳಲ್ಲಿ ಸುಮಾರು ಹತ್ತು ತಿಂಗಳು, ಕೆಲವು ಕಡೆ ಒಂದು ವರ್ಷ, ಕೆಲವೆಡೆ ನಾಲ್ಕು, ಐದು ಅಥವಾ ಆರು ತಿಂಗಳು ಇದ್ದನು. ಇನ್ನೊಂದು ಆಶ್ರಮದಲ್ಲಿ ಒಂದು ತಿಂಗಳಿಗಿಂತ ಸ್ವಲ್ಪ ಹೆಚ್ಚಾಗಿಯೂ, ಇನ್ನೊಂದೆಡೆ ಒಂದೂವರೆ ತಿಂಗಳವರೆಗೂ ಇದ್ದನು (೨೫-೨೬). ಹೀಗೆ ಶ್ರೀರಾಮನು ಒಂದು ಆಶ್ರಮದಲ್ಲಿ ಮೂರು ತಿಂಗಳವರೆಗೂ ಇನ್ನೊಂದರಲ್ಲಿ ಎಂಟು ತಿಂಗಳವರೆಗೂ ಸುಖದಿಂದ ವಾಸವಾಗಿದ್ದುದುಂಟು. ಈ ಪ್ರಕಾರವಾಗಿ ಮುನಿಗಳ ಆಶ್ರಮಗಳಲ್ಲಿ ಸಂತೋಷದಿಂದ ಅವರಿಗೆ ಸಹಾಯಮಾಡುತ್ತಾ ಇರಲು, ಹತ್ತು ವರ್ಷಗಳು ಸಂದವು. ಧರ್ಮಜ್ಞನಾದ ಶ್ರೀರಾಮನು ಸೀತಾಸಮೇತನಾಗಿ ಸುತ್ತಾಡುತ್ತ, ಪುನಃ ಸುತೀಕ್ಷ್ಣಮುನಿಗಳ ಆಶ್ರಮಕ್ಕೆ ಆಗಮಿಸಿದನು (೨೭-೨೮). ಆ ವೀರನು ಅಲ್ಲಿದ್ದ ಋಷಿಗಳ ಆತಿಥ್ಯವನ್ನು ಸ್ವೀಕರಿಸುತ್ತ ಸುತೀಕ್ಷ್ಣರ ಆಶ್ರಮದಲ್ಲಿಯೂ ಕೆಲವುಕಾಲವಿದ್ದನು.

ತತ್ರಾಪಿ ನ್ಯವಸದ್ರಾಮಃ ಕಿಂಚಿತ್ಕಾಲಮರಿಂದಮಃ ।
ಅಥಾಶ್ರಮಸ್ಥೋ ವಿನಯಾತ್ಕದಾಚಿತ್ತಂ ಮಹಾಮುನಿಮ್ ॥ ೩೦

ಉಪಾಸೀನಃ ಸ ಕಾಕುತ್ಸ್ಥಃ ಸುತೀಕ್ಷ್ಣಮಿದಮಬ್ರವೀತ್ ।
ಅಸ್ಮಿನ್ನರಣ್ಯೇ ಭಗವನ್ನಗಸ್ತ್ಯೋ ಮುನಿಸತ್ತಮಃ ೩೧

ವಸತೀತಿ ಮಯಾ ನಿತ್ಯಂ ಕಥಾಃ ಕಥಯತಾಂ ಶ್ರುತಮ್ ।
ನ ತು ಜಾನಾಮಿ ತಂ ದೇಶಂ ವನಸ್ಯಾಸ್ಯ ಮಹತ್ತಯಾ ॥ ೩೨

ಕುತ್ರಾಶ್ರಮಮಿದಂ ಪುಣ್ಯಂ ಮಹರ್ಷೇಸ್ತಸ್ಯ ಧೀಮತಃ ।
ಪ್ರಸಾದಾತ್ತತ್ರಭವತಃ ಸಾನುಜಃ ಸಹ ಸೀತಯಾ ॥ ೩೩

ಅಗಸ್ತ್ಯಮಭಿಗಚ್ಛೇಯಮಭಿವಾದಯಿತುಂ ಮುನಿಮ್ ।
ಮನೋರಥೋ ಮಹಾನೇಷ ಹೃದಿ ಮೇ ಪರಿವರ್ತತೇ ॥ ೩೪

ಯದಹಂ ತಂ ಮುನಿವರಂ ಶುಶ್ರೂಷೇಯಮಪಿ ಸ್ವಯಮ್ ।
ಇತಿ ರಾಮಸ್ಯ ಸ ಮುನಿಃ ಶ್ರುತ್ವಾ ಧರ್ಮಾತ್ಮನೋ ವಚಃ ॥ ೩೫

---

ಒಂದು ದಿನ ವಿನಯದಿಂದ ಸುತೀಕ್ಷ್ಣರ ಬಳಿಗೆ ಹೋಗಿ ಆ ಮಹರ್ಷಿಗಳನ್ನು ಕುರಿತು "ಭಗವನ್, ಅಗಸ್ತ್ಯಮಹಾಮುನಿಗಳು ಇದೇ ಅರಣ್ಯದಲ್ಲಿ ವಾಸವಾಗಿದ್ದಾರಂತೆ. ಅವರ ವಿಷಯವಾಗಿ ಜನರು ಅನೇಕ ವೃತ್ತಾಂತಗಳನ್ನು ಹೇಳುತ್ತಾರೆ. ಅವರಿಂದ ಈ ಮಾತನ್ನು ಕೇಳಿದ್ದೇನೆ. ಈ ಅರಣ್ಯವು ಬಹಳ ದೊಡ್ಡದು. ಅವರು ಎಲ್ಲಿರುವರೋ ನನಗೆ ತಿಳಿಯದು (೨೯-೩೨). ಜ್ಞಾನಿಗಳಾದ ಆ ಮಹರ್ಷಿಗಳ ಪುಣ್ಯಾಶ್ರಮವೆಲ್ಲಿದೆ ? ತಮ್ಮ ಅನುಗ್ರಹದಿಂದ ನಾನು ಅಲ್ಲಿಗೆ ಹೋಗಬೇಕೆಂದಿದ್ದೇನೆ. ನನ್ನ ತಮ್ಮನನ್ನೂ ಸೀತೆಯನ್ನೂ ಕರೆದುಕೊಂಡುಹೋಗಿ ಅಗಸ್ತ್ಯಮುನಿಗಳಿಗೆ ಅಭಿವಾದನೆಮಾಡಬೇಕೆಂದು ದೊಡ್ಡ ಆಸೆಯಾಗಿದೆ. ಈ ಅಭಿಲಾಷೆ ಬಹುದಿನಗಳಿಂದ ಮನಸ್ಸಿನಲ್ಲಿ ಸುಳಿದಾಡುತ್ತಿದೆ. ಆ ಮುನಿಶ್ರೇಷ್ಠರನ್ನು ಕಂಡು ಅವರ ಶುಶ್ರೂಷೆಮಾಡಲು ಬಯಕೆಯಾಗಿದೆ" ಎಂದು ನಿವೇದಿಸಿದನು (೩೩-೩೪). ಧರ್ಮಾತ್ಮನಾದ ಶ್ರೀರಾಮನ ಈ ಪ್ರಾರ್ಥನೆಯನ್ನು ಕೇಳಿ ಸುತೀಕ್ಷ್ಣ ಮುನಿಗಳು ಸಂತುಷ್ಟರಾಗಿ "ವತ್ಸ-ರಾಘವ, ನಾನೂ ಇದನ್ನೇ ಹೇಳಬೇಕೆಂದಿದ್ದೆನು. ಸೀತಾ

ಸುತೀಕ್ಷ್ಣಃ ಪ್ರತ್ಯುವಾಚೇದಂ ಪ್ರೀತೋ ದಶರಥಾತ್ಮಜಮ್ ।
ಅಹಮಪ್ಯೇತದೇವ ತ್ವಾಂ ವಕ್ತುಕಾಮಃ ಸಲಕ್ಷ್ಮಣಮ್ ॥ ೩೬

ಅಗಸ್ತ್ಯಮಭಿಗಚ್ಛೇತಿ ಸೀತಯಾ ಸಹ ರಾಘವ ।
ದಿಷ್ಟ್ಯಾ ತ್ವಿದಾನೀಮರ್ಥೇಽಸ್ಮಿನ್ ಸ್ವಯಮೇವ ಬ್ರವೀಷಿ ಮಾಮ್ ॥

ಅಹಮಾಖ್ಯಾಮಿ ತೇ ವತ್ಸ ಯತ್ರಾಗಸ್ತ್ಯೋ ಮಹಾಮುನಿಃ ।
ಯೋಜನಾನ್ಯಾಶ್ರಮಾದಸ್ಮಾತ್ತಥಾ ಚತ್ವಾರಿ ವೈ ತತಃ ೩೮

ದಕ್ಷಿಣೇನ ಮಹಾನ್ ಶ್ರೀಮಾನಗಸ್ತ್ಯಭ್ರಾತುರಾಶ್ರಮಃ ।
ಸ್ಥಲೀಪ್ರಾಯೇ ವನೋದ್ದೇಶೇ ಪಿಪ್ಪಲೀವನಶೋಭಿತೇ ॥ ೩೯

ಬಹುಪುಷ್ಪಫಲೇ ರಮ್ಯೇ ನಾನಾಶಕುನಿನಾದಿತೇ ।
ಪದ್ಮಿನ್ಯೋ ವಿವಿಧಾಸ್ತತ್ರ ಪ್ರಸನ್ನಸಲಿಲಾಃ ಶಿವಾಃ ॥ ೪೦

ಹಂಸಕಾರಂಡವಾಕೀರ್ಣಾಶ್ಚಕ್ರವಾಕೋಪಶೋಭಿತಾಃ ।
ತತ್ರೈಕಾಂ ರಜನೀಂ ವ್ಯುಷ್ಯ ಪ್ರಭಾತೇ ರಾಮ ಗಮ್ಯತಾಮ್ ॥ ೪೧

---

ಲಕ್ಷ್ಮಣರೊಡನೆ ಹೋಗಿ ಅಗಸ್ತ್ಯಮುನಿಗಳನ್ನು ಸಂದರ್ಶಿಸಬೇಕೆಂದು ತಿಳಿಸಲು ಉದ್ದೇಶಿಸಿದ್ದೆನು (೩೫-೩೬). ನೀನಾಗಿ ಈ ವಿಷಯವನ್ನು ಪ್ರಸ್ತಾಪಿಸಿದ್ದು ಒಳ್ಳೆಯದಾಯಿತು. ವತ್ಸ, ಅಗಸ್ತ್ಯಮಹರ್ಷಿಗಳಿರುವ ಸ್ಥಳವನ್ನು ನಿನಗೆ ಹೇಳುತ್ತೇನೆ. ಇಲ್ಲಿಂದ ದಕ್ಷಿಣಕ್ಕೆ ನಾಲ್ಕು ಯೋಜನಗಳ ದೂರ ಹೋದರೆ, ಸಂಪದ್ಭರಿತವಾದ ದೊಡ್ಡ ಆಶ್ರಮ ಸಿಗುವುದು (೩೭-೩೮). ಅದು ಅಗಸ್ತ್ಯರ ತಮ್ಮನ ಆಶ್ರಮ. ಆ ವನಪ್ರದೇಶವು ಸಹಜರಮಣೀಯವಾಗಿದೆ. ಹಿಪ್ಪಲಿ ಗಿಡಗಳು ಹೇರಳವಾಗಿ ಬೆಳೆದಿವೆ. ಹೂಹಣ್ಣುಗಳು ಬೇಕಾದಷ್ಟಿವೆ. ಹಕ್ಕಿಗಳ ಗಾನದಿಂದ ಮನೋಹರವಾಗಿದೆ. ತಿಳಿನೀರಿನಿಂದ ತುಳುಕುವ ತಾವರೆಯ ಕೊಳಗಳು ಬಹಳ ಇವೆ (೩೯-೪೦). ಅವುಗಳಲ್ಲಿ ಹಂಸ, ಕಾರಂಡವ, ಚಕ್ರವಾಕ–ಮುಂತಾದ ನೀರುಹಕ್ಕಿಗಳು ತುಂಬಿವೆ. ರಾಮ, ಆ ಆಶ್ರಮದಲ್ಲಿ ಒಂದು ರಾತ್ರಿ ಇದ್ದು ಮಾರನೆಯ ಮುಂಜಾನೆ ಮುಂದೆ ಹೋಗಬಹುದು. ಆಶ್ರಮದ ದಕ್ಷಿಣಕ್ಕೆ ಒಂದು ವನಪಂಕ್ತಿಯಿದೆ. ಅದರ ಪಕ್ಕದಲ್ಲಿ ಒಂದು ಯೋಜನ ದೂರ ಹೋದರೆ

ದಕ್ಷಿಣಾಂ ದಿಶಮಾಸ್ಥಾಯ ವನಷಂಡಸ್ಯ ಪಾರ್ಶ್ವತಃ ।
ತತ್ರಾಗಸ್ತ್ಯಾಶ್ರಮಪದಂ ಗತ್ವಾ ಯೋಜನಮಂತರಮ್ ॥ ೪೨

ರಮಣೀಯೇ ವನೋದ್ದೇಶೇ ಬಹುಪಾದಪಸಂವೃತೇ ।
ರಂಸ್ಯತೇ ತತ್ರ ವೈದೇಹೀ ಲಕ್ಷ್ಮಣಶ್ಚ ಸಹ ತ್ವಯಾ ॥ ೪೩

ಸ ಹಿ ರಮ್ಯೋ ವನೋದ್ದೇಶೋ ಬಹುಪಾದಪಸಂಕುಲಃ ।
ಯದಿ ಬುದ್ಧಿಃ ಕೃತಾ ದ್ರಷ್ಟುಮಗಸ್ತ್ಯಂ ತಂ ಮಹಾಮುನಿಮ್ ॥ ೪೪

ಅದ್ಯೈವ ಗಮನೇ ಬುದ್ಧಿಂ ರೋಚಯಸ್ವ ಮಹಾಯಶಃ ।
ಇತಿ ರಾಮೋ ಮುನೇಃ ಶ್ರುತ್ವಾ ಸಹ ಭ್ರಾತ್ರಾಭಿವಾದ್ಯ ಚ ॥ ೪೫

ಪ್ರತಸ್ಥೇಽಗಸ್ತ್ಯಮುದ್ದಿಶ್ಯ ಸಾನುಜಃ ಸೀತಯಾ ಸಹ ।
ಪಶ್ಯನ್ ವನಾನಿ ರಮ್ಯಾಣಿ ಪರ್ವತಾಂಶ್ಚಾಭ್ರಸಂನಿಭಾನ್ ॥ ೪೬

ಸರಾಂಸಿ ಸರಿತಶ್ಚೈವ ಪಥಿ ಮಾರ್ಗವಶಾನುಗಾಃ ।
ಸುತೀಕ್ಷ್ಣೇನೋಪದಿಷ್ಟೇನ ಗತ್ವಾ ತೇನ ಪಥಾ ಸುಖಮ್ ॥ ೪೭

ಇದಂ ಪರಮಸಂಹೃಷ್ಟೋ ವಾಕ್ಯಂ ಲಕ್ಷ್ಮಣಮಬ್ರವೀತ್ ।
ಏತದೇವಾಶ್ರಮಪದಂ ನೂನಂ ತಸ್ಯ ಮಹಾತ್ಮನಃ ॥ ೪೮

---

ಅಗಸ್ತ್ಯರ ಆಶ್ರಮವು ಸಿಗುತ್ತದೆ. ಆ ವನಪ್ರದೇಶವು ಮರಗಳಿಂದ ದಟ್ಟವಾಗಿ ಬಹು ರಮಣೀಯವಾಗಿದೆ. ಅಲ್ಲಿ ವೈದೇಹಿಯೂ ಆನಂದದಿಂದ ವಿನೋದಿಸು ವಳು. ನೀನೂ ಲಕ್ಷ್ಮಣನೂ ಸಹ ಆ ಸ್ಥಳವನ್ನು ಮೆಚ್ಚುವಿರಿ (೪೧-೪೩). ಏಕೆಂದರೆ, ವಿವಿಧವೃಕ್ಷಗಳಿಂದ ತುಂಬಿದ ಆ ವನವು ಅಷ್ಟು ರಮ್ಯವಾಗಿದೆ! ಅಗಸ್ತ್ಯಮಹಾಮುನಿಗಳನ್ನು ಕಾಣಲು ನೀನು ನಿಶ್ಚಯಿಸಿದ್ದರೆ, ಶ್ರೀರಾಮ, ಈ ದಿನವೇ ಅತ್ತ ಪ್ರಯಾಣಮಾಡು" ಎಂದು ಹೇಳಿದರು (೪೪). ಆಗ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸುತೀಕ್ಷ್ಣರಿಗೆ ನಮಸ್ಕರಿಸಿ ಅಲ್ಲಿಂದ ಪ್ರಯಾಣಮಾಡಿ ದನು. ಆತನು ಸೀತೆಯನ್ನೂ ತಮ್ಮನನ್ನೂ ಜೊತೆಗೂಡಿ, ಚೆಲುವಾದ ಕಾಡು ಗಳನ್ನೂ ಮುಗಿಲಿನಂತಿದ್ದ ಬೆಟ್ಟಗಳನ್ನೂ ಹಳ್ಳಕೊಳ್ಳಗಳನ್ನೂ ದಾರಿಯಲ್ಲಿ ನೋಡಿ ನಲಿಯುತ್ತ, ಸುತೀಕ್ಷ್ಣರು ಹೇಳಿದ ದಾರಿಯನ್ನು ಹಿಡಿದು ಹಾಗೆಯೇ ಹೋದನು (೪೫-೪೭). ಅಲ್ಲಿಯ ಚೆಲುವನ್ನು ಕಂಡು ಶ್ರೀರಾಮನು ಹಿರಿಹಿಗ್ಗಿ ಲಕ್ಷ್ಮಣ

ಅಗಸ್ತ್ಯಸ್ಯ ಮುನೇರ್ಭ್ರಾತುರ್ದೃಶ್ಯತೇ ಪುಣ್ಯಕರ್ಮಣಃ ।
ಯಥಾ ಹಿ ಮೇ ವನಸ್ಯಾಸ್ಯ ಜ್ಞಾತಾಃ ಪಥಿ ಸಹಸ್ರಶಃ ॥ ೪೯

ಸಂನತಾಃ ಫಲಭಾರೇಣ ಪುಷ್ಪಭಾರೇಣ ಚ ದ್ರುಮಾಃ ।
ಪಿಪ್ಪಲೀನಾಂ ಚ ಪಕ್ವಾನಾಂ ವನಾದಸ್ಮಾದುಪಾಗತಃ ॥ ೫೦

ಗಂಧೋಽಯಂ ಪವನೋತ್ಕ್ಷಿಪ್ತಃ ಸಹಸಾ ಕಟುಕೋದಯಃ ।
ತತ್ರ ತತ್ರ ಚ ದೃಶ್ಯಂತೇ ಸಂಕ್ಷಿಪ್ತಾಃ ಕಾಷ್ಠಸಂಚಯಾಃ ॥ ೫೧

ಲೂನಾಶ್ಚ ಪಥಿ ದೃಶ್ಯಂತೇ ದರ್ಭಾ ವೈಡೂರ್ಯವರ್ಚಸಃ ।
ಏತಚ್ಚ ವನಮಧ್ಯಸ್ಥಂ ಕೃಷ್ಣಾಭ್ರಶಿಖರೋಪಮಮ್ ॥ ೫೨

ಪಾವಕಸ್ಯಾಶ್ರಮಸ್ಥಸ್ಯ ಧೂಮಾಗ್ರಂ ಸಂಪ್ರದೃಶ್ಯತೇ ।
ವಿವಿಕ್ತೇಷು ಚ ತೀರ್ಥೇಷು ಕೃತಸ್ನಾನಾ ದ್ವಿಜಾತಯಃ ॥ ೫೩

ಪುಷ್ಪೋಪಹಾರಂ ಕುರ್ವಂತಿ ಕುಸುಮೈಃ ಸ್ವಯಮಾರ್ಜಿತೈಃ ।
ತತ್ಸುತೀಕ್ಷ್ಣಸ್ಯ ವಚನಂ ಯಥಾ ಸೌಮ್ಯ ಮಯಾ ಶ್ರುತಮ್ ॥ ೫೪

---

ನನ್ನು ಕುರಿತು ಹೀಗೆಂದನು : "ತಮ್ಮ, ಅಲ್ಲಿ ಕಾಣುವುದೇ ಮಹಾತ್ಮರಾದ ಅಗಸ್ತ್ಯಸೋದರರ ಆಶ್ರಮವಾಗಿರಬೇಕು. (ಸುತೀಕ್ಷ್ಣರು ಹೇಳಿದಂತೆ) ಈ ವನದಲ್ಲಿ ಮರಗಳು ಹೂಹಣ್ಣುಗಳ ಭಾರದಿಂದ ಬಳುಕುತ್ತಿವೆ (೪೮-೪೯). ಹಿಪ್ಪಲೀ ಹಣ್ಣುಗಳ ಒಗರುವಾಸನೆಯನ್ನು ಗಾಳಿಯು ತರುತ್ತಿದೆ. ಅಲ್ಲಲ್ಲಿ ಕಟ್ಟಿಗೆಯ ರಾಶಿಯನ್ನು ಪೇರಿಸಿರುವುದು ಕಾಣುತ್ತದೆ. ವೈಡೂರ್ಯದಂತೆ ಹೊಳೆಯುವ ದರ್ಭೆಗಳನ್ನು ಋಷಿಗಳು ಕೊಯ್ದು ದಾರಿಯಲ್ಲಿಟ್ಟಿರುವುದು ಕಾಣಿಸುತ್ತದೆ (೫೦-೫೧). ಆಶ್ರಮದಲ್ಲಿ ಇರುವ ಅಗ್ನಿಹೋತ್ರದ ಹೊಗೆಯು ಕಪ್ಪು ಮೋಡದಂತೆ ಅಲೆಯಲೆಯಾಗಿ ವನಮಧ್ಯದಿಂದ ಏಳುವುದು ಗೋಚರಿಸುತ್ತದೆ. ದ್ವಿಜೋತ್ತಮರು ಪವಿತ್ರತೀರ್ಥಗಳಲ್ಲಿ ಮಿಂದು ತಮ್ಮ ಕೈಗಳಿಂದಲೇ ಹೂಗಳನ್ನು ಕಿತ್ತು ತಂದು ಪುಷ್ಪಬಲಿಯನ್ನು ನಡೆಸುತ್ತಿದ್ದಾರೆ. ಆದ್ದರಿಂದ, ಲಕ್ಷ್ಮಣ, ಸುತೀಕ್ಷ್ಣರು ತಿಳಿಸಿದಂತೆ ಇದು ಅಗಸ್ತ್ಯಭ್ರಾತೃವಿನ ಪುಣ್ಯಾಶ್ರಮವೇ ಆಗಿರಬೇಕು (೫೨-೫೪).

ಅಗಸ್ತ್ಯಸ್ಯಾಶ್ರಮೋ ಭ್ರಾತುರ್ನೂನಮೇಷ ಭವಿಷ್ಯತಿ ।
ನಿಗೃಹ್ಯ ತರಸಾ ಮೃತ್ಯುಂ ಲೋಕಾನಾಂ ಹಿತಕಾಮ್ಯಯಾ ॥ ೫೫

ಯಸ್ಯ ಭ್ರಾತ್ರಾ ಕೃತೇಯಂ ದಿಕ್ಶರಣ್ಯಾ ಪುಣ್ಯಕರ್ಮಣಾ ।
ಇಹೈಕದಾ ಕಿಲ ಕ್ರೂರೋ ವಾತಾಪಿರಪಿ ಚೇಲ್ವಲಃ ॥ ೫೬

ಭ್ರಾತರೌ ಸಹಿತಾವಾಸ್ತಾಂ ಬ್ರಾಹ್ಮಣಘ್ನೌ ಮಹಾಸುರೌ ।
ಧಾರಯನ್ ಬ್ರಾಹ್ಮಣಂ ರೂಪಮಿಲ್ವಲಃ ಸಂಸ್ಕೃತಂ ವದನ್ ॥ ೫೭

ಆಮಂತ್ರಯತಿ ವಿಪ್ರಾನ್ ಸ್ಮ ಶ್ರಾದ್ಧಮುದ್ದಿಶ್ಯ ನಿರ್ಘೃಣಃ ।
ಭ್ರಾತರಂ ಸಂಸ್ಕೃತಂ ಕೃತ್ವಾ ತತಸ್ತಂ ಮೇಷರೂಪಿಣಮ್ ॥ ೫೮

ತಾನ್ ದ್ವಿಜಾನ್ ಭೋಜಯಾಮಾಸ ಶ್ರಾದ್ಧದೃಷ್ಟೇನ ಕರ್ಮಣಾ ।
ತತೋ ಭುಕ್ತವತಾಂ ತೇಷಾಂ ವಿಪ್ರಾಣಾಮಿಲ್ವಲೋಽಬ್ರವೀತ್ ॥

ವಾತಾಪೇ ನಿಷ್ಕ್ರಮಸ್ವೇತಿ ಸ್ವರೇಣ ಮಹತಾ ವದನ್ ।
ತತೋ ಭ್ರಾತುರ್ವಚಃ ಶ್ರುತ್ವಾ ವಾತಾಪಿರ್ಮೇಷವನ್ನದನ್ ॥ ೬೦

---

ಈ ಋಷಿಯ ಭ್ರಾತೃಗಳಾದ ಅಗಸ್ತ್ಯರು ಇಲ್ಲಿದ್ದ ಜನರಿಗೆ ಒದಗುತ್ತಿದ್ದ ಮೃತ್ಯುವನ್ನು ತಮ್ಮ ತಪೋಬಲದಿಂದ ತಡೆದರು. ಪುಣ್ಯಾತ್ಮರಾದ ಆ ಮಹರ್ಷಿಗಳು ಲೋಕಕಲ್ಯಾಣವನ್ನು ಬಯಸಿ ಈ ದಕ್ಷಿಣದಿಕ್ಕಿನಲ್ಲಿ ನೆಲೆಸಿದ್ದಾರೆ. ಒಂದು ಕಾಲದಲ್ಲಿ ವಾತಾಪಿ ಇಲ್ವಲರೆಂಬ ಕ್ರೂರರಾದ ಅಣ್ಣತಮ್ಮಂದಿರು ಇಲ್ಲಿ ಇದ್ದರು. ಆ ರಾಕ್ಷಸರು ಇಲ್ಲಿದ್ದ ಬ್ರಾಹ್ಮಣರನ್ನು ಕೊಲ್ಲುತ್ತಿದ್ದರು. ಇಲ್ವಲನು ಬ್ರಾಹ್ಮಣನ ರೂಪವನ್ನು ಧರಿಸಿ ಸಂಸ್ಕೃತದಲ್ಲಿ ಮಾತನಾಡುತ್ತಿದ್ದನು (೫೫–೫೭). ತಾನು ಶ್ರಾದ್ಧಮಾಡಬೇಕಾಗಿದೆಯೆಂದು ಹೇಳಿ ಬ್ರಾಹ್ಮಣರಿಗೆ ನಿಮಂತ್ರಣವನ್ನು ಕೊಟ್ಟು ಕರೆಯುತ್ತಿದ್ದನು. ಅನಂತರ ಆ ನಿರ್ದಯನಾದ ರಾಕ್ಷಸನು ತನ್ನ ಮನೆಯಲ್ಲಿ ಮೇಕೆಯ ರೂಪದಿಂದಿದ್ದ ತಮ್ಮನಾದ ವಾತಾಪಿಯನ್ನು ಕೊಯ್ದು ಅಡಿಗೆಮಾಡಿ, ಆ ಬ್ರಾಹ್ಮಣರಿಗೆ ವಿಧಿವತ್ತಾಗಿ ಭೋಜನಮಾಡಿಸುತ್ತಿದ್ದನು. (೫೮–೫೯). ಬ್ರಾಹ್ಮಣರ ಭೋಜನವಾದಮೇಲೆ ಇಲ್ವಲನು "ವಾತಾಪಿ, ಹೊರಗೆ ಬಾ !" ಎಂದು ಗಟ್ಟಿಯಾಗಿ ವಾತಾಪಿಯನು ಕರೆಯುತ್ತಿದ್ದನು. • ಅಣ್ಣನ ಮಾತನ್ನು

ಭಿತ್ತ್ವಾ ಭಿತ್ತ್ವಾ ಶರೀರಾಣಿ ಬ್ರಾಹ್ಮಣಾನಾಂ ವಿನಿಷ್ಪತತ್ ।
ಬ್ರಾಹ್ಮಣಾನಾಂ ಸಹಸ್ರಾಣಿ ತೈರೇವಂ ಕಾಮರೂಪಿಭಿಃ ॥ ೬೧

ವಿನಾಶಿತಾನಿ ಸಂಹತ್ಯ ನಿತ್ಯಶಃ ಪಿಶಿತಾಶನೈಃ ।
ಅಗಸ್ತ್ಯೇನ ತದಾ ದೇವೈಃ ಪ್ರಾರ್ಥಿತೇನ ಮಹರ್ಷಿಣಾ ॥ ೬೨

ಅನುಭೂಯ ಕಿಲ ಶ್ರಾದ್ಧೇ ಭಕ್ಷಿತಃ ಸ ಮಹಾಸುರಃ ।
ತತಃ ಸಂಪನ್ನಮಿತ್ಯುಕ್ತ್ವಾ ದತ್ತ್ವಾ ಹಸ್ತೋದಕಂ ತತಃ ॥ ೬೩

ಭ್ರಾತರಂ ನಿಷ್ಕ್ರಮಸ್ವೇತಿ ಚೇಲ್ವಲಃ ಸೋಽಭ್ಯಭಾಷತ ।
ಸ ತಂ ತಥಾ ಭಾಷಮಾಣಂ ಭ್ರಾತರಂ ವಿಪ್ರಘಾತಿನಮ್ ॥ ೬೪

ಅಬ್ರವೀತ್ಪ್ರಹಸನ್ ಧೀಮಾನಗಸ್ತ್ಯೋ ಮುನಿಸತ್ತಮಃ ।
ಕುತೋ ನಿಷ್ಕ್ರಮಿತುಂ ಶಕ್ತಿರ್ಮಯಾ ಜೀರ್ಣಸ್ಯ ರಕ್ಷಸಃ ॥ ೬೫

ಭ್ರಾತುಸ್ತೇ ಮೇಷರೂಪಸ್ಯ ಗತಸ್ಯ ಯಮಸಾದನಮ್ ।
ಅಥ ತಸ್ಯ ವಚಃ ಶ್ರುತ್ವಾ ಭ್ರಾತುರ್ನಿಧನಸಂಶ್ರಯಮ್ ॥ ೬೬

---

ಕೇಳಿದೊಡನೆ ವಾತಾಪಿಯು ಮೇಕೆಯಂತೆ 'ಮೇ! ಮೇ!' ಎಂದು ಅರಚುತ್ತ ಆ ಬ್ರಾಹ್ಮಣರ ಶರೀರವನ್ನು ಭೇದಿಸಿಕೊಂಡು ಹೊರಗೆ ಬರುತ್ತಿದ್ದನು (೬೦-೬೧). ಈ ಪ್ರಕಾರ ಮಾಯಾವಿಗಳಾದ ಆ ರಾಕ್ಷಸರು ಸಾವಿರಾರುಮಂದಿ ಬ್ರಾಹ್ಮಣರನ್ನು ಕೊಂದರು. ಹೀಗಿರಲು ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ ಒಮ್ಮೆ ಅಗಸ್ತ್ಯ ಮುನಿಗಳು ಇಲ್ವಲನ ನಿಮಂತ್ರಣಕ್ಕೆ ಒಪ್ಪಿದರು. ಅವರು ಶ್ರಾದ್ಧದಲ್ಲಿ ವಾತಾಪಿಯ ಮಾಂಸವನ್ನು ಭಕ್ಷಿಸಿದರು. ಇಲ್ವಲನು ಅಗಸ್ತ್ಯರನ್ನು ಕುರಿತು "ತೃಪ್ತಿಯಾಯಿತೆ?" ಎಂದು ಕೇಳಿ ಉತ್ತರಾಪೋಶನವನ್ನು ಹಾಕಿದನು (೬೨-೬೩). ಅನಂತರ ಇಲ್ವಲನು "ವಾತಾಪಿ, ಹೊರಗೆ ಬಾ!" ಎಂದು ಕರೆದನು. ಹೀಗೆ ತಮ್ಮನನ್ನು ಕರೆಯುತ್ತಿದ್ದ ಬ್ರಹ್ಮಘಾತುಕನಾದ ಇಲ್ವಲನನ್ನು ನೋಡಿ ಅಗಸ್ತ್ಯಮಹರ್ಷಿಗಳು ನಗುತ್ತ "ಹೊರಗೆ ಬರಲು ಅವನಿಗೆಲ್ಲಿದೆ ಸಾಮರ್ಥ್ಯ? ಆ ರಾಕ್ಷಸನು ನನ್ನ ಹೊಟ್ಟೆಯಲ್ಲಿ ಜೀರ್ಣವಾದನು! (೬೪-೬೫). ನಿನ್ನ ತಮ್ಮ ಮೇಕೆಯ ರೂಪ ದಿಂದ ಬಂದಿದ್ದನಲ್ಲವೆ! ಅವನೀಗ ಯಮಲೋಕವನ್ನು ಸೇರಿದ್ದಾನೆ!" ಎಂದು

ಪ್ರಧರ್ಷಯಿತುಮಾರೇಭೇ ಮುನಿಂ ಕ್ರೋಧಾನ್ನಿಶಾಚರಃ ।
ಸೋಽಭಿದ್ರವನ್ಮುನಿಶ್ರೇಷ್ಠಂ ಮುನಿನಾ ದೀಪ್ತತೇಜಸಾ ॥ ೬೭

ಚಕ್ಷುಷಾನಲಕಲ್ಪೇನ ನಿರ್ದಗ್ಧೋ ನಿಧನಂ ಗತಃ ।
ತಸ್ಯಾಯಮಾಶ್ರಮೋ ಭ್ರಾತುಸ್ತಟಾಕವನಶೋಭಿತಃ ೬೮

ವಿಪ್ರಾನುಕಂಪಯಾ ಯೇನ ಕರ್ಮೇದಂ ದುಷ್ಕರಂ ಕೃತಮ್ ।
ಏವಂ ಕಥಯಮಾನಸ್ಯ ತಸ್ಯ ಸೌಮಿತ್ರಿಣಾ ಸಹ ॥ ೬೯

ರಾಮಸ್ಯಾಸ್ತಂ ಗತಃ ಸೂರ್ಯಃ ಸಂಧ್ಯಾಕಾಲೋಽಭ್ಯವರ್ತತ ।
ಉಪಾಸ್ಯ ಪಶ್ಚಿಮಾಂ ಸಂಧ್ಯಾಂ ಸಹ ಭ್ರಾತ್ರಾ ಯಥಾವಿಧಿ ॥ ೭೦

ಪ್ರವಿವೇಶಾಶ್ರಮಪದಂ ತಮೃಷಿಂ ಸೋಽಭ್ಯವಾದಯತ್ ।
ಸಮ್ಯಕ್ಪ್ರತಿಗೃಹೀತಶ್ಚ ಮುನಿನಾ ತೇನ ರಾಘವಃ ॥ ೭೧

ನ್ಯವಸತ್ತಾಂ ನಿಶಾಮೇಕಾಂ ಪ್ರಾಶ್ಯ ಮೂಲಫಲಾನಿ ಚ ।
ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ವಿಮಲೇ ಸೂರ್ಯಮಂಡಲೇ ॥

---

ಹೇಳಿದರು. "ತಮ್ಮನು ಸತ್ತನೆಂಬುದನ್ನು ಕೇಳಿ ಇಲ್ವಲನು ಸಿಟ್ಟಿನಿಂದ ಆ ಮುನಿಗಳನ್ನು ಹಿಂಸಿಸಬೇಕೆಂದು ಅವರಕಡೆಗೆ ನುಗ್ಗಿದನು (೬೬-೬೭). ಮಹಾ ತೇಜಸ್ವಿಗಳಾದ ಅಗಸ್ತ್ಯರ ಕಣ್ಣು ಬೆಂಕಿಯಂತಾಯಿತು. ಮರುಕ್ಷಣದಲ್ಲಿ ಆ ರಾಕ್ಷಸನು ಸುಟ್ಟು ಬೂದಿಯಾದನು. ಅಂಥ ಅಗಸ್ತ್ಯಮುನಿಗಳ ಭ್ರಾತೃವಿನ ಆಶ್ರಮವಿದು. ಕೆರೆಗಳಿಂದಲೂ ವನಗಳಿಂದಲೂ ಮನೋಹರವಾಗಿದೆ. ಲಕ್ಷ್ಮಣ, ವಿಪ್ರರಮೇಲೆ ಅನುಕಂಪೆಯಿಂದ ಅಗಸ್ತ್ಯರು ಈ ಅದ್ಭುತಕಾರ್ಯವನ್ನು ನಡೆಸಿದರು" ಎಂದು ನುಡಿದನು. ಹೀಗೆ ಶ್ರೀರಾಮನು ಲಕ್ಷ್ಮಣನಿಗೆ ಹೇಳುತ್ತಿರುವಾಗ ಸೂರ್ಯನು ಮುಳುಗಿದನು (೬೮-೬೯). ಸಂಜೆಯಾಯಿತು. ಶ್ರೀರಾಮ ಲಕ್ಷ್ಮಣರು ಸಾಯಂಕಾಲದ ಸಂಧ್ಯಾವಂದನೆಯನ್ನು ಆಚರಿಸಿ ಆಶ್ರಮದೊಳಗೆ ಹೋಗಿ ಆ ಮುನಿಗಳನ್ನು ಕಂಡು ನಮಸ್ಕರಿಸಿದರು. ಆ ಮುನಿಗಳು ರಾಘವನನ್ನು ಪ್ರೀತಿಯಿಂದ ಸ್ವಾಗತಿಸಲು, ಫಲಮೂಲಗಳನ್ನು ತಿಂದು ಆ ರಾತ್ರಿಯನ್ನು ಅಲ್ಲಿ ಕಳೆದರು. ರಾತ್ರಿಯು ಕಳೆದು ಸೂರ್ಯೋದಯವಾಯಿತು (೭೦-೭೨)

*

ಭ್ರಾತರಂ ತಮಗಸ್ತ್ಯಸ್ಯ ಹ್ಯಾಮಂತ್ರಯತ ರಾಘವಃ ।
ಅಭಿವಾದಯೇ ತ್ವಾಂ ಭಗವನ್ ಸುಖಮುಧ್ಯುಷಿತೋ ನಿಶಾಮ್ ॥ ೭೩

ಆಮಂತ್ರಯೇ ತ್ವಾಂ ಗಚ್ಛಾಮಿ ಗುರುಂ ತೇ ದ್ರಷ್ಟುಮಗ್ರಜಮ್ ।
ಗಮ್ಯತಾಮಿತಿ ತೇನೋಕ್ತೋ ಜಗಾಮ ರಘುನಂದನಃ ॥ ೭೪

ಯಥೋದ್ದಿಷ್ಟೇನ ಮಾರ್ಗೇಣ ವನಂ ತಚ್ಚಾವಲೋಕಯನ್ ।
ನೀವಾರಾನ್ ಪನಸಾಂಸ್ತಾಲಾಂಸ್ತಿನಿಶಾನ್ ವಂಜುಲಾನ್ ಧವಾನ್ ॥

ಚಿರಿಬಿಲ್ವಾನ್ ಮಧೂಕಾಂಶ್ಚ ಬಿಲ್ವಾನಪಿ ಚ ತಿಂದುಕಾನ್ ।
ಪುಷ್ಪಿತಾನ್ ಪುಷ್ಪಿತಾಗ್ರಾಭಿರ್ಲತಾಭಿರನುವೇಷ್ಟಿತಾನ್ ॥ ೭೬

ದದರ್ಶ ರಾಮಃ ಶತಶಸ್ತತ್ರ ಕಾಂತಾರಪಾದಪಾನ್ ।
ಹಸ್ತಿಹಸ್ತೈರ್ವಿಮೃದಿತಾನ್ ವಾನರೈರುಪಶೋಭಿತಾನ್ ॥ ೭೭

ಮತ್ತೈಃ ಶಕುನಿಸಂಘೈಶ್ಚ ಶತಶಃ ಪ್ರತಿನಾದಿತಾನ್ ।
ತತೋಽಬ್ರವೀತ್ಸಮೀಪಸ್ಥಂ ರಾಮೋ ರಾಜೀವಲೋಚನಃ ॥ ೭೮

---

ಶ್ರೀರಾಮನು ಅಗಸ್ತ್ಯಮುನಿಗಳ ಭ್ರಾತೃಗಳಾದ ಆ ಋಷಿಗಳ ಬಳಿಗೆ ಹೋಗಿ "ಭಗವನ್, ತಮಗೆ ವಂದಿಸುತ್ತಿದ್ದೇನೆ. ನನ್ನನ್ನು ಆಶೀರ್ವದಿಸಿರಿ. ರಾತ್ರಿಯನ್ನು ತಮ್ಮ ಆಶ್ರಮದಲ್ಲಿ ಸುಖವಾಗಿ ಕಳೆದೆನು. ತಮ್ಮ ಅಗ್ರಜರಾದ ಮಹರ್ಷಿಗಳನ್ನು ನೋಡಲು ಹೋಗುವೆನು. ಅನುಜ್ಞೆಯನ್ನು ದಯಪಾಲಿಸಬೇಕು" ಎಂದು ಪ್ರಾರ್ಥಿಸಿದನು. "ಆಗಲಿ, ಹೋಗು" ಎಂದು ಆ ಋಷಿಗಳು ನುಡಿಯಲು ರಘುನಂದನನು ಮುಂದಕ್ಕೆ ಪ್ರಯಾಣಮಾಡಿದನು (೭೩-೭೪). ಸುತೀಕ್ಷ್ಣರು ಹೇಳಿದ ದಾರಿಯನ್ನು ಹಿಡಿದು, ಸೀತಾಲಕ್ಷ್ಮಣರೊಡನೆ ಅರಣ್ಯದ ಸೊಬಗನ್ನು ನೋಡುತ್ತ ಹೋದನು. ನವಣೆಧಾನ್ಯದ ಸಸಿಗಳೂ, ಹಲಸು, ತಾಳೆ, ತಿನಿಶ, ಅಶೋಕ, ಧವ, ಹೊಂಗೆ, ಹಿಪ್ಪೆ, ಬಿಲ್ವ, ತುಂಬರ—ಮೊದಲಾದ ವೃಕ್ಷಗಳೂ ಅರಳಿ ನಿಂತಿದ್ದವು. ಪುಷ್ಪಿತ ಲತೆಗಳು ಅವುಗಳನ್ನು ಅಪ್ಪಿಕೊಂಡಿದ್ದವು ! (೭೫-೭೬). ಶ್ರೀರಾಮನು ಅಂತಹ ನೂರಾರು ವನ್ಯ ವೃಕ್ಷಗಳನ್ನು ನೋಡುತ್ತ ಹೋದನು. ಆನೆಗಳು ಸೊಂಡಿಲುಗಳಿಂದ ಕೆಲವು ಮರಗಳನ್ನು ಉರುಳಿಸಿದ್ದವು. ಕೆಲವು

ಪೃಷ್ಠತೋಽನುಗತಂ ವೀರಂ ಲಕ್ಷ್ಮಣಂ ಲಕ್ಷ್ಮಿವರ್ಧನಮ್ ।
ಸ್ನಿಗ್ಧಪತ್ರಾ ಯಥಾ ವೃಕ್ಷಾ ಯಥಾ ಶಾಂತಮೃಗದ್ವಿಜಾಃ ॥ ೭೯

ಆಶ್ರಮೋ ನಾತಿದೂರಸ್ಥೋ ಮಹರ್ಷೇರ್ಭಾವಿತಾತ್ಮನಃ ।
ಅಗಸ್ತ್ಯ ಇತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ ॥ ೮೦

ಆಶ್ರಮೋ ದೃಶ್ಯತೇ ತಸ್ಯ ಪರಿಶ್ರಾಂತಶ್ರಮಾಪಹಃ ।
ಪ್ರಾಜ್ಯಧೂಮಾಕುಲವನಶ್ಚೀರಮಾಲಾಪರಿಷ್ಕೃತಃ ॥ ೮೧

ಪ್ರಶಾಂತಮೃಗಯೂಥಶ್ಚ ನಾನಾಶಕುನಿನಾದಿತಃ ।
ನಿಗೃಹ್ಯ ತರಸಾ ಮೃತ್ಯುಂ ಲೋಕಾನಾಂ ಹಿತಕಾಮ್ಯಯಾ ॥ ೮೨

ದಕ್ಷಿಣಾ ದಿಕ್ಕೃತಾ ಯೇನ ಶರಣ್ಯಾ ಪುಣ್ಯಕರ್ಮಣಾ ।
ತಸ್ಯೇದಮಾಶ್ರಮಪದಂ ಪ್ರಭಾವಾದ್ಯಸ್ಯ ರಾಕ್ಷಸೈಃ ॥ ೮೩

---

ಮರಗಳು ಕಪಿಗಳ ಚೆಲ್ಲಾಟದಿಂದ ಚೆಲುವಾಗಿದ್ದವು. ಸೊಕ್ಕಿದ ಹಕ್ಕಿಗಳು ಗುಂಪುಗುಂಪಾಗಿ ಚಿಲಿಪಿಲಿಯೆಂದು ಕೂಗುತ್ತಿದ್ದವು (೭೭-೭೮). ಆಗ ರಾಜೀವ ನೇತ್ರನಾದ ಶ್ರೀರಾಮನು ತನ್ನ ಹಿಂದೆ ಬರುತ್ತಿದ್ದ ವೀರಾಗ್ರಣಿಯೂ ಶುಭಗಾತ್ರನೂ ಆದ ಲಕ್ಷ್ಮಣನನ್ನು ಕರೆದು ಹೀಗೆಂದನು : “ತಮ್ಮ-ಲಕ್ಷ್ಮಣ, ಇಲ್ಲಿ ಮರದ ಎಲೆಗಳೆಲ್ಲವೂ ಹಸುರಾಗಿರುವುದನ್ನೂ ಮೃಗಪಕ್ಷಿಗಳು ಶಾಂತಸ್ವಭಾವದಿಂದ ಇರುವುದನ್ನೂ ನೋಡಿದರೆ, ಆತ್ಮಧ್ಯಾನನಿಷ್ಠರಾದ ಆ ಮಹರ್ಷಿಗಳ ಆಶ್ರಮವು ಸಮೀಪದಲ್ಲಿಯೇ ಇರುವುದಾಗಿ ತೋರುವುದು. ವಿಂಧ್ಯವೆಂಬ ಅಗವನ್ನು* ಸ್ತಂಭಿಸಿ, ಲೋಕೋತ್ತರವಾದ ಕಾರ್ಯವನ್ನು ಮಾಡಿದ್ದರಿಂದ ಆ ಮುನಿಗಳು ಅಗಸ್ತ್ಯರೆಂದು ಪ್ರಖ್ಯಾತರಾಗಿದ್ದಾರೆ (೭೯-೮೦). ಅವರ ಆಶ್ರಮವು ಅಲ್ಲಿ ಕಾಣಿಸುತ್ತಿದೆ. ಬಳಲಿದವರ ಬಳಲಿಕೆ ಅಲ್ಲಿ ಹಿಂಗುತ್ತದೆ. ಹೋಮಾಗ್ನಿಯ ಹೊಗೆ ವನದಲ್ಲಿ ಹರಡಿದೆ. ನಾರುಮಡಿಗಳನ್ನು ಸಾಲಾಗಿ ಆರುಹಾಕಿದ್ದಾರೆ. ಶಾಂತಸ್ವಭಾವದ ಜಿಂಕೆಗಳ ಹಿಂಡು ಕಾಣಿಸುತ್ತಿದೆ (೮೧). ಲೋಕಹಿತೇಚ್ಛೆ ಯಿಂದ ಮೃತ್ಯುವನ್ನೇ ಗೆದ್ದು ನಿಂತ ಮಹರ್ಷಿಗಳ ಆಶ್ರಮವಿದು. ಮರೆಹೊಕ್ಕವ

---

* ಅಗ — ಪರ್ವತ.

ದಿಗಿಯಂ ದಕ್ಷಿಣಾ ತ್ರಾಸಾದ್ದೃಶ್ಯತೇ ನೋಪಭುಜ್ಯತೇ ।
ಯದಾ ಪ್ರಭೃತಿ ಚಾಕ್ರಾಂತಾ ದಿಗಿಯಂ ಪುಣ್ಯಕರ್ಮಣಾ ॥ ೮೪

ತದಾ ಪ್ರಭೃತಿ ನಿರ್ವೈರಾಃ ಪ್ರಶಾಂತಾಃ ಪಿಶಿತಾಶನಾಃ ।
ನಾಮ್ನಾ ಚೇಯಂ ಭಗವತೋ ದಕ್ಷಿಣಾ ದಿಕ್ಪ್ರದಕ್ಷಿಣಾ ॥ ೮೫

ಪ್ರಥಿತಾ ತ್ರಿಷು ಲೋಕೇಷು ದುರ್ಧರ್ಷಾ ಕ್ರೂರಕರ್ಮಭಿಃ ।
ಗತಿಂ ನಿರೋದ್ಧುಂ ನಿರತೋ ಭಾಸ್ಕರಸ್ಯಾಚಲೋತ್ತಮಃ ॥ ೮೬

ನಿದೇಶಂ ಪಾಲಯನ್ ಯಸ್ಯ ವಿಂಧ್ಯಃ ಶೈಲೋ ನ ವರ್ಧತೇ ।
ಅಯಂ ದೀರ್ಘಾಯುಷಸ್ತಸ್ಯ ಲೋಕೇ ವಿಶ್ರುತಕರ್ಮಣಃ ॥ ೮೭

ಅಗಸ್ತ್ಯಸ್ಯಾಶ್ರಮಃ ಶ್ರೀಮಾನ್ ವಿನೀತಜನಸೇವಿತಃ ।
ಏಷ ಲೋಕಾರ್ಚಿತಃ ಸಾಧುರ್ಹಿತೇ ನಿತ್ಯರತಃ ಸತಾಮ್ ॥ ೮೮

---

ರನ್ನು ರಕ್ಷಿಸಬಲ್ಲುದೆಂಬ ವಿಖ್ಯಾತಿಯನ್ನು ದಕ್ಷಿಣದಿಕ್ಕಿಗೆ ತಂದುಕೊಟ್ಟ ಪುಣ್ಯಾತ್ಮರ ಆಶ್ರಮವಿದು. ಲಕ್ಷ್ಮಣ, ಈ ಮಹರ್ಷಿಗಳ ಪ್ರಭಾವವೆಂತಹುದೆಂದರೆ, ರಾಕ್ಷಸರು ಅಂಜುತ್ತ ದೂರದಿಂದಲೇ ಈ ದಿಕ್ಕಿನ ಕಡೆಗೆ ನೋಡುವರಲ್ಲದೆ ಒಳಗೆ ಬಂದು ವಿಹರಿಸುವುದಿಲ್ಲ ! (೮೨-೮೩). ಪುಣ್ಯಾತ್ಮರಾದ ಅಗಸ್ತ್ಯರು ಈ ಆಶ್ರಮಕ್ಕೆ ಕಾಲಿಟ್ಟಮೇಲೆ, ರಾಕ್ಷಸರು ಇಲ್ಲಿನ ಋಷಿಗಳಮೇಲೆ ವೈರಬುದ್ಧಿಯನ್ನು ಬಿಟ್ಟು ಶಾಂತರಾಗಿದ್ದಾರೆ. ಮಹಾತ್ಮರಾದ ಅಗಸ್ತ್ಯರ ಹೆಸರು ಸೇರಿದ್ದರಿಂದ ಈ ದಕ್ಷಿಣ ದಿಕ್ಕು, ಸಜ್ಜನರು ಬಂದು ಹೋಗುವ ಸ್ಥಳವಾಗಿದೆ (೮೪-೮೫). ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ. ಕ್ರೂರಕರ್ಮಿಗಳ ಆಟವು ಇಲ್ಲಿ ಸಾಗದು. ಲಕ್ಷ್ಮಣ, ಒಂದುಸಲ ವಿಂಧ್ಯಾಚಲವು ಸೂರ್ಯನ ಗತಿಯನ್ನು ತಡೆಯುವುದಕ್ಕಾಗಿ ಬೆಳೆಯತೊಡಗಿತು. ಆಗ ಅಗಸ್ತ್ಯಮುನಿಗಳು ಆಜ್ಞಾಪಿಸಿದ್ದರಿಂದ ಅವರ ಆಜ್ಞೆಗೆ ತಲೆಬಾಗಿ ಆ ಶೈಲವು ಬೆಳೆಯದೆ ಅಲ್ಲಿಗೇ ನಿಂತಿತು (೮೬). ಅಂಥ ಲೋಕವಿಖ್ಯಾತಮಹಿಮರೂ ದೀರ್ಘಾಯುಷ್ಮಂತರೂ ಆದ ಅಗಸ್ತ್ಯಮುನಿಗಳ ಪುಣ್ಯಾಶ್ರಮವಿದು. ವಿನೀತರಾದ ಸಜ್ಜನರಿಂದ ಸೇವಿತವಾದದ್ದು. ಈ ಮಹರ್ಷಿಗಳು ಲೋಕಪೂಜ್ಯರೂ ಸಜ್ಜನರ ಹಿತಕಾಂಕ್ಷಿಗಳೂ ಆಗಿದ್ದಾರೆ (೮೭-೮೮).

ಅಸ್ಮಾನಭಿಗತಾನೇಷ ಶ್ರೇಯಸಾ ಯೋಜಯಿಷ್ಯತಿ ।
ಆರಾಧಯಿಷ್ಯಾಮ್ಯತ್ರಾಹಮಗಸ್ತ್ಯಂ ತಂ ಮಹಾಮುನಿಮ್ ॥ ೮೯

ಶೇಷಂ ಚ ವನವಾಸಸ್ಯ ಸೌಮ್ಯ ವತ್ಸ್ಯಾಮ್ಯಹಂ ಪ್ರಭೋ ।
ಅತ್ರ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೯೦

ಅಗಸ್ತ್ಯಂ ನಿಯತಾಹಾರಂ ಸತತಂ ಪರ್ಯುಪಾಸತೇ ।
ನಾತ್ರ ಜೀವೇನ್ಮೃಷಾವಾದೀ ಕ್ರೂರೋ ವಾ ಯದಿ ವಾ ಶಠಃ ॥ ೯೧

ನೃಶಂಸಃ ಕಾಮವೃತ್ತೋ ವಾ ಮುನಿರೇಷ ತಥಾವಿಧಃ ।
ಅತ್ರ ದೇವಾಶ್ಚ ಯಕ್ಷಾಶ್ಚ ನಾಗಾಶ್ಚ ಪತಗೈಃ ಸಹ ॥ ೯೨

ವಸಂತಿ ನಿಯತಾಹಾರಾ ಧರ್ಮಮಾರಾಧಯಿಷ್ಣವಃ ।
ಅತ್ರ ಸಿದ್ಧಾ ಮಹಾತ್ಮಾನೋ ವಿಮಾನೈಃ ಸೂರ್ಯಸಂನಿಭೈಃ ॥ ೯೩

ತ್ಯಕ್ತ್ವಾ ದೇಹಾನ್ನವೈರ್ದೇಹೈಃ ಸ್ವರ್ಯಾತಾಃ ಪರಮರ್ಷಯಃ ।
ಯಕ್ಷತ್ವಮಮರತ್ವಂ ಚ ರಾಜ್ಯಾನಿ ವಿವಿಧಾನಿ ಚ ॥ ೯೪

---

ಇವರ ದರ್ಶನಮಾಡುವುದರಿಂದ ನಮಗೆ ಬಹಳ ಶ್ರೇಯಸ್ಸಾಗುವುದು. ಲಕ್ಷ್ಮಣ, ಈ ಅಗಸ್ತ್ಯಮಹಾಮುನಿಗಳನು, ನಾನು ಇಲ್ಲಿ ಸೇವಿಸುತ್ತಾ ಇರುವೆನು. ವನವಾಸದ ಉಳಿದ ಭಾಗವನ್ನು ಇಲ್ಲಿ ಕಳೆಯಬೇಕೆಂದು ಸಂಕಲ್ಪಿಸಿರುವೆನು (೮೯). ಈ ಆಶ್ರಮದಲ್ಲಿ ದೇವಗಂಧರ್ವರೂ ಸಿದ್ಧರೂ ಮಹರ್ಷಿಗಳೂ ಆಹಾರನಿಯಮದಿಂದ ತಪೋನಿಷ್ಠರಾದ ಅಗಸ್ತ್ಯರ ಶುಶ್ರೂಷೆಯಲ್ಲಿ ನಿರತರಾಗಿರುತ್ತಾರೆ. ವತ್ಸ, ಇಲ್ಲಿ ಸುಳ್ಳುಗಾರನಾಗಲಿ ಕ್ರೂರನಾಗಲಿ ಕಪಟಿಯಾಗಲಿ ಜೀವದಿಂದ ಉಳಿಯುವುದಿಲ್ಲ (೯೦-೯೧). ಕೊಲೆಗಾರನೂ ಸ್ವೇಚ್ಛಾಚಾರಿಯೂ ಬದುಕುವುದಿಲ್ಲ. ಈ ಮುನಿಗಳು ಅಂಥ ಮಹಿಮೆಯುಳ್ಳವರು. ಇಲ್ಲಿ ದೇವತೆಗಳು, ಯಕ್ಷರು, ನಾಗರು, (ಗರುಡಜಾತಿಯ) ಪತಗರು—ಮೊದಲಾದವರು ಧರ್ಮಸಾಧನೆಗಾಗಿ ಆಹಾರ ನಿಯಮದಿಂದ ವಾಸವಾಗಿದ್ದಾರೆ (೯೨-೯೩). ಈ ಆಶ್ರಮದಲ್ಲಿ ಮಹಾತ್ಮರಾದ ಅನೇಕ ಋಷಿಗಳು ತಪಸ್ಸಿದ್ಧಿಯನ್ನು ಪಡೆದು ಸ್ವರ್ಗವನ್ನೇರಿದ್ದಾರೆ. ಅವರು ಈ ಮನುಷ್ಯದೇಹವನ್ನು ಬಿಟ್ಟು ನೂತನವಾದ ದಿವ್ಯದೇಹವನ್ನು ಪಡೆದು ಸೂರ್ಯ ಸದೃಶವಾದ ರಥವನ್ನೇರಿ ಸ್ವರ್ಗಕ್ಕೆ ಹೋಗಿದ್ದಾರೆ (೯೪).

ಅತ್ರ ದೇವಾಃ ಪ್ರಯಚ್ಛಂತಿ ಭೂತೈರಾರಾಧಿತಾಃ ಶುಭೈಃ ।
ಆಗತಾಃ ಸ್ಮಾಶ್ರಮಪದಂ ಸೌಮಿತ್ರೇ ಪ್ರವಿಶಾಗ್ರತಃ ॥ ೯೫

ನಿವೇದಯೇಹ ಮಾಂ ಪ್ರಾಪ್ತಮೃಷಯೇ ಸೀತಯಾ ಸಹ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕಾದಶಃ ಸರ್ಗಃ

---

## ದ್ವಾದಶಃ ಸರ್ಗಃ

### ಅಗಸ್ತ್ಯದರ್ಶನಮ್

ಸ ಪ್ರವಿಶ್ಯಾಶ್ರಮಪದಂ ಲಕ್ಷ್ಮಣೋ ರಾಘವಾನುಜಃ ।
ಅಗಸ್ತ್ಯಶಿಷ್ಯಮಾಸಾದ್ಯ ವಾಕ್ಯಮೇತದುವಾಚ ಹ ॥ ೧

ರಾಜಾ ದಶರಥೋ ನಾಮ ಜ್ಯೇಷ್ಠಸ್ತಸ್ಯ ಸುತೋ ಬಲೀ ।
ರಾಮಃ ಪ್ರಾಪ್ತೋ ಮುನಿಂ ದ್ರಷ್ಟುಂ ಭಾರ್ಯಯಾ ಸಹ ಸೀತಯಾ ॥

---

ಇಲ್ಲಿ ತಮ್ಮನ್ನು ಆರಾಧಿಸಿದ ಸಜ್ಜನರಿಗೆ ಬ್ರಹ್ಮಾದಿದೇವತೆಗಳು ಯಕ್ಷಪದವಿಯನ್ನೂ ದೇವಪದವಿಯನ್ನೂ ರಾಜ್ಯಾಧಿಪತ್ಯವನ್ನೂ ಅಪೇಕ್ಷೆಗೆ ತಕ್ಕಂತೆ ಅನುಗ್ರಹಿಸಿಕೊಡುತ್ತಾರೆ. ಸೌಮಿತ್ರಿ, ಆಶ್ರಮಕ್ಕೆ ಬಂದುಬಿಟ್ಟೆವು! ನೀನು ಮುಂದೆ ಹೋಗಿ, ಸೀತಾಸಮೇತನಾಗಿ ನಾನು ಬಂದಿರುವೆನೆಂದು ಮಹರ್ಷಿಗಳಿಗೆ ಅರಿಕೆ ಮಾಡು" ಎಂದು ಹೇಳಿದನು (೯೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹನ್ನೊಂದನೆಯ ಸರ್ಗ

---

## ಸರ್ಗ ೧೨

ಅಗಸ್ತ್ಯರ ದರ್ಶನ ; ಅವರು ಶ್ರೀರಾಮನಿಗೆ ವೈಷ್ಣವಧನುಸ್ಸನ್ನೂ ಅಕ್ಷಯಾಸ್ತ್ರಗಳಿರುವ ಬತ್ತಳಿಕೆಗಳನ್ನೂ ಖಡ್ಗವನ್ನೂ ಕೊಡುವುದು.

ಲಕ್ಷ್ಮಣನು ಆಶ್ರಮವನ್ನು ಪ್ರವೇಶಿಸಿ ಅಗಸ್ತ್ಯರ ಶಿಷ್ಯನೊಬ್ಬನನ್ನು ಕಂಡು "ತಪಸ್ವಿಗಳೆ, ದಶರಥಮಹಾರಾಜನ ಜ್ಯೇಷ್ಠಪುತ್ರನಾದ ಶ್ರೀರಾಮನು ತನ್ನ ಪತ್ನಿಯಾದ ಸೀತಾದೇವಿಯೊಡನೆ ಬಂದಿದ್ದಾನೆ. ಅಗಸ್ತ್ಯಮಹರ್ಷಿಗಳ ದರ್ಶನವನ್ನು

ಲಕ್ಷ್ಮಣೋ ನಾಮ ತಸ್ಯಾಹಂ ಭ್ರಾತಾ ತ್ವವರಜೋ ಹಿತಃ ।
ಅನುಕೂಲಶ್ಚ ಭಕ್ತಶ್ಚ ಯದಿ ತೇ ಶ್ರೋತ್ರಮಾಗತಃ ॥ ೩

ತೇ ವಯಂ ವನಮತ್ಯುಗ್ರಂ ಪ್ರವಿಷ್ಟಾಃ ಪಿತೃಶಾಸನಾತ್ ।
ದ್ರಷ್ಟುಮಿಚ್ಛಾಮಹೇ ಸರ್ವೇ ಭಗವಂತಂ ನಿವೇದ್ಯತಾಮ್ ॥ ೪

ತಸ್ಯ ತದ್ವಚನಂ ಶ್ರುತ್ವಾ ಲಕ್ಷ್ಮಣಸ್ಯ ತಪೋಧನಃ ।
ತಥೇತ್ಯುಕ್ತ್ವಾಗ್ನಿಶರಣಂ ಪ್ರವಿವೇಶ ನಿವೇದಿತುಮ್ ॥ ೫

ಸ ಪ್ರವಿಶ್ಯ ಮುನಿಶ್ರೇಷ್ಠಂ ತಪಸಾ ದುಷ್ಪ್ರಧರ್ಷಣಮ್ ।
ಕೃತಾಂಜಲಿರುವಾಚೇದಂ ರಾಮಾಗಮನಮಂಜಸಾ ॥ ೬

ಯಥೋಕ್ತಂ ಲಕ್ಷ್ಮಣೇನೈವ ಶಿಷ್ಯೋಽಗಸ್ತ್ಯಸ್ಯ ಸಂಮತಃ ।
ಪುತ್ರೌ ದಶರಥಸ್ಯೇಮೌ ರಾಮೋ ಲಕ್ಷ್ಮಣ ಏವ ಚ ॥ ೭

ಪ್ರವಿಷ್ಟಾವಾಶ್ರಮಪದಂ ಸೀತಯಾ ಸಹ ಭಾರ್ಯಯಾ ।
ದ್ರಷ್ಟುಂ ಭವಂತಮಾಯಾತೌ ಶುಶ್ರೂಷಾರ್ಥಮರಿಂದಮೌ ॥ ೮

---

ಮಾಡಬೇಕೆಂದಿದ್ದಾನೆ (೧-೨). ನಾನು ಆತನ ತಮ್ಮ; ಲಕ್ಷ್ಮಣನೆಂದು ನನ್ನ ಹೆಸರು. ನಾನು ಶ್ರೀರಾಮನ ಹಿತೈಷಿಯಾದ ಭಕ್ತನೆಂದು ನೀವು ಕೇಳಿರಬಹುದು. ನಮ್ಮ ತಂದೆಯ ಆಜ್ಞೆಯನ್ನು ಮನ್ನಿಸಿ ನಾವು ಮೂವರೂ ಈ ಘೋರವಾದ ಅರಣ್ಯಕ್ಕೆ ಬಂದಿದ್ದೇವೆ. ನಾವೆಲ್ಲರೂ ಭಗವಾನ್ ಅಗಸ್ತ್ಯರನ್ನು ಸಂದರ್ಶಿಸಲು ಉದ್ದೇಶಿಸಿದ್ದೇವೆ. ದಯವಿಟ್ಟು ಅವರಿಗೆ ಈ ವಿಷಯವನ್ನು ಅರಿಕೆ ಮಾಡಬೇಕು" ಎಂದನು (೩-೪). ಅದನ್ನು ಕೇಳಿ ಆ ತಪಸ್ವಿಯು ಆಗಬಹುದೆಂದು ತಿಳಿಸಿ ಅಗ್ನಿಹೋತ್ರಗೃಹಕ್ಕೆ ಹೋದನು. ಅಲ್ಲಿ ತಪೋಮಹಿಮೆಯಿಂದ ಪ್ರಜ್ವಲಿಸುತ್ತಿದ್ದ ಅಗಸ್ತ್ಯರನ್ನು ಕಂಡು, ವಿನಯದಿಂದ ಕೈಮುಗಿದು ಲಕ್ಷ್ಮಣನು ಹೇಳಿದಂತೆ ಶ್ರೀರಾಮನ ಆಗಮನವನ್ನು ನಿವೇದಿಸಿದನು (೫-೬): "ಭಗವನ್, ದಶರಥರಾಜನ ಮಕ್ಕಳಾದ ರಾಮಲಕ್ಷ್ಮಣರೆಂಬ ಇಬ್ಬರು ವೀರರು ಆಗಮಿಸಿದ್ದಾರೆ. ಅವರೊಡನೆ ರಾಮನ ಪತ್ನಿಯಾದ ಸೀತೆ ಇದ್ದಾಳೆ. ತಮ್ಮನ್ನು ಸಂದರ್ಶಿಸಿ ಸೇವೆಯನ್ನು ಸಲ್ಲಿಸಬೇಕೆಂದು ಕಾದಿದ್ದಾರೆ. ಈಗ ಏನುಮಾಡಬೇಕೆಂದು ತಮ್ಮ ಅಪ್ಪಣೆಯಾಗಬೇಕು" ಎಂದನು (೭-೮).

ಯದತ್ರಾನಂತರಂ ತತ್ತ್ವಮಾಜ್ಞಾಪಯಿತುಮರ್ಹಸಿ ।
ತತಃ ಶಿಷ್ಯಾದುಪಶ್ರುತ್ಯ ಪ್ರಾಪ್ತಂ ರಾಮಂ ಸಲಕ್ಷ್ಮಣಮ್ ॥ ೯

ವೈದೇಹೀಂ ಚ ಮಹಾಭಾಗಾಮಿದಂ ವಚನಮಬ್ರವೀತ್ ।
ದಿಷ್ಟ್ಯಾ ರಾಮಶ್ಚಿರಸ್ಯಾದ್ಯ ದ್ರಷ್ಟುಂ ಮಾಂ ಸಮುಪಾಗತಃ ॥ ೧೦

ಮನಸಾ ಕಾಂಕ್ಷಿತಂ ಹ್ಯಸ್ಯ ಮಯಾಪ್ಯಾಗಮನಂ ಪ್ರತಿ ।
ಗಮ್ಯತಾಂ ಸತ್ಕೃತೋ ರಾಮಃ ಸಭಾರ್ಯಃ ಸಹಲಕ್ಷ್ಮಣಃ ॥ ೧೧

ಪ್ರವೇಶ್ಯತಾಂ ಸಮೀಪಂ ಮೇ ಕಿಂ ಚಾಸೌ ನ ಪ್ರವೇಶಿತಃ ।
ಏವಮುಕ್ತಸ್ತು ಮುನಿನಾ ಧರ್ಮಜ್ಞೇನ ಮಹಾತ್ಮನಾ ॥ ೧೨

ಅಭಿವಾದ್ಯಾಬ್ರವೀಚ್ಛಿಷ್ಯಸ್ತಥೇತಿ ನಿಯತಾಂಜಲಿಃ ।
ತತೋ ನಿಷ್ಕ್ರಮ್ಯ ಸಂಭ್ರಾಂತಃ ಶಿಷ್ಯೋ ಲಕ್ಷ್ಮಣಮಬ್ರವೀತ್ ॥ ೧೩

ಕ್ವಾಸೌ ರಾಮೋ ಮುನಿಂ ದ್ರಷ್ಟುಮೇತು ಪ್ರವಿಶತು ಸ್ವಯಮ್ ।
ತತೋ ಗತ್ವಾಶ್ರಮದ್ವಾರಂ ಶಿಷ್ಯೇಣ ಸಹ ಲಕ್ಷ್ಮಣಃ ॥ ೧೪

---

ಶ್ರೀರಾಮಲಕ್ಷ್ಮಣರೂ ಭಾಗ್ಯಶಾಲಿನಿಯಾದ ವೈದೇಹಿಯೂ ಆಗಮಿಸಿದ ವೃತ್ತಾಂತವನ್ನು ಕೇಳಿ ಅಗಸ್ತ್ಯರು "ಬಹಳ ಒಳ್ಳೆಯದಾಯಿತು! ಶ್ರೀರಾಮನು ಇಷ್ಟುದಿನದಮೇಲಾದರೂ ನನ್ನನ್ನು ನೋಡಲು ಬಂದನಲ್ಲ! ಅವನು ಯಾವಾಗ ಬರುವನೋ ಎಂದು ನಾನು ಮನಸ್ಸಿನಲ್ಲಿ ಗುಣಿಸುತ್ತಲೇ ಇದ್ದೆ! ವತ್ಸ, ಬೇಗ ಹೋಗು; ಪತ್ನೀಸಮೇತನಾದ ಶ್ರೀರಾಮನನ್ನೂ ಲಕ್ಷ್ಮಣನನ್ನೂ ಸತ್ಕರಿಸಿ ನನ್ನ ಬಳಿಗೆ ಕರೆದುಕೊಂಡು ಬಾ. ಮೊದಲೇ ಕರೆತರಬಹುದಾಗಿತ್ತಲ್ಲ, ಇದೇಕೆ ಹೀಗೆ ಮಾಡಿದೆ?" ಎಂದರು (೯-೧೧). ಹೀಗೆ ಧರ್ಮಜ್ಞರೂ ಮಹಾತ್ಮರೂ ಆದ ಅಗಸ್ತ್ಯಮುನಿಗಳು ನುಡಿಯಲು, ಶಿಷ್ಯನು ಅವರಿಗೆ ಅಭಿವಾದಿಸಿ ಹಾಗೆಯೇ ಮಾಡುವೆನೆಂದು ವಿನಯದಿಂದ ಹೇಳಿ, ಸಂಭ್ರಾಂತನಾಗಿ ಹೊರಗೆ ಬಂದನು (೧೨-೧೩). ಬಂದವನೇ ಲಕ್ಷ್ಮಣನನ್ನು ನೋಡಿ "ಲಕ್ಷ್ಮಣ, ರಾಮನೆಲ್ಲಿದ್ದಾನೆ? ಮುನಿಗಳನ್ನು ನೋಡಬಹುದು. ಈಗಲೇ ಒಳಗೆ ಬರಲಿ" ಎಂದನು. ಲಕ್ಷ್ಮಣನು ಆ ಶಿಷ್ಯನೊಡನೆ ಆಶ್ರಮದ ಹೊರಬಾಗಿಲಿಗೆ ಬಂದು, ಅಲ್ಲಿ ಕಾದಿದ್ದ

ದರ್ಶಯಾಮಾಸ ಕಾಕುತ್ಸ್ಥಂ ಸೀತಾಂ ಚ ಜನಕಾತ್ಮಜಾಮ್ ।
ತಂ ಶಿಷ್ಯಃ ಪ್ರಶ್ರಿತೋ ವಾಕ್ಯಮಗಸ್ತ್ಯವಚನಂ ಬ್ರುವನ್ ॥ ೧೫

ಪ್ರಾವೇಶಯದ್ಯಥಾನ್ಯಾಯಂ ಸತ್ಕಾರಾರ್ಹಂ ಸುಸತ್ಕೃತಮ್ ।
ಪ್ರವಿವೇಶ ತತೋ ರಾಮಃ ಸೀತಯಾ ಸಹಲಕ್ಷ್ಮಣಃ ॥ ೧೬

ಪ್ರಶಾಂತಹರಿಣಾಕೀರ್ಣಮಾಶ್ರಮಂ ಹ್ಯವಲೋಕಯನ್ ।
ಸ ತತ್ರ ಬ್ರಹ್ಮಣಃ ಸ್ಥಾನಮಗ್ನೇಃ ಸ್ಥಾನಂ ತಥೈವ ಚ ॥ ೧೭

ವಿಷ್ಣೋಃ ಸ್ಥಾನಂ ಮಹೇಂದ್ರಸ್ಯ ಸ್ಥಾನಂ ಚೈವ ವಿವಸ್ವತಃ ।
ಸೋಮಸ್ಥಾನಂ ಭಗಸ್ಥಾನಂ ಸ್ಥಾನಂ ಕೌಬೇರಮೇವ ಚ ॥ ೧೮

ಧಾತುರ್ವಿಧಾತುಃ ಸ್ಥಾನೇ ಚ ವಾಯೋಃ ಸ್ಥಾನಂ ತಥೈವ ಚ ।
ನಾಗರಾಜಸ್ಯ ಚ ಸ್ಥಾನಮನಂತಸ್ಯ ಮಹಾತ್ಮನಃ ॥ ೧೯

ಸ್ಥಾನಂ ತಥೈವ ಗಾಯತ್ರ್ಯಾ ವಸೂನಾಂ ಸ್ಥಾನಮೇವ ಚ ।
ಸ್ಥಾನಂ ಚ ಪಾಶಹಸ್ತಸ್ಯ ವರುಣಸ್ಯ ಮಹಾತ್ಮನಃ ॥ ೨೦

ಕಾರ್ತಿಕೇಯಸ್ಯ ಚ ಸ್ಥಾನಂ ಧರ್ಮಸ್ಥಾನಂ ಚ ಪಶ್ಯತಿ ।
ತತಃ ಶಿಷ್ಯೈಃ ಪರಿವೃತೋ ಮುನಿರಪ್ಯಭಿನಿಷ್ಪತತ್ ॥ ೨೧

---

ಕಾಕುತ್ಸ್ಥನನ್ನೂ ಜಾನಕಿಯನ್ನೂ ತೋರಿಸಿದನು (೧೪). ಶಿಷ್ಯನು ಶ್ರೀರಾಮನಿಗೆ ಅಗಸ್ತ್ಯರ ಅನುಮತಿಯನ್ನು ಆದರದಿಂದ ತಿಳಿಸಿ, ಅವರೆಲ್ಲರನ್ನೂ ಸತ್ಕರಿಸಿ ಆಶ್ರಮದೊಳಗೆ ಕರೆದುಕೊಂಡುಹೋದನು. ಶ್ರೀರಾಮನು ಸೀತಾ ಲಕ್ಷ್ಮಣ ಸಮೇತನಾಗಿ, ಆಶ್ರಮದಲ್ಲಿ ಶಾಂತಸ್ವಭಾವದ ಜಿಂಕೆಗಳು ಅಲೆದಾಡುವುದನ್ನು ನೋಡುತ್ತ ಹೋದನು (೧೫-೧೬). ಹೋಗುವಾಗ ಅನೇಕ ದೇವಸ್ಥಾನಗಳನ್ನು ವೀಕ್ಷಿಸಿದನು. ಬ್ರಹ್ಮಸ್ಥಾನ, ಅಗ್ನಿಸ್ಥಾನಗಳು ಅಲ್ಲಿದ್ದವು. ವಿಷ್ಣು, ಮಹೇಂದ್ರ, ಸೂರ್ಯ, ಚಂದ್ರ, ಭಗ ಮತ್ತು ಕುಬೇರರ ಸ್ಥಾನಗಳಿದ್ದವು (೧೭-೧೮). ಹಾಗೆಯೇ ಧಾತೃ, ವಿಧಾತೃ, ವಾಯು, ವಾಸುಕಿ, ಅನಂತ, ಗಾಯತ್ರಿ, ಅಷ್ಟ ವಸುಗಳು, ಪಾಶಧಾರಿಯಾದ ವರುಣ, ಕಾರ್ತಿಕೇಯ ಮತ್ತು ಧರ್ಮದೇವತೆಗಳ ಮಂದಿರಗಳು ಅಲ್ಲಿದ್ದವು. ಅವೆಲ್ಲವನ್ನೂ ಶ್ರೀರಾಮನು ನೋಡುತ್ತ ಹೋದನು (೧೯-೨೦). ಅಷ್ಟರಲ್ಲಿ ಅಗಸ್ತ್ಯಮುನಿಗಳೇ ಶ್ರೀರಾಮನನ್ನು ಸ್ವಾಗತಿಸುವುದ

ತಂ ದದರ್ಶಾಗ್ರತೋ ರಾಮೋ ಮುನೀನಾಂ ದೀಪ್ತತೇಜಸಾಮ್ ।
ಅಬ್ರವೀದ್ವಚನಂ ವೀರೋ ಲಕ್ಷ್ಮಣಂ ಲಕ್ಷ್ಮಿವರ್ಧನಮ್ ॥ ೨೨

ಏಷ ಲಕ್ಷ್ಮಣ ನಿಷ್ಕ್ರಾಮತ್ಯಗಸ್ತ್ಯೋ ಭಗವಾನೃಷಿಃ ।
ಔದಾರ್ಯೇಣಾವಗಚ್ಛಾಮಿ ನಿಧಾನಂ ತಪಸಾಮಿಮಮ್ ॥ ೨೩

ಏವಮುಕ್ತ್ವಾ ಮಹಾಬಾಹುರಗಸ್ತ್ಯಂ ಸೂರ್ಯವರ್ಚಸಮ್ ।
ಜಗ್ರಾಹ ಪರಮಪ್ರೀತಸ್ತಸ್ಯ ಪಾದೌ ಪರಂತಪಃ ॥ ೨೪

ಅಭಿವಾದ್ಯ ತು ಧರ್ಮಾತ್ಮಾ ತಸ್ಥೌ ರಾಮಃ ಕೃತಾಂಜಲಿಃ ।
ಸೀತಯಾ ಸಹ ವೈದೇಹ್ಯಾ ತದಾ ರಾಮಃ ಸಲಕ್ಷ್ಮಣಃ ॥ ೨೫

ಪ್ರತಿಜಗ್ರಾಹ ಕಾಕುತ್ಸ್ಥಮರ್ಚಯಿತ್ವಾಸನೋದಕೈಃ ।
ಕುಶಲಪ್ರಶ್ನಮುಕ್ತ್ವಾ ಚ ಹ್ಯಾಸ್ಯತಾಮಿತಿ ಚಾಬ್ರವೀತ್ ॥ ೨೬

ಅಗ್ನಿಂ ಹುತ್ವಾ ಪ್ರದಾಯಾರ್ಘ್ಯಮತಿಥೀನ್ ಪ್ರತಿಪೂಜ್ಯ ಚ ।
ವಾನಪ್ರಸ್ಥೇನ ಧರ್ಮೇಣ ಸ ತೇಷಾಂ ಭೋಜನಂ ದದೌ ॥ ೨೭

ಪ್ರಥಮಂ ಚೋಪವಿಶ್ಯಾಥ ಧರ್ಮಜ್ಞೋ ಮುನಿಪುಂಗವಃ ।
ಉವಾಚ ರಾಮಮಾಸೀನಂ ಪ್ರಾಂಜಲಿಂ ಧರ್ಮಕೋವಿದಮ್ ॥ ೨೮

---

ಕ್ಕಾಗಿ ಶಿಷ್ಯರೊಡನೆ ಹೊರಟುಬಂದರು. ತೇಜಸ್ವಿಗಳಾದ ಮುನಿಗಳ ಮುಂದುಗಡೆ ಬರುತ್ತಿದ್ದ ಅವರನ್ನು ಕಂಡು, ಶ್ರೀರಾಮನು "ಲಕ್ಷ್ಮಣ, ಅಲ್ಲಿ ನೋಡು! ಭಗವಾನ್ ಅಗಸ್ತ್ಯಮುನಿಗಳೇ ಹೊರಟುಬಂದಿದ್ದಾರೆ. ಅವರ ತೇಜೋವಿಶೇಷದ ಉತ್ಕರ್ಷವನ್ನು ನೋಡು. ತಪಸ್ಸಿನ ನಿಧಿ ಇವರು" ಎಂದನು (೨೧-೨೩). ಸೂರ್ಯನಂತೆ ಬೆಳಗುತ್ತಿದ್ದ ಅಗಸ್ತ್ಯರನ್ನು ಕೊಂಡಾಡುತ್ತ ಮುಂದೆ ಹೋಗಿ, ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ಅವರ ಪಾದಗಳಿಗೆ ವಂದಿಸಿ ಆನಂದದಿಂದ ಕೈಮುಗಿದುಕೊಂಡು ನಿಂತನು (೨೪-೨೫). ಅಗಸ್ತ್ಯರು ಕಾಕುತ್ಸ್ಥನಿಗೆ ಪೀಠವನ್ನು ಕೊಟ್ಟು, ಜಲವನ್ನಿತ್ತು, ಕುಳಿತುಕೊಳ್ಳುವಂತೆ ತಿಳಿಸಿ, ಕುಶಲವನ್ನು ವಿಚಾರಿಸಿ ಆ ಮೂವರನ್ನೂ ಆದರದಿಂದ ಸತ್ಕರಿಸಿದರು. ಅನಂತರ ವೈಶ್ವದೇವವನ್ನಾಚರಿಸಿ ಅರ್ಘ್ಯಾದಿಗಳಿಂದ ಆ ಅತಿಥಿಗಳನ್ನು ಪೂಜಿಸಿ ವಾನಪ್ರಸ್ಥಧರ್ಮಾನುಸಾರವಾಗಿ ಅವರಿಗೆ (ಕಂದಮೂಲಾದ್ಯಾಹಾರಗಳಿಂದ) ಭೋಜನಮಾಡಿಸಿದರು (೨೬-೨೭). ಆಮೇಲೆ ಅಗಸ್ತ್ಯಮುನಿಗಳು ಒಂದು ಆಸನದ ಮೇಲೆ ಬಂದು

ಅಗ್ನಿಂ ಹುತ್ವಾ ಪ್ರದಾಯಾರ್ಘ್ಯಮತಿಥಿಂ ಪ್ರತಿಪೂಜಯೇತ್ ।
ಅನ್ಯಥಾ ಖಲು ಕಾಕುತ್ಸ್ಥ ತಪಸ್ವೀ ಸಮುದಾಚರನ್ ॥ ೨೯

ದುಃಸಾಕ್ಷೀವ ಪರೇ ಲೋಕೇ ಸ್ವಾನಿ ಮಾಂಸಾನಿ ಭಕ್ಷಯೇತ್ ।
ರಾಜಾ ಸರ್ವಸ್ಯ ಲೋಕಸ್ಯ ಧರ್ಮಚಾರೀ ಮಹಾರಥಃ ॥ ೩೦

ಪೂಜನೀಯಶ್ಚ ಮಾನ್ಯಶ್ಚ ಭವಾನ್ ಪ್ರಾಪ್ತಃ ಪ್ರಿಯಾತಿಥಿಃ ।
ಏವಮುಕ್ತ್ವಾ ಫಲೈರ್ಮೂಲೈಃ ಪುಷ್ಪೈರನ್ಯೈಶ್ಚ ರಾಘವಮ್ ॥ ೩೧

ಪೂಜಯಿತ್ವಾ ಯಥಾಕಾಮಂ ಪುನರೇವ ತತೋಽಬ್ರವೀತ್ ।
ಇದಂ ದಿವ್ಯಂ ಮಹಚ್ಚಾಪಂ ಹೇಮರತ್ನವಿಭೂಷಿತಮ್ ॥ ೩೨

ವೈಷ್ಣವಂ ಪುರುಷವ್ಯಾಘ್ರ ನಿರ್ಮಿತಂ ವಿಶ್ವಕರ್ಮಣಾ ।
ಅಮೋಘಃ ಸೂರ್ಯಸಂಕಾಶೋ ಬ್ರಹ್ಮದತ್ತಃ ಶರೋತ್ತಮಃ ॥ ೩೩

---

ಕುಳಿತರು. ಧರ್ಮಕೋವಿದನಾದ ಶ್ರೀರಾಮನು ಅವರೆದುರಿಗೆ ಕೈಮುಗಿದು ಕೊಂಡು ಕುಳಿತನು. ಅಗಸ್ತ್ಯರು "ಶ್ರೀರಾಮ, ವೈಶ್ವದೇವವನ್ನು ಆಚರಿಸಿ, ಅತಿಥಿಗಳಿಗೆ ಅರ್ಘ್ಯಾದಿಗಳನ್ನಿತ್ತು ಸತ್ಕರಿಸಬೇಕು. ವಾನಪ್ರಸ್ಥನು ಈ ವಿಧಿ ಯನ್ನು ಉಲ್ಲಂಘಿಸಿ ನಡೆದರೆ, ಸುಳ್ಳುಸಾಕ್ಷ್ಯವನ್ನು ಹೇಳಿದವನಂತೆ ಪರಲೋಕ ದಲ್ಲಿ ತನ್ನ ಮಾಂಸವನ್ನು ತಾನೇ ತಿನ್ನಬೇಕಾದೀತು (೨೮-೩೦). ಧರ್ಮನಿಷ್ಠ ನಾಗಿ ಮಹಾರಥನೆನಿಸಿದ ರಾಜನು ಸಕಲಪ್ರಜೆಗಳಿಗೂ ಪೂಜ್ಯನು, ಸಂಮಾನ್ಯನು. ಅಂಥ ನೀನು ನನಗೆ ಅತ್ಯಂತ ಪ್ರಿಯನಾದ ಅತಿಥಿಯಾಗಿ ಬಂದಿದ್ದೀಯೆ!" ಎಂದು ಹೇಳಿದರು. ಫಲ, ಮೂಲ, ಪುಷ್ಪಗಳನ್ನು ರಾಘವನಿಗೆ ತರಿಸಿಕೊಟ್ಟು,* ಅಗಸ್ತ್ಯಮುನಿಗಳು "ರಾಮ, ಸುವರ್ಣರತ್ನಗಳಿಂದ ಭೂಷಿತವಾದ ಈ ದಿವ್ಯಚಾಪ ವನ್ನು ನೋಡು! (೩೧-೩೨). ಇದು ವಿಷ್ಣುವಿನ ಚಾಪ; ವಿಶ್ವಕರ್ಮನು ನಿರ್ಮಿಸಿದ್ದು. ಸೂರ್ಯನಂತೆ ಬೆಳಗುವ ಈ ಅಮೋಘಾಸ್ತ್ರವು ಬ್ರಹ್ಮದತ್ತವಾದದ್ದು.

---

* ಪುನಃ ಫಲಮೂಲಗಳನ್ನು ತರಿಸಿದ್ದು ಸೀತೆಗೋಸ್ಕರವೆಂದೂ ಅವಳು ಮೊದಲು ಭೋಜನಮಾಡಿರಲಿಲ್ಲವೆಂದೂ ಹೇಳುತ್ತಾರೆ. ಆದರೆ ಇದು ಮೊದಲು ಭೋಜನಮಾಡಿಸಿದ ವೃತ್ತಾಂತದ ಅನುವಾದವಿರಬಹುದು. ಇಲ್ಲವೆ, ಭೋಜನಸಾಮಗ್ರಿಯನ್ನು ತಂದಿಟ್ಟು, ಪಕ್ಕಂಡ ಮಾತುಗಳನ್ನು ಹೇಳಿ, ಆಮೇಲೆ ಭೋಜನಮಾಡಿಸಿರಬಹುದು.

ದತ್ತೌ ಮಮ ಮಹೇಂದ್ರೇಣ ತೂಣೀ ಚಾಕ್ಷಯಸಾಯಕೌ ।
ಸಂಪೂರ್ಣೌ ನಿಶಿತೈರ್ಬಾಣೈರ್ಜ್ವಲದ್ಭಿರಿವ ಪಾವಕೈಃ ॥ ೩೪

ಮಹಾರಜತಕೋಶೋಽಯಮಸಿರ್ಹೇಮವಿಭೂಷಿತಃ ।
ಅನೇನ ಧನುಷಾ ರಾಮ ಹತ್ವಾ ಸಂಖ್ಯೇ ಮಹಾಸುರಾನ್ ॥ ೩೫

ಆಜಹಾರ ಶ್ರಿಯಂ ದೀಪ್ತಾಂ ಪುರಾ ವಿಷ್ಣುರ್ದಿವೌಕಸಾಮ್ ।
ತದ್ಧನುಸ್ತೌ ಚ ತೂಣೀರೌ ಶರಂ ಖಡ್ಗಂ ಚ ಮಾನದ ॥ ೩೬

ಜಯಾಯ ಪ್ರತಿಗೃಹ್ಣೀಷ್ವ ವಜ್ರಂ ವಜ್ರಧರೋ ಯಥಾ ।
ಏವಮುಕ್ತ್ವಾ ಮಹಾತೇಜಾಃ ಸಮಸ್ತಂ ತದ್ವರಾಯುಧಮ್ ॥ ೩೭

ದತ್ತ್ವಾ ರಾಮಾಯ ಭಗವಾನಗಸ್ತ್ಯಃ ಪುನರಬ್ರವೀತ್ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಾದಶಃ ಸರ್ಗಃ

ಈ ಎರಡು ಬತ್ತಳಿಕೆಗಳನ್ನು ಇಂದ್ರನು ನನಗೆ ಕೊಟ್ಟಿದ್ದಾನೆ. ಇವುಗಳಲ್ಲಿರುವ ಬಾಣಗಳು ಅಕ್ಷಯವಾದವು. ಬೆಂಕಿಯಂತೆ ಬೆಳಗುವ ಬಾಣಗಳಿಂದ ಇವು ತುಂಬಿವೆ (೩೩-೩೪). ಈ ಚಿನ್ನದ ಒರೆಯಲ್ಲಿ ಚಿನ್ನದ ಹಿಡಿಕೈಯುಳ್ಳ ಖಡ್ಗವಿದೆ. ಶ್ರೀರಾಮ, ಪೂರ್ವದಲ್ಲಿ ವಿಷ್ಣುವು ಈ ಧನುಸ್ಸನ್ನು ಹಿಡಿದು ಯುದ್ಧಮಾಡಿ ಮಹಾದೈತ್ಯರನ್ನು ಸಂಹರಿಸಿದ್ದಾನೆ. ದೇವತೆಗಳಿಗೆ ಕಳೆದುಹೋದ ಐಶ್ವರ್ಯವನ್ನು ದೊರಕಿಸಿಕೊಟ್ಟಿದ್ದಾನೆ. ವೀರಾಗ್ರಣಿ, ಇದು ವಿಷ್ಣುವು ಉಪಯೋಗಿಸಿದ ಅದೇ ಧನುಸ್ಸು, ಅವೇ ಬತ್ತಳಿಕೆಗಳು, ಅದೇ ಬಾಣ, ಅದೇ ಖಡ್ಗ (೩೫-೩೬). ಇವುಗಳನ್ನು ಸ್ವೀಕರಿಸು. ನಿನಗೆ ವಿಜಯವಾಗಲಿ! ದೇವೇಂದ್ರನಲ್ಲಿ ವಜ್ರಾಯುಧವಿರುವಂತೆ ಈ ಆಯುಧಸಾಮಗ್ರಿಯು ನಿನ್ನ ವಶದಲ್ಲಿರಲಿ!" ಎಂದು ಹೇಳಿದರು. ಹೀಗೆ ಹೇಳಿ ಮಹಾತೇಜಸ್ವಿಗಳಾದ ಭಗವಾನ್ ಅಗಸ್ತ್ಯರು ಅವನ್ನು ಶ್ರೀರಾಮನಿಗೆ ಅನುಗ್ರಹಿಸಿಕೊಟ್ಟು ಪುನಃ ಮಾತನಾಡಿದರು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹನ್ನೆರಡನೆಯ ಸರ್ಗ

## ತ್ರಯೋದಶಃ ಸರ್ಗಃ

### ಪಂಚವಟೀಗಮನಮ್

ರಾಮ ಪ್ರೀತೋಽಸ್ಮಿ ಭದ್ರಂ ತೇ ಪರಿತುಷ್ಟೋಽಸ್ಮಿ ಲಕ್ಷ್ಮಣ ।
ಅಭಿವಾದಯಿತುಂ ಯನ್ಮಾಂ ಸಂಪ್ರಾಪ್ತೌ ಸಹ ಸೀತಯಾ ॥ ೧

ಅಧ್ವಶ್ರಮೇಣ ವಾಂ ಖೇದೋ ಬಾಧತೇ ಪ್ರಚುರಶ್ರಮಃ ।
ವ್ಯಕ್ತಮುತ್ಕಂಠತೇ ಚಾಪಿ ಮೈಥಿಲೀ ಜನಕಾತ್ಮಜಾ ॥ ೨

ಏಷಾ ಹಿ ಸುಕುಮಾರೀ ಚ ದುಃಖೈಶ್ಚ ನ ವಿಮಾನಿತಾ ।
ಪ್ರಾಜ್ಯದೋಷಂ ವನಂ ಪ್ರಾಪ್ತಾ ಭರ್ತೃಸ್ನೇಹಪ್ರಚೋದಿತಾ ॥ ೩

ಯಥೈಷಾ ರಮತೇ ರಾಮ ಇಹ ಸೀತಾ ತಥಾ ಕುರು ।
ದುಷ್ಕರಂ ಕೃತವತ್ಯೇಷಾ ವನೇ ತ್ವಾಮನುಗಚ್ಛತಿ ॥ ೪

ಏಷಾ ಹಿ ಪ್ರಕೃತಿಃ ಸ್ತ್ರೀಣಾಮಾಸೃಷ್ಟೇ ರಘುನಂದನ ।
ಸಮಸ್ಥಮನುರಜ್ಯಂತಿ ವಿಷಮಸ್ಥಂ ತ್ಯಜಂತಿ ಚ ॥ ೫

### ಸರ್ಗ ೧೩

ಅಗಸ್ತ್ಯರು ಸೀತಾದೇವಿಯ ಸೌಶೀಲ್ಯವನ್ನು ಹೊಗಳುವುದು
ಪಂಚವಟಿಗೆ ಪ್ರಯಾಣ

ಅಗಸ್ತ್ಯಮುನಿಗಳು ಹೀಗೆಂದರು : "ಶ್ರೀರಾಮ, ನನಗೆ ಆನಂದವಾಯಿತು. ಲಕ್ಷ್ಮಣ, ಸಂತುಷ್ಟನಾದೆನು. ನಿಮಗೆ ಶುಭವಾಗಲಿ ! ನನ್ನನ್ನು ಕಂಡು ವಂದಿಸುವುದಕ್ಕಾಗಿ ಸೀತೆಯೊಡನೆ (ಇಷ್ಟು ದೂರ) ಬಂದಿರಲ್ಲವೆ ? ದಾರಿ ನಡೆದು ನಿಮಗೆ ಆಯಾಸವಾಗಿದೆ : ತುಂಬ ಬಳಲಿದ್ದೀರಿ. ಮಿಥಿಲೇಶ್ವರನ ಪುತ್ರಿಯಾದ ಈ ಜಾನಕಿಗೆ ವಿಶ್ರಾಂತಿ ಬೇಕಾಗಿದೆಯೆಂದು ನೋಡಿದರೇ ಕಾಣಿಸುತ್ತದೆ ! (೧-೨). ಇವಳು ಸುಕುಮಾರಿಯಾಗಿ ಬೆಳೆದವಳು. ಈ ಬಗೆಯ ಕಷ್ಟಗಳಿಂದ ನೊಂದವಳಲ್ಲ. ಅರಣ್ಯದಲ್ಲಿ ಕ್ಲೇಶಗಳು ಬಹಳ. ಗಂಡನಲ್ಲಿರುವ ಪ್ರೇಮಾತಿಶಯದಿಂದ ಇಂಥ ಅರಣ್ಯಕ್ಕೆ ಬಂದಿದ್ದಾಳೆ. ರಾಮ ಇವಳಿಗೆ ಇಲ್ಲಿ ಸಂತೋಷವಾಗುವಂತೆ ನೋಡಿಕೊ. ಸೀತೆಯು ನಿನ್ನನ್ನು ಹಿಂಬಾಲಿಸಿ ಬಂದು ಬಹು ಕಷ್ಟವಾದ ಕೆಲಸಕ್ಕೆ ಕೈಹಾಕಿದ್ದಾಳೆ (೩-೪). ರಘುನಂದನ, ಸಾಮಾನ್ಯವಾಗಿ ಹೆಂಗಸರು ಹೇಗಿರುತ್ತಾರೆಂದರೆ, ಗಂಡನು ಅನುಕೂಲವಾಗಿ ಸುಖದಲ್ಲಿದ್ದಾಗ ಅವನನ್ನು ಪ್ರೀತಿಸು

ಶತಹ್ರದಾನಾಂ ಲೋಲತ್ವಂ ಶಸ್ತ್ರಾಣಾಂ ತೀಕ್ಷ್ಣತಾಂ ತಥಾ ।
ಗರುಡಾನಿಲಯೋಃ ಶೈಘ್ರ್ಯಮನುಗಚ್ಛಂತಿ ಯೋಷಿತಃ ॥ ೬

ಇಯಂ ತು ಭವತೋ ಭಾರ್ಯಾ ದೋಷೈರೇತೈರ್ವಿವರ್ಜಿತಾ ।
ಶ್ಲಾಘ್ಯಾ ಚ ವ್ಯಪದೇಶ್ಯಾ ಚ ಯಥಾ ದೇವೀ ಹ್ಯರುಂಧತೀ ॥ ೭

ಅಲಂಕೃತೋಽಯಂ ದೇಶಶ್ಚ ಯತ್ರ ಸೌಮಿತ್ರಿಣಾ ಸಹ ।
ವೈದೇಹ್ಯಾ ಚಾನಯಾ ರಾಮ ವತ್ಸ್ಯಸಿ ತ್ವಮರಿಂದಮ ॥ ೮

ಏವಮುಕ್ತಃ ಸ ಮುನಿನಾ ರಾಘವಃ ಸಂಯತಾಂಜಲಿಃ ।
ಉವಾಚ ಪ್ರಶ್ರಿತಂ ವಾಕ್ಯಮೃಷಿಂ ದೀಪ್ತಮಿವಾನಲಮ್ ॥ ೯

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವಃ ।
ಗುಣೈಃ ಸಭ್ರಾತೃಭಾರ್ಯಸ್ಯ ವರದಃ ಪರಿತುಷ್ಯತಿ ॥ ೧೦

ಕಿಂ ತು ವ್ಯಾದಿಶ ಮೇ ದೇಶಂ ಸೋದಕಂ ಬಹುಕಾನನಮ್ ।
ಯತ್ರಾಶ್ರಮಪದಂ ಕೃತ್ವಾ ವಸೇಯಂ ನಿರತಃ ಸುಖಮ್ ॥ ೧೧

---

ತ್ತಾರೆ; ಅವನು ಕಷ್ಟದಲ್ಲಿ ಸಿಕ್ಕಿದನೆಂದರೆ ದೂರದಲ್ಲಿದ್ದು ಬಿಡುತ್ತಾರೆ. ಜಗತ್ತು ಸೃಷ್ಟಿಯಾದಂದಿನಿಂದ ಇದು ಸ್ತ್ರೀಯರ ಸ್ವಭಾವವಾಗಿದೆ. (೫). ಇವರಲ್ಲಿ ಮಿಂಚುಗಳ ಚಂಚಲತೆ ಇದೆ; ಶಸ್ತ್ರಗಳ ತೀಕ್ಷ್ಣತೆ ಇದೆ; ಗರುಡನ-ವಾಯುವಿನ ಶೀಘ್ರತೆ ಇದೆ. ಆದರೆ ನಿನ್ನ ಈ ಪತ್ನಿಯಲ್ಲಿ ಇಂಥ ಯಾವ ದೋಷಗಳೂ ಇಲ್ಲ. ಇವಳ ನಡತೆ ಪ್ರಶಂಸನೀಯವಾದದ್ದು. ಪತಿವ್ರತೆಯರಲ್ಲಿ ಅಗ್ರಗಣ್ಯಳು. ಈಕೆ ಸಾಕ್ಷಾತ್ ಅರುಂಧತೀದೇವಿಗೆ ಸಮಾನಳು (೬-೭). ರಾಮ–ನೀನು, ಲಕ್ಷ್ಮಣ, ವೈದೇಹಿ – ಈ ಮೂವರೂ ನನ್ನ ಆಶ್ರಮಕ್ಕೆ ಭೂಷಣಪ್ರಾಯರಾಗಿ ಬಂದಿದ್ದೀರಿ. ಹೇ ವೀರಾಗ್ರಣಿ, ನೀನು ಇವರೊಡನೆ ಇಲ್ಲಿ ವಾಸಮಾಡಬಹುದು" (೮). ಅಗಸ್ತ್ಯಮುನಿಗಳು ಹೀಗೆ ನುಡಿಯಲು, ಅಗ್ನಿಯಂತೆ ಬೆಳಗುತ್ತಿದ್ದ ಅವರನ್ನು ಕುರಿತು ರಾಘವನು ವಿನಯದಿಂದ ಕೈಮುಗಿದುಕೊಂಡು "ಮಹರ್ಷಿಗಳೇ ನಾನು ಧನ್ಯನಾದೆ, ಅನುಗೃಹೀತನಾದೆ. ನನ್ನಲ್ಲಿ, ನನ್ನ ತಮ್ಮನಲ್ಲಿ, ನನ್ನ ಪತ್ನಿಯಲ್ಲಿ– ಇರಬಹುದಾದ ಸಾಮಾನ್ಯ ಗುಣಗಳಿಂದಲೇ ಅನುಗ್ರಹಸಮರ್ಥರಾದ ತಾವು ಸಂತುಷ್ಟರಾದಿರಿ (೯-೧೦). ಆದರೆ, ಜಲಸಮೃದ್ಧಿಯೂ ವೃಕ್ಷಸಂಪತ್ತೂ ಇರುವ

ತತೋಽಬ್ರವೀನ್ಮುನಿಶ್ರೇಷ್ಠಃ ಶ್ರುತ್ವಾ ರಾಮಸ್ಯ ತದ್ವಚಃ ।
ಧ್ಯಾತ್ವಾ ಮುಹೂರ್ತಂ ಧರ್ಮಾತ್ಮಾ ಧೀರೋ ಧೀರತರಂ ವಚಃ ॥೧೨

ಇತೋ ದ್ವಿಯೋಜನೇ ತಾತ ಬಹುಮೂಲಫಲೋದಕಃ ।
ದೇಶೋ ಬಹುಮೃಗಃ ಶ್ರೀಮಾನ್ ಪಂಚವಟ್ಯಭಿವಿಶ್ರುತಃ ॥ ೧೩

ತತ್ರ ಗತ್ವಾಶ್ರಮಪದಂ ಕೃತ್ವಾ ಸೌಮಿತ್ರಿಣಾ ಸಹ ।
ರಂಸ್ಯಸೇ ತ್ವಂ ಪಿತುರ್ವಾಕ್ಯಂ ಯಥೋಕ್ತಮನುಪಾಲಯನ್ ॥ ೧೪

ಕಾಲೋಽಯಂ ಗತಭೂಯಿಷ್ಠೋ ಯಃ ಕಾಲಸ್ತವ ರಾಘವ ।
ಸಮಯೋ ಯೋ ನರೇಂದ್ರೇಣ ಕೃತೋ ದಶರಥೇನ ತೇ ॥ ೧೫

ತೀರ್ಣಪ್ರತಿಜ್ಞಃ ಕಾಕುತ್ಸ್ಥ ಸುಖಂ ರಾಜ್ಯೇ ನಿವತ್ಸ್ಯಸಿ ।
ಧನ್ಯಸ್ತೇ ಜನಕೋ ರಾಮ ಸ ರಾಜಾಃ ರಘುನಂದನ ॥ ೧೬

ಯಸ್ತ್ವಯಾ ಜ್ಯೇಷ್ಠಪುತ್ರೇಣ ಯಯಾತಿರಿವ ತಾರಿತಃ ।
ವಿದಿತೋ ಹ್ಯೇಷ ವೃತ್ತಾಂತೋ ಮಮ ಸರ್ವಸ್ತವಾನಘ ॥ ೧೭

---

ಇನ್ನೊಂದು ಸ್ಥಳದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಸುಖದಿಂದ ವಾಸವಾಗಿರಬೇಕೆಂದು ಉದ್ದೇಶಿಸಿದ್ದೇನೆ. ಆ ಪ್ರದೇಶವನ್ನು ತಾವು ಸೂಚಿಸಬೇಕು" ಎಂದು ಹೇಳಿದನು. ಅದನ್ನು ಕೇಳಿ ಆ ಮುನಿಶ್ರೇಷ್ಠರು ಸ್ವಲ್ಪಹೊತ್ತು ಆಲೋಚಿಸಿ ನಿಶ್ಚಯ ಧ್ವನಿಯಿಂದ "ವತ್ಸ-ರಾಮ, ಇಲ್ಲಿಗೆ ಎರಡು ಯೋಜನಗಳ ದೂರದಲ್ಲಿ ಪಂಚವಟಿಯೆಂಬ ಒಂದು ಪ್ರದೇಶವಿದೆ. ಅದು ಗೆಡ್ಡೆಗೆಣಸು ಹಣ್ಣು ನೀರುಗಳಿಂದ ತುಂಬಿದೆ; ಬಹಳ ಮೃಗಗಳಿವೆ; ಉತ್ತಮವಾದ ಸ್ಥಳ (೧೧-೧೩). ಅಲ್ಲಿ ಪರ್ಣಶಾಲೆಯನ್ನು ನಿರ್ಮಿಸಿಕೊಂಡು ಸೀತಾಲಕ್ಷ್ಮಣರೊಡನೆ ವಾಸಿಸಬಹುದು. ತಂದೆಯ ಆಜ್ಞೆಯನ್ನು ಪಾಲಿಸುತ್ತ ವಿನೋದದಿಂದಿರಬಹುದು. ರಾಘವ, ನಿನ್ನ ತಂದೆಯಾದ ದಶರಥಮಹಾರಾಜನು ವನವಾಸಕ್ಕಾಗಿ ಗೊತ್ತುಮಾಡಿದ ಕಾಲದಲ್ಲಿ ಬಹುಭಾಗ ಕಳೆದುಹೋಯಿತು. (೧೪-೧೫). ನಿನ್ನ ಪ್ರತಿಜ್ಞೆಯನ್ನು ಪೂರೈಸಿ ಪುನಃ ರಾಜ್ಯದಲ್ಲಿ ನೀನು ಸುಖವಾಗಿ ಇರುತ್ತೀಯೆ. ನಿನ್ನನ್ನು ಪಡೆದ ಆ ರಾಜನೇ ಪುಣ್ಯಾತ್ಮ. ರಘುನಂದನ, ನೀನು ಅವನಿಗೆ ಜ್ಯೇಷ್ಠಪುತ್ರನಾಗಿ ಜನಿಸಿ.

ತಪಸಶ್ಚ ಪ್ರಭಾವೇಣ ಸ್ನೇಹಾದ್ದಶರಥಸ್ಯ ಚ ।
ಹೃದಯಸ್ಥಶ್ಚ ತೇ ಛಂದೋ ವಿಜ್ಞಾತಸ್ತಪಸಾ ಮಯಾ ॥ ೧೮

ಇಹ ವಾಸಂ ಪ್ರತಿಜ್ಞಾಯ ಮಯಾ ಸಹ ತಪೋವನೇ ।
ಅತಶ್ಚ ತ್ವಾಮಹಂ ಬ್ರೂಮಿ ಗಚ್ಛ ಪಂಚವಟೀಮಿತಿ ॥ ೧೯

ಸ ಹಿ ರಮ್ಯೋ ವನೋದ್ದೇಶೋ ಮೈಥಿಲೀ ತತ್ರ ರಂಸ್ಯತೇ ।
ಸ ದೇಶಃ ಶ್ಲಾಘನೀಯಶ್ಚ ನಾತಿದೂರೇ ಚ ರಾಘವ ॥ ೨೦

ಗೋದಾವರ್ಯಾಃ ಸಮೀಪೇ ಚ ಮೈಥಿಲೀ ತತ್ರ ರಂಸ್ಯತೇ ।
ಪ್ರಾಜ್ಯಮೂಲಫಲಶ್ಚೈವ ನಾನಾದ್ವಿಜಗಣಾಯುತಃ ॥ ೨೧

ವಿವಿಕ್ತಶ್ಚ ಮಹಾಬಾಹೋ ಪುಣ್ಯೋ ರಮ್ಯಸ್ತಥೈವ ಚ ।
ಭವಾನಪಿ ಸದಾರಶ್ಚ ಶಕ್ತಶ್ಚ ಪರಿರಕ್ಷಣೇ ॥ ೨೨

---

ಪುರುವು ಯಯಾತಿಯನ್ನು ಉದ್ಧರಿಸಿದಂತೆ, ದಶರಥನನ್ನು ಉದ್ಧರಿಸಿದೆ. ನಿನ್ನ ವನಾಗಮನ ವೃತ್ತಾಂತವೆಲ್ಲವೂ ನನಗೆ ತಿಳಿದಿದೆ (೧೬-೧೭). ನನಗೆ ನಿನ್ನಲ್ಲಿ ಮತ್ತು ದಶರಥನಲ್ಲಿ ಇರುವ ಪ್ರೀತಿಯಿಂದ ತಪಃಶಕ್ತಿಯ ಮೂಲಕ ಇದನ್ನರಿತಿದ್ದೇನೆ. ರಾಮ, ಈ ಆಶ್ರಮದಲ್ಲಿ ವಾಸವಾಗಿರುತ್ತೇನೆಂದು ಹೇಳಿ, ಈಗ ಬೇರೊಂದು ಸ್ಥಳವನ್ನು ಅರಸುತ್ತಿದ್ದೀಯೆ. ನಿನ್ನ ಹೃದಯಾಂತರಾಳದಲ್ಲಿರುವ ಉದ್ದೇಶವು ತಪೋಬಲದಿಂದ ನನಗೆ ವಿದಿತವಾಗಿದೆ. ಆದ್ದರಿಂದಲೇ ಪಂಚವಟಿಗೆ ಹೋಗೆಂದು ನಿನಗೆ ಹೇಳುತ್ತಿದ್ದೇನೆ* (೧೮-೧೯). ಆ ವನಪ್ರದೇಶವು ರಮಣೀಯವಾಗಿದೆ. ಮೈಥಿಲಿಯೂ ಆ ಸ್ಥಳವನ್ನು ಮೆಚ್ಚಿ ನಲಿಯುವಳು. ಅದು ಉತ್ತಮವಾದ ಸ್ಥಳ. ಹೆಚ್ಚು ದೂರವೂ ಇಲ್ಲ. ರಾಘವ, ಗೋದಾವರೀನದಿಗೆ ಸಮೀಪದಲ್ಲಿದೆ. ಅಲ್ಲಿ ಮೈಥಿಲಿಯೂ ಸಂತೋಷದಿಂದಿರುವಳು. ಗಡ್ಡೆಗೆಣಸು, ಹಣ್ಣುಗಳು ಯಥೇಚ್ಛವಾಗಿವೆ. ನಾನಾ ಬಗೆಯ ಹಕ್ಕಿಗಳು ಹಿಂಡುಹಿಂಡಾಗಿವೆ (೨೦-೨೧). ಹೇ ಪರಾಕ್ರಮಿ, ಪವಿತ್ರವೂ ರಮಣೀಯವೂ ಆದ ಪಂಚವಟಿಯಲ್ಲಿ ಜನಸಂಚಾರ

---

* ಎಲ್ಲಿ ವಾಸವಾಗಿದ್ದರೆ ರಾಕ್ಷಸರ ವಧೆ ಸಾಧ್ಯವಾಗುತ್ತದೆಯೆಂಬುದನ್ನು ತಿಳಿಯುವುದು ಶ್ರೀರಾಮನ ಉದ್ದೇಶ. ಪಂಚವಟಿಗೆ ಹೋದರೆ ಅದಕ್ಕೆ ತಕ್ಕ ಸನ್ನಿವೇಶಗಳು ಒದಗುತ್ತವೆಯೆಂಬುವುದು ಅಗಸ್ತ್ಯರ ಆಶಯ.

ಅಪಿ ಚಾತ್ರ ವಸನ್ ರಾಮ ತಾಪಸಾನ್ ಪಾಲಯಿಷ್ಯಸಿ ।
ಏತದಾಲಕ್ಷ್ಯತೇ ವೀರ ಮಧೂಕಾನಾಂ ಮಹದ್ವನಮ್ ॥ ೨೩

ಉತ್ತರೇಣಾಸ್ಯ ಗಂತವ್ಯಂ ನ್ಯಗ್ರೋಧಮಭಿಗಚ್ಛತಾ ।
ತತಃ ಸ್ಥಲಮುಪಾರುಹ್ಯ ಪರ್ವತಸ್ಯಾವಿದೂರತಃ ॥ ೨೪

ಖ್ಯಾತಃ ಪಂಚವಟೀತ್ಯೇವ ನಿತ್ಯಪುಷ್ಪಿತಕಾನನಃ ।
ಅಗಸ್ತ್ಯೇನೈವಮುಕ್ತಸ್ತು ರಾಮಃ ಸೌಮಿತ್ರಿಣಾ ಸಹ ॥ ೨೫

ಸತ್ಕೃತ್ಯಾಮಂತ್ರಯಾಮಾಸ ತಮೃಷಿಂ ಸತ್ಯವಾದಿನಮ್ ।
ತೌ ತು ತೇನಾಭ್ಯನುಜ್ಞಾತೌ ಕೃತಪಾದಾಭಿವಂದನೌ ॥ ೨೬

ತದಾಶ್ರಮಾತ್ ಪಂಚವಟೀಂ ಜಗ್ಮತುಃ ಸಹ ಸೀತಯಾ ॥

ಗೃಹೀತಚಾಪೌ ತು ನರಾಧಿಪಾತ್ಮಜೌ
ವಿಷಕ್ತತೂಣೌ ಸಮರೇಷ್ವಕಾತರೌ ।

---

ವಿಲ್ಲ. ನೀನಾದರೋ ಪತ್ನೀಸಮೇತನಾಗಿರತಕ್ಕವನು. (ಆದರೇನಾಯಿತು ?) ಅವಳನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ ನಿನ್ನಲ್ಲುಂಟು (೨೨). ಮುಖ್ಯವಾಗಿ ರಾಮ, ನೀನು ಪಂಚವಟಿಯಲ್ಲಿದ್ದರೆ ತಪಸ್ವಿಗಳ ಪಾಲನೆಯ ಕಾರ್ಯ ನಡೆಯು ವುದು. ಇಗೋ, ಇಲ್ಲಿ ಹಿಪ್ಪೇಗಿಡಗಳ ದೊಡ್ಡ ಕಾಡು ಕಾಣಿಸುವುದಷ್ಟೆ : ಅದರ ಉತ್ತರ ದಿಕ್ಕಿನಲ್ಲಿರುವ ಮಾರ್ಗವನ್ನು ಹಿಡಿದು ಹೋದರೆ ಒಂದು ಆಲದಮರವು ಸಿಕ್ಕುವುದು (೨೩-೨೪). ಅದರ ಬಳಿಯಲ್ಲಿ ಇರುವ ಪ್ರಸ್ಥಭೂಮಿಯನ್ನು ಹತ್ತಿಹೋದರೆ ಒಂದು ಪರ್ವತವು ಕಾಣಿಸುತ್ತದೆ. ಅದರ ಸಮೀಪದಲ್ಲಿಯೇ ಪಂಚವಟೀಕ್ಷೇತ್ರ ಉಂಟು. ಅಲ್ಲಿರುವ ಕಾಡಿನಲ್ಲಿ ಸದಾ ಹೂವುಗಳ ಸುರಿಮಳೆ ” ಎಂದು ಹೇಳಿದರು (೨೫). ಅಗಸ್ತ್ಯಮುನಿಗಳು ಹೀಗೆ ನುಡಿಯಲು, ಶ್ರೀರಾಮನು ಲಕ್ಷ್ಮಣನೊಡನೆ ಸತ್ಯಸಂಧರಾದ ಅವರಿಗೆ ಅಭಿವಾದನೆಮಾಡಿ, ಬೀಳ್ಕೊಡಲು ಅನುಜ್ಞೆಯನ್ನು ಬೇಡಿದನು. ಅಗಸ್ತ್ಯರ ಅನುಜ್ಞೆಯನ್ನು ಪಡೆದು, ಶ್ರೀರಾಮ ಲಕ್ಷ್ಮಣರು ಆ ಋಷಿಗಳ ಪಾದಗಳಿಗೆ ವಂದಿಸಿ ಸೀತೆಯೊಡನೆ ಪಂಚವಟಿಗೆ ಪ್ರಯಾಣಮಾಡಿದರು (೨೬). ರಣಧೀರರಾದ ಆ ರಾಜಪುತ್ರರು ಬತ್ತಳಿಕೆಗಳನ್ನು

ಯಥೋಪದಿಷ್ಟೇನ ಪಥಾ ಮಹರ್ಷಿಣಾ
ಪ್ರಜಗ್ಮತುಃ ಪಂಚವಟೀಂ ಸಮಾಹಿತೌ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಯೋದಶಃ ಸರ್ಗಃ

---

## ಚತುರ್ದಶಃ ಸರ್ಗಃ

### ಜಟಾಯುಸ್ಸಂಗಮಃ

ಅಥ ಪಂಚವಟೀಂ ಗಚ್ಛನ್ನಂತರಾ ರಘುನಂದನಃ ।
ಆಸಸಾದ ಮಹಾಕಾಯಂ ಗೃಧ್ರಂ ಭೀಮಪರಾಕ್ರಮಮ್ ॥ ೧

ತಂ ದೃಷ್ಟ್ವಾ ತೌ ಮಹಾಭಾಗೌ ವಟಸ್ಥಂ ರಾಮಲಕ್ಷ್ಮಣೌ ।
ಮೇನಾತೇ ರಾಕ್ಷಸಂ ಪಕ್ಷಿಂ ಬ್ರುವಾಣೌ ಕೋ ಭವಾನಿತಿ ॥ ೨

ಸ ತೌ ಮಧುರಯಾ ವಾಚಾ ಸೌಮ್ಯಯಾ ಪ್ರೀಣಯನ್ನಿವ ।
ಉವಾಚ ವತ್ಸ ಮಾಂ ವಿದ್ಧಿ ವಯಸ್ಯಂ ಪಿತುರಾತ್ಮನಃ ॥ ೩

---

ಬಿಗಿದುಕಟ್ಟಿ ಧನುರ್ಧಾರಿಗಳಾಗಿ, ಅಗಸ್ತ್ಯಮಹರ್ಷಿಗಳು ಹೇಳಿದ ದಾರಿಯನ್ನು ಹಿಡಿದು ಸಾವಧಾನಚಿತ್ತದಿಂದ ಪಂಚವಟಿಗೆ ಹೊರಟರು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿಮೂರನೆಯ ಸರ್ಗ

---

## ಸರ್ಗ ೧೪

### ದಾರಿಯಲ್ಲಿ ಜಟಾಯುವಿನ ಭೇಟಿ : ಅವನ ಪರಿಚಯ

ರಘುನಂದನನು ಪಂಚವಟಿಗೆ ಹೋಗುವಾಗ ನಡುವೆ ಮಹಾಶರೀರಿಯೂ ಭೀಮಪರಾಕ್ರಮಿಯೂ ಆದ ಒಂದು ಗೃಧ್ರವನ್ನು ಕಂಡನು. ಅದು ಒಂದು ಆಲದಮರದಮೇಲೆ ಕುಳಿತಿದ್ದಿತು. ಯಾವನೋ ಒಬ್ಬ ರಾಕ್ಷಸನು ಪಕ್ಷಿಯ ವೇಷದಲ್ಲಿ ಕುಳಿತಿರಬೇಕೆಂದು ರಾಮಲಕ್ಷ್ಮಣರು ಊಹಿಸಿ "ಎಲೈ ನೀನು ಯಾರು ?" ಎಂದು ಕೇಳಿದರು (೧-೨). ಆ ಪಕ್ಷಿಯು ಮೃದುಮಧುರವಾದ ಧ್ವನಿಯಿಂದ "ವತ್ಸ, ನಿನ್ನ ತಂದೆಯಾದ ದಶರಥರಾಜನಿಗೆ ನಾನು ಮಿತ್ರನೆಂದು

ಸ ತಂ ಪಿತೃಸಖಂ ಬುದ್ಧ್ವಾ ಪೂಜಯಾಮಾಸ ರಾಘವಃ ।
ಸ ತಸ್ಯ ಕುಲಮವ್ಯಗ್ರಮಥ ಪಪ್ರಚ್ಛ ನಾಮ ಚ ॥ ೪

ರಾಮಸ್ಯ ವಚನಂ ಶ್ರುತ್ವಾ ಸರ್ವಭೂತಸಮುದ್ಭವಮ್ ।
ಆಚಚಕ್ಷೇ ದ್ವಿಜಸ್ತಸ್ಮೈ ಕುಲಮಾತ್ಮಾನಮೇವ ಚ ॥ ೫

ಪೂರ್ವಕಾಲೇ ಮಹಾಬಾಹೋ ಯೇ ಪ್ರಜಾಪತಯೋಽಭವನ್ ।
ತಾನ್ ಮೇ ನಿಗದತಃ ಸರ್ವಾನಾದಿತಃ ಶೃಣು ರಾಘವ ॥ ೬

ಕರ್ದಮಃ ಪ್ರಥಮಸ್ತೇಷಾಂ ವಿಕೃತಸ್ತದನಂತರಃ ।
ಶೇಷಶ್ಚ ಸಂಶ್ರಯಶ್ಚೈವ ಬಹುಪುತ್ರಃ ಪ್ರತಾಪವಾನ್ ॥ ೭

ಸ್ಥಾಣುರ್ಮರೀಚಿರತ್ರಿಶ್ಚ ಕ್ರತುಶ್ಚೈವ ಮಹಾಬಲಃ ।
ಪುಲಸ್ತ್ಯಶ್ಚಾಂಗಿರಾಶ್ಚೈವ ಪ್ರಚೇತಾಃ ಪುಲಹಸ್ತಥಾ ॥ ೮

ದಕ್ಷೋ ವಿವಸ್ವಾನಪರೋಽರಿಷ್ಟನೇಮಿಶ್ಚ ರಾಘವ ।
ಕಶ್ಯಪಶ್ಚ ಮಹಾತೇಜಾಸ್ತೇಷಾಮಾಸೀಚ್ಚ ಪಶ್ಚಿಮಃ ॥ ೯

ಪ್ರಜಾಪತೇಸ್ತು ದಕ್ಷಸ್ಯ ಬಭೂವುರಿತಿ ವಿಶ್ರುತಮ್ ।
ಷಷ್ಟಿರ್ದುಹಿತರೋ ರಾಮ ಯಶಸ್ವಿನ್ಯೋ ಮಹಾಯಶಃ ॥ ೧೦

---

ತಿಳಿ" ಎಂದು ಅವರಿಗೆ ಸಂತೋಷವಾಗುವಂತೆ ನುಡಿಯಿತು (೩). ತನ್ನ ತಂದೆಯ ಮಿತ್ರನೆಂಬುದನ್ನು ಕೇಳಿ ಶ್ರೀರಾಮನು ಆ ಗೃಧ್ರವನ್ನು ಗೌರವದಿಂದ ಕಂಡು "ಗೃಧ್ರರಾಜ, ನಿನ್ನ ಕುಲವಾವುದು ? ನಿನ್ನ ಹೆಸರೇನು ? " ಎಂದು ಧೀರವಾಣಿಯಿಂದ ಕೇಳಿದನು. ಆ ಪಕ್ಷಿಯು ತನ್ನ ಕುಲನಾಮಗಳನ್ನೂ ಪ್ರಸಂಗ ವಶದಿಂದ ಸಕಲಪ್ರಾಣಿಗಳ ಉತ್ಪತ್ತಿಕ್ರಮವನ್ನೂ ಹೇಳಲಾರಂಭಿಸಿತು (೪-೫) : "ಆಜಾನುಬಾಹು – ರಾಘವ, ಪೂರ್ವದಲ್ಲಿ (ಹದಿನೇಳು ಮಂದಿ) ಪ್ರಜಾಪತಿಗಳಾದರು. ಅವರೆಲ್ಲರನ್ನೂ ಕ್ರಮವಾಗಿ ತಿಳಿಸುತ್ತೇನೆ, ಕೇಳು : ಕರ್ದಮನು ಮೊದಲನೆಯ ಪ್ರಜಾಪತಿ. ಅನಂತರ ವಿಕ್ರೀತ, ಶೇಷ, ಸಂಶ್ರಯ, ಬಹುಪುತ್ರ, ಸ್ಥಾಣು, ಮರೀಚಿ, ಅತ್ರಿ, ಕ್ರತು, ಪುಲಸ್ತ್ಯ, ಅಂಗಿರಸ, ಪ್ರಚೇತಸ, ಪುಲಹ, ದಕ್ಷ, ವಿವಸ್ವಾನ್, ಅರಿಷ್ಟನೇಮಿ ಮತ್ತು ಕಶ್ಯಪರೆಂಬ ಹದಿನಾರು ಮಂದಿ ಪ್ರಜಾಪತಿಗಳು ಆದರು (೬-೯). ಶ್ರೀರಾಮ, ಅವರಲ್ಲಿ ದಕ್ಷಪ್ರಜಾಪತಿಗೆ ಕೀರ್ತಿ

ಕಶ್ಯಪಃ ಪ್ರತಿಜಗ್ರಾಹ ತಾಸಾಮಷ್ಟೌ ಸುಮಧ್ಯಮಾಃ ।
ಅದಿತಿಂ ಚ ದಿತಿಂ ಚೈವ ದನುಮಪ್ಯಥ ಕಾಲಿಕಾಮ್ ॥ ೧೧

ತಾಮ್ರಾಂ ಕ್ರೋಧವಶಾಂ ಚೈವ ಮನುಂ ಚಾಪ್ಯನಲಾಮಪಿ ।
ತಾಸ್ತು ಕನ್ಯಾಸ್ತತಃ ಪ್ರೀತಃ ಕಶ್ಯಪಃ ಪುನರಬ್ರವೀತ್ ॥ ೧೨

ಪುತ್ರಾಂಸ್ತ್ರೈಲೋಕ್ಯಭರ್ತೄನ್ ವೈ ಜನಯಿಷ್ಯಥ ಮತ್ಸಮಾನ್ ।
ಅದಿತಿಸ್ತನ್ಮನಾ ರಾಮ ದಿತಿಶ್ಚ ದನುರೇವ ಚ ॥ ೧೩

ಕಾಲಿಕಾ ಚ ಮಹಾಬಾಹೋ ಶೇಷಾಸ್ತ್ವಮನಸೋಽಭವನ್ ।
ಅದಿತ್ಯಾಂ ಜಜ್ಞಿರೇ ದೇವಾಸ್ತ್ರಯಸ್ತ್ರಿಂಶದರಿಂದಮ ॥ ೧೪

ಆದಿತ್ಯಾ ವಸವೋ ರುದ್ರಾ ಹ್ಯಶ್ವಿನೌ ಚ ಪರಂತಪ ।
ದಿತಿಸ್ತ್ವಜನಯತ್ ಪುತ್ರಾನ್ ದೈತ್ಯಾಂಸ್ತಾತ ಯಶಸ್ವಿನಃ ॥ ೧೫

ತೇಷಾಮಿಯಂ ವಸುಮತೀ ಪುರಾಸೀತ್ ಸವನಾರ್ಣವಾ ।
ದನುಸ್ತ್ವಜನಯತ್ ಪುತ್ರಮಶ್ವಗ್ರೀವಮರಿಂದಮ ॥ ೧೬

---

ಶಾಲಿನಿಯರಾದ ಅರುವತ್ತು ಹೆಣ್ಣುಮಕ್ಕಳಿದ್ದರೆಂದು ಕೇಳಿಬಲ್ಲೆನು. ಅವರಲ್ಲಿ ಅದಿತಿ, ದಿತಿ, ದನು, ಕಾಲಿಕಾ, ತಾಮ್ರಾ, ಕ್ರೋಧವಶಾ, ಮನು ಮತ್ತು ಅನಲಾ ಎಂಬ ಎಂಟುಮಂದಿ ಕನ್ನಿಕೆಯರನ್ನು ಕಶ್ಯಪನು ಮದುವೆಯಾದನು (೧೦-೧೧). ಆತನು ಅದಿತಿ ಮುಂತಾದ ಪತ್ನಿಯರನ್ನು ಕುರಿತು ಸಂತೋಷದಿಂದ "ಎಲೌ ಸುಂದರಿಯರೆ, ನನಗೆ ಸಮಾನರಾದ ಮಕ್ಕಳನ್ನು ನೀವು ಪಡೆಯುವಿರಿ. ಅವರು ಮೂರುಲೋಕಗಳನ್ನೂ ರಕ್ಷಿಸಲು ಸಮರ್ಥರಾಗಿರುವರು" ಎಂದು ನುಡಿದನು (೧೨). ಶ್ರೀರಾಮ, ಅವರಲ್ಲಿ ಅದಿತಿ, ದಿತಿ, ದನು, ಕಾಲಿಕಾ ಎಂಬ ನಾಲ್ವರು ಮಾತ್ರ ಅಂಥ ಶ್ರೇಷ್ಠ ಪುತ್ರರನ್ನು ಪಡೆಯಲು ಆಸಕ್ತಿಹೊಂದಿದರು. ಉಳಿದವರು ಆ ವಿಷಯದಲ್ಲಿ ಆದರವನ್ನಿಡಲಿಲ್ಲ. ಅದಿತಿಯಲ್ಲಿ ಮೂವತ್ತುಮೂರು ದೇವತೆಗಳು ಜನಿಸಿದರು (೧೩-೧೪). ಅವರು ಯಾರೆಂದರೆ : ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು ಮತ್ತು ಇಬ್ಬರು ಅಶ್ವಿನೀದೇವತೆಗಳು. ವತ್ಸ–ರಾಮ, ದಿತಿಯು ಲೋಕವಿಖ್ಯಾತರಾದ ದೈತ್ಯರಿಗೆ ಜನ್ಮ ಕೊಟ್ಟಳು (೧೫) ಅರಣ್ಯ ಸಮುದ್ರಗಳಿಂದ ಸಮೇತವಾಗಿ ಈ ಪೃಥ್ವಿಯು ಹಿಂದೆ ಆ ದೈತ್ಯರಿಗೆ ಅಧೀನ

**ನರಕಂ ಕಾಲಕಂ ಚೈವ ಕಾಲಿಕಾಪಿ ವ್ಯಜಾಯತ ।**
**ಕ್ರೌಂಚೀಂ ಭಾಸೀಂ ತಥಾ ಶ್ಯೇನೀಂ ಧೃತರಾಷ್ಟ್ರೀಂ ತಥಾ ಶುಕೀಮ್ ॥**

**ತಾಮ್ರಾಪಿ ಸುಷುವೇ ಕನ್ಯಾಃ ಪಂಚೈತಾ ಲೋಕವಿಶ್ರುತಾಃ ।**
**ಉಲೂಕಾನ್ ಜನಯತ್ ಕ್ರೌಂಚೀ ಭಾಸೀ ಭಾಸಾನ್ ವ್ಯಜಾಯತ ॥**

**ಶ್ಯೇನೀ ಶ್ಯೇನಾಂಶ್ಚ ಗೃಧ್ರಾಂಶ್ಚ ವ್ಯಜಾಯತ ಸುತೇಜಸಃ ।**
**ಧೃತರಾಷ್ಟ್ರೀ ತು ಹಂಸಾಂಶ್ಚ ಕಲಹಂಸಾಂಶ್ಚ ಸರ್ವಶಃ ॥** ೧೯

**ಚಕ್ರವಾಕಾಂಶ್ಚ ಭದ್ರಂ ತೇ ವಿಜಜ್ಞೇ ಸಾಪಿ ಭಾಮಿನೀ ।**
**ಶುಕೀ ನತಾಂ ವಿಜಜ್ಞೇ ತು ನತಾಯಾ ವಿನತಾ ಸುತಾ ॥** ೨೦

**ದಶ ಕ್ರೋಧವಶಾ ರಾಮ ವಿಜಜ್ಞೇ ಹ್ಯಾತ್ಮಸಂಭವಾಃ ।**
**ಮೃಗೀಂ ಚ ಮೃಗಮಂದಾಂ ಚ ಹರೀಂ ಭದ್ರಮದಾಮಪಿ ॥** ೨೧

**ಮಾತಂಗೀಮಪಿ ಶಾರ್ದೂಲೀಂ ಶ್ವೇತಾಂಚ ಸುರಭಿಂ ತಥಾ ।**
**ಸರ್ವಲಕ್ಷಣಸಂಪನ್ನಾಂ ಸುರಸಾಂ ಕದ್ರುಕಾಮಪಿ ॥** ೨೨

---

ವಾಗಿತ್ತು. ದನುವಿಗೆ ಅಶ್ವಗ್ರೀವನೆಂಬ ಪುತ್ರನು ಹುಟ್ಟಿದನು. ಕಾಲಿಕೆಗೆ ನರಕ, ಕಾಲಕ–ಎಂಬ ಮಕ್ಕಳು ಹುಟ್ಟಿದರು. (ಉಳಿದ ಪತ್ನಿಯರಲ್ಲಿ) ತಾಮ್ರೆಯು ಕ್ರೌಂಚಿ, ಭಾಸಿ, ಶ್ಯೇನಿ, ಧೃತರಾಷ್ಟ್ರಿ, ಶುಕಿ–ಎಂಬ ಲೋಕವಿಖ್ಯಾತೆಯರಾದ ಐವರು ಕನ್ನಿಕೆಯರನ್ನು ಹಡೆದಳು (೧೬-೧೭). ಕ್ರೌಂಚಿಯು ಉಲೂಕಗಳನ್ನೂ ಭಾಸಿಯು ಭಾಸಗಳೆಂಬ ಪಕ್ಷಿಗಳನ್ನೂ ಪಡೆದರು. ಶ್ಯೇನಿಯು ಶ್ಯೇನ ಮತ್ತು ಗೃಧ್ರಗಳನ್ನೂ ಧೃತರಾಷ್ಟ್ರಿಯು ಹಂಸಕಲಹಂಸಗಳನ್ನೂ ಪ್ರಸವಿಸಿದರು (೧೮-೧೯). ಆ ಧೃತರಾಷ್ಟ್ರಿಯು ಚಕ್ರವಾಕಗಳಿಗೂ ಜನ್ಮವಿತ್ತಳು. ತಾಮ್ರೆಯ ಪುತ್ರಿಯಾದ ಶುಕಿಗೆ ನತೆಯೆಂಬ ಮಗಳು ಹುಟ್ಟಿದಳು. ನತೆಯ ಮಗಳು ವಿನತೆ. ಶ್ರೀರಾಮ, ಕ್ರೋಧವಶೆಯೆಂಬ ಕಶ್ಯಪಪತ್ನಿಗೆ ಮೃಗೀ, ಮೃಗಮಂದಾ, ಹರಿ, ಭದ್ರಮದಾ, ಮಾತಂಗೀ, ಶಾರ್ದೂಲೀ, ಶ್ವೇತಾ, ಸುರಭಿ, ಸರ್ವಲಕ್ಷಣಸಂಪನ್ನೆಯಾದ ಸುರಸಾ ಮತ್ತು ಕದ್ರು—ಎಂಬ ಹತ್ತುಮಂದಿ ಪುತ್ರಿಯರು ಜನಿಸಿದರು (೨೦-೨೨).

ಅಪತ್ಯಂ ತು ಮೃಗಾಃ ಸರ್ವೇ ಮೃಗ್ಯಾ ನರವರೋತ್ತಮ ।
ಋಕ್ಷಾಶ್ಚ ಮೃಗಮಂದಾಯಾಃ ಸೃಮರಾಶ್ಚಮರಾಸ್ತಥಾ ॥ ೨೩

ಹರ್ಯಾಶ್ಚ ಹರಯೋಽಪತ್ಯಂ ವಾನರಾಶ್ಚ ತರಸ್ವಿನಃ ।
ತತಸ್ತ್ವಿರಾವತೀಂ ನಾಮ ಜಜ್ಞೇ ಭದ್ರಮದಾ ಸುತಾಮ್ ॥ ೨೪

ತಸ್ಯಾಸ್ತ್ವೈರಾವತಃ ಪುತ್ರೋ ಲೋಕನಾಥೋ ಮಹಾಗಜಃ ।
ಮಾತಂಗಾಸ್ತ್ವಥ ಮಾತಂಗ್ಯಾ ಅಪತ್ಯಂ ಮನುಜರ್ಷಭ ॥ ೨೫

ಗೋಲಾಂಗೂಲಾಂಶ್ಚ ಶಾರ್ದೂಲೀ ವ್ಯಾಘ್ರಾಂಶ್ಚಾಜನಯತ್ ಸುತಾನ್ ।
ದಿಶಾಗಜಾಂಶ್ಚ ಕಾಕುತ್ಸ್ಥ ಶ್ವೇತಾಪ್ಯಜನಯತ್ ಸುತಾನ್ ॥ ೨೬

ತತೋ ದುಹಿತರೌ ರಾಮ ಸುರಭಿರ್ದ್ವೇ ವ್ಯಜಾಯತ ।
ರೋಹಿಣೀಂ ನಾಮ ಭದ್ರಂ ತೇ ಗಂಧರ್ವೀಂ ಚ ಯಶಸ್ವಿನೀಮ್ ॥

ರೋಹಿಣ್ಯಜನಯದ್ಗಾ ವೈ ಗಂಧರ್ವೀ ವಾಜಿನಃ ಸುತಾನ್ ।
ಸುರಸಾಜನಯನ್ನಾಗಾನ್ ರಾಮ ಕದ್ರೂಸ್ತು ಪನ್ನಗಾನ್ ॥ ೨೮

---

ಹೇ ನರಶ್ರೇಷ್ಠ, ಸಕಲ ಜಿಂಕೆಗಳೂ ಮೃಗಿಯ ಸಂತಾನ. ಕರಡಿಗಳೂ ಸೃಮರ–ಚಮರಮೃಗಗಳೂ ಮೃಗಮಂದೆಯ ಸಂತಾನ. ಸಿಂಹಗಳೂ ಕಪಿಗಳೂ ಹರಿ ಎಂಬುವವಳ ಸಂತಾನ. ಭದ್ರಮದೆಗೆ ಇರಾವತಿಯೆಂಬ ಮಗಳು ಹುಟ್ಟಿದಳು. ಲೋಕಪ್ರಸಿದ್ಧವಾದ ಐರಾವತವೆಂಬ ದಿಗ್ಗಜವೇ ಅವಳ ಪುತ್ರ. ಆನೆಗಳು ಮಾತಂಗಿಯ ಸಂತತಿ (೨೩-೨೫). ಗೋಲಾಂಗೂಲಗಳೆಂಬ ಕಪಿಗಳೂ ಹುಲಿಗಳೂ ಶಾರ್ದೂಲಿಯ ಸಂತತಿ. ಇತರ ದಿಗ್ಗಜಗಳೆಲ್ಲವೂ ಶ್ವೇತೆಯ ಸಂತತಿ. ಶ್ರೀರಾಮ, ಸುರಭಿಯು ರೋಹಿಣೀ, ಗಂಧರ್ವೀ ಎಂಬ ಇಬ್ಬರು ಪುತ್ರಿಯರನ್ನು ಪಡೆದಳು (೨೬-೨೭). ರೋಹಿಣಿಯಿಂದ ಹಸುಗಳೂ ಗಂಧರ್ವಿಯಿಂದ ಅಶ್ವಗಳೂ ಜನಿಸಿದವು ಸುರಸೆಯಿಂದ ನಾಗಗಳೂ ಕದ್ರುವಿನಿಂದ ಪನ್ನಗ* ಗಳೂ ಜನಿಸಿದವು. ಹೇ ಪುರುಷೋತ್ತಮ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ,

---

* ನಾಗ = ಅನೇಕ ಹೆಡೆಗಳಿರುವ ಸರ್ಪ ; ವಿಷವಿಲ್ಲದ ಸರ್ಪ. ಪನ್ನಗ = ಒಂದು ಹೆಡೆಯ ಸರ್ಪ ; ವಿಷವುಳ್ಳ ಸರ್ಪ.

**ಮನುರ್ಮನುಷ್ಯಾನ್ ಜನಯದ್ರಾಮ ಪುತ್ರಾನ್ ಯಶಸ್ವಿನಃ ।**
**ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನ್ ಶೂದ್ರಾಂಶ್ಚ ಮನುಜರ್ಷಭ ॥**

**ಸರ್ವಾನ್ ಪುಣ್ಯಫಲಾನ್ ವೃಕ್ಷಾನನಲಾಪಿ ವ್ಯಜಾಯತ ।**
**ವಿನತಾ ಚ ಶುಕೀಪೌತ್ರೀ ಕದ್ರೂಶ್ಚ ಸುರಸಾಸ್ವಸಾ ॥** ೩೦

**ಕದ್ರೂರ್ನಾಗಂ ಸಹಸ್ರಾಸ್ಯಂ ವಿಜಜ್ಞೇ ಧರಣೀಧರಮ್ ।**
**ದ್ವೌ ಪುತ್ರೌ ವಿನತಾಯಾಸ್ತು ಗರುಡೋಽರುಣ ಏವ ಚ ॥** ೩೧

**ತಸ್ಮಾಜ್ಜಾತೋಽಹಮರುಣಾತ್ ಸಂಪಾತಿಸ್ತು ಮಮಾಗ್ರಜಃ ।**
**ಜಟಾಯುರಿತಿ ಮಾಂ ವಿದ್ಧಿ ಶ್ಯೇನಿಪುತ್ರಮರಿಂದಮ ॥** ೩೨

**ಸೋಽಹಂ ವಾಸಸಹಾಯಸ್ತೇ ಭವಿಷ್ಯಾಮಿ ಯದೀಚ್ಛಸಿ ।**
**ಇದಂ ದುರ್ಗಂ ಹಿ ಕಾಂತಾರಂ ಮೃಗರಾಕ್ಷಸಸೇವಿತಮ್ ॥** ೩೩

**ಸೀತಾಂ ಚ ತಾತ ರಕ್ಷಿಷ್ಯೇ ತ್ವಯಿ ಯಾತೇ ಸಲಕ್ಷ್ಮಣೇ ॥**

---

ಶೂದ್ರರೆಂಬ ನಾಲ್ಕುವರ್ಣಗಳ ಮನುಷ್ಯರು ಮನುವೆಂಬ ಕಶ್ಯಪಪತ್ನಿಯ ಮಕ್ಕಳು (೨೮-೨೯). ಅನಲೆಯು ಉತ್ತಮಫಲಗಳನ್ನು ಕೊಡುವ ವೃಕ್ಷಗಳಿಗೆ ಜನ್ಮವಿತ್ತಳು. ಶ್ರೀರಾಮ, ವಿನತಾದೇವಿಯು ಶುಕಿಯ ಮೊಮ್ಮಗಳೆಂದೂ ಕದ್ರೂದೇವಿಯು ಸುರಸೆಯ ತಂಗಿಯೆಂದೂ ವಿವರಿಸಿದ್ದೇನೆ. ಕದ್ರೂದೇವಿಯು ಭೂಮಿಯನ್ನು ಹೊತ್ತಿರುವ ಸಹಸ್ರಮುಖನಾದ ಆದಿಶೇಷನಿಗೆ ಜನ್ಮವಿತ್ತಿದ್ದಾಳೆ. ವಿನತಾದೇವಿಯು ಗರುಡ, ಅರುಣರೆಂಬ ಇಬ್ಬರು ಪುತ್ರರನ್ನು ಪಡೆದಿದ್ದಾಳೆ (೩೦-೩೧). ಶ್ರೀರಾಮ, ನಾನು ಅರುಣನ ಮಗ. ನನಗೆ ಸಂಪಾತಿಯೆಂಬ ಅಣ್ಣನೊಬ್ಬನಿದ್ದಾನೆ. ನನ್ನ ಹೆಸರು ಜಟಾಯು. ಶ್ಯೇನಿಯ* ಗರ್ಭದಲ್ಲಿ ನಾನು ಜನಿಸಿದ್ದೇನೆ. ನೀನು ಇಲ್ಲಿ ವಾಸಮಾಡುವಾಗ, ನೀನು ಒಪ್ಪುವುದಾದರೆ, ನಿನಗೆ ಸಹಾಯಕನಾಗಿರುತ್ತೇನೆ. ಏಕೆಂದರೆ, ಈ ಅರಣ್ಯವು ದುರ್ಗಮವಾದದ್ದು. ವನ್ಯಮೃಗಗಳಿಗೂ ರಾಕ್ಷಸರಿಗೂ ಇದು ನೆಲೆಯಾಗಿದೆ. ವತ್ಸ, ನೀನು ಲಕ್ಷ್ಮಣ

---

* ಇವಳು ಹಿಂದೆ ಹೇಳಿದ ತಾಮ್ರೆಯ ಮಗಳಾದ ಶ್ಯೇನಿಯಲ್ಲ ; ಅದೇ ಹೆಸರಿನ ಇನ್ನೊಬ್ಬಳು. ಈ ಪ್ರಕರಣದಲ್ಲಿ ಹೇಳಿದ ಸೃಷ್ಟಿಕ್ರಮವು ವೈವಸ್ವತಮನ್ವಂತರಕ್ಕೆ ಸೇರಿದ್ದು.

ಜಟಾಯುಷಂ ತಂ ಪ್ರತಿಪೂಜ್ಯ ರಾಘವೋ
ಮುದಾ ಪರಿಷ್ವಜ್ಯ ಚ ಸಂನತೋಽಭವತ್ ।
ಪಿತುರ್ಹಿ ಶುಶ್ರಾವ ಸಖಿತ್ವಮಾತ್ಮವಾನ್
ಜಟಾಯುಷಾ ಸಂಕಥಿತಂ ಪುನಃ ಪುನಃ ॥ ೩೪

ಸ ತತ್ರ ಸೀತಾಂ ಪರಿದಾಯ ಮೈಥಿಲೀಂ
ಸಹೈವ ತೇನಾತಿಬಲೇನ ಪಕ್ಷಿಣಾ ।
ಜಗಾಮ ತಾಂ ಪಂಚವಟೀಂ ಸಲಕ್ಷ್ಮಣೋ
ರಿಪೂನ್ ದಿಧಕ್ಷನ್ ಶಲಭಾನಿವಾನಲಃ ॥ ೩೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುರ್ದಶಃ ಸರ್ಗಃ

ಸಮೇತನಾಗಿ ಹೊರಗೆ ಹೋದ ಸಂದರ್ಭದಲ್ಲಿ ಸೀತಾದೇವಿಯನ್ನು ರಕ್ಷಿಸುತ್ತಿರುವೆನು" ಎಂದು ಜಟಾಯುವು ಹೇಳಿದನು (೩೨-೩೩). ಜಟಾಯುವಿನ ವಚನವನ್ನು ಕೇಳಿ ಶ್ರೀರಾಮನಿಗೆ ಆನಂದವಾಯಿತು. ಅವನು ಆದರದಿಂದ ಜಟಾಯುವಿಗೆ ತಲೆಬಾಗಿ ಅವನನ್ನು ಆಲಂಗಿಸಿಕೊಂಡನು. ಆತನು ತನ್ನ ತಂದೆಯ ಮಿತ್ರನೆಂಬುದನ್ನು ಮತ್ತೆ ಮತ್ತೆ ಕೇಳಿ ನಲಿದನು (೩೪). ಜಟಾಯುವು ಮೈಥಿಲಿಯನ್ನು ರಕ್ಷಿಸುತ್ತಿರುವುದಕ್ಕೆ ಶ್ರೀರಾಮನು ಒಪ್ಪಿದನು. ಅನಂತರ ಅತಿಬಲಾಢ್ಯನಾದ ಆ ಪಕ್ಷಿರಾಜನನ್ನೂ ಕರೆದುಕೊಂಡು ರಾಘವನು ಲಕ್ಷ್ಮಣಸಮೇತನಾಗಿ ಪಂಚವಟಿಗೆ ತೆರಳಿದನು. ಬೆಂಕಿಯು ದೀಪದಹುಳುಗಳನ್ನು ಸುಟ್ಟುಹಾಕುವಂತೆ, ಶತ್ರುಗಳನ್ನು ಧ್ವಂಸಮಾಡುವುದು ಶ್ರೀರಾಮನ ಸಂಕಲ್ಪವಾಗಿತ್ತು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿನಾಲ್ಕನೆಯ ಸರ್ಗ

## ಪಂಚದಶಃ ಸರ್ಗಃ

### ಪಂಚವಟೀಪರ್ಣಶಾಲಾ

ತತಃ ಪಂಚವಟೀಂ ಗತ್ವಾ ನಾನಾವ್ಯಾಲಮೃಗಾಯುತಾಮ್ ।
ಉವಾಚ ಭ್ರಾತರಂ ರಾಮಃ ಸೌಮಿತ್ರಿಂ ದೀಪ್ತತೇಜಸಮ್ ॥ ೧

ಆಗತಾಃ ಸ್ಮ ಯಥೋದ್ದಿಷ್ಟಂ ಯಂ ದೇಶಂ ಮುನಿರಬ್ರವೀತ್ ।
ಅಯಂ ಪಂಚವಟೀದೇಶಃ ಸೌಮ್ಯ ಪುಷ್ಪಿತಪಾದಪಃ ॥ ೨

ಸರ್ವತಶ್ಚಾರ್ಯತಾಂ ದೃಷ್ಟಿಃ ಕಾನನೇ ನಿಪುಣೋ ಹ್ಯಸಿ ।
ಆಶ್ರಮಃ ಕತರಸ್ಮಿನ್ನೋ ದೇಶೇ ಭವತಿ ಸಂಮತಃ ॥ ೩

ರಮತೇ ಯತ್ರ ವೈದೇಹೀ ತ್ವಮಹಂ ಚೈವ ಲಕ್ಷ್ಮಣ ।
ತಾದೃಶೋ ದೃಶ್ಯತಾಂ ದೇಶಃ ಸಂನಿಕೃಷ್ಟಜಲಾಶಯಃ ॥ ೪

ವನರಾಮಣ್ಯಕಂ ಯತ್ರ ಜಲರಾಮಣ್ಯಕಂ ತಥಾ ।
ಸಂನಿಕೃಷ್ಟಂ ಚ ಯತ್ರ ಸ್ಯಾತ್ ಸಮಿತ್ಪುಷ್ಪಕುಶೋದಕಮ್ ॥ ೫

### ಸರ್ಗ ೧೫

ಪಂಚವಟಿಯಲ್ಲಿ ಲಕ್ಷ್ಮಣನು ನಿರ್ಮಿಸಿದ ಪರ್ಣಶಾಲೆಯನ್ನು ನೋಡಿ
ಶ್ರೀರಾಮನ ಸಂತೋಷ ; ಪರ್ಣಶಾಲೆಯಲ್ಲಿ ವಾಸ

ನಾನಾಬಗೆಯ ದುಷ್ಟಸರ್ಪಗಳಿಂದಲೂ ಮೃಗಗಳಿಂದಲೂ ತುಂಬಿದ್ದ ಪಂಚವಟಿಯನ್ನು ಅವರೆಲ್ಲರೂ ಸೇರಿದರು. ಶ್ರೀರಾಮನು ತೇಜಸ್ವಿಯಾದ ಸೌಮಿತ್ರಿಯನ್ನು ಕರೆದು "ತಮ್ಮ, ನಾವು ಸಂಕಲ್ಪಿಸಿದಂತೆ ಅಗಸ್ತ್ಯಮುನಿಗಳು ಹೇಳಿದ ಸ್ಥಳಕ್ಕೆ ಬಂದು ಸೇರಿದೆವು. ಪುಷ್ಪಿತವೃಕ್ಷಗಳಿರುವ ಈ ಪ್ರದೇಶವೇ ಪಂಚವಟಿ (೧-೨). ಸೌಮ್ಯ, ಎಲ್ಲಾ ಕಡೆಯನ್ನೂ ಗಮನಿಸಿ ನೋಡು. ಅರಣ್ಯದ ಪರಿಶೀಲನೆಯಲ್ಲಿ ನೀನು ನಿಪುಣ. ಯಾವ ಸ್ಥಳದಲ್ಲಿ ನಮ್ಮ ಆಶ್ರಮವಿದ್ದರೆ ಒಳ್ಳೆಯದು? ವೈದೇಹಿಗೆ ಎಲ್ಲಿದ್ದರೆ ಸಂತೋಷವಾದೀತು, ನಮಗೂ ಹಿತಕರವಾದೀತು? ಅಂಥ ಒಂದು ಸ್ಥಳವನ್ನು ನೋಡು. ಹತ್ತಿರದಲ್ಲಿ ನೀರಿನ ಸೌಕರ್ಯವಿರಲಿ (೩-೪). ವನದ ಸೊಬಗು, ಜಲಾಶಯದ ರಮಣೀಯತೆ, ಸಮಿತ್ತು

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಸಂಯತಾಂಜಲಿಃ ।
ಸೀತಾಸಮಕ್ಷಂ ಕಾಕುತ್ಸ್ಥಮಿದಂ ವಚನಮಬ್ರವೀತ್ ॥ ೬

ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ ।
ಸ್ವಯಂ ತು ರುಚಿರೇ ದೇಶೇ ಕ್ರಿಯತಾಮಿತಿ ಮಾಂ ವದ ॥ ೭

ಸುಪ್ರೀತಸ್ತೇನ ವಾಕ್ಯೇನ ಲಕ್ಷ್ಮಣಸ್ಯ ಮಹಾತ್ಮನಃ ।
ವಿಮೃಶನ್ ರೋಚಯಾಮಾಸ ದೇಶಂ ಸರ್ವಗುಣಾನ್ವಿತಮ್ ॥ ೮

ಸ ತಂ ರುಚಿರಮಾಕ್ರಮ್ಯ ದೇಶಮಾಶ್ರಮಕರ್ಮಣಿ ।
ಹಸ್ತೌ ಗೃಹೀತ್ವಾ ಹಸ್ತೇನ ರಾಮಃ ಸೌಮಿತ್ರಿಮಬ್ರವೀತ್ ॥ ೯

ಅಯಂ ದೇಶಃ ಸಮಃ ಶ್ರೀಮಾನ್ ಪುಷ್ಪಿತೈಸ್ತರುಭಿರ್ವೃತಃ ।
ಇಹಾಶ್ರಮಪದಂ ಸೌಮ್ಯ ಯಥಾವತ್ ಕರ್ತುಮರ್ಹಸಿ ॥ ೧೦

ಇಯಮಾದಿತ್ಯಸಂಕಾಶೈಃ ಪದ್ಮೈಃ ಸುರಭಿಗಂಧಿಭಿಃ ।
ಅದೂರೇ ದೃಶ್ಯತೇ ರಮ್ಯಾ ಪದ್ಮಿನೀ ಪದ್ಮಶೋಭಿತಾ ॥ ೧೧

---

ಹೂವು ದರ್ಭೆ ನೀರುಗಳ ಸೌಲಭ್ಯವಿರುವ ಸ್ಥಳವನ್ನು ಗೊತ್ತುಮಾಡು" ಎಂದು ಹೇಳಿದನು (೫). ಆಗ ಸೀತೆಯು ಎದುರಿಗೆ ನಿಂತಿದ್ದಳು. ಲಕ್ಷ್ಮಣನು ಕೈಮುಗಿದು ಕೊಂಡು "ಅಣ್ಣ, ನಿನ್ನೆದುರಿಗೆ ನೂರು ವರ್ಷಗಳಾದರೂ ನಾನು ಸ್ವತಂತ್ರನಾಗಿ ವರ್ತಿಸಲಾರೆ. ಉತ್ತಮವಾದ ಸ್ಥಳವನ್ನು ನೀನೇ ಗೊತ್ತುಮಾಡಿ 'ಇಲ್ಲಿ ಪರ್ಣಶಾಲೆಯನ್ನು ನಿರ್ಮಿಸು' ಎಂಬುದಾಗಿ ನನಗೆ ಆಜ್ಞಾಪಿಸು" ಎಂದು ನುಡಿದನು (೬-೭). ಮಹಾತ್ಮನಾದ ಲಕ್ಷ್ಮಣನ ಆ ಮಾತನ್ನು ಕೇಳಿ ಶ್ರೀರಾಮನು ಸಂಪ್ರೀತನಾದನು. ಅನಂತರ ತಾನೇ ಅರಣ್ಯವನ್ನು ಪರಿಶೀಲಿಸಿ, ಆಶ್ರಮ ನಿರ್ಮಾಣಕ್ಕೆ ಯೋಗ್ಯವಾದ ಒಂದು ಒಳ್ಳೆಯ ಪ್ರದೇಶವನ್ನು ನಿರ್ಧರಿಸಿ, ಲಕ್ಷ್ಮಣನ ಎರಡು ಕೈಗಳನ್ನೂ ತನ್ನ ಕೈಯಲ್ಲಿ ಹಿಡಿದುಕೊಂಡು ಹೀಗೆಂದನು (೮-೯) : "ವತ್ಸ, ಇದು ಏರುತಗ್ಗುಗಳಿಲ್ಲದ ಸಮವಾದ ಪ್ರದೇಶ. ಹೂಬಿಡುವ ಮರಗಳಿಂದ ತುಂಬಿದೆ. ಇಲ್ಲಿ ಪರ್ಣಶಾಲೆಯನ್ನು ಯುಕ್ತರೀತಿಯಲ್ಲಿ ನಿರ್ಮಿಸು. ಸಮೀಪದಲ್ಲಿ ರಮ್ಯವಾದ ಕೊಳವು ಕಾಣಿಸುತ್ತಿದೆ. ಅದರಲ್ಲಿ ಸುಗಂಧವನ್ನು

ಯಥಾಖ್ಯಾತಮಗಸ್ತ್ಯೇನ ಮುನಿನಾ ಭಾವಿತಾತ್ಮನಾ ।
ಇಯಂ ಗೋದಾವರೀ ರಮ್ಯಾ ಪುಷ್ಪಿತೈಸ್ತರುಭಿರ್ವೃತಾ ॥ ೧೨

ಹಂಸಕಾರಂಡವಾಕೀರ್ಣಾ ಚಕ್ರವಾಕೋಪಶೋಭಿತಾ ।
ನಾತಿದೂರೇ ನ ಚಾಸನ್ನೇ ಮೃಗಯೂಥನಿಪೀಡಿತಾ ॥ ೧೩

ಮಯೂರನಾದಿತಾ ರಮ್ಯಾಃ ಪ್ರಾಂಶವೋ ಬಹುಕಂದರಾಃ ।
ದೃಶ್ಯಂತೇ ಗಿರಯಃ ಸೌಮ್ಯ ಫುಲ್ಲೈಸ್ತರುಭಿರಾವೃತಾಃ ॥ ೧೪

ಸೌವರ್ಣೈ ರಾಜತೈಸ್ತಾಮ್ರೈರ್ದೇಶೇ ದೇಶೇ ಚ ಧಾತುಭಿಃ ।
ಗವಾಕ್ಷಿತಾ ಇವಾಭಾಂತಿ ಗಜಾಃ ಪರಮಭಕ್ತಿಭಿಃ ॥ ೧೫

ಸಾಲೈಸ್ತಾಲೈಸ್ತಮಾಲೈಶ್ಚ ಖರ್ಜೂರಪನಸಾಮ್ರಕೈಃ ।
ನೀವಾರೈಸ್ತಿನಿಶೈಶ್ಚೈವ ಪುಂನಾಗೈಶ್ಚೋಪಶೋಭಿತಾಃ ॥ ೧೬

ಚೂತೈರಶೋಕೈಸ್ತಿಲಕೈಶ್ಚಂಪಕೈಃ ಕೇತಕೈರಪಿ ।
ಪುಷ್ಪಗುಲ್ಮಲತೋಪೇತೈಸ್ತೈಸ್ತೈಸ್ತರುಭಿರಾವೃತಾಃ ॥ ೧೭

---

ಬೀರುತ್ತ ಅರಳಿರುವ ತಾವರೆಗಳು ಸೂರ್ಯನಂತೆ ಸುಂದರವಾಗಿವೆ (೧೦-೧೧). ಅಗಸ್ತ್ಯಮಹರ್ಷಿಗಳು ಹೇಳಿದಂತೆ ಇಲ್ಲಿಯೇ ಗೋದಾವರೀನದಿಯು ಹರಿಯುತ್ತಿದೆ. ಪುಷ್ಪಿತವೃಕ್ಷಗಳು ಅದರ ತೀರದಲ್ಲಿ ಬೆಳೆದುನಿಂತಿವೆ. ಹಂಸ, ನೀರುಕೋಳಿ, ಚಕ್ರವಾಕಗಳು ಅಲ್ಲಿ ವಿಹರಿಸುತ್ತಿವೆ. (ನೀರು ಕುಡಿಯುವುದಕ್ಕಾಗಿ) ಜಿಂಕೆಯ ಹಿಂಡು ಮುತ್ತಿದೆ. ಲಕ್ಷ್ಮಣ, ಈ ನದಿಯು ಈ ಸ್ಥಳಕ್ಕೆ ಬಹಳ ದೂರದಲ್ಲಿಯೂ ಬಹಳ ಹತ್ತಿರದಲ್ಲಿಯೂ ಇಲ್ಲ (೧೨-೧೩). ಸೌಮ್ಯ, ಉನ್ನತವಾದ ಆ ಬೆಟ್ಟಗಳು ನವಿಲುಗಳ ಕೇಕಾಧ್ವನಿಯಿಂದ ಮನೋಹರವಾಗಿವೆ. ಅಲ್ಲಿ ಬಹಳ ಗುಹೆಗಳೂ ಇವೆ. ಅರಳಿದ ಮರಗಳು ಕಾಣಬರುತ್ತಿವೆ. ಬೆಟ್ಟಗಳ ವಿವಿಧಪ್ರದೇಶಗಳಲ್ಲಿ ಚಿನ್ನ ಬೆಳ್ಳಿ ಮತ್ತು ತಾಮ್ರದ ಅದಿರುಗಳು ಗೋಚರಿಸುತ್ತವೆ. ಆನೆಗಳನ್ನು ಗವಾಕ್ಷಾಕಾರದಲ್ಲಿರುವ ಹಳದಿ ಬಿಳುಪು ಮತ್ತು ಕೆಂಪಾದ ಪಟ್ಟೆಗಳಿಂದ ಸಿಂಗರಿಸುವರಷ್ಟೆ, ಈ ಬೆಟ್ಟಗಳು ಅಂಥ ಆನೆಗಳಂತೆ ತೋರುತ್ತಿವೆ (೧೪-೧೫). ಲಕ್ಷ್ಮಣ, (ಅಲ್ಲಿ ನೋಡು !) ಮತ್ತಿ, ತಾಳೆ, ಹೊಂಗೆ, ಖರ್ಜೂರ, ಹಲಸು, ಹುಳಿಮಾವು, ನೀವಾರ, ಹೊನ್ನೆ, ಪುನ್ನಾಗ ಮುಂತಾದ ಮರಗಳಿಂದ ಬೆಟ್ಟಗಳು

ಚಂದನೈಃ ಸ್ಯಂದನೈರ್ನೀಪೈಃ ಪರ್ಣಾಸೈರ್ಲಿಕುಚೈರಪಿ ।
ಧವಾಶ್ವಕರ್ಣಖದಿರೈಃ ಶಮೀಕಿಂಶುಕಪಾಟಲೈಃ ॥ ೧೮

ಇದಂ ಪುಣ್ಯಮಿದಂ ಮೇಧ್ಯಮಿದಂ ಬಹುಮೃಗದ್ವಿಜಮ್ ।
ಇಹ ವತ್ಸ್ಯಾಮ ಸೌಮಿತ್ರೇ ಸಾರ್ಧಮೇತೇನ ಪಕ್ಷಿಣಾ ॥ ೧೯

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಪರವೀರಹಾ ।
ಅಚಿರೇಣಾಶ್ರಮಂ ಭ್ರಾತುಶ್ಚಕಾರ ಸುಮಹಾಬಲಃ ॥ ೨೦

ಪರ್ಣಶಾಲಾಂ ಸುವಿಪುಲಾಂ ತತ್ರ ಸಂಘಾತಮೃತ್ತಿಕಾಮ್ ।
ಸುಸ್ತಂಭಾಂ ಮಸ್ಕರೈರ್ದೀರ್ಘೈಃ ಕೃತವಂಶಾಂ ಸುಶೋಭನಾಮ್॥೨೧

ಶಮೀಶಾಖಾಭಿರಾಸ್ತೀರ್ಯ ದೃಢಪಾಶಾವಪಾಶಿತಾಮ್ ।
ಕುಶಕಾಶಶರೈಃ ಪರ್ಣೈಃ ಸುಪರಿಚ್ಛಾದಿತಾಂ ತಥಾ ॥ ೨೨

ಸಮೀಕೃತತಲಾಂ ರಮ್ಯಾಂ ಚಕಾರ ಲಘುವಿಕ್ರಮಃ ।
ನಿವಾಸಂ ರಾಘವಸ್ಯಾರ್ಥೇ ಪ್ರೇಕ್ಷಣೀಯಮನುತ್ತಮಮ್ ॥ ೨೩

---

ಶೋಭಿಸುತ್ತಿವೆ. ಮಾವು, ಅಶೋಕ, ತಿಲಕ ಸಂಪಿಗೆ, ಕೇದಗೆ, ಹೂವಿನ ಪೊದೆಗಳು, ಬಳ್ಳಿಗಳು ಮೊದಲಾದವುಗಳಿಂದ ತುಂಬಿವೆ (೧೬-೧೭). ಶ್ರೀಗಂಧ, ಸ್ಯಂದನ, ಈಚಲು, ಪರ್ಣಾಸ, ಗಜನಿಂಬೆ, ಧವ, ಅಶ್ವಕರ್ಣ, ಕಗ್ಗಲಿ, ಶಮಿ, ಮುತ್ತುಗ, ಪಾದರಿ ಮೊದಲಾದ ವೃಕ್ಷಗಳಿಂದ ಈ ಪ್ರದೇಶವು ರಮಣೀಯವಾಗಿದೆ (೧೮). ಇದು ಪುಣ್ಯಕ್ಷೇತ್ರ, ಇದು ಪವಿತ್ರವಾದ ಸ್ಥಳ. ಇಲ್ಲಿ ಮೃಗ ಪಕ್ಷಿಗಳು ಯಥೇಷ್ಟವಾಗಿವೆ. ಸೌಮಿತ್ರಿ, ಈ ಜಟಾಯುವಿನೊಡನೆ ಇಲ್ಲಿ ವಾಸ ಮಾಡೋಣ" ಎಂದನು (೧೯). ಆಗ ಮಹಾಬಲಾಢ್ಯನಾದ ಲಕ್ಷ್ಮಣನು ಅಣ್ಣನಿಗೋಸ್ಕರ ಒಂದು ಆಶ್ರಮವನ್ನು ಕಟ್ಟಿದನು. ಅದು ಮಣ್ಣುಗೋಡೆಗಳಿರುವ ವಿಶಾಲವಾದ ಪರ್ಣಶಾಲೆ. ಲಕ್ಷ್ಮಣನು ಗಟ್ಟಿಮುಟ್ಟಾದ ಕಂಭಗಳನ್ನು ನೆಟ್ಟು ಉದ್ದನೆಯ ಬಿದಿರುಗಳನ್ನು ಚಾವಣಿಗೆ ಹಾಸಿ ಸುಂದರವಾಗಿ ನಿರ್ಮಿಸಿದನು (೨೦-೨೧). (ಬಿದಿರುಗಳಮೇಲೆ) ಶಮೀವೃಕ್ಷದ ಕೊಂಬೆಗಳನ್ನು ಅಡ್ಡಲಾಗಿ ಹಾಸಿ ಗಟ್ಟಿಯಾದ ಹುರಿಗಳಿಂದ ಬಿಗಿದನು. ಅದರಮೇಲೆ ದರ್ಭೆ, ಜಂಬು ಹುಲ್ಲು, ಕಾಚೀಹುಲ್ಲುಗಳನ್ನು ಚೆನ್ನಾಗಿ ಹರಡಿ, ಮೇಲೆ ಪರ್ಣಗಳನ್ನು ಹೊದಿಸಿದನು (೨೨). ಹಸ್ತಲಾಘವದಿಂದ ಬಹುಬೇಗನೆ ಚಮತ್ಕಾರವಾಗಿ ಕೆಲಸಮಾಡ

ಸ ಗತ್ವಾ ಲಕ್ಷ್ಮಣಃ ಶ್ರೀಮಾನ್ನದೀಂ ಗೋದಾವರೀಂ ತದಾ ।
ಸ್ನಾತ್ವಾ ಪದ್ಮಾನಿ ಚಾದಾಯ ಸಫಲಃ ಪುನರಾಗತಃ ॥ ೨೪

ತತಃ ಪುಷ್ಪಬಲಿಂ ಕೃತ್ವಾ ಶಾಂತಿಂ ಚ ಸ ಯಥಾವಿಧಿ ।
ದರ್ಶಯಾಮಾಸ ರಾಮಾಯ ತದಾಶ್ರಮಪದಂ ಕೃತಮ್ ॥ ೨೫

ಸ ತಂ ದೃಷ್ಟ್ವಾ ಕೃತಂ ಸೌಮ್ಯಮಾಶ್ರಮಂ ಸಹ ಸೀತಯಾ ।
ರಾಘವಃ ಪರ್ಣಶಾಲಾಯಾಂ ಹರ್ಷಮಾಹಾರಯದ್ಭೃಶಮ್ ॥ ೨೬

ಸುಸಂಹೃಷ್ಟಃ ಪರಿಷ್ವಜ್ಯ ಬಾಹುಭ್ಯಾಂ ಲಕ್ಷ್ಮಣಂ ತದಾ ।
ಅತಿಸ್ನಿಗ್ಧಂ ಚ ಗಾಢಂ ಚ ವಚನಂ ಚೇದಮಬ್ರವೀತ್ ॥ ೨೭

ಪ್ರೀತೋಽಸ್ಮಿ ತೇ ಮಹತ್ ಕರ್ಮ ತ್ವಯಾ ಕೃತಮಿದಂ ಪ್ರಭೋ ।
ಪ್ರದೇಯೋ ಯನ್ನಿಮಿತ್ತಂ ತೇ ಪರಿಷ್ವಂಗೋ ಮಯಾ ಕೃತಃ ॥ ೨೮

ಭಾವಜ್ಞೇನ ಕೃತಜ್ಞೇನ ಧರ್ಮಜ್ಞೇನ ಚ ಲಕ್ಷ್ಮಣ ।
ತ್ವಯಾ ಪುತ್ರೇಣ ಧರ್ಮಾತ್ಮಾ ನ ಸಂವೃತ್ತಃ ಪಿತಾ ಮಮ ॥ ೨೯

---

ಬಲ್ಲ ಲಕ್ಷ್ಮಣನು ಪರ್ಣಶಾಲೆಯ ನೆಲವನ್ನು ಕೆತ್ತಿ ಸಮತಳವನ್ನಾಗಿ ಮಾಡಿದನು. ಆತನು ಶ್ರೀರಾಮನ ಏಕಾಂತನಿವಾಸಕ್ಕಾಗಿ ಸುಂದರವಾದ ಒಂದು ಕೋಣೆಯನ್ನು ರಚಿಸಿದನು. ಅದು ನೋಡಬೇಕಾದ ಒಂದು ಕಟ್ಟಡವಾಯಿತು (೨೩). ಅನಂತರ ಲಕ್ಷ್ಮಣನು ಗೋದಾವರೀನದಿಗೆ ಹೋಗಿ ಸ್ನಾನಮಾಡಿ ತಾವರೆಹೂಗಳನ್ನೂ ಕೆಲವು ಹಣ್ಣುಗಳನ್ನೂ ಕಿತ್ತುತಂದನು. ಆಮೇಲೆ ವಿಧ್ಯುಕ್ತವಾಗಿ ವಾಸ್ತುಪೂಜೆಯನ್ನೂ ಶಾಂತಿಕರ್ಮವನ್ನೂ ಮಾಡಿ ಶ್ರೀರಾಮನನ್ನು ಕರೆತಂದು ತಾನು ಕಟ್ಟಿದ ಪರ್ಣಶಾಲೆಯನ್ನು ತೋರಿಸಿದನು (೨೪-೨೫). ಶ್ರೀರಾಮನು ಸೀತೆಯೊಡನೆ ಬಂದು ಆಶ್ರಮವನ್ನು ನೋಡಿ ಬಹುಸಂತೋಷಪಟ್ಟನು. ಅವನು ಸಂತೃಪ್ತನಾಗಿ ಎರಡು ತೋಳುಗಳಿಂದಲೂ ಲಕ್ಷ್ಮಣನನ್ನು ಬಿಗಿದಪ್ಪಿಕೊಂಡು ಪ್ರೀತಿಯಿಂದ "ಲಕ್ಷ್ಮಣ, ಕಾರ್ಯದಕ್ಷ ನೀನು! ಮಹತ್ತರವಾದ ಕಾರ್ಯವನ್ನು ಮಾಡಿದ್ದೀಯೆ. ನನಗೆ ಆನಂದವಾಯಿತು. ಇದಕ್ಕಾಗಿ ನಾನು ಕೊಡಬೇಕಾದ ಪಾರಿತೋಷಕವೆಂದರೆ ಈ ಆಲಿಂಗನ! (೨೬-೨೮). ತಮ್ಮ, ನೀನು ಇಂಗಿತಜ್ಞ; ಕಾರ್ಯದ ಸ್ವರೂಪವನ್ನು ಬಲ್ಲವನು; ಧರ್ಮನಿಷ್ಠ. ನಿನ್ನಂಥ ಮಗನನ್ನು

ಏವಂ ಲಕ್ಷ್ಮಣಮುಕ್ತ್ವಾ ತು ರಾಘವೋ ಲಕ್ಷ್ಮಿವರ್ಧನಮ್ ।
ತಸ್ಮಿನ್ ದೇಶೇ ಬಹುಫಲೇ ನ್ಯವಸತ್ ಸುಸುಖಂ ವಶೀ ॥ ೩೦

ಕಂಚಿತ್ ಕಾಲಂ ಸ ಧರ್ಮಾತ್ಮಾ ಸೀತಯಾ ಲಕ್ಷ್ಮಣೇನ ಚ ।
ಅನ್ವಾಸ್ಯಮಾನೋ ನ್ಯವಸತ್ ಸ್ವರ್ಗಲೋಕೇ ಯಥಾಮರಃ ॥ ೩೧

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚದಶಃ ಸರ್ಗಃ

---

## ಷೋಡಶಃ ಸರ್ಗಃ

### ಹೇಮಂತವರ್ಣನಮ್

ವಸತಸ್ತಸ್ಯ ತು ಸುಖಂ ರಾಘವಸ್ಯ ಮಹಾತ್ಮನಃ ।
ಶರದ್ವ್ಯಪಾಯೇ ಹೇಮಂತ ಋತುರಿಷ್ಟಃ ಪ್ರವರ್ತತೇ ॥ ೧

ಸ ಕದಾಚಿತ್ ಪ್ರಭಾತಾಯಾಂ ಶರ್ವರ್ಯಾಂ ರಘುನಂದನಃ ।
ಪ್ರಯಯಾವಭಿಷೇಕಾರ್ಥಂ ರಮ್ಯಾಂ ಗೋದಾವರೀಂ ನದೀಮ್ ॥

---

ಪಡೆದ ಧರ್ಮಾತ್ಮನಾದ ನನ್ನ ತಂದೆ ನನ್ನ ಪಾಲಿಗೆ ಬದುಕಿರುವಂತೆಯೇ ಆಗಿದೆ" ಎಂದು ನುಡಿದನು (೨೯). ಅನಂತರ ಶ್ರೀರಾಮನು ನಾನಾಬಗೆಯ ಹಣ್ಣುಗಳಿದ್ದ ಆ ಪಂಚವಟಿಯಲ್ಲಿ ಕೆಲವುಕಾಲ ಸುಖವಾಗಿದ್ದನು. ಸೀತಾಲಕ್ಷ್ಮಣರು ಆತನ ಸೇವೆಯಲ್ಲಿ ನಿರತರಾಗಿದ್ದರು. ಜಿತೇಂದ್ರಿಯನಾದ ಆ ಧರ್ಮಾತ್ಮನು, ಸ್ವರ್ಗಲೋಕದಲ್ಲಿ ದೇವೇಂದ್ರನಿರುವಂತೆ, ಆ ಪರ್ಣಶಾಲೆಯಲ್ಲಿ ಸಂತೋಷದಿಂದಿದ್ದನು (೩೦-೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿನೈದನೆಯ ಸರ್ಗ

---

## ಸರ್ಗ ೧೬

### ಹೇಮಂತವರ್ಣನೆ ; ಭರತನ ಗುಣಗಳ ಸ್ಮರಣೆ ; ಗೋದಾವರೀಸ್ನಾನ

ಮಹಾತ್ಮನಾದ ಶ್ರೀರಾಮನು ಪಂಚವಟಿಯಲ್ಲಿ ಸುಖದಿಂದಿರಲು ಶರದೃತುವು ಕಳೆಯಿತು ; ಕಾಮಿಗಳಿಗೆ ಇಷ್ಟವಾದ ಹೇಮಂತಋತುವು ತಲೆದೋರಿತು. ಒಂದು ದಿನ ಮುಂಜಾನೆ ರಘುನಂದನನು ಮೀಯುವುದಕ್ಕಾಗಿ

ಪ್ರಹ್ವಃ ಕಲಶಹಸ್ತಸ್ತಂ ಸೀತಯಾ ಸಹ ವೀರ್ಯವಾನ್ ।
ಪೃಷ್ಠತೋಽನುವ್ರಜನ್ ಭ್ರಾತಾ ಸೌಮಿತ್ರಿರಿದಮಬ್ರವೀತ್ ॥ ೩

ಅಯಂ ಸ ಕಾಲಃ ಸಂಪ್ರಾಪ್ತಃ ಪ್ರಿಯೋ ಯಸ್ತೇ ಪ್ರಿಯಂವದ ।
ಅಲಂಕೃತ ಇವಾಭಾತಿ ಯೇನ ಸಂವತ್ಸರಃ ಶುಭಃ ॥ ೪

ನೀಹಾರಪರುಷೋ ಲೋಕಃ ಪೃಥಿವೀ ಸಸ್ಯಶಾಲಿನೀ ।
ಜಲಾನ್ಯನುಪಭೋಗ್ಯಾನಿ ಸುಭಗೋ ಹವ್ಯವಾಹನಃ ॥ ೫

ನವಾಗ್ರಯಣಪೂಜಾಭಿರಭ್ಯರ್ಚ್ಯ ಪಿತೃದೇವತಾಃ ।
ಕೃತಾಗ್ರಯಣಕಾಃ ಕಾಲೇ ಸಂತೋ ವಿಗತಕಲ್ಮಷಾಃ ॥ ೬

ಪ್ರಾಜ್ಯಕಾಮಾ ಜನಪದಾಃ ಸಂಪನ್ನತರಗೋರಸಾಃ ।
ವಿಚರಂತಿ ಮಹೀಪಾಲಾ ಯಾತ್ರಾಸ್ಥಾ ವಿಜಿಗೀಷವಃ ॥ ೭

---

ರಮ್ಯವಾದ ಗೋದಾವರೀನದಿಗೆ ಹೊರಟನು (೧–೨). ತಮ್ಮನಾದ ಸೌಮಿತ್ರಿಯು ಕೈಯಲ್ಲಿ ಕಲಶವನ್ನು ಹಿಡಿದುಕೊಂಡು ವಿನಯದಿಂದ ಶ್ರೀರಾಮನ ಹಿಂದೆ ಹೋಗುತ್ತಿದ್ದನು. ವೈದೇಹಿಯೂ ಅವರನ್ನು ಹಿಂಬಾಲಿಸಿ ಬರುತ್ತಿದ್ದಳು. ಆಗ ಸೌಮಿತ್ರಿಯು "ಅಣ್ಣ, ನಿನಗೆ ಪ್ರಿಯವಾದ ಹೇಮಂತಋತುವು ಪ್ರಾಪ್ತವಾಗಿದೆ. ಈ ಋತುವು ಸಂವತ್ಸರಕ್ಕೆ ಭೂಷಣಪ್ರಾಯವಾಗಿದೆ (೩–೪). ಹಿಮದಿಂದ ಜನರ ಚರ್ಮವು ಒಡೆದು ದೊರಗಾಗಿದೆ. ಭೂಮಿಯು ಪೈರುಪಚ್ಚೆಗಳಿಂದ ತುಂಬಿದೆ. (ಅತಿಶೀತಲವಾದ್ದರಿಂದ) ನೀರನ್ನು ಉಪಯೋಗಿಸುವುದೇ ಕಷ್ಟವಾಗಿದೆ. ಬೆಂಕಿಯು ಎಲ್ಲರಿಗೂ ಇಷ್ಟವಾಗಿದೆ (೫). ಹೊಸದಾದ ಆಗ್ರಯಣಯಜ್ಞದಿಂದ* ದೇವತೆಗಳನ್ನೂ ಪಿತೃಗಳನ್ನೂ ಅರ್ಚಿಸಿ, ಸಜ್ಜನರು ತಮ್ಮ ಪಾಪವನ್ನು ನೀಗುತ್ತಾರೆ. ಈಗ (ಸುಗ್ಗಿಯಕಾಲವಾದ್ದರಿಂದ) ಜನರು ಇಷ್ಟವಾದ್ದನ್ನು ಪಡೆದು ನಲಿಯುತ್ತಿದ್ದಾರೆ. ಅವರಿಗೆ ಹಸುವಿನ ಹಾಲು ಸಮೃದ್ಧವಾಗಿ ದೊರಕುತ್ತದೆ. ಭೂಪತಿಗಳು ಜೈತ್ರಯಾತ್ರೆಗಾಗಿ ಸಂಚರಿಸುತ್ತಿದ್ದಾರೆ (೬–೭).

* ಆಹಿತಾಗ್ನಿಯು ಆಗ್ರಯಣಯಜ್ಞವನ್ನು ಆಚರಿಸದೆ ಹೊಸ ಧಾನ್ಯವನ್ನು ತಿನ್ನಕೂಡದೆಂದು ಶಾಸ್ತ್ರವಚನವಿದೆ.

ಸೇವಮಾನೇ ದೃಢಂ ಸೂರ್ಯೇ ದಿಶಮಂತಕಸೇವಿತಾಮ್ ।
ವಿಹೀನತಿಲಕೇವ ಸ್ತ್ರೀ ನೋತ್ತರಾ ದಿಕ್ ಪ್ರಕಾಶತೇ ॥ ೮

ಪ್ರಕೃತ್ಯಾ ಹಿಮಕೋಶಾಢ್ಯೋ ದೂರಸೂರ್ಯಶ್ಚ ಸಾಂಪ್ರತಮ್ ।
ಯಥಾರ್ಥನಾಮಾ ಸುವ್ಯಕ್ತಂ ಹಿಮವಾನ್ ಹಿಮವಾನ್ ಗಿರಿಃ ॥ ೯

ಅತ್ಯಂತಸುಖಸಂಚಾರಾ ಮಧ್ಯಾಹ್ನೇ ಸ್ಪರ್ಶತಃ ಸುಖಾಃ ।
ದಿವಸಾಃ ಸುಭಗಾದಿತ್ಯಾಶ್ಛಾಯಾಸಲಿಲದುರ್ಭಗಾಃ ॥ ೧೦

ಮೃದುಸೂರ್ಯಾಃ ಸನೀಹಾರಾಃ ಪಟುಶೀತಾಃ ಸಮಾರುತಾಃ ।
ಶೂನ್ಯಾರಣ್ಯಾ ಹಿಮಧ್ವಸ್ತಾ ದಿವಸಾ ಭಾಂತಿ ಸಾಂಪ್ರತಮ್ ॥ ೧೧

ನಿವೃತ್ತಾಕಾಶಶಯನಾಃ ಪುಷ್ಯನೀತಾ ಹಿಮಾರುಣಾಃ ।
ಶೀತಾ ವೃದ್ಧತರಾಯಾಮಾಸ್ತ್ರಿಯಾಮಾ ಯಾಂತಿ ಸಾಂಪ್ರತಮ್ ॥

---

ಯಮನು ಸೇವಿಸುತ್ತಿದ್ದ ದಕ್ಷಿಣದಿಕ್ಕೆಂಬ ಸ್ತ್ರೀಯನ್ನು ಸೂರ್ಯನು ಬಲವಾಗಿ ಆಶ್ರಯಿಸಿದ್ದಾನೆ! (ಆದರಿಂದ ಅಸೂಯೆಗೊಂಡು) ಉತ್ತರದಿಕ್ಕೆಂಬ ಸ್ತ್ರೀಯು ತನ್ನ ತಿಲಕವನ್ನು ಒರಸಿಬಿಟ್ಟಿದ್ದಾಳೆಂದು ತೋರುತ್ತದೆ! ಅವಳೀಗ ಚೆನ್ನಾಗಿ ಒಪ್ಪುವುದಿಲ್ಲ* (೮). ಹಿಮಾಲಯಪರ್ವತದಲ್ಲಿ ಸಹಜವಾಗಿ ಹಿಮರಾಶಿ ಇರುತ್ತದೆ. ಈಗಲಾದರೋ ಸೂರ್ಯನು ದಕ್ಷಿಣದಲ್ಲಿ ದೂರಹೋಗಿದ್ದಾನೆ. ಹಿಮವು ಹೇರಳವಾಗಿ ತುಂಬಿ ಹಿಮವಂತನು ಹಿಮವಂತನೇ ಆಗಿದ್ದಾನೆ. ಮಧ್ಯಾಹ್ನದಲ್ಲಿಯೂ ದಿವಸದ ಬೇಗೆಯು ಸುಖಕರವಾಗಿರುತ್ತದೆ. ಆದ್ದರಿಂದ ಹಗಲಿನಲ್ಲಿ ಸಂಚಾರವು ಹಿತಕರವಾಗುವುದು. ಸೂರ್ಯನ ಬಿಸಿಲು ಬೇಕೆನಿಸುತ್ತದೆ. ನೆರಳು, ನೀರು—ಇವೆರಡು ಮಾತ್ರ ಬೇಡವೆನಿಸುತ್ತವೆ (೯-೧೦). ಈಗ ಸೂರ್ಯನು ಮೃದುವಾಗಿದ್ದಾನೆ. ಮಂಜು ತುಂಬಿರುತ್ತದೆ. ಚಳಿ ಹೆಚ್ಚಿದೆ. ಗಾಳಿ ಹೆಚ್ಚಾಗಿ ಬೀಸುತ್ತದೆ. (ವನಚರಪ್ರಾಣಿಗಳೂ ಚಳಿಗೆ ಹೆದರಿ ಸಂಚಾರವನ್ನು ನಿಲ್ಲಿಸಿರುವುದರಿಂದ) ಅರಣ್ಯವು ಶೂನ್ಯವಾಗಿದೆ. ಸಕಲರೂ ಚಳಿಯ ಬಾಧೆಗೆ ಸಿಕ್ಕಿದ್ದಾರೆ (೧೧). ರಾತ್ರಿಯ ಹೊತ್ತು ಬಯಲಿನಲ್ಲಿ ಮಲಗುವುದನ್ನು

---

* ಆಗ ದಕ್ಷಿಣಾಯನ. ಸೂರ್ಯನು ದಿಕ್ಕಿಗೆ ತಿಲಕವಿದ್ದಂತೆ.

**ರವಿಸಂಕ್ರಾಂತಸೌಭಾಗ್ಯಸ್ತುಷಾರಾವೃತಮಂಡಲಃ ।**
**ನಿಃಶ್ವಾಸಾಂಧ ಇವಾದರ್ಶಶ್ಚಂದ್ರಮಾ ನ ಪ್ರಕಾಶತೇ ॥ ೧೩**

**ಜ್ಯೋತ್ಸ್ನಾ ತುಷಾರಮಲಿನಾ ಪೌರ್ಣಮಾಸ್ಯಾಂ ನ ರಾಜತೇ ।**
**ಸೀತೇವ ಚಾತಪಶ್ಯಾಮಾ ಲಕ್ಷ್ಯತೇ ನ ತು ಶೋಭತೇ ॥ ೧೪**

**ಪ್ರಕೃತ್ಯಾ ಶೀತಲಸ್ಪರ್ಶೋ ಹಿಮವಿದ್ಧಶ್ಚ ಸಾಂಪ್ರತಮ್ ।**
**ಪ್ರವಾತಿ ಪಶ್ಚಿಮೋ ವಾಯುಃ ಕಾಲೇ ದ್ವಿಗುಣಶೀತಲಃ ॥ ೧೫**

**ಬಾಷ್ಪಚ್ಛನ್ನಾನ್ಯರಣ್ಯಾನಿ ಯವಗೋಧೂಮವಂತಿ ಚ ।**
**ಶೋಭಂತೇಽಭ್ಯುದಿತೇ ಸೂರ್ಯೇ ನದದ್ಭಿಃ ಕ್ರೌಂಚಸಾರಸೈಃ ೧೬**

**ಖರ್ಜೂರಪುಷ್ಪಾಕೃತಿಭಿಃ ಶಿರೋಭಿಃ ಪೂರ್ಣತಂಡುಲೈಃ ।**
**ಶೋಭಂತೇ ಕಿಂಚಿದಾನಮ್ರಾಃ ಶಾಲಯಃ ಕನಕಪ್ರಭಾಃ ॥ ೧೭**

---

ಜನರು ತ್ಯಜಿಸಿದ್ದಾರೆ. ಈಗ ಪುಷ್ಯನಕ್ಷತ್ರದಿಂದ ರಾತ್ರಿಯ ಪರಿಮಾಣವನ್ನು ಕಂಡುಹಿಡಿಯಬಹುದಾಗಿದೆ. ಮಂಜು ಮುಸುಕಿರುತ್ತದೆ. ಚಳಿಗಾಳಿಯಿಂದ ರಾತ್ರಿ ಬಹು ತಣ್ಣಗಿರುತ್ತದೆ. ರಾತ್ರಿಯ ಕಾಲವೂ ಅತಿದೀರ್ಘವಾಗಿದೆ (೧೨). ಚಂದ್ರನ ಸೌಭಾಗ್ಯವೆಲ್ಲವೂ ಈಗ ಸೂರ್ಯನದಾಗಿದೆ. ಮಂಜುಮುಸುಕಿದ ಚಂದ್ರನು ಉಸಿರಾಡಿಸಿದ ಕುರುಡುಕನ್ನಡಿಯಂತೆ ಆಗಿಬಿಟ್ಟಿದ್ದಾನೆ. ಅವನಿಗೆ ಪ್ರಕಾಶವೇ ಇಲ್ಲವಾಗಿದೆ. ಹುಣ್ಣಿಮೆಯ ಬೆಳದಿಂಗಳು ಮಂಜಿನಿಂದ ಮಾಸಿ ಹೋಗಿರುತ್ತದೆ. ಅದು ಬಿಸಿಲಲ್ಲಿ ಬಸವಳಿದು ಕಂದಿದ ನಮ್ಮ ಸೀತಾದೇವಿಯಂತೆ ಕಾಣುತ್ತದೆ. ಆದರೆ ಈ ಬೆಳದಿಂಗಳಲ್ಲಿ ಯಾವ ಶೋಭೆಯೂ ಇಲ್ಲ ! (೧೩-೧೪). ಮೊದಲೇ ತಂಪಾಗಿದ್ದ ಪಡುವಣ ಗಾಳಿಯು, ಈಗ ಹಿಮದಿಂದ ಎರಡರಷ್ಟು ತಣ್ಣಗೆ ಬೀಸುತ್ತದೆ. (ನೀರಿನಿಂದೇಳುವ) ಉಗಿಯಿಂದ ಅರಣ್ಯವು ಮುಚ್ಚಿ ಹೋಗಿದೆ. ಗೋಧಿ, ಜವೆಗೋಧಿಗಳ ಪೈರು ಸಮೃದ್ಧವಾಗಿದೆ. ಸೂರ್ಯೋದಯದಿಂದ ಈ ಪ್ರಾಂತಕ್ಕೆ ಒಂದು ಕಾಂತಿಯುಂಟಾಗಿದೆ. ಕ್ರೌಂಚ, ಸಾರಸ ಪಕ್ಷಿಗಳು ಕೂಗಲಾರಂಭಿಸಿವೆ. (೧೫–೧೬). ಶ್ರೀರಾಮ, ಬಂಗಾರದ ಬಣ್ಣದಿಂದ ಬೆಳಗುವ ಬತ್ತದ ಸಸಿಗಳು ತೆನೆಗಳ ಭಾರದಿಂದ ಬಗ್ಗಿರುವುದನ್ನು ನೋಡು !

*

ಮಯೂಖೈರುಪಸರ್ಪದ್ಭಿರ್ಹಿಮನೀಹಾರಸಂವೃತೈಃ ।
ದೂರಮಭ್ಯುದಿತಃ ಸೂರ್ಯಃ ಶಶಾಂಕ ಇವ ಲಕ್ಷ್ಯತೇ ೧೮

ಅಗ್ರಾಹ್ಯವೀರ್ಯಃ ಪೂರ್ವಾಹ್ಣೇ ಮಧ್ಯಾಹ್ನೇ ಸ್ಪರ್ಶತಃ ಸುಖಃ ।
ಸಂರಕ್ತಃ ಕಿಂಚಿದಾಪಾಂಡುರಾತಪಃ ಶೋಭತೇ ಕ್ಷಿತೌ ॥ ೧೯

ಅವಶ್ಯಾಯನಿಪಾತೇನ ಕಿಂಚಿತ್ಪ್ರಕ್ಲಿನ್ನಶಾದ್ವಲಾ ।
ವನಾನಾಂ ಶೋಭತೇ ಭೂಮಿರ್ನಿರ್ವಿಷ್ಟತರುಣಾತಪಾ ॥ ೨೦

ಸ್ಪೃಶಂಸ್ತು ವಿಪುಲಂ ಶೀತಮುದಕಂ ದ್ವಿರದಃ ಸುಖಮ್ ।
ಅತ್ಯಂತತೃಷಿತೋ ವನ್ಯಃ ಪ್ರತಿಸಂಹರತೇ ಕರಮ್ ॥ ೨೧

ಏತೇ ಹಿ ಸಮುಪಾಸೀನಾ ವಿಹಗಾ ಜಲಚಾರಿಣಃ ।
ನಾವಗಾಹಂತಿ ಸಲಿಲಮಪ್ರಗಲ್ಭಾ ಇವಾಹವಮ್ ॥ ೨೨

ಅವಶ್ಯಾಯತಮೋನದ್ಧಾ ನೀಹಾರತಮಸಾ ವೃತಾಃ ।
ಪ್ರಸುಪ್ತಾ ಇವ ಲಕ್ಷ್ಯಂತೇ ವಿಪುಷ್ಪಾ ವನರಾಜಯಃ ॥ ೨೩

---

ಕಾಳುಹಿಡಿದಿರುವ ಈ ತೆನೆಗಳು ಖರ್ಜೂರದ ಹೂವಿನಂತೆ ಶೋಭಿಸುತ್ತಿವೆ. ಸೂರ್ಯಕಿರಣಗಳಿಗೆ ಹಿಮಬಿಂದುಗಳು ಸಂದಣಿಸಿರುವುದರಿಂದ, ಸೂರ್ಯನು ದೂರವೇರಿ ಬಂದರೂ ಚಂದ್ರನಂತೆ ಕಾಣಿಸುತ್ತಾನೆ. (೧೭–೧೮). ಮುಂಜಾನೆ ಬಿಸಿಲಿನ ಉಷ್ಣತೆಯೇ ತಿಳಿಯುವುದಿಲ್ಲ. ಮಧ್ಯಾಹ್ನದಲ್ಲಿ ಕಾಯಿಸಲು ಬಿಸಿಲು ಸುಖಕರವಾಗಿರುತ್ತದೆ. ಎಳೆಗೆಂಪಾಗಿ ನಸುಬೆಳ್ಳಗಿರುವ ಬಿಸಿಲು ನೆಲದಲ್ಲಿ ಹರಡಿ ಹೊಳೆಯುವುದನ್ನು ನೋಡು ! (೧೯). ಅಣ್ಣ, ಅಡವಿಯ ಹಸಿರು ಹುಲ್ಲು ಗಾವಲು ಇಬ್ಬನಿ ಸುರಿದು ಒದ್ದೆಯಾಗಿದೆ. ಅದರಲ್ಲಿ ಎಳೆಬಿಸಿಲು ಪಸರಿಸಿ ಎಷ್ಟು ಸುಂದರವಾಗಿ ಎಸೆಯುತ್ತಿದೆ ! ಅಗೋ, ಅಲ್ಲೊಂದು ಆನೆಯು ಬಾಯಾರಿಕೆಯಿಂದ ಬಳಲಿ ಬೆಂಡಾಗಿ ಬಂದು, ಸುಖವಾಗಿ ನೀರು ಕುಡಿಯೋಣವೆಂದು ಸೊಂಡಿಲನ್ನು ನೀರಿಗೆ ನೀಡುತ್ತಿದೆ ; ನೀರು ಬಹು ತಣ್ಣಗಿದೆಯೆಂದು ಸೊಂಡಿಲನ್ನು ಹಿಂದೆಳೆದು ಕೊಳ್ಳುತ್ತಿದೆ ! (೨೦–೨೧). ಈ ನೀರುಹಕ್ಕಿಗಳೂ ಸಹ ನೀರಿಗಿಳಿಯದೆ ಸುತ್ತಲೂ ಕುಳಿತಿರುವುದನ್ನು ನೋಡು ! ಕೈಲಾಗದವರು ರಣರಂಗಕ್ಕೆ ನುಗ್ಗಲಾರದಂತೆ ಇವು ನೀರಿಗಿಳಿಯಲು ಹಿಂಜರಿಯುತ್ತಿವೆ (೨೨). ಈ ವನದಲ್ಲಿ ಹಿಮವೆಂಬ

ಬಾಷ್ಪಸಂಛನ್ನಸಲಿಲಾ ರುತವಿಜ್ಞೇಯಸಾರಸಾಃ ।
ಹಿಮಾರ್ದ್ರವಾಲುಕೈಸ್ತೀರೈಃ ಸರಿತೋ ಭಾಂತಿ ಸಾಂಪ್ರತಮ್ ॥ ೨೪

ತುಷಾರಪತನಾಚ್ಚೈವ ಮೃದುತ್ವಾದ್ಭಾಸ್ಕರಸ್ಯ ಚ ।
ಶೈತ್ಯಾದಗಾಗ್ರಸ್ಥಮಪಿ ಪ್ರಾಯೇಣ ರಸವಜ್ಜಲಮ್ ॥ ೨೫

ಜರಾಜರ್ಜರಿತೈಃ ಪದ್ಮೈಃ ಶೀರ್ಣಕೇಸರಕರ್ಣಿಕೈಃ ।
ನಾಲಶೇಷೈರ್ಹಿಮಧ್ವಸ್ತೈರ್ನ ಭಾಂತಿ ಕಮಲಾಕರಾಃ ॥ ೨೬

ಅಸ್ಮಿಂಸ್ತು ಪುರುಷವ್ಯಾಘ್ರಃ ಕಾಲೇ ದುಃಖಸಮನ್ವಿತಃ ।
ತಪಶ್ಚರತಿ ಧರ್ಮಾತ್ಮಾ ತ್ವದ್ಭಕ್ತ್ಯಾ ಭರತಃ ಪುರೇ ॥ ೨೭

ತ್ಯಕ್ತ್ವಾ ರಾಜ್ಯಂ ಚ ಮಾನಂ ಚ ಭೋಗಾಂಶ್ಚ ವಿವಿಧಾನ್ ಬಹೂನ್
ತಪಸ್ವೀ ನಿಯತಾಹಾರಃ ಶೇತೇ ಶೀತೇ ಮಹೀತಲೇ ॥ ೨೮

---

ಕತ್ತಲೆಯು ಮುಸುಕಿದೆ. ಹಿಮದ ಹನಿಗಳಿಂದ ಗಿಡಬಳ್ಳಿಗಳು ವ್ಯಾಪ್ತವಾಗಿವೆ. ಹೂಗಳು ಉದುರಿಹೋಗಿವೆ. ಆದ್ದರಿಂದ ಈ ವನರಾಜಿಗಳು ಕತ್ತಲೆಯಲ್ಲಿ ದಪ್ಪವಾದ ದುಪ್ಪಟಿಯನ್ನು ಹೊದೆದು ಕಣ್ಣುಮುಚ್ಚಿ ನಿದ್ರಿಸುವಂತೆ ಕಾಣುತ್ತವೆ! (೨೩). ಮೇಲೇಳುವ ಉಗಿಯಿಂದ ನದಿಗಳ ನೀರು ಮುಚ್ಚಿಹೋಗಿದೆ. ಸಾರಸ ಪಕ್ಷಿಗಳಿವೆಯೆಂದು ಅವುಗಳ ಕೂಗಿನಿಂದಲೇ ತಿಳಿಯಬೇಕಾಗಿದೆ. ನದೀತೀರಗಳ ಮರಳುರಾಶಿಯು ಮಂಜಿನಿಂದ ಒದ್ದೆಯಾಗಿದೆ. ಹಿಮವು ಸುರಿಯುವುದರಿಂದಲೂ ಸೂರ್ಯನ ಬೇಗೆಯು ಅತಿಮೃದುವಾಗಿರುವುದರಿಂದಲೂ ಬೆಟ್ಟದಮೇಲಿರುವ ನೀರು ಚಳಿಯಿಂದ ಪಾದರಸದಂತೆ ಮಂದವಾಗಿದೆ (೨೪–೨೫). ಶ್ರೀರಾಮ, (ಇತ್ತ ಸರೋವರಗಳನ್ನು ನೋಡು!) ಅರಳಿ ಚಿರಕಾಲವಾದ್ದರಿಂದ ತಾವರೆಗಳು ಬಾಡಿಹೋಗಿವೆ. ಕೇಸರಗಳೂ ಕರ್ಣಿಕೆಯೂ ಉದುರಿಹೋಗಿವೆ. ತಾವರೆಯ ದಂಟು ಮಾತ್ರ ಉಳಿದಿದೆ. ಹಿಮದ ಹಾವಳಿಯಿಂದ ಈ ಸರೋವರಗಳು ಕಾಂತಿಗೆಟ್ಟಿವೆ (೨೬). ಅಣ್ಣ, ಈ ಸಮಯದಲ್ಲಿ ಧರ್ಮಾತ್ಮನಾದ ಭರತನು ನಿನ್ನಲ್ಲಿ ಭಕ್ತಿಯನ್ನಿಟ್ಟು ಅಯೋಧ್ಯೆಯಲ್ಲಿ ತಪಸ್ಸುಮಾಡುತ್ತಿರುವನು. ಆ ಪುರುಷಶ್ರೇಷ್ಠನು ನಿನ್ನ ವಿರಹದುಃಖದಿಂದ ಪೀಡಿತನಾಗಿದ್ದಾನೆ. ರಾಜ್ಯವನ್ನೂ ರಾಜನೆಂಬ ಹೆಮ್ಮೆಯನ್ನೂ ನಾನಾಬಗೆಯ ರಾಜಭೋಗಗಳನ್ನೂ ಪರಿತ್ಯಜಿಸಿದ್ದಾನೆ.

ಸೋಽಪಿ ವೇಲಾಮಿಮಾಂ ನೂನಮಭಿಷೇಕಾರ್ಥಮುದ್ಯತಃ |
ವೃತಃ ಪ್ರಕೃತಿಭಿರ್ನಿತ್ಯಂ ಪ್ರಯಾತಿ ಸರಯೂಂ ನದೀಮ್ || ೨೯

ಅತ್ಯಂತಸುಖಸಂವೃದ್ಧಃ ಸುಕುಮಾರಃ ಸುಖೋಚಿತಃ |
ಕಥಂ ನ್ವಪರರಾತ್ರೇಷು ಸರಯೂಮವಗಾಹತೇ || ೩೦

ಪದ್ಮಪತ್ರೇಕ್ಷಣೋ ವೀರಃ ಶ್ಯಾಮೋ ನಿರುದರೋ ಮಹಾನ್ |
ಧರ್ಮಜ್ಞಃ ಸತ್ಯವಾದೀ ಚ ಹ್ರೀನಿಷೇಧೋ ಜಿತೇಂದ್ರಿಯಃ ೩೧

ಪ್ರಿಯಾಭಿಭಾಷೀ ಮಧುರೋ ದೀರ್ಘಬಾಹುರರಿಂದಮಃ |
ಸಂತ್ಯಜ್ಯ ವಿವಿಧಾನ್ ಭೋಗಾನಾರ್ಯಂ ಸರ್ವಾತ್ಮನಾ ಶ್ರಿತಃ || ೩೨

ಜಿತಃ ಸ್ವರ್ಗಸ್ತವ ಭ್ರಾತ್ರಾ ಭರತೇನ ಮಹಾತ್ಮನಾ |
ವನಸ್ಥಮಪಿ ತಾಪಸ್ಯೇ ಯಸ್ತ್ವಾಮನುವಿಧೀಯತೇ || ೩೩

---

ಆಹಾರನಿಯಮವನ್ನಿಟ್ಟುಕೊಂಡು ತಪಸ್ವಿಯಾಗಿ, ಶೀತಳವಾದ ಬರಿಯ ನೆಲದ ಮೇಲೆ ಮಲಗುತ್ತಿರುವನಲ್ಲ ! (೨೭-೨೮). ಅಣ್ಣ, ಇಷ್ಟುಹೊತ್ತಿನಲ್ಲಿ ಭರತನೂ ಸಹ ಪ್ರಜೆಗಳಿಂದ ಪರಿವೃತನಾಗಿ ಸ್ನಾನಕ್ಕೋಸ್ಕರ ಸರಯೂನದಿಗೆ ಹೋಗುತ್ತಿರ ಬಹುದು ! ಭರತನಾದರೋ ಸುಖವಾಗಿ ಬೆಳೆದವನು. ಸುಕುಮಾರವಾದ ಪ್ರಕೃತಿಯುಳ್ಳವನು. ಸುಖದಲ್ಲಿ ಇರಬೇಕಾದವನು. ಅವನು ಬೆಳಗಿನ ಜಾವ ದಲ್ಲಿ ಹೋಗಿ ಸರಿಯೂನದಿಯಲ್ಲಿ ಹೇಗೆ ಮುಳುಗುವನೊ ! (೨೯-೩೦). ಆ ವೀರನು ತಾವರೆಯ ದಳದಂತೆ ವಿಶಾಲವಾದ ನೇತ್ರಗಳುಳ್ಳವನು ; ಶ್ಯಾಮಲಾಂಗ ; ಕೃಶವಾದ ಉದರವುಳ್ಳ ಮಹಾಪುರುಷ ; ಧರ್ಮಜ್ಞ ; ಸತ್ಯಸಂಧ ; ಅಕೃತ್ಯಗಳಿಗೆ ನಾಚತಕ್ಕವನು ; ಜಿತೇಂದ್ರಿಯ ; ಭರತನು ಸದಾ ಪ್ರಿಯವಾಗಿ ಮಾತನಾಡ ತಕ್ಕವನು ; ಆಜಾನುಬಾಹುವಾದ ಅವನನ್ನು ನೋಡಿದರೆ ಆನಂದವಾಗುವುದು ; ಶತ್ರುಗಳನ್ನು ಮರ್ದಿಸಬಲ್ಲ ಶೂರ. ಅಂಥವನು ಸಕಲಭೋಗಗಳನ್ನು ಪರಿತ್ಯಜಿಸಿ ತ್ರಿಕರಣಶುದ್ಧಿಯಿಂದ ನಿನ್ನನ್ನು ನಂಬಿದ್ದಾನೆ (೩೧-೩೨). ಅಣ್ಣ, ನಿನ್ನ ತಮ್ಮ ನಾದ ಭರತನು ಮಹಾತ್ಮನೇ ಸರಿ. ನೀನು ಕಾಡಿನಲ್ಲಿ ತಾಪಸವೃತ್ತಿಯಲ್ಲಿರುವು ದನ್ನು ಕಂಡು ತಾನೂ ನಿನ್ನಂತೆ ತಪೋನಿಷ್ಠನಾಗಿರುವನಲ್ಲ ! ಅವನಿಗೆ ಸ್ವರ್ಗ ಲೋಕವು ಲಭಿಸಿದಂತೆಯೇ ಸರಿ. 'ಮನುಷ್ಯರು ತಾಯಿಯ ಸ್ವಭಾವವನ್ನು

ನ ಪಿತ್ರ್ಯಮನುವರ್ತಂತೇ ಮಾತೃಕಂ ದ್ವಿಪದಾ ಇತಿ ।
ಖ್ಯಾತೋ ಲೋಕಪ್ರವಾದೋಽಯಂ ಭರತೇನಾನ್ಯಥಾಕೃತಃ ॥ ೩೪

ಭರ್ತಾ ದಶರಥೋ ಯಸ್ಯಾಃ ಸಾಧುಶ್ಚ ಭರತಃ ಸುತಃ ।
ಕಥಂ ನು ಸಾಂಬಾ ಕೈಕೇಯೀ ತಾದೃಶೀ ಕ್ರೂರದರ್ಶಿನೀ ॥ ೩೫

ಇತ್ಯೇವಂ ಲಕ್ಷ್ಮಣೇ ವಾಕ್ಯಂ ಸ್ನೇಹಾದ್ಬ್ರುವತಿ ಧಾರ್ಮಿಕೇ ।
ಪರಿವಾದಂ ಜನನ್ಯಾಸ್ತಮಸಹನ್ ರಾಘವೋಽಬ್ರವೀತ್ ॥ ೩೬

ನ ತೇಽಂಬಾ ಮಧ್ಯಮಾ ತಾತ ಗರ್ಹಿತವ್ಯಾ ಕಥಂಚನ ।
ತಾಮೇವೇಕ್ಷ್ವಾಕುನಾಥಸ್ಯ ಭರತಸ್ಯ ಕಥಾಂ ಕುರು ॥ ೩೭

ನಿಶ್ಚಿತಾಪಿ ಹಿ ಮೇ ಬುದ್ಧಿರ್ವನವಾಸೇ ದೃಢವ್ರತಾ ।
ಭರತಸ್ನೇಹಸಂತಪ್ತಾ ಬಾಲಿಶೀಕ್ರಿಯತೇ ಪುನಃ ॥ ೩೮

ಸಂಸ್ಮರಾಮ್ಯಸ್ಯ ವಾಕ್ಯಾನಿ ಪ್ರಿಯಾಣಿ ಮಧುರಾಣಿ ಚ ।
ಹೃದ್ಯಾನ್ಯಮೃತಕಲ್ಪಾನಿ ಮನಃಪ್ರಹ್ಲಾದನಾನಿ ಚ ॥ ೩೯

---

ಪಡೆಯುತ್ತಾರೆ, ತಂದೆಯ ಸ್ವಭಾವವನ್ನಲ್ಲ' ಎಂದು ಲೋಕದಲ್ಲಿ ಪ್ರವಾದ ಉಂಟು. ಭರತನು ಈ ಪ್ರವಾದವನ್ನು ಸುಳ್ಳುಮಾಡಿದನು (೩೩-೩೪). ಅಣ್ಣಾ, ನಮ್ಮ ಚಿಕ್ಕಮ್ಮನಿಗೆ ಪತಿಯಾದರೋ ದಶರಥಮಹಾರಾಜ. ಮಗನಾದರೋ ಇಂಥ ಸತ್ಪುರುಷನಾದ ಭರತ. ಹೀಗಿರುವಾಗ ಕೈಕೇಯಿಗೆ ಅಷ್ಟು ಕ್ರೂರ ಸ್ವಭಾವ ಹೇಗೆ ಬಂದಿರಬಹುದು ? " ಎಂದು ಹೇಳಿದನು (೩೫). ಧಾರ್ಮಿಕನಾದ ಲಕ್ಷ್ಮಣನು ಶ್ರೀರಾಮನಲ್ಲಿಟ್ಟಿದ್ದ ಸ್ನೇಹದಿಂದ ಈ ಮಾತನ್ನು ಹೇಳಿದನು. ಚಿಕ್ಕಮ್ಮನ ನಿಂದೆಯು ಶ್ರೀರಾಮನಿಗೆ ಸಹ್ಯವಾಗಲಿಲ್ಲ. ಅವನು ಲಕ್ಷ್ಮಣನನ್ನು ಕುರಿತು "ಅಪ್ಪಾ-ಲಕ್ಷ್ಮಣ, ನಮ್ಮ ಚಿಕ್ಕಮ್ಮನಾದ ಕೈಕೇಯಿದೇವಿಯನ್ನು ನೀನು ನಿಂದಿಸುವುದು ಎಂದಿಗೂ ತರವಲ್ಲ. ನಮ್ಮ ಇಕ್ಷ್ವಾಕುವಂಶಕ್ಕೆ ತಿಲಕಪ್ರಾಯನಾದ ಭರತನ ಆ ಸುದ್ದಿಯನ್ನೇ ಮತ್ತೆ ಮತ್ತೆ ಆಡುತ್ತಿರು (೩೬-೩೭). ವನವಾಸವನ್ನು ಕ್ರಮವಾಗಿ ಮಾಡಿ ಮುಗಿಸಲೇಬೇಕೆಂದು ನಾನು ದೃಢವಾಗಿ ಸಂಕಲ್ಪಿಸಿದ್ದರೂ, ಲಕ್ಷ್ಮಣ, ಭರತನ ನೆನಪಾದೊಡನೆ ಸ್ನೇಹದಿಂದ ನನ್ನ ಸಂಕಲ್ಪವು ಶಿಥಿಲವಾಗುವುದು (ಈಗಲೇ ಹೋಗಿ ಅವನನ್ನು ಕಾಣಬೇಕೆನಿಸುವುದು) (೩೮). ಭರತನು ಆಡಿದ ಮಾತುಗಳೆಲ್ಲವೂ ನನಗೆ ನೆನಪಾಗುತ್ತವೆ. ಎಷ್ಟು ಪ್ರಿಯವಾದ

ಕದಾ ನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ ।
ಶತ್ರುಘ್ನೇನ ಚ ವೀರೇಣ ತ್ವಯಾ ಚ ರಘುನಂದನ ॥ ೪೦

ಇತ್ಯೇವಂ ವಿಲಪಂಸ್ತತ್ರ ಪ್ರಾಪ್ಯ ಗೋದಾವರೀಂ ನದೀಮ್ ।
ಚಕ್ರೇಽಭಿಷೇಕಂ ಕಾಕುತ್ಸ್ಥಃ ಸಾನುಜಃ ಸಹ ಸೀತಯಾ ॥ ೪೧

ತರ್ಪಯಿತ್ವಾಥ ಸಲಿಲೈಸ್ತೇ ಪಿತೃನ್ ದೈವತಾನಿ ಚ ।
ಸ್ತುವಂತಿ ಸ್ಮೋದಿತಂ ಸೂರ್ಯಂ ದೇವತಾಶ್ಚ ಸಮಾಹಿತಾಃ ॥ ೪೨

ಕೃತಾಭಿಷೇಕಃ ಸ ರರಾಜ ರಾಮಃ
ಸೀತಾದ್ವಿತೀಯಃ ಸಹ ಲಕ್ಷ್ಮಣೇನ ।
ಕೃತಾಭಿಷೇಕೋ ಗಿರಿರಾಜಪುತ್ರ್ಯಾ
ರುದ್ರಃ ಸನಂದೀ ಭಗವಾನಿವೇಶಃ ॥ ೪೩

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷೋಡಶಃ ಸರ್ಗಃ

ಮಧುರವಚನಗಳು ! ನನ್ನ ಹೃದಯವನ್ನು ಸೂರೆಗೊಂಡವು ! ಅಮೃತದಂತಹ ಮಾತುಗಳು ! ಮನಸ್ಸಿಗೆ ಆಪ್ಯಾಯನಕರವಾದ ನುಡಿಗಳು ! (೩೯). ಮಹಾತ್ಮನಾದ ಭರತನೊಡನೆ ನಾನು ಯಾವಾಗ ಕಲೆತಿರುವೆನೊ ! ವೀರನಾದ ಶತ್ರುಘ್ನ, ನೀನು–ನಿಮ್ಮೆಲ್ಲರೊಡನೆ ಯಾವಾಗ ಇರುವೆನೊ ? " ಎಂದು ಹೇಳಿದನು. ಹೀಗೆ ಶ್ರೀರಾಮನು ಚಡಪಡಿಸುತ್ತ ಗೋದಾವರೀನದಿಗೆ ಹೋಗಿ ಸೀತಾಲಕ್ಷ್ಮಣರೊಡನೆ ಸ್ನಾನಮಾಡಿದನು (೪೦–೪೧). ಅನಂತರ ಅವರು ಪಿತೃಗಳಿಗೂ ದೇವತೆಗಳಿಗೂ ಜಲತರ್ಪಣವನ್ನಿತ್ತು, ಉದಿತನಾದ ಸೂರ್ಯನನ್ನು ಉಪಾಸಿಸಿ, ದೇವತೆಗಳನ್ನು ಭಕ್ತಿಯಿಂದ ಸ್ತುತಿಸಿದರು (೪೨). ಹೀಗೆ ಶ್ರೀರಾಮನು ಸ್ನಾನಮಾಡಿ ಸೀತಾ ಲಕ್ಷ್ಮಣರೊಡನೆ ಇರುವಾಗ, ಪಾರ್ವತಿ ಮತ್ತು ನಂದಿಗಳಿಂದ ಸಮೇತನಾದ ಪರಮೇಶ್ವರನಂತೆ ವಿರಾಜಿಸುತ್ತಿದ್ದನು (೪೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿನಾರನೆಯ ಸರ್ಗ

## ಸಪ್ತದಶಃ ಸರ್ಗಃ

### ಶೂರ್ಪಣಖಾಭಾವಾವಿಷ್ಕರಣಮ್

ಕೃತಾಭಿಷೇಕೋ ರಾಮಸ್ತು ಸೀತಾ ಸೌಮಿತ್ರಿರೇವ ಚ ।
ತಸ್ಮಾದ್ಗೋದಾವರೀತೀರಾತ್ತತೋ ಜಗ್ಮುಃ ಸ್ವಮಾಶ್ರಮಮ್ ॥ ೧

ಆಶ್ರಮಂ ತಮುಪಾಗಮ್ಯ ರಾಘವಃ ಸಹಲಕ್ಷ್ಮಣಃ ।
ಕೃತ್ವಾ ಪೌರ್ವಾಹ್ಣಿಕಂ ಕರ್ಮ ಪರ್ಣಶಾಲಾಮುಪಾಗಮತ್ ॥ ೨

ಉವಾಸ ಸುಖಿತಸ್ತತ್ರ ಪೂಜ್ಯಮಾನೋ ಮಹರ್ಷಿಭಿಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಚಕಾರ ವಿವಿಧಾಃ ಕಥಾಃ ॥ ೩

ಸ ರಾಮಃ ಪರ್ಣಶಾಲಾಯಾಮಾಸೀನಃ ಸಹ ಸೀತಯಾ ।
ವಿರರಾಜ ಮಹಾಬಾಹುಶ್ಚಿತ್ರಯಾ ಚಂದ್ರಮಾ ಇವ ॥ ೪

ತಥಾಸೀನಸ್ಯ ರಾಮಸ್ಯ ಕಥಾಸಂಸಕ್ತಚೇತಸಃ ।
ತಂ ದೇಶಂ ರಾಕ್ಷಸೀ ಕಾಚಿದಾಜಗಾಮ ಯದೃಚ್ಛಯಾ ॥ ೫

## ಸರ್ಗ ೧೭

### ಶೂರ್ಪಣಖಿಯು ಶ್ರೀರಾಮನನ್ನು ಕಂಡು ಕಾಮಮೋಹಿತಳಾಗುವುದು

ಶ್ರೀರಾಮನೂ ಸೀತೆಯೂ ಲಕ್ಷ್ಮಣನೂ ಗೋದಾವರಿಯಲ್ಲಿ ಸ್ನಾನಮಾಡಿ ಅಲ್ಲಿಂದ ತಮ್ಮ ಆಶ್ರಮಕ್ಕೆ ಬಂದರು. ಶ್ರೀರಾಮನು ಲಕ್ಷ್ಮಣಸಮೇತನಾಗಿ ಪ್ರಾತರಾಹ್ನಿಕವನ್ನು ಮುಗಿಸಿ ಪರ್ಣಶಾಲೆಯನ್ನು ಪ್ರವೇಶಿಸಿದನು (೧-೨). ಅಲ್ಲಿಗೆ ಬಂದಿದ್ದ ಮಹರ್ಷಿಗಳು ಆತನನ್ನು ಆದರದಿಂದ ಕಂಡರು. ಶ್ರೀರಾಮನು ಲಕ್ಷ್ಮಣನೊಡನೆ ಸಂತೋಷದಿಂದ ಮಾತನಾಡುತ್ತ ಸತ್ಕಥಾಲಾಪಗಳಲ್ಲಿ ತೊಡಗಿದನು. ಸೀತಾದೇವಿಯೊಡನೆ ಪರ್ಣಶಾಲೆಯಲ್ಲಿ ಕುಳಿತಿದ್ದ ಆ ಮಹಾಬಾಹುವು ಚಿತ್ರಾನಕ್ಷತ್ರದೊಡನೆ ವಿರಾಜಿಸುವ ಚಂದ್ರಮನಂತೆ ಕಾಣಿಸುತ್ತಿದ್ದನು (೩-೪). ಕಥಾಲಾಪಗಳಲ್ಲಿ ತೊಡಗಿ ಶ್ರೀರಾಮನು ಹಾಗೆ ಕುಳಿತಿರುವಾಗ, ಒಬ್ಬ ರಾಕ್ಷಸಿಯು ಸ್ವೇಚ್ಛೆಯಾಗಿ ಸಂಚರಿಸುತ್ತ ಆ ಸ್ಥಳಕ್ಕೆ ಬಂದಳು. ಅವಳ ಹೆಸರು ಶೂರ್ಪಣಖಿ ;

ಸಾ ತು ಶೂರ್ಪಣಖಾ ನಾಮ ದಶಗ್ರೀವಸ್ಯ ರಕ್ಷಸಃ ।
ಭಗಿನೀ ರಾಮಮಾಸಾದ್ಯ ದದರ್ಶ ತ್ರಿದಶೋಪಮಮ್ ॥ ೬

ಸಿಂಹೋರಸ್ಕಂ ಮಹಾಬಾಹುಂ ಪದ್ಮಪತ್ರನಿಭೇಕ್ಷಣಮ್ ।
ಆಜಾನುಬಾಹುಂ ದೀಪ್ತಾಸ್ಯಮತೀವ ಪ್ರಿಯದರ್ಶನಮ್ ॥ ೭

ಗಜವಿಕ್ರಾಂತಗಮನಂ ಜಟಾಮಂಡಲಧಾರಿಣಮ್ ।
ಸುಕುಮಾರಂ ಮಹಾಸತ್ತ್ವಂ ಪಾರ್ಥಿವವ್ಯಂಜನಾನ್ವಿತಮ್ ॥ ೮

ರಾಮಮಿಂದೀವರಶ್ಯಾಮಂ ಕಂದರ್ಪಸದೃಶಪ್ರಭಮ್ ।
ಬಭೂವೇಂದ್ರೋಪಮಂ ದೃಷ್ಟ್ವಾ ರಾಕ್ಷಸೀ ಕಾಮಮೋಹಿತಾ ॥ ೯

ಸುಮುಖಂ ದುರ್ಮುಖೀ ರಾಮಂ ವೃತ್ತಮಧ್ಯಂ ಮಹೋದರೀ ।
ವಿಶಾಲಾಕ್ಷಂ ವಿರೂಪಾಕ್ಷೀ ಸುಕೇಶಂ ತಾಮ್ರಮೂರ್ಧಜಾ ॥ ೧೦

ಪ್ರೀತಿರೂಪಂ ವಿರೂಪಾ ಸಾ ಸುಸ್ವರಂ ಭೈರವಸ್ವರಾ ।
ತರುಣಂ ದಾರುಣಾ ವೃದ್ಧಾ ದಕ್ಷಿಣಂ ವಾಮಭಾಷಿಣೀ ॥ ೧೧

---

ದಶಕಂಠನೆಂಬ ರಾಕ್ಷಸೇಶ್ವರನ ಸೋದರಿ. ಅವಳು ಬಂದು ಸಾಕ್ಷಾತ್ ದೇವತೆಯಂತೆ ಶೋಭಿಸುತ್ತಿದ್ದ ಶ್ರೀರಾಮನನ್ನು ಕಂಡಳು (೫-೬). ಆತನಿಗಾದರೋ ಸಿಂಹದಂತಹ ವಿಶಾಲವಾದ ವಕ್ಷಃಸ್ಥಳ ; ಪುಷ್ಟವಾದ ಬಾಹುಗಳು ; ತಾವರೆಯ ದಳದಂತೆ ಮೋಹಕವಾದ ಕಣ್ಣುಗಳು ; ಆಜಾನುಬಾಹು ; ತೇಜಸ್ವಿಯಾದ ಮುಖ. ಅವನನ್ನು ನೋಡಿದರೆ ಆನಂದವಾಗುವುದು. ಗಜಗಂಭೀರಗಾಮಿ ; ಜಟಾಮಂಡಲಧಾರಿ ; ಸುಕುಮಾರದೇಹಿ ; ಮಹಾವೀರ್ಯಶಾಲಿ ; ಎದ್ದು ಕಾಣುವ ಕ್ಷತ್ರಿಯಲಕ್ಷಣಗಳುಳ್ಳವನು (೭-೮). ಇಂದೀವರಶ್ಯಾಮಲಾಂಗನೂ ಮನ್ಮಥನಂತೆ ಸುಂದರಾಂಗನೂ ದೇವೇಂದ್ರನಂತೆ ದಿವ್ಯಕಾಂತಿಯುಕ್ತನೂ ಆದ ಶ್ರೀರಾಮಚಂದ್ರನನ್ನು ನೋಡಿ ಆ ರಾಕ್ಷಸಿಯು ಕಾಮಮೋಹಿತಳಾದಳು ! (೯). ಶ್ರೀರಾಮನದು ಸುಂದರವಾದ ಮುಖ, ಇವಳದು ಸೊಟ್ಟಮೋರೆ ! ಅವನಿಗೆ ಕೃಶವಾದ ನಡು, ಇವಳಿಗೆ ದೊಡ್ಡಹೊಟ್ಟೆ ! ಅವನು ವಿಶಾಲಾಕ್ಷ, ಇವಳು ವಿರೂಪಾಕ್ಷಿ ! ಅವನಿಗೆ ನವಿರಾದ ಕೃಷ್ಣಕೇಶರಾಶಿ, ಇವಳಿಗೆ ಕೆಂಗೂದಲು ! (೧೦). ಅವನು ಸಂತೋಷವೀಯುವ ಸಾತ್ತ್ವಿಕಮೂರ್ತಿ, ಇವಳು ಉದ್ವೇಗ

ನ್ಯಾಯವೃತ್ತಂ ಸುದುರ್ವೃತ್ತಾ ಪ್ರಿಯಮಪ್ರಿಯದರ್ಶನಾ ।
ಶರೀರಜಸಮಾವಿಷ್ಟಾ ರಾಕ್ಷಸೀ ವಾಕ್ಯಮಬ್ರವೀತ್ ॥ ೧೨

ಜಟೀ ತಾಪಸರೂಪೇಣ ಸಭಾರ್ಯಃ ಶರಚಾಪಧೃತ್ ।
ಆಗತಸ್ತ್ವಮಿಮಂ ದೇಶಂ ಕಥಂ ರಾಕ್ಷಸಸೇವಿತಮ್ ॥ ೧೩

ಕಿಮಾಗಮನಕೃತ್ಯಂ ತೇ ತತ್ತ್ವಮಾಖ್ಯಾತುಮರ್ಹಸಿ ।
ಏವಮುಕ್ತಸ್ತು ರಾಕ್ಷಸ್ಯಾ ಶೂರ್ಪಣಖ್ಯಾ ಪರಂತಪಃ ॥ ೧೪

ಋಜುಬುದ್ಧಿತಯಾ ಸರ್ವಮಾಖ್ಯಾತುಮುಪಚಕ್ರಮೇ ।
ಅನೃತಂ ನ ಹಿ ರಾಮಸ್ಯ ಕದಾಚಿದಪಿ ಸಂಮತಮ್ ॥ ೧೫

ವಿಶೇಷೇಣಾಶ್ರಮಸ್ಥಸ್ಯ ಸಮೀಪೇ ಸ್ತ್ರೀಜನಸ್ಯ ಚ ।
ಆಸೀದ್ದಶರಥೋ ನಾಮ ರಾಜಾ ತ್ರಿದಶವಿಕ್ರಮಃ ॥ ೧೬

---

ಗೊಳಿಸುವ ತಾಮಸಮೂರ್ತಿ ! ಅವನಿಗೆ ಇಂಪಾದ ಕಂಠಧ್ವನಿ, ಇವಳಿಗೆ ಭೈರವಧ್ವನಿ ! ಅವನು ಸೌಮ್ಯಾಕಾರದ ಯುವಕ, ಇವಳು ಭೀಕರಾಕೃತಿಯ ಮುದುಕಿ ! ಅವನು ನಯವಾಗಿ ಮಾತನಾಡುವ ಮಾತುಗಾರ, ಇವಳು ಒರಟಾಗಿ ಮಾತನಾಡುವ ಕಟುಭಾಷಿಣಿ ! (೧೧). ಅವನು ಸದಾಚಾರಸಂಪನ್ನ, ಇವಳು ದುರಾಚಾರನಿರತೆ ! ಅವನನ್ನು ನೋಡಿದರೆ ಆನಂದವಾಗುವುದು, ಇವಳನ್ನು ನೋಡಿದರೆ ಉದ್ವೇಗವಾಗುವುದು ! ಇಂಥ ರಾಕ್ಷಸಿಯು ಶ್ರೀರಾಮನನ್ನು ನೋಡಿ ಕಾಮವಿಕಾರಕ್ಕೆ ಒಳಗಾದಳು (೧೨). ಅವಳು "(ಯಾರು ನೀನು ?) ಜಟೆಯನ್ನು ಧರಿಸಿ ತಾಪಸವೇಶದಲ್ಲಿದ್ದೀಯೆ, ಹೆಂಡತಿಯನ್ನು ಕಟ್ಟಿಕೊಂಡು ಶರಚಾಪಗಳನ್ನು ಹಿಡಿದಿದ್ದೀಯೆ ? ರಾಕ್ಷಸರಿಂದ ತುಂಬಿದ ಈ ಪ್ರದೇಶಕ್ಕೆ ಹೇಗೆ ಬಂದೆ ? ಏಕೆ ಬಂದೆ ? ಸತ್ಯವನ್ನು ಹೇಳು" ಎಂದು ಶ್ರೀರಾಮನನ್ನು ಕೇಳಿದಳು (೧೩-೧೪). ಮೊರದಂಥ ಉಗುರುಗಳಿದ್ದ ಶೂರ್ಪಣಖಿಯು (ಹೀಗೆ ಕೈಬೀಸುತ್ತ) ಕೇಳಲು, ಆ ವೀರನು ಸರಳಸ್ವಭಾವದವನಾದ್ದರಿಂದ ತನ್ನ ವೃತ್ತಾಂತವೆಲ್ಲವನ್ನೂ ಹೇಳಲಾರಂಭಿಸಿದನು. ಏಕೆಂದರೆ, ಯಾವ ಸಂದರ್ಭದಲ್ಲಿಯೂ ಸುಳ್ಳು ಹೇಳುವುದೆಂದರೆ ಶ್ರೀರಾಮನಿಗೆ ಆಗದು. ಅದರಲ್ಲಿಯೂ ತಪೋವನ

ತಸ್ಯಾಹಮಗ್ರಜಃ ಪುತ್ರೋ ರಾಮೋ ನಾಮ ಜನೈಃ ಶ್ರುತಃ ।
ಭ್ರಾತಾಯಂ ಲಕ್ಷ್ಮಣೋ ನಾಮ ಯವೀಯಾನ್ ಮಾಮನುವ್ರತಃ ॥

ಇಯಂ ಭಾರ್ಯಾ ಚ ವೈದೇಹೀ ಮಮ ಸೀತೇತಿ ವಿಶ್ರುತಾ ।
ನಿಯೋಗಾತ್ತು ನರೇಂದ್ರಸ್ಯ ಪಿತುರ್ಮಾತುಶ್ಚ ಯಂತ್ರಿತಃ ॥ ೧೮

ಧರ್ಮಾರ್ಥಂ ಧರ್ಮಕಾಂಕ್ಷೀ ಚ ವನಂ ವಸ್ತುಮಿಹಾಗತಃ ।
ತ್ವಾಂ ತು ವೇದಿತುಮಿಚ್ಛಾಮಿ ಕಥ್ಯತಾಂ ಕಾಸಿ ಕಸ್ಯ ವಾ ॥ ೧೯

ನ ಹಿ ತಾವನ್ಮನೋಜ್ಞಾಂಗೀ ರಾಕ್ಷಸೀ ಪ್ರತಿಭಾಸಿ ಮೇ ।
ಇಹ ವಾ ಕಿಂ ನಿಮಿತ್ತಂ ತ್ವಮಾಗತಾ ಬ್ರೂಹಿ ತತ್ತ್ವತಃ ॥ ೨೦

ಸಾಬ್ರವೀದ್ವಚನಂ ಶ್ರುತ್ವಾ ರಾಕ್ಷಸೀ ಮದನಾರ್ದಿತಾ ।
ಶ್ರೂಯತಾಂ ರಾಮ ವಕ್ಷ್ಯಾಮಿ ತತ್ತ್ವಾರ್ಥಂ ವಚನಂ ಮಮ ॥ ೨೧

---

ದಲ್ಲಿದ್ದು ಹೆಂಗಸರೊಡನೆ ಸುಳ್ಳುಹೇಳುವುದೆ? ಆತನು ಹೀಗೆಂದನು : "ದೇವತೆಗಳಂತೆ ಪರಾಕ್ರಮಿಯಾದ ದಶರಥನೆಂಬ ಮಹಾರಾಜನಿದ್ದನು (೧೫-೧೬). ಆತನಿಗೆ ನಾನು ಹಿರಿಯ ಮಗ. ನನ್ನನ್ನು ರಾಮನೆಂದು ಹೇಳುತ್ತಾರೆ. ಇವನು ನನ್ನ ತಮ್ಮ; ಲಕ್ಷ್ಮಣನೆಂದು ಹೆಸರು; ನನ್ನನ್ನು ಅನುಸರಿಸಿಕೊಂಡಿದ್ದಾನೆ. ಈಕೆ ನನ್ನ ಪತ್ನಿ; ವಿದೇಹರಾಜನತನಯೆ; ಸೀತೆಯೆಂದು ಹೆಸರು. ನರೇಂದ್ರನಾದ ನನ್ನ ತಂದೆ ಮತ್ತು ತಾಯಿಯ ಆಜ್ಞೆಗೆ ಒಳಪಟ್ಟು ಇಲ್ಲಿಗೆ ಬಂದಿದ್ದೇನೆ. ಪಿತೃವಾಕ್ಯಪರಿಪಾಲನವೆಂಬ ಧರ್ಮವನ್ನು ನಡೆಸಬೇಕೆಂದು ಸಂಕಲ್ಪಿಸಿ ಧರ್ಮಪಾಲನೆಗೋಸ್ಕರ ಅರಣ್ಯದಲ್ಲಿರಬೇಕೆಂದು ಬಂದಿದ್ದೇನೆ. (೧೭–೧೮). ಈಗ ನೀನು ಯಾರೆಂದು ತಿಳಿಯಲಿಚ್ಛಿಸುತ್ತೇನೆ. ಯಾರು ನೀನು? ಯಾರ ಮಗಳು! ಹೇಳು. ನಿನ್ನ ಆಕೃತಿಯು ಅಷ್ಟೇನೂ ಮನಸ್ಸಿಗೆ ಹಿಡಿಸುವಂತಿಲ್ಲ. ನೀನು ರಾಕ್ಷಸಿಯಾಗಿರಬಹುದೆಂದು ನನಗೆ ತೋರುತ್ತದೆ. ಇಲ್ಲಿಗೆ ನೀನು ಬಂದ ನಿಮಿತ್ತವಾದರೂ ಏನು? ಸತ್ಯವನ್ನು ಹೇಳು" ಎಂದು ನುಡಿದನು (೧೯-೨೦). ಕಾಮಪೀಡಿತಳಾದ ಆ ರಾಕ್ಷಸಿಯು "ರಾಮ, ಸತ್ಯವನ್ನೇ ಹೇಳುವೆನು, ಕೇಳು: ನಾನು ಶೂರ್ಪಣಖಿಯೆಂಬ ರಾಕ್ಷಸಿ. ಮನಬಂದ ರೂಪವನ್ನು ತಾಳಬಲ್ಲ

ಅಹಂ ಶೂರ್ಪಣಖಾ ನಾಮ ರಾಕ್ಷಸೀ ಕಾಮರೂಪಿಣೀ ।
ಅರಣ್ಯಂ ವಿಚರಾಮೀದಮೇಕಾ ಸರ್ವಭಯಂಕರಾ ॥ ೨೨

ರಾವಣೋ ನಾಮ ಮೇ ಭ್ರಾತಾ ಬಲೀಯಾನ್ ರಾಕ್ಷಸೇಶ್ವರಃ ।
ವೀರೋ ವಿಶ್ರವಸಃ ಪುತ್ರೋ ಯದಿ ತೇ ಶ್ರೋತ್ರಮಾಗತಃ ॥ ೨೩

ಪ್ರವೃದ್ಧನಿದ್ರಶ್ಚ ಸದಾ ಕುಂಭಕರ್ಣೋ ಮಹಾಬಲಃ ।
ವಿಭೀಷಣಸ್ತು ಧರ್ಮಾತ್ಮಾ ನ ತು ರಾಕ್ಷಸಚೇಷ್ಟಿತಃ ॥ ೨೪

ಪ್ರಖ್ಯಾತವೀರ್ಯೌ ಚ ರಣೇ ಭ್ರಾತರೌ ಖರದೂಷಣೌ ।
ತಾನಹಂ ಸಮತಿಕ್ರಾಂತಾ ರಾಮ ತ್ವಾಪೂರ್ವದರ್ಶನಾತ್ ॥ ೨೫

ಸಮುಪೇತಾಸ್ಮಿ ಭಾವೇನ ಭರ್ತಾರಂ ಪುರುಷೋತ್ತಮಮ್ ।
ಅಹಂ ಪ್ರಭಾವಸಂಪನ್ನಾ ಸ್ವಚ್ಛಂದಬಲಗಾಮಿನೀ ॥ ೨೬

ಚಿರಾಯ ಭವ ಮೇ ಭರ್ತಾ ಸೀತಯಾ ಕಿಂ ಕರಿಷ್ಯಸಿ ।
ವಿಕೃತಾ ಚ ವಿರೂಪಾ ಚ ನ ಚೇಯಂ ಸದೃಶೀ ತವ ॥ ೨೭

---

ಕಾಮರೂಪಿಣಿ. ನಾನು ಏಕಾಕಿನಿಯಾಗಿ ಸರ್ವರಿಗೂ ಭಯವನ್ನುಂಟುಮಾಡುತ್ತ ಈ ಅರಣ್ಯದಲ್ಲಿ ಸಂಚರಿಸುತ್ತಿದ್ದೇನೆ. (೨೧-೨೨). ನೀನು ರಾವಣನೆಂಬ ರಾಕ್ಷಸೇಶ್ವರನ ವಿಷಯವನ್ನು ಕೇಳಿರಬಹುದು. ಅವನು ನನ್ನ ಅಣ್ಣ ; ಮಹಾಬಲಾಢ್ಯ. ಆ ವೀರನು ವಿಶ್ರವಸ್ಸಿನ ಪುತ್ರ. ಇನ್ನೊಬ್ಬ ನನ್ನ ಅಣ್ಣ ಕುಂಭಕರ್ಣ. ಮಹಾ ಪರಾಕ್ರಮಿ. ನಿದ್ರೆಯಲ್ಲಿ ನಿಸ್ಸೀಮ ! ಇನ್ನೊಬ್ಬನು ವಿಭೀಷಣ. ಅವನಿಗೆ ಧರ್ಮದಲ್ಲಿ ಶ್ರದ್ಧೆ. ರಾಕ್ಷಸಕೃತ್ಯ ಅವನಲ್ಲಿಲ್ಲ (೨೩-೨೪). ಇನ್ನು ಖರದೂಷಣರೆಂಬ ಇಬ್ಬರೂ ನನಗೆ ಸೋದರರಾಗಬೇಕು. ಅವರು ಪ್ರಖ್ಯಾತ ಶೂರರು. ಆದರೆ, ರಾಮ, ನಾನು ಅವರೆಲ್ಲರನ್ನೂ ಮೀರಿದವಳು, ಅವರಿಗೆ ಅಧೀನಳಲ್ಲ. ನಿನ್ನಂಥ ಪುರುಷಶ್ರೇಷ್ಠನನ್ನು ನಾನು ಹಿಂದೆ ನೋಡಿರಲಿಲ್ಲ. ನೀನು ನನ್ನ ಗಂಡನೆಂದು ಪ್ರೇಮದಿಂದ ಮೆಚ್ಚಿ ಬಂದಿದ್ದೇನೆ. ನಾನು ತೇಜೋಬಲಸಮನ್ವಿತಳು. ನನ್ನ ಇಷ್ಟಬಂದಂತೆ ಎಲ್ಲಿಗೆ ಬೇಕಾದರೂ ಹೋಗಲು ಸಮರ್ಥಳು (೨೫-೨೬). ಇನ್ನುಮೇಲೆ ನೀನು ಶಾಶ್ವತವಾಗಿ ನನ್ನ ಗಂಡನಾಗಿರು. ಈ ಸೀತೆಯನ್ನು ಕಟ್ಟಿ

ಅಹಮೇವಾನುರೂಪಾ ತೇ ಭಾರ್ಯಾರೂಪೇಣ ಪಶ್ಯ ಮಾಮ್ ।
ಇಮಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ॥ ೨೮

ಅನೇನ ತೇ ಸಹ ಭ್ರಾತ್ರಾ ಭಕ್ಷಯಿಷ್ಯಾಮಿ ಮಾನುಷೀಮ್ ।
ತತಃ ಪರ್ವತಶೃಂಗಾಣಿ ವನಾನಿ ವಿವಿಧಾನಿ ಚ ॥ ೨೯

ಪಶ್ಯನ್ ಸಹ ಮಯಾ ಕಾಂತ ದಂಡಕಾನ್ ವಿಚರಿಷ್ಯಸಿ ।
ಇತ್ಯೇವಮುಕ್ತಃ ಕಾಕುತ್ಸ್ಥಃ ಪ್ರಹಸ್ಯ ಮದಿರೇಕ್ಷಣಾಮ್ ॥ ೩೦
ಇದಂ ವಚನಮಾರೇಭೇ ವಕ್ತುಂ ವಾಕ್ಯವಿಶಾರದಃ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತದಶಃ ಸರ್ಗಃ

ಕೊಂಡು ಏನುಮಾಡುತ್ತೀಯೆ ? ಇವಳ ದೇಹ ವಿಕಾರವಾಗಿದೆ. ಕುರೂಪಿ ಇವಳು. ನಿನಗೆ ಯೋಗ್ಯಳಲ್ಲ! ನಾನೇ ನಿನಗೆ ಅನುರೂಪಳಾದವಳು. ನಾನು ನಿನ್ನ ಮಡದಿಯೆಂದು ಭಾವಿಸು ! ಈ ಸೀತೆ ಕುರೂಪಿ, ಕೆಟ್ಟವಳು, ಕರಾಳಿ. ಅವಳ ಹೊಟ್ಟೆ ಒಳಗೆ ಸೀದುಹೋಗಿದೆ ! (೨೭-೨೮). ಈ ಮನುಷ್ಯಸ್ತ್ರೀಯನ್ನೂ ನಿನ್ನ ತಮ್ಮನನ್ನೂ ಒಟ್ಟಿಗೆ ತಿಂದುಬಿಡುವೆನು ! ಅನಂತರ, ಹೇ ಕಾಂತ ! (ಯಾವ ಈತಿಬಾಧೆಯೂ ಇಲ್ಲದೆ) ನನ್ನೊಡನೆ ವಿಹರಿಸುತ್ತ ಪರ್ವತಶೃಂಗಗಳನ್ನೂ ನಾನಾಬಗೆಯ ವನಗಳನ್ನೂ ನೋಡುತ್ತ ದಂಡಕಾರಣ್ಯದಲ್ಲಿ ಮನಬಂದಂತೆ ತಿರುಗುತ್ತಿರಬಹುದು ! " ಎಂದು ಹೇಳಿದಳು (೨೯). ಮದ್ಯಪಾನದಿಂದ ಆ ಶೂರ್ಪಣಖಿಯ ಕಣ್ಣುಗಳು ಕೆಂಪೇರಿದ್ದವು. ಶ್ರೀರಾಮನು ಅವಳ ಮಾತನ್ನು ಕೇಳಿ ನಕ್ಕುಬಿಟ್ಟನು. ಆ ವಾಕ್ಯವಿಶಾರದನು ಈ ರೀತಿಯಲ್ಲಿ ಮಾತನಾಡಲುಪಕ್ರಮಿಸಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿನೇಳನೆಯ ಸರ್ಗ

## ಅಷ್ಟಾದಶಃ ಸರ್ಗಃ

### ಶೂರ್ಪಣಖಾ ವಿರೂಪಣಮ್

ತತಃ ಶೂರ್ಪಣಖಾಂ ರಾಮಃ ಕಾಮಪಾಶಾವಪಾಶಿತಾಮ್ ।
ಸ್ವಚ್ಛಯಾ ಶ್ಲಕ್ಷ್ಣಯಾ ವಾಚಾ ಸ್ಮಿತಪೂರ್ವಮಥಾಬ್ರವೀತ್ ॥ ೧

ಕೃತದಾರೋಽಸ್ಮಿ ಭವತಿ ಭಾರ್ಯೇಯಂ ದಯಿತಾ ಮಮ ।
ತ್ವದ್ವಿಧಾನಾಂ ತು ನಾರೀಣಾಂ ಸುದುಃಖಾ ಸಸಪತ್ನತಾ ॥ ೨

ಅನುಜಸ್ತ್ವೇಷ ಮೇ ಭ್ರಾತಾ ಶೀಲವಾನ್ ಪ್ರಿಯದರ್ಶನಃ ।
ಶ್ರೀಮಾನಕೃತದಾರಶ್ಚ ಲಕ್ಷ್ಮಣೋ ನಾಮ ವೀರ್ಯವಾನ್ ॥ ೩

ಅಪೂರ್ವೀ ಭಾರ್ಯಯಾ ಚಾರ್ಥೀ ತರುಣಃ ಪ್ರಿಯದರ್ಶನಃ ।
ಅನುರೂಪಶ್ಚ ತೇ ಭರ್ತಾ ರೂಪಸ್ಯಾಸ್ಯ ಭವಿಷ್ಯತಿ ॥ ೪

ಏನಂ ಭಜ ವಿಶಾಲಾಕ್ಷಿ ಭರ್ತಾರಂ ಭ್ರಾತರಂ ಮಮ ।
ಅಸಪತ್ನಾ ವರಾರೋಹೇ ಮೇರುಮರ್ಕಪ್ರಭಾ ಯಥಾ ॥ ೫

## ಸರ್ಗ ೧೮

### ಲಕ್ಷ್ಮಣನು ಶೂರ್ಪಣಖಿಯನ್ನು ವಿರೂಪಗೊಳಿಸುವುದು.

ಆಗ ಶ್ರೀರಾಮನು ಕಾಮಪಾಶಕ್ಕೆ ಸಿಕ್ಕಿದ ಶೂರ್ಪಣಖಿಯನ್ನು ನೋಡಿ ಮುಗುಳ್ನಗೆ ಬೀರುತ್ತ ಸ್ಪಷ್ಟವಾದ ಮೃದುವಾಕ್ಯದಿಂದ "ಆರ್ಯೆ, ನನಗೆ ಮದುವೆಯಾಗಿದೆ. ಇವಳು ನನ್ನ ಪ್ರಿಯಪತ್ನಿ. ನಿನ್ನಂಥ ಹೆಂಗಸರಿಗೆ ಸವತಿಯೊಡನಿರುವುದು ಬಹು ಕಷ್ಟ ! (೧-೨). ಅವನು ನನ್ನ ತಮ್ಮ, ಶೀಲವಂತ, ಸುಂದರ, ಒಳ್ಳೆಯ ತೇಜಸ್ವಿ, ವೀರ್ಯಶಾಲಿ. ಲಕ್ಷ್ಮಣನೆಂದು ಅವನ ಹೆಸರು. ಅವನು ಅವಿವಾಹಿತ, ದಾಂಪತ್ಯಸುಖಕ್ಕೆ ಹೊಸಬ. ಆತನಿಗೆ ಒಬ್ಬ ಹೆಂಡತಿ ಬೇಕಾಗಿದೆ. ಲಕ್ಷ್ಮಣನು ಸುಂದರನಾದ ಯುವಕನಾಗಿದ್ದಾನೆ. ನಿನ್ನ ಈ ರೂಪಕ್ಕೆ ಅನುರೂಪನಾದ ಗಂಡನಾಗುವನು (೩-೪). ಹೇ ವಿಶಾಲಾಕ್ಷಿ! ಈ ನನ್ನ ತಮ್ಮನನ್ನು ಗಂಡನನ್ನಾಗಿ ವರಿಸು ! ಸುಂದರಿ ! ಇವನನ್ನು ವರಿಸಿದರೆ ನಿನಗೆ ಸವತಿಯ ಕಾಟವಿರುವುದಿಲ್ಲ ! ಮೇರುಪರ್ವತದಲ್ಲಿ ಸೂರ್ಯಪ್ರಭೆಯು ಸೇರಿದಂತೆ

ಇತಿ ರಾಮೇಣ ಸಾ ಪ್ರೋಕ್ತಾ ರಾಕ್ಷಸೀ ಕಾಮಮೋಹಿತಾ ।
ವಿಸೃಜ್ಯ ರಾಮಂ ಸಹಸಾ ತತೋ ಲಕ್ಷ್ಮಣಮಬ್ರವೀತ್ ॥ ೬

ಅಸ್ಯ ರೂಪಸ್ಯ ತೇ ಯುಕ್ತಾ ಭಾರ್ಯಾಹಂ ವರವರ್ಣಿನೀ ।
ಮಯಾ ಸಹ ಸುಖಂ ಸರ್ವಾನ್ ದಂಡಕಾನ್ ವಿಚರಿಷ್ಯಸಿ ॥ ೭

ಏವಮುಕ್ತಸ್ತು ಸೌಮಿತ್ರೀ ರಾಕ್ಷಸ್ಯಾ ವಾಕ್ಯಕೋವಿದಃ ।
ತತಃ ಶೂರ್ಪಣಖೀಂ ಸ್ಮಿತ್ವಾ ಲಕ್ಷ್ಮಣೋ ಯುಕ್ತಮಬ್ರವೀತ್ ॥ ೮

ಕಥಂ ದಾಸಸ್ಯ ಮೇ ದಾಸೀ ಭಾರ್ಯಾ ಭವಿತುಮಿಚ್ಛಸಿ ।
ಸೋಽಹಮಾರ್ಯೇಣ ಪರವಾನ್ ಭ್ರಾತ್ರಾ ಕಮಲವರ್ಣಿನಿ ॥ ೯

ಸಮೃದ್ಧಾರ್ಥಸ್ಯ ಸಿದ್ಧಾರ್ಥಾ ಮುದಿತಾ ವರವರ್ಣಿನೀ ।
ಆರ್ಯಸ್ಯ ತ್ವಂ ವಿಶಾಲಾಕ್ಷಿ ಭಾರ್ಯಾ ಭವ ಯವೀಯಸೀ ॥ ೧೦

---

ನಿಮ್ಮ ಜೋಡಿಯು ರಮ್ಯವಾಗಿರುವುದು ! " ಎಂದು ಹೇಳಿದನು* (೫). ಕಾಮದಿಂದ ಬುದ್ಧಿಗೆಟ್ಟ ಆ ರಾಕ್ಷಸಿಯು, ಶ್ರೀರಾಮನ ಮಾತನ್ನು ಕೇಳಿ ಅವನನ್ನು ಬಿಟ್ಟು, ನೆಟ್ಟಗೆ ಲಕ್ಷ್ಮಣನ ಬಳಿಗೆ ಹೋದಳು ! ಅವಳು ಲಕ್ಷ್ಮಣನನ್ನು ಕುರಿತು " ಏ ಲಕ್ಷ್ಮಣ ! ಮಿರುಗುವ ನನ್ನ ಮೈ ಬಣ್ಣವನ್ನು ನೋಡು ! ನಿನಗೆ ನಾನೇ ತಕ್ಕ ಹೆಂಡತಿ ! ನನ್ನೊಡನೆ ಈ ದಂಡಕಾರಣ್ಯದಲ್ಲಿ ಸುಖವಾಗಿ ವಿಹರಿಸಬಹುದು" ಎಂದಳು (೬-೭). ಅದನ್ನು ಕೇಳಿ ಲಕ್ಷ್ಮಣನಿಗೆ ನಗು ಬಂದಿತು. ಆ ಮಾತುಗಾರನು ಶೂರ್ಪಣಖಿಯನ್ನು ನೋಡಿ " ಆಹಾ ! ಕಮಲದ ಮೈಬಣ್ಣ ನಿನ್ನದು ! ಆದರೆ ನಾನು ಅಣ್ಣನಿಗೆ ದಾಸನಾಗಿದ್ದೇನೆ. ನೀನು ದಾಸನ ಭಾರ್ಯೆಯಾಗಿ ಇನ್ನೊಬ್ಬನ ದಾಸಿಯಾಗಬಹುದೆ ? ಅದು ನಿನಗೆ ಸಂಮತವಾದೀತೆ ? ನಾನು ಅಣ್ಣನಿಗೆ ಅಧೀನ (೮-೯). ಸಮಸ್ತ ಸಮೃದ್ಧಿಯಿಂದಿರುವ ಅಣ್ಣನಿಗೆ ನೀನು ಭಾರ್ಯೆಯಾದರೆ ನಿನ್ನ ಅಭಿಲಾಷೆ ಕೈಗೂಡುವುದು. ನೀನು ಆನಂದದಿಂದ ನಲಿಯಬಹುದು. ಹೇ ವಿಶಾಲಾಕ್ಷಿ ! ಎಷ್ಟು ಸೊಗಸಾದ ಮೈಬಣ್ಣ ನಿನ್ನದು ! ನನ್ನ ಅಣ್ಣನಿಗೆ ಕಿರಿಯ ಮಡದಿಯಾಗಿರು ! (೧೦).

---

* ಅನುಬಂಧವನ್ನು ನೋಡಿ.



ಲಕ್ಷ್ಮಣನು ಶೂರ್ಪಣಖಿಯನ್ನು ವಿರೂಪಗೊಳಿಸುವುದು

ಏನಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ।
ಭಾರ್ಯಾಂ ವೃದ್ಧಾಂ ಪರಿತ್ಯಜ್ಯ ತ್ವಾಮೇವೈಷ ಭಜಿಷ್ಯತಿ ॥ ೧೧

ಕೋ ಹಿ ರೂಪಮಿದಂ ಶ್ರೇಷ್ಠಂ ಸಂತ್ಯಜ್ಯ ವರವರ್ಣಿನಿ ।
ಮಾನುಷೀಷು ವರಾರೋಹೇ ಕುರ್ಯಾದ್ಭಾವಂ ವಿಚಕ್ಷಣಃ ॥ ೧೨

ಇತಿ ಸಾ ಲಕ್ಷ್ಮಣೇನೋಕ್ತಾ ಕರಾಲಾ ನಿರ್ಣತೋದರೀ ।
ಮನ್ಯತೇ ತದ್ವಚಸ್ತಥ್ಯಂ ಪರಿಹಾಸಾವಿಚಕ್ಷಣಾ ॥ ೧೩

ಸಾ ರಾಮಂ ಪರ್ಣಶಾಲಾಯಾಮುಪವಿಷ್ಟಂ ಪರಂತಪಮ್ ।
ಸೀತಯಾ ಸಹ ದುರ್ಧರ್ಷಮಬ್ರವೀತ್ ಕಾಮಮೋಹಿತಾ ॥ ೧೪

ಏನಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ।
ವೃದ್ಧಾಂ ಭಾರ್ಯಾಮವಷ್ಟಭ್ಯ ನ ಮಾಂ ತ್ವಂ ಬಹು ಮನ್ಯಸೇ ॥ ೧೫

ಅದ್ಯೇಮಾಂ ಭಕ್ಷಯಿಷ್ಯಾಮಿ ಪಶ್ಯತಸ್ತವ ಮಾನುಷೀಮ್ ।
ತ್ವಯಾ ಸಹ ಚರಿಷ್ಯಾಮಿ ನಿಃಸಪತ್ನಾ ಯಥಾಸುಖಮ್ ॥ ೧೬

---

ನೀನು ಹೇಳುವ ಪ್ರಕಾರ ಅವನ ಮಡದಿಯು ಕುರೂಪಿಯೂ ಕೆಟ್ಟವಳೂ ಕರಾಳಿಯೂ ಒಳಗೆ ಹತ್ತಿಹೋದ ಹೊಟ್ಟೆಯುವಳೂ ವಯಸ್ಸಾದವಳೂ ಆಗಿದ್ದಾಳಲ್ಲವೆ? ನನ್ನ ಅಣ್ಣನು ಅವಳನ್ನು ಬಿಟ್ಟು ನಿನ್ನನ್ನೇ ವರಿಸುವನು (೧೧). ಸುಂದರಿ! ನಿನ್ನ ಈ ರಮಣೀಯ ರೂಪವನ್ನು ಪರಿತ್ಯಜಿಸಿ ಯಾವ ಜಾಣನು ತಾನೇ ಮನುಷ್ಯಸ್ತ್ರೀಯರಲ್ಲಿ ಪ್ರಣಯವನ್ನಿಟ್ಟಾನು!" ಎಂದನು. ಹೀಗೆ ಲಕ್ಷ್ಮಣನು ಹೇಳಲು, ಜೋಲುಹೊಟ್ಟೆಯ ಆ ಕರಾಳಿಯು ಲಕ್ಷ್ಮಣನ ಮಾತು ಸತ್ಯವೆಂದೇ ತಿಳಿದುಕೊಂಡಳು. ಅವಳಿಗೆ ಹಾಸ್ಯಕಲೆಯ ಪರಿಚಯವಿರಲಿಲ್ಲ (೧೨–೧೩). ಕಾಮಮೋಹಿತಳಾದ ಆ ಶೂರ್ಪಣಖಿಯು ಪರ್ಣಶಾಲೆಯಲ್ಲಿ ಕುಳಿತಿದ್ದ ವೀರಾಗ್ರಣಿಯಾದ ಶ್ರೀರಾಮನ ಬಳಿಗೆ ಮತ್ತೆ ಹೋಗಿ "ಈ ನಿನ್ನ ಹೆಂಡತಿ ಕುರೂಪಿಯೂ ಕೆಟ್ಟವಳೂ ಆದ ಒಬ್ಬ ಕರಾಳಿ. ತಳಸಾರಿದ ಹೊಟ್ಟೆಯ ಈ ಮುದುಕಿಯನ್ನು ನಂಬಿಕೊಂಡು ನೀನು ನನ್ನನ್ನು ಮೆಚ್ಚದೆ ಇದ್ದೀಯೆ (೧೪–೧೫). ನೀನು ನೋಡುತ್ತಿರುವಾಗಲೇ ಈ ಮನುಷ್ಯಮಾತ್ರದವಳನ್ನು ಭಕ್ಷಿಸಿ

ಇತ್ಯುಕ್ತ್ವಾ ಮೃಗಶಾವಾಕ್ಷೀಮಲಾತಸದೃಶೇಕ್ಷಣಾ ।
ಅಭ್ಯಧಾವತ್ ಸುಸಂಕ್ರುದ್ಧಾ ಮಹೋಲ್ಕಾ ರೋಹಿಣೀಮಿವ ॥ ೧೭

ತಾಂ ಮೃತ್ಯುಪಾಶಪ್ರತಿಮಾಮಾಪತಂತೀಂ ಮಹಾಬಲಃ ।
ನಿಗೃಹ್ಯ ರಾಮಃ ಕುಪಿತಸ್ತತೋ ಲಕ್ಷ್ಮಣಮಬ್ರವೀತ್ ॥ ೧೮

ಕ್ರೂರೈರನಾರ್ಯೈಃ ಸೌಮಿತ್ರೇ ಪರಿಹಾಸಃ ಕಥಂಚನ ।
ನ ಕಾರ್ಯಃ ಪಶ್ಯ ವೈದೇಹೀಂ ಕಥಂಚಿತ್ ಸೌಮ್ಯ ಜೀವತೀಮ್ ॥

ಇಮಾಂ ವಿರೂಪಾಮಸತೀಮತಿಮತ್ತಾಂ ಮಹೋದರೀಮ್ ।
ರಾಕ್ಷಸೀಂ ಪುರುಷವ್ಯಾಘ್ರ ವಿರೂಪಯಿತುಮರ್ಹಸಿ ॥ ೨೦

ಇತ್ಯುಕ್ತೋ ಲಕ್ಷ್ಮಣಸ್ತಸ್ಯಾಃ ಕ್ರುದ್ಧೋ ರಾಮಸ್ಯ ಪಶ್ಯತಃ ।
ಉದ್ಧೃತ್ಯ ಖಡ್ಗಂ ಚಿಚ್ಛೇದ ಕರ್ಣನಾಸಂ ಮಹಾಬಲಃ ॥ ೨೧

---

ಬಿಡುತ್ತೇನೆ. ಈ ಸವತಿಯ ಕಾಟವನ್ನು ತಪ್ಪಿಸಿಕೊಂಡು ಸುಖವಾಗಿ ನಾನು ನಿನ್ನೊಡನೆ ವಿಹರಿಸುವೆನು" ಎಂದು ಕೂಗಿ ಜಾನಕಿಯಿದ್ದೆಡೆಗೆ ನುಗ್ಗಿದಳು (೧೬). ಪಂಜಿನಂತಹ ಉರಿಗಣ್ಣುಗಳಿಂದ ದುರುಗುಟ್ಟುತ್ತಿದ್ದ ಆ ರಾಕ್ಷಸಿಯು ಹರಿಣನೇತ್ರೆಯಾದ ಜಾನಕಿಯು ಕಡೆಗೆ ಕ್ರೋಧದಿಂದ ನುಗ್ಗುವಾಗ, ಭೀಕರವಾದ ಉಲ್ಕೆಯು ರೋಹಿಣೀನಕ್ಷತ್ರದ ಕಡೆಗೆ ಎರಗುವಂತೆ ಕಾಣಿಸಿತು (೧೭). ಶ್ರೀರಾಮನು ಕ್ರುದ್ಧನಾದನು. ಮೃತ್ಯುಪಾಶದಂತೆ ಎರಗುತ್ತಿದ್ದ ಆ ಶೂರ್ಪಣಖಿಯನ್ನು ಬಲಾಢ್ಯನಾದ ಶ್ರೀರಾಮನು ಥಟ್ಟನೆ ಹಿಡಿದು ನಿಲ್ಲಿಸಿ "ಲಕ್ಷ್ಮಣ, ಕ್ರೂರರೂ ಅನಾಗರಿಕರೂ ಆದವರೊಡನೆ ಎಂದಿಗೂ ಹಾಸ್ಯಮಾಡಬಾರದು. ವೈದೇಹಿಯನ್ನು ನೋಡು, ಹೇಗೋ ಪ್ರಾಣಸಹಿತ ಉಳಿದಳು (೧೮–೧೯). ಈ ದೊಡ್ಡಹೊಟ್ಟೆಯ ದುಷ್ಟರಾಕ್ಷಸಿ ಬಹು ಸೊಕ್ಕಿನವಳು. ಈ ಕುರೂಪಿಯನ್ನು, ಲಕ್ಷ್ಮಣ, ಮತ್ತಷ್ಟು ವಿರೂಪಗೊಳಿಸಿಬಿಡು!" ಎಂದನು. ಲಕ್ಷ್ಮಣನಿಗೂ ಸಿಟ್ಟುಬಂದಿತು. ಅವನು ಖಡ್ಗವನ್ನು ಹಿರಿದು ಶ್ರೀರಾಮನು ನೋಡುತ್ತಿರುವಾಗಲೇ ಆ ರಾಕ್ಷಸಿಯ ಕಿವಿಮೂಗುಗಳನ್ನು ಕತ್ತರಿಸಿಬಿಟ್ಟನು (೨೦–೨೧).

ನಿಕೃತ್ತಕರ್ಣನಾಸಾ ತು ವಿಸ್ವರಂ ಸಾ ವಿನದ್ಯ ಚ ।
ಯಥಾಗತಂ ಪ್ರದುದ್ರಾವ ಘೋರಾ ಶೂರ್ಪಣಖಾ ವನಮ್ ॥ ೨೨

ಸಾ ವಿರೂಪಾ ಮಹಾಘೋರಾ ರಾಕ್ಷಸೀ ಶೋಣಿತೋಕ್ಷಿತಾ ।
ನನಾದ ವಿವಿಧಾನ್ನಾದಾನ್ ಯಥಾ ಪ್ರಾವೃಷಿ ತೋಯದಃ ॥ ೨೩

ಸಾ ವಿಕ್ಷರಂತೀ ರುಧಿರಂ ಬಹುಧಾ ಘೋರದರ್ಶನಾ ।
ಪ್ರಗೃಹ್ಯ ಬಾಹೂ ಗರ್ಜಂತೀ ಪ್ರವಿವೇಶ ಮಹಾವನಮ್ ॥ ೨೪

ತತಸ್ತು ಸಾ ರಾಕ್ಷಸಸಂಘಸಂವೃತಂ
ಖರಂ ಜನಸ್ಥಾನಗತಂ ವಿರೂಪಿತಾ ।
ಉಪೇತ್ಯ ತಂ ಭ್ರಾತರಮುಗ್ರದರ್ಶನಂ
ಪಪಾತ ಭೂಮೌ ಗಗನಾದ್ಯಥಾಶನಿಃ ॥ ೨೫

ತತಃ ಸಭಾರ್ಯಂ ಭಯಮೋಹಮೂರ್ಚ್ಛಿತಾ
ಸಲಕ್ಷ್ಮಣಂ ರಾಘವಮಾಗತಂ ವನಮ್ ।

---

ಕಿವಿಮೂಗುಗಳನ್ನು ಕೊಯ್ದೊಡನೆ ಘೋರಾಕೃತಿಯ ಶೂರ್ಪಣಖಿಯು ಕೆಟ್ಟಧ್ವನಿಯಿಂದ ಕಿರುಚುತ್ತ ತಾನು ಬಂದ ದಾರಿಯನ್ನು ಹಿಡಿದು ಕಾಡಿನೊಳಗೆ ಓಡಿಹೋದಳು. ವಿರೂಪಗೊಂಡ ಆ ಘೋರರಾಕ್ಷಸಿಯ ಮೈಯೆಲ್ಲವೂ ರಕ್ತದಿಂದ ನೆನೆಯಿತು. ಮಳೆಗಾಲದ ಮೋಡದಂತೆ ನಾನಾಬಗೆಯಲ್ಲಿ ಗರ್ಜಿಸುತ್ತ ಅವಳು ಹೋದಳು (೨೨–೨೩). ಭಯಂಕರಾಕಾರದ ಆ ಶೂರ್ಪಣಖಿಯ ದೇಹದಿಂದ ನೆತ್ತರು ಸುರಿಯುತ್ತಿತ್ತು. ಅವಳು ಕೈಗಳೆರಡನ್ನೂ ಮೇಲೆತ್ತಿ ಗಟ್ಟಿಯಾಗಿ ಒದರುತ್ತ ಗೊಂಡಾರಣ್ಯವನ್ನು ಪ್ರವೇಶಿಸಿದಳು (೨೪). ಅವಳ ಅಣ್ಣನಾದ ಖರನು ಜನಸ್ಥಾನದಲ್ಲಿ ರಾಕ್ಷಸರಿಂದ ಪರಿವೃತನಾಗಿ ಕುಳಿತಿದ್ದನು. ಶೂರ್ಪಣಖಿಯು ಘೋರಾಕೃತಿಯುಳ್ಳ ಆತನೆದುರಿಗೆ, ಆಕಾಶದಿಂದ ಸಿಡಿಲೆರಗುವಂತೆ, ನೆಲದಮೇಲೆ ಧುಮುಕಿದಳು (೨೫). ಅನಂತರ ಖರನ ತಂಗಿಯಾದ ಆ ಶೂರ್ಪಣಖಿಯು ಖರನಿಗೆ ವೃತ್ತಾಂತವೆಲ್ಲವನ್ನೂ ತಿಳಿಸಿದಳು. ರಕ್ತದಲ್ಲಿ ನೆನೆದು ಭಯಮೋಹ ಗಳಿಂದ ದಿಕ್ಕುಗೆಟ್ಟಿದ್ದ ಆ ರಾಕ್ಷಸಿಯು, ದಂಡಕಾರಣ್ಯಕ್ಕೆ ಶ್ರೀರಾಮನು ತನ್ನ

ವಿರೂಪಣಂ ಚಾತ್ಮನಿ ಶೋಣಿತೋಕ್ಷಿತಾ
ಶಶಂಸ ಸರ್ವಂ ಭಗಿನೀ ಖರಸ್ಯ ಸಾ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಾದಶಃ ಸರ್ಗಃ

---

## ಏಕೋನವಿಂಶಃ ಸರ್ಗಃ

### ಖರಕ್ರೋಧಃ

ತಾಂ ತಥಾ ಪತಿತಾಂ ದೃಷ್ಟ್ವಾ ವಿರೂಪಾಂ ಶೋಣಿತೋಕ್ಷಿತಾಮ್ ।
ಭಗಿನೀಂ ಕ್ರೋಧಸಂತಪ್ತಃ ಖರಃ ಪಪ್ರಚ್ಛ ರಾಕ್ಷಸೀಮ್ ॥ ೧

ಉತ್ತಿಷ್ಠ ತಾವದಾಖ್ಯಾಹಿ ಪ್ರಮೋಹಂ ಜಹಿ ಸಂಭ್ರಮಮ್ ।
ವ್ಯಕ್ತಮಾಖ್ಯಾಹಿ ಕೇನ ತ್ವಮೇವಂರೂಪಾ ವಿರೂಪಿತಾ ॥ ೨

---

ಪತ್ನಿಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಬಂದಿರುವುದನ್ನೂ ತನ್ನ ಕಿವಿ ಮೂಗುಗಳನ್ನು ಕೊಯ್ದು ವಿರೂಪಗೊಳಿಸಿದ ವಿಷಯವನ್ನೂ ಖರನಿಗೆ ಹೇಳಿದಳು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹದಿನೆಂಟನೆಯ ಸರ್ಗ

---

## ಸರ್ಗ ೧೯

**ಶೂರ್ಪಣಖಿಯ ದೂರನ್ನು ಕೇಳಿ ಖರನು ಕ್ರುದ್ಧನಾಗುವುದು ; ರಾಮಲಕ್ಷ್ಮಣರನ್ನು ಸಂಹರಿಸಬೇಕೆಂದು ಹದಿನಾಲ್ಕು ಮಂದಿ ರಾಕ್ಷಸರಿಗೆ ಆಜ್ಞಾಪಿಸುವುದು**

ಹಾಗೆ ವಿರೂಪಗೊಂಡು ರಕ್ತವನ್ನು ಸುರಿಸುತ್ತ ನೆಲದಮೇಲೆ ಹೊರಳುತ್ತಿದ್ದ ತಂಗಿಯನ್ನು ಕಂಡು ಖರನು ಸಿಟ್ಟಿನಿಂದ ಉರಿದೆದ್ದನು. ಅವನು ಆ ರಾಕ್ಷಸಿಯನ್ನು ಕುರಿತು "ಶೂರ್ಪಣಖಿ, ಮೇಲೇಳು ; ಏನಾಯಿತೆಂಬುದನ್ನು ಹೇಳು. ಈ ದಿಗಿಲನ್ನೂ ಗಾಬರಿಯನ್ನೂ ಬಿಟ್ಟುಬಿಡು. ಯಾರು ನಿನ್ನನ್ನು ಹೀಗೆ ವಿರೂಪಗೊಳಿಸಿದರು ? ಸ್ಪಷ್ಟವಾಗಿ ತಿಳಿಸು (೧–೨).

ಕಃ ಕೃಷ್ಣಸರ್ಪಮಾಸೀನಮಾಶೀವಿಷಮನಾಗಸಮ್ ।
ತುದತ್ಯಭಿಸಮಾಪನ್ನಮಂಗುಲ್ಯಗ್ರೇಣ ಲೀಲಯಾ ॥ ೩

ಕಃ ಕಾಲಪಾಶಮಾಸಜ್ಯ ಕಂಠೇ ಮೋಹಾನ್ನ ಬುಧ್ಯತೇ ।
ಯಸ್ತ್ವಾಮದ್ಯ ಸಮಾಸಾದ್ಯ ಪೀತವಾನ್ ವಿಷಮುತ್ತಮಮ್ ॥ ೪

ಬಲವಿಕ್ರಮಸಂಪನ್ನಾ ಕಾಮಗಾ ಕಾಮರೂಪಿಣೀ ।
ಇಮಾಮವಸ್ಥಾಂ ನೀತಾ ತ್ವಂ ಕೇನಾಗತಸಮಾಗತಾ ॥ ೫

ದೇವಗಂಧರ್ವಭೂತಾನಾಮೃಷೀಣಾಂ ಚ ಮಹಾತ್ಮನಾಮ್ ।
ಕೋಽಯಮೇವಂ ವಿರೂಪಾಂ ತ್ವಾಂ ಮಹಾವೀರ್ಯಶ್ಚಕಾರ ಹ ॥ ೬

ನ ಹಿ ಪಶ್ಯಾಮ್ಯಹಂ ಲೋಕೇ ಯಃ ಕುರ್ಯಾನ್ಮಮ ವಿಪ್ರಿಯಮ್ ।
ಅಂತರೇಣ ಸಹಸ್ರಾಕ್ಷಂ ಮಹೇಂದ್ರಂ ಪಾಕಶಾಸನಮ್ ॥ ೭

---

ಯಾವ ತಪ್ಪೂ ಇಲ್ಲದೆ ತನ್ನ ಪಾಡಿಗಿದ್ದ ಕೃಷ್ಣಸರ್ಪವನ್ನು ಕೆರಳಿಸಿದವನಾರು? ವಿಷಮಯವಾದ ಹಲ್ಲುಗಳಿಂದ ಸಜ್ಜಾಗಿ ಅಭಿಮುಖವಾಗಿರುವ ಸರ್ಪವನ್ನು ಆಟವೆಂದು ತಿಳಿದು ಬೆರಳುತುದಿಯಿಂದ ಕೆಣಕಿದವನಾರು? (೩). ತನ್ನ ಕೊರಳಿಗೆ ಮೃತ್ಯುಪಾಶವನ್ನು ದಡ್ಡತನದಿಂದ ಬಿಗಿದುಕೊಂಡು ಅದರ ಅರಿವಿಲ್ಲದವನಾರು? ನಿನ್ನಮೇಲೆ ಕೈ ಮಾಡಿ ಘೋರವಿಷವನ್ನು ಕುಡಿದವನಾರು? (೪). ತಂಗಿ, ನೀನು ಬಲಪರಾಕ್ರಮಸಂಪನ್ನಳು; ಕಾಮರೂಪಿಣಿಯಾಗಿ ಮನಸ್ಸು ಬಂದಂತೆ ಸಂಚರಿಸುವ ಸಾಮರ್ಥ್ಯವುಳ್ಳವಳು. ಮೃತ್ಯುಸಮಾನಳಾದ ನೀನು ಈ ದುರವಸ್ಥೆಯನ್ನು ಹೊಂದಿ ಸುಮ್ಮನೆ ಬರಬಹುದೆ? ಯಾವನು ಹೀಗೆ ಮಾಡಿದವನು? (೫). ದೇವಗಂಧರ್ವಭೂತಗಳಲ್ಲಾಗಲಿ ಮಹಾತ್ಮರಾದ ಋಷಿಗಳಲ್ಲಾಗಲಿ ಯಾವ ವೀರನು ತಾನೆ ನಿನ್ನನ್ನು ವಿರೂಪಗೊಳಿಸಿರಬಹುದು? ಈ ಜಗತ್ತಿನಲ್ಲಿ ನನಗೆ ಅಪ್ರಿಯವನ್ನು ಮಾಡಬಲ್ಲ ಯಾವ ಧೀರನನ್ನೂ ನಾನು ಕಾಣೆ. ಅವನು ಸಹಸ್ರಾಕ್ಷನಾಗಿರಲಿ, ಮಹೇಂದ್ರನಾಗಿರಲಿ, ಪಾಕಶಾಸನನೇ*

---

* ಇಂದ್ರನ ಶೌರ್ಯಾತಿಶಯವನ್ನು ಎತ್ತಿಹೇಳುವುದಕ್ಕಾಗಿ ಖರನು ಇಂದ್ರನನ್ನೇ ಮೂರುಸಲ ಹೆಸರಿಸಿದ್ದಾನೆ. ಕ್ರೋಧಾವೇಶದಿಂದ ಹೇಳುವ ಮಾತಿದು. 'ಅಂತರೇಣ' ಎಂಬ ಶಬ್ದಕ್ಕೆ ಇಲ್ಲಿ, ಮಧ್ಯದಲ್ಲಿ—ವಿಷಯವಾಗಿ ಎಂದರ್ಥ; ವಿನಾ ಎಂಬ ಅರ್ಥವಲ್ಲ.

ಅದ್ಯಾಹಂ ಮಾರ್ಗಣೈಃ ಪ್ರಾಣಾನಾದಾಸ್ಯೇ ಜೀವಿತಾಂತಕೈಃ ।
ಸಲಿಲೇ ಕ್ಷೀರಮಾಸಕ್ತಂ ನಿಷ್ಪಿಬನ್ನಿವ ಸಾರಸಃ ॥ ೮

ನಿಹತಸ್ಯ ಮಯಾ ಸಂಖ್ಯೇ ಶರಸಂಕೃತ್ತಮರ್ಮಣಃ ।
ಸಫೇನಂ ರುಧಿರಂ ರಕ್ತಂ ಮೇದಿನೀ ಕಸ್ಯ ಪಾಸ್ಯತಿ ॥ ೯

ಕಸ್ಯ ಪತ್ರರಥಾಃ ಕಾಯಾನ್ಮಾಂಸಮುತ್ಕೃತ್ಯ ಸಂಗತಾಃ ।
ಪ್ರಹೃಷ್ಟಾ ಭಕ್ಷಯಿಷ್ಯಂತಿ ನಿಹತಸ್ಯ ಮಯಾ ರಣೇ ॥ ೧೦

ತಂ ನ ದೇವಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಮಯಾಪಕೃಷ್ಟಂ ಕೃಪಣಂ ಶಕ್ತಾಸ್ತ್ರಾತುಮಿಹಾಹವೇ ॥ ೧೧

ಉಪಲಭ್ಯ ಶನೈಃ ಸಂಜ್ಞಾಂ ತಂ ಮೇ ಶಂಸಿತುಮರ್ಹಸಿ ।
ಯೇನ ತ್ವಂ ದುರ್ವಿನೀತೇನ ವನೇ ವಿಕ್ರಮ್ಯ ನಿರ್ಜಿತಾ ॥ ೧೨

---

ಆಗಿರಲಿ ! (೬–೭). ಇಂದು ಆ ದುರಾತ್ಮನ ಪ್ರಾಣವನ್ನು ಈ ಮಾರ್ಗಣಗಳಿಂದ ಸೆಳೆಯುವೆನು. ಇವು ಆತನ ಜೀವನವನ್ನು ಸಮಾಪ್ತಿಗೊಳಿಸುವುವು. ನೀರಲ್ಲಿ ಸೇರಿದ ಹಾಲನ್ನು ಹಂಸವು ಹೀರುವಂತೆ ಅವನ ಪ್ರಾಣವನ್ನು ಹೀರುವೆನು. ಶೂರ್ಪಣಖಿ, ಸಂಗ್ರಾಮಭೂಮಿಯಲ್ಲಿ ಅವನ ಮರ್ಮಸ್ಥಳಗಳನ್ನು ಬಾಣಗಳಿಂದ ಕತ್ತರಿಸಿ ಚೆಲ್ಲಿ ಅವನನ್ನು ಸಂಹರಿಸುವೆನು. ನೊರೆನೊರೆಯಾದ ಯಾವನ ಕೆನ್ನೆತ್ತರನ್ನು ಮೇದಿನಿಯು ಕುಡಿಯಬೇಕಾಗಿದೆ, ಹೇಳು (೮–೯). ರಣರಂಗದಲ್ಲಿ ನನ್ನಿಂದ ಹತನಾಗಿ ಬಿದ್ದ ಯಾವಾತನ ದೇಹದಿಂದ ಗೃಧ್ರಾದಿಪಕ್ಷಿಗಳು ಮಾಂಸವನ್ನು ಹರಿಹರಿದು ತಿನ್ನಬೇಕಾಗಿದೆ ? ತಿಂದು ತೇಗಿ ನಲಿಯಬೇಕಾಗಿದೆ ? ಯುದ್ಧದಲ್ಲಿ ನಾನು ಹಿಡಿದಳೆಯುವ ದುರ್ದೈವಿಯನ್ನು ರಕ್ಷಿಸಲು ಯಾರಿಗೂ ಶಕ್ತಿಯಿಲ್ಲ. ದೇವತೆಗಳಿಗೂ ಸಾಧ್ಯವಿಲ್ಲ. ಗಂಧರ್ವರಿಗೂ ಸಾಧ್ಯವಿಲ್ಲ. ಪಿಶಾಚರಾಕ್ಷಸರಿಗೂ ಸಾಧ್ಯವಿಲ್ಲ (೧೦–೧೧). ತಂಗಿ, ಮೆಲ್ಲಗೆ ಚೇತರಿಸಿಕೊಂಡು ಆ ದುರಹಂಕಾರಿ ಯಾರೆಂಬುದನ್ನು ಹೇಳು. ಈ ವನದಲ್ಲಿ ಯಾವನು ಮುಂದೆ ಬಂದು ನಿನಗೆ ಅವಮಾನವನ್ನೆಸಗಿದನು ? " ಎಂದು ಖರನು ಹೇಳಿದನು (೧೨).

ಇತಿ ಭ್ರಾತುರ್ವಚಃ ಶ್ರುತ್ವಾ ಕ್ರುದ್ಧಸ್ಯ ಚ ವಿಶೇಷತಃ ।
ತತಃ ಶೂರ್ಪಣಖಾ ವಾಕ್ಯಂ ಸಬಾಷ್ಪಮಿದಮಬ್ರವೀತ್ ॥ ೧೩

ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ।
ಪುಂಡರೀಕವಿಶಾಲಾಕ್ಷೌ ಚೀರಕೃಷ್ಣಾಜಿನಾಂಬರೌ ॥ ೧೪

ಫಲಮೂಲಾಶನೌ ದಾಂತೌ ತಾಪಸೌ ಧರ್ಮಚಾರಿಣೌ ।
ಪುತ್ರೌ ದಶರಥಸ್ಯಾಸ್ತಾಂ ಭ್ರಾತರೌ ರಾಮಲಕ್ಷ್ಮಣೌ ॥ ೧೫

ಗಂಧರ್ವರಾಜಪ್ರತಿಮೌ ಪಾರ್ಥಿವವ್ಯಂಜನಾನ್ವಿತೌ ।
ದೇವೌ ವಾ ಮಾನುಷೌ ವಾ ತೌ ನ ತರ್ಕಯಿತುಮುತ್ಸಹೇ ॥ ೧೬

ತರುಣೀ ರೂಪಸಂಪನ್ನಾ ಸರ್ವಾಭರಣಭೂಷಿತಾ ।
ದೃಷ್ಟಾ ತತ್ರ ಮಯಾ ನಾರೀ ತಯೋರ್ಮಧ್ಯೇ ಸುಮಧ್ಯಮಾ ॥ ೧೭

ತಾಭ್ಯಾಮುಭಾಭ್ಯಾಂ ಸಂಭೂಯ ಪ್ರಮದಾಮಧಿಕೃತ್ಯ ತಾಮ್ ।
ಇಮಾಮವಸ್ಥಾಂ ನೀತಾಹಂ ಯಥಾನಾಥಾಸತೀ ತಥಾ ॥ ೧೮

---

ಅಣ್ಣನ ಮಾತು, ಅದರಲ್ಲಿಯೂ ಕ್ರುದ್ಧನಾದ ಅಣ್ಣನ ಸಮಾಧಾನದ ಮಾತು ! ಅದನ್ನು ಕೇಳಿ ಶೂರ್ಪಣಖಿಗೆ ಕಣ್ಣೀರು ಉಕ್ಕಿತು ! ಅವಳು "ಅಣ್ಣಾ, ತರುಣರೂ ರೂಪಸಂಪನ್ನರೂ ಆದ ಇಬ್ಬರು ದಂಡಕಾರಣ್ಯಕ್ಕೆ ಬಂದಿದ್ದಾರೆ. ಅವರು ಸುಕುಮಾರರು ; ಆದರೂ ಮಹಾಶೂರರು ಕಮಲದಳದಂತೆ ವಿಶಾಲ ವಾದ ಕಣ್ಣುಗಳುಳ್ಳ ಸುಂದರಾಂಗರು. ನಾರುಬಟ್ಟೆಯುನ್ನುಟ್ಟು ಕೃಷ್ಣಾಜಿನವನ್ನು ಧರಿಸಿದ್ದಾರೆ (೧೩–೧೪). ಫಲಮೂಲಗಳನ್ನು ತಿನ್ನುವ ಜಿತೇಂದ್ರಿಯರಾದ ತಪಸ್ವಿಗಳು ; ಧರ್ಮನಿಷ್ಠರು. ಇಬ್ಬರೂ ದಶರಥನ ಮಕ್ಕಳಂತೆ, ರಾಮ ಲಕ್ಷ್ಮಣ—ಎಂದು ಆ ಸೋದರರ ಹೆಸರಂತೆ. ಅವರಿಬ್ಬರೂ ಗಂಧರ್ವರಾಜನಂತೆ ಚೆಲುವರು. ಅವರಲ್ಲಿ ಕ್ಷತ್ರಿಯಲಕ್ಷಣಗಳಿವೆ. ಅವರೇನು ದೇವತೆಗಳೋ ಮನುಷ್ಯರೋ — ನನಗಂತೂ ಊಹಿಸಲು ಸಾಧ್ಯವಿಲ್ಲ (೧೫–೧೬). ರೂಪ ಸಂಪನ್ನೆಯಾದ ಒಬ್ಬ ತರುಣಿಯೂ ಅವರ ಮಧ್ಯದಲ್ಲಿದ್ದುದನ್ನು ನಾನು ನೋಡಿದೆ. ಆ ಚೆಲುವೆಯು ಸರ್ವಾಭರಣಗಳಿಂದ ಭೂಷಿತಳಾಗಿದ್ದಾಳೆ. ನನ್ನ ಈ ದುರವಸ್ಥೆಗೆ

**ತಸ್ಯಾಶ್ಚಾನೃಜುವೃತ್ತಾಯಾಸ್ತಯೋಶ್ಚ ಹತಯೋರಹಮ್ ।**
**ಸಫೇನಂ ಪಾತುಮಿಚ್ಛಾಮಿ ರುಧಿರಂ ರಣಮೂರ್ಧನಿ ॥ ೧೯**

**ಏಷ ಮೇ ಪ್ರಥಮಃ ಕಾಮಃ ಕೃತಸ್ತಾತ ತ್ವಯಾ ಭವೇತ್ ।**
**ತಸ್ಯಾಸ್ತಯೋಶ್ಚ ರುಧಿರಂ ಪಿಬೇಯಮಹಮಾಹವೇ ॥ ೨೦**

**ಇತಿ ತಸ್ಯಾಂ ಬ್ರುವಾಣಾಯಾಂ ಚತುರ್ದಶ ಮಹಾಬಲಾನ್ ।**
**ವ್ಯಾದಿದೇಶ ಖರಃ ಕ್ರುದ್ಧೋ ರಾಕ್ಷಸಾನಂತಕೋಪಮಾನ್ ॥ ೨೧**

**ಮಾನುಷೌ ಶಸ್ತ್ರಸಂಪನ್ನೌ ಚೀರಕೃಷ್ಣಾಜಿನಾಂಬರೌ ।**
**ಪ್ರವಿಷ್ಟೌ ದಂಡಕಾರಣ್ಯಂ ಘೋರಂ ಪ್ರಮದಯಾ ಸಹ ॥ ೨೨**

**ತೌ ಹತ್ವಾ ತಾಂ ಚ ದುರ್ವೃತ್ತಾಮುಪಾವರ್ತಿತುಮರ್ಹಥ ।**
**ಇಯಂ ಚ ರುಧಿರಂ ತೇಷಾಂ ಭಗಿನೀ ಮಮ ಪಾಸ್ಯತಿ ॥ ೨೩**

**ಮನೋರಥೋಽಯಮಿಷ್ಟೋಽಸ್ಯಾ ಭಗಿನ್ಯಾ ಮಮ ರಾಕ್ಷಸಾಃ ।**
**ಶೀಘ್ರಂ ಸಂಪಾದ್ಯತಾಂ ಗತ್ವಾ ತೌ ಪ್ರಮಥ್ಯ ಸ್ವತೇಜಸಾ ॥ ೨೪**

---

ಆ ಹೆಂಗಸೇ ಮೂಲಕಾರಣ. ನಾನೊಬ್ಬ ದಿಕ್ಕಿಲ್ಲದ ಸೂಳೆಯೋ ಎಂಬಂತೆ ಅವರಿಬ್ಬರೂ ಸೇರಿ ನನ್ನನ್ನು ಹೀಗೆ ವಿರೂಪಗೊಳಿಸಿದರು (೧೭–೧೮). ದುರ್ಮಾರ್ಗಿಯೊದ ಆ ಹೆಂಗಸು ಮತ್ತು ಅವರಿಬ್ಬರು ಈಗ ಸಾಯಬೇಕು. ರಣರಂಗಕ್ಕೆ ಹೋಗಿ ನೊರೆನೊರೆಯಾದ ಅವರ ರಕ್ತವನ್ನು ನಾನು ಕುಡಿಯಬೇಕು–ಎಂಬುದೇ ನನ್ನ ಅಪೇಕ್ಷೆ. ಇದೇ ನನ್ನ ಹೆಬ್ಬಯಕೆ. ಅಣ್ಣ, ಇದನ್ನು ನೆರವೇರಿಸಿಕೊಡುವೆಯಾ ? ಅವಳ ಮತ್ತು ಅವರಿಬ್ಬರ ರಕ್ತವನ್ನು ನಾನು ಕುಡಿಯಬೇಕು !" ಎಂದಳು (೧೯–೨೦). ಶೂರ್ಪಣಖಿಯು ಹೀಗೆ ಹೇಳುತ್ತಿರುವಾಗಲೇ, ಕುಪಿತನಾದ ಖರನು ಹದಿನಾಲ್ಕು ಮಂದಿ ರಾಕ್ಷಸರನ್ನು ಸಮೀಪಕ್ಕೆ ಕರೆದನು. ಮೃತ್ಯುವಿನಂತಿದ್ದ ಬಲಾಢ್ಯರಾದ ಆ ರಾಕ್ಷಸರನ್ನು ಕುರಿತು ಖರನು "ಎಲೈ ರಾಕ್ಷಸರೆ, ಶಸ್ತ್ರಧಾರಿಗಳಾದ ಇಬ್ಬರು ಮನುಷ್ಯರು ಘೋರವಾದ ಈ ದಂಡಕಾರಣ್ಯಕ್ಕೆ ಬಂದಿದ್ದಾರೆ. ಅವರು ವಲ್ಕಲಕೃಷ್ಣಾಜಿನಗಳನ್ನು ಧರಿಸಿದ್ದರೂ ಒಬ್ಬ ತರುಣಿಯನ್ನು ಕರೆತಂದಿದ್ದಾರೆ (೨೧–೨೨). ಅವರಿಬ್ಬರನ್ನೂ ಕೆಟ್ಟನಡತೆಯ ಆ ತರುಣಿಯನ್ನೂ ನೀವು ಕೊಂದು ಬರಬೇಕು. ನನ್ನ ಈ ತಂಗಿ ಅವರ ರಕ್ತವನ್ನು ಕುಡಿದು

ಯುಷ್ಮಾಭಿರ್ನಿಹತೌ ದೃಷ್ಟ್ವಾ ತಾವುಭೌ ಭ್ರಾತರೌ ರಣೇ ।
ಇಯಂ ಪ್ರಹೃಷ್ಟಾ ಮುದಿತಾ ರುಧಿರಂ ಯುಧಿ ಪಾಸ್ಯತಿ ॥ ೨೫

ಇತಿ ಪ್ರತಿಸಮಾದಿಷ್ಟಾ ರಾಕ್ಷಸಾಸ್ತೇ ಚತುರ್ದಶ ।
ತತ್ರ ಜಗ್ಮುಸ್ತಯಾ ಸಾರ್ಧಂ ಘನಾ ವಾತೇರಿತಾ ಯಥಾ ॥ ೨೬

ತತಸ್ತು ತೇ ತಂ ಸಮುದಗ್ರತೇಜಸಂ
ತಥಾಪಿ ತೀಕ್ಷ್ಣಪ್ರದರಾ ನಿಶಾಚರಾಃ ।
ದುರಾಸದಂ ಧರ್ಷಯಿತುಂ ನ ಚಾಶಕನ್
ವನದ್ವಿಪಾ ದೀಪ್ತಮಿವಾಗ್ನಿಮುತ್ಥಿತಮ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನವಿಂಶಃ ಸರ್ಗಃ

ಬರುವಳು. ಇದು ನನ್ನ ತಂಗಿಯ ಹೆಬ್ಬಯಕೆಯಾಗಿದೆ. ನೀವು ಕೂಡಲೇ ಹೋಗಿ ಇವಳ ಇಷ್ಟವನ್ನು ನೆರವೇರಿಸಿಕೊಡಿ. ನಿಮ್ಮ ಪರಾಕ್ರಮದಿಂದ ಅವರನ್ನು ಸಂಹರಿಸಿರಿ (೨೩–೨೪). ನೀವು ಆ ಸೋದರರನ್ನು ರಣರಂಗದಲ್ಲಿ ಸಂಹರಿಸಿದರೆ, ಇವಳು ಆನಂದದಿಂದ ಹಿಗ್ಗುವಳು, ರಕ್ತವನ್ನು ಕುಡಿಯುವಳು" ಎಂದು ಆಜ್ಞೆ ಮಾಡಿದನು (೨೫). ಈ ಪ್ರಕಾರದಲ್ಲಿ ಆಜ್ಞಾಪಿತರಾದ ಆ ಹದಿನಾಲ್ಕು ರಾಕ್ಷಸರು ಶೂರ್ಪಣಖಿಯೊಡನೆ ಹೊರಟರು ; ಬಿರುಗಾಳಿಯ ಸೆಳೆತಕ್ಕೆ ಸಿಕ್ಕಿದ ಮೋಡಗಳಂತೆ ಧಾವಿಸಿದರು (೨೬). ಆ ನಿಶಾಚರರು ತೀಕ್ಷ್ಣಾಸ್ತ್ರಗಳನ್ನು ಧರಿಸಿದ್ದರೂ ಮಹಾತೇಜಸ್ವಿಯೂ ದುರ್ಧರ್ಷನೂ ಆದ ಶ್ರೀರಾಮನನ್ನು ಎದುರಿಸಲಾರದೆ ಹೋದರು. ಉರಿಯುವ ಕಾಳ್ಗಿಚ್ಚನ್ನು ಎದುರಿಸಲು ಹೊರಟ ಕಾಡಾನೆಗಳಂತಾದರು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಹತ್ತೊಂಬತ್ತನೆಯ ಸರ್ಗ

## ವಿಂಶಃ ಸರ್ಗಃ

### ಚತುರ್ದಶರಕ್ಷೋವಧಃ

ತತಃ ಶೂರ್ಪಣಖಾ ಘೋರಾ ರಾಘವಾಶ್ರಮಮಾಗತಾ ।
ರಕ್ಷಸಾಮಾಚಚಕ್ಷೇ ತೌ ಭ್ರಾತರೌ ಸಹ ಸೀತಯಾ ॥ ೧

ತೇ ರಾಮಂ ಪರ್ಣಶಾಲಾಯಾಮುಪವಿಷ್ಟಂ ಮಹಾಬಲಮ್ ।
ದದೃಶುಃ ಸೀತಯಾ ಸಾರ್ಧಂ ವೈದೇಹ್ಯಾ ಲಕ್ಷ್ಮಣೇನ ಚ ॥ ೨

ತಾನ್ ದೃಷ್ಟ್ವಾ ರಾಘವಃ ಶ್ರೀಮಾನಾಗತಾಂಸ್ತಾಂ ಚ ರಾಕ್ಷಸೀಮ್ ।
ಅಬ್ರವೀದ್ಭ್ರಾತರಂ ರಾಮೋ ಲಕ್ಷ್ಮಣಂ ದೀಪ್ತತೇಜಸಮ್ ॥ ೩

ಮುಹೂರ್ತಂ ಭವ ಸೌಮಿತ್ರೇ ಸೀತಾಯಾಃ ಪ್ರತ್ಯನಂತರಃ ।
ಇಮಾನಸ್ಯಾ ವಧಿಷ್ಯಾಮಿ ಪದವೀಮಾಗತಾನಿಹ ॥ ೪

ವಾಕ್ಯಮೇತತ್ತತಃ ಶ್ರುತ್ವಾ ರಾಮಸ್ಯ ವಿದಿತಾತ್ಮನಃ ।
ತಥೇತಿ ಲಕ್ಷ್ಮಣೋ ವಾಕ್ಯಂ ರಾಮಸ್ಯ ಪ್ರತ್ಯಪೂಜಯತ್ ॥ ೫

## ಸರ್ಗ ೨೦

### ಖರನು ಕಳಿಸಿದ ಹದಿನಾಲ್ಕು ಮಂದಿ ರಾಕ್ಷಸರನ್ನೂ ಶ್ರೀರಾಮನು ಸಂಹರಿಸುವುದು

ಕ್ರೂರಸ್ವಭಾವದ ಶೂರ್ಪಣಖಿಯು ಶ್ರೀರಾಮನ ಆಶ್ರಮಕ್ಕೆ ಬಂದು, ಖರನು ಕಳಿಸಿದ್ದ ರಾಕ್ಷಸರಿಗೆ ಆ ಅಣ್ಣತಮ್ಮಂದಿರನ್ನೂ ಸೀತೆಯನ್ನೂ ತೋರಿಸಿದಳು. ಆ ರಾಕ್ಷಸರು ಪರ್ಣಶಾಲೆಯಲ್ಲಿ ಸೀತಾಲಕ್ಷ್ಮಣರೊಡನೆ ಕುಳಿತಿದ್ದ ಮಹಾಶೂರನಾದ ಶ್ರೀರಾಮನನ್ನು ಕಂಡರು (೧–೨). ಆ ರಾಕ್ಷಸರೂ ರಾಕ್ಷಸಿಯೂ ಬಂದುದನ್ನು ಶ್ರೀರಾಮನು ವೀಕ್ಷಿಸಿ, ತಮ್ಮನಾದ ಲಕ್ಷ್ಮಣನೊಡನೆ "ಸೌಮಿತ್ರಿ, ಸ್ವಲ್ಪಹೊತ್ತು ಸೀತೆಯ ಸಮೀಪದಲ್ಲಿಯೇ ಇರು. ಈ ರಾಕ್ಷಸಿಯ ದಾರಿಯನ್ನು ಹಿಡಿದುಬಂದ ಇವರನ್ನು ಕೊಂದುಹಾಕುವೆನು" ಎಂದು ನುಡಿದನು (೩–೪). ಪ್ರಾಜ್ಞನಾದ ಶ್ರೀರಾಮನ ನುಡಿಯನ್ನು ಕೇಳಿ ಲಕ್ಷ್ಮಣನು ಆಗಬಹುದೆಂದು

ರಾಘವೋಽಪಿ ಮಹಚ್ಚಾಪಂ ಚಾಮೀಕರವಿಭೂಷಿತಮ್ ।
ಚಕಾರ ಸಜ್ಯಂ ಧರ್ಮಾತ್ಮಾ ತಾನಿ ರಕ್ಷಾಂಸಿ ಚಾಬ್ರವೀತ್ ॥ ೬

ಪುತ್ರೌ ದಶರಥಸ್ಯಾವಾಂ ಭ್ರಾತರೌ ರಾಮಲಕ್ಷ್ಮಣೌ ।
ಪ್ರವಿಷ್ಟೌ ಸೀತಯಾ ಸಾರ್ಧಂ ದುಶ್ಚರಂ ದಂಡಕಾವನಮ್ ॥ ೭

ಫಲಮೂಲಾಶನೌ ದಾಂತೌ ತಾಪಸೌ ಧರ್ಮಚಾರಿಣೌ ।
ವಸಂತೌ ದಂಡಕಾರಣ್ಯೇ ಕಿಮರ್ಥಮುಪಹಿಂಸಥ ॥ ೮

ಯುಷ್ಮಾನ್ ಪಾಪಾತ್ಮಕಾನ್ ಹಂತುಂ ವಿಪ್ರಕಾರಾನ್ ಮಹಾಹವೇ ।
ಋಷೀಣಾಂ ತು ನಿಯೋಗೇನ ಪ್ರಾಪ್ತೋಽಹಂ ಸಶರಾಯುಧಃ ॥ ೯

ತಿಷ್ಠತೈವಾತ್ರ ಸಂತುಷ್ಟಾ ನೋಪಾವರ್ತಿತುಮರ್ಹಥ ।
ಯದಿ ಪ್ರಾಣೈರಿಹಾರ್ಥೋ ವಾ ನಿವರ್ತಧ್ವಂ ನಿಶಾಚರಾಃ ॥ ೧೦

ತಸ್ಯ ತದ್ವಚನಂ ಶ್ರುತ್ವಾ ರಾಕ್ಷಸಾಸ್ತೇ ಚತುರ್ದಶ ।
ಊಚುರ್ವಾಚಂ ಸುಸಂಕ್ರುದ್ಧಾ ಬ್ರಹ್ಮಘ್ನಾಃ ಶೂಲಪಾಣಯಃ ॥ ೧೧

---

ಒಪ್ಪಿದನು. ಧರ್ಮಾತ್ಮನಾದ ರಾಘವನು ಸುವರ್ಣಭೂಷಿತವಾದ ತನ್ನ ಮಹಾ ಧನುಸ್ಸನ್ನು ಸಜ್ಜುಗೊಳಿಸಿ, ಆ ರಾಕ್ಷಸರನ್ನುದ್ದೇಶಿಸಿ "ಎಲೈ ರಾಕ್ಷಸರೆ, ನಾವು ದಶರಥಮಹಾರಾಜನ ಪುತ್ರರು ; ರಾಮಲಕ್ಷ್ಮಣರೆಂಬ ಸೋದರರು. (ನನ್ನ ಪತ್ನಿಯಾದ) ಸೀತೆಯೊಡನೆ ದುರ್ಗಮವಾದ ಈ ದಂಡಕಾರಣ್ಯಕ್ಕೆ ಬಂದಿದ್ದೇವೆ (೬-೭). ಫಲಮೂಲಗಳನ್ನು ಭಕ್ಷಿಸುತ್ತ ದಾಂತರಾಗಿರುವ ತಪಸ್ವಿಗಳು ನಾವು. ಧರ್ಮಮಾರ್ಗದಲ್ಲಿ ನಡೆಯುತ್ತಿದ್ದೇವೆ. ಈ ಕಾಡಿನಲ್ಲಿ ನಮ್ಮ ಪಾಡಿಗೆ ವಾಸ ಮಾಡಿಕೊಂಡಿರುವಾಗ ನಮ್ಮನ್ನೇಕೆ ಪೀಡಿಸುತ್ತಿದ್ದೀರಿ ? (೮). ನೀವಾದರೋ ಪಾಪಿಗಳು ; ನಿಷ್ಕಾರಣವಾಗಿ ಋಷಿಗಳಿಗೆ ಹಿಂಸೆಕೊಡುತ್ತಿದ್ದೀರಿ. ಅವರ ಆಜ್ಞೆಯನ್ನು ಮನ್ನಿಸಿ ಯುದ್ಧದಲ್ಲಿ ನಿಮ್ಮನ್ನು ಸಂಹರಿಸಬೇಕೆಂದು ನಾನು ಬಾಣಾದ್ಯಾಯುಧಗಳಿಂದ ಸಿದ್ಧನಾಗಿ ಬಂದಿದ್ದೇನೆ (೯). ಯುದ್ಧವು ನಿಮಗೆ ಸಂಮತವಾದರೆ ಇಲ್ಲಿ ನಿಲ್ಲಿರಿ, ಓಡಿಹೋಗಬೇಡಿರಿ. ಪ್ರಾಣದಿಂದ ಪ್ರಯೋಜನವಿದ್ದರೆ ಹಿಂದಿರುಗಿ ಹೊರಟುಹೋಗಿರಿ" ಎಂದು ತಿಳಿಸಿದನು. ಆಗ ಬ್ರಹ್ಮಘಾತುಕ

ಕ್ರೋಧಮುತ್ಪಾದ್ಯ ನೋ ಭರ್ತುಃ ಖರಸ್ಯ ಸುಮಹಾತ್ಮನಃ ।
ತ್ವಮೇವ ಹಾಸ್ಯಸೇ ಪ್ರಾಣಾನದ್ಯಾಸ್ಮಾಭಿರ್ಹತೋ ಯುಧಿ ॥ ೧೨

ಕಾ ಹಿ ತೇ ಶಕ್ತಿರೇಕಸ್ಯ ಬಹೂನಾಂ ರಣಮೂರ್ಧನಿ ।
ಅಸ್ಮಾಕಮಗ್ರತಃ ಸ್ಥಾತುಂ ಕಿಂ ಪುನರ್ಯೋದ್ಧುಮಾಹವೇ ॥ ೧೩

ಏಹಿ ಬಾಹುಪ್ರಯುಕ್ತೈರ್ನಃ ಪರಿಘೈಃ ಶೂಲಪಟ್ಟಿಶೈಃ ।
ಪ್ರಾಣಾಂಸ್ತ್ಯಕ್ಷ್ಯಸಿ ವೀರ್ಯಂ ಚ ಧನುಶ್ಚ ಕರಪೀಡಿತಮ್ ॥ ೧೪

ಇತ್ಯೇವಮುಕ್ತ್ವಾ ಸಂಕ್ರುದ್ಧಾ ರಾಕ್ಷಸಾಸ್ತೇ ಚತುರ್ದಶ ।
ಉದ್ಯತಾಯುಧನಿಸ್ತ್ರಿಂಶಾ ರಾಮಮೇವಾಭಿದುದ್ರುವುಃ ॥ ೧೫

ಅಭಿಪತ್ಯ ತತೋ ವೇಗಾತ್ ಪೃಷ್ಠತಸ್ಥೇ ನಿಶಾಚರಾಃ ।
ಪರಿಘಾನ್ ಪಟ್ಟಿಶಾನ್ ಶೂಲಾನ್ ನಿಸ್ತ್ರಿಂಶಾನ್ ಹೇಮಭೂಷಿತಾನ್ ॥

ಚಿಕ್ಷಿಪುಸ್ತಾನಿ ಶೂಲಾನಿ ರಾಘವಂ ಪ್ರತಿ ದುರ್ಜಯಮ್ ।
ತಾನಿ ಶೂಲಾನಿ ಕಾಕುತ್ಸ್ಥಃ ಸಮಸ್ತಾನಿ ಚತುರ್ದಶ ॥ ೧೭

---

ರಾದ ಆ ರಾಕ್ಷಸರಿಗೆ ರೋಷ ಉಕ್ಕಿತು. ಅವರು ಕೈಯಲ್ಲಿ ಶೂಲಗಳನ್ನು ಎತ್ತಿ ಹಿಡಿದು "ಮಹಾತ್ಮನಾದ ಖರನು ನಮ್ಮೊಡೆಯ ; ಅವನಿಗೆ ಕೋಪಬರುವಂತೆ ಮಾಡಿದಮೇಲೆ ನೀನೇ ಪ್ರಾಣವನ್ನು ತೊರೆಯಬೇಕಾಗಿದೆ. ಕಾಳಗದಲ್ಲಿ ನಿನ್ನನ್ನು ವಧಿಸುತ್ತೇವೆ. (೧೦-೧೨). ನಾವು ಬಹುಮಂದಿ ಇದ್ದೇವೆ. ನಮ್ಮೊಡನೆ ಯುದ್ಧ ಮಾಡುವುದಿರಲಿ, ಎದುರಿಗೆ ನಿಲ್ಲುವ ಶಕ್ತಿಯಾದರೂ ನಿನಗುಂಟೆ ? ಇದ್ದರೆ ಮುಂದೆ ಬಾ. ನಾವು ಕೈಗಳಿಂದ ಬೀಸಿಹೊಡೆಯುವ ಪರಿಘ, ಶೂಲ, ಪಟ್ಟಿಶಗಳ ಹೊಡೆತಕ್ಕೆ ಸಿಕ್ಕಿದೆಯೆಂದರೆ ಕೂಡಲೇ ಪ್ರಾಣವನ್ನು ಬಿಡುತ್ತೀಯೆ. ನಿನ್ನ ಪರಾಕ್ರಮವು ಮಾಯವಾಗುವುದು ; ಕೈಯಲ್ಲಿ ಹಿಡಿದ ಬಿಲ್ಲು ಕಳಚಿಬೀಳುವುದು " ಎಂದು ಆರ್ಭಟಿಸಿದರು (೧೩-೧೪). ಹೀಗೆ ಅಬ್ಬರಿಸುತ್ತ ಆ ರಾಕ್ಷಸರು ಕತ್ತಿ ಮುಂತಾದ ವಿವಿಧಾಯುಧಗಳನ್ನು ಹಿಡಿದು ಶ್ರೀರಾಮನ ಮೇಲೆ ಆಕ್ರಮಣ ಮಾಡಿದರು. ಅವರೆಲ್ಲರೂ ವೇಗದಿಂದ ಪರಿಘಶೂಲಾದ್ಯಾಯುಧಗಳನ್ನು ಅಜೇಯ

ತಾವದ್ಭಿರೇವ ಚಿಚ್ಛೇದ ಶರೈಃ ಕಾಂಚನಭೂಷಣೈಃ ।
ತತಃ ಪಶ್ಚಾನ್ಮಹಾತೇಜಾ ನಾರಾಚಾನ್ ಸೂರ್ಯಸಂನಿಭಾನ್ ॥ ೧೭

ಜಗ್ರಾಹ ಪರಮಕ್ರುದ್ಧಶ್ಚತುರ್ದಶ ಶಿಲಾಶಿತಾನ್ ।
ಗೃಹೀತ್ವಾ ಧನುರಾಯಮ್ಯ ಲಕ್ಷ್ಯಾನುದ್ದಿಶ್ಯ ರಾಕ್ಷಸಾನ್ ॥ ೧೮

ಮುಮೋಚ ರಾಘವೋ ಬಾಣಾನ್ ವಜ್ರಾನಿವ ಶತಕ್ರತುಃ ।
ರುಕ್ಮಪುಂಖಾಶ್ಚ ವಿಶಿಖಾ ದೀಪ್ತಾ ಹೇಮವಿಭೂಷಿತಾಃ ॥ ೨೦

ತೇ ಭಿತ್ತ್ವಾ ರಕ್ಷಸಾಂ ವೇಗಾದ್ವಕ್ಷಾಂಸಿ ರುಧಿರಾಪ್ಲುತಾಃ ।
ವಿನಿಷ್ಪೇತುಸ್ತದಾ ಭೂಮೌ ವಲ್ಮೀಕಾದಿವ ಪನ್ನಗಾಃ ॥ ೨೧

ತೇ ಭಿನ್ನಹೃದಯಾ ಭೂಮೌ ಛಿನ್ನಮೂಲಾ ಇವ ದ್ರುಮಾಃ ।
ನಿಪೇತುಃ ಶೋಣಿತಾರ್ದ್ರಾಂಗಾ ವಿಕೃತಾ ವಿಗತಾಸವಃ ॥ ೨೨

ತಾನ್ ದೃಷ್ಟ್ವಾ ಪತಿತಾನ್ ಭೂಮೌ ರಾಕ್ಷಸೀ ಕ್ರೋಧಮೂರ್ಛಿತಾ ।
ಪರಿತ್ರಸ್ತಾ ಪುನಸ್ತತ್ರ ವ್ಯಸೃಜದ್ಭೈರವಸ್ವನಾನ್ ॥ ೨೩

---

ನಾದ ಶ್ರೀರಾಮನಮೇಲೆ ಪ್ರಯೋಗಿಸಲು, ಕಾಕುತ್ಸ್ಥನು ಅವೆಲ್ಲವನ್ನೂ ಬಾಣಗಳಿಂದ ಕತ್ತರಿಸಿ ಕೆಡವಿದನು (೧೫–೧೭). ಅವನು ಅತ್ಯಂತ ಕ್ರುದ್ಧನಾಗಿ ಶಿಲೆಗಳನ್ನು ಸೀಳಬಲ್ಲ ಸೂರ್ಯಸಂಕಾಶವಾದ ಹದಿನಾಲ್ಕು ಬಾಣಗಳನ್ನು ಹಿಡಿದು ಕೋದಂಡವನ್ನು ಜಗ್ಗಿ ಹದಿನಾಲ್ಕು ಮಂದಿ ರಾಕ್ಷಸರ ಮೇಲೆ ಗುರಿಯಿಟ್ಟು ಹೊಡೆದನು (೧೮–೧೯). ದೇವೇಂದ್ರನು ವಜ್ರಾಯುಧದಿಂದ ಹೊಡೆದಂತಾಯಿತು. ಸುವರ್ಣಪುಂಖಗಳುಳ್ಳ ಆ ಬಾಣಗಳು ಪ್ರಜ್ವಲಿಸುತ್ತ ಹೋಗಿ ಆ ರಾಕ್ಷಸರ ಎದೆಗಳನ್ನೊಡೆದು ರಕ್ತದಲ್ಲಿ ನೆನೆದು, ಹುತ್ತಗಳಿಂದ ಹಾವುಗಳು ಹೊರಹೊಮ್ಮುವಂತೆ ಹೊರಗೆ ಜಿಗಿದು ನೆಲದಮೇಲೆ ಸಿಡಿದುಬಿದ್ದವು (೨೦–೨೧). ಆ ರಾಕ್ಷಸರು ಎದೆಯೊಡೆದು, ಬುಡಕಡಿದ ಮರಗಳಂತೆ ಉರುಳಿದರು ; ನೆತ್ತರಲ್ಲಿ ನೆನೆದು ವಿಕೃತಾಕೃತಿಯನ್ನು ತಾಳಿ ಅಸುವನ್ನು ನೀಗಿದರು. ಅವರು ಸತ್ತುಬಿದ್ದುದನ್ನು ಶೂರ್ಪಣಖಿಯು ಕಂಡಳು. ಅವಳಿಗೆ ಕೋಪ ಉಕ್ಕಿತು ; ಭಯವು

ಸಾ ನದಂತೀ ಮಹಾನಾದಂ ಜವಾಚ್ಛೂರ್ಪಣಖಾ ಪುನಃ ।
ಉಪಗಮ್ಯ ಖರಂ ಸಾ ತು ಕಿಂಚಿತ್ ಸಂಶುಷ್ಕಶೋಣಿತಾ ॥ ೨೪

ಪಪಾತ ಪುನರೇವಾರ್ತಾ ಸನಿರ್ಯಾಸೇವ ಸಲ್ಲಕೀ ।
ಭ್ರಾತುಃ ಸಮೀಪೇ ಶೋಕಾರ್ತಾ ಸಸರ್ಜ ನಿನದಂ ಮುಹುಃ ॥ ೨೫

ಸಸ್ವರಂ ಮುಮುಚೇ ಬಾಷ್ಪಂ ವಿಷಣ್ಣ ವದನಾ ತದಾ ॥

ನಿಪಾತಿತಾನ್ ದೃಶ್ಯ ರಣೇ ತು ರಾಕ್ಷಸಾನ್
ಪ್ರಧಾವಿತಾ ಶೂರ್ಪಣಖಾ ಪುನಸ್ತತಃ ।
ವಧಂ ಚ ತೇಷಾಂ ನಿಖಿಲೇನ ರಕ್ಷಸಾಂ
ಶಶಂಸ ಸರ್ವಂ ಭಗಿನೀ ಖರಸ್ಯ ಸಾ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ವಿಂಶಃ ಸರ್ಗಃ

ಹೆಚ್ಚಿತು. ಅಪಸ್ವರದಿಂದ ಅರಚಿದಳು (೨೨-೨೩). ಅವಳು ಗಟ್ಟಿಯಾಗಿ ಕೂಗುತ್ತ ಮತ್ತೆ ಖರನ ಬಳಿಗೆ ಬೇಗನೆ ಬಂದಳು. (ಕಿವಿಮೂಗುಗಳಿಂದ ಸುರಿಯುವ) ರಕ್ತ ಸ್ವಲ್ಪ ಒಣಗಿತ್ತು. ಅಂಟು ಮೆತ್ತಿಕೊಂಡಿರುವ ಸಲ್ಲಕೀಲತೆಯಂತಿದ್ದ ಆ ರಾಕ್ಷಸಿಯು ಶೋಕದಿಂದ ಹಿಗ್ಗಿ ಹಿಗ್ಗಿ ಅಳುತ್ತಿದ್ದಳು. ಜೋಲುಮೋರೆ ಹಾಕಿಕೊಂಡು ಕಣ್ಣೀರು ಸುರಿಸುತ್ತಿದ್ದಳು (೨೪-೨೫). ಯುದ್ಧಭೂಮಿಯಲ್ಲಿ ಹತರಾದ ಆ ರಾಕ್ಷಸರನ್ನು ನೋಡಿ ಶೂರ್ಪಣಖಿಯು ಖರನ ಸಮೀಪಕ್ಕೆ ಓಡಿ ಬಂದಿದ್ದಳು. ರಾಕ್ಷಸರು ಸತ್ತ ಸುದ್ದಿಯನ್ನು ತಂಗಿಯು ಅಣ್ಣನಿಗೆ ವರದಿಮಾಡುತ್ತಿದ್ದಳು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತನೆಯ ಸರ್ಗ

## ಏಕವಿಂಶಃ ಸರ್ಗಃ

### ಖರಸಂಧುಕ್ಷಣಮ್

ಸ ಪುನಃ ಪತಿತಾಂ ದೃಷ್ಟ್ವಾ ಕ್ರೋಧಾಚ್ಛೂರ್ಪಣಖಾಂ ಖರಃ ।
ಉವಾಚ ವ್ಯಕ್ತಯಾ ವಾಚಾ ತಾಮನರ್ಥಾರ್ಥಮಾಗತಾಮ್ ॥ ೧

ಮಯಾ ತ್ವಿದಾನೀಂ ಶೂರಾಸ್ತೇ ರಾಕ್ಷಸಾ ರುಧಿರಾಶನಾಃ ।
ತ್ವತ್ಪ್ರಿಯಾರ್ಥಂ ವಿನಿರ್ದಿಷ್ಟಾಃ ಕಿಮರ್ಥಂ ರುದ್ಯತೇ ಪುನಃ ॥ ೨

ಭಕ್ತಾಶ್ಚೈವಾನುರಕ್ತಾಶ್ಚ ಹಿತಾಶ್ಚ ಮಮ ನಿತ್ಯಶಃ ।
ಘ್ನಂತೋऽಪಿ ನ ನಿಹಂತವ್ಯಾ ನ ನ ಕುರ್ಯುರ್ವಚೋ ಮಮ ॥ ೩

ಕಿಮೇತಚ್ಛ್ರೋತುಮಿಚ್ಛಾಮಿ ಕಾರಣಂ ಯತ್ಕೃತೇ ಪುನಃ ।
ಹಾ ನಾಥೇತಿ ವಿನರ್ದಂತೀ ಸರ್ಪವಲ್ಲುಠಸಿ ಕ್ಷಿತೌ ॥ ೪

### ಸರ್ಗ ೨೧

ಶ್ರೀ ರಾಮನಿಂದ ರಾಕ್ಷಸರು ಹತರಾದರೆಂಬ ವೃತ್ತಾಂತವನ್ನು ಕೇಳಿ
ಶೂರ್ಪಣಖಿಯು ಖರನನ್ನು ರೇಗಿಸುವುದು

ಶೂರ್ಪಣಖಿಯು ತನ್ನ ಕುಲಕ್ಕೆ ಅನರ್ಥವನ್ನು ತಂದೊಡ್ಡುವುದಕ್ಕಾಗಿ ಪುನಃ ಖರನ ಬಳಿಗೆ ಬಂದು ಅಡ್ಡಬಿದ್ದಳು. ಆಗ ಖರನು ಸಿಟ್ಟಿನಿಂದ "ಏನಿದು, ಶೂರ್ಪಣಖಿ ? ನಾನು ಈಗತಾನೇ ನಿನಗೆ ಸಂತೋಷವನ್ನುಂಟುಮಾಡಲೆಂದು ಶೂರರಾದ ರಾಕ್ಷಸರನ್ನು ಕಳಿಸಿದ್ದೇನೆ. ಅವರೆಲ್ಲರೂ (ಶತ್ರುಗಳ) ರಕ್ತವನ್ನು ಹೀರತಕ್ಕವರು. ಮತ್ತೆ ನೀನು ಅಳುವುದೇತಕ್ಕೆ ? (೧–೨). ಅವರೆಲ್ಲರೂ ನನ್ನ ಭಕ್ತರು ; ಅನುರಕ್ತರು ; ಸರ್ವದಾ ನನಗೆ ಹಿತವನ್ನು ಕೋರತಕ್ಕವರು. ಅವರು ಇತರರನ್ನು ಕೊಲ್ಲುವರೇ ಹೊರತು ತಾವು ಕೊಲೆಗೆ ಈಡಾಗತಕ್ಕವರಲ್ಲ. ನನ್ನ ಆಜ್ಞೆಯನ್ನು ಪಾಲಿಸದೆ ಇರತಕ್ಕವರಲ್ಲ (೩). ಹೀಗಿರುವಾಗ ನೀನು 'ಹಾ ನಾಥ! ' ಎಂದು ಕಿರಿಚುತ್ತ ನೆಲದಮೇಲೆ ಹೊರಳುತ್ತಿರುವೆಯಲ್ಲ ! ಇದಕ್ಕೇನು ಕಾರಣವೆಂದು ನಾನು ಕೇಳಬೇಕಾಗಿದೆ ! ನಾನು ನಿನ್ನ ರಕ್ಷಣೆಯ ಹೊಣೆ ಹೊತ್ತಿರುವಾಗ ದಿಕ್ಕಿಲ್ಲದವಳಂತೆ ಗೋಳಾಡುವೆಯಲ್ಲ ! ಏಳು, ಎದ್ದೇಳು.

ಅನಾಥವದ್ವಿಲಪಸಿ ನಾಥೇ ತು ಮಯಿ ಸಂಸ್ಥಿತೇ ।
ಉತ್ತಿಷ್ಠೋತ್ತಿಷ್ಠ ಮಾ ಭೈಷೀರ್ವೈಕ್ಲವ್ಯಂ ತ್ಯಜ್ಯತಾಮಿಹ ॥ ೫

ಇತ್ಯೇವಮುಕ್ತಾ ದುರ್ಧರ್ಷಾ ಖರೇಣ ಪರಿಸಾಂತ್ವಿತಾ ।
ವಿಮೃಜ್ಯ ನಯನೇ ಸಾಸ್ರೇ ಖರಂ ಭ್ರಾತರಮಬ್ರವೀತ್ ॥ ೬

ಅಸ್ಮೀದಾನೀಮಹಂ ಪ್ರಾಪ್ತಾ ಹೃತಶ್ರವಣನಾಸಿಕಾ ।
ಶೋಣಿತೌಘಪರಿಕ್ಲಿನ್ನಾ ತ್ವಯಾ ಚ ಪರಿಸಾಂತ್ವಿತಾ ॥ ೭

ಪ್ರೇಷಿತಾಶ್ಚ ತ್ವಯಾ ವೀರ ರಾಕ್ಷಸಾಸ್ತೇ ಚತುರ್ದಶ ।
ನಿಹಂತುಂ ರಾಘವಂ ಕ್ರೋಧಾನ್ಮತ್ಪ್ರಿಯಾರ್ಥಂ ಸಲಕ್ಷ್ಮಣಮ್ ॥ ೮

ತೇ ತು ರಾಮೇಣ ಸಾಮರ್ಷಾಃ ಶೂಲಪಟ್ಟಿಶಪಾಣಯಃ ।
ಸಮರೇ ನಿಹತಾಃ ಸರ್ವೇ ಸಾಯಕೈರ್ಮರ್ಮಭೇದಿಭಿಃ ॥ ೯

ತಾನ್ ದೃಷ್ಟ್ವಾ ಪತಿತಾನ್ ಭೂಮೌ ಕ್ಷಣೇನೈವ ಮಹಾಬಲಾನ್ ।
ರಾಮಸ್ಯ ಚ ಮಹತ್ ಕರ್ಮ ಮಹಾಂಸ್ತ್ರಾಸೋಽಭವನ್ಮಮ ॥ ೧೦

---

ಹೆದರಬೇಡ. ಇಂಥ ಹೇಡಿತನ ಬೇಡ' ಎಂದು ಸ್ಪಷ್ಟವಾಗಿ ತಿಳಿಸಿದನು (೪–೫). ಖರನು ಹೀಗೆ ಸಮಾಧಾನ ಹೇಳಲು, ಆ ಗಂಡುಬೀರಿಯು ಕಣ್ಣೀರನ್ನೊರಸಿಕೊಂಡು ಅಣ್ಣನಾದ ಖರನನ್ನು ಕುರಿತು ಹೀಗೆಂದಳು : ಹೌದು ; ಕಿವಿ ಮೂಗುಗಳನ್ನು ಹರಿಸಿಕೊಂಡು ನೆತ್ತರಲ್ಲಿ ನೆನೆದು ಒದ್ದೆಯ ಮುದ್ದೆಯಾಗಿ ಬಂದಿದ್ದೇನೆ. ನನಗೆ ನೀನು ಶಾಂತಿಪಾಠ ಹೇಳುತ್ತಿದ್ದೀಯೆ ! (೬–೭). ಕೋಪದಿಂದ ಹದಿನಾಲ್ಕು ಮಂದಿ ರಾಕ್ಷಸರನ್ನು ನೀನು ಕಳಿಸಿದ್ದೇನೋ ಸರಿ. ರಾಮನನ್ನೂ ಲಕ್ಷ್ಮಣನನ್ನೂ ಅವರು ಸಂಹರಿಸಲಿ, ನನಗೆ ಸಂತೋಷವಾಗಲಿ ಎಂದು ಹಾಗೆ ಮಾಡಿದ್ದೀಯೆ. ಶೂಲಪಟ್ಟಿಶಪಾಣಿಗಳಾಗಿ ಉದ್ರೇಕದಿಂದ ನುಗ್ಗಿದ ಅವರೆಲ್ಲರನ್ನೂ ರಾಮನು ಮರ್ಮಭೇದಿಗಳಾದ ಬಾಣಗಳಿಂದ ಕೊಂದುಹಾಕಿಬಿಟ್ಟನು (೮–೯). ಮಹಾಬಲಾಢ್ಯರಾದ ಆ ರಾಕ್ಷಸರು ಒಂದೇ ಕ್ಷಣದಲ್ಲಿ ಸತ್ತು ಒರಗಿದುದನ್ನು ನಾನು ನೋಡಿದೆ. ರಾಮನ ಅದ್ಭುತವಾದ ಸಾಹಸವನ್ನು ನಾನು ಕಂಡೆ. ನನಗೆ ಎಲ್ಲೂ ನಿಲ್ಲದಷ್ಟು ಭಯವಾಯಿತು (೧೦).

**ಅಹಮಸ್ಮಿ ಸಮುದ್ವಿಗ್ನಾ ವಿಷಣ್ಣಾ ಚ ನಿಶಾಚರ ।**
**ಶರಣಂ ತ್ವಾಂ ಪುನಃ ಪ್ರಾಪ್ತಾ ಸರ್ವತೋಭಯದರ್ಶಿನೀ ॥** ೧೧

**ವಿಷಾದನಕ್ರಾಧ್ಯುಷಿತೇ ಪರಿತ್ರಾಸೋರ್ಮಿಮಾಲಿನಿ ।**
**ಕಿಂ ಮಾಂ ನ ತ್ರಾಯಸೇ ಮಗ್ನಾಂ ವಿಪುಲೇ ಶೋಕಸಾಗರೇ ॥** ೧೨

**ಏತೇ ಚ ನಿಹತಾ ಭೂಮೌ ರಾಮೇಣ ನಿಶಿತೈಃ ಶರೈಃ ।**
**ಯೇಽಪಿ ಮೇ ಪದವೀಂ ಪ್ರಾಪ್ತಾ ರಾಕ್ಷಸಾಃ ಪಿಶಿತಾಶನಾಃ ॥** ೧೩

**ಮಯಿ ತೇ ಯದ್ಯನುಕ್ರೋಶೋ ಯದಿ ರಕ್ಷಃಸು ತೇಷು ಚ ।**
**ರಾಮೇಣ ಯದಿ ತೇ ಶಕ್ತಿಸ್ತೇಜೋ ವಾಸ್ತಿ ನಿಶಾಚರ ॥** ೧೪

**ದಂಡಕಾರಣ್ಯನಿಲಯಂ ಜಹಿ ರಾಕ್ಷಸಕಂಟಕಮ್ ।**
**ಯದಿ ರಾಮಂ ಮಮಾಮಿತ್ರಂ ನ ತ್ವಮದ್ಯ ವಧಿಷ್ಯಸಿ ॥** ೧೫

**ತವ ಚೈವಾಗ್ರತಃ ಪ್ರಾಣಾಂಸ್ತ್ಯಕ್ಷ್ಯಾಮಿ ನಿರಪತ್ರಪಾ ।**
**ಬುದ್ಧ್ಯಾಹಮನುಪಶ್ಯಾಮಿ ನ ತ್ವಂ ರಾಮಸ್ಯ ಸಂಯುಗೇ ॥** ೧೬

---

ಅಣ್ಣ, ನಾನು ಉದ್ವಿಗ್ನಳಾದೆ; ಖಿನ್ನಳಾದೆ. ಎಲ್ಲೆಲ್ಲಿಯೂ ನನಗೆ ಭಯವು ಆವರಿಸಿದಂತೆ ಕಂಡಿತು. ಆದ್ದರಿಂದ ಮತ್ತೆ ನಿನ್ನ ಮರೆಹೊಕ್ಕಿದ್ದೇನೆ. ಅಣ್ಣ, ಆಳವಾದ ಶೋಕಸಮುದ್ರದಲ್ಲಿ ಮುಳುಗಿಹೋಗಿದ್ದೇನೆ. ವ್ಯಥೆಯೆಂಬ ಮೊಸಳೆ ನುಂಗಲು ಬರುತ್ತಿದೆ. ಭಯವು ಅಲೆಯಲೆಯಾಗಿ ಬಂದು ನನ್ನನ್ನು ಎತ್ತಿಹಾಕುತ್ತಿದೆ. ನನ್ನನ್ನು ಉಳಿಸಲಾರೆಯಾ? (೧೧-೧೨). ನನ್ನ ಸಹಾಯಕ್ಕಾಗಿ ಹಿಂಬಾಲಿಸಿ ಬಂದ ರಾಕ್ಷಸರೂ ಹತರಾದರು. ಮಾಂಸಾಹಾರಿಗಳಾದ ಆ ರಾಕ್ಷಸರು ರಾಮನ ನಿಶಿತಾಸ್ತ್ರಗಳಿಗೆ ಈಡಾಗಿ ನೆಲದಮೇಲೆ ಒರಗಿದರು (೧೩). ರಾಕ್ಷಸೇಂದ್ರ, ನನ್ನಲ್ಲಿ ನಿನಗೆ ಮರುಕವಿರುವುದು ನಿಜವಾದರೆ — ಹತರಾದ ಆ ರಾಕ್ಷಸರಲ್ಲಿ ಕರುಣೆಯಿರುವುದಾದರೆ — ರಾಮನೊಡನೆ ಹೋರಾಡಲು ದಮ್ಮು, ಕೆಚ್ಚು ನಿನ್ನಲ್ಲಿ ಇರುವುದಾದರೆ — ರಾಕ್ಷಸರಿಗೆ ಕಂಟಕನಾದ ಆ ರಾಮನನ್ನು ಕೊಂದುಹಾಕು! ಅವನು ದಂಡಕಾರಣ್ಯಕ್ಕೆ ಬಂದು ಬೀಡುಬಿಟ್ಟಿದ್ದಾನೆ. ಆತನು ನನ್ನ ವೈರಿ! (೧೪-೧೫). ಈ ದಿನವೇ ನೀನು ರಾಮನನ್ನು ವಧಿಸದಿದ್ದರೆ,

ಸ್ಥಾತುಂ ಪ್ರತಿಮುಖೇ ಶಕ್ತಃ ಸಬಲೋऽಪಿ ಮಹಾರಣೇ ।
ಶೂರಮಾನೀ ನ ಶೂರಸ್ತ್ವಂ ಮಿಥ್ಯಾರೋಪಿತವಿಕ್ರಮಃ ॥ ೧೭

ಮಾನುಷೌ ಯೌ ನ ಶಕ್ನೋಷಿ ಹಂತುಂ ತೌ ರಾಮಲಕ್ಷ್ಮಣೌ ।
ರಾಮೇಣ ಯದಿ ತೇ ಶಕ್ತಿಸ್ತೇಜೋ ವಾಸ್ತಿ ನಿಶಾಚರ ॥ ೧೮

ದಂಡಕಾರಣ್ಯನಿಲಯಂ ಜಹಿ ತಂ ಕುಲಪಾಂಸನ ।
ನಿಃಸತ್ತ್ವಸ್ಯಾಲ್ಪವೀರ್ಯಸ್ಯ ವಾಸಸ್ತೇ ಕೀದೃಶಸ್ತ್ವಿಹ ॥ ೧೯

ಅಪಯಾಹಿ ಜನಸ್ಥಾನಾತ್ತ್ವರಿತಃ ಸಹಬಾಂಧವಃ ।
ರಾಮತೇಜೋऽಭಿಭೂತೋ ಹಿ ತ್ವಂ ಕ್ಷಿಪ್ರಂ ವಿನಶಿಷ್ಯಸಿ ॥ ೨೦

ಸ ಹಿ ತೇಜಃಸಮಾಯುಕ್ತೋ ರಾಮೋ ದಶರಥಾತ್ಮಜಃ ।
ಭ್ರಾತಾ ಚಾಸ್ಯ ಮಹಾವೀರ್ಯೋ ಯೇನ ಚಾಸ್ಮಿ ವಿರೂಪಿತಾ ॥ ೨೧

---

ಇದೋ, ನಿನ್ನೆದುರಿಗೇ ನಾನು ಯಾವ ಸಿಗ್ಗೂ ಇಲ್ಲದೆ ಪ್ರಾಣಬಿಡುತ್ತೇನೆ. ನನಗೆ ಗೊತ್ತು ! ಯುದ್ಧದಲ್ಲಿ ರಾಮನನ್ನು ಎದುರಿಸುವ ಗಡಸು ನಿನಗಿಲ್ಲ ! ಸೇನಾಸಮೇತನಾಗಿ ಹೋದರೂ ರಣರಂಗದಲ್ಲಿ ನೀನು ಆತನನ್ನು ಎದುರಿಸಲಾರೆ ! ನೀನು ಶೂರನೆಂದು ದುರಹಂಕಾರಪಡುತ್ತಿದ್ದೀಯೆ, ನೀನು ಶೂರನಲ್ಲ ! ಪರಾಕ್ರಮಿಯೆಂದು ಒಣಹೆಮ್ಮೆ ನಿನಗೆ ! (೧೬–೧೭). ಕೇವಲ ಹುಲುಮನುಜರಾದ ರಾಮಲಕ್ಷ್ಮಣರನ್ನು ಕೊಲ್ಲುವ ಶಕ್ತಿ ನಿನಗಿಲ್ಲವಲ್ಲ ! ಎಲೇ ರಾಕ್ಷಸ, ರಾಮನೊಡನೆ ಹೋರಾಡುವುದಕ್ಕೆ ಸಾಮರ್ಥ್ಯ – ಪೆಡಸು ನಿನ್ನಲ್ಲಿರುವುದೇ ಸತ್ಯವಾದರೆ, ಅವನನ್ನು ಸಂಹರಿಸು, ನೋಡೋಣ ! ಅವನು ನಿನ್ನ ದಂಡಕಾರಣ್ಯಕ್ಕೇ ಬಂದು ಬೀಡುಹಾಕಿದ್ದಾನಲ್ಲ ! ಅಯ್ಯೋ ಕುಲಗೇಡಿ ! ನಿಸ್ಸತ್ತ್ವನಾಗಿ ಕೈಲಾಗದಿರುವ ಹೇಡಿಯಾದ ನೀನು ಇಲ್ಲಿ ಇರುವುದಾದರೂ ಏತಕ್ಕೆ ? (೧೮–೧೯). ನಿನ್ನ ಹೆಂಡತಿ ಮಕ್ಕಳು ಬಂಧುಗಳನ್ನು ಕರೆದುಕೊಂಡು ಬೇಗನೆ ಈ ಜನಸ್ಥಾನದಿಂದ ತೊಲಗಿಹೋಗು ! ರಾಮನ ವೀರ್ಯಾಗ್ನಿಗೆ ಸಿಕ್ಕಿ ಶೀಘ್ರದಲ್ಲಿ ನಾಶವಾಗಿ ಹೋದೀಯೆ ! ದಶರಥಪುತ್ರನಾದ ರಾಮನು ಸಾಮಾನ್ಯನಲ್ಲ ; ಮಹಾತೇಜಸ್ವಿ.

ಏವಂ ವಿಲಪ್ಯ ಬಹುಶೋ ರಾಕ್ಷಸೀ ಪ್ರದರೋದರೀ ।
ಕರಾಭ್ಯಾಮುದರಂ ಹತ್ವಾ ರುರೋದ ಭೃಶದುಃಖಿತಾ ॥ ೨೨

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕವಿಂಶಃ ಸರ್ಗಃ

---

## ದ್ವಾವಿಂಶಃ ಸರ್ಗಃ

### ಖರಸಂನಾಹಃ

ಏವಮಾಧರ್ಷಿತಃ ಶೂರಃ ಶೂರ್ಪಣಖ್ಯಾ ಖರಸ್ತದಾ ।
ಉವಾಚ ರಕ್ಷಸಾಂ ಮಧ್ಯೇ ಖರಃ ಖರತರಂ ವಚಃ ॥ ೧

ತವಾವಮಾನಪ್ರಭವಃ ಕ್ರೋಧೋಽಯಮತುಲೋ ಮಮ ।
ನ ಶಕ್ಯತೇ ಧಾರಯಿತುಂ ಲವಣಾಂಭ ಇವೋತ್ಥಿತಮ್ ॥ ೨

---

ಅವನ ತಮ್ಮನೂ ಮಹಾಬಲಾಢ್ಯ. ಅವನೇ ನನ್ನನ್ನು ವಿರೂಪಗೊಳಿಸಿದವನು" ಎಂದು ಅರಚಿದಳು (೨೦–೨೧). ಹೀಗೆ ದೊಡ್ಡ ಗವಿಯಂಥ ಹೊಟ್ಟೆಯ ಆ ರಾಕ್ಷಸಿಯು ಅತ್ಯಂತ ದುಃಖದಿಂದ ನಾನಾವಿಧದಲ್ಲಿ ಗೋಳಾಡಿ ಎರಡು ಕೈಗಳಿಂದಲೂ ಹೊಟ್ಟೆಯನ್ನು ಬಡಿದುಕೊಳ್ಳುತ್ತ ಅತ್ತಳು (೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗ

---

## ಸರ್ಗ ೨೨

ಖರನು ಶ್ರೀರಾಮನೊಂದಿಗೆ ಯುದ್ಧಮಾಡಲು ಹದಿನಾಲ್ಕು ಸಾವಿರ ಮಂದಿ ರಾಕ್ಷಸರೊಡನೆ ಹೊರಡುವುದು

ಶೂರ್ಪಣಖಿಯು ಶೂರನಾದ ಖರನನ್ನು ರಾಕ್ಷಸರೆದುರಿನಲ್ಲಿ ಈ ರೀತಿಯಾಗಿ ಹೀಯಾಳಿಸಲು, ಆತನು ಕರ್ಣಕಠೋರವಾದ ಧ್ವನಿಯಿಂದ "ಎಲೌ ಶೂರ್ಪಣಖಿ, ನೀನು ಪುನಃ ಬಂದುದರಿಂದಲೇ ನನ್ನ ಕ್ರೋಧವು ಸಮುದ್ರದಂತೆ ಉಕ್ಕೇರುತ್ತಿದೆ. ಈ ಕ್ರೋಧೋದ್ರೇಕವನ್ನು ತಡೆಯಲು ಯಾರಿಗೂ

ನ ರಾಮಂ ಗಣಯೇ ವೀರ್ಯಾನ್ಮಾನುಷಂ ಕ್ಷೀಣಜೀವಿತಮ್ ।
ಆತ್ಮದುಶ್ಚರಿತೈಃ ಪ್ರಾಣಾನ್ ಹತೋ ಯೋಽದ್ಯ ವಿಮೋಕ್ಷ್ಯತಿ ॥ ೩

ಬಾಷ್ಪಃ ಸಂಹ್ರಿಯತಾಮೇಷ ಸಂಭ್ರಮಶ್ಚ ವಿಮುಚ್ಯತಾಮ್ ।
ಅಹಂ ರಾಮಂ ಸಹ ಭ್ರಾತ್ರಾ ನಯಾಮಿ ಯಮಸಾದನಮ್ ॥ ೪

ಪರಶ್ವಧಹತಸ್ಯಾದ್ಯ ಮಂದಪ್ರಾಣಸ್ಯ ಸಂಯುಗೇ ।
ರಾಮಸ್ಯ ರುಧಿರಂ ರಕ್ತಮುಷ್ಣಂ ಪಾಸ್ಯಸಿ ರಾಕ್ಷಸಿ ॥ ೫

ಸಾ ಪ್ರಹೃಷ್ಟಾ ವಚಃ ಶ್ರುತ್ವಾ ಖರಸ್ಯ ವದನಾಚ್ಚ್ಯುತಮ್ ।
ಪ್ರಶಶಂಸ ಪುನರ್ಮೌರ್ಖ್ಯಾದ್ಭ್ರಾತರಂ ರಕ್ಷಸಾಂ ವರಮ್ ॥ ೬

ತಯಾ ಪರುಷಿತಃ ಪೂರ್ವಂ ಪುನರೇವ ಪ್ರಶಂಸಿತಃ ।
ಅಬ್ರವೀದ್ದೂಷಣಂ ನಾಮ ಖರಃ ಸೇನಾಪತಿಂ ತದಾ ॥ ೭

ಚತುರ್ದಶ ಸಹಸ್ರಾಣಿ ಮಮ ಚಿತ್ತಾನುವರ್ತಿನಾಮ್ ।
ರಕ್ಷಸಾಂ ಭೀಮವೇಗಾನಾಂ ಸಮರೇಷ್ವನಿವರ್ತಿನಾಮ್ ॥ ೮

---

ಶಕ್ಯವಿಲ್ಲ (೧–೨). ನನ್ನ ಪರಾಕ್ರಮದೆದುರಿಗೆ ರಾಮನು ಯಾವನು ? ಅವನನ್ನು ನಾನು ಲೆಕ್ಕದಲ್ಲಿಯೂ ಸೇರಿಸಲಾರೆ. ಆ ಮನುಷ್ಯಪ್ರಾಣಿಯ ಆಯುಸ್ಸು ಮುಗಿದಂತೆಯೇ. ತನ್ನ ದುಷ್ಕೃತ್ಯಗಳಿಗೆ ಫಲವಾಗಿ ಅವನು ಪ್ರಾಣವನ್ನು ಈಗಲೇ ಬಿಡುವನು. ಅವನನ್ನು ಕೊಲ್ಲುವೆನು. ತಂಗೀ, ಕಣ್ಣೀರನ್ನು ಒರಸಿಕೋ, ದುಗುಡ ವನ್ನು ಬಿಡು, ರಾಮನನ್ನು ಅವನ ತಮ್ಮನೊಂದಿಗೆ ಯಮಲೋಕಕ್ಕೆ ಕಳಿಸುವೆನು (೩–೪). ಅಲ್ಪಜೀವಿಯಾದ ರಾಮನನ್ನು ಯುದ್ಧದಲ್ಲಿ ಈ ಕೊಡಲಿಯಿಂದ ಹೊಡೆದುರುಳಿಸುತ್ತೇನೆ. ಬಿಸಿಬಿಸಿಯಾದ ಅವನ ನೆತ್ತರನ್ನು, ರಾಕ್ಷಸಿ, ನೀನು ಕುಡಿಯಬಹುದು " ಎಂದು ಅಬ್ಬರಿಸಿದನು (೫). ಖರನ ಬಾಯಿಂದ ಈ ಮಾತು ಹೊರಟಕೂಡಲೆ ಆ ರಾಕ್ಷಸಿಯು ಹಿಗ್ಗಿಹೋದಳು. 'ಅಣ್ಣ ! ಅಣ್ಣ !! ನೀನೇ ರಾಕ್ಷಸಶ್ರೇಷ್ಠ !' ಎಂದು ಆ ಮೂಢಾತ್ಮಳು ಖರನನ್ನು ಹೊಗಳಿದಳು. ಅವನು ಹೇಡಿಯೆಂದು ಮೊದಲು ಹೀಯಾಳಿಸಿದವಳೇ ಈಗ ಬಾಯಿತುಂಬ ಹೊಗಳಿದಳು ! ಆಗ ಖರನು ದೂಷಣನೆಂಬ ಸೇನಾಧ್ಯಕ್ಷನನ್ನು ಕರೆದು ಹೀಗೆ ಆಜ್ಞಾಪಿಸಿದನು (೬–೭) "ಎಲೈ ಸೇನಾಪತಿ, ನನ್ನ ಆಜ್ಞೆಯಂತೆ ನಡೆಯತಕ್ಕ ಭೀಮವೇಗ

ನೀಲಜೀಮೂತವರ್ಣಾನಾಂ ಘೋರಾಣಾಂ ಕ್ರೂರಕರ್ಮಣಾಮ್ ।
ಲೋಕಹಿಂಸಾವಿಹಾರಾಣಾಂ ಬಲಿನಾಮುಗ್ರತೇಜಸಾಮ್ ॥ ೯

ತೇಷಾಂ ಶಾರ್ದೂಲದರ್ಪಾಣಾಂ ಮಹಾಸ್ಯಾನಾಂ ಮಹೌಜಸಾಮ್ ।
ಸರ್ವೋದ್ಯೋಗಮುದೀರ್ಣಾನಾಂ ರಕ್ಷಸಾಂ ಸೌಮ್ಯ ಕಾರಯ ॥ ೧೦

ಉಪಸ್ಥಾಪಯ ಮೇ ಕ್ಷಿಪ್ರಂ ರಥಂ ಸೌಮ್ಯ ಧನೂಂಷಿ ಚ ।
ಶರಾಂಶ್ಚಿತ್ರಾಂಶ್ಚ ಖಡ್ಗಾಂಶ್ಚ ಶಕ್ತೀಶ್ಚ ವಿವಿಧಾಃ ಶಿತಾಃ ॥ ೧೧

ಅಗ್ರೇ ನಿರ್ಯಾತುಮಿಚ್ಛಾಮಿ ಪೌಲಸ್ತ್ಯಾನಾಂ ಮಹಾತ್ಮನಾಮ್ ।
ವಧಾರ್ಥಂ ದುರ್ವಿನೀತಸ್ಯ ರಾಮಸ್ಯ ರಣಕೋವಿದಃ ॥ ೧೨

ಇತಿ ತಸ್ಯ ಬ್ರುವಾಣಸ್ಯ ಸೂರ್ಯವರ್ಣಂ ಮಹಾರಥಮ್ ।
ಸದಶ್ವೈಃ ಶಬಲೈರ್ಯುಕ್ತಮಾಚಚಕ್ಷೇಽಥ ದೂಷಣಃ ॥ ೧೩

ರಾದ ಹದಿನಾಲ್ಕು ಸಾವಿರ ಮಂದಿ ರಾಕ್ಷಸರು ಯುದ್ಧಸನ್ನದ್ಧರಾಗಿ ಹೊರಡಲಿ! ಸಮರಾಂಗಣದಲ್ಲಿ ಎಂದಿಗೂ ಹಿಂಜರಿಯದ, ನೀಲಮೇಘದಂತೆ ಕಪ್ಪಾದ ಘೋರಾಕಾರದ ಕ್ರೂರಕರ್ಮಿಗಳು ಸಿದ್ಧರಾಗಲಿ! ಲೋಕಹಿಂಸೆಯೇ ವಿನೋದವೆಂದು ತಿಳಿದಿರುವ, ಬಲಶಾಲಿಗಳೂ ಉಗ್ರವೀರ್ಯರೂ ಆದ ರಾಕ್ಷಸರು ಹೊರಡಲಿ! ಹುಲಿಗಳಂತೆ ದರ್ಪಶಾಲಿಗಳೂ ಅಗಲವಾದ ಬಾಯುಳ್ಳವರೂ ಮಹಾಪರಾಕ್ರಮಿಗಳೂ ಗರ್ವಿಷ್ಠರೂ ಆದ ರಾಕ್ಷಸರ ಪಡೆಯು ಹೊರಡುವಂತೆ ಸರ್ವಸನ್ನಾಹವನ್ನೂ, ಹೇ ಸೌಮ್ಯ! ಏರ್ಪಾಡುಮಾಡು! (೮–೧೦). ನನ್ನ ರಥ, ಧನುಸ್ಸು, ವಿಚಿತ್ರಾಕಾರದ ಬಾಣಗಳು, ಖಡ್ಗಗಳು, ಶಕ್ತಿ ಮುಂತಾದ ಹರಿತವಾದ ವಿವಿಧಾಯುಧಗಳು – ಇವೆಲ್ಲವನ್ನೂ ಶೀಘ್ರವಾಗಿ ತಂದು ಸಿದ್ಧಪಡಿಸು. ಮಹಾತ್ಮರಾದ ಪುಲಸ್ತ್ಯವಂಶೀಯರಲ್ಲಿ* ನಾನು ರಣಕೋವಿದ! ಉದ್ಧತನಾದ ರಾಮನನ್ನು ಬಗ್ಗು ಬಡಿಯುವುದಕ್ಕಾಗಿ ಹೋಗಬೇಕೆಂದು ಸಂಕಲ್ಪಿಸಿದ್ದೇನೆ!" ಎಂದನು (೧೧–೧೨). ಅವನು ಹೀಗೆ ಹೇಳುತ್ತಿರುವಾಗಲೇ ದೂಷಣನು

* 'ಪೌಲಸ್ತ್ಯಾನಾಂ ಮಹಾತ್ಮನಃಂ ವಧಾರ್ಥಂ' ಎಂದು ಮೂಲವಿದೆ. 'ಪುಲಸ್ತ್ಯ ವಂಶೀಯರ ವಧೆಗೋಸ್ಕರ ಹೋಗುತ್ತೇನೆ' ಎಂಬ ಇನ್ನೊಂದು ಅರ್ಥವೂ ತೋರುತ್ತದೆ. ಇಂಥ ಮಾತು ಖರನ ಬಾಯಿಂದ ದೈವಿಕವಾಗಿ ಹೊರಟಿತು ಎಂದು ಗೋವಿಂದರಾಜರು ಸೂಚಿಸುತ್ತಾರೆ.

ತಂ ಮೇರುಶಿಖರಾಕಾರಂ ತಪ್ತಕಾಂಚನಭೂಷಣಮ್ ।
ಹೇಮಚಕ್ರಮಸಂಬಾಧಂ ವೈದೂರ್ಯಮಯಕೂಬರಮ್ ॥ ೧೪

ಮತ್ಸ್ಯೈಃ ಪುಷ್ಪೈರ್ದ್ರುಮೈಃ ಶೈಲೈಶ್ಚಂದ್ರಸೂರ್ಯೈಶ್ಚ ಕಾಂಚನೈಃ ।
ಮಂಗಲೈಃ ಪಕ್ಷಿಸಂಘೈಶ್ಚ ತಾರಾಭಿರಭಿಸಂವೃತಮ್ ॥ ೧೫

ಧ್ವಜನಿಸ್ತ್ರಿಂಶಸಂಪನ್ನಂ ಕಿಂಕಿಣೀಕವಿರಾಜಿತಮ್ ।
ಸದಶ್ವಯುಕ್ತಂ ಸೋಽಮರ್ಷಾದಾರುರೋಹ ಖರೋ ರಥಮ್ ॥ ೧೬

ನಿಶಾಮ್ಯ ತು ರಥಸ್ಥಂ ತಂ ರಾಕ್ಷಸಾ ಭೀಮವಿಕ್ರಮಾಃ ।
ತಸ್ಥುಃ ಸಂಪರಿವಾರ್ಯೈನಂ ದೂಷಣಂ ಚ ಮಹಾಬಲಮ್ ॥ ೧೭

ಖರಸ್ತು ತಾನ್ ಮಹೇಷ್ವಾಸಾನ್ ಘೋರವರ್ಮಾಯುಧಧ್ವಜಾನ್ ।
ನಿರ್ಯಾತೇತ್ಯಬ್ರವೀದ್ಧೃಷ್ಟೋ ರಥಸ್ಥಃ ಸರ್ವರಾಕ್ಷಸಾನ್ ॥ ೧೮

---

ಚಿತ್ರವರ್ಣದ ಉತ್ತಮಾಶ್ವಗಳನ್ನು ಹೂಡಿದ ಸೂರ್ಯಸಂಕಾಶವಾದ ಒಂದು ಮಹಾರಥವನ್ನು ತಂದು ನಿಲ್ಲಿಸಿ, ಆ ವಿಷಯವನ್ನು ಖರನಿಗೆ ತಿಳಿಸಿದನು (೧೩). ಆ ರಥವು ಮೇರುಶಿಖರದಂತೆ ಉನ್ನತವಾಗಿ ಅಪರಂಜಿಯಿಂದ ಅಲಂಕೃತವಾಗಿತ್ತು. ಗಾಲಿಗಳನ್ನು ಚಿನ್ನದಿಂದ ಸಿಂಗರಿಸಲಾಗಿತ್ತು. ಆ ಮಹಾರಥದ ನೊಗದ ಕೆಳ ಹಲಗೆಯು ವೈಡೂರ್ಯಖಚಿತವಾಗಿತ್ತು. ಆ ರಥದಮೇಲೆ ಮಂಗಳಾರ್ಥವಾಗಿ ಸುವರ್ಣಮಯವಾದ ಮೀನುಗಳು, ಹೂಗಳು, ಮರಗಳು, ಬೆಟ್ಟಗಳು, ಚಂದ್ರ ಸೂರ್ಯನಕ್ಷತ್ರಗಳು, ವಿವಿಧಪಕ್ಷಿಗಳು–ಮೊದಲಾದವನ್ನು ಚಿತ್ರಿಸಿದ್ದರು (೧೪–೧೫). ಧ್ವಜಪಟವು ಹಾರಾಡುತ್ತಿತ್ತು. ಖಡ್ಗಗಳನ್ನು ತೂಗುಹಾಕಿದ್ದರು. ಆ ರಥವು ಕಿರುಗೆಜ್ಜೆಗಳಿಂದ ಅಲಂಕೃತವಾಗಿತ್ತು. ಕುದುರೆಗಳನ್ನು ಹೂಡಿ ಸಜ್ಜಾಗಿತ್ತು. ಖರನು ಸಿಟ್ಟಿನಿಂದ ಉರಿದೆದ್ದು ಆ ರಥವನ್ನೇರಿದನು (೧೬). ಹೀಗೆ ಖರನು ರಥಾರೂಢನಾದುದನ್ನು ಕಂಡು ಭೀಮಬಲರಾದ ರಾಕ್ಷಸರೆಲ್ಲರೂ ಖರದೂಷಣರ ಸುತ್ತಲೂ ಬಂದು ನೆರೆದರು. ದೊಡ್ಡ ದೊಡ್ಡ ಧನುಸ್ಸುಗಳನ್ನು ಧರಿಸಿ ಘೋರಕವಚಗಳನ್ನು ತೊಟ್ಟು ಭೀಕರಾಯುಧಗಳನ್ನು ಝಳಪಿಸುತ್ತ ಬಾವುಟಗಳನ್ನು ಎತ್ತಿಹಿಡಿದಿದ್ದ ಆ ರಾಕ್ಷಸರನ್ನು ನೋಡಿ, ಉದ್ಧತನಾದ ಖರನು

ತತಸ್ತದ್ರಾಕ್ಷಸಂ ಸೈನ್ಯಂ ಘೋರವರ್ಮಾಯುಧಧ್ವಜಮ್ ।
ನಿರ್ಜಗಾಮ ಜನಸ್ಥಾನಾನ್ಮಹಾನಾದಂ ಮಹಾಜವಮ್ ॥ ೧೯

ಮುದ್ಗರೈಃ ಪಟ್ಟಿಶೈಃ ಶೂಲೈಃ ಸುತೀಕ್ಷ್ಣೈಶ್ಚ ಪರಶ್ವಧೈಃ ।
ಖಡ್ಗೈಶ್ಚಕ್ರೈಶ್ಚ ಹಸ್ತಸ್ಥೈರ್ಭ್ರಾಜಮಾನೈಶ್ಚ ತೋಮರೈಃ ॥ ೨೦

ಶಕ್ತಿಭಿಃ ಪರಿಘೈರ್ಘೋರೈರತಿಮಾತ್ರೈಶ್ಚ ಕಾರ್ಮುಕೈಃ ।
ಗದಾಸಿಮುಸಲೈರ್ವಜ್ರೈರ್ಗೃಹೀತೈರ್ಭೀಮದರ್ಶನೈಃ ॥ ೨೧

ರಾಕ್ಷಸಾನಾಂ ಸುಘೋರಾಣಾಂ ಸಹಸ್ರಾಣಿ ಚತುರ್ದಶ ।
ನಿರ್ಯಾತಾನಿ ಜನಸ್ಥಾನಾತ್ ಖರಚಿತ್ತಾನುವರ್ತಿನಾಮ್ ॥ ೨೨

ತಾಂಸ್ತ್ವಭಿದ್ರವತೋ ದೃಷ್ಟ್ವಾ ರಾಕ್ಷಸಾನ್ ಭೀಮವಿಕ್ರಮಾನ್ ।
ಖರಸ್ಯಾಪಿ ರಥಃ ಕಿಂಚಿಜ್ಜಗಾಮ ತದನಂತರಮ್ ॥ ೨೩

ತತಸ್ತಾನ್ ಶಬಲಾನಶ್ವಾಂಸ್ತಪ್ತಕಾಂಚನಭೂಷಿತಾನ್ ।
ಖರಸ್ಯ ಮತಿಮಾಜ್ಞಾಯ ಸಾರಥಿಃ ಸಮಚೋದಯತ್ ॥ ೨೪

ಸ ಚೋದಿತೋ ರಥಃ ಶೀಘ್ರಂ ಖರಸ್ಯ ರಿಪುಘಾತಿನಃ ।
ಶಬ್ದೇನಾಪೂರಯಾಮಾಸ ದಿಶಶ್ಚ ಪ್ರದಿಶಸ್ತದಾ ॥ ೨೫

---

ರಥದಲ್ಲಿ ನಿಂತು 'ನಡೆಯಿರಿ! ' ಎಂದು ಆಜ್ಞಾಪಿಸಿದನು (೧೭–೧೮). ಒಡನೆಯೇ ಆ ರಾಕ್ಷಸಪಡೆಯು ಕೋಲಾಹಲಗೈಯುತ್ತ ಮಹಾರಭಸದೊಡನೆ ಜನಸ್ಥಾನ ದಿಂದ ಹೊರಟಿತು. ಮುದ್ಗರ, ಪಟ್ಟಿಶ, ಶೂಲ, ಪರಶು, ಖಡ್ಗ, ಚಕ್ರ, ತೋಮರ, ಶಕ್ತಿ, ಪರಿಘ, ಧನುಸ್ಸು, ಗದೆ, ಚೂರಿ, ಮುಸಲ, ಅಷ್ಟಪಟ್ಟಿ ಯುಳ್ಳ ವಜ್ರ–ಮುಂತಾದ ಆಯುಧಗಳನ್ನು ಹಿಡಿದು ಹದಿನಾಲ್ಕುಸಾವಿರ ಮಂದಿ ಭಯಂಕರರಾದ ರಾಕ್ಷಸರು ಖರನ ಇಚ್ಛೆಯಂತೆ ಜನಸ್ಥಾನದಿಂದ ಯುದ್ಧಕ್ಕಾಗಿ ಹೊರಟರು (೧೯–೨೨). ಈ ಪ್ರಕಾರದಲ್ಲಿ ಪರಾಕ್ರಮಿಗಳಾದ ರಾಕ್ಷಸರು ನುಗ್ಗಿ ಹೋಗುತ್ತಿರಲು, ಅವರ ಹಿಂದೆ ಖರನ ರಥವೂ ಸಾಗಿತು. ಖರನ ಇಷ್ಟದಂತೆ ಅವನ ಸಾರಥಿಯು ಸುವರ್ಣಭೂಷಿತಗಳಾದ ಚಿತ್ರವರ್ಣದ ಅಶ್ವಗಳನ್ನು ಹುರಿ ದುಂಬಿಸಿದನು (೨೩–೨೪). ಶತ್ರುವನ್ನು ಘಾತಿಸುವೆನೆಂದು ಹೊರಟ ಖರನ ಮಹಾರಥದ ಚೀತ್ಕಾರವು ದಿಕ್ಕುದಿಕ್ಕುಗಳನ್ನು ಕೂಡಲೇ ಮೊಳಗಿಸಿತು (೨೫).

ಪ್ರವೃದ್ಧಮನ್ಯುಸ್ತು ಖರಃ ಖರಸ್ವನೋ
ರಿಪೋರ್ವಧಾರ್ಥಂ ತ್ವರಿತೋ ಯಥಾಂತಕಃ ।
ಅಚೂಚುದತ್ ಸಾರಥಿಮುನ್ನದನ್ ಘನಂ
ಮಹಾಬಲೋ ಮೇಘ ಇವಾಶ್ಮವರ್ಷವಾನ್ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಾವಿಂಶಃ ಸರ್ಗಃ

---

## ತ್ರಯೋವಿಂಶಃ ಸರ್ಗಃ

### ಉತ್ಪಾತದರ್ಶನಮ್

ತಸ್ಮಿನ್ ಯಾತೇ ಜನಸ್ಥಾನಾದಶಿವಂ ಶೋಣಿತೋದಕಮ್ ।
ಅಭ್ಯವರ್ಷನ್ಮಹಾಮೇಘಸ್ತುಮುಲೋ ಗರ್ದಭಾರುಣಃ ॥ ೧

ನಿಪೇತುಸ್ತುರಗಾಸ್ತಸ್ಯ ರಥಯುಕ್ತಾ ಮಹಾಜವಾಃ ।
ಸಮೇ ಪುಷ್ಪಚಿತೇ ದೇಶೇ ರಾಜಮಾರ್ಗೇ ಯದೃಚ್ಛಯಾ ॥ ೨

---

ಸಿಟ್ಟಿನಿಂದ ಸಿಡಿದೆದ್ದ ಖರನು ಕರ್ಣಕಠೋರವಾಗಿ ಗರ್ಜಿಸುತ್ತ ಸಾಕ್ಷಾತ್ ಯಮನೋ ಎಂಬಂತೆ ವೈರಿಯನ್ನು ವಧಿಸುವೆನೆಂದು ತ್ವರೆಯಿಂದ ನುಗ್ಗಿಹೋದನು. ಆಲಿಕಲ್ಲುಗಳನ್ನು ತೂರುತ್ತ ಬಿರುಗಾಳಿಯ ಬಲದಿಂದ ಘೋರ್ಗರೆಯುತ್ತ ಬರುವ ಮೇಘದಂತೆ 'ಬೇಗ ಬೇಗ! ಓಡಿಸು ಓಡಿಸು!' ಎಂದು ಸಾರಥಿಯನ್ನು ದೌಡಾಯಿಸಿದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗ

---

## ಸರ್ಗ ೨೩

### ಖರನ ರಣಯಾತ್ರೆಯ ಸಮಯದಲ್ಲಿ ಉತ್ಪಾತಗಳಾಗುವುದು. ಅವನ್ನು ಗಣಿಸದೆ ಖರನ ಪ್ರಯಾಣ

ಖರನು ಹೀಗೆ ಜನಸ್ಥಾನದಿಂದ ರಣಯಾತ್ರೆಗೆ ಹೊರಡಲಾಗಿ, ಕತ್ತೆಯ ಮೈಬಣ್ಣದಂತೆ ಮಾಸಲುಗೆಂಪಿನ ಮೋಡವು ಗುಡುಗುತ್ತ ಕೆನ್ನೀರನ್ನು ಸುರಿಸಿತು. ಖರನ ರಥಕ್ಕೆ ಹೂಡಿದ ವೇಗಶಾಲಿಗಳಾದ ಕುದುರೆಗಳು ರಾಜಮಾರ್ಗದಲ್ಲಿ

ಶ್ಯಾಮಂ ರುಧಿರಪರ್ಯಂತಂ ಬಭೂವ ಪರಿವೇಷಣಮ್ ।
ಅಲಾತಚಕ್ರಪ್ರತಿಮಂ ಪರಿಗೃಹ್ಯ ದಿವಾಕರಮ್ ॥ ೩

ತತೋ ಧ್ವಜಮುಪಾಗಮ್ಯ ಹೇಮದಂಡಂ ಸಮುಚ್ಛ್ರಿತಮ್ ।
ಸಮಾಕ್ರಮ್ಯ ಮಹಾಕಾಯಸ್ತಸ್ಥೌ ಗೃಧ್ರಃ ಸುದಾರುಣಃ ॥ ೪

ಜನಸ್ಥಾನಸಮೀಪೇ ತು ಸಮಾಗಮ್ಯ ಖರಸ್ವನಾಃ ।
ವಿಸ್ವರಾನ್ ವಿವಿಧಾಂಶ್ಚಕ್ರುರ್ಮಾಂಸಾದಾ ಮೃಗಪಕ್ಷಿಣಃ ॥ ೫

ವ್ಯಾಜಹ್ರುಶ್ಚ ಪ್ರದೀಪ್ತಾಯಾಂ ದಿಶಿ ವೈ ಭೈರವಸ್ವನಮ್ ।
ಅಶಿವಂ ಯಾತುಧಾನಾನಾಂ ಶಿವಾ ಘೋರಾ ಮಹಾಸ್ವನಾಃ ॥ ೬

ಪ್ರಭಿನ್ನಗಜಸಂಕಾಶಾಸ್ತೋಯಶೋಣಿತಧಾರಿಣಃ ।
ಆಕಾಶಂ ತದನಾಕಾಶಂ ಚಕ್ರುರ್ಭೀಮಾ ಬಲಾಹಕಾಃ ॥ ೭

ಬಭೂವ ತಿಮಿರಂ ಘೋರಮುದ್ಧತಂ ರೋಮಹರ್ಷಣಮ್ ।
ದಿಶೋ ವಾ ವಿದಿಶೋ ವಾಪಿ ನ ಚ ವ್ಯಕ್ತಂ ಚಕಾಶಿರೇ ॥ ೮

---

ಹೋಗುವಾಗ ಹೂಗಳನ್ನು ಹರಡಿದ್ದ ಸಮಪ್ರದೇಶದಲ್ಲಿಯೇ ಮುಗ್ಗರಿಸಿದವು (೧–೨). ಕೊಳ್ಳಿಯನ್ನು ತಿರುಗಿಸುವಾಗ ಕಾಣುವ ಚಕ್ರಾಕೃತಿಯಂತೆ ಪರಿವೇಷವು ಸೂರ್ಯನನ್ನು ಸುತ್ತುಗಟ್ಟಿತು. ಕಪ್ಪಗಿದ್ದ ಆ ಪರಿವೇಷವು ಕೆಂಪು ಅಂಚಿನಿಂದ ಕೂಡಿತ್ತು. ಎತ್ತರವಾದ ಸುವರ್ಣದಂಡದ ಧ್ವಜದಮೇಲೆ ಭೀಕರವಾದ ಒಂದು ರಣಹದ್ದು ಬಂದು ಕುಳಿತಿತು (೩–೪). ಮಾಂಸಾಹಾರಿಗಳಾದ ಮೃಗಪಕ್ಷಿಗಳು ಜನಸ್ಥಾನದ ಸಮೀಪಕ್ಕೆ ಬಂದು ಕಠೋರಸ್ವರದಿಂದ ವಿಕಾರವಾಗಿ ಅರಚಿಕೊಳ್ಳುತ್ತಿದ್ದವು. ಸೂರ್ಯನು ಬೆಳಗುತ್ತಿದ್ದ ದಿಕ್ಕಿನಲ್ಲಿ ನರಿಗಳು ರಾಕ್ಷಸರಿಗೆ ಅಶುಭವನ್ನು ಸೂಚಿಸುತ್ತ ಗಟ್ಟಿಯಾಗಿ ಊಳಿಡುತ್ತಿದ್ದವು (೫–೬). ಗಾಯಗೊಂಡು ರಕ್ತ ಸುರಿಸುವ ಆನೆಗಳಂತೆ ಕೆನ್ನೀರನ್ನು ಸುರಿಸುತ್ತಿದ್ದ ಭೀಮಾಕೃತಿಯ ಮೋಡಗಳು ಆಕಾಶವನ್ನು ಮುಚ್ಚಿದವು. ಮೈನವಿರೇಳಿಸುವಂತೆ ಘೋರವಾದ ಕತ್ತಲೆಯು ಮುಸುಕಿತು. ಇದು ಯಾವ ದಿಕ್ಕು – ಇದು ಯಾವ ದಿಗಂತರ–

ಕ್ಷತಜಾರ್ದ್ರಸವರ್ಣಾಭಾ ಸಂಧ್ಯಾ ಕಾಲಂ ವಿನಾ ಬಭೌ ।
ಖರಸ್ಯಾಭಿಮುಖಾ ನೇದುಸ್ತದಾ ಘೋರಮೃಗಾಃ ಖಗಾಃ ॥ ೯

ಕಂಕಗೋಮಾಯುಗೃಧ್ರಾಶ್ಚ ಚುಕ್ರುಶುರ್ಭಯಶಂಸಿನಃ ।
ನಿತ್ಯಾಶಿವಕರಾ ಯುದ್ಧೇ ಶಿವಾ ಘೋರನಿದರ್ಶನಾಃ ॥ ೧೦

ನೇದುರ್ಬಲಸ್ಯಾಭಿಮುಖಂ ಜ್ವಾಲೋದ್ಗಾರಿಭಿರಾನನೈಃ ।
ಕಬಂಧಃ ಪರಿಘಾಭಾಸೋ ದೃಶ್ಯತೇ ಭಾಸ್ಕರಾಂತಿಕೇ ॥ ೧೧

ಜಗ್ರಾಹ ಸೂರ್ಯಂ ಸ್ವರ್ಭಾನುರಪರ್ವಣಿ ಮಹಾಗ್ರಹಃ ।
ಪ್ರವಾತಿ ಮಾರುತಃ ಶೀಘ್ರಂ ನಿಷ್ಪ್ರಭೋಽಭೂದ್ದಿವಾಕರಃ ॥ ೧೨

ಉತ್ಪೇತುಶ್ಚ ವಿನಾ ರಾತ್ರಿಂ ತಾರಾಃ ಖದ್ಯೋತಸಪ್ರಭಾಃ ।
ಸಂಲೀನಮೀನವಿಹಗಾ ನಲಿನ್ಯಃ ಶುಷ್ಕಪಂಕಜಾಃ ॥ ೧೩

ತಸ್ಮಿನ್ ಕ್ಷಣೇ ಬಭೂವುಶ್ಚ ವಿನಾ ಪುಷ್ಪಫಲೈರ್ದ್ರುಮಾಃ ।
ಉದ್ಧೂತಶ್ಚ ವಿನಾ ವಾತಂ ರೇಣುರ್ಜಲಧರಾರುಣಃ ॥ ೧೪

---

ಎಂಬುದೂ ಸರಿಯಾಗಿ ತಿಳಿಯಲಿಲ್ಲ (೭–೮). ಅಕಾಲದಲ್ಲಿ ರಕ್ತವರ್ಣದ ಸಂಜೆಯಾದಂತಾಯಿತು. ಮೃಗಪಕ್ಷಿಗಳು ಖರನಿಗೆ ಎದುರಾಗಿ ಕೂಗಿಕೊಂಡವು. ಕಾಗೆ ನರಿ ಹದ್ದುಗಳು ಭಯವನ್ನು ಸೂಚಿಸುತ್ತ ಚೀರಿದವು. ಮುಂದೆ ಬರುವ ಯುದ್ಧದಲ್ಲಿ ನಿಶ್ಚಯವಾಗಿಯೂ ರಾಕ್ಷಸರಿಗೆ ಕೇಡಾಗುವುದೆಂದು ಘೋಷಿಸುವಂತೆ ಹೆಣ್ಣುನರಿಗಳು ಊಳಿಟ್ಟವು (೯–೧೦). ಅವು ಬಾಯಲ್ಲಿ ಬೆಂಕಿಯನ್ನು ಕಾರುತ್ತ ರಾಕ್ಷಸಪಡೆಗೆ ಎದುರಾಗಿ ಕೂಗಿಕೊಂಡವು. ಪರಿಘಾಯುಧದಂತೆ ಕಾಣುತ್ತಿದ್ದ ತಲೆಯಿಲ್ಲದ ಒಂದು ರುಂಡಾಕೃತಿಯು ಸೂರ್ಯನ ಹತ್ತಿರ ಗೋಚರಿಸಿತು. ಅಮಾವಾಸ್ಯೆಯಲ್ಲದಿದ್ದರೂ ರಾಹುಗ್ರಸ್ತವಾದ ಸೂರ್ಯಗ್ರಹಣವು ಸಂಭವಿಸಿತು. ಬಿರುಗಾಳಿ ಬೀಸತೊಡಗಿತು. ಇದ್ದಕ್ಕಿದ್ದಂತೆ ಸೂರ್ಯನು ನಿಸ್ತೇಜನಾದನು (೧೧–೧೨). ರಾತ್ರಿಯಲ್ಲದಿದ್ದರೂ ತಾರೆಗಳು ಮಿಂಚುಹುಳುಗಳಂತೆ ಮಿನುಗಿದವು. ಕೊಳಗಳಲ್ಲಿ ಮೀನುಗಳು ತಳಸಾರಿದವು. ನೀರುಹಕ್ಕಿಗಳು ಅಲ್ಲಲ್ಲಿ ಅಡಗಿದವು. ತಾವರೆಯ ಬಳ್ಳಿಗಳಲ್ಲಿ ತಾವರೆಗಳು ಬಾಡಿದವು. ಆ ಸಮಯದಲ್ಲಿ ಹಣ್ಣು–ಹೂಗಳು ಇದ್ದಕ್ಕಿದ್ದಂತೆ ಉದುರಿ ಮರಗಳು ಬೋಳಾದವು. ಗಾಳಿಯಿಲ್ಲದೆ ಮೋಡ

**ವೀಚೀಕೂಚೀತಿ ವಾಶ್ಯಂತ್ಯೋ ಬಭೂವುಸ್ತತ್ರ ಶಾರಿಕಾಃ ।**
**ಉಲ್ಕಾಶ್ಚಾಪಿ ಸನಿರ್ಘಾತಾ ನಿಪೇತುರ್ಘೋರದರ್ಶನಾಃ ॥ ೧೫**

**ಪ್ರಚಚಾಲ ಮಹೀ ಸರ್ವಾ ಸಶೈಲವನಕಾನನಾ ।**
**ಖರಸ್ಯ ಚ ರಥಸ್ಥಸ್ಯ ನರ್ದಮಾನಸ್ಯ ಧೀಮತಃ ॥ ೧೬**

**ಪ್ರಾಕಂಪತ ಭುಜಃ ಸವ್ಯಃ ಸ್ವರಶ್ಚಾಸ್ಯಾವಸಜ್ಜತ ।**
**ಸಾಸ್ರಾ ಸಂಪದ್ಯತೇ ದೃಷ್ಟಿಃ ಪಶ್ಯಮಾನಸ್ಯ ಸರ್ವತಃ ॥ ೧೭**

**ಲಲಾಟೇ ಚ ರುಜಾ ಜಾತಾ ನ ಚ ಮೋಹಾನ್ನ್ಯವರ್ತತ ।**
**ತಾನ್ ಸಮೀಕ್ಷ್ಯ ಮಹೋತ್ಪಾತಾನುತ್ಥಿತಾನ್ ರೋಮಹರ್ಷಣಾನ್ ।**

**ಅಬ್ರವೀದ್ರಾಕ್ಷಸಾನ್ ಸರ್ವಾನ್ ಪ್ರಹಸನ್ ಸ ಖರಸ್ತದಾ ।**
**ಮಹೋತ್ಪಾತಾನಿಮಾನ್ ಸರ್ವಾನುತ್ಥಿತಾನ್ ಘೋರದರ್ಶನಾನ್ ॥**

**ನ ಚಿಂತಯಾಮ್ಯಹಂ ವೀರ್ಯಾದ್ಬಲವಾನ್ ದುರ್ಬಲಾನಿವ ।**
**ತಾರಾ ಅಪಿ ಶರೈಸ್ತೀಕ್ಷ್ಣೈಃ ಪಾತಯಾಮಿ ನಭಃಸ್ಥಲಾತ್ ॥ ೨೦**

---

ದಂಥ ಮಾಸಲುಬಣ್ಣದ ಧೂಳೆದ್ದಿತು (೧೩–೧೪). ಗೊರವಂಕಗಳು 'ವೀ ಚೀ ಕೂ ಚೀ' ಎಂದು ಕೂಗಿಕೊಳ್ಳುತ್ತಿದ್ದವು. ಗುಂಯ್ ಎಂದು ಶಬ್ದಮಾಡುತ್ತ ಭೀಕರವಾದ ಉಲ್ಕೆಗಳು ಎರಗಿಬಿದ್ದವು. ಗಿರಿಕಾನನಸಹಿತವಾಗಿ ನೆಲವು ನಡುಗಿತು. ರಥಾರೂಢನಾಗಿದ್ದ ಧೀರನಾದ ಖರನು ಗರ್ಜಿಸುತ್ತಿರುವಾಗಲೇ ಅವನ ಎಡ ದೋಳು ಅದುರಿತು; ಸ್ವರವು ಕುಗ್ಗಿತು. ಅವನು ಸುತ್ತಲೂ ವೀಕ್ಷಿಸುತ್ತಿರಲು ತಾನಾಗಿ ಕಣ್ಣಲ್ಲಿ ನೀರು ಬಂದಿತು (೧೫–೧೭). ಹಣೆಯಲ್ಲಿ ನೋವು ಕಾಣಿಸಿತು. ಮೈನವಿರೇಳಿಸುವ ಅಂಥ ಉತ್ಪಾತಗಳನ್ನು ಕಂಡರೂ ಖರನು ಅಜ್ಞಾನವಶನಾಗಿ ಯುದ್ಧಯಾತ್ರೆಯನ್ನು ನಿಲ್ಲಿಸಲಿಲ್ಲ. ಆತನು ಕೇಕೆಹಾಕುತ್ತ ಸಮಸ್ತರಾಕ್ಷಸರನ್ನೂ ಕುರಿತು "ಎಲೈ ಸೈನಿಕರೆ, ಈ ಉತ್ಪಾತಗಳೇನೋ ಭೀಕರವಾಗಿ ಎದ್ದು ಕಾಣುತ್ತಿವೆ. ನನ್ನ ಪರಾಕ್ರಮದೆದುರಿಗೆ ಇವುಗಳಿಂದ ಏನಾದೀತು ? ವೀರನು ಕೈಲಾಗದವರನ್ನು ಅಲಕ್ಷಿಸುವಂತೆ, ನಾನು ಇವುಗಳನ್ನು ಲೆಕ್ಕಿಸುವುದಿಲ್ಲ. ಅಗೋ ಆ ನಕ್ಷತ್ರಗಳನ್ನೂ ಕೂಡ ನನ್ನ ನಿಶಿತಾಸ್ತ್ರಗಳನ್ನು ಪ್ರಯೋಗಿಸಿ ಗಗನದಿಂದ

ಮೃತ್ಯುಂ ಮರಣಧರ್ಮೇಣ ಸಂಕ್ರುದ್ಧೋ ಯೋಜಯಾಮ್ಯಹಮ್ ।
ರಾಘವಂ ತಂ ಬಲೋತ್ಸಿಕ್ತಂ ಭ್ರಾತರಂ ಚಾಸ್ಯ ಲಕ್ಷ್ಮಣಮ್ ॥ ೨೧

ಅಹತ್ವಾ ಸಾಯಕೈಸ್ತೀಕ್ಷ್ಣೈರ್ನೋಪಾವರ್ತಿತುಮುತ್ಸಹೇ ।
ಸಕಾಮಾ ಭಗಿನೀ ಮೇಽಸ್ತು ಪೀತ್ವಾ ತು ರುಧಿರಂ ತಯೋಃ ॥ ೨೨

ಯನ್ನಿಮಿತ್ತಸ್ತು ರಾಮಸ್ಯ ಲಕ್ಷ್ಮಣಸ್ಯ ವಿಪರ್ಯಯಃ ।
ನ ಕ್ವಚಿತ್ ಪ್ರಾಪ್ತಪೂರ್ವೋ ಮೇ ಸಂಯುಗೇಷು ಪರಾಜಯಃ ॥ ೨೩

ಯುಷ್ಮಾಕಮೇತತ್ ಪ್ರತ್ಯಕ್ಷಂ ನಾನೃತಂ ಕಥಯಾಮ್ಯಹಮ್ ।
ದೇವರಾಜಮಪಿ ಕ್ರುದ್ಧೋ ಮತ್ತೈರಾವತಯಾಯಿನಮ್ ॥ ೨೪

ವಜ್ರಹಸ್ತಂ ರಣೇ ಹನ್ಯಾಂ ಕಿಂ ಪುನಸ್ತೌ ಕುಮಾನುಷೌ ।
ಸಾ ತಸ್ಯ ಗರ್ಜಿತಂ ಶ್ರುತ್ವಾ ರಾಕ್ಷಸಸ್ಯ ಮಹಾಚಮೂಃ ॥ ೨೫

ಪ್ರಹರ್ಷಮತುಲಂ ಲೇಭೇ ಮೃತ್ಯುಪಾಶಾವಪಾಶಿತಾ ।
ಸಮೀಯುಶ್ಚ ಮಹಾತ್ಮಾನೋ ಯುದ್ಧದರ್ಶನಕಾಂಕ್ಷಿಣಃ ॥ ೨೬

---

ಉರುಳಿಸಬಲ್ಲೆ ! (೧೮–೨೦). ನಾನು ಕ್ರುದ್ಧನಾದರೆ ಮೃತ್ಯುವಿಗೂ ಮರಣವನ್ನು ತಂದೊಡ್ಡಬಲ್ಲೆ ! ಬಲಗರ್ವಿತನಾದ ರಾಮನನ್ನೂ ಅವನ ತಮ್ಮ ಲಕ್ಷ್ಮಣನನ್ನೂ ತೀಕ್ಷ್ಣಾಸ್ತ್ರಗಳಿಂದ ಕೊಂದುಹಾಕದೆ ಎಂದಿಗೂ ಹಿಂದಿರುಗಲಾರೆ. ನನ್ನ ತಂಗಿ ಅವರಿಬ್ಬರ ನೆತ್ತರನ್ನು ಕುಡಿದು ತನ್ನ ಆಸೆಯನ್ನು ಪೂರೈಸಿಕೊಳ್ಳಲಿ ! (೨೧–೨೨). ಅವಳ ವಿಷಯದಲ್ಲಿ ರಾಮಲಕ್ಷ್ಮಣರು ಬಹುಕ್ರೂರವಾಗಿ ನಡೆದುಕೊಂಡಿದ್ದಾರೆ. ಎಲ್ಲಿಯೂ ನನಗೆ ಹೋರಾಟದಲ್ಲಿ ಅಪಜಯವಾದದ್ದೇ ಇಲ್ಲವೆಂಬುದು ನಿಮಗೇ ಗೊತ್ತಿದೆ. ನಾನು ಸುಳ್ಳುಹೇಳತಕ್ಕವನಲ್ಲ. ನಾನು ಕುಪಿತನಾಗಿ ನಿಂತೆನೆಂದರೆ, ದೇವರಾಜನೇ ಮದಿಸಿದ ಐರಾವತವನ್ನೇರಿ ವಜ್ರಹಸ್ತನಾಗಿ ಯುದ್ಧಕ್ಕೆ ಬಂದರೂ ಕೊಂದು ಎಸೆದೇನು ! ಅಲ್ಪರಾದ ಈ ಇಬ್ಬರು ಮನುಷ್ಯರ ಪಾಡೇನು !" ಎಂದು ಅಬ್ಬರಿಸಿ ಹೇಳಿದನು (೨೩–೨೫). ಆ ರಾಕ್ಷಸನ ರಣಗರ್ಜನೆಯನ್ನು ಕೇಳಿ ಆತನ ಸೈನಿಕರು ಹರ್ಷದಿಂದ ಉಬ್ಬಿದರು. ಮೃತ್ಯುಪಾಶವು ಕೊರಳಿಗೆ ಸುತ್ತಿ ಅವರನ್ನು ಎಳೆದಿತ್ತು ! ಮಹಾತ್ಮರಾದ ಋಷಿಗಳೂ ದೇವ

ಋಷಯೋ ದೇವಗಂಧರ್ವಾಃ ಸಿದ್ಧಾಶ್ಚ ಸಹ ಚಾರಣೈಃ ।
ಸಮೇತ್ಯ ಚೋಚುಃ ಸಹಿತಾಸ್ತೇಽನ್ಯೋನ್ಯಂ ಪುಣ್ಯಕರ್ಮಣಃ ॥ ೨೭

ಸ್ವಸ್ತಿ ಗೋಬ್ರಾಹ್ಮಣೇಭ್ಯೋಽಸ್ತು ಲೋಕಾನಾಂ ಯೇಽಭಿಸಂಗತಾಃ ।
ಜಯತಾಂ ರಾಘವಃ ಸಂಖ್ಯೇ ಪೌಲಸ್ತ್ಯಾನ್ ರಜನೀಚರಾನ್ ॥ ೨೮

ಚಕ್ರಹಸ್ತೋ ಯಥಾ ಯುದ್ಧೇ ಸರ್ವಾನಸುರಪುಂಗವಾನ್ ।
ಏತಚ್ಚಾನ್ಯಚ್ಚ ಬಹುಶೋ ಬ್ರುವಾಣಾಃ ಪರಮರ್ಷಯಃ ॥ ೨೯

ಜಾತಕೌತೂಹಲಾಸ್ತತ್ರ ವಿಮಾನಸ್ಥಾಶ್ಚ ದೇವತಾಃ ।
ದದೃಶುರ್ವಾಹಿನೀಂ ತೇಷಾಂ ರಾಕ್ಷಸಾನಾಂ ಗತಾಯುಷಾಮ್ ॥ ೩೦

ರಥೇನ ತು ಖರೋ ವೇಗಾತ್ ಸೈನ್ಯಸ್ಯಾಗ್ರಾದ್ವಿನಿಃಸೃತಃ ।
ತಂ ದೃಷ್ಟ್ವಾ ರಾಕ್ಷಸಂ ಭೂಯೋ ರಾಕ್ಷಸಾಶ್ಚ ವಿನಿಃಸೃತಾಃ ॥ ೩೧

ಶ್ಯೇನಗಾಮೀ ಪೃಥುಗ್ರೀವೋ ಯಜ್ಞಶತ್ರುರ್ವಿಹಂಗಮಃ ।
ದುರ್ಜಯಃ ಕರವೀರಾಕ್ಷಃ ಪರುಷಃ ಕಾಲಕಾರ್ಮುಕಃ ॥ ೩೨

---

ಗಂಧರ್ವರೂ ಸಿದ್ಧಚಾರಣರೂ ಯುದ್ಧವನ್ನು ನೋಡುವ ಕುತೂಹಲದಿಂದ ಒತ್ತಟ್ಟಿಗೆ ಬಂದು ಸೇರಿದರು (೨೬–೨೭). ಅವರೆಲ್ಲರೂ ಒಬ್ಬರಿಗೊಬ್ಬರು "ಗೋಬ್ರಾಹ್ಮಣರಿಗೆ ಶುಭವಾಗಲಿ ! ಜನಪ್ರಿಯರಾದ ಸಜ್ಜನರಿಗೆ ಒಳ್ಳೆಯದಾಗಲಿ! ರಾವಣನ ಪಕ್ಷದ ಈ ನಿಶಾಚರರನ್ನು ಶ್ರೀರಾಮನು ಜಯಿಸಲಿ! ಚಕ್ರಧಾರಿ ಯಾದ ಶ್ರೀಮನ್ನಾರಾಯಣನಂತೆ ರಾಘವನು ಸಮಸ್ತದೈತ್ಯವೀರರನ್ನೂ ಯುದ್ಧ ದಲ್ಲಿ ಸೋಲಿಸಲಿ ! " ಎಂದು ಮಾತನಾಡಿಕೊಳ್ಳುತ್ತಿದ್ದರು (೨೮–೨೯). ಹೀಗೆ ಋಷಿಗಳೂ ವಿಮಾನಗಳಲ್ಲಿದ್ದ ದೇವತೆಗಳೂ ಶ್ರೀರಾಮನಿಗೆ ಶುಭವಾಗಲೆಂದು ವಿಧವಿಧವಾಗಿ ಮಾತನಾಡುತ್ತ ಕುತೂಹಲದಿಂದ ಬಂದು ನೆರೆದರು. ಆಯುಸ್ಸು ಮುಗಿದಿದ್ದ ರಾಕ್ಷಸರ ಸೇನೆಯನ್ನು ಅವರು ವೀಕ್ಷಿಸುತ್ತಿದ್ದರು. ಖರನಾದರೋ ವೇಗದಿಂದ ರಥವನ್ನೋಡಿಸುತ್ತ ಸೈನ್ಯವನ್ನು ದಾಟಿ ಮುಂದೆ ನುಗ್ಗಿ ಹೋದನು. ಆಗ ಉಳಿದ ರಾಕ್ಷಸರೂ ಅವನನ್ನು ನೋಡಿ ಬೇಗಬೇಗನೆ ಹಿಂಬಾಲಿಸಿ ಹೋದರು (೩೦–೩೧). ಶ್ಯೇನಗಾಮಿ, ಪೃಥುಗ್ರಿವ, ಯಜ್ಞಶತ್ರು, ವಿಹಂಗಮ, ದುರ್ಜಯ

ಮೇಘಮಾಲೀ ಮಹಾಮಾಲೀ ಸರ್ಪಾಸ್ಯೋ ರುಧಿರಾಶನಃ ।
ದ್ವಾದಶೈತೇ ಮಹಾವೀರ್ಯಾಃ ಪ್ರತಸ್ಥುರಭಿತಃ ಖರಮ್ ॥ ೩೩

ಮಹಾಕಪಾಲಃ ಸ್ಥೂಲಾಕ್ಷಃ ಪ್ರಮಾಥೀ ತ್ರಿಶಿರಾಸ್ತಥಾ ।
ಚತ್ವಾರ ಏತೇ ಸೇನಾನ್ಯೋ ದೂಷಣಂ ಪೃಷ್ಠತೋ ಯಯುಃ ॥ ೩೪

ಸಾ ಭೀಮವೇಗಾ ಸಮರಾಭಿಕಾಮಾ
ಮಹಾಬಲಾ ರಾಕ್ಷಸವೀರಸೇನಾ ।
ತೌ ರಾಜಪುತ್ರೌ ಸಹಸಾಭ್ಯುಪೇತಾ
ಮಾಲಾ ಗ್ರಹಾಣಾಮಿವ ಚಂದ್ರಸೂರ್ಯೌ ॥ ೩೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಯೋವಿಂಶಃ ಸರ್ಗಃ

ಕರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಾಸ್ಯ ಮತ್ತು ರುಧಿರಾಶನ–ಎಂಬ ಹನ್ನೆರಡು ಮಂದಿ ಮಹಾಶೂರರು ಖರನ ಎರಡು ಪಾರ್ಶ್ವಗಳಲ್ಲಿಯೂ ನಡೆದರು. ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥಿ ಮತ್ತು ತ್ರಿಶಿರ – ಎಂಬ ನಾಲ್ವರು ಸೇನಾಪತಿಗಳು ದೂಷಣನ ಹಿಂದೆ ಪ್ರಯಾಣ ಮಾಡಿದರು (೩೨–೩೪). ಭಯಂಕರವೇಗಶಾಲಿಗಳೂ ಮಹಾಬಲಾಢ್ಯರೂ ಆದ ಆ ರಾಕ್ಷಸವೀರರ ಸೇನೆಯು ಸಮರಕ್ಕಾಗಿ ಹಾತೊರೆಯುತ್ತಿತ್ತು. ಅಂಗಾರಕಾದಿ ಗ್ರಹಗಳ ಗುಂಪಿನಂತಿದ್ದ ಆ ಸೇನೆಯು ಸೂರ್ಯಚಂದ್ರರಂತಿದ್ದ ಶ್ರೀರಾಮಲಕ್ಷ್ಮಣರ ಮೇಲೆ ಇದ್ದಕ್ಕಿದ್ದಂತೆ ಧಾಳಿಮಾಡಲು ನುಗ್ಗಿಹೋಯಿತು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತಮೂರನೆಯ ಸರ್ಗ

## ಚತುರ್ವಿಂಶಃ ಸರ್ಗಃ

### ರಾಮಖರಬಲಸಂನಿಕರ್ಷಃ

ಆಶ್ರಮಂ ಪ್ರತಿಯಾತೇ ತು ಖರೇ ಖರಪರಾಕ್ರಮೇ ।
ತಾನೇವೌತ್ಪಾತಿಕಾನ್ ರಾಮಃ ಸಹ ಭ್ರಾತ್ರಾ ದದರ್ಶ ಹ ॥ ೧

ತಾನುತ್ಪಾತಾನ್ ಮಹಾಘೋರಾನುತ್ಥಿತಾನ್ ರೋಮಹರ್ಷಣಾನ್ ।
ಪ್ರಜಾನಾಮಹಿತಾನ್ ದೃಷ್ಟ್ವಾ ರಾಮೋ ಲಕ್ಷ್ಮಣಮಬ್ರವೀತ್ ॥ ೨

ಇಮಾನ್ ಪಶ್ಯ ಮಹಾಬಾಹೋ ಸರ್ವಭೂತಾಪಹಾರಿಣಃ ।
ಸಮುತ್ಥಿತಾನ್ ಮಹೋತ್ಪಾತಾನ್ ಸಂಹರ್ತುಂ ಸರ್ವರಾಕ್ಷಸಾನ್ ॥ ೩

ಅಮೀ ರುಧಿರಧಾರಾಸ್ತು ವಿಸೃಜಂತಃ ಖರಸ್ವನಾಃ ।
ವ್ಯೋಮ್ನಿ ಮೇಘಾ ವಿವರ್ತಂತೇ ಪರುಷಾ ಗರ್ದಭಾರುಣಾಃ ॥ ೪

ಸಧೂಮಾಶ್ಚ ಶರಾಃ ಸರ್ವೇ ಮಮ ಯುದ್ಧಾಭಿನಂದಿನಃ ।
ರುಕ್ಮಪೃಷ್ಠಾನಿ ಚಾಪಾನಿ ವಿಚೇಷ್ಟಂತೇ ಚ ಲಕ್ಷ್ಮಣ ॥ ೫

### ಸರ್ಗ ೨೪

#### ಶ್ರೀರಾಮನು ಖರನ ಸೈನ್ಯವನ್ನು ಕಂಡು ಯುದ್ಧಕ್ಕೆ ಸಿದ್ಧನಾಗುವುದು

ಉಗ್ರಪರಾಕ್ರಮಿಯಾದ ಖರನು ಶ್ರೀರಾಮನ ಪರ್ಣಶಾಲೆಯನ್ನು ಸಮೀಪಿಸುತ್ತಿರಲು, ಖರನಿಗೆ ಸಂಭವಿಸಿದ ಉತ್ಪಾತಗಳನ್ನು ಶ್ರೀರಾಮನು ಲಕ್ಷ್ಮಣನೊಡನೆ ಗಮನಿಸಿ ನೋಡುತ್ತಿದ್ದನು. ಮೈನವಿರೇಳಿಸುವಂತಹ ಘೋರವಾದ ಆ ಉತ್ಪಾತಗಳು ಪ್ರಜೆಗಳಿಗೆ ಕೇಡನ್ನು ಸೂಚಿಸುತ್ತಿದ್ದವು (೧–೨). ಅವನ್ನು ಪರಿಶೀಲಿಸುತ್ತಿದ್ದ ಶ್ರೀರಾಮನು ಲಕ್ಷ್ಮಣನನ್ನು ಕುರಿತು " ಮಹಾಬಾಹು–ಲಕ್ಷ್ಮಣ, ಸಕಲಪ್ರಾಣಿಗಳಿಗೂ ಉಪದ್ರವಕಾರಿಗಳಾಗಿ ಎದ್ದಿರುವ ಈ ಉತ್ಪಾತಗಳನ್ನು ನೋಡು. ಇವು ಪ್ರಕೃತದಲ್ಲಿ ರಾಕ್ಷಸರ ಸಂಹಾರವಾಗುವುದೆಂದು ಸೂಚಿಸುತ್ತವೆ (೩). ಕೆಮ್ಮೋಡಗಳು ಕಠೋರವಾಗಿ ಗುಡುಗುತ್ತ ಕೆನ್ನೀರನ್ನು ಸುರಿಸುತ್ತಿವೆ. ಅವು ಆಕಾಶದಲ್ಲಿ ಭೀಕರವಾಗಿ ಉರುಳಿ ಹೊಯ್ದಾಡುತ್ತಿವೆ. ಲಕ್ಷ್ಮಣ, ಯುದ್ಧವು ಒದಗಿಬಂದಿತೆಂಬ ಹರ್ಷದಿಂದ ನನ್ನ ಬಾಣಗಳೆಲ್ಲವೂ ಹೊಗೆಯುಗುಳುತ್ತ

ಯಾದೃಶಾ ಇಹ ಕೂಜಂತಿ ಪಕ್ಷಿಣೋ ವನಚಾರಿಣಃ ।
ಅಗ್ರತೋ ನೋ ಭಯಂ ಪ್ರಾಪ್ತಂ ಸಂಶಯೋ ಜೀವಿತಸ್ಯ ಚ ॥ ೬

ಸಂಪ್ರಹಾರಸ್ತು ಸುಮಹಾನ್ ಭವಿಷ್ಯತಿ ನ ಸಂಶಯಃ ।
ಅಯಮಾಖ್ಯಾತಿ ಮೇ ಬಾಹುಃ ಸ್ಫುರಮಾಣೋ ಮುಹುರ್ಮುಹುಃ ॥

ಸಂನಿಕರ್ಷೇ ತು ನಃ ಶೂರ ಜಯಂ ಶತ್ರೋಃ ಪರಾಜಯಮ್ ।
ಸಪ್ರಭಂ ಚ ಪ್ರಸನ್ನಂ ಚ ತವ ವಕ್ತ್ರಂ ಹಿ ಲಕ್ಷ್ಯತೇ ॥ ೮

ಉದ್ಯತಾನಾಂ ಹಿ ಯುದ್ಧಾರ್ಥಂ ಯೇಷಾಂ ಭವತಿ ಲಕ್ಷ್ಮಣ ।
ನಿಷ್ಪ್ರಭಂ ವದನಂ ತೇಷಾಂ ಭವತ್ಯಾಯುಃಪರಿಕ್ಷಯೇ ॥ ೯

ರಕ್ಷಸಾಂ ನರ್ದತಾಂ ಘೋರಃ ಶ್ರೂಯತೇ ಚ ಮಹಾಧ್ವನಿಃ ।
ಆಹತಾನಾಂ ಚ ಭೇರೀಣಾಂ ರಾಕ್ಷಸೈಃ ಕ್ರೂರಕರ್ಮಭಿಃ ॥ ೧೦

ಅನಾಗತವಿಧಾನಂ ತು ಕರ್ತವ್ಯಂ ಶುಭಮಿಚ್ಛತಾ ।
ಆಪದಂ ಶಂಕಮಾನೇನ ಪುರುಷೇಣ ವಿಪಶ್ಚಿತಾ ॥ ೧೧

---

(ಬತ್ತಳಿಕೆಯಲ್ಲಿ) ಮಿಸುಕುತ್ತಿವೆ! ಬಂಗಾರದ ಹಿಡಿಕೈಯುಳ್ಳ ಬಿಲ್ಲುಗಳು (ಉತ್ಸಾಹದಿಂದ) ಕೊಸರಾಡುತ್ತಿವೆ! (೪–೫). ವನಚಾರಿಗಳಾದ ಈ ಪಕ್ಷಿಗಳು ಕೂಗುವುದನ್ನು ಗಮನಿಸಿದರೆ, ನಮ್ಮ ಸಮೀಪದಲ್ಲಿಯೇ ಭಯಂಕರ ಕೃತ್ಯವು ನಡೆಯುವುದೆಂದೂ ಪ್ರಾಣಹಾನಿಯು ಸಂಭವಿಸುವುದೆಂದೂ ತೋರುತ್ತದೆ. ಸಂದೇಹವಿಲ್ಲದೆ ಭೀಕರವಾದ ಹೊಡೆದಾಟವು ನಡೆಯುತ್ತದೆ. ನನ್ನ ಬಲದೋಳು ಮತ್ತೆ ಮತ್ತೆ ಹಾರುತ್ತಿದೆ. ನಮಗೆ ಜಯವೂ ಶತ್ರುವಿಗೆ ಪರಾಜಯವೂ ಸಮೀಪಿಸಿದೆಯೆಂಬುದನ್ನು ಇದು ಸಾರುತ್ತದೆ. ಅಲ್ಲದೆ, ಹೇ ವೀರಾಗ್ರಣಿ, ನಿನ್ನ ಮುಖವು ಕಾಂತಿಯುಕ್ತವಾಗಿ ಎಷ್ಟು ಪ್ರಸನ್ನವಾಗಿ ಕಾಣುತ್ತಿದೆ! (೬–೮). ಲಕ್ಷ್ಮಣ, ಯುದ್ಧದಲ್ಲಿ ತೊಡಗಿದವರಿಗೆ ಆಯುಸ್ಸು ಮುಗಿಯುತ್ತ ಬಂದಾಗ ಮುಖವು ಕಾಂತಿಹೀನವಾಗುವುದು. ಅಗೋ! ರಾಕ್ಷಸರ ಘೋರಗರ್ಜನೆಯು ಕೇಳಿಸುತ್ತಿದೆ. ಆ ಕ್ರೂರಾತ್ಮರು ಬಾರಿಸುತ್ತಿರುವ ಭೇರಿಗಳ ಸದ್ದು! ಮುಂದೆ ಅನರ್ಥವು ಸಂಭವಿಸೀತೆಂಬ ಶಂಕೆಯಿದ್ದಾಗ ದೂರದರ್ಶಿಯಾದ ಮನುಷ್ಯನು ಮೊದಲೇ ಅದಕ್ಕೆ ಪರಿಹಾರವನ್ನು ಚಿಂತಿಸಬೇಕು. ಶುಭವನ್ನು ಬಯಸತಕ್ಕವನು ಆಪತ್ತಿಗೆ ಪರಿಹಾರವನ್ನು ನೋಡಿಕೊಳ್ಳಬೇಕು (೯–೧೧).

ತಸ್ಮಾದ್ಗೃಹೀತ್ವಾ ವೈದೇಹಿಂ ಶರಪಾಣಿರ್ಧನುರ್ಧರಃ ।
ಗುಹಾಮಾಶ್ರಯ ಶೈಲಸ್ಯ ದುರ್ಗಾಂ ಪಾದಪಸಂಕುಲಾಮ್ ॥ ೧೨

ಪ್ರತಿಕೂಲಿತುಮಿಚ್ಛಾಮಿ ನ ಹಿ ವಾಕ್ಯಮಿದಂ ತ್ವಯಾ ।
ಶಾಪಿತೋ ಮಮ ಪಾದಾಭ್ಯಾಂ ಗಮ್ಯತಾಂ ವತ್ಸ ಮಾ ಚಿರಮ್ ॥

ತ್ವಂ ಹಿ ಶೂರಶ್ಚ ಬಲವಾನ್ ಹನ್ಯಾ ಹ್ಯೇತಾನ್ನ ಸಂಶಯಃ ।
ಸ್ವಯಂ ತು ಹಂತುಮಿಚ್ಛಾಮಿ ಸರ್ವಾನೇವ ನಿಶಾಚರಾನ್ ॥ ೧೪

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಸಹ ಸೀತಯಾ ।
ಶರಾನಾದಾಯ ಚಾಪಂ ಚ ಗುಹಾಂ ದುರ್ಗಾಂ ಸಮಾಶ್ರಯತ್ ॥

ತಸ್ಮಿನ್ ಪ್ರವಿಷ್ಟೇ ತು ಗುಹಾಂ ಲಕ್ಷ್ಮಣೇ ಸಹ ಸೀತಯಾ ।
ಹಂತ ನಿರ್ಯುಕ್ತಮಿತ್ಯುಕ್ತ್ವಾ ರಾಮಃ ಕವಚಮಾವಿಶತ್ ॥ ೧೬

ಸ ತೇನಾಗ್ನಿನಿಕಾಶೇನ ಕವಚೇನ ವಿಭೂಷಿತಃ ।
ಬಭೂವ ರಾಮಸ್ತಿಮಿರೇ ವಿಧೂಮೋಽಗ್ನಿರಿವೋತ್ಥಿತಃ ॥ ೧೭

---

ಆದ್ದರಿಂದ, ತಮ್ಮ, ನೀನು ವೈದೇಹಿಯನ್ನು ಕರೆದುಕೊಂಡು ಆ ಬೆಟ್ಟದ ಗುಹೆಯೊಳಗೆ ಹೋಗು. ಅದು ಮರಗಳ ಮರೆಯಲ್ಲಿ ದುರ್ಗಮವಾಗಿದೆ. ಬಿಲ್ಲು ಬಾಣಗಳನ್ನು ಧರಿಸಿ ಸಜ್ಜಾಗಿರು (೧೨). ನನ್ನ ಮಾತನ್ನು ಮೀರಬೇಡ. ಅದು ಮಾತ್ರ ನನಗೆ ಸೇರದು. ನನ್ನ ಪಾದಗಳ ಆಣೆ! ತಮ್ಮ, ಹೊರಡು. ತಡ ಮಾಡಬೇಡ. ನೀನು ಶೂರನೂ ಬಲಾಢ್ಯನೂ ಎಂಬುದರಲ್ಲಿ ಸಂದೇಹವಿಲ್ಲ. ನಿಸ್ಸಂಶಯವಾಗಿ ಇವರನ್ನು ನೀನು ಸಂಹರಿಸಬಲ್ಲೆ. ಆದರೆ ಈ ನಿಶಾಚರರನ್ನು ನಾನೇ ಸಂಹರಿಸಬೇಕೆಂದಿದ್ದೇನೆ" ಎಂದು ಹೇಳಿದನು (೧೩–೧೪). ಆಗ ಲಕ್ಷ್ಮಣನು (ಮರುಮಾತಾಡದೆ) ಧನುರ್ಬಾಣಗಳನ್ನು ಹಿಡಿದು ಸೀತೆಯೊಡನೆ ದುರ್ಗಮವಾದ ಆ ಗುಹೆಯನ್ನು ಸೇರಿದನು. ಲಕ್ಷ್ಮಣನು ಸೀತೆಯೊಡನೆ ಗುಹಾ ಪ್ರವೇಶಮಾಡುವುದನ್ನೇ ನೋಡುತ್ತಿದ್ದ ಶ್ರೀರಾಮನು "ಅಬ್ಬ! ಒಂದು ವ್ಯವಸ್ಥೆ ಪೂರೈಸಿತು!" ಎಂದು ಉದ್ಗರಿಸಿ ಕವಚವನ್ನು ತೊಟ್ಟನು (೧೫–೧೬). ಬೆಂಕಿಯಂತೆ ಬೆಳಗುತ್ತಿದ್ದ ಕವಚವನ್ನು ತೊಟ್ಟ ಶ್ರೀರಾಮನು, ಕತ್ತಲಲ್ಲಿ ಹೊಗೆಯಿಲ್ಲದ

ಸ ಚಾಪಮುದ್ಯಮ್ಯ ಮಹಚ್ಛರಾನಾದಾಯ ವೀರ್ಯವಾನ್ ।
ಬಭೂವಾವಸ್ಥಿತಸ್ತತ್ರ ಜ್ಯಾಸ್ವನೈಃ ಪೂರಯನ್ ದಿಶಃ ॥ ೧೮

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಸಹ ಚಾರಣೈಃ ।
ಸಮೇಯುಶ್ಚ ಮಹಾತ್ಮಾನೋ ಯುದ್ಧದರ್ಶನಕಾಂಕ್ಷಿಣಃ ॥ ೧೯

ಋಷಯಶ್ಚ ಮಹಾತ್ಮಾನೋ ಲೋಕೇ ಬ್ರಹ್ಮರ್ಷಿಸತ್ತಮಾಃ ।
ಸಮೇತ್ಯ ಚೋಚುಃ ಸಹಿತಾ ಅನ್ಯೋಽನ್ಯಂ ಪುಣ್ಯಕರ್ಮಣಃ ॥ ೨೦

ಸ್ವಸ್ತಿ ಗೋಬ್ರಾಹ್ಮಣೇಭ್ಯೋಽಸ್ತು ಲೋಕಾನಾಂ ಯೇಽಭಿಸಂಗತಾಃ ।
ಜಯತಾಂ ರಾಘವೋ ಯುದ್ಧೇ ಪೌಲಸ್ತ್ಯಾನ್ ರಜನೀಚರಾನ್ ॥

ಚಕ್ರಹಸ್ತೋ ಯಥಾ ಯುದ್ಧೇ ಸರ್ವಾನಸುರಪುಂಗವಾನ್ ।
ಏವಮುಕ್ತ್ವಾ ಪುನಃ ಪ್ರೋಚುರಾಲೋಕ್ಯ ಚ ಪರಸ್ಪರಮ್ ॥ ೨೨

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಏಕಶ್ಚ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥ ೨೩

---

ಅಗ್ನಿಯಂತೆ ವಿರಾಜಿಸಿದನು. ಆ ವೀರನು ಪ್ರಚಂಡವಾದ ಕೋದಂಡವನ್ನು ಹಿಡಿದು ಹೆದೆಯನ್ನು ಮಿಡಿಯುತ್ತ ಝೇಂಕಾರಗಳಿಂದ ದಿಕ್ಕುದಿಕ್ಕುಗಳನ್ನು ಮೊಳಗಿಸುತ್ತ ನಿಂತನು (೧೬–೧೮). ದೇವಗಂಧರ್ವರೂ ಸಿದ್ಧಚಾರಣರೂ ಯುದ್ಧವನ್ನು ನೋಡಲು ಕುತೂಹಲದಿಂದ ಬಂದು ನೆರೆದರು. ಪುಣ್ಯಶಾಲಿಗಳಾದ ಋಷಿಗಳೂ ಬ್ರಹ್ಮರ್ಷಿಗಳೂ ಬಂದರು. "ಗೋಬ್ರಾಹ್ಮಣರಿಗೆ ಶುಭವಾಗಲಿ ! ಜನಪ್ರಿಯರಾದ ಸಜ್ಜನರಿಗೆ ಶುಭವಾಗಲಿ ! ರಾಘವನು ರಾವಣನ ಪಕ್ಷದ ನಿಶಾಚರರನ್ನು ಯುದ್ಧದಲ್ಲಿ ಗೆಲ್ಲುವಂತಾಗಲಿ ! (೧೯–೨೧). ಚಕ್ರಧಾರಿಯಾದ ಮಹಾವಿಷ್ಣುವಿನಂತೆ ಶ್ರೀರಾಮನು ಈ ರಾಕ್ಷಸವೀರರನ್ನು ಜಯಿಸಲಿ !" ಎಂದು ಹೇಳುತ್ತ ಭೂಮಿಯ ಕಡೆ ನೋಡುತ್ತ ಅವರೆಲ್ಲರೂ ತಮ್ಮೊಳಗೆ ಹೀಗೆ ಮಾತಾಡಿಕೊಂಡರು : "ಅದ್ಭುತಸಾಮರ್ಥ್ಯವುಳ್ಳ ರಾಕ್ಷಸರು ಹದಿನಾಲ್ಕು ಸಾವಿರ ಇದ್ದಾರೆ. ಧರ್ಮಾತ್ಮನಾದ ಶ್ರೀರಾಮನು ಒಬ್ಬನೇ. ಯುದ್ಧವು ಹೇಗೆ ಪರಿಣಮಿಸುವುದೋ !" (೨೨–೨೩). ಹೀಗೆ ಹೇಳುತ್ತ ವಾನಪ್ರಸ್ಥರಾದ

ಇತಿ ರಾಜರ್ಷಯಃ ಸಿದ್ಧಾಃ ಸಗಣಾಶ್ಚ ದ್ವಿಜರ್ಷಭಾಃ ।
ಜಾತಕೌತೂಹಲಾಸ್ತಸ್ಥುರ್ವಿಮಾನಸ್ಥಾಶ್ಚ ದೇವತಾಃ ॥ ೨೪

ಆವಿಷ್ಟಂ ತೇಜಸಾ ರಾಮಂ ಸಂಗ್ರಾಮಶಿರಸಿ ಸ್ಥಿತಮ್ ।
ದೃಷ್ಟ್ವಾ ಸರ್ವಾಣಿ ಭೂತಾನಿ ಭಯಾದ್ವಿವ್ಯಥಿರೇ ತದಾ ॥ ೨೫

ರೂಪಮಪ್ರತಿಮಂ ತಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಬಭೂವ ರೂಪಂ ಕ್ರುದ್ಧಸ್ಯ ರುದ್ರಸ್ಯೇವ ಪಿನಾಕಿನಃ ॥ ೨೬

ಇತಿ ಸಂಭಾಷ್ಯಮಾಣೇ ತು ದೇವಗಂಧರ್ವಚಾರಣೈಃ ।
ತತೋ ಗಂಭೀರನಿರ್ಹ್ರಾದಂ ಘೋರವರ್ಮಾಯುಧಧ್ವಜಮ್ ॥ ೨೭

ಅನೀಕಂ ಯಾತುಧಾನಾನಾಂ ಸಮಂತಾತ್ ಪ್ರತ್ಯದೃಶ್ಯತ ।
ಸಿಂಹನಾದಂ ವಿಸೃಜತಾಮನ್ಯೋನ್ಯಮಭಿಗರ್ಜತಾಮ್ ॥ ೨೮

---

ರಾಜರ್ಷಿಗಳೂ ಸಿದ್ಧರೂ ವಿದ್ಯಾಧರಾದಿ ದೇವಗಣಗಳೂ ಬ್ರಾಹ್ಮಣೋತ್ತಮರೂ ವಿಮಾನಾರೂಢರಾದ ದೇವತೆಗಳೂ ಕುತೂಹಲದಿಂದ ನೋಡುತ್ತ ನಿಂತರು (೨೪). ಶ್ರೀರಾಮನಾದರೋ ತೇಜಸ್ಸಿನಿಂದ ಬೆಳಗುತ್ತ ಸಂಗ್ರಾಮಕ್ಕೆ ಸಿದ್ಧನಾಗಿ ವೀರಾವೇಶದಿಂದ ನಿಂತಿದ್ದನು. ಅವನನ್ನು ನೋಡಿ ಸಕಲ ಜೀವರಾಶಿಗಳೂ ಭಯದಿಂದ ತಲ್ಲಣಿಸಿದವು. ನಿಷ್ಕಾರಣವಾಗಿ ಯಾರಿಗೂ ಶ್ರೀರಾಮನು ಕಷ್ಟವನ್ನು ಕೊಡತಕ್ಕವನಲ್ಲ. ಅಂಥ ಮಹಾಪುರುಷನ ರೂಪವು ಈಗ ಹಿಂದೆಂದೂ ಕಾಣದ ರೌದ್ರಕಳೆಯನ್ನು ತಳೆಯಿತು. (ರಾಕ್ಷಸರ ದುಷ್ಕೃತ್ಯಗಳನ್ನು ಸ್ಮರಿಸಿಕೊಂಡು) ಕ್ರುದ್ಧನಾದ ಆತನು ಪಿನಾಕಧಾರಿಯಾದ ರುದ್ರನಂತೆ ಕಾಣಿಸಿದನು (೨೫–೨೬). ದೇವಗಂಧರ್ವಾದಿಗಳು ಆ ವಿಷಯವನ್ನೇ ಮಾತನಾಡಿಕೊಳ್ಳುತ್ತಿರಲಾಗಿ, ಕೋಲಾಹಲಶಬ್ದವನ್ನು ಮಾಡುತ್ತಿದ್ದ ರಾಕ್ಷಸರ ಪಡೆಯು ಹತ್ತಿರದಲ್ಲಿ ಗೋಚರಿಸಿತು. ಆ ರಾಕ್ಷಸರು ಬಲವಾದ ಕವಚಗಳನ್ನು ತೊಟ್ಟು ಭಯಂಕರವಾದ ಆಯುಧಗಳನ್ನು ಧರಿಸಿ ಧ್ವಜಗಳನ್ನು ಎತ್ತಿಹಿಡಿದಿದ್ದರು. ಸಿಂಹನಾದವನ್ನು ಗೈಯುತ್ತ ಒಬ್ಬರನ್ನೊಬ್ಬರು ನೋಡಿ ಹೂಂಕರಿಸುತ್ತಿದ್ದರು (೨೭–೨೮).

*

ಚಾಪಾನಿ ವಿಸ್ಫಾರಯತಾಂ ಜೃಂಭತಾಂ ಚಾಪ್ಯಭೀಕ್ಷ್ಣಶಃ ।
ವಿಪ್ರಘುಷ್ಟಸ್ವನಾನಾಂ ಚ ದುಂದುಭೀಂಶ್ಚಾಪಿ ನಿಘ್ನತಾಮ್ ॥ ೨೯

ತೇಷಾಂ ಸುತುಮುಲಃ ಶಬ್ದಃ ಪೂರಯಾಮಾಸ ತದ್ವನಮ್ ।
ತೇನ ಶಬ್ದೇನ ವಿತ್ರಸ್ತಾಃ ಶ್ವಾಪದಾ ವನಚಾರಿಣಃ ॥ ೩೦

ದುದ್ರುವುರ್ಯತ್ರ ನಿಃಶಬ್ದಂ ಪೃಷ್ಠತೋ ನ ವ್ಯಲೋಕಯನ್ ।
ತತ್ತ್ವನೀಕಂ ಮಹಾವೇಗಂ ರಾಮಂ ಸಮುಪಸರ್ಪತ ॥ ೩೧

ಧೃತನಾನಾಪ್ರಹರಣಂ ಗಂಭೀರಂ ಸಾಗರೋಪಮಮ್ ।
ರಾಮೋಽಪಿ ಚಾರಯಂಶ್ಚಕ್ಷುಃ ಸರ್ವತೋ ರಣಪಂಡಿತಃ ॥ ೩೨

ದದರ್ಶ ಖರಸೈನ್ಯಂ ತದ್ಯುದ್ಧಾಭಿಮುಖಮುತ್ಥಿತಮ್ ।
ವಿತತ್ಯ ಚ ಧನುರ್ಭೀಮಂ ತೂಣ್ಯಾಶ್ಚೋದ್ಧೃತ್ಯ ಸಾಯಕಾನ್ ॥

ಕ್ರೋಧಮಾಹಾರಯತ್ತೀವ್ರಂ ವಧಾರ್ಥಂ ಸರ್ವರಕ್ಷಸಾಮ್ ।
ದುಷ್ಪ್ರೇಕ್ಷಃ ಸೋಽಭವತ್ ಕ್ರುದ್ಧೋ ಯುಗಾಂತಾಗ್ನಿರಿವ ಜ್ವಲನ್ ॥

---

ಬಿಲ್ಲುಗಳನ್ನು ಮಿಡಿಯುತ್ತ, ಮತ್ತೆ ಮತ್ತೆ ಉತ್ಸಾಹದಿಂದ ಮೈಯುಬ್ಬಿಸುತ್ತಿದ್ದರು. ಗಟ್ಟಿಯಾಗಿ ಕೇಕೆಹಾಕುತ್ತ ರಣದುಂದುಭಿಗಳನ್ನು ಹೊಯ್ಯುತ್ತಿದ್ದರು. ಅವರ ಕೋಲಾಹಲವು ಕಾಡಿನಲ್ಲಿ ಮೊಳಗಲು, ವನ್ಯಜಂತುಗಳು ದಿಕ್ಕುಗೆಟ್ಟು ಪಲಾಯನಮಾಡಿದವು. ಅವು ಗರ್ಜಿಸಲಿಲ್ಲ, ಕೂಗಲಿಲ್ಲ, ಹಿಂದಿರುಗಿ ನೋಡಲಿಲ್ಲ! ರಾಕ್ಷಸಪಡೆಯು ಮಹಾವೇಗದಿಂದ ಶ್ರೀರಾಮನ ಕಡೆಗೆ ಧಾವಿಸಿತು (೨೯–೩೧). ವಿವಿಧಾಯುಧಗಳನ್ನು ಧರಿಸಿದ್ದ ಆ ಪಡೆಯು ಮಹಾಸಾಗರದಂತೆ ಭೀಕರವೂ ವಿಶಾಲವೂ ಆಗಿತ್ತು. ಇತ್ತ ರಣಪಂಡಿತನಾದ ಶ್ರೀರಾಮನು ಸುತ್ತಲೂ ಕಣ್ಣುಹೊರಳಿಸಿ, ಯುದ್ಧಾಭಿಮುಖವಾದ ಖರಸೇನೆಯನ್ನು ಒಮ್ಮೆ ನೋಡಿದನು. ಭೀಕರವಾದ ತನ್ನ ಕೋದಂಡವನ್ನು ಜಗ್ಗಿ, ಬತ್ತಳಿಕೆಯಿಂದ ಬಾಣಗಳನ್ನು ಹಿರಿದನು (೩೨–೩೩). ಬಂದಿದ್ದ ಸಮಸ್ತ ರಾಕ್ಷಸರನ್ನೂ ವಧಿಸಬೇಕೆಂದು ಸಂಕಲ್ಪಿಸಿ, ತೀವ್ರವಾದ ಕೋಪವನ್ನು ತನ್ನಲ್ಲಿ ಆವಾಹಿಸಿಕೊಂಡನು; ಪ್ರಳಯ

ತಂ ದೃಷ್ಟ್ವಾ ತೇಜಸಾವಿಷ್ಟಂ ಪ್ರಾದ್ರವನ್ ವನದೇವತಾಃ ।
ತಸ್ಯ ಕ್ರುದ್ಧಸ್ಯ ರೂಪಂ ತು ರಾಮಸ್ಯ ದದೃಶೇ ತದಾ ॥ ೩೫

ದಕ್ಷಸ್ಯೇವ ಕ್ರತುಂ ಹಂತುಮುದ್ಯತಸ್ಯ ಪಿನಾಕಿನಃ ॥

ತತ್ಕಾರ್ಮುಕೈರಾಭರಣೈರ್ಧ್ವಜೈಶ್ಚ
ತೈರ್ವರ್ಮಭಿಶ್ಚಾಗ್ನಿಸಮಾನವರ್ಣೈಃ ।
ಬಭೂವ ಸೈನ್ಯಂ ಪಿಶಿತಾಶನಾನಾಂ
ಸೂರ್ಯೋದಯೇ ನೀಲಮಿವಾಭ್ರವೃಂದಮ್ ॥ ೩೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುರ್ವಿಂಶಃ ಸರ್ಗಃ

ಕಾಲಾಗ್ನಿಯಂತೆ ಪ್ರಜ್ವಲಿಸುತ್ತ ಕೋಪದ ಕೆಂಡವಾದನು. ತೇಜೋಮಯ ವಾದ ಶ್ರೀರಾಮನ ರೂಪವನ್ನು ಕಂಡು ಕಣ್ಣು ಕೋರೈಸಿ ವನದೇವತೆಗಳು ಹೆದರಿ ಓಡಿಹೋದರು. ಆಗ ಕ್ರುದ್ಧನಾದ ಶ್ರೀರಾಮನ ರೂಪವು ದಕ್ಷಯಾಗವನ್ನು ಧ್ವಂಸಮಾಡಲು ಉದ್ಯುಕ್ತನಾದ ಪರಮೇಶ್ವರನ ರೂಪದಂತೆ ಕಂಗೊಳಿಸಿತು (೩೪–೩೫). ರಾಕ್ಷಸರ ಸೈನ್ಯವು ಸೂರ್ಯೋದಯಕಾಲದಲ್ಲಿನ ಕಪ್ಪಾದ ಮೇಘ ಪಂಕ್ತಿಯಂತೆ ಕಾಣಿಸಿತು. ಕಪ್ಪುಮೋಡಗಳಂತೆ ರಾಕ್ಷಸರಿದ್ದರು. ಬೆಂಕಿಯಂತೆ ಬೆಳಗುತ್ತಿದ್ದ ಅವರ ಕವಚಗಳು ಮತ್ತು ಆಭರಣಗಳು ಸೂರ್ಯಕಿರಣಗಳಂತೆಯೂ ಬಿಲ್ಲುಗಳು ಕಾಮನಬಿಲ್ಲುಗಳಂತೆಯೂ ಧ್ವಜಗಳು ಉತ್ಪಾತಗಳಂತೆಯೂ ತೋರುತ್ತಿದ್ದವು (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತುನಾಲ್ಕನೆಯ ಸರ್ಗ

## ಪಂಚವಿಂಶಃ ಸರ್ಗಃ

### ಖರಸೈನ್ಯಾವಮರ್ದಃ

ಅವಷ್ಟಬ್ಧಧನುಂ ರಾಮಂ ಕ್ರುದ್ಧಂ ಚ ರಿಪುಘಾತಿನಮ್ ।
ದದರ್ಶಾಶ್ರಮಮಾಗಮ್ಯ ಖರಃ ಸಹ ಪುರಃಸರೈಃ ॥ ೧

ತಂ ದೃಷ್ಟ್ವಾ ಸಶರಂ ಚಾಪಮುದ್ಯಮ್ಯ ಖರನಿಃಸ್ವನಮ್ ।
ರಾಮಸ್ಯಾಭಿಮುಖಂ ಸೂತಂ ಚೋದ್ಯತಾಮಿತ್ಯಚೋದಯತ್ ॥ ೨

ಸ ಖರಸ್ಯಾಜ್ಞಯಾ ಸೂತಸ್ತುರಗಾನ್ ಸಮಚೋದಯತ್ ।
ಯತ್ರ ರಾಮೋ ಮಹಾಬಾಹುರೇಕೋ ಧೂನ್ವನ್ ಸ್ಥಿತೋ ಧನುಃ ॥

ತಂ ತು ನಿಷ್ಪತಿತಂ ದೃಷ್ಟ್ವಾ ಸರ್ವೇ ತೇ ರಜನೀಚರಾಃ ।
ನರ್ದಮಾನಾ ಮಹಾನಾದಂ ಸಚಿವಾಃ ಪರ್ಯವಾರಯನ್ ॥ ೪

ಸ ತೇಷಾಂ ಯಾತುಧಾನಾನಾಂ ಮಧ್ಯೇ ರಥಗತಃ ಖರಃ ।
ಬಭೂವ ಮಧ್ಯೇ ತಾರಾಣಾಂ ಲೋಹಿತಾಂಗ ಇವೋದಿತಃ ॥ ೫

## ಸರ್ಗ ೨೫

### ಖರನ ಸೈನ್ಯದೊಡನೆ ಶ್ರೀರಾಮನ ಯುದ್ಧ

ಖರನು ತನ್ನ ಸೇನಾಪಡೆಯೊಡನೆ ಶ್ರೀರಾಮನ ಆಶ್ರಮವನ್ನು ಸಮೀಪಿಸಿ, ವೈರಿಗಳನ್ನು ವಧಿಸಬೇಕೆಂಬ ಸಂಕಲ್ಪದಿಂದ ಶ್ರೀರಾಮನು ಕ್ರುದ್ಧನಾಗಿ ಕೋದಂಡವನ್ನು ಊರಿಕೊಂಡು ಸಜ್ಜಾಗಿ ನಿಂತಿರುವುದನ್ನು ಕಂಡನು (೧). ಕೂಡಲೇ ಖರನು ಧನುರ್ಬಾಣಗಳನ್ನು ಹಿಡಿದು 'ಸಾರಥಿ, ರಾಮನಿರುವೆಡೆಗೆ ರಥವನ್ನು ಓಡಿಸು!' ಎಂದು ಕಠೋರಧ್ವನಿಯಿಂದ ಆಜ್ಞಾಪಿಸಿದನು. ಆಗ ಆಜಾನುಬಾಹುವಾದ ಶ್ರೀರಾಮನು ಧನುಸ್ಸನ್ನು ಝೇಂಕರಿಸುತ್ತ ಒಂಟಿಗನಾಗಿ ನಿಂತೆಡೆಗೆ, ಖರನ ಸಾರಥಿಯು ಕುದುರೆಗಳನ್ನು ದೌಡಾಯಿಸಿದನು (೨-೩). ಹೀಗೆ ಖರನು ಮುಂದೆ ನುಗ್ಗುವುದನ್ನು ಕಂಡು ಅವನ ಸಚಿವರಾದ ರಾಕ್ಷಸರೆಲ್ಲರೂ ಗಟ್ಟಿಯಾಗಿ ಗರ್ಜಿಸುತ್ತ ಅವನ ನೆರವಿಗಾಗಿ ಸುತ್ತುಗಟ್ಟಿಕೊಂಡು ಬಂದರು. ಆ ರಾಕ್ಷಸರು ಸುತ್ತುವರಿದು ಜೊತೆಗೂಡಿ ಬರುತ್ತಿರಲು, ನಕ್ಷತ್ರಗಳ ಮಧ್ಯದಲ್ಲಿದ್ದ ಅಂಗಾರಕ

ತತಃ ಶರಸಹಸ್ರೇಣ ರಾಮಮಪ್ರತಿಮೌಜಸಮ್ ।
ಅರ್ದಯಿತ್ವಾ ಮಹಾನಾದಂ ನನಾದ ಸಮರೇ ಖರಃ ॥ ೬

ತತಸ್ತಂ ಭೀಮಧನ್ವಾನಂ ಕ್ರುದ್ಧಾಃ ಸರ್ವೇ ನಿಶಾಚರಾಃ ॥
ರಾಮಂ ನಾನಾವಿಧೈಃ ಶಸ್ತ್ರೈರಭ್ಯವರ್ಷಂತ ದುರ್ಜಯಮ್ ॥ ೭

ಮುದ್ಗರೈಃ ಪಟ್ಟಿಶೈಃ ಶೂಲೈಃ ಪ್ರಾಸೈಃ ಖಡ್ಗೈಃ ಪರಶ್ವಧೈಃ ।
ರಾಕ್ಷಸಾಃ ಸಮರೇ ರಾಮಂ ನಿಜಘ್ನೂ ರೋಷತತ್ಪರಾಃ ॥ ೮

ತೇ ಬಲಾಹಕಸಂಕಾಶಾ ಮಹಾನಾದಾ ಮಹೌಜಸಃ ।
ಅಭ್ಯಧಾವಂತ ಕಾಕುತ್ಸ್ಥಂ ರಥೈರ್ವಾಜಿಭಿರೇವ ಚ ॥ ೯

ಗಜೈಃ ಪರ್ವತಕೂಟಾಭೈ ರಾಮಂ ಯುದ್ಧೇ ಜಿಘಾಂಸವಃ ।
ತೇ ರಾಮೇ ಶರವರ್ಷಾಣಿ ವ್ಯಸೃಜನ್ ರಕ್ಷಸಾಂ ಗಣಾಃ ॥ ೧೦

ಶೈಲೇಂದ್ರಮಿವ ಧಾರಾಭಿರ್ವರ್ಷಮಾಣಾ ಬಲಾಹಕಾಃ ।
ಸ ತೈಃ ಪರಿವೃತೋ ಘೋರೈ ರಾಘವೋ ರಕ್ಷಸಾಂ ಗಣೈಃ ॥ ೧೧

---

ನಂತೆ ಖರನು ಕಾಣಿಸುತ್ತಿದ್ದನು (೪-೫). ಕಾಳಗವು ತೊಡಗಿತು. ಅಪ್ರತಿಮ ವೀರನಾದ ಶ್ರೀರಾಮನಮೇಲೆ ಖರನು ಒಂದು ಸಾವಿರ ಬಾಣಗಳನ್ನು ಹೊಡೆದು ಸಿಂಹನಾದಮಾಡಿದನು. ಉಗ್ರಚಾಪವನ್ನು ಹಿಡಿದು ಅವುಗಳನ್ನು ಎದುರಿಸಿದ ಅಜೇಯನಾದ ಶ್ರೀರಾಮನನ್ನು ಕಂಡು, ಆ ನಿಶಾಚರರೆಲ್ಲರೂ ಕ್ರುದ್ಧರಾಗಿ ನಾನಾಬಗೆಯ ಶಸ್ತ್ರಗಳನ್ನು ಅವನಮೇಲೆ ಪ್ರಯೋಗಿಸಿದರು (೬–೭). ಮುದ್ಗರ, ಪಟ್ಟಿಶ, ಶೂಲ, ಪ್ರಾಸ, ಖಡ್ಗ, ಕೊಡಲಿ ಮುಂತಾದ ಆಯುಧಗಳಿಂದ ಹೊಡೆದರು. ಸಾಹಸಿಗಳಾದ ಆ ರಾಕ್ಷಸರು ಮುಗಿಲುಗಳಂತೆ ಗುಡುಗುತ್ತ ರಥಗಳನ್ನೂ ಕುದುರೆಗಳನ್ನೂ ಓಡಿಸುತ್ತ ಕಾಕುತ್ಸ್ಥನ ಕಡೆಗೆ ಧಾವಿಸಿ ಬಂದರು (೮–೯). ಕೆಲವರು ಬೆಟ್ಟದ ಶಿಖರಗಳಂತಿದ್ದ ಆನೆಗಳನ್ನೇರಿ ಶ್ರೀರಾಮನನ್ನು ಕೊಲ್ಲಬೇಕೆಂದು ಮುತ್ತಿದರು. ಅವರು ಗುಂಪುಗುಂಪಾಗಿ ಬಂದು ಬಾಣದ ಮಳೆಯನ್ನು ಸುರಿಸಿದರು. ಮೋಡಗಳು ಧಾರಾಕಾರವಾಗಿ ಮಳೆಯನ್ನು ಸುರಿಸುವಾಗ ನಿಶ್ಚಲನಾಗಿರುವ ಪರ್ವತರಾಜನಂತೆ ಶ್ರೀರಾಮನು ಕಂಗೊಳಿಸುತ್ತಿದ್ದನು !

ಶಿಖಿಷ್ವಿವ ಮಹಾದೇವೋ ವೃತಃ ಪರಿಷದಾಂ ಗಣೈಃ ।
ತಾನಿ ಮುಕ್ತಾನಿ ಶಸ್ತ್ರಾಣಿ ಯಾತುಧಾನೈಃ ಸ ರಾಘವಃ ॥ ೧೨

ಪ್ರತಿಜಗ್ರಾಹ ವಿಶಿಖೈರ್ನದ್ಯೋಘಾನಿವ ಸಾಗರಃ ।
ಸ ತೈಃ ಪ್ರಹರಣೈರ್ಘೋರೈರ್ಭಿನ್ನಗಾತ್ರೋ ನ ವಿವ್ಯಥೇ ॥ ೧೩

ರಾಮಃ ಪ್ರದೀಪ್ತೈರ್ಬಹುಭಿರ್ವಜ್ರೈರಿವ ಮಹಾಚಲಃ ।
ಸ ವಿದ್ಧಃ ಕ್ಷತಜಾದಿಗ್ಧಃ ಸರ್ವಗಾತ್ರೇಷು ರಾಘವಃ ॥ ೧೪

ಬಭೂವ ರಾಮಃ ಸಂಧ್ಯಾಭ್ರೈರ್ದಿವಾಕರ ಇವಾವೃತಃ ।
ವಿಷೇದುರ್ದೇವಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೧೫

ಏಕಂ ಸಹಸ್ರೈರ್ಬಹುಭಿಸ್ತದಾ ದೃಷ್ಟ್ವಾ ಸಮಾವೃತಮ್ ।
ತತೋ ರಾಮಃ ಸುಸಂಕ್ರುದ್ಧೋ ಮಂಡಲೀಕೃತಕಾರ್ಮುಕಃ ॥ ೧೬

ಸಸರ್ಜ ನಿಶಿತಾನ್ ಬಾಣಾನ್ ಶತಶೋಽಥ ಸಹಸ್ರಶಃ ।
ದುರಾವಾರಾನ್ ದುರ್ವಿಷಹಾನ್ ಕಾಲದಂಡೋಪಮಾನ್ ರಣೇ ॥

---

ಘೋರಾಕಾರದ ರಾಕ್ಷಸರು ಸುತ್ತಲೂ ಮುತ್ತಿಗೆಹಾಕಿರಲು, ಪ್ರದೋಷಕಾಲದಲ್ಲಿ ಪ್ರಮಥಗಣಗಳಿಂದ ಪರಿವೃತನಾದ ಮಹೇಶ್ವರನಂತೆ ಶ್ರೀರಾಮನು ಗೋಚರಿಸಿದನು (೧೦–೧೧). ಆ ದೈತ್ಯರು ಎಡೆಬಿಡದೆ ಹೊಡೆಯುತ್ತಿದ್ದ ಶಸ್ತ್ರಗಳನ್ನು ಶ್ರೀರಾಮನು ತನ್ನ ಸಾಯಕಗಳಿಂದ ಎದುರಿಸಿ ಕತ್ತರಿಸಿಹಾಕುತ್ತಿದ್ದನು. ನದೀಪ್ರವಾಹಗಳು ಕಡಲಿಗೆ ಬಿದ್ದು ಅಡಗುವಂತೆ, ಅವರ ಶಸ್ತ್ರಪರಂಪರೆಗಳು ರಾಘವನ ಬಳಿಗೆ ತೂರಿ ಬಿದ್ದು ಕರಗಿಹೋಗುತ್ತಿದ್ದವು! ದೈತ್ಯರ ಘೋರಾಯುಧಗಳಿಂದ ಶ್ರೀರಾಮನ ಗಾತ್ರಗಳಲ್ಲಿ ಗಾಯಗಳಾದರೂ ಆತನು ಲಕ್ಷಿಸಲಿಲ್ಲ (೧೨–೧೩). ಸಿಡಿಲುಗಳ ಹೊಡೆತವನ್ನು ಪರ್ವತರಾಜನು ಗಮನಿಸುವನೆ? ಶ್ರೀರಾಮನ ದೇಹವು ರಕ್ತದಿಂದ ನೆನೆಯಲು, ಸಂಜೆಯ ಕೆಮ್ಮೋಡಗಳಿಂದ ರಂಜಿಸುವ ಸೂರ್ಯನಂತೆ ಅವನು ಕಾಣಿಸುತ್ತಿದ್ದನು. ಅದನ್ನು ಕಂಡು ದೇವಗಂಧರ್ವರೂ ಸಿದ್ಧರೂ ಋಷಿಗಳೂ ವ್ಯಥೆಪಡುತ್ತಿದ್ದರು (೧೪–೧೫). ಒಬ್ಬ ರಾಮನನ್ನು ಸಾವಿರಾರು ರಾಕ್ಷಸರು ಮುತ್ತಿದರಲ್ಲ — ಎಂದು ಅವರಿಗೆ ಚಿಂತೆಯಾಯಿತು. ಆಗ ಶ್ರೀರಾಮನು ಅತ್ಯಂತ ಕ್ರುದ್ಧನಾಗಿ ಧನುಸ್ಸನ್ನು ಮಂಡಲಾಕಾರವಾಗಿ ಸೆಳೆದು ಸಾವಿರಗಟ್ಟಲೆ ನಿಶಿತಾಸ್ತ್ರ

ಮುಮೋಚ ಲೀಲಯಾ ರಾಮಃ ಕಂಕಪತ್ರಾನಜಿಹ್ಮಗಾನ್ ।
ತೇ ಶರಾಃ ಶತ್ರುಸೈನ್ಯೇಷು ಮುಕ್ತಾ ರಾಮೇಣ ಲೀಲಯಾ ॥ ೧೮

ಆದದೂ ರಕ್ಷಸಾಂ ಪ್ರಾಣಾನ್ ಪಾಶಾಃ ಕಾಲಕೃತಾ ಇವ ।
ಭಿತ್ತ್ವಾ ರಾಕ್ಷಸದೇಹಾಂಸ್ತಾಂಸ್ತೇ ಶರಾ ರುಧಿರಾಪ್ಲುತಾಃ ॥ ೧೯

ಅಂತರಿಕ್ಷಗತಾ ರೇಜುರ್ದೀಪ್ತಾಗ್ನಿಸಮತೇಜಸಃ ।
ಅಸಂಖ್ಯೇಯಾಸ್ತು ರಾಮಸ್ಯ ಸಾಯಕಾಶ್ಚಾಪಮಂಡಲಾತ್ ॥ ೨೦

ವಿನಿಷ್ಪೇತುರತೀವೋಗ್ರಾ ರಕ್ಷಃಪ್ರಾಣಾಪಹಾರಿಣಃ ।
ಧನೂಂಷಿ ಚ ಧ್ವಜಾಗ್ರಾಣಿ ವರ್ಮಾಣಿ ಚ ಶಿರಾಂಸಿ ಚ ॥ ೨೧

ಬಾಹೂನ್ ಸಹಸ್ತಾಭರಣಾನ್ ಊರೂನ್ ಕರಿಕರೋಪಮಾನ್ ।
ಚಿಚ್ಛೇದ ರಾಮಃ ಸಮರೇ ಶತಶೋಽಥ ಸಹಸ್ರಶಃ ॥ ೨೨

ಹಯಾನ್ ಕಾಂಚನಸಂನಾಹಾನ್ ರಥಯುಕ್ತಾನ್ ಸಸಾರಥೀನ್ ।
ಗಜಾಂಶ್ಚ ಸಗಜಾರೋಹಾನ್ ಸಹಯಾನ್ ಸಾದಿನಸ್ತಥಾ ॥ ೨೩

---

ಗಳನ್ನು ರಾಕ್ಷಸರ ಮೇಲೆ ಬಿಡಲಾರಂಭಿಸಿದನು. ನಿವಾರಿಸಲು ಅಶಕ್ಯವೂ ತಡೆದು ಕೊಳ್ಳಲು ಅಸಾಧ್ಯವೂ ಆದ ಆ ಬಾಣಗಳು ಯಮದಂಡದಂತೆ ರಾಕ್ಷಸರಮೇಲೆ ಎರಗುತ್ತಿದ್ದವು (೧೬–೧೭). ನೇರವಾಗಿ ಸಾಗಿ ಗುರಿಯನ್ನು ತಾಗುವ ಬಾಣಗಳನ್ನು ಶ್ರೀರಾಮನು ಯಾವ ಆಯಾಸವೂ ಇಲ್ಲದೆ ಲೀಲೆಯಿಂದ ಹೊಡೆಯುತ್ತಿದ್ದನು. ಅವು ಶತ್ರುಸೈನ್ಯವನ್ನು ಭೇದಿಸಿ ಕಾಲಪಾಶಗಳಂತೆ ರಾಕ್ಷಸರ ಪ್ರಾಣವನ್ನು ಹೀರ ತೊಡಗಿದವು. ಆ ಶರಗಳು ರಾಕ್ಷಸರ ದೇಹಗಳನ್ನು ಹೊಕ್ಕು ರಕ್ತದಲ್ಲಿ ನೆನೆದು ಆಕಾಶಕ್ಕೆ ಹಾರಿ ಬೆಂಕಿಯ ಜ್ವಾಲೆಯಂತೆ ಬೆಳಗಿದವು (೧೮–೧೯). ಶ್ರೀರಾಮನ ಮಂಡಲಾಕಾರದ ಕೋದಂಡದಿಂದ ಲೆಕ್ಕವಿಲ್ಲದಷ್ಟು ಅತ್ಯುಗ್ರ ಬಾಣಗಳು ಚಿಮ್ಮಿ ಬಂದು ರಾಕ್ಷಸರ ಪ್ರಾಣವನ್ನು ಹೀರಿ ಮೇಲಕ್ಕೆ ಹಾರಿದವು. ರಾಕ್ಷರ ಬಿಲ್ಲು-ಬಾವುಟಗಳನ್ನೂ ಕವಚ-ಕಂಧರಗಳನ್ನೂ ಶ್ರೀರಾಮನು ಕಡಿಕಡಿದು ಕೆಡವಿದನು. ಹಸ್ತಾಭರಣಗಳಿದ್ದ ಅವರ ಬಾಹುಗಳನ್ನೂ ಕರಿಕರಗಳಂತಿದ್ದ ತೊಡೆಗಳನ್ನೂ ಸಾವಿರಗಟ್ಟಲೆ ತುಂಡರಿಸಿ ಚಲ್ಲಿದನು (೨೦–೨೨). ಆತನ ಕೋದಂಡದ ಹೆದೆ ಯಿಂದ ನೆಗೆದುಬಂದ ಬಾಣಗಳು ಬಂಗಾರದಿಂದ ಭೂಷಿತವಾದ ಕುದುರೆ–ಸಾರಥಿ–

ಚಿಚ್ಛಿದುರ್ಬಿಭಿದುಶ್ಚಾಪಿ ರಾಮಚಾಪಗುಣಾಚ್ಚ್ಯುತಾಃ ।
ಪದಾತೀನ್ ಸಮರೇ ಹತ್ವಾ ಹ್ಯನಯದ್ಯಮಸಾದನಮ್ ॥ ೨೪

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಭೀಮಮಾರ್ತಸ್ವರಂ ಚಕ್ರುರ್ಭಿದ್ಯಮಾನಾ ನಿಶಾಚರಾಃ ॥ ೨೫

ತತ್ಸೈನ್ಯಂ ನಿಶಿತೈರ್ಬಾಣೈರರ್ದಿತಂ ಮರ್ಮಭೇದಿಭಿಃ ।
ರಾಮೇಣ ನ ಸುಖಂ ಲೇಭೇ ಶುಷ್ಕಂ ವನಮಿವಾಗ್ನಿನಾ ॥ ೨೬

ಕೇಚಿದ್ಭೀಮಬಲಾಃ ಶೂರಾಃ ಶೂಲಾನ್ ಖಡ್ಗಾನ್ ಪರಶ್ವಧಾನ್ ।
ರಾಮಸ್ಯಾಭಿಮುಖಂ ಗತ್ವಾ ಚಿಕ್ಷಿಪುಃ ಪರಮಾಯುಧಾನ್ ॥ ೨೭

ತಾನಿ ಬಾಣೈರ್ಮಹಾಬಾಹುಃ ಶಸ್ತ್ರಾಣ್ಯಾವಾರ್ಯ ರಾಘವಃ ।
ಜಹಾರ ಸಮರೇ ಪ್ರಾಣಾಂಶ್ಚಿಚ್ಛೇದ ಚ ಶಿರೋಧರಾನ್ ॥ ೨೮

ತೇ ಛಿನ್ನಶಿರಸಃ ಪೇತುಶ್ಛಿನ್ನವರ್ಮಶರಾಸನಾಃ ।
ಸುಪರ್ಣವಾತವಿಕ್ಷಿಪ್ತಾ ಜಗತ್ಯಾಂ ಪಾದಪಾ ಯಥಾ ॥ ೨೯

---

ರಥಗಳನ್ನೂ ಗಜ–ಗಜಾರೋಹಿಗಳನ್ನೂ ಅಶ್ವ–ಅಶ್ವಾರೋಹಿಗಳನ್ನೂ ಕತ್ತರಿಸಿ ಕೆಡವಿದವು ; ಸೀಳಿ ಬಿಸುಟವು. ಪದಾತಿಗಳು ಸತ್ತು ಯಮಲೋಕವನ್ನು ಸಾರಿದರು (೨೩–೨೪). ಶ್ರೀರಾಮನು ಮೊನಚಾದ ನಾಲೀಕ, ನಾರಾಚ, ವಿಕರ್ಣಿಗಳೆಂಬ* ಬಾಣಗಳಿಂದ ನಿಶಾಚರರನ್ನು ಛಿನ್ನ ಭಿನ್ನವಾಗಿ ಕಡಿದುರುಳಿಸುತ್ತಿರಲು, ಅವರು ಆರ್ತಸ್ವರದಿಂದ ಗಟ್ಟಿಯಾಗಿ ಅರಚುತ್ತಿದ್ದರು. ಮರ್ಮಭೇದಕಗಳಾದ ನಿಶಿತಾಸ್ತ್ರಗಳಿಂದ ಶ್ರೀರಾಮನು ಧಾಳಿಯೆಬ್ಬಿಸಲು, ರಾಕ್ಷಸಪಡೆಗೆ ಉಳಿಗಾಲವಿಲ್ಲವಾಯಿತು. ಒಣಮರಗಳ ಕಾಡಿಗೆ ಕಿಚ್ಚುಬಿದ್ದಂತಾಯಿತು (೨೫–೨೬). ಭೀಮಪರಾಕ್ರಮಿಗಳಾದ ಕೆಲವು ರಾಕ್ಷಸರು ಶ್ರೀರಾಮನೆದುರಿಗೆ ನುಗ್ಗಿ ಹೋಗಿ, ಶೂಲ, ಖಡ್ಗ, ಪರಶು–ಮೊದಲಾದ ಭಯಂಕರಾಯುಧಗಳನ್ನು ಅವನ ಕಡೆಗೆ ಎಸೆದರು. ಶೂರಾಗ್ರೇಸರನಾದ ರಾಘವನು ಅವುಗಳೆಲ್ಲವನ್ನೂ ಬಾಣಗಳಿಂದ ತಡೆದು, ಆ ರಾಕ್ಷಸರ ಕೊರಳನ್ನು ಕಡಿದು ಕೊಂದುಹಾಕಿದನು (೨೭–೨೮). ಅವರ ಕವಚಗಳು ಹರಿದು, ಕಾರ್ಮುಕಗಳು ಮುರಿದು, ತಲೆಗಳು

---

* ನಾಲೀಕ = ಉಕ್ಕಿನ ತುದಿಯುಳ್ಳ ಬಾಣ, ನಾರಾಚ = ಉಕ್ಕಿನಿಂದಲೇ ನಿರ್ಮಿಸಿದ ಬಾಣ,' ವಿಕರ್ಣಿ = ಅಂಕುಶದಂತೆ ತುದಿಯುಳ್ಳ ಬಾಣ.

ಅವಶಿಷ್ಟಾಶ್ಚ ಯೇ ತತ್ರ ವಿಷಣ್ಣಾಶ್ಚ ನಿಶಾಚರಾಃ ।
ಖರಮೇವಾಭ್ಯಧಾವಂತ ಶರಣಾರ್ಥಂ ಶರಾರ್ದಿತಾಃ ॥ ೩೦

ತಾನ್ ಸರ್ವಾನ್ ಪುನರಾದಾಯ ಸಮಾಶ್ವಾಸ್ಯ ಚ ದೂಷಣಃ ।
ಅಭ್ಯಧಾವತ ಕಾಕುತ್ಸ್ಥಂ ಕ್ರುದ್ಧೋ ರುದ್ರಮಿವಾಂತಕಃ ॥ ೩೧

ನಿವೃತ್ತಾಸ್ತು ಪುನಃ ಸರ್ವೇ ದೂಷಣಾಶ್ರಯನಿರ್ಭಯಾಃ ।
ರಾಮಮೇವಾಭ್ಯಧಾವಂತ ಸಾಲತಾಲಶಿಲಾಯುಧಾಃ ॥ ೩೨

ಶೂಲಮುದ್ಗರಹಸ್ತಾಶ್ಚ ಚಾಪಹಸ್ತಾ ಮಹಾಬಲಾಃ ।
ಸೃಜಂತಃ ಶರವರ್ಷಾಣಿ ಶಸ್ತ್ರವರ್ಷಾಣಿ ಸಂಯುಗೇ ॥ ೩೩

ದ್ರುಮವರ್ಷಾಣಿ ಮುಂಚಂತಃ ಶಿಲಾವರ್ಷಾಣಿ ರಾಕ್ಷಸಾಃ ।
ತದ್ಬಭೂವಾದ್ಭುತಂ ಯುದ್ಧಂ ತುಮುಲಂ ರೋಮಹರ್ಷಣಮ್ ॥ ೩೪

ರಾಮಸ್ಯ ಚ ಮಹಾಘೋರಂ ಪುನಸ್ತೇಷಾಂ ಚ ರಕ್ಷಸಾಮ್ ।
ತೇ ಸಮಂತಾದಭಿಕ್ರುದ್ಧಾ ರಾಘವಂ ಪುನರಭ್ಯಯುಃ ॥ ೩೫

---

ತರಿದುಹೋಗಲು, ಗರುಡನ ರೆಕ್ಕೆಗಳ ವಾಯುವೇಗಕ್ಕೆ ಸಿಕ್ಕಿದ ಮರಗಳಂತೆ ರಾಕ್ಷಸರು ನೆಲಕ್ಕೆ ಉರುಳಿದರು. ಅಳಿದುಳಿದ ರಾಕ್ಷಸರು ರಾಮಬಾಣಗಳ ಹೊಡೆತಕ್ಕೆ ಹಿಂಜರಿದು ವಿಷಣ್ಣರಾಗಿ ಖರನನ್ನು ಮರೆಹೊಕ್ಕರು (೨೯-೩೦). ಆಗ (ಸೇನಾಪತಿಯಾದ) ದೂಷಣನು ಅವರೆಲ್ಲರನ್ನೂ ಸಂತೈಸಿ ಅವರನ್ನು ಕೂಡಿಕೊಂಡು ಕ್ರುದ್ಧನಾಗಿ, ಯಮನು ರುದ್ರನನ್ನೆದುರಿಸಿದಂತೆ ಶ್ರೀರಾಮನಮೇಲೆ ಏರಿಹೋದನು. ದೂಷಣನು ಬಂದುದರಿಂದ ಆ ದೈತ್ಯರೆಲ್ಲರಿಗೂ ಧೈರ್ಯ ಹುಟ್ಟಿತು. ಅವರು ಸಾಲವೃಕ್ಷ, ತಾಳೆಮರ ಮತ್ತು ಬಂಡೆಗಳನ್ನು ಹಿಡಿದು ಶ್ರೀರಾಮನ ಕಡೆಗೆ ನುಗ್ಗಿದರು (೩೧-೩೨). ಕೆಲವರು ಶೂಲ, ಮುದ್ಗರ ಮತ್ತು ಬಿಲ್ಲುಗಳನ್ನು ಧರಿಸಿ ಬಾಣಗಳನ್ನು ಹೊಡೆಯುತ್ತ ಶಸ್ತ್ರಗಳನ್ನು ಬೀಸುತ್ತ ಆಕ್ರಮಣಮಾಡಿದರು. ಕೆಲವು ರಾಕ್ಷಸರು ಮರಗಳನ್ನು ಬೀಸಿ ಎಸೆಯುತ್ತ ಬಂಡೆಗಳನ್ನು ತೂರುತ್ತ ಬಂದರು. ಮೈನವಿರೇಳಿಸುವಂತೆ ಅದ್ಭುತವಾದ ತುಮುಲ ಯುದ್ಧವಾರಂಭವಾಯಿತು (೩೩-೩೪). ಶ್ರೀರಾಮನಿಗೂ ರಾಕ್ಷಸರಿಗೂ ಮಹಾಘೋರವಾದ ಕದನವೇರ್ಪಟ್ಟಿತು. ರಾಕ್ಷಸರು ಸಿಟ್ಟಿನಿಂದ ಸುತ್ತಲೂ ಬಂದು

ತೈಶ್ಚ ಸರ್ವಾ ದಿಶೋ ದೃಷ್ಟ್ವಾ ಪ್ರದಿಶಶ್ಚ ಸಮಾವೃತಾಃ ।
ರಾಕ್ಷಸೈರುದ್ಯತಪ್ರಾಸೈಃ ಶರವರ್ಷಾಭಿವರ್ಷಿಭಿಃ ॥ ೩೬

ಸ ಕೃತ್ವಾ ಭೈರವಂ ನಾದಮಸ್ತ್ರಂ ಪರಮಭಾಸ್ವರಮ್ ।
ಸಂಯೋಜಯತ ಗಾಂಧರ್ವಂ ರಾಕ್ಷಸೇಷು ಮಹಾಬಲಃ ॥ ೩೭

ತತಃ ಶರಸಹಸ್ರಾಣಿ ನಿರ್ಯಯುಶ್ಚಾಪಮಂಡಲಾತ್ ।
ಸರ್ವಾ ದಶ ದಿಶೋ ಬಾಣೈರಾವಾರ್ಯಂತ ಸಮಾಗತೈಃ ॥ ೩೮

ನಾದದಾನಂ ಶರಾನ್ ಘೋರಾನ್ನ ಮುಂಚಂತಂ ಶಿಲೀಮುಖಾನ್ ।
ವಿಕರ್ಷಮಾಣಂ ಪಶ್ಯಂತಿ ರಾಕ್ಷಸಾಸ್ತೇ ಶರಾರ್ದಿತಾಃ ॥ ೩೯

ಶರಾಂಧಕಾರಮಾಕಾಶಮಾವೃಣೋತ್ ಸದಿವಾಕರಮ್ ।
ಬಭೂವಾವಸ್ಥಿತೋ ರಾಮಃ ಪ್ರವಮನ್ನಿವ ತಾನ್ ಶರಾನ್ ॥ ೪೦

ಯುಗಪತ್ ಪತಮಾನೈಶ್ಚ ಯುಗಪಚ್ಚ ಹತೈರ್ಭೃಶಮ್ ।
ಯುಗಪತ್ ಪತಿತೈಶ್ಚೈವ ವಿಕೀರ್ಣಾ ವಸುಧಾಭವತ್ ॥ ೪೧

---

ಶ್ರೀರಾಮನನ್ನು ಮುತ್ತಿದರು. ಪ್ರಾಸಗಳಿಂದಲೂ ಶರವೃಷ್ಟಿಗಳಿಂದಲೂ ಹೊಡೆದಾಡುತ್ತಿದ್ದ ದೈತ್ಯರು ದಿಗ್‌ದಿಗಂತರಗಳನ್ನು ಆವರಿಸಿದರು. ಅದನ್ನು ಕಂಡು ವೀರಾಗ್ರಣಿಯಾದ ಶ್ರೀರಾಮನು ಒಂದು ಸಲ ಸಿಂಹನಾದವನ್ನು ಮಾಡಿ, ಥಳಥಳಿಸುತ್ತಿದ್ದ ಗಾಂಧರ್ವಾಸ್ತ್ರವನ್ನು ಧನುಸ್ಸಿಗೆ ಹೂಡಿದನು (೩೫–೩೭). ಆಗ ಮಂಡಲಾಕಾರವಾಗಿ ಸೆಳೆದಿದ್ದ ಕೋದಂಡದಿಂದ ಸಾವಿರ ಸಾವಿರ ಬಾಣಗಳು ಚಿಮ್ಮತೊಡಗಿದವು. ಹತ್ತು ದಿಕ್ಕುಗಳನ್ನು ಅವು ಮುಚ್ಚಿಬಿಟ್ಟವು. (ಶ್ರೀರಾಮನ ಕೈಚಳಕವು ಹೇಗಿತ್ತೆಂದರೆ) ಅವನು ಘೋರಾಸ್ತ್ರಗಳನ್ನು (ಬತ್ತಳಿಕೆಯಿಂದ) ಹಿರಿಯುವುದಾಗಲಿ, ಹೂಡಿ ಹೆದೆಯನ್ನು ಮೀಟುವುದಾಗಲಿ, ಅವನ್ನು ಬಿಡುವುದಾಗಲಿ ರಾಕ್ಷಸರು ಕಾಣದಾದರು. ಅಸ್ತ್ರಗಳ ಹೊಡೆತವನ್ನು ಮಾತ್ರ ಕಂಡರು! (೩೮–೩೯). ಶ್ರೀರಾಮನ ಬಾಣಗಳು ಆಕಾಶವನ್ನು ವ್ಯಾಪಿಸಲು ಸೂರ್ಯನು ಮರೆಯಾದನು ; ಕತ್ತಲೆ ಕವಿಯಿತು. ಶ್ರೀರಾಮನು ಬಾಣಗಳನ್ನು ಒಂದೇ ಸಮನಾಗಿ ಉಗುಳುವನೋ ಎಂಬಂತೆ ತೋರಿತು! (೪೦). ಸಾವಿರಾರು ಬಾಣಗಳು ಒಟ್ಟಿಗೆ ಚಿಮ್ಮಿಹೋಗುತ್ತಿದ್ದವು. ಚಿಮ್ಮುವಾಗಲೇ

ನಿಹತಾಃ ಪತಿತಾಃ ಕ್ಷೀಣಾಶ್ಛಿನ್ನಾ ಭಿನ್ನಾ ವಿದಾರಿತಾಃ ।
ತತ್ರ ತತ್ರ ಸ್ಮ ದೃಶ್ಯಂತೇ ರಾಕ್ಷಸಾಸ್ತೇ ಸಹಸ್ರಶಃ ॥ ೪೨

ಸೋಷ್ಣೀಷೈರುತ್ತಮಾಂಗೈಶ್ಚ ಸಾಂಗದೈರ್ಬಾಹುಭಿಸ್ತಥಾ ।
ಊರುಭಿರ್ಜಾನುಭಿಶ್ಛಿನ್ನೈರ್ನಾನಾರೂಪವಿಭೂಷಣೈಃ ॥ ೪೩

ಹಯೈಶ್ಚ ದ್ವಿಪಮುಖ್ಯೈಶ್ಚ ರಥೈರ್ಭಿನ್ನೈರನೇಕಶಃ ।
ಚಾಮರೈರ್ವ್ಯಜನೈಶ್ಛತ್ರೈರ್ಧ್ವಜೈರ್ನಾನಾವಿಧೈರಪಿ ॥ ೪೪

ರಾಮಸ್ಯ ಬಾಣಾಭಿಹತೈರ್ವಿಚಿತ್ರೈಃ ಶೂಲಪಟ್ಟಿಶೈಃ ।
ವಿಚ್ಛಿನ್ನೈಃ ಸಮರೇ ಭೂಮಿರ್ವಿಕೀರ್ಣಾಭೂದ್ಭಯಂಕರಾ ॥ ೪೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚವಿಂಶಃ ಸರ್ಗಃ

ರಾಕ್ಷಸರು ಹತರಾಗುತ್ತಿದ್ದರು. ಹತರಾಗುವಾಗಲೇ ಉರುಳಿಬೀಳುತ್ತಿದ್ದರು. ಸತ್ತುರುಳಿದವರಿಂದ ರಣಭೂಮಿಯು ತುಂಬಿಹೋಯಿತು. ಪೆಟ್ಟುಬಿದ್ದೊಡನೆ ಕೆಲವು ರಾಕ್ಷಸರು ಸತ್ತರು ; ಕೆಲವರು ಬಿದ್ದರು ; ಕೆಲವರು ಕಂಠಗತಪ್ರಾಣರಾದರು ; ಕೆಲವರ ದೇಹಗಳು ಎರಡು ಸೀಳಾದವು ; ಕೆಲವರ ಕೈಕಾಲುಗಳು ಕತ್ತರಿಸಿದವು ; ಕೆಲವರ ಶರೀರಗಳು ಬಗಿಯಲ್ಪಟ್ಟವು. ಎಲ್ಲಿ ನೋಡಿದರೂ ಹೀಗೆ ಸತ್ತುಬಿದ್ದ ರಾಕ್ಷಸರು ಗೋಚರಿಸುತ್ತಿದ್ದರು (೪೧–೪೨). ಆ ರಣಭೂಮಿಯಲ್ಲಿ ತಲೆಕಟ್ಟುಗಳಿರುವ ತಲೆಗಳೂ ಭುಜಕೀರ್ತಿಗಳಿರುವ ಬಾಹುಗಳೂ ಹರಡಿದವು. ತುಂಡರಿಸಿದ ತೊಡೆಗಳೂ ಮೊಳಕಾಲುಗಳೂ ತುಂಬಿದವು. ವಿವಿಧ ಭೂಷಣಗಳಿಂದ ಅಲಂಕೃತವಾದ ಕುದುರೆಗಳೂ ಆನೆಗಳೂ ಸತ್ತುಬಿದ್ದವು. ರಥಗಳು ಚೂರುಚೂರಾದವು. ನಾನಾಬಗೆಯ ಚಾಮರ, ಬೀಸಣಿಗೆ, ಛತ್ರಿ, ಬಾವುಟಗಳು ಚಲ್ಲಾಪಿಲ್ಲಿಯಾಗಿ ಬಿದ್ದವು (೪೩–೪೪). ಶ್ರೀರಾಮನ ಬಾಣಜಾಲಗಳಿಂದ ತುಂಡುತುಂಡಾದ ಶೂಲ, ಪಟ್ಟಿಶ ಮುಂತಾದ ವಿವಿಧಾಯುಧಗಳು ಎಲ್ಲೆಲ್ಲಿಯೂ ಹರಡಿಬಿದ್ದಿರಲು, ಆ ರಣಭೂಮಿಯು ಭಯಂಕರವಾಗಿ ಕಾಣಿಸುತ್ತಿತ್ತು (೪೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗ

## ಷಡ್ವಿಂಶಃ ಸರ್ಗಃ

### ದೂಷಣಾದಿವಧಃ

ದೂಷಣಸ್ತು ಸ್ವಕಂ ಸೈನ್ಯಂ ಹನ್ಯಮಾನಂ ನಿರೀಕ್ಷ್ಯ ಸಃ ।
ಸಂದಿದೇಶ ಮಹಾಬಾಹುರ್ಭೀಮವೇಗಾನ್ ದುರಾಸದಾನ್ ॥ ೧

ರಾಕ್ಷಸಾನ್ ಪಂಚಸಾಹಸ್ರಾನ್ ಸಮರೇಷ್ವನಿವರ್ತಿನಃ ।
ತೇ ಶೂಲೈಃ ಪಟ್ಟಿಶೈಃ ಖಡ್ಗೈಃ ಶಿಲಾವರ್ಷೈರ್ದ್ರುಮೈರಪಿ ॥ ೨

ಶರವರ್ಷೈರವಿಚ್ಛಿನ್ನಂ ವವೃಷುಸ್ತಂ ಸಮಂತತಃ ।
ಸ ದ್ರುಮಾಣಾಂ ಶಿಲಾನಾಂ ಚ ವರ್ಷಂ ಪ್ರಾಣಹರಂ ಮಹತ್ ॥ ೩

ಪ್ರತಿಜಗ್ರಾಹ ಧರ್ಮಾತ್ಮಾ ರಾಘವಸ್ತೀಕ್ಷ್ಣಸಾಯಕೈಃ ।
ಪ್ರತಿಗೃಹ್ಯ ಚ ತದ್ವರ್ಷಂ ನಿಮೀಲಿತ ಇವರ್ಷಭಃ ॥ ೪

ರಾಮಃ ಕ್ರೋಧಂ ಪರಂ ಭೇಜೇ ವಧಾರ್ಥಂ ಸರ್ವರಕ್ಷಸಾಮ್ ।
ತತಃ ಕ್ರೋಧಸಮಾವಿಷ್ಟಃ ಪ್ರದೀಪ್ತ ಇವ ಪಾವಕಃ ॥ ೫

## ಸರ್ಗ ೨೬

### ದೂಷಣನೇ ಮೊದಲಾದ ರಾಕ್ಷಸರ ವಧೆ

ಈ ರೀತಿಯಲ್ಲಿ ತನ್ನ ಪಡೆಯವರು ಸತ್ತು ಒರಗುತ್ತಿರುವುದನ್ನು ಕಂಡು, ದೂಷಣನು ಐದುಸಾವಿರ ಮಂದಿ ಸಾಹಸಿಗಳೂ ಪರಾಕ್ರಮಿಗಳೂ ಆದ ರಾಕ್ಷಸರನ್ನು ಮುಂದೆ ನುಗ್ಗುವಂತೆ ಆಜ್ಞಾಪಿಸಿದನು. ಆ ರಾಕ್ಷಸರು ಯುದ್ಧದಲ್ಲಿ ಎಂದಿಗೂ ಹಿಮ್ಮೆಟ್ಟತಕ್ಕವರಲ್ಲ. ಅವರು ಶೂಲ, ಪಟ್ಟಿಶ, ಕತ್ತಿ, ಕಲ್ಲು, ಮರಗಳಿಂದ ಹೊಯ್ಯುತ್ತ ಬಾಣದ ಮಳೆಗರೆಯುತ್ತ ಶ್ರೀರಾಮನನ್ನು ಮುತ್ತಿದರು (೧–೨). ಪ್ರಾಣಾಪಾಯವನ್ನು ತಂದೊಡ್ಡುವ ಆ ಹೊಡೆತಗಳನ್ನು ಶ್ರೀರಾಮನು ತೀಕ್ಷ್ಣಾಸ್ತ್ರಗಳಿಂದ ಎದುರಿಸಿದನು. ಆ ವೀರನು ಕಣ್ಣುಮುಚ್ಚಿ ಹೋರಾಡುವ ಮಹಾವೃಷಭದಂತೆ, ಅವರೆಲ್ಲರನ್ನೂ ಕೊಲ್ಲಬೇಕೆಂದು ನಿಶ್ಚಯಿಸಿ ಸಿಟ್ಟಿನಿಂದ

ಶರೈರವಾಕಿರತ್ ಸೈನ್ಯಂ ಸರ್ವತಃ ಸಹದೂಷಣಮ್ ।
ತತಃ ಸೇನಾಪತಿಃ ಕ್ರುದ್ಧೋ ದೂಷಣಃ ಶತ್ರುದೂಷಣಃ ॥ ೬

ಶರೈರಶನಿಕಲ್ಪೈಸ್ತಂ ರಾಘವಂ ಸಮವಾಕಿರತ್ ।
ತತೋ ರಾಮಃ ಸುಸಂಕ್ರುದ್ಧಃ ಕ್ಷುರೇಣಾಸ್ಯ ಮಹದ್ಧನುಃ ॥ ೭

ಚಿಚ್ಛೇದ ಸಮರೇ ವೀರಶ್ಚತುರ್ಭಿಶ್ಚತುರೋ ಹಯಾನ್ ।
ಹತ್ವಾ ಚಾಶ್ವಾನ್ ಶರೈಸ್ತೀಕ್ಷ್ಣೈರರ್ಧಚಂದ್ರೇಣ ಸಾರಥೇಃ ॥ ೮

ಶಿರೋ ಜಹಾರ ತದ್ರಕ್ಷಸ್ತ್ರಿಭಿರ್ವಿವ್ಯಾಧ ವಕ್ಷಸಿ ।
ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ॥ ೯

ಜಗ್ರಾಹ ಗಿರಿಶೃಂಗಾಭಂ ಪರಿಘಂ ರೋಮಹರ್ಷಣಮ್ ।
ವೇಷ್ಟಿತಂ ಕಾಂಚನೈಃ ಪಟ್ಟೈರ್ದೇವಸೈನ್ಯಪ್ರಮರ್ದನಮ್ ॥ ೧೦

ಆಯಸೈಃ ಶಂಕುಭಿಸ್ತೀಕ್ಷ್ಣೈಃ ಕೀರ್ಣಂ ಪರವಸೋಕ್ಷಿತಮ್ ।
ವಜ್ರಾಶನಿಸಮಸ್ಪರ್ಶಂ ಪರಗೋಪುರದಾರಣಮ್ ॥ ೧೧

---

ಬೆಂಕಿಯಾದನು (೩–೫). ಆ ರಾಕ್ಷಸರ ಮೇಲೆ ಮಾತ್ರವಲ್ಲದೆ ದೂಷಣನ ಮೇಲೆಯೂ ಶರಗಳ ಮಳೆಗರೆದನು. ಆಗ ಶತ್ರುದೂಷಣನೆನಿಸಿದ ಸೇನಾಪತಿಯಾದ ದೂಷಣನು ಕ್ರುದ್ಧನಾಗಿ ಸಿಡಿಲಿನಂತಹ ಶರಗಳನ್ನು ಶ್ರೀರಾಮನಮೇಲೆ ಸುರಿಸಿದನು. ರಾಘವನು ಹರಿತವಾದ ಬಾಣವೊಂದನ್ನು ಪ್ರಯೋಗಿಸಿ ದೂಷಣನ ಧನುಸ್ಸನ್ನು ಕತ್ತರಿಸಿದನು (೬–೭). ಆ ಶೂರನು ನಾಲ್ಕು ಬಾಣಗಳಿಂದ ದೂಷಣನ ನಾಲ್ಕು ಕುದುರೆಗಳನ್ನು ಕೊಂದು, ಅರ್ಧಚಂದ್ರಾಸ್ತ್ರದಿಂದ ಸಾರಥಿಯ ತಲೆಯನ್ನು ತರಿದು, ಮೂರು ಬಾಣಗಳನ್ನು ಆ ರಾಕ್ಷಸನ ಎದೆಗೆ ಹೊಡೆದನು. ದೂಷಣನ ಧನುಸ್ಸು ಕತ್ತರಿಸಿಹೋಗಿತ್ತು. ಆಮೇಲೆ ಅಶ್ವಗಳು ಸತ್ತು ಸಾರಥಿಯು ಹತನಾದ್ದರಿಂದ, ಅವನಿಗೆ ರಥದ ಆಶ್ರಯವೂ ತಪ್ಪಿತು (೮–೯). ಆಗ ದೂಷಣನು ಪರ್ವತದ ಶಿಖರದಂತಿದ್ದ, ನೋಡಿದ ಮಾತ್ರದಿಂದಲೇ ಮೈನವಿರೇಳಿಸುವ ಒಂದು ಪರಿಘಾಯುಧವನ್ನು ಎತ್ತಿಕೊಂಡನು. ಅದನ್ನು ಚಿನ್ನದ ಪಟ್ಟಿಗಳಿಂದ ಬಿಗಿಯಲಾಗಿತ್ತು. ದೇವತೆಗಳ ಸೈನ್ಯವನ್ನು ಅದು ಹಿಂದೆ ನುಚ್ಚುನೂರು ಮಾಡಿತ್ತು (೧೦). ಚೂಪಾದ ಉಕ್ಕಿನ ಮುಳ್ಳುಗಳಿಂದ ವ್ಯಾಪ್ತವಾಗಿತ್ತು.

ತ್ರಾಸನಂ ಸರ್ವಭೂತಾನಾಂ ಕಾಂಚನಾಂಗದಭೂಷಣಮ್ ।
ತಂ ಮಹೋರಗಸಂಕಾಶಂ ಪ್ರಗೃಹ್ಯ ಪರಿಘಂ ರಣೇ ॥ ೧೨

ದೂಷಣೋಽಭ್ಯದ್ರವದ್ರಾಮಂ ಕ್ರೂರಕರ್ಮಾ ನಿಶಾಚರಃ ।
ತಸ್ಯಾಭಿಪತಮಾನಸ್ಯ ದೂಷಣಸ್ಯ ಸ ರಾಘವಃ ॥ ೧೩

ದ್ವಾಭ್ಯಾಂ ಶರಾಭ್ಯಾಂ ಚಿಚ್ಛೇದ ಸಹಸ್ತಾಭರಣೌ ಭುಜೌ ।
ಭ್ರಷ್ಟಸ್ತಸ್ಯ ಮಹಾಕಾಯಃ ಪಪಾತ ರಣಮೂರ್ಧನಿ ॥ ೧೪

ಪರಿಘಶ್ಛಿನ್ನಹಸ್ತಸ್ಯ ಶಕ್ರಧ್ವಜ ಇವಾಗ್ರತಃ ।
ಸ ಕರಾಭ್ಯಾಂ ವಿಕೀರ್ಣಾಭ್ಯಾಂ ಪಪಾತ ಭುವಿ ದೂಷಣಃ ॥ ೧೫

ವಿಷಾಣಾಭ್ಯಾಂ ವಿಶೀರ್ಣಾಭ್ಯಾಂ ಮನಸ್ವೀವ ಮಹಾಗಜಃ ।
ತಂ ದೃಷ್ಟ್ವಾ ಪತಿತಂ ಭೂಮೌ ದೂಷಣಂ ನಿಹತಂ ರಣೇ ॥ ೧೬

ಸಾಧು ಸಾಧ್ವಿತಿ ಕಾಕುತ್ಸ್ಥಂ ಸರ್ವಭೂತಾನ್ಯಪೂಜಯನ್ ।
ಏತಸ್ಮಿನ್ನಂತರೇ ಕ್ರುದ್ಧಾಸ್ತ್ರಯಃ ಸೇನಾಗ್ರಯಾಯಿನಃ ॥ ೧೭

---

ಶತ್ರುಗಳ ಮೇದಸ್ಸಿನಿಂದ ನೆನೆದಿತ್ತು. ವಜ್ರದಂತೆ ಕಠೋರವೂ ಸಿಡಿಲಿನಂತೆ ಉಗ್ರವೂ ಆಗಿತ್ತು. ಎಷ್ಟೋ ಮಂದಿ ವೈರಿಗಳ ಪುರದ್ವಾರಗಳನ್ನು ಪುಡಿಪುಡಿ ಮಾಡಿತ್ತು (೧೧). ಸಕಲಭೂತಗಳನ್ನೂ ನಡುಗಿಸಬಲ್ಲುದಾಗಿತ್ತು. ಭುಜಕೀರ್ತಿಯಂತಿದ್ದ ಸುವರ್ಣಾಭರಣದಿಂದ ಭೂಷಿತವಾಗಿತ್ತು. ಕ್ರೂರಕರ್ಮಿಯಾದ ಆ ನಿಶಾಚರನು ದೊಡ್ಡ ಕೃಷ್ಣಸರ್ಪದಂತಿದ್ದ ಆ ಪರಿಘವನ್ನು ಎತ್ತಿಹಿಡಿದು ಶ್ರೀರಾಮನ ಕಡೆಗೆ ನುಗ್ಗಿದನು (೧೨). ದೂಷಣನು ಹಾಗೆ ನುಗ್ಗಿ ಬರುತ್ತಿರಲು, ರಾಘವನು ಎರಡು ಬಾಣಗಳಿಂದ ಅವನ ಎರಡು ತೋಳುಗಳನ್ನು ಕತ್ತರಿಸಿ ಕೆಡಹಿದನು. ಅವನು ಹಿಡಿದಿದ್ದ ಬೃಹದಾಕಾರದ ಪರಿಘವು ಜಾರಿ ಇಂದ್ರಧ್ವಜದಂತೆ ರಣರಂಗದಲ್ಲಿ ಉರುಳಿಬಿದ್ದಿತು (೧೩–೧೪). ಹೀಗೆ ಕೈಗಳು ಕತ್ತರಿಸಿಬೀಳಲು ದೂಷಣನು ಎರಡು ಕೋರೆಗಳೂ ಮುರಿದ ಸಲಗನಂತೆ ದೊಪ್ಪನೆ ನೆಲದಮೇಲೆ ಸತ್ತುಬಿದ್ದನು. ಅವನು ಹತನಾಗಿ ಉರುಳಲು, (ಯುದ್ಧವನ್ನು ನೋಡುತ್ತಿದ್ದ) ಸಕಲದೇವಾದಿಗಳೂ 'ಭಲಾ ! ಭೇಷ್ ! ' ಎಂದು ಕಾಕುತ್ಸ್ಥನನ್ನು ಹೊಗಳಿದರು (೧೫–೧೬). ಆ ಸಮಯದಲ್ಲಿ ರಾಕ್ಷಸಪಡೆಯ ನಾಯಕರಾದ ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥಿ—ಎಂಬ ಮೂವರು ರಾಕ್ಷಸರು ಶ್ರೀರಾಮನ ಮೇಲೆ ಒಟ್ಟಿಗೆ ಧಾವಿಸಿ

ಸಂಹತ್ಯಾಭ್ಯದ್ರವನ್ ರಾಮಂ ಮೃತ್ಯುಪಾಶಾವಪಾಶಿತಾಃ ।
ಮಹಾಕಪಾಲಃ ಸ್ಥೂಲಾಕ್ಷಃ ಪ್ರಮಾಥೀ ಚ ಮಹಾಬಲಃ ॥ ೧೮

ಮಹಾಕಪಾಲೋ ವಿಪುಲಂ ಶೂಲಮುದ್ಯಮ್ಯ ರಾಕ್ಷಸಃ ।
ಸ್ಥೂಲಾಕ್ಷಃ ಪಟ್ಟಿಶಂ ಗೃಹ್ಯ ಪ್ರಮಾಥೀ ಚ ಪರಶ್ವಧಮ್ ॥ ೧೯

ದೃಷ್ಟ್ವೈವಾಪತತಸ್ತೂರ್ಣಂ ರಾಘವಃ ಸಾಯಕೈಃ ಶಿತೈಃ ।
ತೀಕ್ಷ್ಣಾಗ್ರೈಃ ಪ್ರತಿಜಗ್ರಾಹ ಸಂಪ್ರಾಪ್ತಾನತಿಥೀನಿವ ॥ ೨೦

ಮಹಾಕಪಾಲಸ್ಯ ಶಿರಶ್ಚಿಚ್ಛೇದ ಪರಮೇಷುಭಿಃ ।
ಅಸಂಖ್ಯೇಯೈಸ್ತು ಬಾಣೌಘೈಃ ಪ್ರಮಮಾಥ ಪ್ರಮಾಥಿನಮ್ ॥ ೨೧

ಸ ಪಪಾತ ಹತೋ ಭೂಮೌ ವಿಟಪೀವ ಮಹಾದ್ರುಮಃ ।
ಸ್ಥೂಲಾಕ್ಷಸ್ಯಾಕ್ಷಿಣೀ ತೀಕ್ಷ್ಣೈಃ ಪೂರಯಾಮಾಸ ಸಾಯಕೈಃ ॥ ೨೨

ದೂಷಣಸ್ಯಾನುಗಾನ್ ಪಂಚ ಸಾಹಸ್ರಾನ್ ಕುಪಿತಃ ಕ್ಷಣಾತ್ ।
ಬಾಣೌಘೈಃ ಪಂಚಸಾಹಸ್ರೈರನಯದ್ಯಮಸಾದನಮ್ ॥ ೨೩

---

ಬಂದರು. ಮೃತ್ಯುಪಾಶವು ಅವರನ್ನು ಅತ್ತ ಜಗ್ಗುತ್ತಿತ್ತು (೧೭–೧೮). ಮಹಾಕಪಾಲನು ಉದ್ದವಾದ ಶೂಲವನ್ನೂ ಸ್ಥೂಲಾಕ್ಷನು ಪಟ್ಟಿಶವನ್ನೂ ಪ್ರಮಾಥಿಯು ಪರಶುವನ್ನೂ ಹಿಡಿದಿದ್ದರು. ಆ ರಾಕ್ಷಸರು ಧಾವಿಸಿಬರುವುದನ್ನು ಕಂಡೊಡನೆ ಶ್ರೀರಾಮನು ನಿಶಿತಾಸ್ತ್ರಗಳನ್ನು ಪ್ರಯೋಗಿಸಿ ಅವರಿಗೆ ಸ್ವಾಗತವನ್ನಿತ್ತನು! (ಮನೆಗೆ ಅತಿಥಿಗಳು ಬಂದಂತೆ) ರಣರಂಗದ ಅತಿಥಿಗಳು ಬಂದರೆಂದು ಅವನಿಗೆ ಸಂತೋಷವಾಯಿತು! (೧೯–೨೦). ಉಗ್ರಶರಗಳಿಂದ ಮಹಾಕಪಾಲನ ಮಸ್ತಕವನ್ನು ಕತ್ತರಿಸಿ, ಬಾಣರಾಶಿಗಳಿಂದ ಪ್ರಮಾಥಿಯನ್ನು ಮಥಿಸಿದನು. (ಬಾಣರಾಶಿಗಳು ಮೈಯಲ್ಲಿ ನೆಟ್ಟಿರಲು) ಆ ರಾಕ್ಷಸನು ಶಾಖೋಪಶಾಖೆಗಳಿಂದ ಕೂಡಿದ ಹೆಮ್ಮರದಂತೆ ಸತ್ತು ಒರಗಿದನು. ಸ್ಥೂಲಾಕ್ಷನ ದೊಡ್ಡ ದೊಡ್ಡ ಕಣ್ಣುಗಳಲ್ಲಿ ತೀಕ್ಷ್ಣಾಸ್ತ್ರಗಳನ್ನು ತೂರಿಸಿ ಅವನನ್ನು ತೀರಿಸಿದನು (೨೧–೨೨). ಕ್ರುದ್ಧನಾದ ಶ್ರೀರಾಮನು ದೂಷಣನೊಡನೆ ಬಂದಿದ್ದ ಐದುಸಾವಿರ ಸೈನಿಕರನ್ನು ಐದುಸಾವಿರ

ದೂಷಣಂ ನಿಹತಂ ದೃಷ್ಟ್ವಾ ತಸ್ಯ ಚೈವ ಪದಾನುಗಾನ್ ।
ವ್ಯಾದಿದೇಶ ಖರಃ ಕ್ರುದ್ಧಃ ಸೇನಾಧ್ಯಕ್ಷಾನ್ ಮಹಾಬಲಾನ್ ॥ ೨೪

ಅಯಂ ವಿನಿಹತಃ ಸಂಖ್ಯೇ ದೂಷಣಃ ಸಪದಾನುಗಃ ।
ಮಹತ್ಯಾ ಸೇನಯಾ ಸಾರ್ಧಂ ಯುದ್ಧ್ವಾ ರಾಮಂ ಕುಮಾನುಷಮ್ ॥

ಶಸ್ತ್ರೈರ್ನಾನಾವಿಧಾಕಾರೈರ್ಹನಧ್ವಂ ಸರ್ವರಾಕ್ಷಸಾಃ ।
ಏವಮುಕ್ತ್ವಾ ಖರಃ ಕ್ರುದ್ಧೋ ರಾಮಮೇವಾಭಿದುದ್ರುವೇ ॥ ೨೬

ಶ್ಯೇನಗಾಮೀ ಪೃಥುಗ್ರೀವೋ ಯಜ್ಞಶತ್ರುರ್ವಿಹಂಗಮಃ ।
ದುರ್ಜಯಃ ಕರವೀರಾಕ್ಷಃ ಪರುಷಃ ಕಾಲಕಾರ್ಮುಕಃ ॥ ೨೭

ಮೇಘಮಾಲೀ ಮಹಾಮಾಲೀ ಸರ್ಪಾಸ್ಯೋ ರುಧಿರಾಶನಃ ।
ದ್ವಾದಶೈತೇ ಮಹಾವೀರ್ಯಾ ಬಲಾಧ್ಯಕ್ಷಾಃ ಸಸೈನಿಕಾಃ ॥ ೨೮

ರಾಮಮೇವಾಭ್ಯವರ್ತಂತ ವಿಸೃಜಂತಃ ಶರೋತ್ತಮಾನ್ ।
ತತಃ ಪಾವಕಸಂಕಾಶೈರ್ಹೇಮವಜ್ರವಿಭೂಷಿತೈಃ ॥ ೨೯

---

ಬಾಣಗಳಿಂದ ಮರುಕ್ಷಣದಲ್ಲಿ ಯಮನ ಮನೆಗೆ ಕಳಿಸಿದನು (೨೩). ದೂಷಣನೂ ಅವನ ಪಡೆಯವರೂ ಹತರಾದುದನ್ನು ಕಂಡು ಖರನ ಸಿಟ್ಟು ನೆತ್ತಿಗೇರಿತು. ಮಹಾಬಲಶಾಲಿಗಳಾದ ಐವರು ಸೇನಾಧ್ಯಕ್ಷರನ್ನು ಕರೆದು ಅವನು "ಎಲೈ ರಾಕ್ಷಸರೆ, ದೂಷಣನೂ ಅವನ ಸೈನಿಕರೂ ಯುದ್ಧದಲ್ಲಿ ಹತರಾದರು. ಈಗ ನೀವೆಲ್ಲರೂ ದೊಡ್ಡ ಸೇನೆಯೊಡನೆ ಆಕ್ರಮಣ ಮಾಡಿ ವಿವಿಧಾಯುಧಗಳನ್ನು ಉಪಯೋಗಿಸಿ ಈ ಅಲ್ಪಮನುಷ್ಯನನ್ನು ಕೊಂದೆಸೆಯಿರಿ" ಎಂದು ಆಜ್ಞೆಯಿತ್ತನು (೨೪–೨೫). ಹೀಗೆ ಆಜ್ಞೆಯಿತ್ತು ತಾನೂ ಯುದ್ಧಕ್ಕೆ ಹೊರಟನು. ಆಗ ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಕರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಾಸ್ಯ ಮತ್ತು ರುಧಿರಾಶನ ಎಂಬ ಹನ್ನೆರಡು ಮಂದಿ ಸೇನಾಧ್ಯಕ್ಷರು ತಮ್ಮ ತಮ್ಮ ಪಡೆಗಳೊಡನೆ ಹೊರಟು ಶ್ರೀರಾಮನಮೇಲೆ ಬಾಣಗಳನ್ನು ಸುರಿಸಲಾರಂಭಿಸಿದರು (೨೬–೨೮). ತೇಜಸ್ವಿಯಾದ ಶ್ರೀರಾಮನು ಅಗ್ನಿಯಂತೆ ಜ್ವಲಿಸುತ್ತಿದ್ದ ಅಸ್ತ್ರಗಳನ್ನು ಅವರ

ಜಘಾನ ಶೇಷಂ ತೇಜಸ್ವೀ ತಸ್ಯ ಸೈನ್ಯಸ್ಯ ಸಾಯಕೈಃ ।
ತೇ ರುಕ್ಮಪುಂಖಾ ವಿಶಿಖಾಃ ಸಧೂಮಾ ಇವ ಪಾವಕಾಃ ॥ ೩೦

ನಿಜಘ್ನುಸ್ತಾನಿ ರಕ್ಷಾಂಸಿ ವಜ್ರಾ ಇವ ಮಹಾದ್ರುಮಾನ್ ।
ರಕ್ಷಸಾಂ ತು ಶತಂ ರಾಮಃ ಶತೇನೈಕೇನ ಕರ್ಣಿನಾ ॥ ೩೧

ಸಹಸ್ರಂ ಚ ಸಹಸ್ರೇಣ ಜಘಾನ ರಣಮೂರ್ಧನಿ ।
ತೈರ್ಭಿನ್ನವರ್ಮಾಭರಣಾಶ್ಛಿನ್ನಭಿನ್ನಶರಾಸನಾಃ ॥ ೩೨

ನಿಪೇತುಃ ಶೋಣಿತಾದಿಗ್ಧಾ ಧರಣ್ಯಾಂ ರಜನೀಚರಾಃ ।
ತೈರ್ಮುಕ್ತಕೇಶೈಃ ಸಮರೇ ಪತಿತೈಃ ಶೋಣಿತೋಕ್ಷಿತೈಃ ॥ ೩೩

ಆಸ್ತೀರ್ಣಾ ವಸುಧಾ ಕೃತ್ಸ್ನಾ ಮಹಾವೇದಿಃ ಕುಶೈರಿವ ।
ಕ್ಷಣೇನ ತು ಮಹಾಘೋರಂ ವನಂ ನಿಹತರಾಕ್ಷಸಮ್ ॥ ೩೪

ಬಭೂವ ನಿರಯಪ್ರಖ್ಯಂ ಮಾಂಸಶೋಣಿತಕರ್ದಮಮ್ ।
ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ॥ ೩೫

---

ಮೇಲೆ ಪ್ರಯೋಗಿಸಿದನು. ಹೊಗೆಯಿಲ್ಲದ ಬೆಂಕಿಯಂತೆ ಬೆಳಗುತ್ತಿದ್ದ ಆ ಬಾಣಗಳು ಸಿಡಿಲಿನಂತೆ ಎರಗಿ, ಮರಗಳಂತಿದ್ದ ಆ ರಾಕ್ಷಸರನ್ನು ಕೊಂದು ಉರುಳಿಸಿದವು (೨೯–೩೦). ನೂರರ ಗುಂಪನ್ನು ನೂರು ಬಾಣಗಳಿಂದಲೂ ಸಾವಿರದ ಗುಂಪನ್ನು ಸಾವಿರ ಬಾಣಗಳಿಂದಲೂ ಕೊಂದನು. ಅವರ ಕವಚಗಳು ಹರಿದು ಆಭರಣಗಳು ಒಡೆದು ಬಿಲ್ಲುಗಳು ಚೂರುಚೂರಾದವು (೩೧–೩೨). ನೆತ್ತರಲ್ಲಿ ನೆನೆದ ರಾಕ್ಷಸರು ನೆಲದಲ್ಲಿ ಉರುಳಿದರು. ರಕ್ತದಲ್ಲಿ ನೆನೆದು ತಲೆಗೂದಲು ಕೆದರಿ ಚದರಿ ಹರಡಿ ಬಿದ್ದಿದ್ದ ಆ ನಿಶಾಚರರಿಂದ ರಣಭೂಮಿಯು, ದರ್ಭೆಗಳು ಸುತ್ತಲೂ ಹರಡಿರುವ ಮಹಾವೇದಿಯಂತೆ ಕಾಣಿಸುತ್ತಿತ್ತು (೩೩). ಒಂದು ಕ್ಷಣಮಾತ್ರದಲ್ಲಿ ರಾಕ್ಷಸರ ರಕ್ತಮಾಂಸಗಳಿಂದ ಕೊಚ್ಚೆಯಾಗಿ ಮಹಾಘೋರವಾದ ಆ ಅಡವಿಯು ಪ್ರತ್ಯಕ್ಷ ನರಕದಂತಾಯಿತು. ರಥದ ನೆರವಿಲ್ಲದೆ ಕೇವಲ ಪದಾತಿಯಾಗಿದ್ದ ಶ್ರೀರಾಮನು ಒಬ್ಬ ಮನುಷ್ಯಮಾತ್ರನು ! ಅಂಥವನು ಒಬ್ಬನೇ ಭೀಮಸಾಹಸಿಗಳಾದ ಹದಿನಾಲ್ಕುಸಾವಿರ ರಾಕ್ಷಸರನ್ನು ಕೊಂದೆಸೆದನು ! (೩೪–೩೫).

*

ಹತಾನ್ಯೇಕೇನ ರಾಮೇಣ ಮಾನುಷೇಣ ಪದಾತಿನಾ ।
ತಸ್ಯ ಸೈನ್ಯಸ್ಯ ಸರ್ವಸ್ಯ ಖರಃ ಶೇಷೋ ಮಹಾರಥಃ ॥ ೩೬

ರಾಕ್ಷಸಸ್ತ್ರಿಶಿರಾಶ್ಚೈವ ರಾಮಶ್ಚ ರಿಪುಸೂದನಃ ।
ಶೇಷಾ ಹತಾ ಮಹಾಸತ್ತ್ವಾ ರಾಕ್ಷಸಾ ರಣಮೂರ್ಧನಿ ॥ ೩೭

ಘೋರಾ ದುರ್ವಿಷಹಾಃ ಸರ್ವೇ ಲಕ್ಷ್ಮಣಸ್ಯಾಗ್ರಜೇನ ತೇ ॥

ತತಸ್ತು ತದ್ಭೀಮಬಲಂ ಮಹಾಹವೇ
ಸಮೀಕ್ಷ್ಯ ರಾಮೇಣ ಹತಂ ಬಲೀಯಸಾ ।
ರಥೇನ ರಾಮಂ ಮಹತಾ ಖರಸ್ತದಾ
ಸಮಾಸಸಾದೇಂದ್ರ ಇವೋದ್ಯತಾಶನಿಃ ॥ ೩೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಡ್ವಿಂಶಃ ಸರ್ಗಃ

ಆ ಮಹಾಸೇನಾವಮರ್ದದಲ್ಲಿ ಆಗ ಉಳಿದವರು ಮೂವರೇ ; ಒಬ್ಬನು ಮಹಾರಥನಾದ ಖರ, ಇನ್ನೊಬ್ಬನು ತ್ರಿಶಿರನೆಂಬ ರಾಕ್ಷಸ, ಮತ್ತೊಬ್ಬನು ಶತ್ರುಸಂಹಾರಕನಾದ ಶ್ರೀರಾಮ ! ಮಹಾಬಲಾಢ್ಯರೂ ಭಯಂಕರರೂ ದುರಾಸದರೂ ಆದ ಉಳಿದ ರಾಕ್ಷಸರೆಲ್ಲರನ್ನೂ ಲಕ್ಷ್ಮಣಾಗ್ರಜನು ಯುದ್ಧದಲ್ಲಿ ಧ್ವಂಸ ಮಾಡಿದ್ದನು ! (೩೬–೩೭). ಭೀಮಪರಾಕ್ರಮಿಗಳಾದ ರಾಕ್ಷಸರ ಸೇನೆಯನ್ನು ಮಹಾವೀರನಾದ ಶ್ರೀರಾಮನು ಸಂಹರಿಸಿದ್ದನ್ನು ಖರನು ಕಣ್ಣಾರೆ ಕಂಡನು. ಕೂಡಲೆ ಆತನು ಒಂದು ಮಹಾರಥವನ್ನೇರಿ, ವಜ್ರಧಾರಿಯಾದ ಇಂದ್ರನಂತೆ ರಭಸದಿಂದ ಶ್ರೀರಾಮನಿದ್ದಲ್ಲಿಗೆ ಹೊರಟನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗ

## ಸಪ್ತವಿಂಶಃ ಸರ್ಗಃ

### ತ್ರಿಶಿರೋವಧಃ

ಖರಂ ತು ರಾಮಾಭಿಮುಖಂ ಪ್ರಯಾಂತಂ ವಾಹಿನೀಪತಿಃ ।
ರಾಕ್ಷಸಸ್ತ್ರಿಶಿರಾ ನಾಮ ಸಂನಿಪತ್ಯೇದಮಬ್ರವೀತ್ ॥ ೧

ಮಾಂ ನಿಯೋಜಯ ವಿಕ್ರಾಂತ ಸಂನಿವರ್ತಸ್ವ ಸಾಹಸಾತ್ ।
ಪಶ್ಯ ರಾಮಂ ಮಹಾಬಾಹುಂ ಸಂಯುಗೇ ವಿನಿಪಾತಿತಮ್ ॥ ೨

ಪ್ರತಿಜಾನಾಮಿ ತೇ ಸತ್ಯಮಾಯುಧಂ ಚಾಹಮಾಲಭೇ ।
ಯಥಾ ರಾಮಂ ವಧಿಷ್ಯಾಮಿ ವಧಾರ್ಹಂ ಸರ್ವರಕ್ಷಸಾಮ್ ॥ ೩

ಅಹಂ ವಾಸ್ಯ ರಣೇ ಮೃತ್ಯುರೇಷ ವಾ ಸಮರೇ ಮಮ ।
ವಿನಿವೃತ್ಯ ರಣೋತ್ಸಾಹಾನ್ಮುಹೂರ್ತಂ ಪ್ರಾಶ್ನಿಕೋ ಭವ ॥ ೪

ಪ್ರಹೃಷ್ಟೋ ವಾ ಹತೇ ರಾಮೇ ಜನಸ್ಥಾನಂ ಪ್ರಯಾಸ್ಯಸಿ ।
ಮಯಿ ವಾ ನಿಹತೇ ರಾಮಂ ಸಂಯುಗಾಯೋಪಯಾಸ್ಯಸಿ ॥ ೫

## ಸರ್ಗ ೨೭

### ತ್ರಿಶಿರನ ವಧೆ

ಹೀಗೆ ಖರನು ಶ್ರೀರಾಮನಿಗೆ ಎದುರಾಗಿ ಯುದ್ಧಕ್ಕೆ ತೆರಳಲು ಸೇನಾಪತಿಯಾದ ತ್ರಿಶಿರನು ಅಡ್ಡಬಂದು ಈ ಮಾತನ್ನು ಹೇಳಿದನು : " ಹೇ ಪರಾಕ್ರಮಿ, ನನ್ನನ್ನು ಯುದ್ಧಕ್ಕೆ ನೇಮಿಸು. ಥಟ್ಟನೆ ನೀನೇ ಯುದ್ಧಕ್ಕೆ ಹೋಗಬೇಡ. ವೀರನೆನಿಸಿದ ಈ ರಾಮನನ್ನು ಸಂಗ್ರಾಮದಲ್ಲಿ ನಾನು ಹೇಗೆ ಕೊಂದುಹಾಕುವೆನೆಂಬುದನ್ನು ನೋಡುತ್ತಿರು (೧–೨). ಇಗೋ, ಈ ಆಯುಧವನ್ನು ಮುಟ್ಟಿ ಪ್ರತಿಜ್ಞೆಮಾಡಿ ಹೇಳುತ್ತೇನೆ: ಸಮಸ್ತ ರಾಕ್ಷಸರೂ ಸೇರಿ ಸಂಹರಿಸಬೇಕಾದ ರಾಮನನ್ನು ನಾನೇ ಸಂಹರಿಸುವೆನು. ರಣರಂಗದಲ್ಲಿ ನಾನು ಅವನಿಗೆ ಮೃತ್ಯುವಾಗುವೆನೋ ಅವನು ನನಗೆ ಮೃತ್ಯುವಾಗುವನೋ ಎಂಬುದನ್ನು ಮಧ್ಯಸ್ಥನಾಗಿ ನೋಡುತ್ತಿರು. ಒಂದು ಮುಹೂರ್ತಕಾಲ ಈ ರಣೋತ್ಸಾಹವನ್ನು ತ್ಯಜಿಸು (೩–೪). ನಾನು ರಾಮನನ್ನು ಸಂಹರಿಸಿದಮೇಲೆ ನೀನು ಸಂತುಷ್ಟನಾಗಿ

ಖರಸ್ತ್ರಿಶಿರಸಾ ತೇನ ಮೃತ್ಯುಲೋಭಾತ್ ಪ್ರಸಾದಿತಃ ।
ಗಚ್ಛ ಯುಧ್ಯೇತ್ಯನುಜ್ಞಾತೋ ರಾಘವಾಭಿಮುಖೋ ಯಯೌ ॥ ೬

ತ್ರಿಶಿರಾಶ್ಚ ರಥೇನೈವ ವಾಜಿಯುಕ್ತೇನ ಭಾಸ್ವತಾ ।
ಅಭ್ಯದ್ರವದ್ರಣೇ ರಾಮಂ ತ್ರಿಶೃಂಗ ಇವ ಪರ್ವತಃ ॥ ೭

ಶರಧಾರಾಸಮೂಹಾನ್ ಸ ಮಹಾಮೇಘ ಇವೋತ್ಸೃಜನ್ ।
ವ್ಯಸೃಜತ್ಸದೃಶಂ ನಾದಂ ಜಲಾರ್ದ್ರಸ್ಯ ತು ದುಂದುಭೇಃ ॥ ೮

ಆಗಚ್ಛಂತಂ ತ್ರಿಶಿರಸಂ ರಾಕ್ಷಸಂ ಪ್ರೇಕ್ಷ್ಯ ರಾಘವಃ ।
ಧನುಷಾ ಪ್ರತಿಜಗ್ರಾಹ ವಿಧೂನ್ವನ್ ಸಾಯಕಾನ್ ಶಿತಾನ್ ॥ ೯

ಸ ಸಂಪ್ರಹಾರಸ್ತುಮುಲೋ ರಾಮತ್ರಿಶಿರಸೋರ್ಮಹಾನ್ ।
ಬಭೂವಾತೀವ ಬಲಿನೋಃ ಸಿಂಹಕುಂಜರಯೋರಿವ ॥ ೧೦

ತತಸ್ತ್ರಿಶಿರಸಾ ಬಾಣೈರ್ಲಲಾಟೇ ತಾಡಿತಸ್ತ್ರಿಭಿಃ ।
ಅಮರ್ಷೀ ಕುಪಿತೋ ರಾಮಃ ಸಂರಬ್ಧಮಿದಮಬ್ರವೀತ್ ॥ ೧೧

---

ಜನಸ್ಥಾನಕ್ಕೆ ಹಿಂದಿರುಗಬಹುದು. ಒಂದು ವೇಳೆ ನಾನೇ ಹತನಾದರೆ ನೀನು ಯುದ್ಧಕ್ಕೆ ತೆರಳಬಹುದು" ಎಂದನು (೫). ತ್ರಿಶಿರನಿಗಾಗಿ ಮೃತ್ಯು ಕಾದಿತ್ತು. ಖರನು ಒಪ್ಪಿ 'ಆಗಲಿ, ಯುದ್ಧಮಾಡು' ಎಂದು ಅನುಮತಿಯನ್ನೀಯಲು, ತ್ರಿಶಿರನು ರಾಘವನ ಮೇಲೆ ನುಗ್ಗಿದನು. ಅವನು ಕುದುರೆಗಳನ್ನು ಹೂಡಿದ ಉತ್ತಮವಾದ ರಥದಲ್ಲಿ ಕುಳಿತು ಧಾವಿಸುತ್ತಿರಲು, ಮೂರು ಶಿಖರಗಳಿರುವ ಪರ್ವತವು ಹೋಗುತ್ತಿದೆಯೋ ಎಂಬಂತೆ ಕಾಣಿಸಿತು (೬–೭). ಆತನು ಮಹಾಮೇಘದಂತೆ ಶರಧಾರೆಗಳನ್ನು ಸುರಿಸುತ್ತ ಗರ್ಜಿಸುತ್ತ ಹೋದನು. ಆದರೆ ಅವನ ಗರ್ಜನೆಯು ನೀರಿನಿಂದ ಒದ್ದೆಯಾದ ನಗಾರಿಯ ನಾದದಂತೆ ಕುಗ್ಗಿತು. ಮೇಲೇರಿ ಬರುತ್ತಿದ್ದ ತ್ರಿಶಿರನನ್ನು ಕಂಡು, ರಾಘವನು ತೀಕ್ಷ್ಣಾಸ್ತ್ರಗಳನ್ನು ಸುರಿಸುತ್ತ ಧನುಸ್ಸಿನಿಂದ ಅವನಿಗೆ ಸ್ವಾಗತವನ್ನಿತ್ತನು (೮–೯). ಬಲಶಾಲಿಗಳಾದ ಅವರಿಬ್ಬರಿಗೆ ಮಹತ್ತರವಾದ ತುಮುಲಯುದ್ಧವು ನಡೆಯಿತು. ಆನೆಸಿಂಹಗಳೆರಡು ಹೋರಾಡುವಂತೆ ತೋರಿತು. ತ್ರಿಶಿರನು ಮೂರು ಬಾಣಗಳನ್ನು ಶ್ರೀರಾಮನ

ಅಹೋ ವಿಕ್ರಮಶೂರಸ್ಯ ರಾಕ್ಷಸಸ್ಯೇದೃಶಂ ಬಲಮ್ ।
ಪುಷ್ಪೈರಿವ ಶರೈರ್ಯಸ್ಯ ಲಲಾಟೇಽಸ್ಮಿ ಪರಿಕ್ಷತಃ ॥ ೧೨

ಮಮಾಪಿ ಪ್ರತಿಗೃಹ್ಣೀಷ್ವ ಶರಾಂಶ್ಚಾಪಗುಣಚ್ಯುತಾನ್ ।
ಏವಮುಕ್ತ್ವಾ ತು ಸಂರಬ್ಧಃ ಶರಾನಾಶೀವಿಷೋಪಮಾನ್ ॥ ೧೩

ತ್ರಿಶಿರೋವಕ್ಷಸಿ ಕ್ರುದ್ಧೋ ನಿಜಘಾನ ಚತುರ್ದಶ ।
ಚತುರ್ಭಿಸ್ತುರಗಾನಸ್ಯ ಶರೈಃ ಸಂನತಪರ್ವಭಿಃ ॥ ೧೪

ನ್ಯಪಾತಯತ ತೇಜಸ್ವೀ ಚತುರಸ್ತಸ್ಯ ವಾಜಿನಃ ।
ಅಷ್ಟಭಿಃ ಸಾಯಕೈಃ ಸೂತಂ ರಥೋಪಸ್ಥಾನ್ನ್ಯಪಾತಯತ್ ॥ ೧೫

ರಾಮಶ್ಚಿಚ್ಛೇದ ಬಾಣೇನ ಧ್ವಜಂ ಚಾಸ್ಯ ಸಮುಚ್ಛ್ರಿತಮ್ ।
ತತೋ ಹತರಥಾತ್ತಸ್ಮಾದುತ್ಪತಂತಂ ನಿಶಾಚರಮ್ ॥ ೧೬

ಬಿಭೇದ ರಾಮಸ್ತಂ ಬಾಣೈರ್ಹೃದಯೇ ಸೋಽಭವಜ್ಜಡಃ ।
ಸಾಯಕೈಶ್ಚಾಪ್ರಮೇಯಾತ್ಮಾ ಸಾಮರ್ಷಸ್ತಸ್ಯ ರಕ್ಷಸಃ ॥ ೧೭

ಹಣೆಗೆ ಹೊಡೆದನು. ಶ್ರೀರಾಮನು ಭುಗಿಲ್ ಎಂದು ಸಿಡಿದೆದ್ದು ಸಿಟ್ಟಿನಿಂದ "ಅಬ್ಬಾ! ಈ ರಾಕ್ಷಸನು ಬಲುಗಟ್ಟಿಗ! ಇವನಿಗೆ ಇಷ್ಟು ಬಲವಿದೆಯಲ್ಲ! ಈತನ ಬಾಣಗಳು ನನ್ನ ಹಣೆಗೆ ಹೂಗಳಂತೆ ಬಂದು ಬಡಿದವು! (೧೦–೧೨). ಎಲೈ, ಹೆದೆಯಿಂದ ಹಾರಿಬರುವ ನನ್ನ ಬಾಣಗಳ ಸವಿಯನ್ನೂ ಸ್ವಲ್ಪ ನೋಡು!' ಎಂದು ಹೇಳಿ ವಿಷಸರ್ಪಗಳಂತಿದ್ದ ಹದಿನಾಲ್ಕು ಬಾಣಗಳನ್ನು ತ್ರಿಶಿರನ ಎದೆಯಲ್ಲಿ ನೆಟ್ಟನು. ನಾಲ್ಕು ಕೊಂಕುಬಾಣಗಳಿಂದ ಆ ತೇಜಸ್ವಿಯು ತ್ರಿಶಿರನ ನಾಲ್ಕು ಕುದುರೆಗಳನ್ನು ಕೊಂದು ಉರುಳಿಸಿದನು. ಎಂಟು ಅಂಬುಗಳಿಂದ ಸಾರಥಿಯನ್ನು ಅವನ ಸ್ಥಾನದಿಂದ ಹೊಡೆದು ಕೆಡವಿದನು (೧೩–೧೫). ಶ್ರೀ ರಾಮನು ಒಂದು ಅಂಬನ್ನು ಹೊಡೆದು ತ್ರಿಶಿರನ ಉನ್ನತವಾದ ಧ್ವಜವನ್ನು ಬೀಳಿಸಿದನು. ಅಷ್ಟರಲ್ಲಿ ನುಚ್ಚುನುರಿಯಾದ ರಥದಿಂದ ತ್ರಿಶಿರನು ಮೇಲಕ್ಕೆ ನೆಗೆಯುತ್ತಿರಲು, ರಾಮನು ಶರಗಳನ್ನು ಅವನ ಎದೆಗೆ ಗುರಿಯಿಟ್ಟು ಹೊಡೆದನು. ರಾಕ್ಷಸನು ಮುಂಗಾಣದೆ

ಶಿರಾಂಸ್ಯಪಾತಯದ್ರಾಮೋ ವೇಗವದ್ಭಿಸ್ತ್ರಿಭಿಃ ಶಿತೈಃ ।
ಸ ಭೂಮೌ ರುಧಿರೋದ್ಗಾರೀ ರಾಮಬಾಣಾಭಿಪೀಡಿತಃ ॥ ೧೮

ನ್ಯಪತತ್ ಪತಿತೈಃ ಪೂರ್ವಂ ಸ್ವಶಿರೋಭಿರ್ನಿಶಾಚರಃ ।
ಹತಶೇಷಾಸ್ತತೋ ಭಗ್ನಾ ರಾಕ್ಷಸಾಃ ಖರಸಂಶ್ರಯಾಃ ॥ ೧೯

ದ್ರವಂತಿ ಸ್ಮ ನ ತಿಷ್ಠಂತಿ ವ್ಯಾಘ್ರತ್ರಸ್ತಾ ಮೃಗಾ ಇವ ।
ತಾನ್ ಖರೋ ದ್ರವತೋ ದೃಷ್ಟ್ವಾ ನಿವರ್ತ್ಯ ರುಷಿತಃ ಸ್ವಯಮ್ ॥

ರಾಮಮೇವಾಭಿದುದ್ರಾವ ರಾಹುಶ್ಚಂದ್ರಮಸಂ ಯಥಾ ॥ ೨೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತವಿಂಶಃ ಸರ್ಗಃ

ನಿಶ್ಚೇಷ್ಟನಾದನು (೧೬–೧೭). ಅದ್ವಿತೀಯಪರಾಕ್ರಮಿಯಾದ ಶ್ರೀರಾಮನು ಮೂರು ಕೂರಂಬುಗಳಿಂದ ಅವನ ಮೂರು ತಲೆಗಳನ್ನು ಕಡಿದು ಕೆಡಹಲು, ಅವುಗಳ ಹಿಂದೆ ಆ ನಿಶಾಚರನೂ ರಕ್ತವನ್ನು ಸುರಿಸುತ್ತ ನೆಲದಮೇಲೊರಗಿದನು. ಆಗ ಖರನ ಪಡೆಯಲ್ಲಿ ಗಾಯಗೊಂಡು ಹತಶೇಷರಾದ ರಾಕ್ಷಸರು,* ಹುಲಿಗೆ ಹೆದರಿದ ಜಿಂಕೆಗಳಂತೆ ಎಲ್ಲಿಯೂ ನಿಲ್ಲದೆ ಓಡತೊಡಗಿದರು (೧೮–೧೯). ಅದನ್ನು ನೋಡಿ ಖರನು ಕ್ರುದ್ಧನಾದನು. ಓಡುತ್ತಿದ್ದ ರಾಕ್ಷಸರನ್ನು ನಿಲ್ಲಹೇಳಿ, ರಾಹುವು ಚಂದ್ರನ ಕಡೆಗೆ ಧಾವಿಸುವಂತೆ, ಖರನು ಶ್ರೀರಾಮಚಂದ್ರನ ಕಡೆಗೆ ಧಾವಿಸಿದನು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗ

---

* ರಾಕ್ಷಸರಲ್ಲಿ ಖರ, ತ್ರಿಶಿರರಿಬ್ಬರೇ ಉಳಿದರೆಂದು ಹಿಂದಿನ ಸರ್ಗದ ಕಡೆಯಲ್ಲಿ ಹೇಳಿದೆ. ಬಹುಮಂದಿ ಸತ್ತರೆಂದೂ ಕೆಲವೇ ರಾಕ್ಷಸರು ಉಳಿದರೆಂದೂ ಅದರ ತಾತ್ಪರ್ಯ.

## ಅಷ್ಟಾವಿಂಶಃ ಸರ್ಗಃ

### ಖರರಾಮಸಂಪ್ರಹಾರಃ

ನಿಹತಂ ದೂಷಣಂ ದೃಷ್ಟ್ವಾ ರಣೇ ತ್ರಿಶಿರಸಾ ಸಹ ।
ಖರಸ್ಯಾಪ್ಯಭವತ್ ತ್ರಾಸೋ ದೃಷ್ಟ್ವಾ ರಾಮಸ್ಯ ವಿಕ್ರಮಮ್ ॥ ೧

ಸ ದೃಷ್ಟ್ವಾ ರಾಕ್ಷಸಂ ಸೈನ್ಯಮವಿಷಹ್ಯಂ ಮಹಾಬಲಃ ।
ಹತಮೇಕೇನ ರಾಮೇಣ ತ್ರಿಶಿರೋದೂಷಣಾವಪಿ ॥ ೨

ತದ್ಬಲಂ ಹತಭೂಯಿಷ್ಠಂ ವಿಮನಾಃ ಪ್ರೇಕ್ಷ್ಯ ರಾಕ್ಷಸಃ ।
ಆಸಸಾದ ಖರೋ ರಾಮಂ ನಮುಚಿರ್ವಾಸವಂ ಯಥಾ ॥ ೩

ವಿಕೃಷ್ಯ ಬಲವಚ್ಚಾಪಂ ನಾರಾಚಾನ್ ರಕ್ತಭೋಜನಾನ್ ।
ಖರಶ್ಚಿಕ್ಷೇಪ ರಾಮಾಯ ಕ್ರುದ್ಧಾನಾಶೀವಿಷಾನಿವ ॥ ೪

ಜ್ಯಾಂ ವಿಧೂನ್ವನ್ ಸುಬಹುಶಃ ಶಿಕ್ಷಯಾಸ್ತ್ರಾಣಿ ದರ್ಶಯನ್ ।
ಚಚಾರ ಸಮರೇ ಮಾರ್ಗಾನ್ ಶರೈಃ ರಥಗತಃ ಖರಃ ॥ ೫

### ಸರ್ಗ ೨೮

ಶ್ರೀರಾಮನಿಗೂ ಖರನಿಗೂ ಯುದ್ಧ. ಖರನು ಶ್ರೀರಾಮನ ಧನುಸ್ಸನ್ನು ಕತ್ತರಿಸುವುದು. ಅಗಸ್ತ್ಯರು ಕೊಟ್ಟ ಧನುಸ್ಸನ್ನು ಹಿಡಿದು, ಶ್ರೀರಾಮನು ಖರನ ರಥವನ್ನು ಭಗ್ನಗೊಳಿಸುವುದು

ದೂಷಣನೊಡನೆ ತ್ರಿಶಿರನೂ ಹತನಾದುದನ್ನು ಕಂಡು ಶ್ರೀರಾಮನ ಪರಾಕ್ರಮವೇನೆಂಬುದು ಖರನಿಗೆ ಅರಿವಾಯಿತು ; ಅವನಿಗೂ ಹೆದರಿಕೆಯಾಯಿತು. ದುರ್ಧರ್ಷವಾದ ರಾಕ್ಷಸಸೈನ್ಯವನ್ನೂ ತ್ರಿಶಿರ ಮತ್ತು ದೂಷಣರನ್ನೂ ಒಬ್ಬನೇ ಶ್ರೀರಾಮನು ಕೊಂದುಹಾಕಿದುದನ್ನು ಆ ವೀರನು ಗಮನಿಸಿದನು (೧–೨). ಸೇನೆಯ ಬಹುಭಾಗವೆಲ್ಲವೂ ಹತವಾದುದನ್ನು ನೋಡಿ ಆ ರಾಕ್ಷಸನಿಗೆ ವಿಷಾದವಾಯಿತು. ನಮುಚಿಯು ದೇವೇಂದ್ರನನ್ನು ಎದುರಿಸಿದಂತೆ, ಆತನು ಶ್ರೀರಾಮನನ್ನು ಎದುರಿಸಿದನು. ತನ್ನ ಚಾಪವನ್ನು ಬಲವಾಗಿ ಎಳೆದು, ಕೆರಳಿದ ವಿಷಸರ್ಪಗಳಂತಿದ್ದ, ನೆತ್ತರನ್ನು ಕುಡಿಯಲು ಹಾತೊರೆಯುವ ಕೂರಂಬುಗಳನ್ನು ಅವನು ಶ್ರೀರಾಮನ ಮೇಲೆ ಪ್ರಯೋಗಿಸಿದನು (೧–೪). ರಥಾರೂಢನಾದ

ಸ ಸರ್ವಾಶ್ಚ ದಿಶೋ ಬಾಣೈಃ ಪ್ರದಿಶಶ್ಚ ಮಹಾರಥಃ ।
ಪೂರಯಾಮಾಸ ತಂ ದೃಷ್ಟ್ವಾ ರಾಮೋಽಪಿ ಸುಮಹದ್ಧನುಃ ॥ ೬

ಸ ಸಾಯಕೈರ್ದುರ್ವಿಷಹೈಃ ಸಸ್ಫುಲಿಂಗೈರಿವಾಗ್ನಿಭಿಃ ।
ನಭಶ್ಚಕಾರಾವಿವರಂ ಪರ್ಜನ್ಯ ಇವ ವೃಷ್ಟಿಭಿಃ ॥ ೭

ತದ್ಬಭೂವ ಶಿತೈರ್ಬಾಣೈಃ ಖರರಾಮವಿಸರ್ಜಿತೈಃ ।
ಪರ್ಯಾಕಾಶಮನಾಕಾಶಂ ಸರ್ವತಃ ಶರಸಂಕುಲಮ್ ॥ ೮

ಶರಜಾಲಾವೃತಃ ಸೂರ್ಯೋ ನ ತದಾ ಸ್ಮ ಪ್ರಕಾಶತೇ ।
ಅನ್ಯೋನ್ಯವಧಸಂರಂಭಾದುಭಯೋಃ ಸಂಪ್ರಯುಧ್ಯತೋಃ ॥ ೯

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಆಜಘಾನ ಖರೋ ರಾಮಂ ತೋತ್ರೈರಿವ ಮಹಾದ್ವಿಪಮ್ ॥ ೧೦

ತಂ ರಥಸ್ಥಂ ಧನುಷ್ಪಾಣಿಂ ರಾಕ್ಷಸಂ ಪರ್ಯವಸ್ಥಿತಮ್ ।
ದದೃಶುಃ ಸರ್ವಭೂತಾನಿ ಪಾಶಹಸ್ತಮಿವಾಂತಕಮ್ ॥ ೧೧

---

ಖರನು ಹೆದೆಯನ್ನು ಜೇಗೈಯುತ್ತ, ಅಸ್ತ್ರವಿದ್ಯಾಸಾಮರ್ಥ್ಯವನ್ನು ವಿಧವಿಧದಲ್ಲಿ ಪ್ರದರ್ಶಿಸುತ್ತ, ನಾನಾಭಂಗಿಗಳಲ್ಲಿ ರಥವನ್ನು ನಡೆಸುತ್ತ ರಣರಂಗದಲ್ಲಿ ಮೆರೆದನು (೫). ಮಹಾರಥವನ್ನೇರಿದ್ದ ಖರನು ಸಕಲ ದಿಗ್ ದಿಗಂತರಗಳನ್ನೂ ಬಾಣಗಳಿಂದ ಮುಚ್ಚಿದನು. ಅದನ್ನು ಕಂಡು (ಪದಾತಿಯಾಗಿದ್ದರೂ) ಮಹಾರಥನೆನಿಸಿದ ಶ್ರೀರಾಮನು ಮಹತ್ತರವಾದ ಧನುಸ್ಸನ್ನು ಜೇಗೈಯುತ್ತ ಕಿಡಿಯುಗುಳುವ ಬೆಂಕಿಯಂತೆ ಸಹಿಸಲಶಕ್ಯವಾದ ಕೂರಂಬುಗಳಿಂದ ಸ್ಥಳವುಳಿಯದಂತೆ ಆಕಾಶವನ್ನು ಮುಚ್ಚಿದನು. ಮಹಾಮೇಘವು ಮಳೆಸುರಿಸುವಂತೆ ಶರಜಾಲವನ್ನು ಹರಡಿದನು (೬–೭). ಖರರಾಮರ ಶರಜಾಲಗಳು ಪರಿಪರಿಯಲ್ಲಿ ನೆರೆಯಲು, ಅವರ ನೆರೆಯಲ್ಲಿರುವ ನಭಸ್ಸು ನೀರಂಧ್ರವಾಯಿತು. ಅವರಿಬ್ಬರೂ ಒಬ್ಬರನ್ನೊಬ್ಬರು ವಧಿಸಬೇಕೆಂದು ಹೊಡೆದಾಡುತ್ತಿರಲು, ಶರಸಂಹತಿಯಲ್ಲಿ ಸೂರ್ಯನು ಮರೆಯಾದನು (೮–೯). ಆಗ ಖರನು ಅಂಕುಶಗಳಿಂದ ಸಲಗವನ್ನು ತಿವಿಯುವಂತೆ, ನಾಲೀಕ, ವಿಕರ್ಣಿ ಮುಂತಾದ ಬಾಣಗಳಿಂದ ಶ್ರೀರಾಮನನ್ನು ನೋಯಿಸಿದನು

ಹಂತಾರಂ ಸರ್ವಸೈನ್ಯಸ್ಯ ಪೌರುಷೇ ಪರ್ಯವಸ್ಥಿತವ್ |
ಪರಿಶ್ರಾಂತಂ ಮಹಾಸತ್ತ್ವಂ ಮೇನೇ ರಾಮಂ ಖರಸ್ತದಾ || ೧೨

ತಂ ಸಿಂಹಮಿವ ವಿಕ್ರಾಂತಂ ಸಿಂಹವಿಕ್ರಾಂತಗಾಮಿನಮ್ |
ದೃಷ್ಟ್ವಾ ನೋದ್ವಿಜತೇ ರಾಮಃ ಸಿಂಹಃ ಕ್ಷುದ್ರಮೃಗಂ ಯಥಾ || ೧೩

ತತಃ ಸೂರ್ಯನಿಕಾಶೇನ ರಥೇನ ಮಹತಾ ಖರಃ |
ಆಸಸಾದ ರಣೇ ರಾಮಂ ಪತಂಗ ಇವ ಪಾವಕಮ್ || ೧೪

ತತೋಽಸ್ಯ ಸಶರಂ ಚಾಪಂ ಮುಷ್ಟಿದೇಶೇ ಮಹಾತ್ಮನಃ |
ಖರಶ್ಚಿಚ್ಛೇದ ರಾಮಸ್ಯ ದರ್ಶಯನ್ ಪಾಣಿಲಾಘವಮ್ || ೧೫

ಸ ಪುನಸ್ತ್ವಪರಾನ್ ಸಪ್ತ ಶರಾನಾದಾಯ ವರ್ಮಣಿ |
ನಿಜಘಾನ ಖರಃ ಕ್ರುದ್ಧಃ ಶಕ್ರಾಶನಿಸಮಪ್ರಭಾನ್ || ೧೬

ತತಸ್ತತ್ ಪ್ರಹತಂ ಬಾಣೈಃ ಖರಮುಕ್ತೈಃ ಸುಪರ್ವಭಿಃ |
ಪಪಾತ ಕವಚಂ ಭೂಮೌ ರಾಮಸ್ಯಾದಿತ್ಯವರ್ಚಸಃ || ೧೭

---

ಆ ರಾಕ್ಷಸನು ರಥಾರೂಢನಾಗಿ ಧನುಸ್ಸನ್ನು ಹಿಡಿದು ದೃಢತೆಯಿಂದ ನಿಂತಿರಲು, ಪಾಶಹಸ್ತನಾದ ಯಮನೋ ಎಂಬಂತೆ ಸಕಲ ಭೂತಗಳೂ ಭಾವಿಸಿದವು (೧೦–೧೧). ಆಗ ಸಮಸ್ತ ಸೈನ್ಯವನ್ನು ಸಂಹರಿಸಿದ್ದರೂ ಪೌರುಷವನ್ನು ದೃಢವಾಗಿ ಅವಲಬಿಂಸಿ ನಿಂತಿದ್ದ ಮಹಾಸತ್ತ್ವನಾದ ಶ್ರೀರಾಮನು ಬಳಲಿರುವನೆಂದು ಖರನಿಗೆ ತೋರಿತು. ಖರನಾದರೋ ಸಿಂಹದಂತೆ ಪರಾಕ್ರಮಿ ; ಸಿಂಹದಂತೆ ಧೀರಗಾಮಿ. ಆದರೆ ಶ್ರೀರಾಮನು ಅವನನ್ನು ಲೆಕ್ಕಿಸಲಿಲ್ಲ. ಮೃಗರಾಜನು ಕ್ಷುದ್ರಮೃಗವನ್ನು ಕಂಡಂತೆ ಅಲಕ್ಷಿಸಿದನು (೧೨–೧೩). ಆ ಸಮಯದಲ್ಲಿ ಖರನು ಸೂರ್ಯ ಸಂಕಾಶವಾದ ತನ್ನ ರಥವನ್ನೋಡಿಸುತ್ತ, ಶಲಭವು ಅಗ್ನಿಯ ಬಳಿಗೆ ಬರುವಂತೆ, ಶ್ರೀರಾಮನ ಕಡೆಗೆ ನುಗ್ಗಿಬಂದನು. ಬಂದವನೇ ತನ್ನ ಹಸ್ತಲಾಘವವನ್ನು ತೋರಿಸಿ ಶರಸಹಿತವಾದ ಶ್ರೀರಾಮನ ಚಾಪವನ್ನು ಹಿಡಿಕೈ ಬಳಿಯಲ್ಲಿ ಕಡಿದನು (೧೪–೧೫). ಕ್ರುದ್ಧನಾದ ಆ ಖರನು ಇಂದ್ರನ ವಜ್ರಾಯುಧಕ್ಕೆ ಸಮವಾದ ಏಳು ಬಾಣಗಳನ್ನು ಶ್ರೀರಾಮನ ಕವಚಕ್ಕೆ ಹೊಡೆಯಲು, ಆ ಕವಚವು ಕಳಚಿ

ತತಃ ಶರಸಹಸ್ರೇಣ ರಾಮುಮಪ್ರತಿಮೌಜಸಮ್ ।
ಅರ್ದಯಿತ್ವಾ ಮಹಾನಾದಂ ನನಾದ ಸಮರೇ ಖರಃ ॥ ೧೮

ಸ ಶರೈರರ್ಪಿತಃ ಕ್ರುದ್ಧಃ ಸರ್ವಗಾತ್ರೇಷು ರಾಘವಃ ।
ರರಾಜ ಸಮರೇ ರಾಮೋ ವಿಧೂಮೋಽಗ್ನಿರಿವ ಜ್ವಲನ್ ॥ ೧೯

ತತೋ ಗಂಭೀರನಿರ್ಹ್ರಾದಂ ರಾಮಃ ಶತ್ರುನಿಬರ್ಹಣಃ ।
ಚಕಾರಾಂತಾಯ ಸ ರಿಪೋಃ ಸಜ್ಯಮನ್ಯನ್ಮಹದ್ಧನುಃ ॥ ೨೦

ಸುಮಹದ್ವೈಷ್ಣವಂ ಯತ್ತದತಿಸೃಷ್ಟಂ ಮಹರ್ಷಿಣಾ ।
ವರಂ ತದ್ಧನುರುದ್ಯಮ್ಯ ಖರಂ ಸಮಭಿಧಾವತ ॥ ೨೧

ತತಃ ಕನಕಪುಂಖೈಸ್ತು ಶರೈಃ ಸಂನತಪರ್ವಭಿಃ ।
ಬಿಭೇದ ರಾಮಃ ಸಂಕ್ರುದ್ಧಃ ಖರಸ್ಯ ಸಮರೇ ಧ್ವಜಮ್ ॥ ೨೨

ಸ ದರ್ಶನೀಯೋ ಬಹುಧಾ ವಿಕೀರ್ಣಃ ಕಾಂಚನಧ್ವಜಃ ।
ಜಗಾಮ ಧರಣೀಂ ಸೂರ್ಯೋ ದೇವತಾನಾಮಿವಾಜ್ಞಯಾ ॥ ೨೩

ತಂ ಚತುರ್ಭಿಃ ಖರಃ ಕ್ರುದ್ಧೋ ರಾಮಂ ಗಾತ್ರೇಷು ಮಾರ್ಗಣೈಃ ।
ವಿವ್ಯಾಧ ಯುಧಿ ಮರ್ಮಜ್ಞೋ ಮಾತಂಗಮಿವ ತೋಮರೈಃ ॥ ೨೪

---

ಕೆಳಗೆ ಬಿದ್ದಿತು. ಶ್ರೀರಾಮನು ಆದಿತ್ಯನಂತೆ ಬೆಳಗಿದನು (೧೬–೧೭). ಮತ್ತೆ ಖರನು ಅಸದೃಶತೇಜಸ್ವಿಯಾದ ರಾಘವನನ್ನು ಶರಜಾಲಗಳಿಂದ ಪೀಡಿಸಿ ಸಿಂಹನಾದಮಾಡಿದನು. ರಾಘವನ ಸರ್ವಾಂಗಗಳೂ ಬಾಣಗಳ ಹೊಡೆತದಿಂದ ಗಾಯಗೊಂಡವು. ಅವನ ಕೋಪ ಉಕ್ಕಿತು. ಹೊಗೆಯಿಲ್ಲದ ಅಗ್ನಿಜ್ವಾಲೆಯಂತೆ ಆತನು ಕಂಗೊಳಿಸಿದನು (೧೮–೧೯). ಆಗ ಶ್ರೀರಾಮನು ಶತ್ರುವನ್ನು ಸಂಹರಿಸ ಬೇಕೆಂದು ನಿರ್ಧರಿಸಿ ಮಹತ್ತರವಾದ ಇನ್ನೊಂದು ಧನುಸ್ಸಿಗೆ ಹೆದೆಯೇರಿಸಿದನು. ಅದು ಅಗಸ್ತ್ಯಮಹರ್ಷಿಗಳಿಂದ ಕೊಡಲ್ಪಟ್ಟ ವೈಷ್ಣವಧನುಸ್ಸು. ಅದನ್ನು ಹಿಡಿದು ಖರನಮೇಲೆ ಏರಿಹೋದನು (೨೦–೨೧). ಸುವರ್ಣಪುಂಖಗಳಿರುವ ಬಾಣ ಗಳನ್ನು ಹೊಡೆದು ಖರನ ಧ್ವಜವನ್ನು ಕತ್ತರಿಸಲು, ಸುಂದರವಾದ ಆ ಸುವರ್ಣ ಧ್ವಜವು ಭೂಮಿಗೆ ಬಿದ್ದಿತು. ದೇವತೆಗಳ ಆಜ್ಞೆಯಂತೆ ಸೂರ್ಯನೇ ಭೂಮಿಗೆ ಬಿದ್ದನೋ ಎಂಬಂತೆ ಕಂಡಿತು (೨೨–೨೩). ಆಗ ರಣಮಲ್ಲನಾದ ಖರನು ಕೆರಳಿ,

ಸ ರಾಮೋ ಬಹುಭಿರ್ಬಾಣೈಃ ಖರಕಾರ್ಮುಕನಿಃಸೃತೈಃ ।
ವಿದ್ಧೋ ರುಧಿರಸಿಕ್ತಾಂಗೋ ಬಭೂವ ರುಷಿತೋ ಭೃಶಮ್ ॥ ೨೫

ಸ ಧನುರ್ಧನ್ವಿನಾಂ ಶ್ರೇಷ್ಠಃ ಪ್ರಗೃಹ್ಯ ಪರಮಾಹವೇ ।
ಮುಮೋಚ ಪರಮೇಷ್ವಾಸಃ ಷಟ್ ಶರಾನಭಿಲಕ್ಷಿತಾನ್ ॥ ೨೬

ಶಿರಸ್ಯೇಕೇನ ಬಾಣೇನ ದ್ವಾಭ್ಯಾಂ ಬಾಹ್ವೋರಥಾರ್ದಯತ್ ।
ತ್ರಿಭಿಶ್ಚಂದ್ರಾರ್ಧವಕ್ತ್ರೈಶ್ಚ ವಕ್ಷಸ್ಯಭಿಜಘಾನ ಹ ॥ ೨೭

ತತಃ ಪಶ್ಚಾನ್ಮಹಾತೇಜಾ ನಾರಾಚಾನ್ ಭಾಸ್ಕರೋಪಮಾನ್ ।
ಜಿಘಾಂಸೂ ರಾಕ್ಷಸಂ ಕ್ರುದ್ಧಸ್ತ್ರಯೋದಶ ಸಮಾದದೇ ॥ ೨೮

ತತೋಽಸ್ಯ ಯುಗಮೇಕೇನ ಚತುರ್ಭಿಶ್ಚತುರೋ ಹಯಾನ್ ।
ಷಷ್ಠೇನ ತು ಶಿರಃ ಸಂಖ್ಯೇ ಖರಸ್ಯ ರಥಸಾರಥೇಃ ॥ ೨೯

ತ್ರಿಭಿಸ್ತ್ರಿವೇಣುಂ ಬಲವಾನ್ ದ್ವಾಭ್ಯಾಮಕ್ಷಂ ಮಹಾಬಲಃ ।
ದ್ವಾದಶೇನ ತು ಬಾಣೇನ ಖರಸ್ಯ ಸಶರಂ ಧನುಃ ॥ ೩೦

---

ತೋಮರಗಳಿಂದ ಗಜರಾಜನನ್ನು ಹೊಡೆಯುವಂತೆ, ನಾಲ್ಕು ಬಾಣಗಳಿಂದ ಶ್ರೀರಾಮನನ್ನು ಹೊಡೆದನು. ಶ್ರೀರಾಮನು ಸರ್ವಾಂಗಗಳಲ್ಲಿಯೂ ಗಾಯ ಗೊಂಡು ರಕ್ತದಲ್ಲಿ ತೊಯ್ದನು. ಕ್ರೋಧ ಹೆಚ್ಚಿತು (೨೪–೨೫). ಧನುರ್ಧಾರಿ ಗಳಲ್ಲಿ ಅಗ್ರಗಣ್ಯನಾದ ಶ್ರೀರಾಮನು ತನ್ನ ಮಹಾಧನುಸ್ಸಿಗೆ ಆರು ಬಾಣಗಳನ್ನು ಹೂಡಿ ಪ್ರಯೋಗಿಸಿದನು. ಅವುಗಳಲ್ಲಿ ಒಂದು ಬಾಣವನ್ನು ಖರನ ಶಿರಸ್ಸಿಗೆ ಹೊಡೆದು, ಎರಡರಿಂದ ಅವನ ತೋಳುಗಳನ್ನು ಗಾಯಪಡಿಸಿದನು. ಅರ್ಧ ಚಂದ್ರಾಕೃತಿಯ ಮೂರು ಬಾಣಗಳನ್ನು ಎದೆಗೆ ಹೊಡೆದನು (೨೬–೨೭). ಅನಂತರ ಆ ತೇಜಸ್ವಿಯು ಖರನನ್ನು ಸಂಹರಿಸಬೇಕೆಂದು ನಿಶ್ಚಯಿಸಿ, ಸೂರ್ಯ ಸಂಕಾಶವಾದ ಹದಿಮೂರು ಬಾಣಗಳನ್ನು ಬತ್ತಳಿಕೆಯಿಂದ ಹಿರಿದನು. ಅವು ಗಳಲ್ಲೊಂದನ್ನು ರಥದ ನೊಗಕ್ಕೆ ಹೊಡೆದು, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು ಕೊಂದು, ಆರನೆಯ ಬಾಣದಿಂದ ಖರನ ಸಾರಥಿಯ ಶಿರಸ್ಸನ್ನು ಕತ್ತರಿಸಿದನು (೨೮–೨೯). ಬಲಶಾಲಿಯಾದ ಶ್ರೀರಾಮನು ಮೂರು ಬಾಣ

ಛಿತ್ತ್ವಾ ವಜ್ರನಿಕಾಶೇನ ರಾಘವಃ ಪ್ರಹಸನ್ನಿವ ।
ತ್ರಯೋದಶೇನೇಂದ್ರಸಮೋ ಬಿಭೇದ ಸಮರೇ ಖರಮ್ ॥ ೩೧

ಪ್ರಭಗ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಗದಾಪಾಣಿರವಪ್ಲುತ್ಯ ತಸ್ಥೌ ಭೂಮೌ ಖರಸ್ತದಾ ॥ ೩೨

ತತ್ ಕರ್ಮ ರಾಮಸ್ಯ ಮಹಾರಥಸ್ಯ
ಸಮೇತ್ಯ ದೇವಾಶ್ಚ ಮಹರ್ಷಯಶ್ಚ ।
ಅಪೂಜಯನ್ ಪ್ರಾಂಜಲಯಃ ಪ್ರಹೃಷ್ಟಾ-
ಸ್ತದಾ ವಿಮಾನಾಗ್ರಗತಾಃ ಸಮೇತಾಃ ॥ ೩೩

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಾವಿಂಶಃ ಸರ್ಗಃ

ಗಳಿಂದ ರಥದ ಮೂಕಿಯನ್ನು ಮುರಿದು, ಎರಡರಿಂದ ಛತ್ರವನ್ನು ನುಚ್ಚುಮಾಡಿ, ಹನ್ನೆರಡನೆಯ ಬಾಣದಿಂದ ಶರಸಹಿತವಾದ ಖರಧನುಸ್ಸನ್ನು ಕತ್ತರಿಸಿದನು. ದೇವೇಂದ್ರ ಸಮಾನನಾದ ರಾಘವನು ನಗುನಗುತ್ತಲೇ ಲೀಲೆಯಿಂದ ವಜ್ರಸಂಕಾಶ ವಾದ ಹದಿಮೂರನೆಯ ಶರವನ್ನು ಹೊಡೆದು ಖರನ ದೇಹವನ್ನು ಕೆತ್ತಿದನು (೩೦–೩೧). ಖರನ ಬಿಲ್ಲು ಮುರಿಯಿತು ; ರಥವು ಚೂರಾಯಿತು ; ಕುದುರೆ ಗಳು ಸತ್ತವು ; ಸಾರಥಿಯು ಹತನಾದನು ; ಖರನು ಥಟ್ಟನೆ ನೆಲಕ್ಕೆ ನೆಗೆದು ಗದಾಧಾರಿಯಾಗಿ ನಿಂತನು (೩೨). ಈ ಪ್ರಕಾರದಲ್ಲಿ ಮಹಾರಥನೆನಿಸಿದ* ಶ್ರೀರಾಮನು ಅದ್ಭುತಕರ್ಮವನ್ನೆಸಗಿದನು. ವಿಮಾನಗಳಲ್ಲಿ ನೆರೆದಿದ್ದ ದೇವತೆ ಗಳೂ ಮಹರ್ಷಿಗಳೂ ಆನಂದಭರಿತರಾಗಿ ಕೈಮುಗಿದುಕೊಂಡು ಶ್ರೀರಾಮನ ಸಾಹಸಕೃತ್ಯವನ್ನು ಕೊಂಡಾಡಿದರು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗ

* ಪತ್ತುಸಾವಿರ ಯೋಧರೊಡನೆ ಏಕಾಕಿಯಾಗಿ ಹೋರಾಡಬಲ್ಲ ವೀರನಿಗೆ ಮಹಾರಥನೆಂದು ಹೆಸರು.

## ಏಕೋನತ್ರಿಂಶಃ ಸರ್ಗಃ

### ಖರಗದಾಭೇದನಮ್

ಖರಂ ತು ವಿರಥಂ ರಾಮೋ ಗದಾಪಾಣಿಮವಸ್ಥಿತಮ್ ।
ಮೃದುಪೂರ್ವಂ ಮಹಾತೇಜಾಃ ಪರುಷಂ ವಾಕ್ಯಮಬ್ರವೀತ್ ॥ ೧

ಗಜಾಶ್ವರಥಸಂಬಾಧೇ ಬಲೇ ಮಹತಿ ತಿಷ್ಠತಾ ।
ಕೃತಂ ಸುದಾರುಣಂ ಕರ್ಮ ಸರ್ವಲೋಕಜುಗುಪ್ಸಿತಮ್ ॥ ೨

ಉದ್ವೇಜನೀಯೋ ಭೂತಾನಾಂ ನೃಶಂಸಃ ಪಾಪಕರ್ಮಕೃತ್ ।
ತ್ರಯಾಣಾಮಪಿ ಲೋಕಾನಾಮೀಶ್ವರೋಽಪಿ ನ ತಿಷ್ಠತಿ ॥ ೩

ಕರ್ಮ ಲೋಕವಿರುದ್ಧಂ ತು ಕುರ್ವಾಣಂ ಕ್ಷಣದಾಚರ ।
ತೀಕ್ಷ್ಣಂ ಸರ್ವಜನೋ ಹಂತಿ ಸರ್ಪಂ ದುಷ್ಟಮಿವಾಗತಮ್ ॥ ೪

ಲೋಭಾತ್ ಪಾಪಾನಿ ಕುರ್ವಾಣಃ ಕಾಮಾದ್ವಾ ಯೋ ನ ಬುಧ್ಯತೇ ।
ಹೃಷ್ಟಃ ಪಶ್ಯತಿ ತಸ್ಯಾಂತಂ ಬ್ರಾಹ್ಮಣೀ ಕರಕಾದಿವ ॥ ೫

### ಸರ್ಗ ೨೯

#### ಶ್ರೀರಾಮನು ಖರನ ಗದೆಯನ್ನು ಕತ್ತರಿಸುವುದು

ವಿರಥನಾದ ಖರನು ಗದೆಯನ್ನು ಹಿಡಿದು ನಿಂತಿರುವುದನ್ನು ನೋಡಿ, ಶ್ರೀರಾಮನು ಮೃದುವಾಗಿಯೇ ಮರ್ಮೋದ್ಘಾಟಕವಾದ ಮಾತನ್ನಾಡಿದನು : "ಎಲೈ ರಾಕ್ಷಸ, ಪ್ರಬಲವಾದ ಚತುರಂಗಸೇನೆಯೊಡನೆ ಬಂದು ಇಂಥ ದಾರುಣವಾದ ಕೃತ್ಯವನ್ನು ಆಚರಿಸಿದೆಯಲ್ಲ, ಸಕಲರೂ ನಿಂದಿಸತಕ್ಕ ಕೃತ್ಯವಿದು (೧–೨). ಜನರಿಗೆ ಉದ್ವೇಗಕಾರಿಯಾಗಿ ದುಷ್ಕೃತ್ಯವನ್ನೆಸಗುವ ಘಾತುಕನು ಮೂರು ಲೋಕಗಳಿಗೆ ಒಡೆಯನಾಗಿದ್ದರೂ ಬಹುಕಾಲ ಬಾಳಲಾರ. ಪ್ರಜಾವಿರೋಧಿಯಾದ ಕಾರ್ಯವನ್ನು ಮಾಡುವ ಉಗ್ರಸ್ವಭಾವದವನನ್ನು, ಎಲೈ ನಿಶಾಚರ, ಮನೆಯಲ್ಲಿ ಸೇರಿದ ಕೆಟ್ಟ ಹಾವನ್ನು ಹೊಡೆಯುವಂತೆ ಪ್ರಜೆಗಳು ಹೊಡೆದು ಕೊಲ್ಲುತ್ತಾರೆ (೩–೪). ಜಿಪುಣತನದಿಂದಲೋ ದುರಾಸೆಯಿಂದಲೋ ಪಾಪ

ವಸತೋ ದಂಡಕಾರಣ್ಯೇ ತಾಪಸಾನ್ ಧರ್ಮಚಾರಿಣಃ ।
ಕಿಂ ನು ಹತ್ವಾ ಮಹಾಭಾಗಾನ್ ಫಲಂ ಪ್ರಾಪ್ಸ್ಯಸಿ ರಾಕ್ಷಸ ॥ ೬

ನ ಚಿರಂ ಪಾಪಕರ್ಮಾಣಃ ಕ್ರೂರಾ ಲೋಕಜುಗುಪ್ಸಿತಾಃ ।
ಐಶ್ವರ್ಯಂ ಪ್ರಾಪ್ಯ ತಿಷ್ಠಂತಿ ಶೀರ್ಣಮೂಲಾ ಇವ ದ್ರುಮಾಃ ॥ ೭

ಅವಶ್ಯಂ ಲಭತೇ ಜಂತುಃ ಫಲಂ ಪಾಪಸ್ಯ ಕರ್ಮಣಃ ।
ಘೋರಂ ಪರ್ಯಾಗತೇ ಕಾಲೇ ದ್ರುಮಃ ಪುಷ್ಪಮಿವಾರ್ತವಮ್ ॥ ೮

ನಚಿರಾತ್ ಪ್ರಾಪ್ಯತೇ ಲೋಕೇ ಪಾಪಾನಾಂ ಕರ್ಮಣಾಂ ಫಲಮ್ ।
ಸವಿಷಾಣಾಮಿವಾನ್ನಾನಾಂ ಭುಕ್ತಾನಾಂ ಕ್ಷಣದಾಚರ ॥ ೯

ಪಾಪಮಾಚರತಾಂ ಘೋರಂ ಲೋಕಸ್ಯಾಪ್ರಿಯಮಿಚ್ಛತಾಮ್ ।
ಅಹಮಾಸಾದಿತೋ ರಾಜ್ಞಾ ಪ್ರಾಣಾನ್ ಹಂತುಂ ನಿಶಾಚರ ॥ ೧೦

---

ಕರ್ಮವನ್ನು ಮಾಡುತ್ತ ಸಂತೋಷದಿಂದ ಉಬ್ಬಿ ಯಾವನು ಮೈಮರೆತಿರುವನೋ ಅವನು ತನ್ನ ಕರ್ಮದ ಫಲವನ್ನು ಅನುಭವಿಸಿಯೇ ತೀರುತ್ತಾನೆ. ಆಲಿಕಲ್ಲನ್ನು ತಿಂದ ರಕ್ತಪುಚ್ಛಿಕೆಯಂತೆ* ತನ್ನ ನಾಶವನ್ನು ತಾನೇ ನೋಡುತ್ತಾನೆ (೫). ದಂಡಕಾರಣ್ಯದಲ್ಲಿ ತಪಸ್ಸನ್ನಾಚರಿಸುತ್ತ ಧರ್ಮನಿಷ್ಠರಾಗಿರುವ ಮಹಾತ್ಮರನ್ನು ಕೊಂದು, ಯಾವ ಭಾಗ್ಯವನ್ನು ನೀನು ಪಡೆಯಬೇಕಾಗಿದೆ ? ರಾಕ್ಷಸ, ಪಾಪ ಕರ್ಮಗಳನ್ನೆಸಗುತ್ತ ಲೋಕನಿಂದ್ಯರಾದ ಉಗ್ರಗಾಮಿಗಳು ಐಶ್ವರ್ಯವನ್ನು ಪಡೆದರೂ ಹೆಚ್ಚುಕಾಲದವರೆಗೆ ಉಳಿಯಲಾರರು. ಬೇರುಕತ್ತರಿಸಿದ ಮರಗಳಂತೆ ಉರುಳಿಬೀಳುವರು (೬–೭). ಮಾಡಿದ ಪಾಪಕರ್ಮಕ್ಕೆ ಕಾಲಬಂದಾಗ ಘೋರವಾದ ಫಲವು ಒದಗಿಯೇತೀರುವುದು. ವಸಂತಕಾಲ ಬಂದಾಗ ಮರದಲ್ಲಿ ಹೂವು ಅರಳಿಯೇ ಅರಳುವುದು. ವಿಷಮಿಶ್ರವಾದ ಅನ್ನವನ್ನು ತಿಂದಂತೆ, ದುರಾಚಾರದ ಫಲವು ತಡವಿಲ್ಲದೆ ಕಾಣಿಸಿಕೊಳ್ಳುತ್ತದೆ (೮–೯). ಎಲೈ ನಿಶಾಚರ, ಜನರಿಗೆ ಘೋರವಾದ ಕೇಡನ್ನು ಚಿಂತಿಸುತ್ತ ದುಷ್ಕೃತ್ಯವನ್ನು ಮಾಡುವವರ ಪ್ರಾಣವನ್ನು

---

* ಬ್ರಾಹ್ಮಣಿ = ಕೆಂಪು ಪುಚ್ಛವುಳ್ಳ ಹಲ್ಲಿಯ ಜಾತಿಯ ಪ್ರಾಣಿ ; ಒಂದು ಬಗೆಯ ಹಾವು ; ಕಣಜದ ಹುಳು, ಕಡಜಿಗ. ಈ ಪ್ರಾಣಿಯು ಆಲಿಕಲ್ಲನ್ನು ತಿಂದು ಸಾಯುತ್ತದೆಯೆಂದು ಪ್ರಸಿದ್ಧಿಯಿದೆ.

ಅದ್ಯ ಹಿ ತ್ವಾಂ ಮಯಾ ಮುಕ್ತಾಃ ಶರಾಃ ಕಾಂಚನಭೂಷಣಾಃ ।
ವಿದಾರ್ಯ ನಿಪತಿಷ್ಯಂತಿ ವಲ್ಮೀಕಮಿವ ಪನ್ನಗಾಃ ॥ ೧೧

ಯೇ ತ್ವಯಾ ದಂಡಕಾರಣ್ಯೇ ಭಕ್ಷಿತಾ ಧರ್ಮಚಾರಿಣಃ ।
ತಾನದ್ಯ ನಿಹತಃ ಸಂಖ್ಯೇ ಸಸೈನ್ಯೋಽನುಗಮಿಷ್ಯಸಿ ॥ ೧೨

ಅದ್ಯ ತ್ವಾ ನಿಹತಂ ಬಾಣೈಃ ಪಶ್ಯಂತು ಪರಮರ್ಷಯಃ ।
ನಿರಯಸ್ಥಂ ವಿಮಾನಸ್ಥಾ ಯೇ ತ್ವಯಾ ಹಿಂಸಿತಾಃ ಪುರಾ ॥ ೧೩

ಪ್ರಹರ ತ್ವಂ ಯಥಾಕಾಮಂ ಕುರು ಯತ್ನಂ ಕುಲಾಧಮ ।
ಅದ್ಯ ತೇ ಪಾತಯಿಷ್ಯಾಮಿ ಶಿರಸ್ತಾಲಫಲಂ ಯಥಾ ॥ ೧೪

ಏವಮುಕ್ತಸ್ತು ರಾಮೇಣ ಕ್ರುದ್ಧಃ ಸಂರಕ್ತಲೋಚನಃ ।
ಪ್ರತ್ಯುವಾಚ ಖರೋ ರಾಮಂ ಪ್ರಹಸನ್ ಕ್ರೋಧಮೂರ್ಛಿತಃ ॥

---

ಹಿಂಡುವುದಕ್ಕಾಗಿ ನಾನು ಬಂದಿದ್ದೇನೆ. ರಾಜನು* ಅದಕ್ಕಾಗಿ ನನ್ನನ್ನು ಇಲ್ಲಿಗೆ ಕಳಿಸಿದ್ದಾನೆ (೧೦). ಈಗ ನಾನು ಪ್ರಯೋಗಿಸುವ ಕಾಂಚನಭೂಷಿತಾಸ್ತ್ರಗಳು, ಹಾವುಗಳು ಹುತ್ತವನ್ನು ಹೊಗುವಂತೆ ನಿನ್ನ ದೇಹವನ್ನು ಕೊರೆದು ನುಗ್ಗಿಹೋಗುತ್ತವೆ. ದಂಡಕಾರಣ್ಯದಲ್ಲಿ ಧರ್ಮನಿರತರಾದ ಋಷಿಗಳನ್ನು ತಿಂದುತೇಗಿದೆಯಲ್ಲವೆ? ಯುದ್ಧದಲ್ಲೀಗ ಹತನಾಗಿ ನಿನ್ನ ಸೇನೆಯೊಡನೆ ಅವರನ್ನು ಹಿಂಬಾಲಿಸಿ ಹೋಗಬಹುದು! (೧೧–೧೨). ನನ್ನ ಶರಗಳಿಂದೀಗ ಹತನಾದಮೇಲೆ ನೀನು ನರಕಕ್ಕೆ ಬೀಳುವೆ! ನಿನ್ನಿಂದ ಹತರಾದ ಆ ಋಷಿಶ್ರೇಷ್ಠರು ಈಗ ವಿಮಾನಾರೂಢರಾಗಿ ನೋಡುತ್ತಿದ್ದಾರೆ! ನೀನು ನರಕದಲ್ಲಿ ಬಿದ್ದಿರುವುದನ್ನು ಅವರು ವಿಮಾನಾರೂಢರಾಗಿ ನೋಡಲಿ! (೧೩). ರಾಕ್ಷಸಕುಲದಲ್ಲಿ ಅಧಮ ನೀನು! ಯಥೇಷ್ಟವಾಗಿ ಯುದ್ಧಮಾಡು, ತೋರಿದ ಪ್ರಯತ್ನವನ್ನೆಲ್ಲ ಮಾಡಿಬಿಡು! ತಾಳೆಯ ಹಣ್ಣನ್ನು ಉದುರಿಸುವಂತೆ, ನಿನ್ನ ತಲೆಯನ್ನು ಕೆಳಗೆ ಉರುಳಿಸುತ್ತೇನೆ.” ಎಂದು ಹೇಳಿದನು (೧೪). ಆ ಮಾತನ್ನು ಕೇಳಿ ಖರನು ಕೆರಳಿದನು. ಕಣ್ಣು ಕೆಂಪಡ

---

* ಮೂಲದಲ್ಲಿ ‘ರಾಜ್ಞಾ’ ಎಂದು ಪಾಠವಿದೆ. ರಾಜನೆಂದರೆ ದಶರಥನಾಗಬಹುದು, ಭರತನಾದರೂ ಆಗಬಹುದು. ‘ರಾಜಾ’ ಎಂಬ ಪಾಠದಲ್ಲಿ ‘ರಾಜನಾದ ನಾನು ಬಂದಿದ್ದೇನೆ’ ಎಂದು ಅರ್ಥವಾಗುತ್ತದೆ.

ಪ್ರಾಕೃತಾನ್ ರಾಕ್ಷಸಾನ್ ಹತ್ವಾ ಯುದ್ಧೇ ದಶರಥಾತ್ಮಜ ।
ಆತ್ಮನಾ ಕಥಮಾತ್ಮಾನಮಪ್ರಶಸ್ಯಂ ಪ್ರಶಂಸಸಿ ॥ ೧೬

ವಿಕ್ರಾಂತಾ ಬಲವಂತೋ ವಾ ಯೇ ಭವಂತಿ ನರರ್ಷಭಾಃ ।
ಕಥಯಂತಿ ನ ತೇ ಕಿಂಚಿತ್ತೇಜಸಾ ಸ್ವೇನ ಗರ್ವಿತಾಃ ॥ ೧೭

ಪ್ರಾಕೃತಾಸ್ತ್ವಕೃತಾತ್ಮಾನೋ ಲೋಕೇ ಕ್ಷತ್ರಿಯಪಾಂಸನಾಃ ।
ನಿರರ್ಥಕಂ ವಿಕತ್ಥಂತೇ ಯಥಾ ರಾಮ ವಿಕತ್ಥಸೇ ॥ ೧೮

ಕುಲಂ ವ್ಯಪದಿಶನ್ ವೀರಃ ಸಮರೇ ಕೋಽಭಿಧಾಸ್ಯತಿ ।
ಮೃತ್ಯುಕಾಲೇ ಹಿ ಸಂಪ್ರಾಪ್ತೇ ಸ್ವಯಮಪ್ರಸ್ತವೇ ಸ್ತವಮ್ ॥ ೧೯

ಸರ್ವಥೈವ ಲಘುತ್ವಂ ತೇ ಕತ್ಥನೇನ ವಿದರ್ಶಿತಮ್ ।
ಸುವರ್ಣಪ್ರತಿರೂಪೇಣ ತಪ್ತೇನೇವ ಕುಶಾಗ್ನಿನಾ ॥ ೨೦

---

ರಿತು. ಸಿಟ್ಟು ನೆತ್ತಿಗೇರಿತು. ಅವನು ಶ್ರೀರಾಮನನ್ನು ಅಣಕಿಸಿ ಗೇಲಿಮಾಡುತ್ತ ಹೀಗೆಂದನು: "ಎಲೈ ದಶರಥನ ಮಗನೆ! ಸಾಮಾನ್ಯರಾದ ಕೆಲವು ಮಂದಿ ರಾಕ್ಷಸರನ್ನು ಕೊಂದೆಯೆಂದು ನಿನ್ನನ್ನು ನೀನೇ ಹೊಗಳಿಕೊಳ್ಳುತ್ತೀಯಾ? ಅಂಥ ಹೊಗಳಿಕೆಗೆ ನೀನು ಪಾತ್ರನಲ್ಲ! (೧೫–೧೬). ಜಯಶಾಲಿಗಳಾಗಲಿ, ಬಲಶಾಲಿಗಳಾಗಲಿ, ಪುರುಷಶ್ರೇಷ್ಠರು ತಮ್ಮ ಪೌರುಷಕ್ಕಾಗಿ ತಾವೇ ಅಹಂಕಾರ ಪಡವುದಿಲ್ಲ. ತಮ್ಮ ವಿಷಯವಾಗಿ ಏನನ್ನೂ ಹೇಳಿಕೊಳ್ಳುವುದಿಲ್ಲ. ಮನಸ್ಸಿನ ಮೇಲೆ ಹಿಡಿತವಿಲ್ಲದೆ ಸಂಸ್ಕೃತಿಹೀನರಾದ ಕ್ಷತ್ರಿಯಾಧಮರು ನಿರರ್ಥಕವಾಗಿ ಜಂಭವನ್ನು ಕೊಚ್ಚಿಕೊಳ್ಳುತ್ತಾರೆ. ನೀನು ಕೊಚ್ಚಿಕೊಳ್ಳುತ್ತಿರುವೆಯಲ್ಲ, ಹಾಗೆ! (೧೭-೧೮). ಸತ್ಕುಲಪ್ರಸೂತನೆಂದು ಹೇಳಿಕೊಳ್ಳುವ ಯಾವ ವೀರನು ರಣರಂಗದಲ್ಲಿ ಆತ್ಮಸ್ತುತಿಮಾಡಿಕೊಳ್ಳುತ್ತಾನೆ? ಮರಣಸಂಶಯ ಒದಗಿರುವಾಗ ಅನವಸರವಾಗಿ ತನ್ನನ್ನು ತಾನೇ ಯಾವನು ಶ್ಲಾಘಿಸಿಕೊಳ್ಳುತ್ತಾನೆ? (೧೯). ಆತ್ಮಶ್ಲಾಘನೆಯಿಂದ ನಿನ್ನ ಅಲ್ಪತನವು ಚೆನ್ನಾಗಿ ಪ್ರಕಟವಾಯಿತು ಚಿನ್ನದಂತೆ ಕಾಣುವ ಹಿತ್ತಾಳೆಯನ್ನು ಬೆಂಕಿಯಲ್ಲಿ ಕಾಯಿಸಿದಾಗ ಅದರ ಸ್ವರೂಪವು ಪ್ರಕಟವಾದಂತಾಯಿತು* (೨೦).

---

* ದರ್ಭೆಗೆ ಹೊತ್ತಿಕೊಂಡ ಬೆಂಕಿ ಚಿನ್ನದಂತೆ ಹೊಳೆದರೂ ಮರುಕ್ಷಣದಲ್ಲಿ ಆರಿಹೋಗುತ್ತದೆ. ಆಗ ಅದರ ಸ್ವರೂಪವು ಪ್ರಕಟವಾಗುವಂತಾಯಿತು' ಎಂದೂ ಅರ್ಥ ಮಾಡಲು ಸಾಧ್ಯ. ಕುಶಾಗ್ನಿ = ಕಬ್ಬಿಣದ ಮೂಸೆಯಲ್ಲಿರುವ ಬೆಂಕಿ, ದರ್ಭೆಯ ಬೆಂಕಿ.

ನ ತು ಮಾಮಿಹ ತಿಷ್ಠಂತಂ ಪಶ್ಯಸಿ ತ್ವ ಗದಾಧರಮ್ ।
ಧರಾಧರಮಿವಾಕಂಪ್ಯಂ ಪರ್ವತಂ ಧಾತುಭಿಶ್ಚಿತಮ್ ॥ ೨೧

ಪರ್ಯಾಪ್ತೋಽಹಂ ಗದಾಪಾಣಿರ್ಹಂತುಂ ಪ್ರಾಣಾನ್ ರಣೇ ತವ ।
ತ್ರಯಾಣಾಮಪಿ ಲೋಕಾನಾಂ ಪಾಶಹಸ್ತ ಇವಾಂತಕಃ ॥ ೨೨

ಕಾಮಂ ಬಹ್ವಪಿ ವಕ್ತವ್ಯಂ ತ್ವಯಿ ವಕ್ಷ್ಯಾಮಿ ನ ತ್ವಹಮ್ ।
ಅಸ್ತಂ ಗಚ್ಛೇದ್ಧಿ ಸವಿತಾ ಯುದ್ಧವಿಘ್ನಸ್ತತೋ ಭವೇತ್ ॥ ೨೩

ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಹತಾನಿ ತೇ ।
ತ್ವದ್ವಿನಾಶಾತ್ ಕರೋಮ್ಯೇಷ ತೇಷಾಮಸ್ರಪ್ರಮಾರ್ಜನಮ್ ॥ ೨೪

ಇತ್ಯುಕ್ತ್ವಾ ಪರಮಕ್ರುದ್ಧಸ್ತಾಂ ಗದಾಂ ಪರಮಾಂಗದಾಮ್ ।
ಖರಶ್ಚಿಕ್ಷೇಪ ರಾಮಾಯ ಪ್ರದೀಪ್ತಾಮಶನಿಂ ಯಥಾ ॥ ೨೫

ಖರಬಾಹುಪ್ರಯುಕ್ತಾ ಸಾ ಪ್ರದೀಪ್ತಾ ಮಹತೀ ಗದಾ ।
ಭಸ್ಮ ವೃಕ್ಷಾಂಶ್ಚ ಗುಲ್ಮಾಂಶ್ಚ ಕೃತ್ವಾಗಾತ್ತತ್ಸಮೀಪತಃ ॥ ೨೬

---

ಗದಾಧಾರಿಯಾಗಿ ನಿಂತಿರುವ ನನ್ನನ್ನು ನೀನು ಗಮನಿಸಿ ನೋಡುತ್ತಿಲ್ಲ. ವಿವಿಧ ಧಾತುಗಳಿಂದ ವ್ಯಾಪ್ತವಾಗಿರುವ ಅಕಂಪ್ಯವಾದ ಪರ್ವತದಂತೆ ನಿಂತಿದ್ದೇನೆ. ಗದಾಪಾಣಿಯಾಗಿರುವ ನಾನು ಮೃತ್ಯುಪಾಶವನ್ನು ಹಿಡಿದಿರುವ ಯಮನಂತೆ, ನಿನ್ನೊಬ್ಬನದೇ ಅಲ್ಲ—ಮೂರು ಲೋಕಗಳ ಪ್ರಾಣವನ್ನೂ ಹಿಂಡಿ ತೆಗೆಯಬಲ್ಲೆನು (೨೧–೨೨). ಈ ವಿಷಯದಲ್ಲಿ ನಾನು ಹೇಳಬೇಕಾದ್ದು ಬಹಳ ಉಂಟು. ಆದರೆ (ಅಲ್ಪನಾದ) ನಿನ್ನೆದುರಿಗೆ ನಾನು ಹೇಳುವುದಿಲ್ಲ. ಅಲ್ಲದೆ ಸೂರ್ಯನು ಅಸ್ತಂಗತ ನಾಗುತ್ತಿದ್ದಾನೆ. ಯುದ್ಧಕ್ಕೆ ವಿಘ್ನ ಬಂದೀತು (೨೩). ಹದಿನಾಲ್ಕು ಸಾವಿರ ಮಂದಿ ರಾಕ್ಷಸರು ನಿನ್ನಿಂದ ಹತರಾದರಲ್ಲವೆ? ನಿನ್ನನ್ನು ಕೊಂದು ಅವರ ಹೆಂಡಿರುಮಕ್ಕಳ ಕಣ್ಣೀರನ್ನು ಒರಸುತ್ತೇನೆ" ಎಂದು ಹೇಳಿ ಸಿಡಿದೆದ್ದ ಖರನು ಉರಿಯುವ ಸಿಡಿಲಂತೆ ಬೆಳಗುತ್ತ ಚಿನ್ನದ ಪಟ್ಟಿಗಳಿಂದ ಅಲಂಕೃತವಾದ ಗದೆ ಯನ್ನು ಶ್ರೀರಾಮನ ಮೇಲೆ ಬೀಸಿ ಹೊಡೆದನು (೨೪–೨೫). ಖರನ ಬಾಹು ಗಳಿಂದ ಬೀಸಲ್ಪಟ್ಟ ಆ ಮಹಾಗದೆಯು ಬೆಳಗುತ್ತ, ಮರಗಳನ್ನೂ ಪೊದೆಗಳನ್ನೂ

*

ತಾಮಾಪತಂತೀಂ ಜ್ವಲಿತಾಂ ಮೃತ್ಯುಪಾಶೋಪಮಾಂ ಗದಾಮ್ ।
ಅಂತರಿಕ್ಷಗತಾಂ ರಾಮಶ್ಚಿಚ್ಛೇದ ಬಹುಧಾ ಶರೈಃ ॥ ೨೭

ಸಾ ವಿಶೀರ್ಣಾ ಶರೈರ್ಭಗ್ನಾ ಪಪಾತ ಧರಣೀತಲೇ ।
ಗದಾ ಮಂತ್ರೌಷಧಬಲೈರ್ವ್ಯಾಲೀವ ವಿನಿಪಾತಿತಾ ॥ ೨೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನತ್ರಿಂಶಃ ಸರ್ಗಃ

---

## ತ್ರಿಂಶಃ ಸರ್ಗಃ
### ಖರಸಂಹಾರಃ

ಭಿತ್ತ್ವಾ ತು ತಾಂ ಗದಾಂ ಬಾಣೈ ರಾಘವೋ ಧರ್ಮವತ್ಸಲಃ ।
ಸ್ಮಯಮಾನಃ ಖರಂ ವಾಕ್ಯಂ ಸಂರಬ್ಧಮಿದಮಬ್ರವೀತ್ ॥ ೧

ಏತತ್ತೇ ಬಲಸರ್ವಸ್ವಂ ದರ್ಶಿತಂ ರಾಕ್ಷಸಾಧಮ ।
ಶಕ್ತಿಹೀನತರೋ ಮತ್ತೋ ವೃಥಾ ತ್ವಮವಗರ್ಜಸಿ ॥ ೨

---

ಸುಟ್ಟು ಬೂದಿಮಾಡುತ್ತ, ಶ್ರೀರಾಮನ ಕಡೆಗೆ ಎರಗಿತು. ಮೃತ್ಯುಪಾಶದಂತೆ ಪ್ರಜ್ವಲಿಸುತ್ತ ಸಿಡಿದು ಬರುತ್ತಿದ್ದ ಆ ಗದೆಯನ್ನು ಶ್ರೀರಾಮನು ಅಸ್ತ್ರಗಳಿಂದ ಹೊಡೆದು ಆಕಾಶಮಾರ್ಗದಲ್ಲಿಯೇ ತುಂಡುತುಂಡುಮಾಡಿದನು (೨೬–೨೭). ಆ ಗದೆಯು ಅಸ್ತ್ರಗಳಿಂದ ತುಂಡುತುಂಡಾಗಿ, ಮಂತ್ರ–ಔಷಧ–ಬಲಪ್ರಯೋಗ ಗಳಿಂದ ಗಾಸಿಗೊಂಡ ಸರ್ಪಿಣಿಯಂತೆ ನೆಲದಮೇಲುರುಳಿತು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಇಪ್ಪತ್ತೊಂಬತ್ತನೆಯ ಸರ್ಗ

---

## ಸರ್ಗ ೩೦
### ಶ್ರೀರಾಮನಿಂದ ಖರನ ಸಂಹಾರ ; ದೇವತೆಗಳಿಂದ ಪುಷ್ಪವೃಷ್ಟಿ ; ಸೀತೆಯ ಸಂತೋಷ

ಧರ್ಮವತ್ಸಲನಾದ ರಾಘವನು ಖರನ ಗದೆಯನ್ನು ಬಾಣಗಳಿಂದ ಕತ್ತರಿಸಲು, ಖರನು ದಿಗ್ಭ್ರಮೆಗೊಂಡನು. ಶ್ರೀರಾಮನು ಮುಗುಳ್ನಗೆಯಿಂದ

ಏಷಾ ಬಾಣವಿನಿರ್ಭಿನ್ನಾ ಗದಾ ಭೂಮಿತಲಂ ಗತಾ ।
ಅಭಿಧಾನಪ್ರಗಲ್ಭಸ್ಯ ತವ ಪ್ರತ್ಯಯಘಾತಿನೀ ॥ ೩

ಯತ್ತ್ವಯೋಕ್ತಂ ವಿನಷ್ಟಾನಾಮಹಮಶ್ರುಪ್ರಮಾರ್ಜನಮ್ ।
ರಾಕ್ಷಸಾನಾಂ ಕರೋಮೀತಿ ಮಿಥ್ಯಾ ತದಪಿ ತೇ ವಚಃ ॥ ೪

ನೀಚಸ್ಯ ಕ್ಷುದ್ರಶೀಲಸ್ಯ ಮಿಥ್ಯಾವೃತ್ತಸ್ಯ ರಕ್ಷಸಃ ।
ಪ್ರಾಣಾನಪಹರಿಷ್ಯಾಮಿ ಗರುತ್ಮಾನಮೃತಂ ಯಥಾ ॥ ೫

ಅದ್ಯ ತೇ ಛಿನ್ನಕಂಠಸ್ಯ ಫೇನಬುದ್ಬುದಭೂಷಿತಮ್ ।
ವಿದಾರಿತಸ್ಯ ಮದ್ಬಾಣೈರ್ಮಹೀ ಪಾಸ್ಯತಿ ಶೋಣಿತಮ್ ॥ ೬

ಪಾಂಸುರೂಷಿತಸರ್ವಾಂಗಃ ಸ್ರಸ್ತನ್ಯಸ್ತಭುಜದ್ವಯಃ ।
ಸ್ವಪ್ಸ್ಯಸೇ ಗಾಂ ಸಮಾಲಿಂಗ್ಯ ದುರ್ಲಭಾಂ ಪ್ರಮದಾಮಿವ ॥ ೭

ಪ್ರವೃದ್ಧನಿದ್ರೇ ಶಯಿತೇ ತ್ವಯಿ ರಾಕ್ಷಸಪಾಂಸನೇ ।
ಭವಿಷ್ಯಂತ್ಯಶರಣ್ಯಾನಾಂ ಶರಣ್ಯಾ ದಂಡಕಾ ಇಮೇ ॥ ೮

---

ಅವನನ್ನು ಕುರಿತು "ಎಲೈ ರಾಕ್ಷಸಾಧಮ, ನಿನ್ನ ಬಲಸರ್ವಸ್ವವನ್ನೂ ತೋರಿಸಿದ್ದಾಯಿತು ! ಶಕ್ತಿಯಲ್ಲಿ ನನಗಿಂತ ಹೀನನಾದ ನೀನು ವ್ಯರ್ಥವಾಗಿ ಕೂಗಾಡುತ್ತಿದ್ದೀಯೆ (೧–೨). ಈ ಗದೆಯು ನನ್ನ ಬಾಣಗಳಿಂದ ತುಂಡುತುಂಡಾಗಿ ಭೂತಳವನ್ನು ಸಾರಿತು. ಮಾತಾಡುವುದರಲ್ಲಿ ಪ್ರವೀಣನಾದ ನಿನ್ನ ಆತ್ಮವಿಶ್ವಾಸವನ್ನು ಅದು ತುಂಡರಿಸಿತು. ನನ್ನಿಂದ ಹತರಾದ ರಾಕ್ಷಸರ ಹೆಂಡಿರುಮಕ್ಕಳ ಕಣ್ಣೀರನ್ನು ಒರಸುತ್ತೇನೆಂದು ಹೇಳಿದೆಯಲ್ಲ, ಅದು ಸುಳ್ಳು (೩–೪). ನೀಚನೂ ದುಶ್ಶೀಲನೂ ಕಪಟವೃತ್ತಿಯವನೂ ಆದ ರಾಕ್ಷಸ ನೀನು. ಗರುಡನು ಅಮೃತವನ್ನು ಅಪಹರಿಸಿದಂತೆ ನಿನ್ನ ಪ್ರಾಣವನ್ನು ಸೆಳೆಯುವೆನು. ನನ್ನ ಬಾಣಗಳು ನಿನ್ನ ಕತ್ತನ್ನು ಕತ್ತರಿಸಲು, ನೊರೆನೊರೆಯಾಗಿ ಗುಳ್ಳೆಗುಳ್ಳೆಯಾಗಿ ಒಸರುವ ನೆತ್ತರನ್ನು ಭೂದೇವಿಯು ಕುಡಿಯುವಳು (೫–೬). ನಿನ್ನ ಸರ್ವಾಂಗಗಳೂ ಧೂಳಿಯಿಂದ ಮುಸುಕಿರಲು, ಕೈಗಳೆರಡೂ ಜೋತು ಚಾಚಿಕೊಂಡಿರಲು, ನೆಲದ ಮೇಲೆ ಮಲಗುವೆ. ದುರ್ಲಭಳಾದ ಯುವತಿಯೊಬ್ಬಳು ದೊರಕಿದಳೋ ಎಂಬಂತೆ ಗಾಢವಾಗಿ ಭೂಮಿಯನ್ನಪ್ಪುವೆ ! (೭). ರಾಕ್ಷಸಾಧಮನಾದ ನೀನು

ಜನಸ್ಥಾನೇ ಹತಸ್ಥಾನೇ ತವ ರಾಕ್ಷಸ ಮಚ್ಛರೈಃ ।
ನಿರ್ಭಯಾ ವಿಚರಿಷ್ಯಂತಿ ಸರ್ವತೋ ಮುನಯೋ ವನೇ ॥ ೯

ಅದ್ಯ ವಿಪ್ರಸರಿಷ್ಯಂತಿ ರಾಕ್ಷಸ್ಯೋ ಹತಬಾಂಧವಾಃ ।
ಬಾಷ್ಪಾರ್ದ್ರವದನಾ ದೀನಾ ಭಯಾದನ್ಯಭಯಾವಹಾಃ ॥ ೧೦

ಅದ್ಯ ಶೋಕರಸಜ್ಞಾಸ್ತಾ ಭವಿಷ್ಯಂತಿ ನಿರರ್ಥಿಕಾಃ ।
ಅನುರೂಪಕುಲಾಃ ಪತ್ನ್ಯೋ ಯಾಸಾಂ ತ್ವಂ ಪತಿರೀದೃಶಃ ॥ ೧೧

ನೃಶಂಸ ನೀಚ ಕ್ಷುದ್ರಾತ್ಮನ್ನಿತ್ಯಂ ಬ್ರಾಹ್ಮಣಕಂಟಕ ।
ಯತ್ಕೃತೇ ಶಂಕಿತೈರಗ್ನೌ ಮುನಿಭಿಃ ಪಾತ್ಯತೇ ಹವಿಃ ॥ ೧೨

ತಮೇವಮಭಿಸಂರಬ್ಧಂ ಬ್ರುವಾಣಂ ರಾಘವಂ ರಣೇ ।
ಖರೋ ನಿರ್ಭರ್ತ್ಸಯಾಮಾಸ ರೋಷಾತ್ ಖರತರಸ್ವನಃ ॥ ೧೩

ದೃಢಂ ಖಲ್ವವಲಿಪ್ತೋಽಸಿ ಭಯೇಷ್ವಪಿ ಚ ನಿರ್ಭಯಃ ।
ವಾಚ್ಯಾವಾಚ್ಯಂ ತತೋ ಹಿ ತ್ವಂ ಮೃತ್ಯುವಶ್ಯೋ ನ ಬುಧ್ಯಸೇ ॥

---

ದೀರ್ಘನಿದ್ರೆಯಲ್ಲಿ ಪವಡಿಸಲು, ಅನಾಥರಾಗಿದ್ದ ಋಷಿಗಳಿಗೆ ಈ ದಂಡಕಾರಣ್ಯವು ಆಶ್ರಯವನ್ನು ಕೊಡುವುದು. ಈ ಜನಸ್ಥಾನದಲ್ಲಿರುವ ರಾಕ್ಷಸರ ಬೀಡು ನನ್ನ ಬಾಣಗಳಿಂದ ನಿರ್ಮೂಲವಾಗಲು, ಮುನಿಗಳು ನಿರ್ಭಯದಿಂದ ಅರಣ್ಯದಲ್ಲಿ ಎಲ್ಲಿ ಬೇಕಾದರೂ ಸಂಚರಿಸಿಕೊಂಡಿರುವರು (೮–೯). ಇಂದು ಬಾಂಧವರನ್ನು ಕಳೆದುಕೊಂಡ ರಾಕ್ಷಸಿಯರು ದೈನ್ಯದಿಂದ ಕಣ್ಣೀರು ಸುರಿಸುತ್ತ ಓಡುವರು. ಅನ್ಯರನ್ನು ಹೆದರಿಸುತ್ತಿದ್ದ ಅವರು ತಾವೇ ಹೆದರುತ್ತ ಪಲಾಯನಮಾಡುವರು. ಆ ರಾಕ್ಷಸಿಯರು ಈ ದಿನ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಶೋಕದ ರುಚಿ ಹೇಗಿರುತ್ತದೆಯೆಂಬುದನ್ನು ತಿಳಿಯುವರು. ಅವರ ಪತಿಯಾದ ನೀನು ಇಂಥವನಾಗಿರುವಾಗ ಆ ರಾಕ್ಷಸಿಯರು ನಿನಗೆ ಅನುರೂಪವಾದ ಕುಲಶೀಲಗಳನ್ನು ಪಡೆದೇ ಇರುತ್ತಾರೆ (೧೦–೧೧). ನೀನು ಘಾತುಕ,; ನೀಚ, ಕ್ಷುದ್ರ. ಬ್ರಾಹ್ಮಣರಿಗೆ ಕಂಟಕಪ್ರಾಯನಾಗಿದ್ದೀಯೆ. ನಿನಗೆ ಹೆದಹೆದರುತ್ತ ಮುನಿಗಳು ಅಗ್ನಿಯಲ್ಲಿ ಹವಿಸ್ಸನ್ನು ಹಾಕಬೇಕಾಗಿತ್ತಲ್ಲವೆ ? " ಎಂದು ಹೇಳಿದನು (೧೨). ಹೀಗೆ ರಾಘವನು ಕೋಪಾವೇಶದಿಂದ ಹೇಳುತ್ತಿರಲು, ಖರನು ರುಷ್ಟನಾಗಿ ಕರ್ಕಶಸ್ವರದಿಂದ "ಬಲು ದುರಹಂಕಾರಿ ನೀನು. ಭಯಕಾಲ ಬಂದಿದ್ದರೂ

ಕಾಲಪಾಶಪರಿಕ್ಷಿಪ್ತಾ ಭವಂತಿ ಪುರುಷಾ ಹಿ ಯೇ ।
ಕಾರ್ಯಾಕಾರ್ಯಂ ನ ಜಾನಂತಿ ತೇ ನಿರಸ್ತಷಡಿಂದ್ರಿಯಾಃ ॥ ೧೫

ಏವಮುಕ್ತ್ವಾ ತತೋ ರಾಮಂ ಸಂರುಧ್ಯ ಭ್ರುಕುಟೀಂ ತತಃ ।
ಸ ದದರ್ಶ ಮಹಾಸಾಲಮವಿದೂರೇ ನಿಶಾಚರಃ ॥ ೧೬

ರಣೇ ಪ್ರಹರಣಸ್ಯಾರ್ಥೇ ಸರ್ವತೋ ಹ್ಯವಲೋಕಯನ್ ।
ಸ ತಮುತ್ಪಾಟಯಾಮಾಸ ಸಂದಶ್ಯ ದಶನಚ್ಛದಮ್ ॥ ೧೭

ತಂ ಸಮುತ್ಪಾಟ್ಯ ಬಾಹುಭ್ಯಾಂ ವಿನದ್ಯ ಚ ಮಹಾಬಲಃ ।
ರಾಮಮುದ್ದಿಶ್ಯ ಚಿಕ್ಷೇಪ ಹತಸ್ತ್ವಮಿತಿ ಚಾಬ್ರವೀತ್ ॥ ೧೮

ತಮಾಪತಂತಂ ಬಾಣೌಘೈಶ್ಛಿತ್ತ್ವಾ ರಾಮಃ ಪ್ರತಾಪವಾನ್ ।
ರೋಷಮಾಹಾರಯತ್ತೀವ್ರಂ ನಿಹಂತುಂ ಸಮರೇ ಖರಮ್ ॥ ೧೯

ಜಾತಸ್ವೇದಸ್ತತೋ ರಾಮೋ ರೋಷಾದ್ರಕ್ತಾಂತಲೋಚನಃ ।
ನಿರ್ಬಿಭೇದ ಸಹಸ್ರೇಣ ಬಾಣಾನಾಂ ಸಮರೇ ಖರಮ್ ॥ ೨೦

---

ನಿರ್ಭಯನಾಗಿದ್ದೀಯೆ. ಮೃತ್ಯುವಿನ ಹಿಡಿತಕ್ಕೆ ಸಿಕ್ಕಿದ ನಿನಗೆ, ಏನು ಹೇಳಬೇಕು–ಏನು ಹೇಳಬಾರದು ಎಂಬುದರ ಅರಿವಿಲ್ಲ (೧೩–೧೪). ಏಕೆಂದರೆ, ಮೃತ್ಯುಪಾಶವು ಬಂದು ಜನರ ಕೊರಳಿಗೆ ಸುತ್ತಿಕೊಂಡಾಗ ಆರು ಇಂದ್ರಿಯಗಳೂ* ಸ್ತಬ್ಧವಾಗುತ್ತವೆ. ಯಾವುದು ಕಾರ್ಯ—ಯಾವುದು ಅಕಾರ್ಯ ಎಂಬುದು ಅವರಿಗೆ ತೋರುವುದಿಲ್ಲ" ಎಂದು ಹೇಳಿದನು (೧೫). ಅನಂತರ ಖರನು ಹುಬ್ಬುಗಂಟಿಕ್ಕಿ ಯುದ್ಧಸಾಧನವಾವುದೆಂದು ಸುತ್ತಲೂ ನೋಡಲು, ಒಂದು ದೊಡ್ಡ ಸಾಲವೃಕ್ಷವು ಕಾಣಿಸಿತು. ಮಹಾಬಲಾಢ್ಯನಾದ ಆ ರಾಕ್ಷಸನು ಅವುಡುಗಚ್ಚಿ ಎರಡು ಕೈಗಳಿಂದಲೂ ಅದನ್ನು ಕಿತ್ತು ಸಿಂಹನಾದಗೈದು "ಎಲೇ ರಾಮ, ನೀನು ಸತ್ತೆ !" ಎಂದು ಕೂಗಿ ಆ ವೃಕ್ಷವನ್ನು ಶ್ರೀರಾಮನ ಮೇಲೆ ಬೀಸಿದನು (೧೬–೧೮). ಪ್ರತಾಪಶಾಲಿಯಾದ ಶ್ರೀರಾಮನು ಬಾಣಜಾಲಗಳಿಂದ ಆ ವೃಕ್ಷವನ್ನು ಕಡಿದು ಕೆಡವಿದನು. ಇನ್ನು ಖರನನ್ನು ಉಳಿಸಬಾರದೆಂದು ರೋಷಾವಿಷ್ಟನಾದನು. ಮೈ ಬೆವರಿತು ; ಕಣ್ಣು ಕೆಂಪಾಯಿತು. ಶರಜಾಲ

---

* ಪಂಚಜ್ಞಾನೇಂದ್ರಿಯಗಳು ಮತ್ತು ಮನಸ್ಸು.

ತಸ್ಯ ಬಾಣಾಂತರಾದ್ರಕ್ತಂ ಬಹು ಸುಸ್ರಾವ ಫೇನಿಲಮ್ ।
ಗಿರೇಃ ಪ್ರಸ್ರವಣಸ್ಯೇವ ತೋಯಧಾರಾಪರಿಸ್ರವಃ ॥ ೨೧

ವಿಹ್ವಲಃ ಸ ಕೃತೋ ಬಾಣೈಃ ಖರೋ ರಾಮೇಣ ಸಂಯುಗೇ ।
ಮತ್ತೋ ರುಧಿರಗಂಧೇನ ತಮೇವಾಭ್ಯದ್ರವದ್ದ್ರುತಮ್ ॥ ೨೨

ತಮಾಪತಂತಂ ಸಂರಬ್ಧಂ ಕೃತಾಸ್ತ್ರೋ ರುಧಿರಾಪ್ಲುತಮ್ ।
ಅಪಾಸರ್ಪದ್ದ್ವಿತ್ರಪದಂ ಕಿಂಚಿತ್ತ್ವರಿತವಿಕ್ರಮಃ ॥ ೨೩

ತತಃ ಪಾವಕಸಂಕಾಶಂ ವಧಾಯ ಸಮರೇ ಶರಮ್ ।
ಖರಸ್ಯ ರಾಮೋ ಜಗ್ರಾಹ ಬ್ರಹ್ಮದಂಡಮಿವಾಪರಮ್ ॥ ೨೪

ಸ ತಂ ದತ್ತಂ ಮಘವತಾ ಸುರರಾಜೇನ ಧೀಮತಾ ।
ಸಂದಧೇ ಚಾಪಿ ಧರ್ಮಾತ್ಮಾ ಮುಮೋಚ ಚ ಖರಂ ಪ್ರತಿ ॥ ೨೫

ಸ ವಿಮುಕ್ತೋ ಮಹಾಬಾಣೋ ನಿರ್ಘಾತಸಮನಿಃಸ್ವನಃ ।
ರಾಮೇಣ ಧನುರಾಯಮ್ಯ ಖರಸ್ಯೋರಸಿ ಚಾಪತತ್ ॥ ೨೬

---

ಗಳಿಂದ ಖರನನ್ನು ಛಿನ್ನಭಿನ್ನವಾಗಿ ಮಾಡಿದನು (೧೯–೨೦). ಪ್ರಸ್ರವಣಪರ್ವತದಿಂದ ಜಲಧಾರೆಗಳು ಹರಿಯುವಂತೆ, ಖರನ ದೇಹದಲ್ಲಾದ ಬಾಣವ್ರಣಗಳಿಂದ ನೊರೆನೊರೆಯಾಗಿ ನೆತ್ತರು ಹರಿಯಿತು. ಯುದ್ಧದಲ್ಲಿ ಶ್ರೀರಾಮನ ಬಾಣಗಳ ಹೊಡೆತದಿಂದ ಖರನು ಕಂಗೆಟ್ಟನು. ಗಂಧದಂತೆ ತನ್ನ ಮೈಗೆ ಬಳಿದಿದ್ದ ರಕ್ತವನ್ನು ಕಂಡು ಅವನು ಮದವೇರಿದನು. ಕೂಡಲೆ ಶ್ರೀರಾಮನಮೇಲೆ ವೇಗದಿಂದ ನುಗ್ಗಿಬಂದನು (೨೧–೨೨). ರಕ್ತದಲ್ಲಿ ತೊಯ್ದು ದಿಙ್ಮೂಢನಾಗಿ ನುಗ್ಗಿಬಂದ ಖರನನ್ನು ಕಂಡು, ಧನುಸ್ಸಿಗೆ ಅಸ್ತ್ರವನ್ನು ಹೂಡಿದ್ದ ಶ್ರೀರಾಮನು ಬೇಗಬೇಗನೆ ಲಾಘವದಿಂದ ಎರಡುಮೂರು ಹೆಜ್ಜೆ ಹಿಂದಕ್ಕೆ ಸರಿದನು. ಅನಂತರ ಶ್ರೀರಾಮನು ಖರನನ್ನು ವಧಿಸುವುದಕ್ಕಾಗಿ ಮತ್ತೊಂದು ಬ್ರಹ್ಮಾಸ್ತ್ರವೋ ಎಂಬಂತಿದ್ದ ಅಗ್ನಿಸಂಕಾಶವಾದ ಶರವನ್ನು ಹಿಡಿದನು (೨೩–೨೪). ಕಾರ್ಯಜ್ಞನಾದ ದೇವೇಂದ್ರನು (ಅಗಸ್ತ್ಯಋಷಿಗಳ ಮೂಲಕ) ಕೊಟ್ಟಿದ್ದ ಆ ಶರವನ್ನು ಧನುಸ್ಸಿನಲ್ಲಿ ಹೂಡಿ ಖರನ ಮೇಲೆ ಪ್ರಯೋಗಿಸಿದನು. ಶ್ರೀರಾಮನು ಧನುಸ್ಸನ್ನು ಜಗ್ಗಿ ಆ ಮಹಾಸ್ತ್ರವನ್ನು ಪ್ರಯೋಗಿಸಲು, ಅದು ಸಿಡಿಲಿನಂತೆ ಮೊರೆಯುತ್ತ ಖರನ ಎದೆಗೆ ಬಡಿಯಿತು.

ಸ ಪಪಾತ ಖರೋ ಭೂಮೌ ದಹ್ಯಮಾನಃ ಶರಾಗ್ನಿನಾ ।
ರುದ್ರೇಣೇವ ವಿನಿರ್ದಗ್ಧಃ ಶ್ವೇತಾರಣ್ಯೇ ಯಥಾಂತಕಃ ॥ ೨೭

ಸ ವೃತ್ರ ಇವ ವಜ್ರೇಣ ಫೇನೇನ ನಮುಚಿರ್ಯಥಾ ।
ಬಲೋ ವೇಂದ್ರಾಶನಿಹತೋ ನಿಪಪಾತ ಹತಃ ಖರಃ ॥ ೨೮

ತತೋ ರಾಜರ್ಷಯಃ ಸರ್ವೇ ಸಂಗತಾಃ ಪರಮರ್ಷಯಃ ।
ಸಭಾಜ್ಯ ಮುದಿತಾ ರಾಮಮಿದಂ ವಚನಮಬ್ರುವನ್ ॥ ೨೯

ಏತದರ್ಥಂ ಮಹಾಭಾಗ ಮಹೇಂದ್ರಃ ಪಾಕಶಾಸನಃ ।
ಶರಭಂಗಾಶ್ರಮಂ ಪುಣ್ಯಮಾಜಗಾಮ ಪುರಂದರಃ ॥ ೩೦

ಆನೀತಸ್ತ್ವಮಿಮಂ ದೇಶಮುಪಾಯೇನ ಮಹರ್ಷಿಭಿಃ ।
ಏಷಾಂ ವಧಾರ್ಥಂ ಕ್ರೂರಾಣಾಂ ರಕ್ಷಸಾಂ ಪಾಪಕರ್ಮಣಾಮ್ ॥

ತದಿದಂ ನಃ ಕೃತಂ ಕಾರ್ಯಂ ತ್ವಯಾ ದಶರಥಾತ್ಮಜ ।
ಸುಖಂ ಧರ್ಮಂ ಚರಿಷ್ಯಂತಿ ದಂಡಕೇಷು ಮಹರ್ಷಯಃ ॥ ೩೧

---

ಶ್ವೇತಾರಣ್ಯದಲ್ಲಿ ರುದ್ರನಿಂದ ದಗ್ಧನಾದ ಯಮನಂತೆ, ಅಸ್ತ್ರಜ್ವಾಲೆಯಿಂದ ಖರನು ನೆಲದಮೇಲೆ ಸುಟ್ಟುಬಿದ್ದನು (೨೫–೨೭). ವೃತ್ರಾಸುರನನ್ನು ವಜ್ರಾಯುಧದಿಂದಲೂ ನಮುಚಿಯನ್ನು ನೊರೆಯಿಂದಲೂ ಬಲಾಸುರನನ್ನು ಸಿಡಿಲಿನಿಂದಲೂ ಇಂದ್ರನು ಕೊಂದಂತೆ,* ಶ್ರೀರಾಮನು ಆ ಶರದಿಂದ ಖರನನ್ನು ವಧಿಸಿದನು. ಖರನು ಸತ್ತುಬಿದ್ದನು (೨೮). ಆಗ ಋಷಿಗಳೂ ರಾಜರ್ಷಿಗಳೂ ಸಂತುಷ್ಟರಾಗಿ ಶ್ರೀರಾಮನನ್ನು ಸ್ತುತಿಸುತ್ತ "ಹೇ ಮಹಾಭಾಗ, ಇದಕ್ಕೋಸ್ಕರವೇ ಪಾಕಶಾಸನನೆನಿಸಿದ ಪುರಂದರನಾದ ದೇವೇಂದ್ರನು ಶರಭಂಗಮುನಿಗಳ ಪುಣ್ಯಾಶ್ರಮಕ್ಕೆ ಬಂದಿದ್ದನು (೨೯–೩೦). (ಆತನ ಸೂಚನೆಯಂತೆ) ಮಹರ್ಷಿಗಳು ಉಪಾಯದಿಂದ ನಿನ್ನನ್ನು ಈ ಸ್ಥಳಕ್ಕೆ ಬರಮಾಡಿಕೊಂಡರು. ಕ್ರೂರರೂ ಪಾಪಿಗಳೂ ಆದ ಈ ರಾಕ್ಷಸರ ಸಂಹಾರವಾಗಲೆಂಬುದೇ ಅವರ ಉದ್ದೇಶ. ದಶರಥತನಯ, ನಮ್ಮ ಕಾರ್ಯವನ್ನು ನೆರವೇರಿಸಿಕೊಟ್ಟಿದ್ದೀಯೆ. ಇನ್ನುಮೇಲೆ ಮಹರ್ಷಿಗಳು ದಂಡ

---

* ಅನುಬಂಧವನ್ನು ನೋಡಿ.

ಏತಸ್ಮಿನ್ನಂತರೇ ದೇವಾಶ್ಚಾರಣೈಃ ಸಹ ಸಂಗತಾಃ ।
ದುಂದುಭೀಂಶ್ಚಾಭಿನಿಘ್ನಂತಃ ಪುಷ್ಪವರ್ಷಂ ಸಮಂತತಃ ॥ ೩೩

ರಾಮಸ್ಯೋಪರಿ ಸಂಹೃಷ್ಟಾ ವವೃಷುರ್ವಿಸ್ಮಿತಾಸ್ತದಾ ।
ಅರ್ಧಾಧಿಕಮುಹೂರ್ತೇನ ರಾಮೇಣ ನಿಶಿತೈಃ ಶರೈಃ ॥ ೩೪

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್।
ಖರದೂಷಣಮುಖ್ಯಾನಾಂ ನಿಹತಾನಿ ಮಹಾಹವೇ ॥ ೩೫

ಅಹೋ ಬತ ಮಹತ್ ಕರ್ಮ ರಾಮಸ್ಯ ವಿದಿತಾತ್ಮನಃ ।
ಅಹೋ ವೀರ್ಯಮಹೋ ದಾಕ್ಷ್ಯಂ ವಿಷ್ಣೋರಿವ ಹಿ ದೃಶ್ಯತೇ ॥ ೩೬

ಇತ್ಯೇವಮುಕ್ತ್ವಾ ತೇ ಸರ್ವೇ ಯಯುರ್ದೇವಾ ಯಥಾಗತಮ್ ।
ಏತಸ್ಮಿನ್ನಂತರೇ ವೀರೋ ಲಕ್ಷ್ಮಣಃ ಸಹ ಸೀತಯಾ ॥ ೩೭

ಗಿರಿದುರ್ಗಾದ್ವಿನಿಷ್ಕ್ರಮ್ಯ ಸಂವಿವೇಶಾಶ್ರಮಂ ಸುಖೀ ।
ತತೋ ರಾಮಸ್ತು ವಿಜಯೀ ಪೂಜ್ಯಮಾನೋ ಮಹರ್ಷಿಭಿಃ ॥ ೩೮

---

ಕಾರಣ್ಯದಲ್ಲಿ ಸುಖವಾಗಿ ಧರ್ಮವನ್ನಾಚರಿಸಿಕೊಂಡಿರುತ್ತಾರೆ" ಎಂದರು (೩೧–೩೨). ಈ ಸಮಯದಲ್ಲಿ ದೇವತೆಗಳು ಚಾರಣರೊಡನೆ ಹರ್ಷದಿಂದ ದುಂದುಭಿಗಳನ್ನು ಬಡಿಯುತ್ತ ಶ್ರೀರಾಮನಮೇಲೆ ಸುತ್ತಲೂ ಹೂವಿನ ಮಳೆಯನ್ನು ಸುರಿಸಿದರು (೩೩). "ಆಹಾ ! ಮೂರು ಘಳಿಗೆಯಲ್ಲಿ ಶ್ರೀರಾಮನು ಹದಿನಾಲ್ಕುಸಾವಿರ ರಾಕ್ಷಸರನ್ನು ಸಂಹರಿಸಿಬಿಟ್ಟನಲ್ಲ ! ಭೀಮಬಲರಾದ ಖರದೂಷಣರೇ ಮೊದಲಾದವರೆಲ್ಲರನ್ನೂ ರಣರಂಗದಲ್ಲಿ ತನ್ನ ನಿಶಿತಾಸ್ತ್ರಗಳಿಂದ ಕೊಂದುಹಾಕಿದನಲ್ಲ ! ಅಬ್ಬಬ್ಬಾ ! ಮಹಾಪ್ರಾಜ್ಞನಾದ ಶ್ರೀರಾಮನ ಕಾರ್ಯ ಅದ್ಭುತವಾದುದು. ಇವನ ಶೌರ್ಯವೇ ! ಇವನ ಸಾಮರ್ಥ್ಯವೇ ! ಆಹಾ ! ಸಾಕ್ಷಾತ್ ವಿಷ್ಣುವಿನ ಶೌರ್ಯಸಾಮರ್ಥ್ಯಗಳಂತಿವೆ !" ಎಂದು ಕೊಂಡಾಡುತ್ತ ಅವರು ಹೋದರು (೩೪–೩೬). ಅಷ್ಟರಲ್ಲಿ ವೀರನಾದ ಲಕ್ಷ್ಮಣನು ಸೀತಾದೇವಿಯೊಡನೆ ಪರ್ವತದ ಗುಹೆಯಿಂದ ಹೊರಗೆ ಬಂದು (ಶ್ರೀರಾಮನ ಪರಾಕ್ರಮವನ್ನು ಕಂಡು) ಸಂತುಷ್ಟನಾಗಿ ಆಶ್ರಮವನ್ನು ಪ್ರವೇಶಿಸಿದನು. ವಿಜಯಶಾಲಿಯಾದ ಶ್ರೀರಾಮನನ್ನು

ಪ್ರವಿವೇಶಾಶ್ರಮಂ ವೀರೋ ಲಕ್ಷ್ಮಣೇನಾಭಿಪೂಜಿತಃ ।
ತಂ ದೃಷ್ಟ್ವಾ ಶತ್ರುಹಂತಾರಂ ಮಹರ್ಷೀಣಾಂ ಸುಖಾವಹಮ್ ॥ ೩೯

ಬಭೂವ ಹೃಷ್ಟಾ ವೈದೇಹೀ ಭರ್ತಾರಂ ಪರಿಷಸ್ವಜೇ ।
ಮುದಾ ಪರಮಯಾ ಯುಕ್ತಾ ದೃಷ್ಟ್ವಾ ರಕ್ಷೋಗಣಾನ್ ಹತಾನ್ ॥

ರಾಮಂ ಚೈವಾವ್ಯಯಂ ದೃಷ್ಟ್ವಾ ತುತೋಷ ಜನಕಾತ್ಮಜಾ ॥ ೪೦

ತತಸ್ತು ತಂ ರಾಕ್ಷಸಸಂಘಮರ್ದನಂ
ಸಭಾಜ್ಯಮಾನಂ ಮುದಿತೈರ್ಮಹರ್ಷಿಭಿಃ ।
ಪುನಃ ಪರಿಷ್ವಜ್ಯ ಶಶಿಪ್ರಭಾನನಾ
ಬಭೂವ ಹೃಷ್ಟಾ ಜನಕಾತ್ಮಜಾ ತದಾ ॥ ೪೧

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಿಂಶಃ ಸರ್ಗಃ

ಮಹರ್ಷಿಗಳು ಸ್ತುತಿಸುತ್ತಿದ್ದರು (೩೭–೩೮). ಆ ವೀರನು ತನ್ನ ಆಶ್ರಮವನ್ನು ಪ್ರವೇಶಿಸಲು, ಲಕ್ಷ್ಮಣನು ಅಣ್ಣನನ್ನು ಆದರದಿಂದ ಗೌರವಿಸಿದನು. ಈ ರೀತಿಯಲ್ಲಿ ಶತ್ರುಗಳನ್ನು ಧ್ವಂಸಮಾಡಿ ಮಹರ್ಷಿಗಳಿಗೆ ಸಂತಸವನ್ನುಂಟುಮಾಡಿದ ತನ್ನ ಪತಿಯನ್ನು ವೈದೇಹಿಯು ಹರ್ಷದಿಂದ ಹಿಗ್ಗುತ್ತ ಆಲಿಂಗಿಸಿಕೊಂಡಳು. ರಾಕ್ಷಸರೆಲ್ಲರೂ ಹತರಾದುದನ್ನು ಕಂಡು ಬಹಳ ಸಂತೋಷಪಟ್ಟಳು. ಶ್ರೀರಾಮನು ಕ್ಷೇಮವಾಗಿದ್ದುದನ್ನು ನೋಡಿ ಆ ಜನಕನಂದಿನಿಯು ನಲಿದಳು (೩೯–೪೦). ಸಂಪ್ರೀತರಾದ ಮಹರ್ಷಿಗಳು ರಾಕ್ಷಸಸೇನೆಯನ್ನು ಮರ್ದಿಸಿದ ಶ್ರೀರಾಮನನ್ನು ಕೊಂಡಾಡುತ್ತಿದ್ದರು. ಚಂದ್ರಮುಖಿಯಾದ ಜನಕಾತ್ಮಜೆಯು ಮತ್ತೆ ಮತ್ತೆ ತನ್ನ ಪತಿಯನ್ನು ಅಪ್ಪಿಕೊಂಡು ಹಿರಿಹಿಗ್ಗುತ್ತಿದ್ದಳು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತನೆಯ ಸರ್ಗ

## ಏಕತ್ರಿಂಶಃ ಸರ್ಗಃ
### ರಾವಣಖರವೃತ್ತೋಪಲಂಭಃ

ತ್ವರಮಾಣಸ್ತತೋ ಗತ್ವಾ ಜನಸ್ಥಾನಾದಕಂಪನಃ ।
ಪ್ರವಿಶ್ಯ ಲಂಕಾಂ ವೇಗೇನ ರಾವಣಂ ವಾಕ್ಯಮಬ್ರವೀತ್ ॥ ೧

ಜನಸ್ಥಾನಸ್ಥಿತಾ ರಾಜನ್ ರಾಕ್ಷಸಾ ಬಹವೋ ಹತಾಃ ।
ಖರಶ್ಚ ನಿಹತಃ ಸಂಖ್ಯೇ ಕಂಥಚಿದಹಮಾಗತಃ ॥ ೨

ಏವಮುಕ್ತೋ ದಶಗ್ರೀವಃ ಕ್ರುದ್ಧಃ ಸಂರಕ್ತಲೋಚನಃ ।
ಅಕಂಪನಮುವಾಚೇದಂ ನಿರ್ದಹನ್ನಿವ ಚಕ್ಷುಷಾ ॥ ೩

ಕೇನ ರಮ್ಯಂ ಜನಸ್ಥಾನಂ ಹತಂ ಮಮ ಪರಾಸುನಾ ।
ಕೋ ಹಿ ಸರ್ವೇಷು ಲೋಕೇಷು ಗತಿಂ ನಾಧಿಗಮಿಷ್ಯತಿ ॥ ೪

ನ ಹಿ ಮೇ ವಿಪ್ರಿಯಂ ಕೃತ್ವಾ ಶಕ್ಯಂ ಮಘವತಾ ಸುಖಮ್ ।
ಪ್ರಾಪ್ತುಂ ವೈಶ್ರವಣೇನಾಪಿ ನ ಯಮೇನ ನ ವಿಷ್ಣುನಾ ॥ ೫

### ಸರ್ಗ ೩೧

ಸೇನಾಸಮೇತನಾಗಿ ಖರನು ಹತನಾದನೆಂಬ ವಾರ್ತೆಯನ್ನು ಅಕಂಪನನು
ರಾವಣನಿಗೆ ತಿಳಿಸುವುದು. ಸೀತಾಪಹರಣದ ಉದ್ದೇಶ.
ಮಾರೀಚನ ಬುದ್ಧಿವಾದ

ಇತ್ತ ಖರನ ಪಕ್ಷದಲ್ಲಿದ್ದ ಅಕಂಪನನೆಂಬ ರಾಕ್ಷಸನೊಬ್ಬನು ಜನಸ್ಥಾನದಿಂದ ಹೊರಟು ಅತಿವೇಗದಿಂದ ಲಂಕೆಗೆ ಹೋದನು. ಅಲ್ಲಿ ರಾವಣನನ್ನು ಸಂದರ್ಶಿಸಿ "ಮಹಾರಾಜ, ಜನಸ್ಥಾನದಲ್ಲಿದ್ದ ಬಹುಮಂದಿ ರಾಕ್ಷಸರು ಯುದ್ಧದಲ್ಲಿ ಹತರಾದರು. ಖರನೂ ಹತನಾದನು. ನಾನು ಹೇಗೋ ತಪ್ಪಿಸಿಕೊಂಡು ಬಂದೆ" ಎಂದನು (೧–೨). ಅದನ್ನು ಕೇಳಿ ದಶಕಂಠನು ಸಿಟ್ಟಿನಿಂದ ಸಿಡಿದೆದ್ದನು. ಕಣ್ಣುಗಳು ಕೆಂಪಡರಿದವು. ಸುಟ್ಟುಬಿಡುವನೋ ಎಂಬಂತೆ ದುರದುರನೆ ಅಕಂಪನನನ್ನು ನೋಡುತ್ತ "ಎಲೈ, ರಮ್ಯವಾದ ನನ್ನ ಜನಸ್ಥಾನವನ್ನು ನಾಶಮಾಡಿದವನಾರು ? ಯಾವನ ಆಯುಸ್ಸು ಮುಗಿದುಬಂದಿದೆ? ಸಮಸ್ತಲೋಕಗಳಲ್ಲಿಯೂ ನನ್ನಿಂದ ಹತನಾಗದೆ ತಪ್ಪಿಸಿಕೊಳ್ಳಬಲ್ಲವನಾರು ? (೩–೪). ನನಗೆ ವಿರೋಧ

ಕಾಲಸ್ಯ ಚಾಪ್ಯಹಂ ಕಾಲೋ ದಹೇಯಮಪಿ ಪಾವಕಮ್ ।
ಮೃತ್ಯುಂ ಮರಣಧರ್ಮೇಣ ಸಂಯೋಜಯಿತುಮುತ್ಸಹೇ ॥ ೬

ದಹೇಯಮಪಿ ಸಂಕ್ರುದ್ಧಸ್ತೇಜಸಾದಿತ್ಯಪಾವಕೌ ।
ವಾತಸ್ಯ ತರಸಾ ವೇಗಂ ನಿಹಂತುಮಹಮುತ್ಸಹೇ ॥ ೭

ತಥಾ ಕ್ರುದ್ಧಂ ದಶಗ್ರೀವಂ ಕೃತಾಂಜಲಿರಕಂಪನಃ ।
ಭಯಾತ್ಸಂದಿಗ್ಧಯಾ ವಾಚಾ ರಾವಣಂ ಯಾಚತೇಽಭಯಮ್ ॥ ೮

ದಶಗ್ರೀವೋಽಭಯಂ ತಸ್ಮೈ ಪ್ರದದೌ ರಕ್ಷಸಾಂ ವರಃ ।
ಸ ವಿಸ್ರಬ್ಧೋಽಬ್ರವೀದ್ವಾಕ್ಯಮಸಂದಿಗ್ಧಮಕಂಪನಃ ॥ ೯

ಪುತ್ರೋ ದಶರಥಸ್ಯಾಸ್ತಿ ಸಿಂಹಸಂಹನನೋ ಯುವಾ ।
ರಾಮೋ ನಾಮ ವೃಷಸ್ಕಂಧೋ ವೃತ್ತಾಯತಮಹಾಭುಜಃ ॥ ೧೦

ವೀರಃ ಪೃಥುಯಶಾಃ ಶ್ರೀಮಾನತುಲ್ಯಬಲವಿಕ್ರಮಃ ।
ಹತಂ ತೇನ ಜನಸ್ಥಾನಂ ಖರಶ್ಚ ಸಹದೂಷಣಃ ॥ ೧೧

---

ವನ್ನು ಮಾಡಿ ಇಂದ್ರನಾದರೂ ಸುಖದಿಂದ ಉಳಿಯಲಾರ. ಕುಬೇರನಿಗೂ ಶಕ್ಯವಿಲ್ಲ. ಯಮನಿಗೂ ಶಕ್ಯವಿಲ್ಲ. ವಿಷ್ಣುವಾದರೂ ಕ್ಷೇಮದಿಂದ ಉಳಿಯಲಾರ. ಯಮನಿಗೆ ನಾನು ಯಮರಾಜ! ಅಗ್ನಿಯನ್ನು ಸುಟ್ಟುಹಾಕಿಯೇನು! ಮೃತ್ಯುವಿಗೆ ಮರಣವನ್ನು ತಂದೇನು! (೫–೬). ಸೂರ್ಯಾಗ್ನಿಗಳು ಒಟ್ಟಿಗೆ ಬಂದರೂ ನಾನು ಕ್ರುದ್ಧನಾದರೆ ನನ್ನ ತೇಜಸ್ಸಿನಿಂದ ಅವರನ್ನು ಸುಟ್ಟು ಬೂದಿ ಮಾಡಿಯೇನು! ಬಿರುಗಾಳಿಯ ವೇಗವನ್ನು ನನ್ನ ವೇಗದಿಂದ ಅಡ್ಡಗಟ್ಟಿಯೇನು!" ಎಂದು ಅಬ್ಬರಿಸಿದನು (೭). ಆ ರೀತಿಯಲ್ಲಿ ರೇಗಿದ ರಾವಣನನ್ನು ನೋಡಿ ಅಕಂಪನನು ಕೈಮುಗಿದುಕೊಂಡು ಅಂಜುತ್ತ, ತನ್ನನ್ನು ಮನ್ನಿಸಬೇಕೆಂದು ತೊದಲುಮಾತಿನಿಂದ ಅಭಯವನ್ನು ಬೇಡಿದನು. ರಾಕ್ಷಸೇಶ್ವರನು ಅಭಯವನ್ನೀಯಲು ಅಕಂಪನನಿಗೆ ಧೈರ್ಯ ಬಂದಿತು. ಆಗ ಅವನು ಸ್ಪಷ್ಟವಾಗಿ ಕೇಳುವಂತೆ ಹೀಗೆಂದನು (೮–೯): "ದಶರಥರಾಜನ ಮಗನಾದ ರಾಮನೆಂಬ ತರುಣನೊಬ್ಬನಿದ್ದಾನೆ. ಅವನು ಸಿಂಹಕಾಯನಾದ ಸುಂದರಾಂಗ. ವೃಷಭದ ಹೆಗಲಿನಂತೆ ಪುಷ್ಟವಾದ ಹೆಗಲು. ಗುಂಡುಗುಂಡಾದ ದೀರ್ಘಬಾಹುಗಳು.

ಅಕಂಪನವಚಃ ಶ್ರುತ್ವಾ ರಾವಣೋ ರಾಕ್ಷಸಾಧಿಪಃ ।
ನಾಗೇಂದ್ರ ಇವ ನಿಃಶ್ವಸ್ಯ ವಚನಂ ಚೇದಮಬ್ರವೀತ್ ॥ ೧೨

ಸ ಸುರೇಂದ್ರೇಣ ಸಂಯುಕ್ತೋ ರಾಮಃ ಸರ್ವಾಮರೈಃ ಸಹ ।
ಉಪಯಾತೋ ಜನಸ್ಥಾನಂ ಬ್ರೂಹಿ ಕಚ್ಚಿದಕಂಪನ ॥ ೧೩

ರಾವಣಸ್ಯ ಪುನರ್ವಾಕ್ಯಂ ನಿಶಮ್ಯ ತದಕಂಪನಃ ।
ಆಚಚಕ್ಷೇ ಬಲಂ ತಸ್ಯ ವಿಕ್ರಮಂ ಚ ಮಹಾತ್ಮನಃ॥ ೧೪

ರಾಮೋ ನಾಮ ಮಹಾತೇಜಾಃ ಶ್ರೇಷ್ಠಃ ಸರ್ವಧನುಷ್ಮತಾಮ್ ।
ದಿವ್ಯಾಸ್ತ್ರಗುಣಸಂಪನ್ನಃ ಪುರಂದರಸಮೋ ಯುಧಿ ॥ ೧೫

ತಸ್ಯಾನುರೂಪೋ ಬಲವಾನ್ ರಕ್ತಾಕ್ಷೋ ದುಂದುಭಿಸ್ವನಃ ।
ಕನೀಯಾನ್ ಲಕ್ಷ್ಮಣೋ ನಾಮ ಭ್ರಾತಾ ಶಶಿನಿಭಾನನಃ ॥ ೧೬

ಸ ತೇನ ಸಹ ಸಂಯುಕ್ತಃ ಪಾವಕೇನಾನಿಲೋ ಯಥಾ ।
ಶ್ರೀಮಾನ್ ರಾಜವರಸ್ತೇನ ಜನಸ್ಥಾನಂ ನಿಪಾತಿತಮ್ ॥ ೧೭

---

ಮಹಾಕೀರ್ತಿಶಾಲಿಯೂ ತೇಜಸ್ವಿಯೂ ಆದ ವೀರನವನು. ರಾಮನ ಬಲ ಪರಾಕ್ರಮಗಳಿಗೆ ಎಣೆಯಿಲ್ಲ. ಅವನು ಖರದೂಷಣರನ್ನು ಕೊಂದು ಜನಸ್ಥಾನ ವನ್ನು ನಾಶಮಾಡಿದ್ದಾನೆ " ಎಂದನು (೧೦–೧೧). ಅಕಂಪನನ ವಾಕ್ಯವನ್ನಾಲಿಸಿ ರಾಕ್ಷಸರಾಜನು ನಾಗರಾಜನಂತೆ ಬುಸುಗುಟ್ಟುತ್ತ "ಅಕಂಪನ, ಅವನೇನು ದೇವತೆ ಗಳನ್ನೂ ದೇವೇಂದ್ರನನ್ನೂ ಕಟ್ಟಿಕೊಂಡು ಜನಸ್ಥಾನಕ್ಕೆ ಬಂದಿರುವನೋ ಹೇಗೆ ? " ಎಂದು ಕೇಳಿದನು (೧೨–೧೩). ಅದನ್ನು ಕೇಳಿ ಅಕಂಪನನು ಮಹಾತ್ಮನಾದ ಶ್ರೀರಾಮನ ಬಲಪರಾಕ್ರಮಗಳನ್ನು ವರ್ಣಿಸಿದನು : "ಮಹಾರಾಜ, ರಾಮ ನೆಂದರೆ ಮಹಾತೇಜಸ್ವಿ. ಧನುರ್ಧಾರಿಗಳಲ್ಲಿ ಅಗ್ರಗಣ್ಯ. ದಿವ್ಯಾಸ್ತ್ರಗಳು ಅವನ ವಶದಲ್ಲಿವೆ. ಸಂಗ್ರಾಮದಲ್ಲಿ ದೇವೇಂದ್ರನಿಗೆ ಎಣೆಯಾಗಿದ್ದಾನೆ (೧೪–೧೫). ಆತನಿಗೆ ಅನುರೂಪನಾದ ಲಕ್ಷ್ಮಣನೆಂಬ ತಮ್ಮನೊಬ್ಬನಿದ್ದಾನೆ. ಆತನೂ ಮಹಾಶೂರ. ಲಕ್ಷ್ಮಣನ ಕಣ್ಣುಗಳು ಕೆಂಪುರೇಖೆಯಿಂದ ಸುಂದರವಾಗಿವೆ. ದುಂದುಭಿಯಂತೆ ಗಂಭೀರಧ್ವನಿ. ಚಂದ್ರನಂತೆ ರಮಣೀಯವಾದ ಮುಖ (೧೬) ರಾಮನಿಗೆ ಲಕ್ಷ್ಮಣನು ಜೊತೆಯಾಗಿರುವುದು, ಅಗ್ನಿಗೆ ಮಾರುತನ ಸಹಾಯ

ನೈವ ದೇವಾ ಮಹಾತ್ಮಾನೋ ನಾತ್ರ ಕಾರ್ಯಾ ವಿಚಾರಣಾ ।
ಶರಾ ರಾಮೇಣ ತೂತ್ಸೃಷ್ಟಾ ರುಕ್ಮಪುಂಖಾಃ ಪತತ್ರಿಣಃ ॥ ೧೮

ಸರ್ಪಾಃ ಪಂಚಾನನಾ ಭೂತ್ವಾ ಭಕ್ಷಯಂತಿ ಸ್ಮ ರಾಕ್ಷಸಾನ್ ।
ಯೇನ ಯೇನ ಚ ಗಚ್ಛಂತಿ ರಾಕ್ಷಸಾ ಭಯಕರ್ಶಿತಾಃ ॥ ೧೯

ತೇನ ತೇನ ಸ್ಮ ಪಶ್ಯಂತಿ ರಾಮಮೇವಾಗ್ರತಃ ಸ್ಥಿತಮ್ ।
ಇತ್ಥಂ ವಿನಾಶಿತಂ ತೇನ ಜನಸ್ಥಾನಂ ತವಾನಘ ॥ ೨೦

ಅಕಂಪನವಚಃ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ।
ಜನಸ್ಥಾನಂ ಗಮಿಷ್ಯಾಮಿ ಹಂತುಂ ರಾಮಂ ಸಲಕ್ಷ್ಮಣಮ್ ॥ ೨೧

ಅಥೈವಮುಕ್ತೇ ವಚನೇ ಪ್ರೋವಾಚೇದಮಕಂಪನಃ ।
ಶೃಣು ರಾಜನ್ ಯಥಾವೃತ್ತಂ ರಾಮಸ್ಯ ಬಲಪೌರುಷಮ್ ॥ ೨೨

ಅಸಾಧ್ಯಃ ಕುಪಿತೋ ರಾಮೋ ವಿಕ್ರಮೇಣ ಮಹಾಯಶಾಃ ।
ಆಪಗಾಯಾಃ ಸುಪೂರ್ಣಾಯಾ ವೇಗಂ ಪರಿಹರೇಚ್ಛರೈಃ ॥ ೨೩

---

ದೊರಕಿದಂತಾಗಿದೆ. ರಾಮನು ಪ್ರತಾಪಶಾಲಿಯಾದ ರಾಜಾಧಿರಾಜನಾಗಿದ್ದಾನೆ. ಅವನೊಬ್ಬನೇ ಜನಸ್ಥಾನವನ್ನು ನಾಶಮಾಡಿದನು (೧೭). ಯಾವ ದೇವತೆಗಳೂ ಯಾವ ಮಹಾತ್ಮರೂ ಅವನಿಗೆ ನೆರವಾಗಿ ಬರಲಿಲ್ಲ. ಈ ವಿಷಯದಲ್ಲಿ ವಿಚಾರಮಾಡಬೇಕಾದ್ದೇ ಇಲ್ಲ. ರಾಮನು ಹೊಡೆಯುತ್ತಿದ್ದ ಸುವರ್ಣಪುಂಖಾಕಿತ ಶರಗಳು ಐದು ಹೆಡೆಯ ಸರ್ಪಗಳಂತೆ ಬಂದು ನಮ್ಮ ರಾಕ್ಷಸರನ್ನು ಭಕ್ಷಿಸಿದವು! (೧೮–೧೯). ರಾಕ್ಷಸರು ಭಯಪಟ್ಟು ಯಾವ ಯಾವ ಮಾರ್ಗದಲ್ಲಿ ಓಡಿದರೂ ರಾಮನೇ ಎದುರುಬಂದು ನಿಂತಂತೇ ಅವರಿಗೆ ತೋರುತ್ತಿತ್ತು! ಹೀಗೆ, ರಾಕ್ಷಸೇಂದ್ರ, ಅವನು ನಿನ್ನ ಜನಸ್ಥಾನವನ್ನು ನಾಶಗೊಳಿಸಿದನು" ಎಂದನು (೨೦). ಅಕಂಪನನ ಮಾತನ್ನು ಕೇಳಿ ರಾವಣನು ರಾಮಲಕ್ಷ್ಮಣರನ್ನು ಸಂಹರಿಸುವುದಕ್ಕಾಗಿ ಜನಸ್ಥಾನಕ್ಕೆ ಹೊರಡುವೆನೆಂದನು. ಆಗ ಅಕಂಪನನು ಹೇಳಿದ್ದೇನೆಂದರೆ: "ಮಹಾರಾಜ, ರಾಮನ ಬಲಪೌರುಷಗಳು ದಿಟವಾಗಿಯೂ ಎಂತಹವೆಂಬುದನ್ನು ಕೇಳು (೨೧–೨೨): ಕುಪಿತನಾದ ರಾಮನನ್ನು ಪೌರುಷದಿಂದ ಗೆಲ್ಲುವುದು ಸಾಧ್ಯವಾಗತಕ್ಕದ್ದಲ್ಲ. ಆ ಕೀರ್ತಿಶಾಲಿಯು ತುಂಬಿಹರಿಯುವ

ಸತಾರಗ್ರಹನಕ್ಷತ್ರಂ ನಭಶ್ಚಾಪ್ಯವಸಾದಯೇತ್ ।
ಅಸೌ ರಾಮಸ್ತು ಮಜ್ಜಂತೀಂ ಶ್ರೀಮಾನಭ್ಯುದ್ಧರೇನ್ಮಹೀಮ್ ॥ ೨೪

ಭಿತ್ತ್ವಾ ವೇಲಾಂ ಸಮುದ್ರಸ್ಯ ಲೋಕಾನಾಪ್ಲಾವಯೇದ್ವಿಭುಃ ।
ವೇಗಂ ವಾಪಿ ಸಮುದ್ರಸ್ಯ ವಾಯುಂ ವಾ ವಿಧಮೇಚ್ಛರೈಃ ॥ ೨೫

ಸಂಹೃತ್ಯ ವಾ ಪುನರ್ಲೋಕಾನ್ ವಿಕ್ರಮೇಣ ಮಹಾಯಶಾಃ ।
ಶಕ್ತಃ ಸ ಪುರುಷವ್ಯಾಘ್ರಃ ಸ್ರಷ್ಟುಂ ಪುನರಪಿ ಪ್ರಜಾಃ ॥ ೨೬

ನ ಹಿ ರಾಮೋ ದಶಗ್ರೀವ ಶಕ್ಯೋ ಜೇತುಂ ತ್ವಯಾ ಯುಧಿ ।
ರಕ್ಷಸಾಂ ವಾಪಿ ಲೋಕೇನ ಸ್ವರ್ಗಃ ಪಾಪಜನೈರಿವ ॥ ೨೭

ನ ತಂ ವಧ್ಯಮಹಂ ಮನ್ಯೇ ಸರ್ವೈರ್ದೇವಾಸುರೈರಪಿ ।
ಅಯಂ ತಸ್ಯ ವಧೋಪಾಯಸ್ತಂ ಮಮೈಕಮನಾಃ ಶೃಣು ॥ ೨೮

---

ನದಿಯ ಪ್ರವಾಹವೇಗವನ್ನು ಶರಗಳಿಂದ ಅಡ್ಡಗಟ್ಟಬಲ್ಲ. ಗ್ರಹನಕ್ಷತ್ರತಾರೆಗಳಿಂದ* ಸಂಕುಲವಾದ ನಭಸ್ಸನ್ನು ಭೇದಿಸಿ ತಲೆಕೆಳಗು ಮಾಡಬಲ್ಲ. ಪೃಥ್ವಿಯೇ ಮುಳುಗಿಹೋಗುತ್ತಿದ್ದರೆ ಎತ್ತಿ ನಿಲ್ಲಿಸಬಲ್ಲ (೨೩–೨೪). ಸಮುದ್ರದ ಮೇರೆಯನ್ನು ಒಡೆದು ಸಮುದ್ರಜಲದಿಂದ ಲೋಕವೆಲ್ಲವೂ ಕೊಚ್ಚಿಹೋಗುವಂತೆ ಮಾಡುವ ಸಾಮರ್ಥ್ಯ ರಾಮನಿಗುಂಟು. ತನ್ನ ಶರಜಾಲಗಳಿಂದ ಸಮುದ್ರದ ವೇಗವನ್ನು ತಡೆದಾನು ; ವಾಯುವನ್ನು ಸುಟ್ಟುಹಾಕಿಯಾನು (೨೫). ಆ ಪುರುಷಶ್ರೇಷ್ಠನು ತನ್ನ ಪರಾಕ್ರಮದಿಂದ ಸಮಸ್ತಲೋಕಗಳನ್ನೂ ಧ್ವಂಸಮಾಡಿ, ಪುನಃ ಪ್ರಜೆಗಳನ್ನು ಸೃಷ್ಟಿಸಬಲ್ಲನು. ರಾಕ್ಷಸೇಂದ್ರ, ರಾಮನನ್ನು ಯುದ್ಧದಲ್ಲಿ ಗೆಲ್ಲಲು ನಿನಗೆ ಸಾಧ್ಯವಿಲ್ಲ. ಪಾಪಿಗಳಿಗೆ ಸದ್ಗತಿಯು ಹೇಗೆ ದುರ್ಲಭವೋ ಹಾಗೆ ರಾಕ್ಷಸರೆಲ್ಲರೂ ಒಟ್ಟುಗೂಡಿದರೂ ಜಯವು ದುರ್ಲಭ (೨೬–೨೭). ದೇವಾಸುರರು ಒಟ್ಟಾದರೂ ರಾಮನನ್ನು ವಧಿಸಲು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಆದರೆ, ಮಹಾರಾಜ, ಅವನನ್ನು ವಧಿಸಲು ಒಂದು ಉಪಾಯ ಉಂಟು. ಸಾವಧಾನ

---

* ಗ್ರಹ = ನವಗ್ರಹಗಳು, ನಕ್ಷತ್ರ = ಅಶ್ವಿನ್ಯಾದಿ ನಕ್ಷತ್ರಗಳು, ತಾರಾ = ಇತರ ನಕ್ಷತ್ರಗಳು.

ಭಾರ್ಯಾ ತಸ್ಯೋತ್ತಮಾ ಲೋಕೇ ಸೀತಾ ನಾಮ ಸುಮಧ್ಯಮಾ ।
ಶ್ಯಾಮಾ ಸಮವಿಭಕ್ತಾಂಗೀ ಸ್ತ್ರೀರತ್ನಂ ರತ್ನಭೂಷಿತಾ ॥ ೨೯

ನೈವ ದೇವೀ ನ ಗಂಧರ್ವೀ ನಾಪ್ಸರಾ ನಾಪಿ ದಾನವೀ ।
ತುಲ್ಯಾ ಸೀಮಂತಿನೀ ತಸ್ಯಾ ಮಾನುಷೀಷು ಕುತೋ ಭವೇತ್ ॥ ३೦

ತಸ್ಯಾಪಹರ ಭಾರ್ಯಾಂ ತ್ವಂ ಪ್ರಮಥ್ಯ ತು ಮಹಾವನೇ ।
ಸ ತಯಾ ರಹಿತಃ ಕಾಮೀ ರಾಮೋ ಹಾಸ್ಯತಿ ಜೀವಿತಮ್ ॥ ३೧

ಅರೋಚಯತ ತದ್ವಾಕ್ಯಂ ರಾವಣೋ ರಾಕ್ಷಸಾಧಿಪಃ ।
ಚಿಂತಯಿತ್ವಾ ಮಹಾಬಾಹುರಕಂಪನಮುವಾಚ ಹ ॥ ३೨

ಬಾಢಂ ಕಲ್ಯಂ ಗಮಿಷ್ಯಾಮಿ ಹ್ಯೇಕಃ ಸಾರಥಿನಾ ಸಹ ।
ಆನಯಿಷ್ಯಾಮಿ ವೈದೇಹೀಮಿಮಾಂ ಹೃಷ್ಟೋ ಮಹಾಪುರೀಮ್ ॥ ३३

---

ವಾಗಿ ಕೇಳು (೨೮) : ರಾಮನಿಗೆ ಸೀತೆಯೆಂಬ ಚೆಲುವೆಯಾದ ಮಡದಿ ಇದ್ದಾಳೆ. ಅವಳು ಈ ಜಗತ್ತಿನಲ್ಲಿಯೇ ಅಧಿಕ ಸುಂದರಿ ; ತರುಣಿ. ಅವಳ ಅಂಗಗಳು ಸಮವಾಗಿ ಹೊಂದಿಕೊಂಡು ಮಾಟವಾಗಿವೆ. ಅವಳು ಸ್ತ್ರೀರತ್ನವೇ ಸರಿ. (ತಾನೇ ರತ್ನವಾದರೂ) ರತ್ನಗಳಿಂದ ಸಿಂಗರಿಸಿಕೊಂಡಿದ್ದಾಳೆ (೨೯). ದೇವ ಗಂಧರ್ವರಲ್ಲಾಗಲಿ ಅಪ್ಸರೆಯರಲ್ಲಾಗಲಿ ದಾನವರಲ್ಲಾಗಲಿ ಸೀತೆಯಷ್ಟು ಚೆಲುವೆಯಾದ ಇನ್ನೊಬ್ಬ ಅಂಗನೆಯಿಲ್ಲ. ಇನ್ನು ಮನುಷ್ಯಸ್ತ್ರೀಯರಲ್ಲಿ ಅಂತಹ ಚೆಲುವೆ ಎಲ್ಲಿಂದ ಬರಬೇಕು ! (३೦). ರಾಕ್ಷಸೇಶ್ವರ, ನೀನು ರಾಮನ ಆ ಭಾರ್ಯೆಯನ್ನು ವಂಚಿಸಿ ಅಪಹರಿಸು. ಆಗ ಕಾಮಿಯಾದ ರಾಮನು ಅವಳ ವಿರಹದಿಂದ ಖಿನ್ನನಾಗಿ ಮಹಾರಣ್ಯದಲ್ಲಿ ಅಲೆಯುತ್ತ ಪ್ರಾಣಬಿಡುವನು !" ಎಂದು ಹೇಳಿದನು (३೧). ರಾಕ್ಷಸಾಧಿಪನಾದ ರಾವಣನಿಗೆ ಅವನ ಮಾತು ರುಚಿಸಿತು ! ಆ ಪರಾಕ್ರಮಿಯು ಸ್ವಲ್ಪ ಹೊತ್ತು ಚಿಂತಿಸಿ ಅಕಂಪನನನ್ನು ಕುರಿತು "ಅದೇ ಸರಿ. ನಾಳೆ ಪ್ರಾತಃಕಾಲ ನಾನೊಬ್ಬನೇ ಸಾರಥಿಯೊಡನೆ (ರಥದಲ್ಲಿ) ಹೋಗಿ ಸೀತೆಯನ್ನು ಅಪಹರಿಸುವೆನು. ಸಂತೋಷದಿಂದ ಅವಳನ್ನು ಈ ನಗರಕ್ಕೆ

ಅಥೈವಮುಕ್ತ್ವಾ ಪ್ರಯಯೌ ಖರಯುಕ್ತೇನ ರಾವಣಃ ।
ರಥೇನಾದಿತ್ಯವರ್ಣೇನ ದಿಶಃ ಸರ್ವಾಃ ಪ್ರಕಾಶಯನ್ ॥ ೩೪

ಸ ರಥೋ ರಾಕ್ಷಸೇಂದ್ರಸ್ಯ ನಕ್ಷತ್ರಪಥಗೋ ಮಹಾನ್ ।
ಸಂಚಾರ್ಯಮಾಣಃ ಶುಶುಭೇ ಜಲದೇ ಚಂದ್ರಮಾ ಇವ ॥ ೩೫

ಸ ಮಾರೀಚಾಶ್ರಮಂ ಪ್ರಾಪ್ಯ ತಾಟಕೇಯಮುಪಾಗಮತ್ ।
ಮಾರೀಚೇನಾರ್ಚಿತೋ ರಾಜಾ ಭಕ್ಷ್ಯಭೋಜ್ಯೈರಮಾನುಷೈಃ ॥ ೩೬

ತಂ ಸ್ವಯಂ ಪೂಜಯಿತ್ವಾ ತು ಆಸನೇನೋದಕೇನ ಚ ।
ಅರ್ಥೋಪಹಿತಯಾ ವಾಚಾ ಮಾರೀಚೋ ವಾಕ್ಯಮಬ್ರವೀತ್ ॥ ೩೭

ಕಚ್ಚಿತ್ ಸುಕುಶಲಂ ರಾಜನ್ ಲೋಕಾನಾಂ ರಾಕ್ಷಸೇಶ್ವರ ।
ಆಶಂಕೇ ನಾಧಿಜಾನೇ ತ್ವಂ ಯತಸ್ತೂರ್ಣಮಿಹಾಗತಃ ॥ ೩೮

---

ತರುವೆನು ! " ಎಂದು ನುಡಿದನು (೩೨-೩೩). ಅನಂತರ ರಾವಣನು ಹೇಸರಗತ್ತೆಗಳನ್ನು ಹೂಡಿದ ಸೂರ್ಯಸಂಕಾಶವಾದ ರಥವನ್ನೇರಿ ಸಕಲದಿಕ್ಕುಗಳನ್ನೂ ಬೆಳಗುತ್ತ ಆಕಾಶಮಾರ್ಗದಲ್ಲಿ ಪ್ರಯಾಣಮಾಡಿದನು. ಮೇಘಪಂಕ್ತಿಯು ವೇಗದಿಂದ ಓಡುವಾಗ ಅದರ ಹಿನ್ನೆಲೆಯಲ್ಲಿ ವಿರಾಜಿಸುವ ಚಂದ್ರನಂತೆ, ಆಕಾಶದಲ್ಲಿ ಹೋಗುತ್ತಿದ್ದ ಆ ರಥವು ಕಾಣಿಸುತ್ತಿದ್ದಿತು (೩೪-೩೫). ರಾವಣನು ಮಾರೀಚನ ಆಶ್ರಮಕ್ಕೆ ಬಂದು ಆ ತಾಟಕಾಪುತ್ರನನ್ನು ಸಂದರ್ಶಿಸಿದನು. ಮಾರೀಚನು ಆ ರಾಕ್ಷಸೇಂದ್ರನಿಗೆ ಮನುಷ್ಯಲೋಕದುರ್ಲಭವಾದ* ಭಕ್ಷ್ಯಭೋಜ್ಯಗಳನ್ನಿತ್ತು ಸತ್ಕರಿಸಿದನು (೩೬). ಮಾರೀಚನು ರಾವಣನಿಗೆ ಪೀಠಪಾದ್ಯಾದಿಗಳನ್ನು ತಾನೇ ಕೊಟ್ಟು ಉಪಚರಿಸಿದನು. ತರುವಾಯ ರಾವಣಾಗಮನದ ಉದ್ದೇಶವನ್ನು ತಿಳಿಯಲಿಚ್ಛಿಸುವ ಮಾತಿನಿಂದ "ಮಹಾರಾಜ, ಪ್ರಜೆಗಳೆಲ್ಲರಿಗೂ ಕುಶಲವಷ್ಟೆ ? ನನಗೆ ಸಂದೇಹವಾಗುತ್ತಿದೆ; ನೀನು ಅವಸರಪಡುತ್ತ ಇಷ್ಟು ಶೀಘ್ರವಾಗಿ

---

* ಭಕ್ಷ್ಯಭೋಜ್ಯೈರಮಾನುಷೈಃ' ಎಂದು ಮೂಲದಲ್ಲಿದೆ. ಅಮಾನುಷೈಃ = ನರಮಾಂಸವನ್ನು ಬಿಟ್ಟು ಭಕ್ಷ್ಯಭೋಜ್ಯಗಳಿಂದ ಎಂದೂ ಅರ್ಥವಾಗುತ್ತದೆ. ಶ್ರೀರಾಮನ ಭಯದಿಂದ ಮಾರೀಚನು ನರಮಾಂಸವನ್ನು ತ್ಯಜಿಸಿ ಆಶ್ರಮದಲ್ಲಿ ವಾಸವಾಗಿದ್ದನೆಂದು ಇದರಿಂದ ಸೂಚಿತವಾಗುತ್ತದೆ.

ಏವಮುಕ್ತೋ ಮಹಾತೇಜಾ ಮಾರೀಚೇನ ಸ ರಾವಣಃ ।
ತತಃ ಪಶ್ಚಾದಿದಂ ವಾಕ್ಯಮಬ್ರವೀದ್ವಾಕ್ಯಕೋವಿದಃ ॥ ೩೯

ಆರಕ್ಷೋ ಮೇ ಹತಸ್ತಾತ ರಾಮೇಣಾಕ್ಲಿಷ್ಟಕರ್ಮಣಾ ।
ಜನಸ್ಥಾನಮವಧ್ಯಂ ತತ್ ಸರ್ವಂ ಯುಧಿ ನಿಪಾತಿತಮ್ ॥ ೪೦

ತಸ್ಯ ಮೇ ಕುರು ಸಾಚಿವ್ಯಂ ತಸ್ಯ ಭಾರ್ಯಾಪಹಾರಣೇ ।
ರಾಕ್ಷಸೇಂದ್ರವಚಃ ಶ್ರುತ್ವಾ ಮಾರೀಚೋ ವಾಕ್ಯಮಬ್ರವೀತ್ ॥ ೪೧

ಆಖ್ಯಾತಾ ಕೇನ ಸೀತಾ ಸಾ ಮಿತ್ರರೂಪೇಣ ಶತ್ರುಣಾ ।
ತ್ವಯಾ ರಾಕ್ಷಸಶಾರ್ದೂಲ ಕೋ ನ ನಂದತಿ ನಿಂದಿತಃ ॥ ೪೨

ಸೀತಾಮಿಹಾನಯಸ್ವೇತಿ ಕೋ ಬ್ರವೀತಿ ಬ್ರವೀಹಿ ಮೇ ।
ರಕ್ಷೋಲೋಕಸ್ಯ ಸರ್ವಸ್ಯ ಕಃ ಶೃಂಗಂ ಛೇತ್ತುಮಿಚ್ಛತಿ ॥ ೪೩

ಪ್ರೋತ್ಸಾಹಯತಿ ಕಶ್ಚ ತ್ವಾಂ ಸ ಹಿ ಶತ್ರುರಸಂಶಯಃ ।
ಆಶೀವಿಷಮುಖಾದ್ದಂಷ್ಟ್ರಾಮುದ್ಧರ್ತುಂ ಚೇಚ್ಛತಿ ತ್ವಯಾ ॥ ೪೪

---

ಬಂದುದು ನನಗೆ ಅರ್ಥವಾಗದು" ಎಂದನು (೩೭–೩೮). ಆಗ ವಾಕ್ಯಕೋವಿದನಾದ ರಾವಣನು "ಅಯ್ಯಾ–ಮಾರೀಚ, ನಾನು ಗಡಿನಾಡಿನಲ್ಲಿಟ್ಟಿದ್ದ ಕಾವಲು ಸೇನೆಯನ್ನು ರಾಮ ಎಂಬವನು ಬಹು ಸುಲಭವಾಗಿ ಸಂಹರಿಸಿಬಿಟ್ಟಿದ್ದಾನೆ. ಅವಧ್ಯವಾಗಿದ್ದ ಜನಸ್ಥಾನವು ಯುದ್ಧದಲ್ಲಿ ಸರ್ವನಾಶಹೊಂದಿತು (೩೯–೪೦). ಅದಕ್ಕೆ ಪ್ರತಿಯಾಗಿ ರಾಮನ ಹೆಂಡತಿಯನ್ನು ಅಪಹರಿಸಬೇಕೆಂದಿದ್ದೇನೆ. ಈ ಕಾರ್ಯದಲ್ಲಿ ನನಗೆ ಸಹಾಯಮಾಡು" ಎಂದನು. ಅದನ್ನು ಕೇಳಿ ಮಾರೀಚನು "ಯಾವನು ನಿನಗೆ ಸೀತೆಯ ವಿಷಯವನ್ನು ಹೇಳಿದ? ಹೇಳಿದವನು ಮಿತ್ರನಂತೆ ನಟಿಸುವ ಶತ್ರುವಾಗಿರಬೇಕು. ರಾಕ್ಷಸೇಶ್ವರ, ನಿನ್ನನ್ನು ನೋಡಿ ಯಾವ ದುಷ್ಟನು ಸಂತೋಷಪಡದೆ ಕರುಬುತ್ತಿರಬಹುದು? (೪೧–೪೨). ಸೀತೆಯನ್ನು ಇಲ್ಲಿಗೆ ಅಪಹರಿಸಿ ತರಬೇಕೆಂದು ಯಾವನು ನಿನಗೆ ಹೇಳುತ್ತಿದ್ದಾನೆ? ಅವನ ಹೆಸರನ್ನು ಹೇಳು. ಸಮಸ್ತರಾಕ್ಷಸವಂಶದ ಕಳಶವನ್ನು ಯಾವನು ಉರುಳಿಸಬೇಕೆಂದಿದ್ದಾನೆ? ಈ ವಿಷಯದಲ್ಲಿ ನಿನಗೆ ಪ್ರೋತ್ಸಾಹಕೊಟ್ಟವನು ಶತ್ರುವೇ

*

ಕರ್ಮಣಾ ತೇನ ಕೇನಾಸಿ ಕಾಪಥಂ ಪ್ರತಿಪಾದಿತಃ ।
ಸುಖಸುಪ್ತಸ್ಯ ತೇ ರಾಜನ್ ಪ್ರಹೃತಂ ಕೇನ ಮೂರ್ಧನಿ ॥ ೪೫

ವಿಶುದ್ಧವಂಶಾಭಿಜನಾಗ್ರಹಸ್ತ-
ಸ್ತೇಜೋಮದಃ ಸಂಸ್ಥಿತದೋರ್ವಿಷಾಣಃ ।
ಉದೀಕ್ಷಿತುಂ ರಾವಣ ನೇಹ ಯುಕ್ತಃ
ಸ ಸಂಯುಗೇ ರಾಘವಗಂಧಹಸ್ತೀ ॥ ೪೬

ಅಸೌ ರಣಾಂತಃಸ್ಥಿತಿಸಂಧಿವಾಲೋ
ವಿದಗ್ಧರಕ್ಷೋಮೃಗಹಾ ನೃಸಿಂಹಃ ।
ಸುಪ್ತಸ್ತ್ವಯಾ ಬೋಧಯಿತುಂ ನ ಯುಕ್ತಃ
ಶರಾಂಗಪೂರ್ಣೋ ನಿಶಿತಾಸಿದಂಷ್ಟ್ರಃ ॥ ೪೭

ಚಾಪಾವಹಾರೇ ಭುಜವೇಗಪಂಕೇ
ಶರೋರ್ಮಿಮಾಲೇ ಸುಮಹಾಹವೌಘೇ ।

---

ಸರಿ, ಸಂದೇಹವಿಲ್ಲ. ಆತನು ವಿಷಸರ್ಪದ ಬಾಯಲ್ಲಿರುವ ಹಲ್ಲನ್ನು ನಿನ್ನಿಂದ ಕೀಳಿಸಬೇಕೆಂದಿದ್ದಾನೆ! (೪೩–೪೪). ಈ ಕೆಲಸವನ್ನು ಮಾಡಹೇಳಿ ಯಾವನು ನಿನ್ನನ್ನು ದುರ್ಮಾರ್ಗಕ್ಕೆ ಇಳಿಸಿದ್ದಾನೆ? ಮಹಾರಾಜ, ಸುಖವಾಗಿ ಮಲಗಿರುವ ನಿನ್ನ ತಲೆಯ ಮೇಲೆ ಯಾವನು ಕಲ್ಲುಹಾಕಿದ್ದಾನೆ? (೪೫). ರಾವಣ, ರಣರಂಗದಲ್ಲಿ ರಾಘವನೆಂಬ ಮದ್ದಾನೆಯತ್ತ ಕಣ್ಣೆತ್ತಿನೋಡುವುದು ಕೂಡ ನಿನಗೆ ಹಿತಕರವಲ್ಲ. ಪರಿಶುದ್ಧವಾದ ರಘುವಂಶದಲ್ಲಿ ಜನಿಸಿರುವುದೇ ಆ ಮದ್ದಾನೆಗೆ ಉದಾತ್ತಭಾವವನ್ನು ತಂದುಕೊಟ್ಟಿರುವ ಸೊಂಡಿಲು ; ಪ್ರತಾಪವೇ ಮದೋದಕ ; ಲಂಬಿಸಿರುವ ಭುಜಗಳೇ ಕೋರೆಯಹಲ್ಲುಗಳು (೪೬). ರಾಮನೆಂದರೆ ರಣಮಲ್ಲರಾದ ರಾಕ್ಷಸರೆಂಬ ಮೃಗಗಳನ್ನು ಸಂಹರಿಸುವ ನರಸಿಂಹ! ಆ ಸಿಂಹಕ್ಕೆ ರಣರಂಗದ ಮಧ್ಯದಲ್ಲಿ ಯುದ್ಧೋತ್ಸಾಹದಿಂದ ನಿಲ್ಲುವುದೇ ನಿಬಿಡರೋಮಗುಚ್ಛವುಳ್ಳ ನಿಮಿರಿದ ಬಾಲ! ಶರಗಳೇ ಹೋರಾಟಕ್ಕೆ ಬೇಕಾದ ವಿವಿಧಾಂಗಗಳು ; ನಿಶಿತವಾದ ಖಡ್ಗಗಳೇ ಕೋರೆದಾಡೆಗಳು. ರಾವಣ, ಮಲಗಿರುವ ಆ ಸಿಂಹವನ್ನು ಎಬ್ಬಿಸುವುದು ತರವಲ್ಲ! (೪೭). ರಾಮನೆಂದರೆ ಪಾತಾಳಕ್ಕೆ ಸೆಳೆದೊಯ್ಯುವ

ನ ರಾಮಪಾತಾಲಮುಖೇಽತಿಘೋರೇ
ಪ್ರಸ್ಕಂದಿತುಂ ರಾಕ್ಷಸರಾಜ ಯುಕ್ತಮ್ ॥ ೪೮

ಪ್ರಸೀದ ಲಂಕೇಶ್ವರ ರಾಕ್ಷಸೇಂದ್ರ
ಲಂಕಾಂ ಪ್ರಸನ್ನೋ ಭವ ಸಾಧು ಗಚ್ಛ ।
ತ್ವಂ ಸ್ವೇಷು ದಾರೇಷು ರಮಸ್ವ ನಿತ್ಯಂ
ರಾಮಃ ಸಭಾರ್ಯೋ ರಮತಾಂ ವನೇಷು ॥ ೪೯

ಏವಮುಕ್ತೋ ದಶಗ್ರೀವೋ ಮಾರೀಚೇನ ಸ ರಾವಣಃ ।
ನ್ಯವರ್ತತ ಪುರೀಂ ಲಂಕಾಂ ವಿವೇಶ ಚ ಗೃಹೋತ್ತಮಮ್ ॥ ೫೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕತ್ರಿಂಶಃ ಸರ್ಗಃ

ಅತಿಭಯಂಕರವಾದ ಮಹಾಸಾಗರ. ಅದು ಪಾತಾಳಮುಖ. ಅಲ್ಲಿ ಧನುಸ್ಸೆಂಬುದೇ ಮೊಸಳೆ. ಭುಜಗಳಿಗಿರುವ ಶರಮೋಕ್ಷಣವೇಗವೇ ಕೆಸರು. ಬಾಣಜಾಲಗಳೇ ತರಂಗಮಾಲೆಗಳು. ಮಹಾಸಂಗ್ರಾಮವೇ ಅಲೆಗಳ ಉಬ್ಬರ. ರಾಕ್ಷಸರಾಜ, ಅಂಥ ಸಮುದ್ರದಲ್ಲಿ ಜಾರಿಬೀಳಬೇಡ! (೪೮). ಕ್ಷಮಿಸು, ಲಂಕೇಶ್ವರ, ಪ್ರಸನ್ನನಾಗು. ಸುಖವಾಗಿ ಲಂಕೆಗೆ ಹೋಗು! ನಿನ್ನ ಮಡದಿಯರಲ್ಲಿ ಸದಾ ನಲಿಯುತ್ತ ವಿನೋದದಿಂದಿರು. ರಾಮನು ಪತ್ನೀಸಮೇತನಾಗಿ ಅರಣ್ಯದಲ್ಲಿ ತನ್ನ ಪಾಡಿಗೆ ಸಂತೋಷದಿಂದಿರಲಿ" ಎಂದು ಹೇಳಿದನು (೪೯). ಹೀಗೆ ಮಾರೀಚನು ಹೇಳಲಾಗಿ ರಾವಣನು ಲಂಕಾನಗರಕ್ಕೆ ಹಿಂದಿರುಗಿ ತನ್ನ ಅರಮನೆಯನ್ನು ಪ್ರವೇಶಿಸಿದನು. (೫೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೊಂದನೆಯ ಸರ್ಗ

## ದ್ವಾತ್ರಿಂಶಃ ಸರ್ಗಃ

### ಶೂರ್ಪಣಖೋದ್ಯಮಃ

ತತಃ ಶೂರ್ಪಣಖಾ ದೃಷ್ಟ್ವಾ ಸಹಸ್ರಾಣಿ ಚತುರ್ದಶ ।
ಹತಾನ್ಯೇಕೇನ ರಾಮೇಣ ರಕ್ಷಸಾಂ ಭೀಮಕರ್ಮಣಾಮ್ ॥ ೧

ದೂಷಣಂ ಚ ಖರಂ ಚೈವ ಹತಂ ತ್ರಿಶಿರಸಾ ಸಹ ।
ದೃಷ್ಟ್ವಾ ಪುನರ್ಮಹಾನಾದಂ ನನಾದ ಜಲದೋ ಯಥಾ ॥ ೨

ಸಾ ದೃಷ್ಟ್ವಾ ಕರ್ಮ ರಾಮಸ್ಯ ಕೃತಮನ್ಯೈಃ ಸುದುಷ್ಕರಮ್ ।
ಜಗಾಮ ಪರಮೋದ್ವಿಗ್ನಾ ಲಂಕಾಂ ರಾವಣಪಾಲಿತಾಮ್ ॥ ೩

ಸಾ ದದರ್ಶ ವಿಮಾನಾಗ್ರೇ ರಾವಣಂ ದೀಪ್ತತೇಜಸಮ್ ।
ಉಪೋಪವಿಷ್ಟಂ ಸಚಿವೈರ್ಮರುದ್ಭಿರಿವ ವಾಸವಮ್ ॥ ೪

ಆಸೀನಂ ಸೂರ್ಯಸಂಕಾಶೇ ಕಾಂಚನೇ ಪರಮಾಸನೇ ।
ರುಕ್ಮವೇದಿಗತಂ ಪ್ರಾಜ್ಯಂ ಜ್ವಲಂತಮಿವ ಪಾವಕಮ್ ॥ ೫

### ಸರ್ಗ ೩೨

ಶೂರ್ಪಣಖಿಯು ಪಂಚವಟಿಯಿಂದ ಲಂಕೆಗೆ ಬಂದು ರಾವಣನನ್ನು ಕಾಣುವುದು

ಇತ್ತ ಭೀಮಪರಾಕ್ರಮಿಗಳಾದ ಹದಿನಾಲ್ಕುಸಾವಿರ ಮಂದಿ ರಾಕ್ಷಸರೂ ಖರದೂಷಣತ್ರಿಶಿರರೂ ಯುದ್ಧದಲ್ಲಿ ಶ್ರೀರಾಮನಿಂದ ಹತರಾದುದನ್ನು ಶೂರ್ಪಣಖಿಯು ಕಂಡಳು. ಮೋಡವು ಗುಡುಗುವಂತೆ 'ಹೋ' ಎಂದು ಕೂಗಿಕೊಂಡಳು! (೧–೨). ಇತರರಿಗೆ ದುಷ್ಕರವಾದ ಅದ್ಭುತಕಾರ್ಯವನ್ನು ಶ್ರೀರಾಮನು ಮಾಡಿದುದನ್ನು ಕಂಡು ಅವಳಿಗೆ ಬಹಳ ಹೆದರಿಕೆಯಾಯಿತು. ರಾವಣಪಾಲಿತವಾದ ಲಂಕೆಗೆ ನೇರವಾಗಿ ಹೋದಳು. ದೇವತೆಗಳೊಡನೆ ಒಡ್ಡೋಲಗದಲ್ಲಿ ಒಪ್ಪುತ್ತಿರುವ ದೇವೇಂದ್ರನಂತೆ, ಅರಮನೆಯ ಉಪ್ಪರಿಗೆಯಲ್ಲಿ ಸಚಿವರೊಡನೆ ಮಂಡಿಸಿದ್ದ ತೇಜಸ್ವಿಯಾದ ರಾವಣನನ್ನು ಶೂರ್ಪಣಖಿಯು ನೋಡಿದಳು (೩–೪). ರಾವಣನು ಸೂರ್ಯನಂತೆ ಬೆಳಗುತ್ತಿದ್ದ ಸ್ವರ್ಣಮಯ

ದೇವಗಂಧರ್ವಭೂತಾನಾಮೃಷೀಣಾಂ ಚ ಮಹಾತ್ಮನಾಮ್ ।
ಅಜೇಯಂ ಸಮರೇ ಶೂರಂ ವ್ಯಾತ್ತಾನನಮಿವಾಂತಕಮ್ ॥ ೬

ದೇವಾಸುರವಿಮರ್ದೇಷು ವಜ್ರಾಶನಿಕೃತವ್ರಣಮ್ ।
ಐರಾವತವಿಷಾಣಾಗ್ರೈರುದ್ಘೃಷ್ಟಕಿಣವಕ್ಷಸಮ್ ॥ ೭

ವಿಂಶದ್ಭುಜಂ ದಶಗ್ರೀವಂ ದರ್ಶನೀಯಪರಿಚ್ಛದಮ್ ।
ವಿಶಾಲವಕ್ಷಸಂ ವೀರಂ ರಾಜಲಕ್ಷಣಶೋಭಿತಮ್ ॥ ೮

ಸ್ನಿಗ್ಧವೈದೂರ್ಯಸಂಕಾಶಂ ತಪ್ತಕಾಂಚನಕುಂಡಲಮ್ ।
ಸುಭುಜಂ ಶುಕ್ಲದಶನಂ ಮಹಾಸ್ಯಂ ಪರ್ವತೋಪಮಮ್ ॥ ೯

ವಿಷ್ಣುಚಕ್ರನಿಪಾತೈಶ್ಚ ಶತಶೋ ದೇವಸಂಯುಗೇ ।
ಅನ್ಯೈಃ ಶಸ್ತ್ರಪ್ರಹಾರೈಶ್ಚ ಮಹಾಯುದ್ಧೇಷು ತಾಡಿತಮ್ ॥ ೧೦

---

ಸಿಂಹಾಸನದಲ್ಲಿ ಕುಳಿತ್ತಿದ್ದನು. ಚಿನ್ನದ ಇಟ್ಟಿಗೆಗಳಿಂದ* ರಚಿತವಾದ ವೇದಿಯ ಮಧ್ಯದಲ್ಲಿ, ಆಜ್ಯವನ್ನು ಸ್ವೀಕರಿಸಿ ಪ್ರಜ್ವಲಿಸುವ ಅಗ್ನಿಯಂತೆ ವಿರಾಜಿಸುತ್ತಿದ್ದನು (೫). ಅವನು ಸಮರದಲ್ಲಿ ದೇವಗಂಧರ್ವರಿಗೂ ಭೂತಾದಿದೇವಯೋನಿಗಳಿಗೂ ಮಹಾತ್ಮರಾದ ಋಷಿಗಳಿಗೂ ಬಾಯ್ದೆರೆದುಬಂದ ಯಮನಂತೆ ಅಜೇಯನಾದ ಶೂರ (೬). ರಾವಣನು ದೇವಾಸುರಸಂಗ್ರಾಮಗಳಲ್ಲಿ ವಜ್ರಾಯುಧದಿಂದಲೂ ಸಿಡಿಲಿನಿಂದಲೂ ಗಾಯಗೊಂಡ ಸಾಹಸಿ! ಅವನ ವಕ್ಷಃಸ್ಥಳದಲ್ಲಿ ಐರಾವತದ ದಂಷ್ಟ್ರಾಗ್ರಗಳಿಂದ ಸಂಭವಿಸಿದ ಗಾಯದ ಕಲೆ ಇತ್ತು! (೭). ಇಪ್ಪತ್ತು ಭುಜಗಳಿಂದಲೂ ದಶಕಂಠಗಳಿಂದಲೂ ಅವನು ಶೋಭಿಸುತ್ತಿದ್ದನು. ಅವನ ಛತ್ರ ಚಾಮರಾದಿ ರಾಜಚಿಹ್ನೆಗಳು ನೋಡತಕ್ಕವುಗಳಾಗಿದ್ದವು. ವಿಶಾಲವಕ್ಷನಾದ ಆ ವೀರನು ಸಮಸ್ತ ರಾಜಲಕ್ಷಣಗಳಿಂದ ಭೂಷಿತನಾಗಿದ್ದನು (೮). ಮಿರುಗುವ ವೈಡೂರ್ಯದಂತೆ ಶ್ಯಾಮಲಾಂಗನಾಗಿ ಅಪರಂಜಿಯ ಕುಂಡಲಗಳನ್ನು ಧರಿಸಿದ್ದನು. ಅವನ ಭುಜಗಳು ಪುಷ್ಟವಾಗಿ ಸುಂದರವಾಗಿದ್ದವು. ಶುಭ್ರವಾದ ಹಲ್ಲುಗಳು. ವಿಶಾಲವಾದ ಮುಖಗಳು. ಪರ್ವತದಂತಹ ಶರೀರ (೯) ದೇವತೆಗಳೊಡನೆ ನಡೆದ ಮಹಾಸಂಗ್ರಾಮಗಳಲ್ಲಿ ನೂರಾರು ಸಲ ವಿಷ್ಣುಚಕ್ರದ ಹೊಡೆತ

---

* ಸಾವಿತ್ರಯಾಗದಲ್ಲಿ ಚಿನ್ನದ ಇಟ್ಟಿಗೆಗಳಿಂದ ವೇದಿಯನ್ನು ರಚಿಸಬೇಕೆಂದು ಹೇಳಿದೆ. 'ಸಾವಿತ್ರಂ ಸ್ವರ್ಗಕಾಮಶ್ಚಿನ್ವೀತ ಪಂಚಾಶೀತಿಶತಂ ಹಿರಣ್ಯೇಷ್ಟಕಾಃ' (ಆಪ. ಸೂ.)

ಆಹತಾಂಗಂ ಸಮಸ್ತೈಶ್ಚ ದೇವಪ್ರಹರಣೈಸ್ತಥಾ ।
ಅಕ್ಷೋಭ್ಯಾಣಾಂ ಸಮುದ್ರಾಣಾಂ ಕ್ಷೋಭಣಂ ಕ್ಷಿಪ್ರಕಾರಿಣಮ್ ॥

ಕ್ಷೇಪ್ತಾರಂ ಪರ್ವತೇಂದ್ರಾಣಾಂ ಸುರಾಣಾಂ ಚ ಪ್ರಮರ್ದನಮ್ ।
ಉಚ್ಛೇತ್ತಾರಂ ಚ ಧರ್ಮಾಣಾಂ ಪರದಾರಾಭಿಮರ್ಶನಮ್ ॥ ೧೨

ಸರ್ವದಿವ್ಯಾಸ್ತ್ರಯೋಕ್ತಾರಂ ಯಜ್ಞವಿಘ್ನಕರಂ ಸದಾ ।
ಪುರೀಂ ಭೋಗವತೀಂ ಪ್ರಾಪ್ಯ ಪರಾಜಿತ್ಯ ಚ ವಾಸುಕಿಮ್ ॥ ೧೩

ತಕ್ಷಕಸ್ಯ ಪ್ರಿಯಾಂ ಭಾರ್ಯಾಂ ಪರಾಜಿತ್ಯ ಜಹಾರ ಯಃ ।
ಕೈಲಾಸಪರ್ವತಂ ಗತ್ವಾ ವಿಜಿತ್ಯ ನರವಾಹನಮ್ ॥ ೧೪

ವಿಮಾನಂ ಪುಷ್ಪಕಂ ತಸ್ಯ ಕಾಮಗಂ ವೈ ಜಹಾರ ಯಃ ।
ವನಂ ಚೈತ್ರರಥಂ ದಿವ್ಯಂ ನಲಿನೀಂ ನಂದನಂ ವನಮ್ ॥ ೧೫

ವಿನಾಶಯತಿ ಯಃ ಕ್ರೋಧಾದ್ದೇವೋದ್ಯಾನಾನಿ ವೀರ್ಯವಾನ್ ।
ಚಂದ್ರಸೂರ್ಯೌ ಮಹಾಭಾಗಾವುತ್ತಿಷ್ಠಂತೌ ಪರಂತಪೌ ॥ ೧೬

---

ಗನ್ನೂ ವಿವಿಧಾಯುಧಗಳ ಪ್ರಹಾರಗಳನ್ನೂ ತಿಂದು ತಾಳಿಕೊಂಡ ಧೀರನವನು ! (೧೦). ತನ್ನ ವಿವಿಧಾಂಗಗಳಲ್ಲಿ ದೇವತೆಗಳ ಸಮಸ್ತ ಆಯುಧಗಳ ಪೆಟ್ಟನ್ನೂ ಅನುಭವಿಸಿ ತಡೆದುಕೊಂಡ ಶೂರನವನು ! ಅಕ್ಷೋಭ್ಯಗಳಾದ ಮಹಾಸಾಗರಗಳನ್ನು ಕ್ಷಿಪ್ರದಲ್ಲಿಯೇ ಕದಡಬಲ್ಲ ಸಾಹಸಿಯುವನು ! (೧೧). ಆ ರಾವಣನು ಮಹಾಪರ್ವತಗಳನ್ನು ತೂರಾಡಿದವನು. ದೇವತೆಗಳನ್ನು ಮರ್ದಿಸಿದವನು. ಧರ್ಮಗಿರ್ಮಗಳನ್ನು ಕಿತ್ತೊಗೆದವನು ! ಪರಸ್ತ್ರೀಯರ ಮೇಲೆ ಕೈಮಾಡಿದವನು (೧೨). ಸಕಲ ದಿವ್ಯಾಸ್ತ್ರಗಳನ್ನೂ ಪಡೆದು ಹೋರಾಡಿದವನು. ಯಜ್ಞಗಳಿಗೆ ಯಾವಾಗಲೂ ವಿಘ್ನವನ್ನೊಡ್ಡತಕ್ಕವನು. ಭೋಗವತೀನಗರಕ್ಕೆ ದಾಳಿಯಿಟ್ಟು ವಾಸುಕಿಯನ್ನು ಸೋಲಿಸಿದವನು (೧೩). ಆ ರಾವಣನೇ ತಕ್ಷಕನನ್ನು ಸೋಲಿಸಿ ಅವನ ಪ್ರಿಯಪತ್ನಿಯನ್ನು ಅಪಹರಿಸಿದ್ದನು. ಕೈಲಾಸಕ್ಕೆ ಹೋಗಿ ಕುಬೇರನನ್ನು ಪರಾಭವಗೊಳಿಸಿ ಕಾಮಗಾಮಿಯಾದ ಪುಷ್ಪಕವಿಮಾನವನ್ನು ಕಸಿದುತಂದಿದ್ದನು. ಆತನೇ ಚೈತ್ರರಥವೆಂಬ ಕುಬೇರನ ಉದ್ಯಾನವನವನ್ನೂ ಅಲ್ಲಿದ್ದ ನಳಿನೀಸರೋವರವನ್ನೂ ನಂದನವನ ಮೊದಲಾದ ದೇವೋದ್ಯಾನಗಳನ್ನೂ ಸಿಟ್ಟಿನಿಂದ ನಾಶಗೊಳಿಸಿದ್ದನು (೧೪–೧೫). ಯಾವ ವೀರನು ಗಿರಿಶೃಂಗದಂತೆ

ನಿವಾರಯತಿ ಬಾಹುಭ್ಯಾಂ ಯಃ ಶೈಲಶಿಖರೋಪಮಃ ।
ದಶವರ್ಷಸಹಸ್ರಾಣಿ ತಪಸ್ತಪ್ತ್ವಾ ಮಹಾವನೇ ॥ ೧೭

ಪುರಾ ಸ್ವಯಂಭುವೇ ಧೀರಃ ಶಿರಾಂಸ್ಯುಪಜಹಾರ ಯಃ ।
ದೇವದಾನವಗಂಧರ್ವಪಿಶಾಚಪತಗೋರಗೈಃ ॥ ೧೮

ಅಭಯಂ ಯಸ್ಯ ಸಂಗ್ರಾಮೇ ಮೃತ್ಯುತೋ ಮಾನುಷಾದೃತೇ ।
ಮಂತ್ರೈರಭಿಷ್ಟುತಂ ಪುಣ್ಯಮಧ್ವರೇಷು ದ್ವಿಜಾತಿಭಿಃ ॥ ೧೯

ಹವಿರ್ಧಾನೇಷು ಯಃ ಸೋಮಮುಪಹಂತಿ ಮಹಾಬಲಃ ।
ಆಪ್ತಯಜ್ಞಹರಂ ಕ್ರೂರಂ ಬ್ರಹ್ಮಘ್ನಂ ದುಷ್ಟಚಾರಿಣಮ್ ॥ ೨೦

ಕರ್ಕಶಂ ನಿರನುಕ್ರೋಶಂ ಪ್ರಜಾನಾಮಹಿತೇ ರತಮ್ ।
ರಾವಣಂ ಸರ್ವಭೂತಾನಾಂ ಸರ್ವಲೋಕಭಯಾವಹಮ್ ॥ ೨೧

ರಾಕ್ಷಸೀ ಭ್ರಾತರಂ ಶೂರಂ ಸಾ ದದರ್ಶ ಮಹಾಬಲಮ್ ।
ತಂ ದಿವ್ಯವಸ್ತ್ರಾಭರಣಂ ದಿವ್ಯಮಾಲ್ಯೋಪಶೋಭಿತಮ್ ॥ ೨೨

---

ನಿಂತು, ಉದಿಸಿಬರುವ ಸೂರ್ಯಚಂದ್ರರನ್ನು ಎರಡು ಕೈಗಳಿಂದು ಹಿಡಿದು ನಿಲ್ಲಿಸ ಬಲ್ಲವನಾಗಿದ್ದನೋ ಆತನೇ ಈ ರಾವಣ. ಯಾವ ಧೀರನು ಹತ್ತುಸಾವಿರ ವರ್ಷಗಳವರೆಗೆ ಘೋರಾರಣ್ಯದಲ್ಲಿ ತಪಸ್ಸುಮಾಡಿ ತನ್ನ ಶಿರಸ್ಸುಗಳನ್ನು ಬ್ರಹ್ಮ ದೇವನಿಗೆ ಕಾಣಿಕೆಯಾಗಿ ಅರ್ಪಿಸಿದ್ದನೋ ಆತನೇ ಈ ರಾವಣ (೧೬–೧೭). ಯಾವನಿಗೆ (ಅಲ್ಪನಾದ) ಮನುಷ್ಯನನ್ನು ಬಿಟ್ಟು ದೇವದಾನವಂಧರ್ವರಿಂದಾಗಲಿ ಪಿಶಾಚ ಪತಗ ಭುಜಂಗಗಳಿಂದಾಗಲಿ ಸಂಗ್ರಾಮದಲ್ಲಿ ಮೃತ್ಯುಭಯವಿರಲಿಲ್ಲವೋ ಆತನೇ ಈ ರಾವಣ (೧೮). ಯಜ್ಞಕಾಲದಲ್ಲಿ ಬ್ರಾಹ್ಮಣರು ಮಂತ್ರಪೂರ್ವಕ ವಾಗಿ ಯಜ್ಞಶಾಲೆಗಳಲ್ಲಿ ತೆಗೆದ ಪವಿತ್ರವಾದ ಸೋಮರಸವನ್ನು ಅಪಹರಿಸುತ್ತಿದ್ದ ಬಲಶಾಲಿಯವನು. ಯಜ್ಞಗಳು ಸಮಾಪ್ತವಾಗುವ ಸಮಯದಲ್ಲಿ ಬಂದು ಅವು ಗಳನ್ನು ಕೆಡಿಸುತ್ತಿದ್ದ ಕ್ರೂರಕರ್ಮನವನು. ಬ್ರಹ್ಮಹತ್ಯೆಯನ್ನು ಮಾಡುತ್ತಿದ್ದ ದುರಾಚಾರಿ (೧೯–೨೦). ನಿರ್ದಯನಾದ ಉಗ್ರಸ್ವಭಾವದವನು. ಜನರಿಗೆ ಕೇಡುಮಾಡುವುದರಲ್ಲಿ ನಿರತನಾಗಿ ಸಕಲಪ್ರಾಣಿಗಳನ್ನೂ ಗೋಳಾಡಿಸಿದವನು. ಸರ್ವಲೋಕಗಳನ್ನೂ ಅಂಜಿಸಿದವನು (೨೧). ಅಂಥ ಬಲಾಢ್ಯನೂ ಸಂಗ್ರಾಮ

ಆಸನೇ ಸೂಪವಿಷ್ಟಂ ಚ ಕಾಲಕಾಲಮಿವೋದ್ಯತಮ್ ।
ರಾಕ್ಷಸೇಂದ್ರ ಮಹಾಭಾಗಂ ಪೌಲಸ್ತ್ಯಕುಲನಂದನಮ್ ॥ ೨೩

ರಾವಣಂ ಶತ್ರುಹಂತಾರಂ ಮಂತ್ರಿಭಿಃ ಪರಿವಾರಿತಮ್ ।
ಅಭಿಗಮ್ಯಾಬ್ರವೀದ್ವಾಕ್ಯಂ ರಾಕ್ಷಸೀ ಭಯವಿಹ್ವಲಾ ॥ ೨೪

ತಮಬ್ರವೀದ್ದೀಪ್ತವಿಶಾಲಲೋಚನಂ
ಪ್ರದರ್ಶಯಿತ್ವಾ ಭಯಮೋಹಮೂರ್ಚ್ಛಿತಾ ।
ಸುದಾರುಣಂ ವಾಕ್ಯಮಭೀತಚಾರಿಣೀ
ಮಹಾತ್ಮನಾ ಶೂರ್ಪಣಖಾ ವಿರೂಪಿತಾ ॥ ೨೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಾತ್ರಿಂಶಃ ಸರ್ಗಃ

ಶೂರನೂ ಆದ ಅಣ್ಣನನ್ನು ಶೂರ್ಪಣಖಿಯು ನೋಡಿದಳು. ರಾವಣನು ದಿವ್ಯ ವಸ್ತ್ರಗಳನ್ನುಟ್ಟು ದಿವ್ಯಾಭರಣಗಳನ್ನು ತೊಟ್ಟು ದಿವ್ಯಪುಷ್ಪಮಾಲೆಗಳಿಂದ ಭೂಷಿತ ನಾಗಿದ್ದನು (೨೨). ಮಹಾಪುರುಷನೂ ಪೌಲಸ್ತ್ಯವಂಶೋದ್ಭವನೂ ಆದ ಆ ರಾಕ್ಷಸೇಂದ್ರನು ಯಮನಿಗೂ ಯಮನಂತೆ ಕಂಗೊಳಿಸುತ್ತ ಸಿಂಹಾಸನದಲ್ಲಿ ಸುಖೋಪವಿಷ್ಟನಾಗಿದ್ದನು. ಮಂತ್ರಿಪರಿವಾರವು ಸುತ್ತಲೂ ನೆರೆದಿತ್ತು. ಭಯ ದಿಂದ ಕಂಗೆಟ್ಟ ಶೂರ್ಪಣಖಿಯು ಶತ್ರುಘಾತುಕನಾದ ರಾವಣನ ಸಮೀಪಕ್ಕೆ ಹೋಗಿ ಮಾತನಾಡಿದಳು (೨೩–೨೪). ಮೊದಲು ನಿರ್ಭಯವಾಗಿ ಅಲೆಯು ತ್ತಿದ್ದ ಶೂರ್ಪಣಖಿಯು ಮಹಾತ್ಮನಾದ ಲಕ್ಷ್ಮಣನಿಂದ ವಿರೂಪಿತಳಾಗಿ, ಭಯ ದಿಂದಲೂ ಚಿತ್ತವೈಕ್ಲವ್ಯದಿಂದಲೂ ದಿಗ್ಭ್ರಾಂತಳಾಗಿದ್ದಳು. ಹೊಳೆಯುವ ವಿಶಾಲ ನೇತ್ರಗಳಿದ್ದ ರಾವಣನಿಗೆ ಅವಳು ತನ್ನ ವಿರೂಪವನ್ನು ತೋರಿಸುತ್ತ ಕರ್ಕಶವಾಕ್ಯ ಗಳನ್ನು ಆಡಲಾರಂಭಿಸಿದಳು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೆರಡನೆಯ ಸರ್ಗ

## ತ್ರಯಸ್ತ್ರಿಂಶಃ ಸರ್ಗಃ

### ರಾವಣನಿಂದಾ

ತತಃ ಶೂರ್ಪಣಖಾ ದೀನಾ ರಾವಣಂ ಲೋಕರಾವಣಮ್ ।
ಅಮಾತ್ಯಮಧ್ಯೇ ಸಂಕ್ರುದ್ಧಾ ಪರುಷಂ ವಾಕ್ಯಮಬ್ರವೀತ್ ॥ ೧

ಪ್ರಮತ್ತಃ ಕಾಮಭೋಗೇಷು ಸ್ವೈರವೃತ್ತೋ ನಿರಂಕುಶಃ ।
ಸಮುತ್ಪನ್ನಂ ಭಯಂ ಘೋರಂ ಬೋದ್ಧವ್ಯಂ ನಾವಬುಧ್ಯಸೇ ॥ ೨

ಸಕ್ತಂ ಗ್ರಾಮ್ಯೇಷು ಭೋಗೇಷು ಕಾಮವೃತ್ತಂ ಮಹೀಪತಿಮ್ ।
ಲುಬ್ಧಂ ನ ಬಹು ಮನ್ಯಂತೇ ಶ್ಮಶಾನಾಗ್ನಿಮಿವ ಪ್ರಜಾಃ ॥ ೩

ಸ್ವಯಂ ಕಾರ್ಯಾಣಿ ಯಃ ಕಾಲೇ ನಾನುತಿಷ್ಠತಿ ಪಾರ್ಥಿವಃ ।
ಸ ತು ವೈ ಸಹ ರಾಜ್ಯೇನ ತೈಶ್ಚ ಕಾರ್ಯೈರ್ವಿನಶ್ಯತಿ ॥ ೪

ಅಯುಕ್ತಚಾರಂ ದುರ್ದರ್ಶಮಸ್ವಾಧೀನಂ ನರಾಧಿಪಮ್ ।
ವರ್ಜಯಂತಿ ನರಾ ದೂರಾನ್ನದೀಪಂಕಮಿವ ದ್ವಿಪಾಃ ॥ ೫

### ಸರ್ಗ ೩೩

#### ಶೂರ್ಪಣಖಿಯು ರಾವಣನನ್ನು ನಿಂದಿಸುವುದು

ದೀನಳಾಗಿ ಬಂದಿದ್ದ ಶೂರ್ಪಣಖಿಯು ಲೋಕರಾವಣನಾದ ರಾವಣನನ್ನು ಕಂಡೊಡನೆ ಕ್ರುದ್ಧಳಾದಳು. ಅವಳು ಸಭೆಯಲ್ಲಿ ಮಂತ್ರಿಗಳೆದುರಿಗೆ ಕಠೋರವಾದ ಮಾತನ್ನಾಡಲು ಉಪಕ್ರಮಿಸಿದಳು (೧): "ಎ ರಾವಣ, ನೀನು ಕಾಮಭೋಗಗಳಲ್ಲಿ ಮುಳುಗಿ ಮೈಮರೆತ್ತಿದ್ದೀಯೆ. ಅಂಕೆಯಿಲ್ಲದೆ ಮನಸ್ಸುಬಂದಂತೆ ನಡೆಯುತ್ತಿದ್ದೀಯೆ. ಘೋರವಾದ ಭಯವೊಂದು ಈಗ ಪ್ರಾಪ್ತವಾಗಿದೆ. ಅವಶ್ಯವಾಗಿ ತಿಳಿದಿರಬೇಕಾದ ಆ ವಿಷಯವನ್ನು ತಿಳಿಯದೆ ಇದ್ದೀಯೆ (೨). ಗ್ರಾಮ್ಯಭೋಗಗಳಲ್ಲಿ ಆಸಕ್ತನಾಗಿ, ತೋರಿದಂತೆ ನಡೆಯುವ ಸುಖಲೋಲುಪನಾದ ರಾಜನನ್ನು ಪ್ರಜೆಗಳು ಗೌರವಿಸುವುದಿಲ್ಲ. ಮಸಣದ ಬೆಂಕಿಯನ್ನು ಕಂಡಂತೆ ಅವನನ್ನು ಅಲಕ್ಷಿಸುತ್ತಾರೆ (೩). ಯಾವ ಭೂಪಾಲನು ಸರಿಯಾದ ಸಮಯದಲ್ಲಿ ತನ್ನ ಕರ್ತವ್ಯಗಳನ್ನು ನಡೆಸುವುದಿಲ್ಲವೋ ಅವನ ಕಾರ್ಯಗಳು ಕೆಡವುವಲ್ಲದೆ ಅವನೂ ಕೆಡುವನು. ಅವನ ರಾಜ್ಯವೂ ನಾಶಹೊಂದುವುದು (೪). ಯಾವ ಭೂಪಾಲನು ಗೂಢಚಾರರನ್ನು ನೇಮಿಸಿಕೊಂಡಿಲ್ಲವೋ, ಯಾವನು ಉಚಿತಕಾಲ

ಯೇ ನ ರಕ್ಷಂತಿ ವಿಷಯಮಸ್ವಾಧೀನಾ ನರಾಧಿಪಾಃ ।
ತೇ ನ ವೃದ್ಧ್ಯಾ ಪ್ರಕಾಶಂತೇ ಗಿರಯಃ ಸಾಗರೇ ಯಥಾ ॥ ೬

ಆತ್ಮವದ್ಭಿರ್ವಿಗೃಹ್ಯ ತ್ವಂ ದೇವಗಂಧರ್ವದಾನವೈಃ ।
ಅಯುಕ್ತಚಾರಶ್ಚಪಲಃ ಕಥಂ ರಾಜಾ ಭವಿಷ್ಯಸಿ ॥ ೭

ತ್ವಂ ತು ಬಾಲಸ್ವಭಾವಶ್ಚ ಬುದ್ಧಿಹೀನಶ್ಚ ರಾಕ್ಷಸ ।
ಜ್ಞಾತವ್ಯಂ ತು ನ ಜಾನೀಷೇ ಕಥಂ ರಾಜಾ ಭವಿಷ್ಯಸಿ ॥ ೮

ಯೇಷಾಂ ಚಾರಶ್ಚ ಕೋಶಶ್ಚ ನಯಶ್ಚ ಜಯತಾಂ ವರ ।
ಅಸ್ವಾಧೀನಾ ನರೇಂದ್ರಾಣಾಂ ಪ್ರಾಕೃತೈಸ್ತೇ ಜನೈಃ ಸಮಾಃ ॥ ೯

ಯಸ್ಮಾತ್ ಪಶ್ಯಂತಿ ದೂರಸ್ಥಾನ್ ಸರ್ವಾನರ್ಥಾನ್ನರಾಧಿಪಾಃ ।
ಚಾರೇಣ ತಸ್ಮಾದುಚ್ಯಂತೇ ರಾಜಾನೋ ದೀರ್ಘಚಕ್ಷುಷಃ ॥ ೧೦

---

ದಲ್ಲಿ ಪ್ರಜೆಗಳಿಗೆ ದರ್ಶನವೀಯುವುದಿಲ್ಲವೋ, ಯಾವನು ಕಂಡವರ ಮಾತಿಗೆ ಕಟ್ಟುಬಿದ್ದು ಪರಾಧೀನನಾಗಿ ವರ್ತಿಸುವನೋ ಅವನನ್ನು ಪ್ರಜೆಗಳು ದೂರವಿಡುತ್ತಾರೆ. ನದಿಯ ಕೆಸರನ್ನು ಆನೆಗಳು ವರ್ಜಿಸುವಂತೆ ವರ್ಜಿಸುತ್ತಾರೆ (೫). ಯಾರು ಸ್ವಬುದ್ಧಿ ಇಲ್ಲದೆ ಪರಾಧೀನರಾಗಿ ರಾಜ್ಯಪಾಲನೆಗೆ ಗಮನವೀಯುವುದಿಲ್ಲವೋ ಅವರಿಗೆ ಎಂದಿಗೂ ಏಳಿಗೆ ಇಲ್ಲ. ಸಮುದ್ರದಲ್ಲಿ ಮುಳುಗಿದ ಬೆಟ್ಟಗಳಂತೆ ಅವರು ಪ್ರಕಾಶಕ್ಕೆ ಬರುವುದಿಲ್ಲ (೬). ಉತ್ಸಾಹಿಗಳೂ ಕ್ರಿಯಾಶೀಲರೂ ಆದ ದೇವ ಗಂಧರ್ವದಾನವರೊಡನೆ ವಿರೋಧವನ್ನು ಬೆಳಸಿದ್ದರೂ ನೀನು ಗೂಢಚಾರರನ್ನು ನೇಮಿಸಿಕೊಳ್ಳದೆ ವಿಷಯಲಂಪಟನಾಗಿದ್ದೀಯೆ ! ರಾವಣ, ನೀನು ಹೇಗೆತಾನೆ ರಾಜನೆನಿಸಿಕೊಳ್ಳುತ್ತೀಯೆ ? (೭). ಏ ರಾಕ್ಷಸ, ನೀನು ಹುಡುಗಾಟವಾಡುತ್ತಿದ್ದೀಯೆ ! ನೀನು ಬುದ್ಧಿಹೀನ ! ರಾಜನು ಅವಶ್ಯವಾಗಿ ತಿಳಿದಿರಬೇಕಾದ್ದನ್ನು ತಿಳಿಯದಿದ್ದೀಯೆ. ನೀನು ಹೇಗೆತಾನೆ ರಾಜನೆನಿಸಿಕೊಳ್ಳುತ್ತೀಯೆ ? (೮). ಹಿಂದೆ ಬೇಕಾದಷ್ಟು ಜಯವನ್ನು ಗಳಿಸಿದ್ದೀಯೆ. ಆದರೆ........, ಯಾರಿಗೆ ಗೂಢಚಾರ ವರ್ಗ, ಭಂಡಾರ, ರಾಜನೀತಿ—ಇವು ಸ್ವಾಧೀನವಾಗಿಲ್ಲವೋ ಅಂಥ ರಾಜರು ವಿದ್ಯೆಯಿಲ್ಲದ ಪ್ರಾಕೃತಜನರಿಗೆ ಸಮಾನರು (೯). ದೂರದಲ್ಲಿರುವ ಸಕಲವಿಷಯುಗಳನ್ನೂ ರಾಜರು ಗೂಢಚಾರರ ಮೂಲಕ ನೋಡಿ ತಿಳಿದುಕೊಳ್ಳುತ್ತಾರೆ

ಅಯುಕ್ತಚಾರಂ ಮನ್ಯೇ ತ್ವಾಂ ಪ್ರಾಕೃತೈಃ ಸಚಿವೈರ್ವೃತಮ್ ।
ಸ್ವಜನಂ ತು ಜನಸ್ಥಾನೇ ಹತಂ ಯೋ ನಾವಬುಧ್ಯಸೇ ॥ ೧೧

ಚತುರ್ದಶ ಸಹಸ್ರಾಣಿ ರಕ್ಷಸಾಂ ಕ್ರೂರಕರ್ಮಣಾಮ್ ।
ಹತಾನ್ಯೇಕೇನ ರಾಮೇಣ ಖರಶ್ಚ ಸಹದೂಷಣಃ ॥ ೧೨

ಋಷೀಣಾಮಭಯಂ ದತ್ತಂ ಕೃತಕ್ಷೇಮಾಶ್ಚ ದಂಡಕಾಃ ।
ಧರ್ಷಿತಂ ಚ ಜನಸ್ಥಾನಂ ರಾಮೇಣಾಕ್ಲಿಷ್ಟಕರ್ಮಣಾ ॥ ೧೩

ತ್ವಂ ತು ಲುಬ್ಧಃ ಪ್ರಮತ್ತಶ್ಚ ಪರಾಧೀನಶ್ಚ ರಾವಣ ।
ವಿಷಯೇ ಸ್ವೇ ಸಮುತ್ಪನ್ನಂ ಭಯಂ ಯೋ ನಾವಬುಧ್ಯಸೇ ॥ ೧೪

ತೀಕ್ಷ್ಣಮಲ್ಪಪ್ರದಾತಾರಂ ಪ್ರಮತ್ತಂ ಗರ್ವಿತಂ ಶಠಮ್ ।
ವ್ಯಸನೇ ಸರ್ವಭೂತಾನಿ ನಾಭಿಧಾವಂತಿ ಪಾರ್ಥಿವಮ್ ॥ ೧೫

---

ಗೂಢಚಾರರು ಕಣ್ಣುಗಳಿದ್ದಂತೆ). ಆದ್ದರಿಂದಲೇ ರಾಜರನ್ನು ದೀರ್ಘಚಕ್ಷುಗಳೆಂದು ಹೇಳುತ್ತಾರೆ (೧೦). ನೀನು ಗೂಢಚಾರರನ್ನೇ ನೇಮಿಸಿಕೊಂಡಿಲ್ಲವೆಂದು ತಿಳಿದಿದ್ದೇನೆ. ತಿಳಿಗೇಡಿಗಳಾದ ಮಂತ್ರಿಗಳ ಪರಿವಾರವನ್ನು ಕಟ್ಟಿಕೊಂಡಿದ್ದೀಯೆ. ಜನಸ್ಥಾನದಲ್ಲಿದ್ದ ನಿನ್ನ ಬಂಧುಗಳು ಹತರಾದರೂ ನಿನಗೆ ಗೊತ್ತಿಲ್ಲವಲ್ಲ ! (೧೧). ಕ್ರೂರಕರ್ಮಗಳನ್ನೆಸಗಬಲ್ಲ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನೂ ಖರ ದೂಷಣರನ್ನೂ ಒಬ್ಬನೇ ಒಬ್ಬ ರಾಮನು ಕೊಂದುಹಾಕಿದ್ದಾನೆ. ರಾಕ್ಷಸರಿಗೆ ಅಂಜಬೇಕಾಗಿಲ್ಲವೆಂದು ಆತನು ಋಷಿಗಳಿಗೆ ಅಭಯವನ್ನು ಕೊಟ್ಟಿದ್ದಾನೆ. ದಂಡಕಾರಣ್ಯವನ್ನು ನಿರ್ಭಯವನ್ನಾಗಿ ಮಾಡಿ ಅದರ ಯೋಗಕ್ಷೇಮಗಳನ್ನು ವಹಿಸಿಕೊಂಡಿದ್ದಾನೆ ! ರಾಮನು ಬಹುಸುಲಭವಾಗಿ ಜನಸ್ಥಾನದಮೇಲೆ ಆಕ್ರಮಣ ನಡೆಸಿದ್ದಾನೆ ! (೧೨–೧೩). ರಾವಣ, ನೀನು ಸುಖಲೋಲುಪನಾಗಿ ಮೈಮರೆತಿದ್ದೀಯೆ. ಸ್ವತಂತ್ರಬುದ್ಧಿಯಿಲ್ಲದೆ ಪರಾಧೀನನಾಗಿದ್ದೀಯೆ. ನಿನ್ನ ರಾಷ್ಟ್ರದಲ್ಲಿ ನಡೆದ ಭಯಂಕರವಾರ್ತೆಯು ಅರಿವೇ ನಿನಗಿಲ್ಲ (೧೪). ರಾಜನು ಉಗ್ರನೂ ಅಲ್ಪವೇತನಕೊಡತಕ್ಕವನೂ ಮೈಮರೆತವನೂ ಗರ್ವಿತನೂ ವಂಚಕನೂ ಆಗಿದ್ದರೆ, ಅವನಿಗೆ ವಿಪತ್ಕಾಲ ಬಂದಾಗ ಯಾವ ಪ್ರಜೆಗಳೂ ಸಹಾಯಕ್ಕೆ ಬರುವುದಿಲ್ಲ.

ಅತಿಮಾನಿನಮುಗ್ರಾಹ್ಯಮಾತ್ಮಸಂಭಾವಿತಂ ನರಮ್ ।
ಕ್ರೋಧನಂ ವ್ಯಸನೇ ಹಂತಿ ಸ್ವಜನೋಽಪಿ ಮಹೀಪತಿಮ್ ॥ ೧೬

ನಾನುತಿಷ್ಠತಿ ಕಾರ್ಯಾಣಿ ಭಯೇಷು ನ ಬಿಭೇತಿ ಚ ।
ಕ್ಷಿಪ್ರಂ ರಾಜ್ಯಾಚ್ಚ್ಯುತೋ ದೀನಸ್ತೃಣೈಸ್ತುಲ್ಯೋ ಭವೇದಿಹ ॥ ೧೭

ಶುಷ್ಕೈಃ ಕಾಷ್ಠೈರ್ಭವೇತ್ ಕಾರ್ಯಂ ಲೋಷ್ಟೈರಪಿ ಚ ಪಾಂಸುಭಿಃ ।
ನ ತು ಸ್ಥಾನಾತ್ ಪರಿಭ್ರಷ್ಟೈಃ ಕಾರ್ಯಂ ಸ್ಯಾದ್ವಸುಧಾಧಿಪೈಃ ॥ ೧೮

ಉಪಭುಕ್ತಂ ಯಥಾ ವಾಸಃ ಸ್ರಜೋ ವಾ ಮೃದಿತಾ ಯಥಾ ।
ಏವಂ ರಾಜ್ಯಾತ್ ಪರಿಭ್ರಷ್ಟಃ ಸಮರ್ಥೋಽಪಿ ನಿರರ್ಥಕಃ ॥ ೧೯

ಅಪ್ರಮತ್ತಶ್ಚ ಯೋ ರಾಜಾ ಸರ್ವಜ್ಞೋ ವಿಜಿತೇಂದ್ರಿಯಃ ।
ಕೃತಜ್ಞೋ ಧರ್ಮಶೀಲಶ್ಚ ಸ ರಾಜಾ ತಿಷ್ಠತೇ ಚಿರಮ್ ॥ ೨೦

ನಯನಾಭ್ಯಾಂ ಪ್ರಸುಪ್ತೋಽಪಿ ಜಾಗರ್ತಿ ನಯಚಕ್ಷುಷಾ ।
ವ್ಯಕ್ತಕ್ರೋಧಪ್ರಸಾದಶ್ಚ ಸ ರಾಜಾ ಪೂಜ್ಯತೇ ಜನೈಃ ॥ ೨೧

---

ದುರಹಂಕಾರಿಯೂ ಹಿಡಿತಕ್ಕೆ ಸಿಕ್ಕದವನೂ ಆತ್ಮಶ್ಲಾಘಿಯೂ ಕೋಪಿಷ್ಠನೂ ಆದ ರಾಜನನ್ನು ಕಷ್ಟಕಾಲ ಬಂದಾಗ ತನ್ನವರೇ ತಿರುಗಿಬಿದ್ದು ಕೊಂದುಹಾಕುತ್ತಾರೆ (೧೫–೧೬). ಯೋಗ್ಯಕಾಲದಲ್ಲಿ ತನ್ನ ಕರ್ತವ್ಯವನ್ನು ಯಾವನು ಮಾಡುವುದಿಲ್ಲವೋ, ಭಯಕಾಲದಲ್ಲಿ ಆತಂಕಪಡುವುದಿಲ್ಲವೋ, ಅಂಥ ರಾಜನು ಬಹುಬೇಗನೆ ರಾಜ್ಯಭ್ರಷ್ಟನಾಗುತ್ತಾನೆ; ಹುಲ್ಲುಕಡ್ಡಿಗೆ ಸಮನಾಗುತ್ತಾನೆ (೧೭). ಒಣಗಿದ ಕಟ್ಟಿಗೆಗಳಿಂದಲೂ ಪ್ರಯೋಜನ ಉಂಟು; ಮಣ್ಣು ಹೆಂಟೆಗಳಿಂದಲೂ ಕಡೆಗೆ ಧೂಳಿಯಿಂದಲಾದರೂ ಉಪಯೋಗ ಉಂಟು. ಆದರೆ ಸ್ಥಾನಭ್ರಷ್ಟರಾದ ರಾಜರಿಂದ ಜನರಿಗೆ ಯಾವ ಉಪಯೋಗವೂ ಇಲ್ಲ! (೧೮). ಉಟ್ಟು ಹರಿದ ಬಟ್ಟೆ, ಮುಡಿದು ಬಾಡಿದ ಹೂಮಾಲೆ—ಇವು ಹೇಗೆ ಕೆಲಸಕ್ಕೆ ಬಾರದವೋ ಹಾಗೆ ರಾಜ್ಯವನ್ನು ಕಳೆದುಕೊಂಡವನು ಸಮರ್ಥನಾದರೂ ನಿರರ್ಥಕ. ಸದಾ ಜಾಗರೂಕನೂ ಸಕಲ ರಾಜಕಾರ್ಯಗಳನ್ನು ಬಲ್ಲವನೂ ಜಿತೇಂದ್ರಿಯನೂ ಕೃತಜ್ಞನೂ ಧರ್ಮಶೀಲನೂ ಆದ ಭೂಪಾಲನು ಬಹುಕಾಲ ಬಾಳುತ್ತಾನೆ (೧೯–೨೦). ಕಣ್ಣುಗಳನ್ನು ಮುಚ್ಚಿದ್ದರೂ ಯಾವನು ರಾಜನೀತಿಯೆಂಬ ಕಣ್ಣನ್ನು ತೆರೆದು ಸದಾ

ತ್ವಂ ತು ರಾವಣ ದುರ್ಬುದ್ಧಿರ್ಗುಣೈರೇತೈರ್ವಿವರ್ಜಿತಃ ।
ಯಸ್ಯ ತೇಽವಿದಿತಶ್ಚಾರೈ ರಕ್ಷಸಾಂ ಸುಮಹಾನ್ ವಧಃ ॥ ೨೨

ಪರಾವಮಂತಾ ವಿಷಯೇಷು ಸಂಗತೋ
ನ ದೇಶಕಾಲಪ್ರವಿಭಾಗತತ್ತ್ವವಿತ್ ।
ಅಯುಕ್ತಬುದ್ಧಿರ್ಗುಣದೋಷನಿಶ್ಚಯೇ
ವಿಪನ್ನರಾಜ್ಯೋ ನಚಿರಾದ್ವಿಪತ್ಸ್ಯಸೇ ॥ ೨೩

ಇತಿ ಸ್ವದೋಷಾನ್ ಪರಿಕೀರ್ತಿತಾಂಸ್ತಯಾ
ಸಮೀಕ್ಷ್ಯ ಬುದ್ಧ್ಯಾ ಕ್ಷಣದಾಚರೇಶ್ವರಃ ।
ಧನೇನ ದರ್ಪೇಣ ಬಲೇನ ಚಾನ್ವಿತೋ
ವಿಚಿಂತಯಾಮಾಸ ಚಿರಂ ಸ ರಾವಣಃ ॥ ೨೪

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಯಸ್ತ್ರಿಂಶಃ ಸರ್ಗಃ

ಎಚ್ಚರದಲ್ಲಿರುವನೋ ಯಾವನ ಕ್ರೋಧವಾಗಲಿ ಅನುಗ್ರಹವಾಗಲಿ ಸ್ಫುಟವಾದ ಫಲವನ್ನು ಕೊಡುತ್ತದೆಯೋ ಅಂಥ ರಾಜನನ್ನು ಪ್ರಜೆಗಳು ಆದರಿಸುತ್ತಾರೆ (೨೧). ನೀನಾದರೋ, ರಾವಣ, ದುರ್ಬುದ್ಧಿ ! ಈ ರಾಜಗುಣಗಳೊಂದೂ ನಿನ್ನಲ್ಲಿಲ್ಲ ! ರಾಕ್ಷಸರ ಕಗ್ಗೊಲೆಯು ನಡೆದಿದ್ದರೂ ಗೂಢಚಾರರಿಂದ ನೀನು ತಿಳಿದುಕೊಳ್ಳಲಿಲ್ಲ. ಪರರಿಗೆ ಅವಮಾನಮಾಡತಕ್ಕವನೂ ವಿಷಯಸುಖದಲ್ಲಿ ನಿರತನೂ ದೇಶಕಾಲಗಳ ವಿಭಾಗದ ಗುಟ್ಟನ್ನು ಅರಿಯದವನೂ ಗುಣದೋಷಗಳನ್ನು ನಿರ್ಣಯಿಸುವ ಬುದ್ಧಿ ಸಾಮರ್ಥ್ಯವಿಲದವನೂ ಆದ ನೀನು ಶೀಘ್ರದಲ್ಲಿ ರಾಜ್ಯವನ್ನು ಕಳೆದುಕೊಂಡು ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತೀಯೆ" ಎಂದು ಹೇಳಿದಳು (೨೨–೨೩). ಹೀಗೆ ಶೂರ್ಪಣಖಿಯು ರಾವಣನಲ್ಲಿದ್ದ ದೋಷಗಳನ್ನು ಬಿಡಿಸಿ ಹೇಳಲು, ಆ ರಾಕ್ಷಸೇಂದ್ರನು ಅವುಗಳನ್ನು ತನ್ನ ಮನಸ್ಸಿನಲ್ಲಿ ವಿಮರ್ಶಿಸಿ ನೋಡಿಕೊಂಡನು. ಧನ ದರ್ಪ ಪರಾಕ್ರಮಗಳಿಂದ ಮೆರೆಯುತ್ತಿದ್ದ ರಾವಣನು ಈಗ ಏನುಮಾಡಬೇಕೆಂದು ಚಿಂತೆಗೊಳಗಾದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತುಮೂರನೆಯ ಸರ್ಗ

## ಚತುಸ್ತ್ರಿಂಶಃ ಸರ್ಗಃ

### ಸೀತಾಪಹರಣೋಪದೇಶಃ

ತತಃ ಶೂರ್ಪಣಖಾಂ ಕ್ರುದ್ಧಾಂ ಬ್ರುವಂತೀಂ ಪರುಷಂ ವಚಃ ।
ಅಮಾತ್ಯಮಧ್ಯೇ ಸಂಕ್ರುದ್ಧಃ ಪರಿಪಪ್ರಚ್ಛ ರಾವಣಃ ॥ ೧

ಕಶ್ಚ ರಾಮಃ ಕಥಂವೀರ್ಯಃ ಕಿಂರೂಪಃ ಕಿಂಪರಾಕ್ರಮಃ ।
ಕಿಮರ್ಥಂ ದಂಡಕಾರಣ್ಯಂ ಪ್ರವಿಷ್ಟಃ ಸ ದುರಾಸದಮ್ ॥ ೨

ಆಯುಧಂ ಕಿಂ ಚ ರಾಮಸ್ಯ ನಿಹತಾ ಯೇನ ರಾಕ್ಷಸಾಃ ।
ಖರಶ್ಚ ನಿಹತಃ ಸಂಖ್ಯೇ ದೂಷಣಸ್ತ್ರಿಶಿರಾಸ್ತಥಾ ॥ ೩

ಇತ್ಯುಕ್ತಾ ರಾಕ್ಷಸೇಂದ್ರೇಣ ರಾಕ್ಷಸೀ ಕ್ರೋಧಮೂರ್ಛಿತಾ ।
ತತೋ ರಾಮಂ ಯಥಾ ತತ್ತ್ವಮಾಖ್ಯಾತುಮುಪಚಕ್ರಮೇ ॥ ೪

ದೀರ್ಘಬಾಹುರ್ವಿಶಾಲಾಕ್ಷಶ್ಚೀರಕೃಷ್ಣಾಜಿನಾಂಬರಃ ।
ಕಂದರ್ಪಸಮರೂಪಶ್ಚ ರಾಮೋ ದಶರಥಾತ್ಮಜಃ ॥ ೫

### ಸರ್ಗ ೩೪

ಶೂರ್ಪಣಖಿಯಿಂದ ಶ್ರೀರಾಮನ ವರ್ಣನೆ. ಸೀತೆಯನ್ನು ಅಪಹರಿಸಿ ತರಬೇಕೆಂದು ರಾವಣನಿಗೆ ಉಪದೇಶ

ಈ ರೀತಿಯಲ್ಲಿ ಕೋಪಗೊಂಡ ಶೂರ್ಪಣಖಿಯು ಮಂತ್ರಿಗಳೆದುರಿಗೆ ಕಠೋರವಾದ ಮಾತನ್ನಾಡುತ್ತಿದ್ದಳು. ಆಗ ರಾವಣನು ಸಿಟ್ಟಿನಿಂದ "ರಾಮನೆಂದರೆ ಯಾವನವನು? ಅವನ ಶೌರ್ಯವೆಂತಹುದು? ನೋಡಲು ಹೇಗಿದ್ದಾನೆ? ಅವನ ಪರಾಕ್ರಮವೇನು? ದುರ್ಗಮವಾದ ದಂಡಕಾರಣ್ಯಕ್ಕೆ ಏಕೆ ಬಂದನಂತೆ? (೧-೨). ರಾಮನು ಯುದ್ಧದಲ್ಲಿ ಅಷ್ಟು ಮಂದಿ ರಾಕ್ಷಸರನ್ನೂ ಖರ ದೂಷಣತ್ರಿಶಿರರನ್ನೂ ಸಂಹರಿಸಿದನಲ್ಲ, ಅವನ ಆಯುಧ ಯಾವ ಬಗೆಯದು?" ಎಂದು ಶೂರ್ಪಣಖಿಯನ್ನು ಕೇಳಿದನು (೩). ಆ ರಾಕ್ಷಸಿಯು ಕೋಪದಿಂದ ದಿಙ್ಮೂಢಳಾಗಿದ್ದರೂ ಶ್ರೀರಾಮನ ವಿಷಯದಲ್ಲಿ ಇದ್ದುದನ್ನು ಇದ್ದಂತೆ ಹೇಳಿದಳು: "ರಾವಣ, ರಾಮನು ದಶರಥರಾಜನ ಪುತ್ರ; ಆಜಾನುಬಾಹು; ವಿಶಾಲನೇತ್ರ; ನಾರುಬಟ್ಟೆ ಕೃಷ್ಣಾಜಿನಗಳೇ ಅವನ ವಸ್ತ್ರ; ಮನ್ಮಥನಂಥ ಸುಂದರಾಕೃತಿ! (೪-೫).

ಶಕ್ರಚಾಪನಿಭಂ ಚಾಪಂ ವಿಕೃಷ್ಯ ಕನಕಾಂಗದಮ್ ।
ದೀಪ್ತಾನ್ ಕ್ಷಿಪತಿ ನಾರಾಚಾನ್ ಸರ್ಪಾನಿವ ಮಹಾವಿಷಾನ್ ॥ ೬

ನಾದದಾನಂ ಶರಾನ್ ಘೋರಾನ್ನ ಮುಂಚಂತಂ ಶಿಲೀಮುಖಾನ್ ।
ನ ಕಾರ್ಮುಕಂ ವಿಕರ್ಷಂತಂ ರಾಮಂ ಪಶ್ಯಾಮಿ ಸಂಯುಗೇ ॥ ೭

ಹನ್ಯಮಾನಂ ತು ತತ್ ಸೈನ್ಯಂ ಪಶ್ಯಾಮಿ ಶರವೃಷ್ಟಿಭಿಃ ।
ಇಂದ್ರೇಣೇವೋತ್ತಮಂ ಸಸ್ಯಮಾಹತಂ ತ್ವಶ್ಮವೃಷ್ಟಿಭಿಃ ॥ ೮

ರಕ್ಷಸಾಂ ಭೀಮರೂಪಾಣಾಂ ಸಹಸ್ರಾಣಿ ಚತುರ್ದಶ ।
ನಿಹತಾನಿ ಶರೈಸ್ತೀಕ್ಷ್ಣೈಸ್ತೇನೈಕೇನ ಪದಾತಿನಾ ॥ ೯

ಅರ್ಧಾಧಿಕಮುಹೂರ್ತೇನ ಖರಶ್ಚ ಸಹದೂಷಣಃ ।
ಋಷೀಣಾಮಭಯಂ ದತ್ತಂ ಕೃತಕ್ಷೇಮಾಶ್ಚ ದಂಡಕಾಃ ॥ ೧೦

ಏಕಾ ಕಥಂಚಿನ್ಮುಕ್ತಾಹಂ ಪರಿಭೂಯ ಮಹಾತ್ಮನಾ ।
ಸ್ತ್ರೀವಧಂ ಶಂಕಮಾನೇನ ರಾಮೇಣ ವಿದಿತಾತ್ಮನಾ ॥ ೧೧

---

ಸುವರ್ಣವಲಯಭೂಷಿತವಾದ ಕಾಮನಬಿಲ್ಲಿನಂತಹ ಧನುಸ್ಸು ಅವನ ಆಯುಧ! ಅವನು ಆ ಧನುಸ್ಸನ್ನೆಳೆದು ಪ್ರಜ್ವಲಿಸುವ ಕೂರಂಬುಗಳನ್ನು ಪ್ರಯೋಗಿಸುತ್ತಾನೆ. ಘೋರವಿಷಪೂರ್ಣವಾದ ಸರ್ಪಗಳಂತೆ ಅವು ನುಗ್ಗಿಬರುತ್ತವೆ (೬). (ಅವನ ಅಸ್ತ್ರನೈಪುಣ್ಯವು ಹೇಗಿದೆಯೆಂದರೆ) ಯುದ್ಧಕಾಲದಲ್ಲಿ ರಾಮನು ಘೋರಾಸ್ತ್ರಗಳನ್ನು ಸೆಳೆದುಕೊಳ್ಳುವುದಾಗಲಿ, ಅವುಗಳನ್ನು ರಾಕ್ಷಸರ ಮೇಲೆ ಪ್ರಯೋಗಿಸುವುದಾಗಲಿ, ಧನುಸ್ಸಿನ ಹೆದೆಯನ್ನು ಜಗ್ಗುವುದಾಗಲಿ ನನಗೆ ಕಾಣಿಸುತ್ತಿರಲಿಲ್ಲ. ಶರವರ್ಷಗಳಿಂದ ರಾಕ್ಷಸಸೈನ್ಯವು ಸತ್ತು ಬೀಳುವುದು ಮಾತ್ರ ನನಗೆ ಕಾಣಿಸುತ್ತಿತ್ತು! ಇಂದ್ರನು ಆಲಿಕಲ್ಲುಗಳ ಮಳೆಯನ್ನು ಪೈರಿನಮೇಲೆ ಸುರಿಸುವಂತೆ, ರಾಮನು ಬಾಣದ ಮಳೆಯನ್ನು ಸೇನೆಯಮೇಲೆ ಸುರಿಸುತ್ತಿದ್ದನು (೭–೮). ಪದಾತಿಯಾಗಿದ್ದ ರಾಮನೊಬ್ಬನೇ ಭೀಮಕಾಯರಾದ ಹದಿನಾಲ್ಕುಸಾವಿರ ರಾಕ್ಷಸರನ್ನೂ ಖರದೂಷಣರನ್ನೂ ತೀಕ್ಷ್ಣಾಸ್ತ್ರಗಳಿಂದ ಕೊಂದು ಹಾಕಿದನು. ಸುಮಾರು ಮೂರುಗಳಿಗೆಯಲ್ಲಿ ಎಲ್ಲರನ್ನೂ ಧ್ವಂಸಮಾಡಿದನು. ಋಷಿಗಳಿಗೆ ಅಭಯವನ್ನಿತ್ತು ದಂಡಕಾರಣ್ಯಕ್ಕೆ ರಕ್ಷಣೆಯನ್ನೊದಗಿಸಿದನು (೯–೧೦). ಆ ಮಹಾತ್ಮನು ಹೇಗೋ ನನ್ನೊಬ್ಬಳನ್ನು ಕೊಲ್ಲದೆ ಬಿಟ್ಟನು. ರಾಮನು

ಭ್ರಾತಾ ಚಾಸ್ಯ ಮಹಾತೇಜಾ ಗುಣತಸ್ತುಲ್ಯವಿಕ್ರಮಃ ।
ಅನುರಕ್ತಶ್ಚ ಭಕ್ತಶ್ಚ ಲಕ್ಷ್ಮಣೋ ನಾಮ ವೀರ್ಯವಾನ್ ॥ ೧೨

ಅಮರ್ಷೀ ದುರ್ಜಯೋ ಜೇತಾ ವಿಕ್ರಾಂತೋ ಬುದ್ಧಿಮಾನ್ ಬಲೀ ।
ರಾಮಸ್ಯ ದಕ್ಷಿಣೋ ಬಾಹುರ್ನಿತ್ಯಂ ಪ್ರಾಣೋ ಬಹಿಶ್ಚರಃ ॥ ೧೩

ರಾಮಸ್ಯ ತು ವಿಶಾಲಾಕ್ಷೀ ಪೂರ್ಣೇಂದುಸದೃಶಾನನಾ ।
ಧರ್ಮಪತ್ನೀ ಪ್ರಿಯಾ ಭರ್ತುರ್ನಿತ್ಯಂ ಪ್ರಿಯಹಿತೇ ರತಾ ॥ ೧೪

ಸಾ ಸುಕೇಶೀ ಸುನಾಸೋರೂಃ ಸುರೂಪಾ ಚ ಯಶಸ್ವಿನೀ ।
ದೇವತೇವ ವನಸ್ಯಾಸ್ಯ ರಾಜತೇ ಶ್ರೀರಿವಾಪರಾ ॥ ೧೫

ತಪ್ತಕಾಂಚನವರ್ಣಾಭಾ ರಕ್ತತುಂಗನಖೀ ಶುಭಾ ।
ಸೀತಾ ನಾಮ ವರಾರೋಹಾ ವೈದೇಹೀ ತನುಮಧ್ಯಮಾ ॥ ೧೬

---

ಪ್ರಾಜ್ಞನಾದ್ದರಿಂದ ಸ್ತ್ರೀಹತ್ಯೆಗೆ ಅಂಜಿ ನನ್ನನ್ನು ವಿಕಾರಗೊಳಿಸಿದ್ದಾನೆ. ಅತನಿಗೆ ಮಹಾತೇಜಸ್ವಿಯಾದ ತಮ್ಮನೊಬ್ಬನಿದ್ದಾನೆ. ಶೌರ್ಯಾದಿಗುಣಗಳಿಂದ ಅವನ ಪರಾಕ್ರಮ ರಾಮನಿಗೆ ಸಮಾನವಾದದ್ದು. ಅವನ ಹೆಸರು ಲಕ್ಷ್ಮಣ. ಆ ವೀರನು ರಾಮನಲ್ಲಿ ಅನುರಕ್ತನೂ ಅವನ ಭಕ್ತನೂ ಆಗಿದ್ದಾನೆ (೧೧–೧೨). ಲಕ್ಷ್ಮಣ ನಿಗೆ ತಾಳ್ಮೆ ಇಲ್ಲ. ಶತ್ರುಗಳನ್ನು ಗೆಲ್ಲುವನೇ ಹೊರತು ಎಂದಿಗೂ ಸೋಲತಕ್ಕವ ನಲ್ಲ. ಅವನು ಪರಾಕ್ರಮಿ, ಬುದ್ಧಿವಂತ, ಬಲಶಾಲಿ. ಲಕ್ಷ್ಮಣನು ನಿತ್ಯವೂ ರಾಮನ ಬಲಗೈಯಾಗಿದ್ದಾನೆ, ಹೊರಗೆ ಸುಳಿದಾಡುವ ಪ್ರಾಣವಾಗಿದ್ದಾನೆ (೧೩). ಅಣ್ಣ, ರಾಮನಿಗೆ ಪ್ರೀತಿಪಾತ್ರಳಾದ ಒಬ್ಬ ಧರ್ಮಪತ್ನಿ ಇದ್ದಾಳೆ. ಆ ವಿಶಾಲಾಕ್ಷಿಯ ಮುಖವು ಪೂರ್ಣಚಂದ್ರನಂತಿದೆ. ಅವಳು ಯಾವಾಗಲೂ ತನ್ನ ಗಂಡನಿಗೆ ಪ್ರಿಯವಾದುವನ್ನೇ ಆಚರಿಸುತ್ತ ಅವನ ಹಿತದಲ್ಲಿ ನಿರತಳಾಗಿದ್ದಾಳೆ (೧೪). ಅವಳ ತಲೆಗೂದಲು ಸುಂದರವಾಗಿದೆ. ಅವಳ ಮೂಗು, ತೊಡೆಗಳು ಅಂದವಾಗಿವೆ. ಮನೋಹರವಾದ ಆಕೃತಿ. ವನದ ಅಧಿದೇವತೆಯೋ ಇನ್ನೊಬ್ಬ ಲಕ್ಷ್ಮೀದೇವಿಯೋ ಎಂಬಂತೆ ವಿರಾಜಿಸುತ್ತಿದ್ದಾಳೆ. ಕಾಯಿಸಿದ ಚಿನ್ನದಂತೆ ಅವಳ ಮೈಬಣ್ಣ. ಕೆಂಪಗೆ ಉನ್ನತವಾದ ಉಗುರುಗಳು. ಆ ಶುಭಾಂಗಿಯ ಹೆಸರು ಸೀತೆ

ನೈವ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿಂನರೀ ।
ನೈವಂ ರೂಪಾ ಮಯಾ ನಾರೀ ದೃಷ್ಟಪೂರ್ವಾ ಮಹೀತಲೇ ॥ ೧೭

ಯಸ್ಯ ಸೀತಾ ಭವೇದ್ಭಾರ್ಯಾ ಯಂ ಚ ಹೃಷ್ಟಾ ಪರಿಷ್ವಜೇತ್ ।
ಅತಿಜೀವೇತ್ ಸ ಸರ್ವೇಷು ಲೋಕೇಷ್ವಪಿ ಪುರಂದರಾತ್ ॥ ೧೮

ಸಾ ಸುಶೀಲಾ ವಪುಃಶ್ಲಾಘ್ಯಾ ರೂಪೇಣಾಪ್ರತಿಮಾ ಭುವಿ ।
ತವಾನುರೂಪಾ ಭಾರ್ಯಾ ಸ್ಯಾತ್ತ್ವಂ ಚ ತಸ್ಯಾಸ್ತಥಾ ಪತಿಃ ॥ ೧೯

ತಾಂ ತು ವಿಸ್ತೀರ್ಣಜಘನಾಂ ಪೀನಶ್ರೋಣಿಪಯೋಧರಾಮ್ ।
ಭಾರ್ಯಾರ್ಥೇ ಚ ತವಾನೇತುಮುದ್ಯತಾಹಂ ವರಾನನಾಮ್ ॥ ೨೦

ವಿರೂಪಿತಾಸ್ಮಿ ಕ್ರೂರೇಣ ಲಕ್ಷ್ಮಣೇನ ಮಹಾಭುಜ ।
ತಾಂ ತು ದೃಷ್ಟ್ವಾದ್ಯ ವೈದೇಹೀಂ ಪೂರ್ಣಚಂದ್ರನಿಭಾನನಾಮ್॥ ೨೧

---

ಯೆಂದು. ಆ ನಿತಂಬಿನಿಯು ವಿದೇಹರಾಜನ ಮಗಳು. ಕೃಶವಾದ ನಡು (೧೬–೧೫.) ಅಣ್ಣ, ಆ ತರುಣಿಯಂತೆ ಯಾವ ದೇವಕನ್ಯೆಯೂ ಇಲ್ಲ, ಗಂಧರ್ವಿಯೂ ಇಲ್ಲ, ಯಕ್ಷಿಯೂ ಇಲ್ಲ, ಕಿನ್ನರಿಯೂ ಇಲ್ಲ. ಅಷ್ಟು ಸುಂದರಾಂಗಿಯಾದ ಸ್ತ್ರೀಯನ್ನು ಈ ಜಗತ್ತಿನಲ್ಲಿಯೇ ನಾನು ನೋಡಿಲ್ಲ! (೧೭). ಸೀತೆಯು ಯಾರ ಮಡದಿ ಯಾಗಿರುವಳೋ ಯಾರನ್ನು ಅವಳು ಪ್ರೀತಿಯಿಂದ ಅಪ್ಪಿಕೊಳ್ಳುವಳೋ ಅವನ ಜೀವನ ಸಮಸ್ತರನ್ನೂ ಮೀರಿಸಿದ ಸುಖಮಯ ಜೀವನ! ಅವನ ಬದುಕು ದೇವೇಂದ್ರನಿಗಿಂತ ಉತ್ತಮವಾದದ್ದು! (೧೮). ರಮಣೀಯಾಕೃತಿಯುಳ್ಳ ಸುಶೀಲೆಯುವಳು. ಈ ಪ್ರಪಂಚದಲ್ಲಿ ಎಣೆಯಿಲ್ಲದ ರೂಪವತಿಯುವಳು. ಅಣ್ಣ, ಸೀತೆಯು ನಿನಗೆ ಅನುರೂಪಳಾದ ಮಡದಿಯಾಗಬಲ್ಲಳು. ನೀನು ಅವಳಿಗೆ ಅನುರೂಪನಾದ ಪತಿಯಾಗುವೆ! (೧೯). ವಿಶಾಲಜಘನೆಯೂ ಪೀನಪಯೋ ಧರೆಯೂ ಆದ ಆ ನಿತಂಬಿನಿಯನ್ನು ತಂದು ನಿನ್ನ ಮಡದಿಯಾಗಿ ಮಾಡ ಬೇಕೆಂದು ನನ್ನ ಉದ್ದೇಶವಿತ್ತು! ಆದ್ದರಿಂದ ಆ ವರಾನನೆಯನ್ನು ತರಲು ನಾನು ಪ್ರಯತ್ನಿಸಿದೆ (೨೦). ಎಲೈ ಪರಾಕ್ರಮಿ, ಆಗ ಕ್ರೂರನಾದ ಲಕ್ಷ್ಮಣನು ನನ್ನನ್ನು ಹೀಗೆ ವಿರೂಪಗೊಳಿಸಿಬಿಟ್ಟನು. ಪೂರ್ಣೇಂದುಮುಖಿಯಾದ ವೈದೇಹಿ

*

ಮನ್ಮಥಸ್ಯ ಶರಾಣಾಂ ವೈ ತ್ವಂ ವಿಧೇಯೋ ಭವಿಷ್ಯಸಿ ।
ಯದಿ ತಸ್ಯಾಮಭಿಪ್ರಾಯೋ ಭಾರ್ಯಾರ್ಥೇ ತವ ಜಾಯತೇ ॥ ೨೨

ಶೀಘ್ರಮುದ್ಧ್ರಿಯತಾಂ ಪಾದೋ ಜಯಾರ್ಥಮಿಹ ದಕ್ಷಿಣಃ ।
ಕುರು ಪ್ರಿಯಂ ತಥಾ ತೇಷಾಂ ರಕ್ಷಸಾಂ ರಾಕ್ಷಸೇಶ್ವರ ॥ ೨೩

ವಧಾತ್ತಸ್ಯ ನೃಶಂಸಸ್ಯ ರಾಮಸ್ಯಾಶ್ರಮವಾಸಿನಃ ।
ತಂ ಶರೈರ್ನಿಶಿತೈರ್ಹತ್ವಾ ಲಕ್ಷ್ಮಣಂ ಚ ಮಹಾರಥಮ್ ॥ ೨೪

ಹತನಾಥಾಂ ಸುಖಂ ಸೀತಾಂ ಯಥಾವದುಪಭೋಕ್ಷ್ಯಸಿ ।
ರೋಚತೇ ಯದಿ ತೇ ವಾಕ್ಯಂ ಮಮೈತದ್ರಾಕ್ಷಸೇಶ್ವರ ॥ ೨೫

ಕ್ರಿಯತಾಂ ನಿರ್ವಿಶಂಕೇನ ವಚನಂ ಮಮ ರಾವಣ ।
ವಿಜ್ಞಾಯೇಹಾತ್ಮಶಕ್ತಿಂ ಚ ಹ್ರಿಯತಾಮಬಲಾ ಬಲಾತ್ ॥ ೨೬
ಸೀತಾ ಸರ್ವಾನವದ್ಯಾಂಗೀ ಭಾರ್ಯಾರ್ಥೇ ರಾಕ್ಷಸೇಶ್ವರ ॥

ನಿಶಮ್ಯ ರಾಮೇಣ ಶರೈರಜಿಹ್ಮಗೈ-
ರ್ಹತಾನ್ ಜನಸ್ಥಾನಗತಾನ್ನಿಶಾಚರಾನ್ ।

---

ಯನ್ನು ನೀನು ಒಮ್ಮೆ ನೋಡಿದರೆ, ಅಣ್ಣ, ನೀನು ನಿಶ್ಚಯವಾಗಿಯೂ ಕಾಮವಶನಾಗುತ್ತೀಯೆ! (೨೧). ಸೀತೆಯು ನಿನ್ನ ಭಾರ್ಯೆಯಾಗಬೇಕೆಂದು ನಿನಗೆ ಇಚ್ಛೆಯಿದ್ದರೆ, ದ್ವಿಗಿಜಯವಾಗಲೆಂದು ಕೂಡಲೇ ಬಲಗಾಲನ್ನು ಮುಂದಿಡು! ರಾಕ್ಷಸೇಶ್ವರ! ಆ ಪರ್ಣಶಾಲೆಯಲ್ಲಿರುವ ಘಾತುಕನಾದ ರಾಮನನ್ನು ವಧಿಸಿ, ಮೃತರಾದ ಖರಾದಿರಾಕ್ಷಸರಿಗೆ ಆತ್ಮಶಾಂತಿಯನ್ನುಂಟುಮಾಡು! ವೀರನಾದ ಲಕ್ಷ್ಮಣನನ್ನೂ ನಿಶಿತಾಸ್ತ್ರಗಳಿಂದ ಸಂಹರಿಸು! (೨೨–೨೩). ಸೀತೆಯ ರಕ್ಷಕರೀರ್ವರೂ ಹತರಾದ ಮೇಲೆ, ಅವಳನ್ನು ನೀನು ಸುಖವಾಗಿ ಅನುಭವಿಸಿಕೊಂಡಿರಬಹುದು! ರಾಕ್ಷಸೇಶ್ವರ, ನನ್ನ ಮಾತು ನಿನಗೆ ರುಚಿಸುವುದೇ? (೨೪). ರುಚಿಸುವುದಾದರೆ ನಿಶ್ಶಂಕೆಯಿಂದ ನನ್ನ ಮಾತನ್ನು ನಡೆಸು. ನಿನ್ನ ಅಸಾಧಾರಣವಾದ ಸಾಮರ್ಥ್ಯವನ್ನು ವಿಮರ್ಶಿಸಿನೋಡು. ಆ ಅಬಲೆಯನ್ನು ಬಲಾತ್ಕಾರದಿಂದ ಅಪಹರಿಸು. ರಾವಣ, ಪರಮಸುಂದರಿಯಾದ ಸೀತೆಯು ನಿನ್ನ ಹೆಂಡತಿಯಾಗಲಿ! (೨೫–೨೬). ಜನಸ್ಥಾನದಲ್ಲಿದ್ದ ರಾಕ್ಷಸರೆಲ್ಲರನ್ನೂ ರಾಮನು ತನ್ನ

ಖರಂ ಚ ಬುದ್ಧ್ವಾ ನಿಹತಂ ಚ ದೂಷಣಂ
ತ್ವಮತ್ರ ಕೃತ್ಯಂ ಪ್ರತಿಪತ್ತುಮರ್ಹಸಿ ॥ ೨೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುಸ್ತ್ರಿಂಶಃ ಸರ್ಗಃ

---

## ಪಂಚತ್ರಿಂಶಃ ಸರ್ಗಃ

### ಮಾರೀಚಾಶ್ರಮಪುನರ್ಗಮನಮ್

ತತಃ ಶೂರ್ಪಣಖಾವಾಕ್ಯಂ ತಚ್ಛ್ರುತ್ವಾ ರೋಮಹರ್ಷಣಮ್ ।
ಸಚಿವಾನಭ್ಯನುಜ್ಞಾಯ ಕಾರ್ಯಂ ಬುದ್ಧ್ವಾ ಜಗಾಮ ಸಃ ॥ ೧

ತತ್ಕಾರ್ಯಮನುಗಮ್ಯಾಥ ಯಥಾವದುಪಲಭ್ಯ ಚ ।
ದೋಷಾಣಾಂ ಚ ಗುಣಾನಾಂ ಚ ಸಂಪ್ರಧಾರ್ಯ ಬಲಾಬಲಮ್ ॥

ಇತಿ ಕರ್ತವ್ಯಮಿತ್ಯೇವ ಕೃತ್ವಾ ನಿಶ್ಚಯಮಾತ್ಮನಃ ।
ಸ್ಥಿರಬುದ್ಧಿಸ್ತತೋ ರಮ್ಯಾಂ ಯಾನಶಾಲಾಮುಪಾಗಮತ್ ॥ ೩

---

ಕುಟಿಲಾಸ್ತ್ರಗಳಿಂದ ಕೊಂದನೆಂಬುದನ್ನು ಕೇಳಿದೆಯಲ್ಲವೆ? ಖರದೂಷಣರೂ ಹತರಾದರೆಂಬುದು ತಿಳಿಯಿತಲ್ಲವೆ? ಇನ್ನು ಮುಂದಿನ ಕರ್ತವ್ಯವೇನೆಂಬುದನ್ನು ವಿಚಾರಿಸಿನೋಡು" ಎಂದು ಹೇಳಿದಳು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತುನಾಲ್ಕನೆಯ ಸರ್ಗ

---

## ಸರ್ಗ ೩೫

### ರಾವಣನು ಸೀತೆಯನ್ನು ಅಪಹರಿಸಬೇಕೆಂದು ನಿಶ್ಚಯಿಸಿ ಪುನಃ ಮಾರೀಚನ ಆಶ್ರಮಕ್ಕೆ ಹೋಗುವುದು

ಶೂರ್ಪಣಖಿಯ ವಾಕ್ಯವನ್ನು ಕೇಳಿ ರಾವಣನಿಗೆ ರೋಮಾಂಚವಾಯಿತು. ಅವನು ಮಂತ್ರಿಗಳಿಗೆ ಅನುಮತಿಯನ್ನಿತ್ತು ಕಳಿಸಿ ಮುಂದಿನ ಕಾರ್ಯವನ್ನು ನಿರ್ಧರಿಸಿ ಹೊರಟನು (೧). ಅವನು ಸೀತಾಪಹರಣವನ್ನುದ್ದೇಶಿಸಿ 'ಬಲಾತ್ಕಾರದಲ್ಲಿರುವ ದೋಷಗಳೇನು? ಗುಣಗಳೇನು? ವಂಚನೆಯಿಂದ ಅಪಹರಿಸಿದಲ್ಲಿ ಸಂಭವಿಸುವ ದೋಷಗಳೇನು? ಗುಣಗಳೇನು?' ಎಂದು ಗುಣದೋಷಗಳ ಬಲಾಬಲಗಳನ್ನು ಮನಸ್ಸಿನಲ್ಲಿ ವಿಮರ್ಶೆಮಾಡಿದನು (೨). ಕಡೆಗೆ ಹೀಗೆಯೇ

ಯಾನಶಾಲಾಂ ತತೋ ಗತ್ವಾ ಪ್ರಚ್ಛನ್ನೋ ರಾಕ್ಷಸಾಧಿಪಃ ।
ಸೂತಂ ಸಂಚೋದಯಾಮಾಸ ರಥಃ ಸಂಯೋಜ್ಯತಾಮಿತಿ ॥ ೪

ಏವಮುಕ್ತಃ ಕ್ಷಣೇನೈವ ಸಾರಥಿರ್ಲಘುವಿಕ್ರಮಃ ।
ರಥಂ ಸಂಯೋಜಯಾಮಾಸ ತಸ್ಯಾಭಿಮತಮುತ್ತಮಮ್ ॥ ೫

ಕಾಂಚನಂ ರಥಮಾಸ್ಥಾಯ ಕಾಮಗಂ ರತ್ನಭೂಷಿತಮ್ ।
ಪಿಶಾಚವದನೈರ್ಯುಕ್ತಂ ಖರೈಃ ಕನಕಭೂಷಣೈಃ ॥ ೬

ಮೇಘಪ್ರತಿಮನಾದೇನ ಸ ತೇನ ಧನದಾನುಜಃ ।
ರಾಕ್ಷಸಾಧಿಪತಿಃ ಶ್ರೀಮಾನ್ ಯಯೌ ನದನದೀಪತಿಮ್ ॥ ೭

ಸ ಶ್ವೇತವಾಲವ್ಯಜನಃ ಶ್ವೇತಚ್ಛತ್ರೋ ದಶಾನನಃ ।
ಸ್ನಿಗ್ಧವೈದೂರ್ಯಸಂಕಾಶಸ್ತಪ್ತಕಾಂಚನಕುಂಡಲಃ ॥ ೮

ವಿಂಶದ್ಭುಜೋ ದಶಗ್ರೀವೋ ದರ್ಶನೀಯಪರಿಚ್ಛದಃ ।
ತ್ರಿದಶಾರಿರ್ಮುನೀಂದ್ರಘ್ನೋ ದಶಶೀರ್ಷ ಇವಾದ್ರಿರಾಟ್ ॥ ೯

---

ಮಾಡಬೇಕೆಂದು ನಿರ್ಧಾರಮಾಡಿ ಬುದ್ಧಿಯನ್ನು ಸ್ಥಿರಪಡಿಸಿಕೊಂಡು ರಮ್ಯವಾದ ತನ್ನ ಯಾನಶಾಲೆಗೆ ಹೋದನು. ಅಲ್ಲಿ ರಹಸ್ಯವಾಗಿ ಸೂತನನ್ನು ಕರೆದು ರಥವನ್ನು ಸಜ್ಜುಗೊಳಿಸಬೇಕೆಂದು ಆಜ್ಞಾಪಿಸಿದನು (೩–೪). ಸಾರಥಿಯು ಲಗುಬಗೆಯಿಂದ ಒಂದು ಕ್ಷಣದಲ್ಲಿ ರಥವನ್ನು ಸಿದ್ಧಪಡಿಸಿ ರಾವಣನೆದುರಿಗೆ ತಂದು ನಿಲ್ಲಿಸಿದನು. ಅದು ರತ್ನಭೂಷಿತವೂ ಕಾಮಗಾಮಿಯೂ ಆದ ಚಿನ್ನದ ರಥ. ಪಿಶಾಚಗಳಂತೆ ಮುಖಗಳಿರುವ ಕನಕಭೂಷಿತಗಳಾದ ಖರಗಳನ್ನು ಅದಕ್ಕೆ ಹೂಡಲಾಗಿತ್ತು (೫–೬). ಕುಬೇರನ ತಮ್ಮನಾದ ಆ ರಾಕ್ಷಸೇಶ್ವರನು ಮೇಘಗಂಭೀರನಾದಿಯಾದ ಆ ರಥವನ್ನೇರಿ ಸಮುದ್ರದ ಕಡೆಗೆ ಪ್ರಯಾಣಮಾಡಿದನು. ಬಿಳಿಯ ಚಾಮರವನ್ನು ಹಿಡಿದು ಶ್ವೇತಚ್ಛತ್ರಧಾರಿಯಾದ ದಶಾನನು ಮಿರುಗುವ ವೈಡೂರ್ಯದಂತೆ ಶ್ಯಾಮಲಾಂಗನಾಗಿ ಚಿನ್ನದ ಕುಂಡಲಗಳಿಂದ ಭೂಷಿತನಾಗಿದ್ದನು (೭–೮). ಇಪ್ಪತ್ತು ಭುಜಗಳಿಂದ ವಿರಾಜಿಸುತ್ತಿದ್ದ ಆ ರಾವಣನು ಉತ್ತಮ ವಸ್ತ್ರಗಳನ್ನು ಧರಿಸಿದ್ದನು. ದೇವಶತ್ರುವೂ ಋಷಿಘಾತುಕನೂ ಆದ ಆ ದಶಕಂಠನು

ಕಾಮಗಂ ರಥಮಾಸ್ಥಾಯ ಶುಶುಭೇ ರಾಕ್ಷಸೇಶ್ವರಃ ।
ವಿದ್ಯುನ್ಮಂಡಲವಾನ್ ಮೇಘಃ ಸಬಲಾಕ ಇವಾಂಬರೇ ॥ ೧೦

ಸಶೈಲಂ ಸಾಗರಾನೂಪಂ ವೀರ್ಯವಾನಾವಲೋಕಯನ್ ।
ನಾನಾಪುಷ್ಪಫಲೈರ್ವೃಕ್ಷೈರನುಕೀರ್ಣಂ ಸಹಸ್ರಶಃ ॥ ೧೧

ಶೀತಮಂಗಲತೋಯಾಭಿಃ ಪದ್ಮಿನೀಭಿಃ ಸಮಂತತಃ ।
ವಿಶಾಲೈರಾಶ್ರಮಪದೈರ್ವೇದಿಮದ್ಭಿರಲಂಕೃತಮ್ ॥ ೧೨

ಕದಲ್ಯಟವಿಸಂಬಾಧಂ ನಾಲಿಕೇರೋಪಶೋಭಿತಮ್ ।
ಸಾಲೈಸ್ತಾಲೈಸ್ತಮಾಲೈಶ್ಚ ಪುಷ್ಪಿತೈಸ್ತರುಭಿರ್ವೃತಮ್ ॥ ೧೩

ಅತ್ಯಂತನಿಯತಾಹಾರೈಃ ಶೋಭಿತಂ ಪರಮರ್ಷಿಭಿಃ ।
ನಾಗೈಃ ಸುಪರ್ಣೈರ್ಗಂಧರ್ವೈಃ ಕಿಂನರೈಶ್ಚ ಸಹಸ್ರಶಃ ॥ ೧೪

ಅಜೈರ್ವೈಖಾನಸೈರ್ಮಾಷೈರ್ವಾಲಖಿಲ್ಯೈರ್ಮರೀಚಿಪೈಃ ।
ಜಿತಕಾಮೈಶ್ಚ ಸಿದ್ಧೈಶ್ಚ ಚಾರಣೈರುಪಶೋಭಿತಮ್ ॥ ೧೫

---

ಹತ್ತು ಶಿಖರಗಳಿರುವ ಪರ್ವತರಾಜನಂತೆ ಒಪ್ಪುತ್ತಿದ್ದನು. ಇಚ್ಛಿಸಿದ ಕಡೆಗೆ ಹೋಗಬಲ್ಲ ರಥವನ್ನೇರಿದ ಆ ರಾಕ್ಷಸೇಂದ್ರನು ಮಿಂಚಿನಿಂದೊಡಗೂಡಿ ಬಲಾಕಾ ಪಕ್ಷಿಸಹಿತವಾದ ಮೇಘದಂತೆ* ಗಗನಮಾರ್ಗದಲ್ಲಿ ಶೋಭಿಸುತ್ತಿದ್ದನು (೯–೧೦). ಆ ವೀರನು ಬೆಟ್ಟಗಳಿಂದಲೂ ಹೂ–ಹಣ್ಣುಗಳಿಂದ ತುಂಬಿದ ಸಾವಿರಾರು ಮರ ಗಳಿಂದಲೂ ಒಪ್ಪುವ ಸಮುದ್ರತೀರವನ್ನು ನೋಡುತ್ತ ಹೋದನು. ತೀರಗಳಲ್ಲಿ ಶುಭಶೀತಲಜಲಪೂರ್ಣಗಳಾದ ಸರೋವರಗಳೂ ಯಜ್ಞವೇದಿಕೆಗಳಿರುವ ವಿಶಾಲ ವಾದ ಆಶ್ರಮಗಳೂ ವಿರಾಜಿಸುತ್ತಿದ್ದವು (೧೧–೧೨). ಬಾಳೆಯ ತೋಟ, ತೆಂಗಿನಮರ, ಹೂವರಳಿದ ಸಾಲ ತಾಲ ತಮಾಲಗಳು ಸಮುದ್ರತೀರದಲ್ಲಿ ರಂಜಿಸು ತ್ತಿದ್ದವು. ಕಟ್ಟುನಿಟ್ಟಾದ ಆಹಾರನಿಯಮವನ್ನು ಪಾಲಿಸುತ್ತಿದ್ದ ಮಹರ್ಷಿಗಳು ಅಲ್ಲಿದ್ದರು. ನಾಗ, ಸುಪರ್ಣ, ಗಂಧರ್ವ, ಕಿನ್ನರರು ನೆರೆದಿದ್ದರು (೧೩–೧೪) ಸೂರ್ಯಚಂದ್ರರ ಕಿರಣಗಳನ್ನು ಮಾತ್ರವೇ ಭಕ್ಷಿಸುತ್ತ ಜಿತೇಂದ್ರಿಯರೂ ಬ್ರಹ್ಮ

---

*ಮೇಘದಂತೆ ರಾವಣ, ಮಿಂಚಿನಂತೆ ಅವನ ಆಭರಣ, ಬಲಾಕಾಪಕ್ಷಿಯಂತೆ ರಥ. ಬಲಾಕಾ = ಕೊಕ್ಕರೆ, ಬೆಳ್ಳಕ್ಕಿ, ಮಳೆಗಾಲದಲ್ಲಿ ಮೋಡದ ಕೆಳಗೆ ಈ ಪಕ್ಷಿ ಹಾರಾಡು ತ್ತಿರುವುದು.

ದಿವ್ಯಾಭರಣಮಾಲ್ಯಾಭಿರ್ದಿವ್ಯರೂಪಾಭಿರಾವೃತಮ್ ।
ಕ್ರೀಡಾರತಿವಿಧಿಜ್ಞಾಭಿರಪ್ಸರೋಭಿಃ ಸಹಸ್ರಶಃ ॥ ೧೬

ಸೇವಿತಂ ದೇವಪತ್ನೀಭಿಃ ಶ್ರೀಮತೀಭಿರುಪಾಸಿತಮ್ ।
ದೇವದಾನವಸಂಘೈಶ್ಚ ಚರಿತಂ ತ್ವಮೃತಾಶಿಭಿಃ ॥ ೧೭

ಹಂಸಕ್ರೌಂಚಪ್ಲವಾಕೀರ್ಣಂ ಸಾರಸೈಃ ಸಂಪ್ರಣಾದಿತಮ್ ।
ವೈದೂರ್ಯಪ್ರಸ್ತರಂ ರಮ್ಯಂ ಸ್ನಿಗ್ಧಂ ಸಾಗರತೇಜಸಾ ॥ ೧೮

ಪಾಂಡರಾಣಿ ವಿಶಾಲಾನಿ ದಿವ್ಯಮಾಲ್ಯಯುತಾನಿ ಚ ।
ತೂರ್ಯಗೀತಾಭಿಜುಷ್ಟಾನಿ ವಿಮಾನಾನಿ ಸಮಂತತಃ ॥ ೧೯

ತಪಸಾ ಜಿತಲೋಕಾನಾಂ ಕಾಮಗಾನ್ಯಭಿಸಂಪತನ್ ।
ಗಂಧರ್ವಾಪ್ಸರಸಶ್ಚೈವ ದದರ್ಶ ಧನದಾನುಜಃ ॥ ೨೦

---

ಪುತ್ರರೂ ಆದ ವೈಖಾನಸರಿಂದಲೂ ಧೂಮ್ರವರ್ಣದ ವಾಲಖಿಲ್ಯರಿಂದಲೂ ಸಿದ್ಧ ಚಾರಣರಿಂದಲೂ ಆ ಪ್ರದೇಶವು ರಮ್ಯವಾಗಿತ್ತು (೧೫). ಕ್ರೀಡಾವಿನೋದಗಳಲ್ಲಿ ನಿಪುಣೆಯರೂ ದಿವ್ಯಸುಂದರಿಯರೂ ಆದ ಅಪ್ಸರಸ್ತ್ರೀಯರೂ ದಿವ್ಯಾಭರಣಗಳನ್ನು ತೊಟ್ಟು ದಿವ್ಯಮಾಲ್ಯಗಳನ್ನು ಮುಡಿದು ವಿಹರಿಸುತ್ತಿದ್ದರು. ರೂಪಸಂಪನ್ನೆಯರಾದ ದೇವಸ್ತ್ರೀಯರು ಸಂಚರಿಸುತ್ತಿದ್ದರು. ಅಮೃತಪಾಯಿಗಳಾದ ದೇವತೆಗಳೂ ದಾನವರೂ ತಿರುಗಾಡುತ್ತಿದ್ದರು (೧೬–೧೭). ಆ ಸಮುದ್ರತೀರವು ಹಂಸ, ಕ್ರೌಂಚ, ಕಾರಂಡವಪಕ್ಷಿಗಳಿಂದ ರಮಣೀಯವಾಗಿತ್ತು. ಸಾರಸಗಳು ಇಂಪಾಗಿ ಕೂಗುತ್ತಿದ್ದವು. ವೈಡೂರ್ಯಮಯವಾದ ರಮ್ಯಶಿಲಾತಲವು ಸಮುದ್ರಚ್ಛಾಯೆಯ ಪ್ರತಿಫಲನದಿಂದ ಮನೋಹರವಾಗಿತ್ತು (೧೮). ಅಲ್ಲಿ ನೆರೆದಿದ್ದ ಶುಭ್ರವರ್ಣದ ವಿಶಾಲವಿಮಾನಗಳು ದಿವ್ಯಮಾಲ್ಯಗಳಿಂದ ಶೋಭಿಸುತ್ತಿದ್ದವು. ಅವುಗಳಲ್ಲಿ ಇಂಪಾದ ವಾದ್ಯಘೋಷವೂ ಸಂಗೀತವೂ ನಡೆಯುತ್ತಿತ್ತು. ಆ ವಿಮಾನಗಳು ತಪೋಮಹಿಮೆಯಿಂದ ಸ್ವರ್ಗಲೋಕವನ್ನು ಪಡೆದ ಪುಣ್ಯಾತ್ಮರವು. ರಾವಣನು ಪ್ರಯಾಣಮಾಡುತ್ತ ಕಾಮಗಾಮಿಗಳಾದ ಆ ವಿಮಾನಗಳನ್ನು ಗಂಧರ್ವರನ್ನೂ

ನಿರ್ಯಾಸರಸಮೂಲಾನಾಂ ಚಂದನಾನಾಂ ಸಹಸ್ರಶಃ ।
ವನಾನಿ ಪಶ್ಯನ್ ಸೌಮ್ಯಾನಿ ಘ್ರಾಣತೃಪ್ತಿಕರಾಣಿ ಚ ॥ ೨೧

ಅಗರೂಣಾಂ ಚ ಮುಖ್ಯಾನಾಂ ವನಾನ್ಯುಪವನಾನಿ ಚ ॥
ತಕ್ಕೋಲಾನಾಂ ಚ ಜಾತ್ಯಾನಾಂ ಫಲಾನಾಂ ಚ ಸುಗಂಧಿನಾಮ್ ॥

ಪುಷ್ಪಾಣಿ ಚ ತಮಾಲಸ್ಯ ಗುಲ್ಮಾನಿ ಮರಿಚಸ್ಯ ಚ ।
ಮುಕ್ತಾನಾಂ ಚ ಸಮೂಹಾನಿ ಶುಷ್ಯಮಾಣಾನಿ ತೀರತಃ ॥ ೨೩

ಶಂಖಾನಾಂ ಪ್ರಸ್ತರಂ ಚೈವ ಪ್ರವಾಲನಿಚಯಂ ತಥಾ ।
ಕಾಂಚನಾನಿ ಚ ಶೈಲಾನಿ ರಜತಾನಿ ಚ ಸರ್ವಶಃ ॥ ೨೪

ಪ್ರಸ್ರವಾಣಿ ಮನೋಜ್ಞಾನಿ ಪ್ರಸನ್ನಾನಿ ಹ್ರದಾನಿ ಚ ।
ಧನಧಾನ್ಯೋಪಪನ್ನಾನಿ ಸ್ತ್ರೀರತ್ನೈರಾವೃತಾನಿ ಚ ॥ ೨೫

ಹಸ್ತ್ಯಶ್ವರಥಗಾಢಾನಿ ನಗರಾಣ್ಯವಲೋಕಯನ್ ।
ತಂ ಸಮಂ ಸರ್ವತಃ ಸ್ನಿಗ್ಧಂ ಮೃದುಸಂಸ್ಪರ್ಶಮಾರುತಮ್ ॥ ೨೫

---

ಅಪ್ಸರೆಯರನ್ನೂ ನೋಡುತ್ತ ಹೋದನು (೧೯–೨೦). ಸುಗಂಧಿಯಾದ ರಸವನ್ನು ಸ್ರವಿಸುವ ಧೂಪದಮರ, ಶ್ರೀಗಂಧದಮರ, ಅಗರು, ತಕ್ಕೋಲ, ಜಾಜೀಕಾಯಿ ಮರ ಮೊದಲಾದ ಸುಗಂಧವೃಕ್ಷಗಳ ವನಗಳನ್ನೂ, ಹೊಂಗೆಯ ಹೂಗಳನ್ನೂ, ಮೆಣಸಿನಬಳ್ಳಿಯ ಪೊದೆಗಳನ್ನೂ, ತೀರದಲ್ಲಿ ಚೆಲ್ಲಿದ ಮುತ್ತಿನ ರಾಶಿಗಳನ್ನೂ ನೋಡುತ್ತ ರಾವಣನು ಹೋದನು (೨೧–೨೩). ಆ ಸಮುದ್ರತೀರದಲ್ಲಿ ಒಂದೆಡೆ ಶಂಖಗಳ ರಾಶಿ, ಇನ್ನೊಂದೆಡೆ ಹವಳಗಳ ರಾಶಿ, ಮತ್ತೊಂದೆಡೆ ಚಿನ್ನಬೆಳ್ಳಿಗಳ ಅದುರುಗಳಿರುವ ಬಂಡೆಗಳ ರಾಶಿ ಕಾಣುತ್ತಿದ್ದವು (೨೪). ಸುಂದರವಾದ ನೀರಿನ ಬುಗ್ಗೆಗಳೂ ತಿಳಿನೀರಿನ ಕೊಳಗಳೂ ಕಂಡವು. ದಾರಿಯಲ್ಲಿ ಧನಧಾನ್ಯಗಳಿಂದ ಸಮೃದ್ಧವಾಗಿಯೂ ಚೆಲುವೆಯರಾದ ಹೆಣ್ಣುಗಳಿಂದ ನಿಬಿಡವಾಗಿಯೂ ಆನೆ, ಕುದುರೆ, ರಥಗಳಿಂದ ಸಂಕುಲವಾಗಿಯೂ ಇರುವ ಅನೇಕ ಪಟ್ಟಣಗಳನ್ನು ರಾವಣನು ನೋಡುತ್ತ ಹೋದನು (೨೫). ಸಮುದ್ರರಾಜನ ತೀರವು ಸಮತಳ ವಾಗಿತ್ತು. ಮೃದುವಾಗಿ ಮಂದಮಾರುತವು ಬೀಸುತ್ತಿತ್ತು. ಸ್ವರ್ಗಲೋಕ

ಅನೂಪಂ ಸಿಂಧುರಾಜಸ್ಯ ದದರ್ಶ ತ್ರಿದಿವೋಪಮಮ್ ।
ತತ್ರಾಪಶ್ಯತ್ ಸ ಮೇಘಾಭಂ ನ್ಯಗ್ರೋಧಮೃಷಿಭಿರ್ವೃತಮ್ ॥ ೨೭

ಸಮಂತಾದ್ಯಸ್ಯ ತಾಃ ಶಾಖಾಃ ಶತಯೋಜನಮಾಯತಾಃ ।
ಯಸ್ಯ ಹಸ್ತಿನಮಾದಾಯ ಮಹಾಕಾಯಂ ಚ ಕಚ್ಛಪಮ್ ॥ ೨೮

ಭಕ್ಷಾರ್ಥಂ ಗರುಡಃ ಶಾಖಾಮಾಜಗಾಮ ಮಹಾಬಲಃ ।
ತಸ್ಯ ತಾಂ ಸಹಸಾ ಶಾಖಾಂ ಭಾರೇಣ ಪತಗೋತ್ತಮಃ ॥ ೨೯

ಸುಪರ್ಣಃ ಪರ್ಣಬಹುಲಾಂ ಬಭಂಜ ಚ ಮಹಾಬಲಃ ।
ತತ್ರ ವೈಖಾನಸಾ ಮಾಷಾ ವಾಲಖಿಲ್ಯಾ ಮರೀಚಿಪಾಃ ॥ ೩೦

ಅಜಾ ಬಭೂವುರ್ಧೂಮ್ರಾಶ್ಚ ಸಂಗತಾಃ ಪರಮರ್ಷಯಃ ।
ತೇಷಾಂ ದಯಾರ್ಥಂ ಗರುಡಸ್ತಾಂ ಶಾಖಾಂ ಶತಯೋಜನಾಮ್ ॥

ಭಗ್ನಾಮಾದಾಯ ವೇಗೇನ ತೌ ಚೋಭೌ ಗಜಕಚ್ಛಪೌ ।
ಏಕಪಾದೇನ ಧರ್ಮಾತ್ಮಾ ಭಕ್ಷಯಿತ್ವಾ ತದಾಮಿಷಮ್ ॥ ೩೨

---

ದಂತಿದ್ದ ಆ ಸುಂದರಪ್ರದೇಶವನ್ನು ನೋಡುತ್ತ ಹೋಗುವಾಗ ಮೋಡದಂತೆ ಹರಡಿದ್ದ ಒಂದು ಆಲದಮರವನ್ನು ಕಂಡನು. ಅನೇಕ ಋಷಿಗಳು ಆ ಮರವನ್ನು ಆಶ್ರಯಿಸಿದ್ದರು (೨೬–೨೭). ಆ ಮರದ ಕೊಂಬೆಗಳು ಸುತ್ತಲೂ ನೂರು ಯೋಜನಗಳಷ್ಟು ವಿಸ್ತಾರವಾಗಿ ವ್ಯಾಪಿಸಿದ್ದವು. ಒಂದು ಸಲ ಮಹಾಬಲಾಢ್ಯನಾದ ಗರುಡನು ಒಂದು ಆನೆಯನ್ನೂ ಮಹಾಶರೀರದ ಒಂದು ಆಮೆಯನ್ನೂ ತಂದು, ತಿನ್ನುವುದಕ್ಕೋಸ್ಕರ ಆದೇ ಆಲದಮರದ ಕೊಂಬೆಯಮೇಲೆ ಬಂದು ಕುಳಿತನು (೨೮–೨೯). ಬಲಶಾಲಿಯಾದ ಆ ಪಕ್ಷಿರಾಜನು ಕುಳಿತೊಡನೆ ಎಲೆಗಳಿಂದ ತುಂಬಿದ್ದ ಆ ಕೊಂಬೆಯು ತಟಕ್ಕನೆ ಮುರಿಯಿತು. ಆ ಕೊಂಬೆಗೆ ಜೋತುಬಿದ್ದು ಬ್ರಹ್ಮಪುತ್ರರಾದ ವೈಖಾನಸರೂ ಸೂರ್ಯಚಂದ್ರರ ಕಿರಣಗಳೇ ಆಹಾರವಾಗಿರುವ ಧೂಮ್ರವರ್ಣದ ಮಾಷ ಎಂಬ ಹೆಸರಿನ ವಾಲಖಿಲ್ಯ ಮಹರ್ಷಿಗಳೂ ತಪಸ್ಸುಮಾಡುತ್ತಿದ್ದರು (೩೦–೩೧). ಗರುಡನು ಅವರಿಗೆ ಹಿಂಸೆಯಾದೀತೆಂದು ದಯೆತೋರಿ ಶತಯೋಜನವಿಸ್ತೀರ್ಣವಾದ ಆ ಮುರಿದ ಕೊಂಬೆಯನ್ನೂ

ನಿಷಾದವಿಷಯಂ ಹತ್ವಾ ಶಾಖಯಾ ಪತಗೋತ್ತಮಃ ||
ಪ್ರಹರ್ಷಮತುಲಂ ಲೇಭೇ ಮೋಕ್ಷಯಿತ್ವಾ ಮಹಾಮುನೀನ್ ೩೩

ಸ ತೇನೈವ ಪ್ರಹರ್ಷೇಣ ದ್ವಿಗುಣೀಕೃತವಿಕ್ರಮಃ |
ಅಮೃತಾನಯನಾರ್ಥಂ ವೈ ಚಕಾರ ಮತಿಮಾನ್ ಮತಿಮ್ || ೩೪

ಅಯೋಜಾಲಾನಿ ನಿರ್ಮಥ್ಯ ಭಿತ್ತ್ವಾ ರತ್ನಮಯಂ ಗೃಹಮ್ |
ಮಹೇಂದ್ರಭವನಾದ್ಗುಪ್ತಮಾಜಹಾರಾಮೃತಂ ತತಃ || ೩೫

ತಂ ಮಹರ್ಷಿಗಣೈರ್ಜುಷ್ಟಂ ಸುಪರ್ಣಕೃತಲಕ್ಷಣಮ್ |
ನಾಮ್ನಾ ಸುಭದ್ರಂ ನ್ಯಗ್ರೋಧಂ ದದರ್ಶ ಧನದಾನುಜಃ ೩೬

ತಂ ತು ಗತ್ವಾ ಪರಂ ಪಾರಂ ಸಮುದ್ರಸ್ಯ ನದೀಪತೇಃ |
ದದರ್ಶಾಶ್ರಮಮೇಕಾಂತೇ ರಮ್ಯೇ ಪುಣ್ಯೇ ವನಾಂತರೇ || ೩೭

---

ಆ ಗಜಕಚ್ಛಪಗಳನ್ನೂ ವೇಗದಿಂದ ಒಂದು ಕಾಲಿನಲ್ಲಿ ಹಿಡಿದುಕೊಂಡು ಹಾರಿದನು. ಆತನು ಗಜಕಚ್ಛಪಗಳನ್ನು ಆಹಾರವಾಗಿ ಭಕ್ಷಿಸಿದನು. ಆ ಪಕ್ಷಿರಾಜನು ಆಲದಮರದ ಕೊಂಬೆಯಿಂದ ಆ ಮಹರ್ಷಿಗಳನ್ನು ಬಿಡಿಸಿ ಬೇರೆ ಸ್ಥಳಕ್ಕೆ ಕಳಿಸಿದನು. ಆನಂತರ ನಿಷಾದರಿದ್ದ ಒಂದು ದೇಶಕ್ಕೆ ಹೋಗಿ ಆ ಕೊಂಬೆಯನ್ನು ಬೀಳಿಸಿ ಆ ನಿಷಾದರನ್ನು ಕೊಂದು ಬಹಳ ಸಂತುಷ್ಟನಾದನು (೩೨–೩೩). ಆದರಿಂದ ಗರುಡನಿಗೆ ಅತ್ಯಾನಂದವಾಗಿ ಪರಾಕ್ರಮವು ಇಮ್ಮಡಿಸಿತು. ಆ ಬುದ್ಧಿಶಾಲಿಯು ಅಮೃತವನ್ನು ತರಬೇಕೆಂದು ನಿಶ್ಚಯಿಸಿದನು. ಅಲ್ಲಿಂದ (ದೇವಲೋಕಕ್ಕೆ ಹೋಗಿ ಕಬ್ಬಿಣದ ಸರಪಳಿಯ ಜಾಲಗಳನ್ನು ಧ್ವಂಸಪಡಿಸಿ, ರತ್ನಮಯವಾದ ಗೃಹವನ್ನು ಒಡೆದು, ಒಳಗೆ ರಕ್ಷಿಸಿಟ್ಟಿದ್ದ ಅಮೃತವನ್ನು ಇಂದ್ರಭವನದಿಂದ ತಂದನು (೩೪-೩೫) ಆಲದಮರದಲ್ಲಿ ಗರುಡನು ಕೊಂಬೆಯನ್ನು ಮುರಿದ ಚಿಹ್ನೆ ಇನ್ನೂ ಕಾಣುತ್ತಿದ್ದಿತು. ಮಹರ್ಷಿಗಳು ಆ ವೃಕ್ಷದ ಆಶ್ರಯದಲ್ಲಿ ತಪಸ್ಸುಮಾಡುತ್ತಿದ್ದರು. ಸುಭದ್ರ ಎಂಬ ಹೆಸರಿನ ಆ ನ್ಯಗ್ರೋಧವೃಕ್ಷವನ್ನು ರಾವಣನು ನೋಡುತ್ತ ಹೋದನು (೩೬). ರಾವಣನು ಸಮುದ್ರದ ಆಚೆಯ ದಡವನ್ನು ಸೇರಿ ಜನಸಂಮರ್ದವಿಲ್ಲದ ಒಂದಾನೊಂದು ಪುಣ್ಯಾರಣ್ಯದ ಮಧ್ಯದಲ್ಲಿದ್ದ ಒಂದು ಆಶ್ರಮ

ತತ್ರ ಕೃಷ್ಣಾಜಿನಧರಂ ಜಟಾವಲ್ಕಲಧಾರಿಣಮ್ ।
ದದರ್ಶ ನಿಯತಾಹಾರಂ ಮಾರೀಚಂ ನಾಮ ರಾಕ್ಷಸಮ್ ॥ ೩೮

ರಾವಣಸ್ತಂ ಸಮಾಗಮ್ಯ ವಿಧಿವತ್ತೇನ ರಕ್ಷಸಾ ।
ಮಾರೀಚೇನಾರ್ಚಿತೋ ರಾಜಾ ಸರ್ವಕಾಮೈರಮಾನುಷೈಃ ॥ ೩೯

ತಂ ಸ್ವಯಂ ಪೂಜಯಿತ್ವಾ ತು ಭೋಜನೇನೋದಕೇನ ಚ ।
ಅರ್ಥೋಪಹಿತಯಾ ವಾಚಾ ಮಾರೀಚೋ ವಾಕ್ಯಮಬ್ರವೀತ್ ॥ ೪೦

ಕಚ್ಚಿತ್ ಸುಕುಶಲಂ ರಾಜನ್ ಲಂಕಾಯಾಂ ರಾಕ್ಷಸೇಶ್ವರ ।
ಕೇನಾರ್ಥೇನ ಪುನಸ್ತ್ವಂ ವೈ ತೂರ್ಣಮೇವಮಿಹಾಗತಃ ॥ ೪೧

ಏವಮುಕ್ತೋ ಮಹಾತೇಜಾ ಮಾರೀಚೇನ ಸ ರಾವಣಃ ।
ತಂ ತು ಪಶ್ಚಾದಿದಂ ವಾಕ್ಯಮಬ್ರವೀದ್ವಾಕ್ಯಕೋವಿದಃ ॥ ೪೨

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚತ್ರಿಂಶಃ ಸರ್ಗಃ

ವನ್ನು ಕಂಡನು. ಅದರಲ್ಲಿ ಕೃಷ್ಣಾಜಿನಧಾರಿಯಾಗಿ ಜಟೆಯನ್ನು ಬಿಟ್ಟು ವಲ್ಕಲವನ್ನುಟ್ಟು ಆಹಾರನಿಯಮದಿಂದಿದ್ದ ಮಾರೀಚನೆಂಬ ರಾಕ್ಷಸನನ್ನು ನೋಡಿದನು (೩೭–೩೮). ಅನಂತರ ರಾವಣನು ಆತನಿದ್ದಲ್ಲಿಗೆ ಹೋದನು. ಆಗ ಮಹಾರಾಜನು ಬಂದನೆಂದಣಿಸಿ ಮಾರೀಚನು ಮನುಷ್ಯದುರ್ಲಭವಾದ ಸರ್ವಸತ್ಕಾರಗಳಿಂದ ಯಥೇಷ್ಟವಾಗಿ ರಾವಣನನ್ನು ಆದರಿಸಿದನು (೩೯). ಆತನು ಉದಕಭೋಜನಾದಿಗಳಿಂದ ರಾವಣನನ್ನು ಸತ್ಕರಿಸಿ ಅರ್ಥಗರ್ಭಿತವಾದ ಮಾತಿನಿಂದ "ರಾಕ್ಷಸೇಶ್ವರ, ಲಂಕೆಯಲ್ಲಿ ಎಲ್ಲರಿಗೂ ಕುಶಲವಷ್ಟೆ? ಪುನಃ ನೀನು ಇಷ್ಟು ಬೇಗನೆ ಇಲ್ಲಿಗೆ ಬಂದ ಉದ್ದೇಶವೇನು?" ಎಂದು ಕೇಳಿದನು (೪೦-೪೧). ಆಗ ತೇಜಸ್ವಿಯೂ ವಾಕ್ಯಕೋವಿದನೂ ಆದ ರಾವಣನು ಮುಂದೆ ಹೇಳುವಂತೆ ಮಾತನಾಡಿದನು (೪೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೈದನೆಯ ಸರ್ಗ

## ಷಟ್ತ್ರಿಂಶಃ ಸರ್ಗಃ

### ಸಹಾಯೈಷಣಾ

ಮಾರೀಚ ಶ್ರೂಯತಾಂ ತಾತ ವಚನಂ ಮಮ ಭಾಷತಃ ।
ಆರ್ತೋಽಸ್ಮಿ ಮಮ ಚಾರ್ತಸ್ಯ ಭವಾನ್ ಹಿ ಪರಮಾ ಗತಿಃ ॥ ೧

ಜಾನೀಷೇ ತ್ವಂ ಜನಸ್ಥಾನಂ ಭ್ರಾತಾ ಯತ್ರ ಖರೋ ಮಮ ।
ದೂಷಣಶ್ಚ ಮಹಾಬಾಹುಃ ಸ್ವಸಾ ಶೂರ್ಪಣಖಾ ಚ ಮೇ ॥ ೨

ತ್ರಿಶಿರಾಶ್ಚ ಮಹಾತೇಜಾ ರಾಕ್ಷಸಃ ಪಿಶಿತಾಶನಃ ।
ಅನ್ಯೇ ಚ ಬಹವಃ ಶೂರಾ ಲಬ್ಧಲಕ್ಷಾ ನಿಶಾಚರಾಃ ॥ ೩

ವಸಂತಿ ಮನ್ನಿಯೋಗೇನ ನಿತ್ಯವಾಸಂ ಚ ರಾಕ್ಷಸಾಃ ।
ಬಾಧಮಾನಾ ಮಹಾರಣ್ಯೇ ಮುನೀನ್ ವೈ ಧರ್ಮಚಾರಿಣಃ ॥ ೪

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಶೂರಾಣಾಂ ಲಬ್ಧಲಕ್ಷಣಾಂ ಖರಚಿತ್ತಾನುವರ್ತಿನಾಮ್ ॥ ೫

### ಸರ್ಗ ೩೬

ರಾವಣನು ಮಾರೀಚನಿಗೆ ಜನಸ್ಥಾನವೃತ್ತಾಂತವನ್ನು ತಿಳಿಸಿ, ಸೀತೆಯನ್ನು ಅಪಹರಿಸುವುದಕ್ಕೆ ಅವನ ಸಹಾಯವನ್ನು ಬಯಸುವುದು

ರಾವಣನು ಈ ಪ್ರಕಾರ ಹೇಳಿದನು : "ಅಯ್ಯಾ ಮಾರೀಚ, ನಾನು ಹೇಳುವುದನ್ನಾಲಿಸು. ಈಗ ನಾನು ಬಹಳ ಪೇಚಿನಲ್ಲಿ ಸಿಕ್ಕಿದ್ದೇನೆ. ಈ ಸಮಯದಲ್ಲಿ ನನಗೆ ನೀನೇ ಗತಿ. ನಿನಗೆ ಜನಸ್ಥಾನದ ವಿಷಯ ಗೊತ್ತಿದೆ. ಅಲ್ಲಿ ನನ್ನ ತಮ್ಮಂದಿರಾದ ಖರದೂಷಣರೂ ತಂಗಿಯಾದ ಶೂರ್ಪಣಖಿಯೂ ನೆಲೆಸಿದ್ದನ್ನು ನೀನು ಬಲ್ಲೆ (೧–೨). ಮಾಂಸಾಹಾರಿಯೂ ಮಹಾತೇಜಸ್ವಿಯೂ ಆದ ದೂಷಣನೂ ಯುದ್ಧಾವಕಾಶವನ್ನು ಪಡೆದ ಇನ್ನೂ ಬಹುಮಂದಿ ರಾಕ್ಷಸರೂ ಅಲ್ಲಿ ನೆಲಸಿದ್ದರು. ಆ ಮಹಾರಣ್ಯದಲ್ಲಿ ಧರ್ಮಚಾರಿಗಳಾದ ಮುನಿಗಳನ್ನು ನನ್ನ ಆಜ್ಞೆಯಂತೆ ಪೀಡಿಸುತ್ತ ಅಲ್ಲಿಯೇ ಅವರು ವಾಸವಾಗಿದ್ದರೆಂಬುದನ್ನು ನೀನು ಬಲ್ಲೆಯಷ್ಟೆ (೩–೪). ಭೀಕರಕಾರ್ಯಗಳನ್ನೆಸಗುತ್ತಿದ್ದ ಆ ಹದಿನಾಲ್ಕುಸಾವಿರ

ತೇ ತ್ವಿಧಾನೀಂ ಜನಸ್ಥಾನೇ ವಸಮಾನಾ ಮಹಾಬಲಾಃ ।
ಸಂಗತಾಃ ಪರಮಾಯತ್ತಾ ರಾಮೇಣ ಸಹ ಸಂಯುಗೇ ॥ ೬

ನಾನಾಪ್ರಹರಣೋಪೇತಾಃ ಖರಪ್ರಮುಖರಾಕ್ಷಸಾಃ ।
ತೇನ ಸಂಜಾತರೋಷೇಣ ರಾಮೇಣ ರಣಮೂರ್ಧನಿ ॥ ೭

ಅನುಕ್ತ್ವಾ ಪರುಷಂ ಕಿಂಚಿಚ್ಛರೈರ್ವ್ಯಾಪಾರಿತಂ ಧನುಃ ।
ಚತುರ್ದಶ ಸಹಸ್ರಾಣಿ ರಕ್ಷಸಾಮುಗ್ರತೇಜಸಾಮ್ ॥ ೮

ನಿಹತಾನಿ ಶರೈಸ್ತೀಕ್ಷ್ಣೈ ರ್ಮಾನುಷೇಣ ಪದಾತಿನಾ ।
ಖರಶ್ಚ ನಿಹತಃ ಸಂಖ್ಯೇ ದೂಷಣಶ್ಚ ನಿಪಾತಿತಃ ॥ ೯

ಹತಶ್ಚ ತ್ರಿಶಿರಾಶ್ಚಾಪಿ ನಿರ್ಭಯಾ ದಂಡಕಾಃ ಕೃತಾಃ ।
ಪಿತ್ರಾ ನಿರಸ್ತಃ ಕ್ರುದ್ಧೇನ ಸಭಾರ್ಯಃ ಕ್ಷೀಣಜೀವಿತಃ ॥ ೧೦

ಸ ಹಂತಾ ತಸ್ಯ ಸೈನ್ಯಸ್ಯ ರಾಮಃ ಕ್ಷತ್ರಿಯಪಾಂಸನಃ ।
ದುಃಶೀಲಃ ಕರ್ಕಶಸ್ತೀಕ್ಷ್ಣೋ ಮೂರ್ಖೋ ಲುಬ್ಧೋಽಜಿತೇಂದ್ರಿಯಃ

---

ಮಂದಿ ಶೂರರಾದ ರಾಕ್ಷಸರು ಖರನ ಇಷ್ಟದಂತೆ ನಡೆಯುತ್ತ ಕೆಚ್ಚಿನಿಂದ ಹೋರಾಡತಕ್ಕವರಾಗಿದ್ದರು. ಜನಸ್ಥಾನದಲ್ಲಿದ್ದ ಅವರೆಲ್ಲರೂ ಬಲಾಢ್ಯರು. ಅವರು ಸರ್ವಸನ್ನಾಹದಿಂದ ಹೋಗಿ ರಾಮನೆಂಬವನೊಡನೆ ಯುದ್ಧವನ್ನಾರಂಭಿಸಬೇಕಾಯಿತು (೫–೬). ಖರನೇ ಮೊದಲಾದ ಸಕಲರಾಕ್ಷಸರೂ ವಿವಿಧಾಯುಧಗಳಿಂದ ಸಜ್ಜಾಗಿ ಹೋದರು. (ರಾಕ್ಷಸರಲ್ಲಿ ತಪ್ಪಿದ್ದರೆ) ರಾಮನು ಕಠೋರವಾಕ್ಯಗಳಿಂದ ಅವರನ್ನು ದೂಷಿಸಬಹುದಾಗಿತ್ತು. ಅವನು ಹಾಗೆ ಮಾಡದೆ ಇದ್ದಕ್ಕಿದ್ದಂತೆ ಕುಪಿತನಾಗಿ ಧನುಸ್ಸಿಗೆ ಬಾಣಗಳನ್ನು ಜೋಡಿಸಿಯೇಬಿಟ್ಟನು. ಕೇವಲ ಪದಾತಿಯಾಗಿ ನಿಂತಿದ್ದ ಆ ಮನುಷ್ಯನು ಉಗ್ರವೀರ್ಯರಾದ ಹದಿನಾಲ್ಕುಸಾವಿರ ರಾಕ್ಷಸರನ್ನು ತೀಕ್ಷ್ಣಾಸ್ತ್ರಗಳಿಂದ ಸಂಹರಿಸಿದ್ದಾನೆ. ಯುದ್ಧದಲ್ಲಿ ಖರನು ಹತನಾದನು. ದೂಷಣನು ಸತ್ತುಬಿದ್ದನು (೭–೯). ತ್ರಿಶಿರನೂ ಮೃತನಾದನು. ದಂಡಕಾರಣ್ಯದಲ್ಲಿ ಭಯವೇ ಇಲ್ಲದಂತೆ ಮಾಡಿಬಿಟ್ಟನಲ್ಲ! ತಂದೆಗೆ ಕೋಪಬಂದು ಹೆಂಡತಿ ಸಹಿತ ಕಾಡಿಗೆ ಓಡಿಸಲ್ಪಟ್ಟವನು ರಾಮ! ಅವನ ಆಯುಸ್ಸು ಮುಗಿಯುತ್ತ ಬಂದಿದೆ! (೧೦). ಆ ಕ್ಷತ್ರಿಯಾಧಮನು ಅಂಥ ರಾಕ್ಷಸಸೈನ್ಯವನ್ನು ಕೊಂದ

ತ್ಯಕ್ತಧರ್ಮೋ ಹ್ಯಧರ್ಮಾತ್ಮಾ ಭೂತಾನಾಮಹಿತೇ ರತಃ ।
ಯೇನ ವೈರಂ ವಿನಾರಣ್ಯೇ ಸತ್ತ್ವಮಾಶ್ರಿತ್ಯ ಕೇವಲಮ್ ॥ ೧೨

ಕರ್ಣನಾಸಾಪಹರಣಾದ್ಭಗಿನೀ ಮೇ ವಿರೂಪಿತಾ ।
ತಸ್ಯ ಭಾರ್ಯಾಂ ಜನಸ್ಥಾನಾತ್ ಸೀತಾಂ ಸುರಸುತೋಪಮಾಮ್ ॥

ಆನಯಿಷ್ಯಾಮಿ ವಿಕ್ರಮ್ಯ ಸಹಾಯಸ್ತತ್ರ ಮೇ ಭವ ।
ತ್ವಯಾ ಹ್ಯಹಂ ಸಹಾಯೇನ ಪಾರ್ಶ್ವಸ್ಥೇನ ಮಹಾಬಲ ॥ ೧೪

ಭ್ರಾತೃಭಿಶ್ಚ ಸುರಾನ್ ಯುದ್ಧೇ ಸಮಗ್ರಾನ್ನಾಭಿಚಿಂತಯೇ ।
ತತ್ ಸಹಾಯೋ ಭವ ತ್ವಂ ಮೇ ಸಮರ್ಥೋ ಹ್ಯಸಿ ರಾಕ್ಷಸ ॥ ೧೫

ವೀರ್ಯೇ ಯುದ್ಧೇ ಚ ದರ್ಪೇ ಚ ನ ಹ್ಯಸ್ತಿ ಸದೃಶಸ್ತವ ।
ಉಪಾಯಜ್ಞೋ ಮಹಾನ್ ಶೂರೋ ಮಹಾಮಾಯಾವಿಶಾರದಃ ॥

ಏತದರ್ಥಮಹಂ ಪ್ರಾಪ್ತಸ್ತ್ವತ್ಸಮೀಪಂ ನಿಶಾಚರ ।
ಶೃಣು ತತ್ಕರ್ಮ ಸಾಹಾಯ್ಯೇ ಯತ್ಕಾರ್ಯಂ ವಚನಾನ್ಮಮ ॥ ೧೭

---

ನಲ್ಲ ! ಅವನು ದುಷ್ಟ ; ಮರುಕವೆಂಬುದೇ ಇಲ್ಲದ ಕಠೋರಸ್ವಭಾವದವನು ! ಮೂರ್ಖ ; ಇಂದ್ರಿಯಲೋಲುಪನಾದ ಲೋಭಿ ! (೧೧). ಧರ್ಮವನ್ನು ಬಿಟ್ಟವನು ; ಅಧರ್ಮಿ : ಪ್ರಾಣಿಗಳಿಗೆ ಕೆಡುಕುಮಾಡುವುದೇ ಅವನ ನಿತ್ಯೋದ್ಯೋಗವಾಗಿದೆ. ನನ್ನ ತಂಗಿಯ ಕಿವಿಮೂಗುಗಳನ್ನು ಕೊಯ್ದು ವಿರೂಪಗೊಳಿಸಿದ್ದಾನೆ. ಅಂಥ ವೈರಕ್ಕೆ ನಿಮಿತ್ತವಾದರೂ ಏನಿತ್ತು ? ಕೇವಲ ತನಗೆ ಬಲವಿದೆಯೆಂದು ಕೊಬ್ಬಿನಿಂದ ಈ ದುಷ್ಕೃತ್ಯವನ್ನು ಎಸಗಿದ್ದಾನೆ. ಆತನಿಗೆ ದೇವಕನ್ಯೆಯಂತೆ ಸುಂದರಿಯಾದ ಸೀತೆಯೆಂಬ ಹೆಂಡತಿ ಇದ್ದಾಳೆ (೧೨–೧೩). ಸಾಹಸಪಟ್ಟು ಅವಳನ್ನು ಜನಸ್ಥಾನದಿಂದ ತಂದುಬಿಡಬೇಕೆಂದಿದ್ದೇನೆ. ಅದಕ್ಕೆ ನೀನು ಸಹಾಯಕನಾಗು. ಎಲೈ ಪರಾಕ್ರಮಿ, ನೀನು ನನ್ನ ತಮ್ಮಂದಿರೂ ನನಗೆ ಸಹಾಯಕರಾಗಿ ಬಳಿಯಲ್ಲಿದ್ದರೆ, ದೇವತೆಗಳೆಲ್ಲರೂ ಒಂದಾಗಿ ಬಂದರೂ ನಾನು ಲಕ್ಷಿಸುವುದಿಲ್ಲ. ಮಾರೀಚ, ಆದ್ದರಿಂದ ನೀನು ನನಗೆ ನೆರವಾಗು. ನೀನು ಕಾರ್ಯದಕ್ಷ (೧೪–೧೫). ಶೌರ್ಯದಲ್ಲಿ, ಯುದ್ಧದಲ್ಲಿ, ದರ್ಪದಲ್ಲಿ—ನಿನಗೆ ಸಮಾನರಿಲ್ಲ. ಸಮಸ್ತ ಉಪಾಯಗಳನ್ನೂ ಬಲ್ಲವನು ನೀನು. ಮಹಾಶೂರನೂ

ಸೌವರ್ಣಸ್ತ್ವಂ ಮೃಗೋ ಭೂತ್ವಾ ಚಿತ್ರೋ ರಜತಬಿಂದುಭಿಃ ।
ಆಶ್ರಮೇ ತಸ್ಯ ರಾಮಸ್ಯ ಸೀತಾಯಾಃ ಪ್ರಮುಖೇ ಚರ ॥ ೧೮

ತ್ವಾಂ ತು ನಿಃಸಂಶಯಂ ಸೀತಾ ದೃಷ್ಟ್ವಾ ತು ಮೃಗರೂಪಿಣಮ್ ।
ಗೃಹ್ಯತಾಮಿತಿ ಭರ್ತಾರಂ ಲಕ್ಷ್ಮಣಂ ಚಾಭಿಧಾಸ್ಯತಿ ॥ ೧೯

ತತಸ್ತಯೋರಪಾಯೇ ತು ಶೂನ್ಯೇ ಸೀತಾಂ ಯಥಾಸುಖಮ್ ।
ನಿರಾಬಾಧೋ ಹರಿಷ್ಯಾಮಿ ರಾಹುಶ್ಚಂದ್ರಪ್ರಭಾಮಿವ ॥ ೨೦

ತತಃ ಪಶ್ಚಾತ್ ಸುಖಂ ರಾಮೇ ಭಾರ್ಯಾಹರಣಕರ್ಶಿತೇ ।
ವಿಸ್ರಬ್ಧಃ ಪ್ರಹರಿಷ್ಯಾಮಿ ಕೃತಾರ್ಥೇನಾಂತರಾತ್ಮನಾ ॥ ೨೧

ತಸ್ಯ ರಾಮಕಥಾಂ ಶ್ರುತ್ವಾ ಮಾರೀಚಸ್ಯ ಮಹಾತ್ಮನಃ ।
ಶುಷ್ಕಂ ಸಮಭವದ್ವಕ್ತ್ರಂ ಪರಿತ್ರಸ್ತೋ ಬಭೂವ ಹ ॥ ೨೨

---

ಮಾಯಾವಿಶಾರದೂ ಆಗಿದ್ದೀಯೆ. ಆದ್ದರಿಂದ, ಮಾರೀಚ, ನಿನ್ನ ಸಮೀಪಕ್ಕೆ ನಾನು ಬರಬೇಕಾಯಿತು. ಈಗ ನೀನು ಮಾಡಬೇಕಾದ ಸಹಾಯವನ್ನು ಹೇಳುವೆನು, ಕೇಳು (೧೬–೧೭). ಸುವರ್ಣಮಯವಾದ ಒಂದು ಮೃಗದ ರೂಪವನ್ನು ಧರಿಸು. ಮೈಮೇಲೆ ಬೆಳ್ಳಿಯ ಚುಕ್ಕೆಗಳಿರಲಿ. ಹೀಗೆ ವಿಚಿತ್ರವಾದ ಮೃಗದ ವೇಷದಿಂದ ರಾಮನ ಆಶ್ರಮದಲ್ಲಿ ಸೀತೆಯ ಎದುರಿಗೆ ಸಂಚರಿಸುತ್ತಿರು (೧೮). ನೀನು ಮೃಗವೇಷವನ್ನು ಧರಿಸಿದೆಯೆಂದರೆ, ಮಾರೀಚ, ನಿಸ್ಸಂಶಯವಾಗಿ ಸೀತೆಗೆ ಆಸೆಯಾಗಿ ಆ ಮೃಗವನ್ನು ಹಿಡಿದುಕೊಡೆಂದು ತನ್ನ ಗಂಡನಿಗೂ ಲಕ್ಷ್ಮಣನಿಗೂ ಅವಳು ಹೇಳುವಳು. ಅವರಿಬ್ಬರೂ ಅದಕ್ಕೋಸ್ಕರ ಹೊರಟು ಹೋಗಲು, ಅವರಿಲ್ಲದೆ ಶೂನ್ಯವಾದ ಆಶ್ರಮಕ್ಕೆ ನಾನು ಹೋಗುವೆನು. ಯಾವ ಪೀಡೆಯೂ ಇಲ್ಲದೆ, ರಾಹುವು ಚಂದ್ರಪ್ರಭೆಯನ್ನು ಆಕ್ರಮಿಸುವಂತೆ ಹೋಗಿ, ಸುಖವಾಗಿ ಸೀತೆಯನ್ನು ಅಪಹರಿಸಿ ತರುವೆನು (೧೯–೨೦). ಅನಂತರ ರಾಮನು ಹೆಂಡತಿಯ ಅಪಹಾರದಿಂದ ನೊಂದು ಕಂದಿ ಕುಂದಿ ಕೃಶನಾಗುವನು. ಸರಿಯಾಗಿ ಸೇಡು ತೀರಿಸಿಕೊಂಡೆನೆಂದು ಆಗ ನನ್ನ ಮನಸ್ಸಿಗೆ ನೆಮ್ಮದಿಯಾಗುವುದು. ಆಮೇಲೆ ನಿಶ್ಚಿಂತೆಯಿಂದ ಅವನನ್ನು ಸಂಹರಿಸುವೆನು" ಎಂದು ರಾವಣನು ಹೇಳಿದನು (೨೧). ಶ್ರೀರಾಮನ ಸುದ್ದಿಯನ್ನು ಕೇಳಿದೊಡನೆ ಮಾರೀಚನ ಬಾಯಿ

ಓಷ್ಠೌ ಪರಿಲಿಹನ್ ಶುಷ್ಕೌ ನೇತ್ರೈರನಿಮಿಷೈರಿವ ।
ಮೃತಭೂತ ಇವಾರ್ತಸ್ತು ರಾವಣಂ ಸಮುದೈಕ್ಷತ ॥ ೨೩

ಸ ರಾವಣಂ ತ್ರಸ್ತವಿಷಣ್ಣಚೇತಾ
ಮಹಾವನೇ ರಾಮಪರಾಕ್ರಮಜ್ಞಃ ।
ಕೃತಾಂಜಲಿಸ್ತತ್ತ್ವಮುವಾಚ ವಾಕ್ಯಂ
ಹಿತಂ ಚ ತಸ್ಮೈ ಹಿತಮಾತ್ಮನಶ್ಚ ॥ ೨೪

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಟ್‌ತ್ರಿಂಶಃ ಸರ್ಗಃ

ಒಣಗಿತು. ಅವನು ಭಯಗ್ರಸ್ತನಾದನು. ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡನು. ಸತ್ತವನಂತೆ ಎವೆಯಿಕ್ಕದೆ ದೀನನಾಗಿ ಬಿಡುಗಣ್ಣಿನಿಂದ ರಾವಣನನ್ನು ನೋಡತೊಡಗಿದನು! (೨೨–೨೩). ಶ್ರೀರಾಮನ ಪರಾಕ್ರಮ ವೆಂತಹದೆಂಬುದು ಮಾರೀಚನಿಗೆ ಹಿಂದೆಯೇ ಅರಣ್ಯದಲ್ಲಿ ಪರಿಚಿತವಾಗಿತ್ತು. ಅದನ್ನು ನೆನೆಸಿಕೊಂಡು ಅವನು ಹೆದರಿದನು. ಮನಸ್ಸು ವಿಷಣ್ಣವಾಯಿತು. ಅವನು ಕೈಮುಗಿದುಕೊಂಡು ರಾವಣನಿಗೂ ತನಗೂ ಹಿತಕರವಾದ ಯಥಾರ್ಥ ವಾದ ಕೆಲವು ಮಾತನ್ನಾಡಿದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತಾರನೆಯ ಸರ್ಗ

## ಸಪ್ತತ್ರಿಂಶಃ ಸರ್ಗಃ

### ಅಪ್ರಿಯಪಥ್ಯವಚನಮ್

ತಚ್ಛ್ರುತ್ವಾ ರಾಕ್ಷಸೇಂದ್ರಸ್ಯ ವಾಕ್ಯಂ ವಾಕ್ಯವಿಶಾರದಃ ।
ಪ್ರತ್ಯುವಾಚ ಮಹಾಪ್ರಾಜ್ಞೋ ಮಾರೀಚೋ ರಾಕ್ಷಸೇಶ್ವರಮ್ ॥ ೧

ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥ ೨

ನ ನೂನಂ ಬುಧ್ಯಸೇ ರಾಮಂ ಮಹಾವೀರ್ಯಂ ಗುಣೋನ್ನತಮ್ ।
ಅಯುಕ್ತಚಾರಶ್ಚಪಲೋ ಮಹೇಂದ್ರವರುಣೋಪಮಮ್ ॥ ೩

ಅಪಿ ಸ್ವಸ್ತಿ ಭವೇತ್ತಾತ ಸರ್ವೇಷಾಂ ಭುವಿ ರಕ್ಷಸಾಮ್ ।
ಅಪಿ ರಾಮೋ ನ ಸಂಕ್ರುದ್ಧಃ ಕುರ್ಯಾಲ್ಲೋಕಮರಾಕ್ಷಸಮ್ ॥ ೪

ಅಪಿ ತೇ ಜೀವಿತಾಂತಾಯ ನೋತ್ಪನ್ನಾ ಜನಕಾತ್ಮಜಾ ।
ಅಪಿ ಸೀತಾನಿಮಿತ್ತಂ ಚ ನ ಭವೇದ್ವ್ಯಸನಂ ಮಹತ್ ॥ ೫

### ಸರ್ಗ ೩೭

#### ರಾವಣನಿಗೆ ಮಾರೀಚನ ಹಿತೋಪದೇಶ

ಸಂಭಾಷಣಚತುರನೂ ಪ್ರಾಜ್ಞನೂ ಆದ ಮಾರೀಚನು ರಾಕ್ಷಸೇಶ್ವರನಾದ ರಾವಣನನ್ನು ಕುರಿತು ಹೀಗೆಂದನು : "ರಾಕ್ಷಸೇಂದ್ರ, ಪ್ರಿಯವಾದ ಮಾತನ್ನು ಆಡತಕ್ಕವರು ಯಾವಾಗಲೂ ಸುಲಭವಾಗಿ ದೊರೆಯುತ್ತಾರೆ ಆದರೆ ಅಪ್ರಿಯವಾದರೂ ಹಿತಕರವಾದ ಮಾತನ್ನು ಆಡತಕ್ಕವರು ದುರ್ಲಭ. ಆ ಮಾತನ್ನು ಕೇಳತಕ್ಕವರೂ ದುರ್ಲಭ (೧–೨). ರಾಮನು ಎಂಥ ಮಹಾವೀರನೆಂಬುದೂ ಎಷ್ಟು ಉದಾತ್ತಗುಣಶಾಲಿಯೆಂಬುದೂ ನಿನಗೆ ನಿಶ್ಚಯವಾಗಿ ಗೊತ್ತಿಲ್ಲ. ನೀನು ಗುಪ್ತಚಾರರನ್ನು ನೇಮಿಸಿ ಇದನ್ನು ತಿಳಿದುಕೊಂಡಿಲ್ಲ. ನೀನು ಚಪಲಬುದ್ಧಿಯವನು. ರಾಮನು ಸಾಕ್ಷಾತ್ ಮಹೇಂದ್ರನಿಗೂ ವರುಣನಿಗೂ ಸಮಾನನಾದವನು ಎಂಬುದನ್ನು ನೀನು ಅರಿಯೆ (೩). ಅಪ್ಪಾ–ರಾವಣ, ನೀನು ಹೇಳುವಂತೆ ಮಾಡಿದರೆ, ಈ ಭೂಲೋಕದಲ್ಲಿರುವ ರಾಕ್ಷಸರಿಗೆ ಕ್ಷೇಮವಾದೀತೆ ? ರಾಮನು

ಅಪಿ ತ್ವಾಮೀಶ್ವರಂ ಪ್ರಾಪ್ಯ ಕಾಮವೃತ್ತಂ ನಿರಂಕುಶಮ್ ।
ನ ವಿನಶ್ಯೇತ್ ಪುರೀ ಲಂಕಾ ತ್ವಯಾ ಸಹ ಸರಾಕ್ಷಸಾ ॥ ೬

ತ್ವದ್ವಿಧಃ ಕಾಮವೃತ್ತೋ ಹಿ ದುಃಶೀಲಃ ಪಾಪಮಂತ್ರಿತಃ ।
ಆತ್ಮಾನಂ ಸ್ವಜನಂ ರಾಷ್ಟ್ರಂ ಸ ರಾಜಾ ಹಂತಿ ದುರ್ಮತಿಃ ॥ ೭

ನ ಚ ಪಿತ್ರಾ ಪರಿತ್ಯಕ್ತೋ ನಾಮರ್ಯಾದಃ ಕಥಂಚನ ।
ನ ಲುಬ್ಧೋ ನ ಚ ದುಃಶೀಲೋ ನ ಚ ಕ್ಷತ್ರಿಯಪಾಂಸನಃ ॥ ೮

ನ ಚ ಧರ್ಮಗುಣೈರ್ಹೀನಃ ಕೌಸಲ್ಯಾನಂದವರ್ಧನಃ ।
ನ ತೀಕ್ಷ್ಣೋ ನ ಚ ಭೂತಾನಾಂ ಸರ್ವೇಷಾಮಹಿತೇ ರತಃ ॥ ೯

ವಂಚಿತಂ ಪಿತರಂ ದೃಷ್ಟ್ವಾ ಕೈಕೇಯ್ಯಾ ಸತ್ಯವಾದಿನಮ್ ।
ಕರಿಷ್ಯಾಮೀತಿ ಧರ್ಮಾತ್ಮಾ ತಾತ ಪ್ರವ್ರಜಿತೋ ವನಮ್ ॥ ೧೦

---

ಕ್ರುದ್ಧನಾದರೆ ಈ ಲೋಕದಲ್ಲಿರುವ ರಾಕ್ಷಸಕುಲವನ್ನೇ ಅಳಿಸದಿರುವನೆ ? ಜನಕಪುತ್ರಿಯು ನಿನ್ನ ಜೀವಕ್ಕೆ ಸಂಚಕಾರವನ್ನು ತರುವುದಕ್ಕಾಗಿ ಜನಿಸಿರಬಹುದೆ? ಸೀತಾನಿಮಿತ್ತವಾಗಿ ನಮಗೆ ದೊಡ್ಡ ಸಂಕಷ್ಟವು ಕಾದಿರಬಹುದಲ್ಲವೆ ? (೪–೫). ನಿನ್ನಂಥ ಕಾಮಲಂಪಟನಾದ ನಿರಂಕುಶಪ್ರಭುವನ್ನು ಪಡೆದ ಲಂಕಾಪುರಿಗೆ ಅಳಿಗಾಲಬಂದಿರಬಹುದೆ ? ನೀನು ಮತ್ತು ನಿನ್ನ ರಾಕ್ಷಸರೊಡನೆ ಲಂಕೆಯು ನಾಶಹೊಂದದೆ ಇದ್ದೀತೆ ? ಮನಸ್ಸಿಗೆ ಬಂದಂತೆ ನಡೆಯುತ್ತ ದುಶ್ಶೀಲನೂ ದುರಾಲೋಚನೆಯುಳ್ಳವನೂ ಆದ ನಿನ್ನಂಥ ದುರ್ಬುದ್ಧಿಯ ರಾಜನು ತಾನು ಹಾಳಾಗುವುದಲ್ಲದೆ ತನ್ನವರನ್ನೂ ತನ್ನ ರಾಷ್ಟ್ರವನ್ನೂ ಹಾಳುಮಾಡುತ್ತಾನೆ (೬–೭). ರಾವಣ, ರಾಮನು ತಂದೆಯಿಂದ ಪರಿತ್ಯಕ್ತನಲ್ಲ, ಮರ್ಯಾದಾರಹಿತನಲ್ಲ, ಲೋಭಿಯೂ ಅಲ್ಲ, ದುಶ್ಶೀಲನೂ ಅಲ್ಲ. ಅವನು ಕ್ಷತ್ರಿಯಾಧಮನೂ ಅಲ್ಲ (೮). ಕೌಸಲ್ಯೆಯ ನಲ್ಮೆಯ ಪುತ್ರನಾದ ರಾಮನು ಧರ್ಮಹೀನನೂ ಅಲ್ಲ, ಗುಣಹೀನನೂ ಅಲ್ಲ. ಅವನು ಉಗ್ರಸ್ವಭಾವದವನೂ ಅಲ್ಲ, ಪ್ರಾಣಿಗಳಿಗೆ ಕೇಡನ್ನು ಚಿಂತಿಸತಕ್ಕವನೂ ಅಲ್ಲ. ಅಪ್ಪಾ–ರಾವಣ, ಅವನ ತಂದೆಯಾದ ದಶರಥನು ಕಾರಣಾಂತರದಿಂದ ಕೈಕೇಯಿಯ ವಂಚನೆಗೆ ಒಳಗಾದನು. ಆಗ ತಂದೆಯನ್ನು

ಕೈಕೇಯ್ಯಾಃ ಪ್ರಿಯಕಾಮಾರ್ಥಂ ಪಿತುರ್ದಶರಥಸ್ಯ ಚ ।
ಹಿತ್ವಾ ರಾಜ್ಯಂ ಚ ಭೋಗಾಂಶ್ಚ ಪ್ರವಿಷ್ಟೋ ದಂಡಕಾವನಮ್ ॥ ೧೧

ನ ರಾಮಃ ಕರ್ಕಶಸ್ತಾತ ನಾವಿದ್ವಾನ್ನಾಜಿತೇಂದ್ರಿಯಃ ।
ಅನೃತಂ ದುಃಶ್ರುತಂ ಚೈವ ನೈವ ತ್ವಂ ವಕ್ತುಮರ್ಹಸಿ ॥ ೧೨

ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ ।
ರಾಜಾ ಸರ್ವಸ್ಯ ಲೋಕಸ್ಯ ದೇವಾನಾಂ ಮಘವಾನಿವ ॥ ೧೩

ಕಥಂ ತ್ವಂ ತಸ್ಯ ವೈದೇಹೀಂ ರಕ್ಷಿತಾಂ ಸ್ವೇನ ತೇಜಸಾ ।
ಇಚ್ಛಸಿ ಪ್ರಸಭಂ ಹರ್ತುಂ ಪ್ರಭಾಮಿವ ವಿವಸ್ವತಃ ॥ ೧೪

ಶರಾರ್ಚಿಷಮನಾಧೃಷ್ಯಂ ಚಾಪಖಡ್ಗೇಂಧನಂ ರಣೇ ।
ರಾಮಾಗ್ನಿಂ ಸಹಸಾ ದೀಪ್ತಂ ನ ಪ್ರವೇಷ್ಟುಂ ತ್ವಮರ್ಹಸಿ ॥ ೧೫

---

ಸತ್ಯವಾದಿಯೆಂದು ಸ್ಥಾಪಿಸುವುದಾಗಿ ಪ್ರತಿಜ್ಞೆಮಾಡಿ, ಆ ಧರ್ಮಾತ್ಮನು ಕಾಡಿಗೆ ಹೊರಟುಬಂದಿದ್ದಾನೆ (೯–೧೦). ಕೈಕೇಯಿಗೆ ಸಂತೋಷವಾಗಲೆಂದೂ ತಂದೆಯಾದ ದಶರಥನಿಗೆ ಹಿತವಾಗಲೆಂದೂ ರಾಜ್ಯವನ್ನೂ ರಾಜಭೋಗಗಳನ್ನೂ ಪರಿತ್ಯಜಿಸಿ ದಂಡಕಾರಣ್ಯವನ್ನು ಪ್ರವೇಶಿಸಿದ್ದಾನೆ. ರಾಮನು ಕರ್ಕಶಸ್ವಭಾವದವನಲ್ಲ. ಅವನು ಮೂರ್ಖನೂ ಅಲ್ಲ, ಇಂದ್ರಿಯಲೋಲುಪನೂ ಅಲ್ಲ. ನೀನು ಆತನ ವಿಷಯವನ್ನು ತಪ್ಪಾಗಿ ಕೇಳಿದ್ದೀಯೆ. ಅದೆಲ್ಲವೂ ಸುಳ್ಳು. ನೀನು ಹೀಗೆ ಸರ್ವಥಾ ಹೇಳಬಾರದು (೧೧–೧೨). ರಾಮನೆಂದರೆ ಶರೀರಧಾರಿಯಾದ ಸಾಕ್ಷಾತ್ ಧರ್ಮಪುರುಷ; ಸತ್ಯಸಂಧನಾದ ಸತ್ಪುರುಷ. ದೇವತೆಗಳಿಗೆ ಇಂದ್ರನಿರುವಂತೆ, ರಾಮನು ಸಕಲರಿಗೂ ರಂಜಕನಾದ ಪ್ರಭುವಾಗಬಲ್ಲನು (೧೩). ಅವನ ಪತ್ನಿಯಾದ ವೈದೇಹಿ ತನ್ನ ಪಾತಿವ್ರತ್ಯದ ತೇಜಸ್ಸಿನಿಂದಲೇ ಸುರಕ್ಷಿತೆಯಾಗಿದ್ದಾಳೆ. ಅವಳನ್ನು ಬಲಾತ್ಕಾರದಿಂದ ಅಪಹರಿಸಲು ಬಯಸುವೆಯಾ? ಸೂರ್ಯನಿಂದ ಅವನ ಪ್ರಭೆಯನ್ನು ಅಗಲಿಸಿ ತರುವೆಯಾ? (೧೪). ರಾಮನೆಂದರೆ ದುರ್ಧರ್ಷವಾದ ಒಂದು ಅಗ್ನಿ. ಅವನ ಅಸ್ತ್ರಗಳೇ ಜ್ವಾಲೆ. ಚಾಪಖಡ್ಗಗಳೇ ಇಂಧನ. ಪ್ರಜ್ವಲಿಸುವ ಆ ಅಗ್ನಿಯಲ್ಲಿ, ರಾವಣ, ಥಟ್ಟನೆ ಹೋಗಿ ಬೀಳಬೇಡ! (೧೫)

ಧನುರ್ವ್ಯಾದಿತದೀಪ್ತಾಸ್ಯಂ ಶರಾರ್ಚಿಷಮಮರ್ಷಣಮ್ ।
ಚಾಪಪಾಶಧರಂ ವೀರಂ ಶತ್ರುಸೈನ್ಯಪ್ರಹಾರಿಣಮ್ ॥ ೧೬

ರಾಜ್ಯಂ ಸುಖಂ ಚ ಸಂತ್ಯಜ್ಯ ಜೀವಿತಂ ಚೇಷ್ಟಮಾತ್ಮನಃ ।
ನಾತ್ಯಾಸಾದಯಿತುಂ ತಾತ ರಾಮಾಂತಕಮಿಹಾರ್ಹಸಿ ॥ ೧೭

ಅಪ್ರಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ ।
ನ ತ್ವಂ ಸಮರ್ಥಸ್ತಾಂ ಹರ್ತುಂ ರಾಮಚಾಪಾಶ್ರಯಾಂ ವನೇ ॥ ೧೮

ತಸ್ಯ ಸಾ ನರಸಿಂಹಸ್ಯ ಸಿಂಹೋರಸ್ಕಸ್ಯ ಭಾಮಿನೀ ।
ಪ್ರಾಣೇಭ್ಯೋಽಪಿ ಪ್ರಿಯತರಾ ಭಾರ್ಯಾ ನಿತ್ಯಮನುವ್ರತಾ ॥ ೧೯

ನ ಸಾ ಧರ್ಷಯಿತುಂ ಶಕ್ಯಾ ಮೈಥಿಲ್ಯೋಜಸ್ವಿನಃ ಪ್ರಿಯಾ ।
ದೀಪ್ತಸ್ಯೇವ ಹುತಾಶಸ್ಯ ಶಿಖಾ ಸೀತಾ ಸುಮಧ್ಯಮಾ ॥ ೨೦

ಕಿಮುದ್ಯಮಮಿಮಂ ವ್ಯರ್ಥಂ ಕೃತ್ವಾ ತೇ ರಾಕ್ಷಸಾಧಿಪ ।
ದೃಷ್ಟಶ್ಚೇತ್ತ್ವಂ ರಣೇ ತೇನ ತದಂತಂ ತವ ಜೀವಿತಮ್ ॥ ೨೧

---

ಶತ್ರುಸೈನ್ಯವನ್ನು ಮರ್ದಿಸತಕ್ಕ ವೀರನಾದ ರಾಮನು ಸಾಕ್ಷಾತ್ ಯಮನೆಂದು ತಿಳಿ. ಧನುಸ್ಸೇ ಅವನ ದೀಪ್ತವಾದ ತೆರೆದ ಬಾಯಿ. ಅಸ್ತ್ರವೆಂಬ ಜ್ವಾಲೆಯನ್ನು ಕಕ್ಕುತ್ತ ರಾಮನು ಕ್ರುದ್ಧನಾಗಿ ನಿಂತರೆ, ಅವನ ಚಾಪವು ಮೃತ್ಯುಪಾಶದಂತೆ ಕಂಗೊಳಿಸುವುದು. ನೀನು ರಾಜ್ಯವನ್ನೂ ಸುಖವನ್ನೂ ಪ್ರಿಯವಾದ ಪ್ರಾಣವನ್ನೂ ಪರಿತ್ಯಜಿಸಿ ಆ ಯಮನನ್ನು ಎದುರುಹಾಕಿಕೊಳ್ಳ ಬೇಡ ! (೧೬–೧೭). ಜನಕಾತ್ಮಜೆಯು ಯಾರ ಪತ್ನಿಯೋ ಆತನ ತೇಜಸ್ಸು ಊಹಾತೀತವಾದದ್ದು. ವನದಲ್ಲಿ ರಾಮನ ಕೋದಂಡಬಲದ ರಕ್ಷಣೆಯಲ್ಲಿರುವ ಆಕೆಯನ್ನು ಕದ್ದು ತರಲು ನಿನ್ನಿಂದಾಗದು. ಸೀತೆಯು ಸಿಂಹದಂತಹ ವಕ್ಷಃಸ್ಥಲವಿರುವ ಪುರುಷಸಿಂಹನ ಭಾರ್ಯೆ. ರಾಮನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಆಕೆಯನ್ನು ಪ್ರೀತಿಸುತ್ತಾನೆ. ಆಕೆಯೂ ಆತನನ್ನೇ ನಂಬಿರುವ ಪತಿವ್ರತೆ (೧೮–೧೯). ಆ ತೇಜಸ್ವಿಯ ಕಾಂತೆಯಾದ ಮೈಥಿಲಿಯನ್ನು ನೀನು ಬಲಾತ್ಕರಿಸುವುದು ಅಶಕ್ಯವಾದ ಮಾತು. ಸೀತೆಯು ಪ್ರದೀಪ್ತವಾದ ಅಗ್ನಿಯ ಜ್ವಾಲೆಯಿದ್ದಂತೆ. ರಾಕ್ಷಸೇಶ್ವರ, ವ್ಯರ್ಥವಾಗಿ ಇಂಥ ಉದ್ಯೋಗಕ್ಕೆ ಕೈಹಾಕಿದರೆ ನಿನಗಾಗುವ ಲಾಭವೇನು ? ಯುದ್ಧಪ್ರಸಂಗ ಒದಗಿ ನೀನು ಅವನ ಕಣ್ಣಿಗೆ ಬಿದ್ದರೆ, ಅಲ್ಲಿಗೆ

ಜೀವಿತಂ ಚ ಸುಖಂ ಚೈವ ರಾಜ್ಯಂ ಚೈವ ಸುದುರ್ಲಭಮ್ ।
ಯದೀಚ್ಛಸಿ ಚಿರಂ ಭೋಕ್ತುಂ ಮಾ ಕೃಥಾ ರಾಮವಿಪ್ರಿಯಮ್ ॥ ೨೨
ಸ ಸರ್ವೈಃ ಸಚಿವೈಃ ಸಾರ್ಧಂ ವಿಭೀಷಣಪುರೋಗಮೈಃ ।
ಮಂತ್ರಯಿತ್ವಾ ತು ಧರ್ಮಿಷ್ಠೈಃ ಕೃತ್ವಾ ನಿಶ್ಚಯಮಾತ್ಮನಃ ॥ ೨೩
ದೋಷಾಣಾಂ ಚ ಗುಣಾನಾಂ ಚ ಸಂಪ್ರಧಾರ್ಯ ಬಲಾಬಲಮ್ ।
ಆತ್ಮನಶ್ಚ ಬಲಂ ಜ್ಞಾತ್ವಾ ರಾಘವಸ್ಯ ಚ ತತ್ತ್ವತಃ ॥ ೨೪
ಹಿತಾಹಿತಂ ವಿನಿಶ್ಚಿತ್ಯ ಕ್ಷಮಂ ತ್ವಂ ಕರ್ತುಮರ್ಹಸಿ ॥

ಅಹಂ ತು ಮನ್ಯೇ ತವ ನ ಕ್ಷಮಂ ರಣೇ
ಸಮಾಗಮಂ ಕೋಸಲರಾಜಸೂನುನಾ ।
ಇದಂ ಹಿ ಭೂಯಃ ಶೃಣು ವಾಕ್ಯಮುತ್ತಮಂ
ಕ್ಷಮಂ ಚ ಯುಕ್ತಂ ಚ ನಿಶಾಚರೇಶ್ವರ ॥ ೨೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತತ್ರಿಂಶಃ ಸರ್ಗಃ

---

ನಿನ್ನ ಆಯುಸ್ಸು ಮುಗಿಯಿತು (೨೦–೨೧). ನಿನಗೆ ಪ್ರಾಣ ಉಳಿಯಬೇಕೆಂದಿದ್ದರೆ, ಇತರ ದುರ್ಲಭವಾದ ಈ ಸುಖವನ್ನೂ ಈ ರಾಜ್ಯವನ್ನೂ ಚಿರಕಾಲ ಅನುಭವಿಸಬೇಕೆಂಬ ಇಚ್ಛೆ ಇದ್ದರೆ, ರಾವಣ, ರಾಮನಿಗೆ ಅಪ್ರಿಯವಾದ ಕೆಲಸವನ್ನು ಮಾಡಬೇಡ (೨೨). ಈಗ ವಿಭೀಷಣನೇ ಮೊದಲಾದ ಧರ್ಮಿಷ್ಠರಾದ ಸಚಿವರನ್ನು ಕರೆಯಿಸಿ ಮಂತ್ರಾಲೋಚನೆಮಾಡಿ ಒಂದು ನಿಶ್ಚಯಕ್ಕೆ ಬಾ. ಈ ಉದ್ದೇಶದ ಗುಣದೋಷಗಳನ್ನೂ ಬಲಾಬಲಗಳನ್ನೂ ವಿಮರ್ಶಿಸಿನೋಡು. ನಿನ್ನ ಸಾಮರ್ಥ್ಯವೆಷ್ಟು, ರಾಮನ ಸಾಮರ್ಥ್ಯವೆಷ್ಟು ಎಂಬುದನ್ನು ಸರಿಯಾಗಿ ಪರ್ಯಾಲೋಚಿಸಿ, ಯಾವುದು ಹಿತ, ಯಾವುದು ಅಹಿತ ಎಂಬುದನ್ನು ನಿರ್ಣಯಿಸು. ಅನಂತರ ನಿನಗೆ ಯುಕ್ತವೆಂದು ತೋರಿದ್ದನ್ನು ಮಾಡು (೨೩–೨೪). ರಣರಂಗದಲ್ಲಿ ಆ ಕೋಸಲರಾಜಪುತ್ರನೊಡನೆ ಹೋರಾಡಲು ನಿನಗೆ ಸಾಧ್ಯವಿಲ್ಲವೆಂದು ನಾನಂತೂ ತಿಳಿದಿದ್ದೇನೆ. ಹೇ ರಾಕ್ಷಸೇಂದ್ರ, ನಿನಗೆ ಯುಕ್ತವೂ ಹಿತಕರವೂ ಆದ ಒಂದು ಉತ್ತಮ ನಿದರ್ಶನವನ್ನು ಹೇಳುತ್ತೇನೆ, ಕೇಳು" ಎಂದು ಮಾರೀಚನು ನುಡಿದನು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೇಳನೆಯ ಸರ್ಗ

## ಅಷ್ಟಾತ್ರಿಂಶಃ ಸರ್ಗಃ

### ರಾಮಾಸ್ತ್ರಮಹಿಮಾ

ಕದಾಚಿದಪ್ಯಹಂ ವೀರ್ಯಾತ್ ಪರ್ಯಟನ್ ಪೃಥಿವೀಮಿಮಾಮ್ ।
ಬಲಂ ನಾಗಸಹಸ್ರಸ್ಯ ಧಾರಯನ್ ಪರ್ವತೋಪಮಃ ॥ ೧

ನೀಲಜೀಮೂತಸಂಕಾಶಸ್ತಪ್ತಕಾಂಚನಕುಂಡಲಃ ।
ಭಯಂ ಲೋಕಸ್ಯ ಜನಯನ್ ಕಿರೀಟೀ ಪರಿಘಾಯುಧಃ ॥ ೨

ವ್ಯಚರಂ ದಂಡಕಾರಣ್ಯೇ ಋಷಿಮಾಂಸಾನಿ ಭಕ್ಷಯನ್ ।
ವಿಶ್ವಾಮಿತ್ರೋಽಥ ಧರ್ಮಾತ್ಮಾ ಮದ್ವಿತ್ರಸ್ತೋ ಮಹಾಮುನಿಃ ॥ ೩

ಸ್ವಯಂ ಗತ್ವಾ ದಶರಥಂ ನರೇಂದ್ರಮಿದಮಬ್ರವೀತ್ ।
ಅಸೌ ರಕ್ಷತು ಮಾಂ ರಾಮಃ ಪರ್ವಕಾಲೇ ಸಮಾಹಿತಃ ॥ ೪

ಮಾರೀಚಾನ್ಮೇ ಭಯಂ ಘೋರಂ ಸಮುತ್ಪನ್ನಂ ನರೇಶ್ವರ ।
ಇತ್ಯೇವಮುಕ್ತೋ ಧರ್ಮಾತ್ಮಾ ರಾಜಾ ದಶರಥಸ್ತದಾ ॥ ೫

### ಸರ್ಗ ೩೮

ಮಾರೀಚನು ತನ್ನ ಅನುಭವವನ್ನು ಹೇಳಿ ರಾಮಾಸ್ತ್ರಮಹಿಮೆಯನ್ನು ವರ್ಣಿಸುವುದು

ಮಾರೀಚನು ಹೀಗೆಂದನು : "ರಾವಣ, ಹಿಂದೆ ನಾನು ವೀರ್ಯದ ಕೆಚ್ಚಿನಿಂದ ಈ ಪೃಥಿವಿಯಲ್ಲಿ ಸುತ್ತುತ್ತಿದ್ದೆನು. ನನಗೆ ಸಾವಿರ ಆನೆಗಳ ಬಲವಿತ್ತು. ನನ್ನ ದೇಹವು ಪರ್ವತಾಕಾರವಾಗಿತ್ತು. ಕಾಲಮೇಘದಂತೆ ಗಗನಮಾರ್ಗದಲ್ಲಿ ಸಂಚರಿಸುತ್ತ, ಸುವರ್ಣಕುಂಡಲಗಳನ್ನೂ ಕಿರೀಟವನ್ನೂ ಧರಿಸಿ, ಪರಿಘವನ್ನು ಹಿಡಿದು ಜನರಿಗೆ ಭಯವನ್ನುಂಟುಮಾಡುತ್ತಿದ್ದೆನು (೧–೨). ಋಷಿಗಳ ಮಾಂಸವನ್ನು ತಿನ್ನುತ್ತ ದಂಡಕಾರಣ್ಯದಲ್ಲಿ ಅಲೆಯುತ್ತಿದ್ದೆನು. ಅಲ್ಲಿ ಧರ್ಮಾತ್ಮನಾದ ವಿಶ್ವಾಮಿತ್ರಮಹರ್ಷಿಯು ನನಗೆ ಅಂಜಿ ದಶರಥಭೂಪಾಲನ ಬಳಿಗೆ ತಾನೇ ಹೋಗಿ "ರಾಜ, ಮಾರೀಚನಿಂದ ನನಗೆ ಬಹಳ ಅಂಜಿಕೆಯಾಗಿದೆ. ನಿನ್ನ ಮಗನಾದ ರಾಮನು ಬಂದು ಸಾವಧಾನದಿಂದಿದ್ದು ಪರ್ವಕಾಲದಲ್ಲಿ ನನ್ನ ಯಜ್ಞವನ್ನು ರಕ್ಷಿಸಲಿ" ಎಂದು ಕೇಳಿಕೊಂಡನು (೩–೫). ಆಗ ದಶರಾಥರಾಜನು "ಮುನಿಗಳೆ,

ಪ್ರತ್ಯುವಾಚ ಮಹಾಭಾಗಂ ವಿಶ್ವಾಮಿತ್ರಂ ಮಹಾಮುನಿಮ್ ।
ಬಾಲೋ ದ್ವಾದಶವರ್ಷೋಽಯಮಕೃತಾಸ್ತ್ರಶ್ಚ ರಾಘವಃ ॥ ೬

ಕಾಮಂ ತು ಮಮ ಯತ್ಸೈನ್ಯಂ ಮಯಾ ಸಹ ಗಮಿಷ್ಯತಿ ।
ಬಲೇನ ಚತುರಂಗೇಣ ಸ್ವಯಮೇತ್ಯ ನಿಶಾಚರಾನ್॥ ೭

ವಧಿಷ್ಯಾಮಿ ಮುನಿಶ್ರೇಷ್ಠ ಶತ್ರೂಂಸ್ತವ ಯಥೇಪ್ಸಿತಮ್ ।
ಇತ್ಯೇವಮುಕ್ತಃ ಸ ಮುನೀ ರಾಜಾನಂ ಪುನರಬ್ರವೀತ್ ॥ ೮

ರಾಮಾನ್ನಾನ್ಯದ್ಬಲಂ ಲೋಕೇ ಪರ್ಯಾಪ್ತಂ ತಸ್ಯ ರಕ್ಷಸಃ ।
ದೇವತಾನಾಮಪಿ ಭವಾನ್ ಸಮರೇಷ್ವಭಿಪಾಲಕಃ ॥ ೯

ಆಸೀತ್ತವ ಕೃತಂ ಕರ್ಮ ತ್ರಿಲೋಕೇ ವಿದಿತಂ ನೃಪ ।
ಕಾಮಮಸ್ತು ಮಹತ್ ಸೈನ್ಯಂ ತಿಷ್ಠತ್ವಿಹ ಪರಂತಪ ॥ ೧೦

ಬಾಲೋಽಪ್ಯೇಷ ಮಹಾತೇಜಾಃ ಸಮರ್ಥಸ್ತಸ್ಯ ನಿಗ್ರಹೇ ।
ಗಮಿಷ್ಯೇ ರಾಮಮಾದಾಯ ಸ್ವಸ್ತಿ ತೇಽಸ್ತು ಪರಂತಪ ॥ ೧೧

---

ನನ್ನ ರಾಮನು ಇನ್ನೂ ಹನ್ನೆರಡು ವರ್ಷದ* ಹುಡುಗ. ಅಸ್ತ್ರವಿದ್ಯೆಯಲ್ಲಿ ಚೆನ್ನಾಗಿ ಪರಿಚಯವಿಲ್ಲ. ಆದರೇನು ? ನನ್ನ ಸೈನ್ಯವು ನನ್ನೊಡನೆ ಬರುವುದು. ನಾನೇ ಚತುರಂಗಬಲ ಸಮೇತನಾಗಿ ಬಂದು ನಿಮ್ಮ ಇಷ್ಟದಂತೆ ಶತ್ರುಗಳನ್ನು ಸಂಹರಿಸುವೆನು" ಎಂದನು (೬-೭). ಆಗ ಆ ಮುನಿಯು "ರಾಜೇಂದ್ರ, ರಾಮನನ್ನು ಬಿಟ್ಟು ಇನ್ನು ಯಾರ ಬಲವೂ ಆ ರಾಕ್ಷಸನನ್ನು ಅಡಗಿಸುವುದಕ್ಕೆ ಸಾಲದು. ನೀನು ಯುದ್ಧಮಾಡಿ ದೇವತೆಗಳನ್ನೂ ಸಹ ರಕ್ಷಿಸಿದ ಪರಾಕ್ರಮಿ ಹೌದು. ನೀನು ಆ ಬಗೆಯ ಸಾಹಸಕಾರ್ಯವನ್ನು ಮಾಡಿದ್ದು ಮೂರುಲೋಕಗಳಲ್ಲಿಯೂ ಪ್ರಖ್ಯಾತವಾಗಿದೆ. ಎಷ್ಟು ದೊಡ್ಡಸೇನೆಯೇ ಆಗಿದ್ದರೂ ಅದು ಇಲ್ಲಿಯೇ ಇರಲಿ! (೮-೧೦) ರಾಮನು ಹುಡುಗನಾದರೂ ಮಹಾತೇಜಸ್ವಿ ; ಅವನು ಮಾರೀಚನನ್ನು ನಿಗ್ರಹಿಸುವುದಕ್ಕೆ ಸಮರ್ಥ. ನಾನು ರಾಮನನ್ನು ಕರೆದುಕೊಂಡು ಹೋಗುವೆನು. ರಾಜ, ನಿನಗೆ ಶುಭವಾಗಲಿ!" ಎಂದು ನುಡಿದನು.

---

* ಬಾಲಕಾಂಡದ ಕನೆಯ ಅನುಬಂಧವನ್ನು (ಪು. ೪೩೧) ನೋಡಿ.

ಏವಮುಕ್ತ್ವಾ ತು ಸ ಮುನಿಸ್ತಮಾದಾಯ ನೃಪಾತ್ಮಜಮ್ ।
ಜಗಾಮ ಪರಮಪ್ರೀತೋ ವಿಶ್ವಾಮಿತ್ರಃ ಸ್ವಮಾಶ್ರಮಮ್ ॥ ೧೨

ತಂ ತದಾ ದಂಡಕಾರಣ್ಯೇ ಯಜ್ಞಮುದ್ದಿಶ್ಯ ದೀಕ್ಷಿತಮ್ ।
ಬಭೂವೋಪಸ್ಥಿತೋ ರಾಮಶ್ಚಿತ್ರಂ ವಿಸ್ಫಾರಯನ್ ಧನುಃ ॥ ೧೩

ಅಜಾತವ್ಯಂಜನಃ ಶ್ರೀಮಾನ್ ಪದ್ಮಪತ್ರನಿಭೇಕ್ಷಣಃ ।
ಕಾಕಪಕ್ಷಧರೋ ಧನ್ವೀ ಶಿಖೀ ಕನಕಮಾಲಯಾ ॥ ೧೪

ಶೋಭಯನ್ ದಂಡಕಾರಣ್ಯಂ ದೀಪ್ತೇನ ಸ್ವೇನ ತೇಜಸಾ ।
ಅದೃಶ್ಯತ ತತೋ ರಾಮೋ ಬಾಲಚಂದ್ರ ಇವೋದಿತಃ ॥ ೧೫

ತತೋಽಹಂ ಮೇಘಸಂಕಾಶಸ್ತಪ್ತಕಾಂಚನಕುಂಡಲಃ ।
ಬಲೀ ದತ್ತವರೋ ದರ್ಪಾದಾಜಗಾಮ ತದಾಶ್ರಮಮ್ ॥ ೧೬

ತೇನ ದೃಷ್ಟಃ ಪ್ರವಿಷ್ಟೋಽಹಂ ಸಹಸೈವೋದ್ಯತಾಯುಧಃ ।
ಮಾಂ ತು ದೃಷ್ಟ್ವಾ ಧನುಃ ಸಜ್ಯಮಸಂಭ್ರಾಂತಶ್ಚಕಾರ ಸಃ ॥ ೧೭

---

ಆಮೇಲೆ ವಿಶ್ವಾಮಿತ್ರನು ಆ ರಾಜಪುತ್ರನನ್ನು ಕರೆದುಕೊಂಡು ಸಂತೋಷದಿಂದ ತನ್ನ ಆಶ್ರಮಕ್ಕೆ ಬಂದನು (೧೧–೧೨). ಅನಂತರ ವಿಶ್ವಾಮಿತ್ರನು ದಂಡಕಾರಣ್ಯದಲ್ಲಿ ಯಜ್ಞದೀಕ್ಷಿತನಾಗಲು, ರಾಮನು ತನ್ನ ಧನುಸ್ಸನ್ನು ವಿವಿಧ ರೀತಿಯಲ್ಲಿ ಜೇಗೈಯುತ್ತ ವಿಶ್ವಾಮಿತ್ರನಿಗೆ ಬೆಂಗಾವಲಾಗಿ ನಿಂತನು (೧೩). ರಾವಣ, ಆಗ ರಾಮನ ಮುಖದಲ್ಲಿ ಇನ್ನೂ ಯೌವನದ ಗುರುತುಗಳೇ ಹುಟ್ಟಿರಲಿಲ್ಲ. ಒಂದು ಬಗೆಯ ತೇಜೋವಿಶೇಷವು ಅವನಲ್ಲಿತ್ತು. ಕಣ್ಣುಗಳು ಪದ್ಮದಳದಂತಿದ್ದವು. ಮುಂಗುರುಳು ಹರಡಿತ್ತು. ಅವನು ಧನುರ್ಧಾರಿಯಾಗಿ ಶಿಖೆಯನ್ನು ಕಟ್ಟಿ ಕೊರಳಿಗೆ ಚಿನ್ನದ ಸರವನ್ನು ಹಾಕಿಕೊಂಡಿದ್ದನು (೧೪). ಆತನ ಹೊಳೆಯುವ ತೇಜಸ್ಸಿನಿಂದ ದಂಡಕಾರಣ್ಯಕ್ಕೆ ಒಂದು ಶೋಭೆಯುಂಟಾಗಿತ್ತು. ರಾವಣ, ರಾಮನು ಆಗ ಉದಿಸಿದ ಬಾಲಚಂದ್ರನಂತೆ ನನಗೆ ಕಾಣಿಸಿದನು. ನಾನಾದರೋ ಬಲಶಾಲಿ ; ವರವನ್ನು ಗಳಿಸಿದವನು. ಸುವರ್ಣಕುಂಡಲಧಾರಿಯಾದ ನಾನು (ಮಿಂಚಿನಿಂದ ಕೂಡಿದ) ಮೇಘದಂತೆ ದರ್ಪದಿಂದ ವಿಶ್ವಾಮಿತ್ರನ ಆಶ್ರಮದ ಕಡೆಗೆ ನುಗ್ಗಿಹೋದೆನು (೧೫–೧೬). ಶಸ್ತ್ರಧಾರಿಯಾಗಿ ಥಟ್ಟನೆ ನುಗ್ಗಿಹೋದ ನನ್ನನ್ನು

**ಅವಜಾನನ್ನಹಂ ಮೋಹಾದ್ಬಾಲೋಽಯಮಿತಿ ರಾಘವಮ್ ।**
**ವಿಶ್ವಾಮಿತ್ರಸ್ಯ ತಾಂ ವೇದಿಮಭ್ಯಧಾವಂ ಕೃತತ್ವರಃ ॥ ೧೮**

**ತೇನ ಮುಕ್ತಸ್ತತೋ ಬಾಣಃ ಶಿತಃ ಶತ್ರುನಿಬರ್ಹಣಃ ।**
**ತೇನಾಹಂ ತ್ವಾಹತಃ ಕ್ಷಿಪ್ತಃ ಸಮುದ್ರೇ ಶತಯೋಜನೇ ॥ ೧೯**

**ನೇಚ್ಛತಾ ತಾತ ಮಾಂ ಹಂತುಂ ತದಾ ವೀರೇಣ ರಕ್ಷಿತಃ ।**
**ರಾಮಸ್ಯ ಶರವೇಗೇನ ನಿರಸ್ತೋಽಹಮಚೇತನಃ ॥ ೨೦**

**ಪಾತಿತೋಽಹಂ ತದಾ ತೇನ ಗಂಭೀರೇ ಸಾಗರಾಂಭಸಿ ।**
**ಪ್ರಾಪ್ಯ ಸಂಜ್ಞಾಂ ಚಿರಾತ್ತಾತ ಲಂಕಾಂ ಪ್ರತಿಗತಃ ಪುರೀಮ್ ॥ ೨೧**

**ಏವಮಸ್ಮಿ ತದಾ ಮುಕ್ತಃ ಸಹಾಯಾಸ್ತು ನಿಪಾತಿತಾಃ ।**
**ಅಕೃತಾಸ್ತ್ರೇಣ ಬಾಲೇನ ರಾಮೇಣಾಕ್ಲಿಷ್ಟಕರ್ಮಣಾ ॥ ೨೨**

---

ರಾಮನು ಕಂಡನು. ಕಂಡೊಡನೆ ನಿಶ್ಶಂಕೆಯಿಂದ ಆತನು ಧನುಸ್ಸಿಗೆ ಹೆದೆಯೇರಿಸಿದನು. ರಾಘವನನು ಹುಡುಗನೆಂದು ನಾನು ತಿಳಿದು ಅವನನ್ನು ಲಕ್ಷಿಸದೆ ಅವಿವೇಕದಿಂದ ವಿಶ್ವಾಮಿತ್ರಮುನಿಯ ಯಜ್ಞವೇದಿಯ ಕಡೆಗೆ ತ್ವರೆಯಿಂದ ಧಾವಿಸಿದೆನು (೧೭–೧೮). ಅಷ್ಟರಲ್ಲಿ ಶತ್ರುಧ್ವಂಸಕವಾದ ಒಂದು ಕೂರಂಬನ್ನು ರಾಮನು ನನ್ನ ಮೇಲೆ ಪ್ರಯೋಗಿಸಿದನು. ರಾವಣ, ಅದು ಬಂದು ನನಗೆ ಹೊಡೆದೊಡನೆ ನೂರು ಯೋಜನ ದೂರದಲ್ಲಿದ್ದ ಸಮುದ್ರಕ್ಕೆ ನಾನು ಎಸೆಯಲ್ಪಟ್ಟೆನು! (೧೯). ಅಯ್ಯಾ–ರಾವಣ, ಆ ವೀರನಿಗೆ ಆಗ ನನ್ನನ್ನು ಕೊಲ್ಲುವುದು ಇಷ್ಟವಿರಲಿಲ್ಲವೆಂದು ತೋರುತ್ತದೆ. ಆದ್ದರಿಂದ ನನ್ನನ್ನು ಸಾಯದಂತೆ ಉಳಿಸಿದನು! ರಾಮನ ಶರವೇಗದಿಂದ ನಾನು ಎಚ್ಚರದಪ್ಪಿ ತತ್ತರಿಸಿಹೋದೆನು. ಆಳವಾದ ಸಮುದ್ರ ಜಲದಲ್ಲಿ ನನ್ನನ್ನವನು ತಳ್ಳಿದನು. ಬಹಳ ಹೊತ್ತಿನ ಮೇಲೆ ನನಗೆ ಎಚ್ಚರ ಹುಟ್ಟಲು ನೆಟ್ಟನೆ ಲಂಕಾಪುರಿಗೆ ಬಂದೆನು! (೨೦–೨೧). ಈ ರೀತಿಯಲ್ಲಿ ನಾನು ಸಾಯದೆ ಉಳಿದೆನು. ನನ್ನ ಜೊತೆಗೆ ಬಂದಿದ್ದ ರಾಕ್ಷಸರೆಲ್ಲರೂ ಹತರಾದರು. ಇನ್ನೂ ಅಸ್ತ್ರವಿದ್ಯೆಯಲ್ಲಿ ಪಳಗದಿದ್ದ ಬಾಲಕನಾದ ರಾಮನು ಬಹು ಸುಲಭವಾಗಿ

ತನ್ಮಯಾ ವಾರ್ಯಮಾಣಸ್ತ್ವಂ ಯದಿ ರಾಮೇಣ ವಿಗ್ರಹಮ್ ।
ಕರಿಷ್ಯಸ್ಯಾಪದಂ ಘೋರಾಂ ಕ್ಷಿಪ್ರಂ ಪ್ರಾಪ್ಸ್ಯಸಿ ರಾವಣ ॥ ೨೩

ಕ್ರೀಡಾರತಿವಿಧಿಜ್ಞಾನಾಂ ಸಮಾಜೋತ್ಸವದರ್ಶಿನಾಮ್ ।
ರಕ್ಷಸಾಂ ಚೈವ ಸಂತಾಪಮನರ್ಥಂ ಚಾಹರಿಷ್ಯಸಿ ॥ ೨೪

ಹರ್ಮ್ಯಪ್ರಾಸಾದಸಂಬಾಧಾಂ ನಾನಾರತ್ನವಿಭೂಷಿತಾಮ್ ।
ದ್ರಕ್ಷ್ಯಸಿ ತ್ವಂ ಪುರೀಂ ಲಂಕಾಂ ವಿನಷ್ಟಾಂ ಮೈಥಿಲೀಕೃತೇ ॥ ೨೫

ಅಕುರ್ವಂತೋಽಪಿ ಪಾಪಾನಿ ಶುಚಯಃ ಪಾಪಸಂಶ್ರಯಾತ್ ।
ಪರಪಾಪೈರ್ವಿನಶ್ಯಂತಿ ಮತ್ಸ್ಯಾ ನಾಗಹ್ರದೇ ಯಥಾ ॥ ೨೬

ದಿವ್ಯಚಂದನದಿಗ್ಧಾಂಗಾನ್ ದಿವ್ಯಾಭರಣಭೂಷಿತಾನ್ ।
ದ್ರಕ್ಷ್ಯಸ್ಯಭಿಹತಾನ್ ಭೂಮೌ ತವ ದೋಷಾತ್ತು ರಾಕ್ಷಸಾನ್ ॥ ೨೭

---

ಇಂಥ ಕಾರ್ಯವನ್ನು ನಡೆಸಿದ್ದನು (೨೨). ಆದ್ದರಿಂದ, ರಾವಣ, ನಾನು ಬೇಡವೆಂದು ಸಾರಿಹೇಳಿದರೂ ನೀನು ರಾಮನೊಡನೆ ವಿರೋಧವನ್ನು ಬೆಳೆಸಿದರೆ, ಬಹುಬೇಗನೆ ಘೋರವಾದ ವಿಪತ್ತಿಗೆ ಈಡಾಗುವೆ. ನಮ್ಮ ರಾಕ್ಷಸರು ನಾನಾವಿಧವಾದ ಕ್ರೀಡೆಗಳಲ್ಲಿಯೂ ಭೋಗಗಳಲ್ಲಿಯೂ ನಿರತರಾಗಿ ಸುಖದಿಂದ ಇದ್ದಾರೆ. ವಿನೋದಗೋಷ್ಠಿಗಳನ್ನು ನೋಡುತ್ತ ವಿಹರಿಸುತ್ತಿದ್ದಾರೆ. ಅವರೆಲ್ಲರಿಗೂ ದುಃಖವನ್ನೂ ಅನರ್ಥವನ್ನೂ ನೀನು ತಂದೊಡ್ಡುವೆ (೨೩–೨೪). ವಿಶಾಲಭವನಗಳಿಂದಲೂ ಅರಮನೆಗಳಿಂದಲೂ ನಿಬಿಡವಾಗಿ ನಾನಾರತ್ನಗಳಿಂದ ಭೂಷಿತವಾದ ಲಂಕಾನಗರಿಯು ಸೀತೆಗೊಸ್ಕರ ಹಾಳುಬೀಳುವುದನ್ನು ನೀನು ನೋಡಬೇಕಾದೀತು. ರಾವಣ, ಪಾಪಕೃತ್ಯಗಳನ್ನು ಮಾಡದ ಸಜ್ಜನರೂ ಸಹ ಪಾಪಿಗಳ ಸಹವಾಸದಿಂದ ಅವರ ಪಾಪದೋಷಗಳಿಗೆ ಸಿಕ್ಕಿ ನಾಶಹೊಂದುತ್ತಾರೆ. ಹಾವುಗಳ ಮಡುವಿನಲ್ಲಿರುವ ಮೀನುಗಳು (ಗರುಡನ ಬಾಯಿಗೆ ಸಿಕ್ಕಿದಂತೆ) ಹಾಳಾಗುತ್ತಾರೆ (೨೫–೨೬). ಈಗ ದಿವ್ಯಚಂದನಗಳನ್ನು ಮೈಗೆ ಬಳಿದುಕೊಂಡು ದಿವ್ಯಾಭರಣಗಳಿಂದ ಅಲಂಕೃತರಾಗಿ ರಾಕ್ಷಸರು ನಲಿಯುತ್ತಿದ್ದಾರೆ. ನಿನ್ನ ತಪ್ಪಿಗೆ ಅವರೆಲ್ಲರೂ ಬಲಿಯಾಗಿ ನೆಲದಮೇಲೆ ಉರುಳುವುದನ್ನು ನೀನೇ ನೋಡಬೇಕಾದೀತು (೨೭).

ಹೃತದಾರಾನ್ ಸದಾರಾಂಶ್ಚ ದಶ ವಿದ್ರವತೋ ದಿಶಃ ।
ಹತಶೇಷಾನಶರಣಾನ್ ದ್ರಕ್ಷ್ಯಸಿ ತ್ವಂ ನಿಶಾಚರಾನ್ ॥ ೨೮

ಶರಜಾಲಪರಿಕ್ಷಿಪ್ತಾಮಗ್ನಿಜ್ವಾಲಾಸಮಾವೃತಾಮ್ ।
ಪ್ರದಗ್ಧಭವನಾಂ ಲಂಕಾಂ ದ್ರಕ್ಷ್ಯಸಿ ತ್ವಂ ನ ಸಂಶಯಃ ॥ ೨೯

ಪರದಾರಾಭಿಮರ್ಶಾತ್ತು ನಾನ್ಯತ್ ಪಾಪತರಂ ಮಹತ್ ।
ಪ್ರಮದಾನಾಂ ಸಹಸ್ರಾಣಿ ತವ ರಾಜನ್ ಪರಿಗ್ರಹಃ ॥ ೩೦

ಭವ ಸ್ವದಾರನಿರತಃ ಸ್ವಕುಲಂ ರಕ್ಷ ರಾಕ್ಷಸ ।
ಮಾನಮೃದ್ಧಿಂ ಚ ರಾಜ್ಯಂ ಚ ಜೀವಿತಂ ಚೇಷ್ಟಮಾತ್ಮನಃ ॥ ೩೧

ಕಲತ್ರಾಣಿ ಚ ಸೌಮ್ಯಾನಿ ಮಿತ್ರವರ್ಗಂ ತಥೈವ ಚ ।
ಯದೀಚ್ಛಸಿ ಚಿರಂ ಭೋಕ್ತುಂ ಮಾ ಕೃಥಾ ರಾಮವಿಪ್ರಿಯಮ್ ॥ ೩೨

---

ಹತಶೇಷರಾದ ನಿಶಾಚರರು ಅನಾಥರಾಗಿ ದಶದಿಕ್ಕುಗಳಿಗೆ ಓಡಿಹೋಗುವುದನ್ನು ನೀನು ನೋಡಬೇಕಾಗುವುದು. ಕೆಲವರು ಹೆಂಡತಿಯರನ್ನು ಕಳೆದುಕೊಂಡೂ ಕೆಲವರು ಹೆಂಡತಿಯರನ್ನು ಕಟ್ಟಿಕೊಂಡೂ ಪಲಾಯನಮಾಡುವುದನ್ನು ನೀನು ನೋಡುವೆ (೨೮). ರಾಮನ ಶರಜಾಲಗಳಿಂದ ಲಂಕೆಯು ಆಕ್ರಾಂತವಾಗಿ, ಅಲ್ಲಿರುವ ಭವನಗಳು ಅಗ್ನಿಜ್ವಾಲೆಗಳಿಂದ ಧಗಧಗಿಸುತ್ತ ಉರಿದುಹೋಗುವುದನ್ನು ನೀನು ನೋಡುವೆ. ಇದರಲ್ಲಿ ಸಂದೇಹವಿಲ್ಲ. ಮಹಾರಾಜ, ಪರಸ್ತ್ರೀಯರನ್ನು ಮುಟ್ಟುವುದಕ್ಕಿಂತ ದೊಡ್ಡದಾದ ಇನ್ನೊಂದು ಪಾಪಕೃತ್ಯವಿಲ್ಲ. ನಿನಗಾದರೋ ಮದುವೆಯಾದ ಸಾವಿರಾರು ಮಂದಿ ಮಡದಿಯರಿದ್ದಾರೆ (೨೯–೩೦). ನಿನ್ನ ಮಡದಿಯರಲ್ಲಿ ನೀನು ತೃಪ್ತನಾಗಿರು. ನಿನ್ನ ಕುಲವನ್ನು ಉಳಿಸಿ ರಕ್ಷಿಸು. ನಿನ್ನ ಮಾನ, ಸಂಪತ್ಸಮೃದ್ಧಿ, ರಾಜ್ಯ, ಜೀವಿತಗಳನ್ನು ಉಳಿಸಿಕೊ. ಸೌಮ್ಯರಾದ ನಿನ್ನ ಪತ್ನಿಯರನ್ನೂ ಮಿತ್ರರನ್ನೂ ಕೂಡಿಕೊಂಡು ಬಹುಕಾಲದವರೆಗೆ ರಾಜಭೋಗ ವನ್ನನುಭವಿಸಲು ಇಚ್ಛೆಯಿರುವುದಾದರೆ, ರಾವಣ, ರಾಮನಿಗೆ ಅಪ್ರಿಯವಾದ

ನಿವಾರ್ಯಮಾಣಃ ಸುಹೃದಾ ಮಯಾ ಭೃಶಂ
ಪ್ರಸಹ್ಯ ಸೀತಾಂ ಯದಿ ಧರ್ಷಯಿಷ್ಯಸಿ ।
ಗಮಿಷ್ಯಸಿ ಕ್ಷೀಣಬಲಃ ಸಬಾಂಧವೋ
ಯಮಕ್ಷಯಂ ರಾಮಶರಾತ್ತಜೀವಿತಃ ॥ ೩೩

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಾತ್ರಿಂಶಃ ಸರ್ಗಃ

---

## ಏಕೋನಚತ್ವಾರಿಂಶಃ ಸರ್ಗಃ

### ಸಾಹಾಯ್ಯಕಾನಭ್ಯುಪಗಮಃ

ಏವಮಸ್ಮಿ ತದಾ ಮುಕ್ತಃ ಕಥಂಚಿತ್ತೇನ ಸಂಯುಗೇ ।
ಇದಾನೀಮಪಿ ಯದ್ವೃತ್ತಂ ತಚ್ಛೃಣುಷ್ವ ನಿರುತ್ತರಮ್ ॥ ೧

ರಾಕ್ಷಸಾಭ್ಯಾಮಹಂ ದ್ವಾಭ್ಯಾಮನಿರ್ವಿಣ್ಣಸ್ತಥಾ ಕೃತಃ ।
ಸಹಿತೋ ಮೃಗರೂಪಾಭ್ಯಾಂ ಪ್ರವಿಷ್ಟೋ ದಂಡಕಾವನಮ್ ॥ ೨

---

ಯಾವ ಕಾರ್ಯವನ್ನೂ ಮಾಡಬೇಡ (೩೧–೩೨). ನಾನು ನಿನ್ನ ಹಿತಕಾಂಕ್ಷಿಯಾಗಿ ಬೇಡಬೇಡವೆಂದು ಸಾರಿಹೇಳುತ್ತಿದ್ದೇನೆ. ಆದರೂ ನೀನು ಸೀತೆಯನ್ನು ಬಲಾತ್ಕರಿಸಲು ಪ್ರಯತ್ನಿಸುವೆಯಾದರೆ, ರಾಮಾಸ್ತ್ರಕ್ಕೆ ಬಲಿಯಾಗಿ ಪ್ರಾಣವನ್ನು ತೆರಬೇಕಾಗುವುದು. ನಿನ್ನ ಸೇನೆಯೆಲ್ಲವೂ ಲಯವಾಗಲು, ಬಂಧುಬಾಂಧವರೊಡನೆ ನೀನು ಯಮಲೋಕವನ್ನು ಸೇರುತ್ತೀಯೆ" ಎಂದನು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೆಂಟನೆಯ ಸರ್ಗ

---

## ಸರ್ಗ ೩೯

### ಮಾರೀಚನು ರಾವಣನಿಗೆ ಸಹಾಯಕನಾಗಲು ಒಪ್ಪದಿರುವುದು

ಮಾರೀಚನು ಮತ್ತೆ ಹೇಳಿದನು: "ರಾಕ್ಷಸೇಶ್ವರ, ಆ ಯುದ್ಧದಲ್ಲಿ ನಾನು ಈ ಪ್ರಕಾರ ಹೇಗೋ ಬದುಕಿಬಂದೆನು. ಈಚೆಗೆ ನಡೆದ ಇನ್ನೊಂದು ವೃತ್ತಾಂತವನ್ನು ಹೇಳುತ್ತೇನೆ. ಮಧ್ಯದಲ್ಲಿ ಮಾತನಾಡದೆ ಕೇಳು (೧). ನನಗೆ ರಾಮನಿಂದ ಹಾಗೆ ಪ್ರಾಣಸಂಕಟ ಒದಗಿದರೂ ನಾನು ಎದೆಗೆಡಲಿಲ್ಲ. ಮೃಗರೂಪ

ದೀಪ್ತಜಿಹ್ವೋ ಮಹಾಕಾಯಸ್ತೀಕ್ಷ್ಣದಂಷ್ಟ್ರೋ ಮಹಾಬಲಃ ।
ವ್ಯಚರಂ ದಂಡಕಾರಣ್ಯಂ ಮಾಂಸಭಕ್ಷೋ ಮಹಾಮೃಗಃ ॥ ೩

ಅಗ್ನಿಹೋತ್ರೇಷು ತೀರ್ಥೇಷು ಚೈತ್ಯವೃಕ್ಷೇಷು ರಾವಣ ।
ಅತ್ಯಂತಘೋರೋ ವ್ಯಚರಂ ತಾಪಸಾನ್ ಸಂಪ್ರಧರ್ಷಯನ್ ॥ ೪

ನಿಹತ್ಯ ದಂಡಕಾರಣ್ಯೇ ತಾಪಸಾನ್ ಧರ್ಮಚಾರಿಣಃ ।
ರುಧಿರಾಣಿ ಪಿಬಂಸ್ತೇಷಾಂ ತಥಾ ಮಾಂಸಾನಿ ಭಕ್ಷಯನ್ ॥ ೫

ಋಷಿಮಾಂಸಾಶನಃ ಕ್ರೂರಸ್ತ್ರಾಸಯನ್ ವನಗೋಚರಾನ್ ।
ತಥಾ ರುಧಿರಮತ್ತೋಽಹಂ ವಿಚರನ್ ದಂಡಕಾವನಮ್ ॥ ೬

ಆಸಾದಯಂ ತದಾ ರಾಮಂ ತಾಪಸಂ ಧರ್ಮಮಾಶ್ರಿತಮ್ ।
ವೈದೇಹೀಂ ಚ ಮಹಾಭಾಗಾಂ ಲಕ್ಷ್ಮಣಂ ಚ ಮಹಾರಥಮ್ ॥ ೭

ತಾಪಸಂ ನಿಯತಾಹಾರಂ ಸರ್ವಭೂತಹಿತೇ ರತಮ್ ।
ಸೋಽಹಂ ವನಗತಂ ರಾಮಂ ಪರಿಭೂಯ ಮಹಾಬಲಮ್ ॥ ೮

---

ವನ್ನು ಧರಿಸಿದ ಇಬ್ಬರು ರಾಕ್ಷಸರೊಡನೆ ಒಂದುಸಲ ದಂಡಕಾರಣ್ಯಕ್ಕೆ ಹೋದೆನು. ಮಹಾಬಲಾಢ್ಯನಾದ ನಾನು ಮಹಾಶರೀರವುಳ್ಳ ಮೃಗದ ರೂಪವನ್ನು ತಾಳಿದೆನು. ಪ್ರಜ್ವಲಿಸುವ ನಾಲಿಗೆಯೂ ಮೊನಚಾದ ಕೋರೆಯ ಹಲ್ಲುಗಳೂ ನನಗಿದ್ದವು. ಮಾಂಸವನ್ನು ಭಕ್ಷಿಸುತ್ತ ದಂಡಕಾರಣ್ಯದಲ್ಲಿ ಅಲೆಯುತ್ತಿದ್ದೆನು. (೨–೩). ರಾವಣ, ಋಷಿಗಳ ಅಗ್ನಿಶಾಲೆಗಳು, ತೀರ್ಥಸ್ಥಳಗಳು, ಚೈತ್ಯವೃಕ್ಷಗಳು ಮೊದಲಾದ ಕಡೆಗಳಲ್ಲಿ ಘೋರಾಕಾರವನ್ನು ಧರಿಸಿ ನುಗ್ಗಿ ಅಲ್ಲಿದ್ದ ತಾಪಸರ ಮೇಲೆ ಧಾಳಿಯಿಡುತ್ತಿದ್ದೆನು. ಧರ್ಮಚಾರಿಗಳಾದ ತಪಸ್ವಿಗಳನ್ನು ಕೊಂದು ಅವರ ರಕ್ತವನ್ನು ಕುಡಿದು ಮಾಂಸವನ್ನು ಭಕ್ಷಿಸುತ್ತ ಅಲೆಯುತ್ತಿದ್ದೆನು (೪–೫). ಋಷಿಗಳ ಮಾಂಸವನ್ನು ತಿಂದು ರಕ್ತವನ್ನು ಕುಡಿದು ಮದವೇರಿ, ವನಚಾರಿಗಳನ್ನು ಕ್ರೌರ್ಯದಿಂದ ಹೆದರಿಸುತ್ತ ದಂಡಕಾರಣ್ಯದಲ್ಲಿ ಸುತ್ತುತ್ತಿದ್ದೆನು. ಆಗ ತಪಸ್ವಿಯೂ ಧರ್ಮನಿಷ್ಠನೂ ಆದ ರಾಮ, ಭಾಗ್ಯಶಾಲಿನಿಯಾದ ವೈದೇಹಿ, ಮಹಾಶೂರನಾದ ಲಕ್ಷ್ಮಣ–ಇವರು ನನಗೆ ಗೋಚರಿಸಿದರು (೬–೭). ರಾಮನು ಆಹಾರನಿಯಮಪೂರ್ವಕ ತಪಸ್ವಿಯಾಗಿ ಸಕಲಪ್ರಾಣಿಗಳ ಹಿತವನ್ನೂ ಕೋರುತ್ತ

ತಾಪಸೋಽಯಮಿತಿ ಜ್ಞಾತ್ವಾ ಪೂರ್ವವೈರಮನುಸ್ಮರನ್ ।
ಅಭ್ಯಧಾವಂ ಹಿ ಸಂಕ್ರುದ್ಧಸ್ತೀಕ್ಷ್ಣಶೃಂಗೋ ಮಹಾಕೃತಿಃ ॥ ೯

ಜಿಘಾಂಸುರಕೃತಪ್ರಜ್ಞಸ್ತಂ ಪ್ರಹಾರಮನುಸ್ಮರನ್ ।
ತೇನ ಮುಕ್ತಾಸ್ತ್ರಯೋ ಬಾಣಾಃ ಶಿತಾಃ ಶತ್ರುನಿಬರ್ಹಣಾಃ ॥ ೧೦

ವಿಕೃಷ್ಯ ಸುಮಹಚ್ಚಾಪಂ ಸುಪರ್ಣಾನಿಲನಿಸ್ವನಾಃ ।
ತೇ ಬಾಣಾ ವಜ್ರಸಂಕಾಶಾಃ ಸುಘೋರಾ ರಕ್ತಭೋಜನಾಃ ॥ ೧೧

ಆಜಗ್ಮುಃ ಸಹಿತಾಃ ಸರ್ವೇ ತ್ರಯಃ ಸಂನತಪರ್ವಣಃ ।
ಪರಾಕ್ರಮಜ್ಞೋ ರಾಮಸ್ಯ ಶಠೋ ದೃಷ್ಟಭಯಃ ಪುರಾ ॥ ೧೨

ಸಮುತ್ಕ್ರಾಂತಸ್ತತೋ ಮುಕ್ತಸ್ತಾವುಭೌ ರಾಕ್ಷಸೌ ಹತೌ ।
ಶರೇಣ ಮುಕ್ತೋ ರಾಮಸ್ಯ ಕಥಂಚಿತ್ ಪ್ರಾಪ್ಯ ಜೀವಿತಮ್ ॥ ೧೩

---

ವನವಾಸಿಯಾಗಿದ್ದನು. ಅಲ್ಲದೆ ಅವನು ಮಹಾಬಲಾಢ್ಯ. ನಾನು ಅದೆಲ್ಲವನ್ನೂ ಅಲಕ್ಷಿಸಿ, ಇವನು ತಾಪಸನಾದ್ದರಿಂದ ದುರ್ಬಲನಾಗಿರಬಹುದೆಂದು ಊಹಿಸಿದೆನು. ಹಳೆಯ ವೈರವು ನನ್ನ ಸ್ಮರಣೆಗೆ ಬಂದಿತು. ಚೂಪಾದ ಕೊಂಬುಗಳಿದ್ದ ಮೃಗಾಕೃತಿಯನ್ನು ಧರಿಸಿದ್ದೆನು. ಕೂಡಲೆ ಅತಿಕೋಪದಿಂದ ಆತನ ಮೇಲೆ (ಆ ಇಬ್ಬರು ರಾಕ್ಷಸರೊಡನೆ) ನುಗ್ಗಿದೆನು (೮–೯). ಹಿಂದೆ ರಾಮನು ನನಗೆ ಕೊಟ್ಟ ಪೆಟ್ಟು ನೆನಪಿನಲ್ಲಿತ್ತು! ಆದರೂ ಅವನನ್ನು ಕೊಲ್ಲಬೇಕೆಂದು ಬುದ್ಧಿಗೆಟ್ಟು ನುಗ್ಗಿ ಹೋದೆನು. ಆಗ ರಾಮನು ತನ್ನ ಮಹಾಧನುಸ್ಸನ್ನು ಜಗ್ಗಿ ಶತ್ರುಧ್ವಂಸಕಗಳಾದ ಮೂರು ಕೂರಂಬುಗಳನ್ನು ನಮ್ಮಮೇಲೆ ಬಿಟ್ಟನು (೧೦). ಅವು ರಕ್ತಪಾಯಿಗಳಾದ ಘೋರ ಬಾಣಗಳು. ಆ ಮೂರು ಕೊಂಕುಬಾಣಗಳೂ ಗರುಡನ ರೆಕ್ಕೆಯ ಗಾಳಿಯಂತೆ ಗುಂಯ್ ಎನ್ನುತ್ತ ಸಿಡಿಲಿನಂತೆ ಎರಗಿದವು. ನನಗೆ ರಾಮನ ಪರಾಕ್ರಮ ಗೊತ್ತಿತ್ತು. ಅವನಿಂದ ಎಂಥ ಭಯವು ಸಂಭವಿಸುವುದೆಂದು ತಿಳಿದಿತ್ತು (೧೧–೧೨). ಆದ್ದರಿಂದ ಕುಯುಕ್ತಿಯನ್ನು ಬಲ್ಲ ನಾನು ಅಷ್ಟರಲ್ಲಿ ತಪ್ಪಿಸಿಕೊಂಡು ಓಡಿಹೋದೆನು! ಆ ಇಬ್ಬರು ರಾಕ್ಷಸರು ಸತ್ತುಹೋದರು. ರಾಮನ ಶರವೇಗಕ್ಕೆ ಸಿಕ್ಕದೆ ನಾನು ಹೇಗೋ ಬದುಕಿ ಉಳಿದೆನು (೧೩).

ಇಹ ಪ್ರವ್ರಾಜಿತೋ ಯುಕ್ತಸ್ತಾಪಸೋಽಹಂ ಸಮಾಹಿತಃ ।
ವೃಕ್ಷೇ ವೃಕ್ಷೇ ಚ ಪಶ್ಯಾಮಿ ಚೀರಕೃಷ್ಣಾಜಿನಾಂಬರಮ್ ॥ ೧೪
ಗೃಹೀತಧನುಷಂ ರಾಮಂ ಪಾಶಹಸ್ತಮಿವಾಂತಕಮ್ ।
ಅಪಿ ರಾಮಸಹಸ್ರಾಣಿ ಭೀತಃ ಪಶ್ಯಾಮಿ ರಾವಣ ॥ ೧೫
ರಾಮಭೂತಮಿದಂ ಸರ್ವಮರಣ್ಯಂ ಪ್ರತಿಭಾತಿ ಮೇ ।
ರಾಮಮೇವ ಹಿ ಪಶ್ಯಾಮಿ ರಹಿತೇ ರಾಕ್ಷಸಾಧಿಪ ॥ ೧೬
ದೃಷ್ಟ್ವಾ ಸ್ವಪ್ನಗತಂ ರಾಮಮುದ್ಭ್ರಮಾಮಿ ವಿಚೇತನಃ ।
ರಕಾರಾದೀನಿ ನಾಮಾನಿ ರಾಮತ್ರಸ್ತಸ್ಯ ರಾವಣ ॥ ೧೭
ರತ್ನಾನಿ ಚ ರಥಾಶ್ಚೈವ ವಿತ್ರಾಸಂ ಜನಯಂತಿ ಮೇ ।
ಅಹಂ ತಸ್ಯ ಪ್ರಭಾವಜ್ಞೋ ನ ಯುದ್ಧಂ ತೇನ ತೇ ಕ್ಷಮಮ್ ॥ ೧೮
ಬಲಿಂ ವಾ ನಮುಚಿಂ ವಾಪಿ ಹನ್ಯಾದ್ಧಿ ರಘುನಂದನಃ ।
ರಣೇ ರಾಮೇಣ ಯುಧ್ಯಸ್ವ ಕ್ಷಮಾಂ ವಾ ಕುರು ರಾಕ್ಷಸ ॥ ೧೯

---

ಅನಂತರ ನಾನು ಹಿಂದಿನ ದುಷ್ಕೃತ್ಯಗಳನ್ನೆಲ್ಲ ಬಿಟ್ಟು ಇಲ್ಲಿಗೆ ಬಂದೆನು. ಉಚಿತವಾದ ಆಚಾರವನ್ನಿಟ್ಟುಕೊಂಡು ನಿಯತಮನಸ್ಕನಾಗಿ ತಪೋನಿಷ್ಠನಾಗಿದ್ದೇನೆ. ರಾವಣ, (ಏನು ಹೇಳಲಿ?) ಈಗಲೂ ನನಗೆ ಮರಮರಗಳಲ್ಲಿಯೂ ರಾಮನೇ ಕಾಣಿಸುತ್ತಾನೆ! ನಾರುಮಡಿ ಕೃಷ್ಣಾಜಿನಗಳನ್ನುಟ್ಟು ಧನುರ್ಧಾರಿಯಾದ ರಾಮನು ಪಾಶಹಸ್ತನಾದ ಯಮನೋ ಎಂಬಂತೆ ಕಾಣಿಸುತ್ತಾನೆ! ಸುತ್ತಲೂ ಸಾವಿರಾರು ಮಂದಿ ರಾಮರನ್ನು ಹೆದರಿಕೆಯಿಂದ ನಡುಗುತ್ತ ನೋಡುತ್ತಿದ್ದೇನೆ.! (೧೪–೧೫). ಈ ಅರಣ್ಯವೆಲ್ಲವೂ ರಾಮಮಯವಾಗಿರುವಂತೆ ನನಗೆ ಕಾಣುತ್ತದೆ! ರಾಕ್ಷಸೇಂದ್ರ, ರಾಮನಿಲ್ಲದಿದ್ದರೂ ಇಲ್ಲಿ ರಾಮನೇ ಇರುವಂತೆ ನನಗೆ ಭ್ರಮೆಯಾಗುತ್ತದೆ. ಸ್ವಪ್ನದಲ್ಲಿಯೂ ರಾಮನನ್ನು ಕಂಡು ಪ್ರಜ್ಞೆದಪ್ಪಿ ಕನವರಿಸುತ್ತೇನೆ! ರಾಮನಿಗೆ ಹೆದರಿ ಕಂಗೆಟ್ಟಿರುವ ನನಗೆ, ರೇಫಾದಿಯಾದ ಹೆಸರನ್ನು ಕೇಳಿದರೂ ಎದೆ ನಡುಗುತ್ತದೆ! (೧೬–೧೭). ರತ್ನ, ರಥ–ಎಂದರೂ ನನಗೆ ದಿಗಿಲಾಗುತ್ತದೆ! ರಾವಣ, ನಾನು ರಾಮನ ತೇಜಃಪ್ರಭಾವವನ್ನು ಚೆನ್ನಾಗಿ ಬಲ್ಲೆ. ಅವನೊಡನೆ ಯುದ್ಧ ನಿನಗೆ ಯೋಗ್ಯವಲ್ಲ. ರಾಘವನೆಂದರೆ ಯಾರೆಂದು ತಿಳಿದೆ? ಬಲಿಚಕ್ರವರ್ತಿ, ನಮುಚಿಯಂತಹ ಮಹಾವೀರರನ್ನು ಅವನು ವಧಿಸಬಲ್ಲನು.

ನ ತೇ ರಾಮಕಥಾ ಕಾರ್ಯಾ ಯದಿ ಮಾಂ ದ್ರಷ್ಟುಮಿಚ್ಛಸಿ ।
ಬಹವಃ ಸಾಧವೋ ಲೋಕೇ ಯುಕ್ತಾ ಧರ್ಮಮನುಷ್ಠಿತಾಃ ॥ ೨೦

ಪರೇಷಾಮಪರಾಧೇನ ವಿನಷ್ಟಾಃ ಸಪರಿಚ್ಛದಾಃ ।
ಸೋಽಹಂ ತವಾಪರಾಧೇನ ವಿನಶ್ಯೇಯಂ ನಿಶಾಚರ ॥ ೨೧

ಕುರು ಯತ್ತೇ ಕ್ಷಮಂ ತತ್ತ್ವಮಹಂ ತ್ವಾಂ ನಾನುಯಾಮಿ ಹ ।
ರಾಮಶ್ಚ ಹಿ ಮಹಾತೇಜಾ ಮಹಾಸತ್ತ್ವೋ ಮಹಾಬಲಃ ॥ ೨೨

ಅಪಿ ರಾಕ್ಷಸಲೋಕಸ್ಯ ಭವೇದಂತಕರೋಽಪಿ ಹಿ ।
ಯದಿ ಶೂರ್ಪಣಖಾಹೇತೋರ್ಜನಸ್ಥಾನಗತಃ ಖರಃ ॥ ೨೩

ಅತಿವೃತ್ತೋ ಹತಃ ಪೂರ್ವಂ ರಾಮೇಣಾಕ್ಲಿಷ್ಟಕರ್ಮಣಾ ।
ಅತ್ರ ಬ್ರೂಹಿ ಯಥಾತತ್ತ್ವಂ ಕೋ ರಾಮಸ್ಯ ವ್ಯತಿಕ್ರಮಃ ॥ ೨೪

---

ಬೇಕಾದರೆ ರಣರಂಗದಲ್ಲಿ ರಾಮನೊಡನೆ ಯುದ್ಧಮಾಡಿ ನೋಡು. ಇಲ್ಲವಾದರೆ ತಾಳ್ಮೆಯಿಂದ ಖರಾದಿವಧೆಯನ್ನು ಸಹಿಸಿಕೊಂಡಿರು (೧೮–೧೯). ಪುನಃ ನನ್ನನ್ನು ನೋಡಬೇಕೆಂಬ ಇಚ್ಛೆ ಇದ್ದರೆ, ರಾಮನ ಸುದ್ದಿಯನ್ನು ಮಾತ್ರ ನನ್ನಲ್ಲಿ ಎತ್ತಬೇಡ! ಈ ಲೋಕದಲ್ಲಿ ಧರ್ಮನಿಷ್ಠರೂ ಆಚಾರಶೀಲರೂ ಆದ ಬಹುಮಂದಿ ಸಜ್ಜನರು ಇತರರ ತಪ್ಪಿಗೆ ತಾವೇ ಬಂಧುಬಳಗಸಹಿತ ನಾಶವಾಗಿಹೋಗಿದ್ದಾರೆ. ರಾವಣ, ನಿನ್ನ ತಪ್ಪಿಗೆ ನಾನು ಸಾಯಬೇಕಾದೀತು! (೨೦–೨೧). ಇಷ್ಟರಮೇಲೆ ನಿನಗೆ ಯಾವುದು ಯೋಗ್ಯವೆನಿಸುವುದೋ ಅದನ್ನು ಮಾಡು. ನಾನಂತೂ ನಿನ್ನ ಹಿಂದೆ ಬರಲಾರೆ. ರಾಮನು ಮಹಾಪರಾಕ್ರಮಿ; ಅಸಾಧಾರಣ ಬುದ್ಧಿಶಾಲಿ. ಅವನಿಗೆ ಅಸದೃಶವಾದ ದೇಹಬಲವಿದೆ (೨೨). ಸಕಲ ರಾಕ್ಷಸಕುಲಕ್ಕೂ ಅವನು ಯಮನೇ ಆಗಬಲ್ಲನು. ಅಯ್ಯಾ–ರಾವಣ, ಜನಸ್ಥಾನದಲ್ಲಿದ್ದ ಖರನು ಶೂರ್ಪಣಖಿಯು ಏನೋ ಹೇಳಿದಳೆಂಬ ನೆವದಿಂದ ಉದ್ದಂಡನಾಗಿ ರಾಮನಮೇಲೆ ಏರಿಹೋದನಲ್ಲವೆ? ಆಗ ಯಾವ ತಪ್ಪನ್ನೂ ಮಾಡದೆ ಇದ್ದ ರಾಮನು ಖರನನ್ನು ಕೊಂದುಹಾಕಿದನು. ಇದರಲ್ಲಿ ರಾಮನ ಅಪರಾಧವೇನು? ನೀನೇ

ಇದಂ ವಚೋ ಬಂಧುಹಿತಾರ್ಥಿನಾ ಮಯಾ
ಯಥೋಚ್ಯಮಾನಂ ಯದಿ ನಾಭಿಪತ್ಸ್ಯಸೇ ।
ಸಬಾಂಧವಸ್ತ್ಯಕ್ಷ್ಯಸಿ ಜೀವಿತಂ ರಣೇ
ಹತೋಽದ್ಯ ರಾಮೇಣ ಶರೈರಜಿಹ್ಮಗೈಃ ॥ ೨೫

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನಚತ್ವಾರಿಂಶಃ ಸರ್ಗಃ

---

## ಚತ್ವಾರಿಂಶಃ ಸರ್ಗಃ

### ಮಾಯಾಮೃಗರೂಪ ಪರಿಗ್ರಹ ನಿರ್ಬಂಧಃ

ಮಾರೀಚೇನ ತು ತದ್ವಾಕ್ಯಂ ಕ್ಷಮಂ ಯುಕ್ತಂ ನಿಶಾಚರಃ ।
ಉಕ್ತೋ ನ ಪ್ರತಿಜಗ್ರಾಹ ಮರ್ತುಕಾಮ ಇವೌಷಧಮ್ ॥ ೧

---

ಸತ್ಯವನ್ನು ವಿಮರ್ಶಿಸಿ ಹೇಳು (೨೩–೨೪). ನನ್ನ ಬಂಧುಗಳಾದ ನಿಮ್ಮೆಲ್ಲರಿಗೂ ಶ್ರೇಯಸ್ಸನ್ನು ಬಯಸಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಬುದ್ಧಿವಾದವನ್ನು ನೀನು ಅಂಗೀಕರಿಸದಿದ್ದರೆ, ರಾಮನ ಕರ್ಕಶಾಸ್ತ್ರಗಳಿಗೆ ನೀನು ಬಲಿಯಾಗುವೆ. ರಣರಂಗದಲ್ಲಿ ನಿನ್ನ ಬಂಧುಗಳೆಲ್ಲರೊಡನೆ ಪ್ರಾಣವನ್ನು ನೀಗುತ್ತೀಯೆ" ಎಂದು ಹೇಳಿದನು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಮೂವತ್ತೊಂಬತ್ತನೆಯ ಸರ್ಗ

---

## ಸರ್ಗ ೪೦

### ರಾವಣನು ಮಾರೀಚನನ್ನು ನಿಂದಿಸಿ, ತನ್ನ ಆಜ್ಞೆಯಂತೆ ನಡೆಯದಿದ್ದರೆ ಮಾರೀಚನನ್ನು ಕೊಲ್ಲುವುದಾಗಿ ಬೆದರಿಸುವುದು

ಈ ರೀತಿಯಲ್ಲಿ ಮಾರೀಚನು ನ್ಯಾಯವೂ ಯುಕ್ತಿಯುಕ್ತವೂ ಆದ ಮಾತನ್ನಾಡಿದನು. ಸಾಯುವವನಿಗೆ ಔಷಧವು ಬೇಡವೆನಿಸುವಂತೆ ರಾವಣನಿಗೆ ಆ ಮಾತು ಹಿಡಿಸಲಿಲ್ಲ. ಅವನು ಮಾರೀಚನ ಹಿತವಚನವನ್ನು ನಿರಾಕರಿಸಿದನು (೧).

ತಂ ಪಥ್ಯಹಿತವಕ್ತಾರಂ ಮಾರೀಚಂ ರಾಕ್ಷಸಾಧಿಪಃ ।
ಅಬ್ರವೀತ್ ಪರುಷಂ ವಾಕ್ಯಮಯುಕ್ತಂ ಕಾಲಚೋದಿತಃ ॥ ೨

ಯತ್ಕಿಲೈತದಯುಕ್ತಾರ್ಥಂ ಮಾರೀಚ ಮಯಿ ಕಥ್ಯತೇ ।
ವಾಕ್ಯಂ ನಿಷ್ಫಲಮತ್ಯರ್ಥಮುಪ್ತಂ ಬೀಜಮಿವೋಷರೇ ॥ ೩

ತ್ವದ್ವಾಕ್ಯೈರ್ನ ತು ಮಾಂ ಶಕ್ಯಂ ಭೇತ್ತುಂ ರಾಮಸ್ಯ ಸಂಯುಗೇ ।
ಪಾಪಶೀಲಸ್ಯ ಮೂರ್ಖಸ್ಯ ಮಾನುಷಸ್ಯ ವಿಶೇಷತಃ ॥ ೪

ಯಸ್ತ್ಯಕ್ತ್ವಾ ಸುಹೃದೋ ರಾಜ್ಯಂ ಮಾತರಂ ಪಿತರಂ ತಥಾ ।
ಸ್ತ್ರೀವಾಕ್ಯಂ ಪ್ರಾಕೃತಂ ಶ್ರುತ್ವಾ ವನಮೇಕಪದೇ ಗತಃ ॥ ೫

ಅವಶ್ಯಂ ತು ಮಯಾ ತಸ್ಯ ಸಂಯುಗೇ ಖರಘಾತಿನಃ ।
ಪ್ರಾಣೈಃ ಪ್ರಿಯತರಾ ಸೀತಾ ಹರ್ತವ್ಯಾ ತವ ಸಂನಿಧೌ ॥ ೬

ಏವಂ ಮೇ ನಿಶ್ಚಿತಾ ಬುದ್ಧಿರ್ಹೃದಿ ಮಾರೀಚ ವರ್ತತೇ ।
ನ ವ್ಯಾವರ್ತಯಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ॥ ೭

---

ಪಥ್ಯವೂ ಹಿತಕರವೂ ಆದ ಉಪದೇಶವನ್ನು ನೀಡಿದ ಮಾರೀಚನಿಗೆ ಆ ರಾಕ್ಷಸೇಶ್ವರನು ಕಠೋರವಾದ ಮಾತನ್ನು ಹೇಳಿದನು. ವಿಧಿಯು ಅವನನ್ನು ಹಾಗೆ ಪ್ರೇರಿಸುತ್ತಿತ್ತು : ಎಲೈ ಮಾರೀಚ, ನನ್ನೊಡನೆ ಅಯುಕ್ತವಾದ ಮಾತನ್ನಾಡುತ್ತಿದ್ದೀಯೆ. ಇದು ನಿಷ್ಫಲ. ಬೆಂಗಾಡುನೆಲದಲ್ಲಿ ಬೀಜವನ್ನು ಹಾಕಿದಂತೆ ನಿನ್ನ ಉಪದೇಶ ವ್ಯರ್ಥವೇ ಸರಿ (೨–೩). ರಾಮನೊಡನೆ ಜಗಳಕ್ಕೆ ನಿಂತಿರುವ ನನ್ನನ್ನು ಉಪಾಯದಿಂದ ತಪ್ಪಿಸಲು ನಿನಗೆ ಶಕ್ಯವಿಲ್ಲ. ಆತನು ದುಷ್ಟ ; ಮೂರ್ಖ; ಅಲ್ಲದೆ ಮನುಷ್ಯ, ಒಬ್ಬ ಹೆಂಗಸಿನ ಅವಿವೇಕದ ಮಾತನ್ನು ಕೇಳಿ, ರಾಜ್ಯವನ್ನೂ ತಂದೆತಾಯಿಗಳನ್ನೂ ಸ್ನೇಹಿತರನ್ನೂ ಬಿಟ್ಟು ಧಡಾರನೆ ಕಾಡಿಗೆ ಹೊರಟುಬಂದಿದ್ದಾನಲ್ಲ ! (ಅವನು ಮೂರ್ಖನಲ್ಲದೆ ಮತ್ತೇನು ?) (೪–೫). ಅವನು ಯುದ್ಧದಲ್ಲಿ ನಮ್ಮ ಖರನನ್ನು ಸಂಹರಿಸಿದ್ದಾನೆ. ಆದ್ದರಿಂದ ನಿನ್ನನ್ನು ನನ್ನ ಜೊತೆಯಲ್ಲಿ ಕರೆದುಕೊಂಡುಹೋಗಿ, ರಾಮನಿಗೆ ಪ್ರಾಣಪ್ರಿಯಳೆನಿಸಿದ ಸೀತೆಯನ್ನು ನಾನು ಅಪಹರಿಸಲೇಬೇಕು. ಮಾರೀಚ, ಈ ರೀತಿಯಲ್ಲಿ ನಾನು ಮನಸ್ಸಿನಲ್ಲಿ ನಿಶ್ಚಯಿ

*

ದೋಷಂ ಗುಣಂ ವಾ ಸಂಪೃಷ್ಟಸ್ತ್ವಮೇವಂ ವಕ್ತುಮರ್ಹಸಿ ।
ಅಪಾಯಂ ವಾಪ್ಯುಪಾಯಂ ವಾ ಕಾರ್ಯಸ್ಯಾಸ್ಯ ವಿನಿಶ್ಚಯೇ ॥ ೮

ಸಂಪೃಷ್ಟೇನ ತು ವಕ್ತವ್ಯಂ ಸಚಿವೇನ ವಿಪಶ್ಚಿತಾ ।
ಉದ್ಯತಾಂಜಲಿನಾ ರಾಜ್ಞೋ ಯ ಇಚ್ಛೇದ್ಭೂತಿಮಾತ್ಮನಃ ॥ ೯

ವಾಕ್ಯಮಪ್ರತಿಕೂಲಂ ತು ಮೃದುಪೂರ್ವಂ ಹಿತಂ ಶುಭಮ್ ।
ಉಪಚಾರೇಣ ಯುಕ್ತಂ ಚ ವಕ್ತವ್ಯೋ ವಸುಧಾಧಿಪಃ ॥ ೧೦

ಸಾವಮರ್ದಂ ತು ಯದ್ವಾಕ್ಯಂ ಮಾರೀಚ ಹಿತಮುಚ್ಯತೇ ।
ನಾಭಿನಂದತಿ ತದ್ರಾಜಾ ಮಾನಾರ್ಹೋ ಮಾನವರ್ಜಿತಮ್ ॥ ೧೧

ಪಂಚ ರೂಪಾಣಿ ರಾಜಾನೋ ಧಾರಯಂತ್ಯಮಿತೌಜಸಃ ।
ಅಗ್ನೇರಿಂದ್ರಸ್ಯ ಸೋಮಸ್ಯ ಯಮಸ್ಯ ವರುಣಸ್ಯ ಚ ॥ ೧೨

ಔಷ್ಣ್ಯಂ ತಥಾ ವಿಕ್ರಮಂ ಚ ಸೌಮ್ಯ ದಂಡಂ ಪ್ರಸನ್ನತಾಮ್ ।
ಧಾರಯಂತಿ ಮಹಾತ್ಮಾನೋ ರಾಜಾನಃ ಕ್ಷಣದಾಚರ ॥ ೧೩

---

ಸಿದ್ಧೇನೆ. ಇಂದ್ರಾದಿದೇವತೆಗಳಾಗಲಿ ಅಸುರರಾಗಲಿ ನನ್ನ ನಿಶ್ಚಯವನ್ನು ಕದಲಿಸಲಾರರು (೬–೭). ಈ ನನ್ನ ಉದ್ದೇಶವು ಸರಿಯೆ? ತಪ್ಪೆ? ಎಂದು ಕೇಳಿದರೆ, ಆಗ ನೀನು ಈ ರೀತಿ ಹೇಳಬಹುದು. 'ಈ ಕಾರ್ಯವನ್ನು ಮಾಡಲು ಸಂಕಲ್ಪಿಸಿದ್ದೇನೆ. ಇದರಲ್ಲಿರುವ ಅಪಾಯವೇನು? ಇದಕ್ಕೆ ಉಪಾಯವಾವುದು?' ಎಂದು ಕೇಳಿದಾಗ ಪಂಡಿತನಾದ ಸಚಿವನು ಸಾಧಕಬಾಧಕಗಳನ್ನು ತಿಳಿಸಬೇಕು. ತನ್ನ ಶ್ರೇಯಸ್ಸನ್ನು ಅವನು ಬಯಸುವುದಾದರೆ, ಆಗ ಕೈಮುಗಿದು ರಾಜನಿಗೆ ಅದನ್ನು ನಿವೇದಿಸಿಕೊಳ್ಳಬೇಕು (೮–೯). ಭೂಪಾಲನೊಡನೆ ಮಾತನಾಡುವಾಗ, ಅವನಿಗೆ ವಿರೋಧಿಯಾಗದೆ ಹಿತವೂ ಶುಭಕರವೂ ಆದ ಮಾತನ್ನು ಮೃದುವಾಗಿ ಗೌರವಪೂರ್ವಕವಾಗಿ ಅರಿಕೆಮಾಡಕೊಳ್ಳಬೇಕು. ಎಲೈ ಮಾರೀಚ, ಮಹಾರಾಜನು ಜನರಿಂದ ಗೌರವವನ್ನು ನಿರೀಕ್ಷಿಸುತ್ತಾನೆ. ಆತನಿಗೆ ಹಿತಕರವಾಗಿದ್ದರೂ ಸಲ್ಲಬೇಕಾದ ವಿಧೇಯತೆಯನ್ನು ತೊರೆದು ಮುಖಭಂಗವಾಗುವಂತೆ ನುಡಿದರೆ, ರಾಜನು ಎಂದಿಗೂ ಮೆಚ್ಚಲಾರ (೧೦–೧೧). ರಾಜರ ತೇಜಸ್ಸು ಅಪಾರವಾದದ್ದು. ಅಗ್ನಿ, ಇಂದ್ರ, ಚಂದ್ರ, ಯಮ, ವರುಣರ ಐದು ರೂಪಗಳು ಭೂಪತಿಗಳಲ್ಲಿ ಬಿಟ್ಟಿ ಇಳಿದಿರುತ್ತವೆ. ಎಲೈ ರಾಕ್ಷಸ, ಪ್ರಭಾವಶಾಲಿಗಳಾದ

ತಸ್ಮಾತ್ ಸರ್ವಾಸ್ವವಸ್ಥಾಸು ಮಾನ್ಯಾಃ ಪೂಜ್ಯಾಶ್ಚ ಪಾರ್ಥಿವಾಃ।
ತ್ವಂ ತು ಧರ್ಮಮವಿಜ್ಞಾಯ ಕೇವಲಂ ಮೋಹಮಾಸ್ಥಿತಃ ॥ ೧೪
ಅಭ್ಯಾಗತಂ ಮಾ ದೌರಾತ್ಮ್ಯಾತ್ ಪರುಷಂ ವದಸೀದೃಶಮ್ ।
ಗುಣದೋಷೌ ನ ಪೃಚ್ಛಾಮಿ ಕ್ಷಮಂ ಚಾತ್ಮನಿ ರಾಕ್ಷಸ ॥ ೧೫
ಮಯೋಕ್ತಂ ತವ ಚೈತಾವತ್ ಸಂಪ್ರತ್ಯಮಿತವಿಕ್ರಮ ।
ಅಸ್ಮಿಂಸ್ತು ತ್ವಂ ಮಹಾಕೃತ್ಯೇ ಸಾಹಾಯ್ಯಂ ಕರ್ತುಮರ್ಹಸಿ ॥ ೧೬
ಶೃಣು ತತ್ ಕರ್ಮಸಾಹಾಯ್ಯೇ ಯತ್ ಕಾರ್ಯಂ ವಚನಾನ್ಮಮ ।
ಸೌವರ್ಣಸ್ತ್ವಂ ಮೃಗೋ ಭೂತ್ವಾ ಚಿತ್ರೋ ರಜತಬಿಂದುಭಿಃ ॥ ೧೭
ಆಶ್ರಮೇ ತಸ್ಯ ರಾಮಸ್ಯ ಸೀತಾಯಾಃ ಪ್ರಮುಖೇ ಚರ ।
ಪ್ರಲೋಭಯಿತ್ವಾ ವೈದೇಹಿಂ ಯಥೇಷ್ಟಂ ಗಂತುಮರ್ಹಸಿ ॥ ೧೮
ತ್ವಾಂ ತು ಮಾಯಾಮೃಗಂ ದೃಷ್ಟ್ವಾ ಕಾಂಚನಂ ಜಾತವಿಸ್ಮಯಾ ।
ಆನಯೈನಮಿತಿ ಕ್ಷಿಪ್ರಂ ರಾಮಂ ವಕ್ಷ್ಯತಿ ಮೈಥಿಲೀ ॥ ೧೯

---

ಭೂಪಾಲರಲ್ಲಿ ಅಗ್ನಿಯ ಉಷ್ಣತೆ, ಇಂದ್ರನ ಪರಾಕ್ರಮ, ಚಂದ್ರನ ಶಾಂತತೆ, ಯಮನ ದಂಡಾಧಿಕಾರ, ವರುಣನ ಪ್ರಸನ್ನತೆಗಳು ರೂಪುಗೊಂಡಿರುತ್ತವೆ (೧೨–೧೩). ಆದ್ದರಿಂದ ಪೃಥಿವೀಪತಿಗಳನ್ನು ಸರ್ವಕಾಲದಲ್ಲಿಯೂ ಸಮ್ಮಾನಿಸತಕ್ಕದ್ದು; ಪೂಜಿಸತಕ್ಕದ್ದು. ನೀನು ಈ ರಾಜಧರ್ಮವನ್ನರಿಯದ ಅವಿವೇಕಿ. ಒಂದು ಕಾರ್ಯಕ್ಕಾಗಿ ನಿನ್ನ ಬಳಿಗೆ ಬಂದರೆ, ಇಂಥ ಕಠೋರವಾದ ಮಾತನ್ನು ನನಗೆ ಹೇಳುವೆಯಾ ? ನೀನು ದುರಾತ್ಮ! ಈ ಕಾರ್ಯದಲ್ಲಿರುವ ಗುಣದೋಷಗಳೇನೆಂದಾಗಲಿ, ಇದನ್ನು ಸಾಧಿಸಲು ನನಗೆ ಸಾಮರ್ಥ್ಯವಿದೆಯೆ ಎಂದಾಗಲಿ ನಾನು ನಿನ್ನನ್ನು ಕೇಳುತ್ತಿಲ್ಲ (೧೪–೧೫). ನಾನು ಹೇಳುವುದಿಷ್ಟು ; ನೀನು ಅಸಾಧಾರಣ ಪರಾಕ್ರಮಿ. ಈಗ ನಾನು ಒಂದು ದೊಡ್ಡ ಕಾರ್ಯವನ್ನು ಸಾಧಿಸಬೇಕೆಂದು ಸಂಕಲ್ಪಿಸಿದ್ದೇನೆ. ಇದಕ್ಕೆ ನೀನು ನೆರವಾಗಬೇಕು. ನೀನು ನೀಡಬೇಕಾದ ನೆರವು ಯಾವುದೆಂಬುದನ್ನು ಕೇಳು : ನೀನು ಸುವರ್ಣಮಯವಾದ ಜಿಂಕೆಯ ರೂಪವನ್ನು ಧರಿಸಬೇಕು. ಮೈಮೇಲೆ ಬೆಳ್ಳಿಯ ಚುಕ್ಕೆಗಳಿರಬೇಕು (೧೬–೧೭). ಹೀಗೆ ಜಿಂಕೆಯ ವೇಷವನ್ನು ಧರಿಸಿ ಆ ರಾಮನ ಆಶ್ರಮದ ಸಮೀಪದಲ್ಲಿ ಸೀತೆಯ ಎದುರಿಗೆ ತಿರುಗಾಡು. ಸೀತೆಯ ಮನಸ್ಸನ್ನು ಆಕರ್ಷಿಸಿ, ಸ್ವೇಚ್ಛೆಯಾಗಿ ಅತ್ತಿತ್ತ

ಅಪಕ್ರಾಂತೇ ತು ಕಾಕುತ್ಸ್ಥೇ ದೂರಂ ಗತ್ವಾಪ್ಯುದಾಹರ ।
ಹಾ ಸೀತೇ ಲಕ್ಷ್ಮಣೇತ್ಯೇವಂ ರಾಮವಾಕ್ಯಾನುರೂಪಕಮ್ ॥ ೨೦

ತಚ್ಛ್ರುತ್ವಾ ರಾಮಪದವೀಂ ಸೀತಯಾ ಚ ಪ್ರಚೋದಿತಃ ।
ಅನುಗಚ್ಛತಿ ಸಂಭ್ರಾಂತಃ ಸೌಮಿತ್ರಿರಪಿ ಸೌಹೃದಾತ್ ॥ ೨೧

ಅಪಕ್ರಾಂತೇ ಚ ಕಾಕುತ್ಸ್ಥೇ ಲಕ್ಷ್ಮಣೇ ಚ ಯಥಾಸುಖಮ್ ।
ಆಹರಿಷ್ಯಾಮಿ ವೈದೇಹೀಂ ಸಹಸ್ರಾಕ್ಷಃ ಶಚೀಮಿವ ॥ ೨೨

ಏವಂ ಕೃತ್ವಾ ತ್ವಿದಂ ಕಾರ್ಯಂ ಯಥೇಷ್ಟಂ ಗಚ್ಛ ರಾಕ್ಷಸ ।
ರಾಜ್ಯಸ್ಯಾರ್ಧಂ ಪ್ರದಾಸ್ಯಾಮಿ ಮಾರೀಚ ತವ ಸುವ್ರತ ॥ ೨೩

ಗಚ್ಛ ಸೌಮ್ಯ ಶಿವಂ ಮಾರ್ಗಂ ಕಾರ್ಯಸ್ಯಾಸ್ಯ ವಿವೃದ್ಧಯೇ ।
ಅಹಂ ತ್ವಾನುಗಮಿಷ್ಯಾಮಿ ಸರಥೋ ದಂಡಕಾವನಮ್ ॥ ೨೪

---

ಅಲೆಯುತ್ತ ಹೋಗು. ನೀನು ಸುವರ್ಣಮಯವಾದ ಮಾಯಾಮೃಗವಾಗಿರುವುದನ್ನು ಕಂಡು ಅವಳಿಗೆ ಕುತೂಹಲವುಂಟಾಗುವುದು. ಆ ಮೃಗವನ್ನು ತನಗೆ ತಂದುಕೊಡೆಂದು ಸೀತೆಯು ಕೂಡಲೆ ರಾಮನಿಗೆ ಹೇಳುವಳು (೧೮–೧೯). ಆಗ ರಾಮನು ನಿನ್ನನ್ನು ಹಿಡಿಯುವುದಕ್ಕಾಗಿ ಹೊರಟುಬರುವನು. ನೀನು ಅವನನ್ನು ಬಹುದೂರದವರೆಗೆ ಸೆಳೆದುಕೊಂಡುಹೋಗಿ ರಾಮನು ಕೂಗುವಂತೆ 'ಹಾ ಸೀತೆ ! ಹಾ ಲಕ್ಷ್ಮಣ!' ಎಂದು ಗಟ್ಟಿಯಾಗಿ ಕೂಗಿಬಿಡು (೨೦). ಅದನ್ನು ಕೇಳಿ ಲಕ್ಷ್ಮಣನೂ ಸಂಭ್ರಾಂತನಾಗಿ ರಾಮನಲ್ಲಿರುವ ಸ್ನೇಹದಿಂದಲೂ ಸೀತೆಯ ಒತ್ತಾಯದಿಂದಲೂ ರಾಮನನ್ನು ಹುಡುಕಿಕೊಂಡು ಹೋಗುವನು. ಹೀಗೆ ರಾಮಲಕ್ಷ್ಮಣರಿಬ್ಬರೂ ತೊಲಗಿಹೋದಮೇಲೆ, ಇಂದ್ರನು ಶಚಿಯನ್ನು ತಂದಂತೆ ನಾನು ಸೀತೆಯನ್ನು ಸುಖವಾಗಿ ಅಪಹರಿಸಿಕೊಂಡು ಬರುತ್ತೇನೆ (೨೧–೨೨). ಮಾರೀಚ, ಈ ರೀತಿಯಲ್ಲಿ ಇದೊಂದು ಕೆಲಸವನ್ನು ಮಾಡಿಕೊಟ್ಟು ನಿನಗೆ ಇಷ್ಟಬಂದಲ್ಲಿಗೆ ಹೋಗು. ಈ ಒಳ್ಳೆಯ ನಡತೆಗೆ ಮೆಚ್ಚಿ ಅರ್ಧರಾಜ್ಯವನ್ನು ನಿನಗೆ ಪಾರಿತೋಷಿಕವಾಗಿ ಕೊಡುತ್ತೇನೆ. ಸೌಮ್ಯ, ಈ ಕಾರ್ಯವನ್ನು ಸಾಧಿಸಿಕೊಡು. ಶುಭವಾಗಲಿ ! ನಾನು ರಥಾರೂಢನಾಗಿ ನಿನ್ನ ಹಿಂದೆಯೇ ದಂಡಕಾರಣ್ಯಕ್ಕೆ ಬರುತ್ತೇನೆ. ಯುದ್ಧವನ್ನೇ ಮಾಡದೆ ರಾಮನನ್ನು ವಂಚಿಸಿ ಸೀತೆಯನ್ನು ಪಡೆಯು

ಪ್ರಾಪ್ಯ ಸೀತಾಮಯುದ್ಧೇನ ವಂಚಯಿತ್ವಾ ತು ರಾಘವಮ್ ।
ಲಂಕಾಂ ಪ್ರತಿಗಮಿಷ್ಯಾಮಿ ಕೃತಕಾರ್ಯಃ ಸಹ ತ್ವಯಾ ॥ ೨೫

ನ ಚೇತ್ ಕರೋಷಿ ಮಾರೀಚ ಹನ್ಮಿ ತ್ವಾಮಹಮದ್ಯ ವೈ ।
ಏತತ್ ಕಾರ್ಯಮವಶ್ಯಂ ಮೇ ಬಲಾದಪಿ ಕರಿಷ್ಯಸಿ ॥ ೨೬

ರಾಜ್ಞೋ ಹಿ ಪ್ರತಿಕೂಲಸ್ಥೋ ನ ಜಾತು ಸುಖಮೇಧತೇ ॥

ಆಸಾದ್ಯಂ ತಂ ಜೀವಿತಸಂಶಯಸ್ತೇ
ಮೃತ್ಯುರ್ಧ್ರುವೋ ಹ್ಯದ್ಯ ಮಯಾ ವಿರುಧ್ಯ ।
ಏತದ್ಯಥಾವತ್ ಪ್ರತಿಗೃಹ್ಯ ಬುದ್ಧ್ಯಾ
ಯದತ್ರ ಪಥ್ಯಂ ಕುರು ತತ್ತಥಾ ತ್ವಮ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತ್ವಾರಿಂಶಃ ಸರ್ಗಃ

ವೆನು. ನನ್ನ ಸಂಕಲ್ಪವನ್ನು ಸಾಧಿಸಿಕೊಂಡು ನಿನ್ನೊಡನೆ ಲಂಕೆಗೆ ಹಿಂದಿರುಗುವೆನು (೨೩–೨೫). ಎಲೈ ಮಾರೀಚ, ನನ್ನ ಮಾತನ್ನು ನಡೆಸದಿದ್ದರೆ, ಇಗೋ, ಈಗಲೇ ನಿನ್ನನ್ನು ಕೊಂದುಹಾಕುತ್ತೇನೆ. ! ನನ್ನ ಬಲಾತ್ಕಾರಕ್ಕಾದರೂ ಮಣಿದು ನೀನು ಈ ಕೆಲಸವನ್ನು ಮಾಡಲೇಬೇಕು. ರಾಜನಿಗೆ ವಿರೋಧವಾಗಿ ವರ್ತಿಸತಕ್ಕವನು ಎಂದಿಗೂ ಸುಖದಿಂದ ಬಾಳಲಾರ (೨೬). ರಾಮನಿದ್ದಲ್ಲಿಗೆ ಹೋದರೆ ನೀನು ಒಂದು ವೇಳೆ ಬದುಕಿಬರುವ ಸಂಭವವಾದರೂ ಉಂಟು. ನನಗೆ ವಿರುದ್ಧವಾಗಿ ನಡೆದರೆ ಮಾತ್ರ ನಿನಗೆ ಮೃತ್ಯು ಕಟ್ಟಿಟ್ಟದ್ದು ! ಇದೆಲ್ಲವನ್ನೂ ಚೆನ್ನಾಗಿ ವಿಚಾರಮಾಡಿ ಯಾವುದು ಹಿತಕರವೋ ಅದರಂತೆ ನಡೆದುಕೊ" ಎಂದು ಹೇಳಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತನೆಯ ಸರ್ಗ

## ಏಕಚತ್ವಾರಿಂಶಃ ಸರ್ಗಃ

### ರಾವಣನಿಂದಾ

**ಆಜ್ಞಪ್ತೋ ರಾವಣೇನೇತ್ಥಂ ಪ್ರತಿಕೂಲಂ ಚ ರಾಜವತ್ ।**
**ಅಬ್ರವೀತ್ ಪರುಷಂ ವಾಕ್ಯಂ ನಿಶ್ಶಂಕೋ ರಾಕ್ಷಸಾಧಿಪಮ್ ॥ ೧**

**ಕೇನಾಯಮುಪದಿಷ್ಟಸ್ತೇ ವಿನಾಶಃ ಪಾಪಕರ್ಮಣಾ ।**
**ಸಪುತ್ರಸ್ಯ ಸರಾಷ್ಟ್ರಸ್ಯ ಸಾಮಾತ್ಯಸ್ಯ ನಿಶಾಚರ ॥ ೨**

**ಕಸ್ತ್ವಯಾ ಸುಖಿನಾ ರಾಜನ್ನಾಭಿನಂದತಿ ಪಾಪಕೃತ್ ।**
**ಕೇನೇದಮುಪದಿಷ್ಟಂ ತೇ ಮೃತ್ಯುದ್ವಾರಮುಪಾಯತಃ ॥ ೩**

**ಶತ್ರವಸ್ತವ ಸುವ್ಯಕ್ತಂ ಹೀನವೀರ್ಯಾ ನಿಶಾಚರಾಃ ।**
**ಇಚ್ಛಂತಿ ತ್ವಾಂ ವಿನಶ್ಯಂತಮುಪರುದ್ಧಂ ಬಲೀಯಸಾ ॥ ೪**

**ಕೇನೇದಮುಪದಿಷ್ಟಂ ತೇ ಕ್ಷುದ್ರೇಣಾಹಿತವಾದಿನಾ ।**
**ಯಸ್ತ್ವಾಮಿಚ್ಛತಿ ನಶ್ಯಂತಂ ಸ್ವಕೃತೇನ ನಿಶಾಚರ ॥ ೫**

### ಸರ್ಗ ೪೧

ಮಾರೀಚನು ಪುನಃ ರಾವಣನನ್ನು ನಿಂದಿಸಿ, ಸೀತಾಪಹರಣವು
ಅನರ್ಥಕಾರಿಯೆಂದು ತಿಳಿಸುವುದು

ರಾವಣನು ಮಾರೀಚನ ಇಚ್ಛೆಗೆ ವಿರುದ್ಧವಾಗಿ ರಾಜದರ್ಪದಿಂದ ಹೀಗೆ ಆಜ್ಞೆಯನ್ನಿತ್ತರೂ ಮಾರೀಚನು ಅಳುಕದೆ ಆ ರಾಕ್ಷಸೇಶ್ವರನನ್ನು ಕುರಿತು ಹೀಗೆಂದನು (೧) : " ರಾವಣ, ಯಾವ ಪಾಪಿಯು ನಿನಗೆ ಈ ದುರ್ಬೋಧನೆಯನ್ನು ಮಾಡಿದನು ? ನಿನ್ನ ಮಕ್ಕಳು, ನಿನ್ನ ರಾಷ್ಟ್ರ, ನಿನ್ನ ಮಂತ್ರಿಗಳು—ಎಲ್ಲರಿಗೂ ವಿನಾಶವನ್ನು ತಂದಿಡುವ ಮಾರ್ಗವಿದು. ನೀನು ಸುಖಿಯಾಗಿರುವುದನ್ನು ಕಂಡು ಯಾವ ಪಾಪಿಷ್ಠನಿಗೆ ಸಂತೋಷವಾಗದೆ ಇದ್ದಿರಬಹುದು ? ಯಾವನು ನಿನ್ನ ಮೃತ್ಯುವಿನ ಬಾಗಿಲನ್ನು ತೆರೆಸಲು ಈ ಹಂಚಿಕೆಯನ್ನು ಹೂಡಿರಬಹುದು ? (೨–೩). ಇದು ನಿನ್ನ ಶತ್ರುಗಳಾದ ಕೆಲವು ರಾಕ್ಷಸರ ಕೈವಾಡವೆಂಬುದು ಸ್ಪಷ್ಟ. ಅವರು ಸ್ವತಃ ಕೈಲಾಗದವರಾದ್ದರಿಂದ, ಬಲಾಢ್ಯನಾದ ವೀರನೊಬ್ಬನ ಆಕ್ರಮಣಕ್ಕೆ ನೀನು ತುತ್ತಾಗಲೆಂದು ಬಯಸಿದ್ದಾರೆ. ನಿನಗೆ ಕೇಡನ್ನು ಚಿಂತಿಸುವ ಯಾವ ನೀಚನು

ವಧ್ಯಾಃ ಖಲು ನ ಹನ್ಯಂತೇ ಸಚಿವಾಸ್ತವ ರಾವಣ ।
ಯೇ ತ್ವಾಮುತ್ಪಥಮಾರೂಢಂ ನ ನಿಗೃಹ್ಣಂತಿ ಸರ್ವಶಃ ॥ ೬
ಅಮಾತ್ಯೈಃ ಕಾಮವೃತ್ತೋ ಹಿ ರಾಜಾ ಕಾಪಥಮಾಶ್ರಿತಃ ।
ನಿಗ್ರಾಹ್ಯಃ ಸರ್ವಥಾ ಸದ್ಭಿರ್ನ ನಿಗ್ರಾಹ್ಯೋ ನಿಗೃಹ್ಯಸೇ ॥ ೭
ಧರ್ಮಮರ್ಥಂ ಚ ಕಾಮಂ ಚ ಯಶಶ್ಚ ಜಯತಾಂ ವರ ।
ಸ್ವಾಮಿಪ್ರಸಾದಾತ್ ಸಚಿವಾಃ ಪ್ರಾಪ್ನುವಂತಿ ನಿಶಾಚರ ॥ ೮
ವಿಪರ್ಯಯೇ ತು ತತ್ಸರ್ವಂ ವ್ಯರ್ಥಂ ಭವತಿ ರಾವಣ ।
ವ್ಯಸನಂ ಸ್ವಾಮಿವೈಗುಣ್ಯಾತ್ ಪ್ರಾಪ್ನುವಂತೀತರೇ ಜನಾಃ ॥ ೯
ರಾಜಮೂಲೋ ಹಿ ಧರ್ಮಶ್ಚ ಜಯಶ್ಚ ಜಯತಾಂ ವರ ।
ತಸ್ಮಾತ್ ಸರ್ವಾಸ್ವವಸ್ಥಾಸು ರಕ್ಷಿತವ್ಯಾ ನರಾಧಿಪಾಃ ॥ ೧೦
ರಾಜ್ಯಂ ಪಾಲಯಿತುಂ ಶಕ್ಯಂ ನ ತೀಕ್ಷ್ಣೇನ ನಿಶಾಚರ ।
ನ ಚಾಪಿ ಪ್ರತಿಕೂಲೇನ ನಾವಿನೀತೇನ ರಾಕ್ಷಸ ॥ ೧೧

---

ಈ ದುರ್ನೀತಿಯನ್ನು ಬೋಧಿಸಿದ್ದಾನು! ನಿನ್ನ ಕೃತ್ಯದಿಂದಲೇ ನೀನು ನಾಶವಾಗಬೇಕೆಂದು ಅವನು ಉದ್ದೇಶಿಸಿದ್ದಾನೆ (೪–೫). ರಾವಣ, ತಪ್ಪುದಾರಿಯನ್ನು ತುಳಿದಿರುವ ನಿನ್ನನ್ನು ನಿನ್ನ ಮಂತ್ರಿಗಳು ಸರ್ವಪ್ರಯತ್ನದಿಂದಲೂ ತಡೆಯಬೇಕಾಗಿತ್ತು. ಹಾಗೆ ತಡೆಯದಿರುವ ಮಂತ್ರಿಗಳು ವಧಾರ್ಹರು ಅವರನ್ನು ದಂಡಿಸದೆ ಬಿಟ್ಟಿರುವೆಯಲ್ಲ! (೬). ರಾಜನು ಸ್ವೇಚ್ಛೆಯಿಂದ ವರ್ತಿಸುತ್ತ ದುರ್ಮಾರ್ಗವನ್ನು ಹಿಡಿದರೆ, ಯೋಗ್ಯರಾದ ಅಮಾತ್ಯರು ಅವನನ್ನು ತಡೆಯಬೇಕು. ಹೀಗಿದ್ದರೂ ಅವರು ನಿನ್ನನ್ನು ತಡೆಯದೆ ಇದ್ದಾರೆ (೭). ಹೇ ವೀರಾಗ್ರೇಸರ, ಧರ್ಮಾರ್ಥಕಾಮಗಳೂ ಕೀರ್ತಿಯೂ ಮಂತ್ರಿಗಳಿಗೆ ತಮ್ಮ ಪ್ರಭುವಿನ ಸದ್ಗುಣದಿಂದಲೇ ದೊರೆಯುತ್ತವೆ. ಹಾಗಿಲ್ಲದೆ ಪ್ರಭುವಾದವನು ಗುಣಹೀನನಾಗಿ ದುರ್ಮಾರ್ಗಕ್ಕಿಳಿದರೆ, ಧರ್ಮ, ಅರ್ಥ ಮೊದಲಾದದ್ದು ಯಾವುದೂ ಮಂತ್ರಿಗಳಿಗೆ ಸಿದ್ಧಿಸುವುದಿಲ್ಲ. ಅಷ್ಟೇ ಅಲ್ಲ, ಅವರೆಲ್ಲರನ್ನೂ ನಂಬಿದ ಇತರರೂ ಹಾಳಾಗುತ್ತಾರೆ (೮–೯). ಧರ್ಮವಾಗಲಿ ಜಯವಾಗಲಿ ರಾಜನಿಂದಲೇ ಸಾಧ್ಯವಾಗಬೇಕು. ಆದ್ದರಿಂದ ಎಲ್ಲ ಸಂದರ್ಭಗಳಲ್ಲಿಯೂ ರಾಜನ ರಕ್ಷಣೆಯು ಜನರ ಕರ್ತವ್ಯವಾಗಿದೆ. ರಾಕ್ಷಸೇಶ್ವರ, ಉಗ್ರಸ್ವಭಾವದವನು ರಾಜ್ಯವನ್ನು ಪಾಲಿಸಲಾರ. ಪ್ರಜಾವಿರೋಧಿಗೂ ದುರ್ವಿನೀತನಿಗೂ ಸಹ ರಾಜ್ಯಪಾಲನೆ ಶಕ್ಯವಲ್ಲ (೧೦–೧೧).

ಯೇ ತೀಕ್ಷ್ಣಮಂತ್ರಾಃ ಸಚಿವಾ ಭಜ್ಯಂತೇ ಸಹ ತೇನ ವೈ ।
ವಿಷಮೇಷು ರಥಾಃ ಶೀಘ್ರಾ ಮಂದಸಾರಥಯೋ ಯಥಾ ॥ ೧೨

ಬಹವಃ ಸಾಧವೋ ಲೋಕೇ ಯುಕ್ತಾ ಧರ್ಮಮನುಷ್ಠಿತಾಃ ।
ಪರೇಷಾಮಪರಾಧೇನ ವಿನಷ್ಟಾಃ ಸಪರಿಚ್ಛದಾಃ ॥ ೧೩

ಸ್ವಾಮಿನಾ ಪ್ರತಿಕೂಲೇನ ಪ್ರಜಾಸ್ತೀಕ್ಷ್ಣೇನ ರಾವಣ ।
ರಕ್ಷ್ಯಮಾಣಾ ನ ವರ್ಧಂತೇ ಮೇಷಾ ಗೋಮಾಯುನಾ ಯಥಾ ॥ ೧೪

ಅವಶ್ಯಂ ವಿನಶಿಷ್ಯಂತಿ ಸರ್ವೇ ರಾವಣ ರಾಕ್ಷಸಾಃ ।
ಯೇಷಾಂ ತ್ವಂ ಕರ್ಕಶೋ ರಾಜಾ ದುರ್ಬುದ್ಧಿರಜಿತೇಂದ್ರಿಯಃ ॥ ೧೫

ತದಿದಂ ಕಾಕತಾಲೀಯಂ ಘೋರಮಾಸಾದಿತಂ ಮಯಾ ।
ಅತ್ರೈವ ಶೋಚನೀಯಸ್ತ್ವಂ ಸಸೈನ್ಯೋ ವಿನಶಿಷ್ಯಸಿ ॥ ೧೬

ಮಾಂ ನಿಹತ್ಯ ತು ರಾಮೋಽಸಾವಚಿರಾತ್ತ್ವಾಂ ವಧಿಷ್ಯತಿ ।
ಅನೇನ ಕೃತಕೃತ್ಯೋಽಸ್ಮಿ ಮ್ರಿಯೇ ಯದರಿಣಾ ಹತಃ ॥ ೧೭

---

ಆದರೆ ಮಂತ್ರಿಗಳು ಉಗ್ರವಾದಿಗಳಾಗಿ ತೀಕ್ಷ್ಣಮಾರ್ಗವನ್ನು ಬೋಧಿಸ ತಕ್ಕವರಾದರೆ, ತಮ್ಮ ಪ್ರಭುವಿನೊಡನೆ ತಾವೂ ನಾಶಹೊಂದುತ್ತಾರೆ. ಸಾಮರ್ಥ್ಯ ವಿಲ್ಲದ ಸಾರಥಿಯು ಹಳ್ಳತಿಟ್ಟುಗಳಲ್ಲಿ ವೇಗದಿಂದ ಓಡಿಸುವ ರಥಗಳಂತೆ ಉರುಳಿ ಬೀಳುತ್ತಾರೆ (೧೨). ಧರ್ಮಜ್ಞರಾದ ಸಜ್ಜನರೂ ಸಹ ಕಂಡವರ ಮಾತನ್ನು ಕೇಳಿ ಈ ಲೋಕದಲ್ಲಿ ಹಾಳಾಗಿಹೋಗಿದ್ದಾರೆ. ಇತರರ ತಪ್ಪಿನಿಂದ ಪುತ್ರಮಿತ್ರಾದಿ ಪರಿವಾರದೊಂದಿಗೆ ನಾಶವಾಗಿದ್ದಾರೆ. ರಾವಣ, ಜನವಿರೋಧಿಯೂ ಕಠೋರನೂ ಆದ ರಾಜನ ಆಳ್ವಿಕೆಯಲ್ಲಿ ಪ್ರಜೆಗಳು ಏಳಿಗೆ ಹೊಂದುವುದಿಲ್ಲ. ಅವರು ನರಿಯ ಕಾವಲಿನಲ್ಲಿರುವ ಕುರಿಗಳಂತಾಗುವರು ! (೧೩–೧೪). ಈಗ ನಿನ್ನ ಆಳ್ವಿಕೆ ಯಲ್ಲಿರುವ ಸಮಸ್ತ ರಾಕ್ಷಸರೂ ನಾಶಹೊಂದುವುದು ನಿಶ್ಚಯ. ಏಕೆಂದರೆ, ನೀನು ಕರ್ಕಶನೂ ದುರ್ಬುದ್ಧಿಯೂ ಆದ ಪ್ರಭುವಾಗಿದ್ದೀಯೆ ; ಇಂದ್ರಿಯಗಳನ್ನು ನೀನು ಗೆದ್ದಿಲ್ಲ (೧೫). ನನಗಂತೂ ಕಾಕತಾಳೀಯವಾಗಿ* ಈ ಘೋರ ವಿಪತ್ತು ಒದಗಿ ಬಿಟ್ಟಿತು. ಆದರೆ (ರಾಕ್ಷಸೇಶ್ವರನಾದ) ನೀನು ಸೇನಾಸಮೇತನಾಗಿ ನಾಶವಾಗುವೆ ಯಲ್ಲಾ ಎಂದು ನನಗೆ ದುಃಖವಾಗುತ್ತಿದೆ (೧೬). ರಾಮನು ನನ್ನನ್ನು ಕೊಂದು,

---

* ಅನುಬಂಧವನ್ನು ನೋಡಿ.

ದರ್ಶನಾದೇವ ರಾಮಸ್ಯ ಹತಂ ಮಾಮವಧಾರಯ ।
ಆತ್ಮಾನಂ ಚ ಹತಂ ವಿದ್ಧಿ ಹೃತ್ವಾ ಸೀತಾಂ ಸಬಾಂಧವಮ್ ॥ ೧೮
ಆನಯಿಷ್ಯಸಿ ಚೇತ್ ಸೀತಾಮಾಶ್ರಮಾತ್ ಸಹಿತೋ ಮಯಾ ।
ನೈವ ತ್ವಮಸಿ ನಾಹಂ ಚ ನೈವ ಲಂಕಾ ನ ರಾಕ್ಷಸಾಃ ॥ ೧೯

ನಿವಾರ್ಯಮಾಣಸ್ತು ಮಯಾ ಹಿತೈಷಿಣಾ
ನ ಮೃಷ್ಯಸೇ ವಾಕ್ಯಮಿದಂ ನಿಶಾಚರ ।
ಪರೇತಕಲ್ಪಾ ಹಿ ಗತಾಯುಷೋ ನರಾ
ಹಿತಂ ನ ಗೃಹ್ಣಂತಿ ಸುಹೃದ್ಭಿರೀರಿತಮ್ ॥ ೨೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕಚತ್ವಾರಿಂಶಃ ಸರ್ಗಃ

ಸ್ವಲ್ಪಕಾಲದಲ್ಲಿ ನಿನ್ನನ್ನೂ ಸಂಹರಿಸುವನು. ನನ್ನ ಶತ್ರುವಿನಿಂದಲೇ ನಾನು ಸಾಯುವೆನೆಂದು ಸಮಾಧಾನಪಟ್ಟುಕೊಳ್ಳುತ್ತೇನೆ. ಅಷ್ಟರಿಂದಲೇ ನಾನು ಧನ್ಯ* ರಾಮನ ಕಣ್ಣಿಗೆ ಬಿದ್ದರೆ ಸಾಕು, ನಾನು ಸತ್ತೆನೆಂದೇ ತಿಳಿ. ಸೀತೆಯನ್ನು ಅಪಹರಿಸಿದರೆ ಸಾಕು, ಬಂಧುಬಾಂಧವರೊಡನೆ ನೀನು ಸತ್ತೆಯೆಂದು ತಿಳಿ (೧೭–೧೮). ರಾವಣ, ನನ್ನೊಡನೆ ಹೋಗಿ ಸೀತೆಯನ್ನು ಅವಳ ಆಶ್ರಮದಿಂದ ಅಪಹರಿಸಿ ತರುವೆಯಲ್ಲವೆ ? ಹಾಗೆ ಮಾಡಿದರೆ, ನೀನೂ ಉಳಿಯುವುದಿಲ್ಲ, ನಾನೂ ಉಳಿಯುವುದಿಲ್ಲ. ಈ ಲಂಕೆ, ಈ ರಾಕ್ಷಸರು—ಯಾರಿಗೂ ಉಳಿಗಾಲವಿಲ್ಲ (೧೯). ರಾಕ್ಷಸೇಂದ್ರ, ನಿನಗೆ ನಾನು ಹಿತೈಷಿಯಾಗಿ ಈ ಕೃತ್ಯವು ಬೇಡವೆಂದು ಸಾರಿಸಾರಿ ಹೇಳಿದರೂ ನನ್ನ ಮಾತನ್ನು ನೀನು ತಾಳ್ಮೆಯಿಂದ ಗ್ರಹಿಸುತ್ತಿಲ್ಲ. ಆಯುಸ್ಸು ಮುಗಿದು ಪರಲೋಕಕ್ಕೆ ಹೊರಟವರಿಗೆ ಸ್ನೇಹಿತರ ಹಿತೋಪದೇಶವು ಹಿಡಿಸುವುದಿಲ್ಲ" ಎಂದನು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೊಂದನೆಯ ಸರ್ಗ

---

* ರಾವಣನಿಂದ ಕೊಲ್ಲಲ್ಪಡುವುದು ದುರ್ಮರಣ, ಶ್ರೀರಾಮನಿಂದ ಕೊಲ್ಲಲ್ಪಡುವುದು ವೀರೋಚಿತವಾದ ಮರಣ ಎಂದು ಅಭಿಪ್ರಾಯ.

## ದ್ವಿಚತ್ವಾರಿಂಶಃ ಸರ್ಗಃ

### ಸ್ವರ್ಣಮೃಗಪ್ರೇಕ್ಷಣಮ್

ಏವಮುಕ್ತ್ವಾ ತು ವಚನಂ ಮಾರೀಚೋ ರಾವಣಂ ತತಃ ।
ಗಚ್ಛಾವೇತ್ಯಬ್ರವೀದ್ದೀನೋ ಭಯಾದ್ರಾತ್ರಿಂಚರಪ್ರಭೋಃ ॥ ೧

ದೃಷ್ಟಃ ಸೋಽಹಂ ಪುನಸ್ತೇನ ಶರಚಾಪಾಸಿಧಾರಿಣಾ ।
ಮದ್ವಧೋದ್ಯತಶಸ್ತ್ರೇಣ ವಿನಷ್ಟಂ ಜೀವಿತಂ ಚ ಮೇ ॥ ೨

ನ ಹಿ ರಾಮಂ ಪರಾಕ್ರಮ್ಯ ಜೀವನ್ ಪ್ರತಿನಿವರ್ತತೇ ।
ವರ್ತತೇ ಪ್ರತಿರೂಪೋಽಸೌ ಯಮದಂಡಹತಸ್ಯ ತೇ ॥ ೩

ಕಿಂ ನು ಶಕ್ಯಂ ಮಯಾ ಕರ್ತುಮೇವಂ ತ್ವಯಿ ದುರಾತ್ಮನಿ ।
ಏಷ ಗಚ್ಛಾಮ್ಯಹಂ ತಾತ ಸ್ವಸ್ತಿ ತೇಽಸ್ತು ನಿಶಾಚರ ॥ ೪

ಪ್ರಹೃಷ್ಟಸ್ತ್ವಭವತ್ತೇನ ವಚನೇನ ಸ ರಾವಣಃ ।
ಪರಿಷ್ವಜ್ಯ ಸುಸಂಶ್ಲಿಷ್ಟಮಿದಂ ವಚನಮಬ್ರವೀತ್ ॥ ೫

### ಸರ್ಗ ೪೨

ಮಾರೀಚನು ರಾವಣನೊಡನೆ ಹೊರಟು ಶ್ರೀರಾಮನ ಆಶ್ರಮದ ಸಮೀಪಕ್ಕೆ ಬರುವುದು. ಮೃಗರೂಪಧಾರಣೆ. ಸೀತಾದೇವಿಯು ಮೃಗವನ್ನು ನೋಡಿ ಆಶ್ಚರ್ಯಪಡುವುದು.

ಹೀಗೆ ಮಾರೀಚನು ಕಠೋರವಚನವನ್ನು ಆಡಿದರೂ ಕಡೆಯಲ್ಲಿ ರಾಕ್ಷಸ ರಾಜನಿಗೆ ಅಂಜಿ 'ಹಾಗಾದರೆ ಹೋಗೋಣ!' ಎಂದು ದೈನ್ಯದಿಂದ ಹೇಳಿದನು. ಆತನು "ರಾವಣ, ರಾಮನು ಧನುರ್ಬಾಣಗಳನ್ನು ಹಿಡಿದು ನನ್ನನ್ನು ಕೊಲ್ಲುವ ಉದ್ದೇಶದಿಂದ ನೋಡಿದರೆ ಸಾಕು, ನಾನು ಸತ್ತಂತೆಯೇ (೧–೨). ರಾಮ ನನ್ನೆದುರಿಸಿದವನು ಎಂದಿಗೂ ಜೀವಸಹಿತ ಹಿಂದಿರುಗಲಾರ. ಯಮದಂಡದ ಹೊಡೆತಕ್ಕೆ ಸಿಕ್ಕಿರುವ ನಿನ್ನಂತೆಯೇ ನನ್ನ ಪಾಡೂ ಆಗಿದೆ. ದುರಾತ್ಮನಾದ ನೀನು ಹೀಗೆ ಹಠತೊಟ್ಟಿರುವಾಗ ನನ್ನಿಂದ ಏನಾದೀತು? ಇದೋ ಹೊರಟಿದ್ದೇನೆ. ನಿನಗೆ ಶುಭವಾಗಲಿ!" ಎಂದು ನುಡಿದನು (೩–೪). ಆ ನುಡಿಯನ್ನು ಕೇಳಿ ರಾವಣನು ಹರ್ಷದಿಂದ ಉಬ್ಬಿದನು. ಅವನು ಮಾರೀಚನನ್ನು ಬಿಗಿದಪ್ಪಿ

ಏತಚ್ಛೌಂಡೀರ್ಯಯುಕ್ತಂ ತೇ ಮಚ್ಛಂದಾದಿವ ಭಾಷಿತಮ್ ।
ಇದಾನೀಮಸಿ ಮಾರೀಚಃ ಪೂರ್ವಮನ್ಯೋ ನಿಶಾಚರಃ ॥　　೬

ಆರುಹ್ಯತಾಮಯಂ ಶೀಘ್ರಂ ರಥೋ ರತ್ನವಿಭೂಷಿತಃ ।
ಮಯಾ ಸಹ ತಥಾ ಯುಕ್ತಂ ಪಿಶಾಚವದನೈಃ ಖರೈಃ ॥　　೭

ಪ್ರಲೋಭಯಿತ್ವಾ ವೈದೇಹೀಂ ಯಥೇಷ್ಟಂ ಗಂತುಮರ್ಹಸಿ ।
ತಾಂ ಶೂನ್ಯೇ ಪ್ರಸಭಂ ಸೀತಾಮಾನಯಿಷ್ಯಾಮಿ ಮೈಥಿಲೀಮ್ ॥　　೮

ತತೋ ರಾವಣಮಾರೀಚೌ ವಿಮಾನಮಿವ ತಂ ರಥಮ್ ।
ಆರುಹ್ಯ ಯಯತುಃ ಶೀಘ್ರಂ ತಸ್ಮಾದಾಶ್ರಮಮಂಡಲಾತ್ ॥　　೯

ತಥೈವ ತತ್ರ ಪಶ್ಯಂತೌ ಪತ್ತನಾನಿ ವನಾನಿ ಚ ।
ಗಿರೀಂಶ್ಚ ಸರಿತಃ ಸರ್ವಾ ರಾಷ್ಟ್ರಾಣಿ ನಗರಾಣಿ ಚ ॥　　೧೦

ಸಮೇತ್ಯ ದಂಡಕಾರಣ್ಯಂ ರಾಘವಸ್ಯಾಶ್ರಮಂ ತತಃ ।
ದದರ್ಶ ಸಹಮಾರೀಚೋ ರಾವಣೋ ರಾಕ್ಷಸಾಧಿಪಃ ॥　　೧೧

---

ಕೊಂಡು "ಭಲಾ! ಇದೀಗ ಗಂಡಸುತನದ ಮಾತು! ನನ್ನ ಅಭಿಪ್ರಾಯಕ್ಕೆ ತಕ್ಕಂತಹ ಮಾತು! ಈಗ ನೀನು ನಿಜವಾದ ಮಾರೀಚನಾದೆ! ಇಷ್ಟುಹೊತ್ತು ಬೇರೊಬ್ಬ ರಾಕ್ಷಸನಾಗಿದ್ದೆ! (೫–೬). ರತ್ನಭೂಷಿತವಾದ ಈ ರಥವು ಪಿಶಾಚ ಮುಖಗಳಾದ ಹೇಸರಗತ್ತೆಗಳನ್ನು ಹೂಡಿ ಸಜ್ಜಾಗಿದೆ. ನನ್ನೊಡನೆ ಬೇಗನೆ ಈ ರಥವನ್ನೇರು. (ನಾನು ಹೇಳಿದಂತೆ) ಸೀತೆಗೆ ಆಸೆಯನ್ನು ಹುಟ್ಟಿಸಿ ಎಲ್ಲಿಗೆ ಬೇಕಾದರೂ ಹೊರಟುಹೋಗು. (ರಾಮಲಕ್ಷ್ಮಣರಿಬ್ಬರೂ ಹೊರಟುಹೋಗಿ) ಆಶ್ರಮವು ಶೂನ್ಯವಾದೊಡನೆ ನಾನು ಬಲಾತ್ಕಾರದಿಂದ ಸೀತೆಯನ್ನು ತಂದು ಬಿಡುವೆನು" ಎಂದನು (೭–೮) ಅನಂತರ ರಾವಣಮಾರೀಚರಿಬ್ಬರೂ ವಿಮಾನ ದಂತಿದ್ದ ಆ ರಥವನ್ನೇರಿ ಮಾರೀಚಾಶ್ರಮದಿಂದ ಹೊರಟು ವೇಗದಿಂದ ಪ್ರಯಾಣ ಮಾಡಿದರು. ದಾರಿಯಲ್ಲಿ ಪಟ್ಟಣ, ವನ, ಬೆಟ್ಟ, ನದಿ, ವಿವಿಧರಾಜ್ಯಗಳು, ನಗರ*—ಇವೆಲ್ಲವನ್ನೂ ನೋಡುತ್ತ ಹೋದರು (೯–೧೦). ಹೀಗೆ ರಾಕ್ಷಸಾಧಿಪ ನಾದ ರಾವಣನು ಮಾರೀಚನೊಡನೆ ದಂಡಕಾರಣ್ಯಕ್ಕೆ ಬಂದು ರಾಘವನ ಆಶ್ರಮ

---

* ಅನುಬಂಧವನ್ನು ನೋಡಿ.

ಅವತೀರ್ಯ ರಥಾತ್ತಸ್ಮಾತ್ತತಃ ಕಾಂಚನಭೂಷಣಾತ್ ।
ಹಸ್ತೇ ಗೃಹೀತ್ವಾ ಮಾರೀಚಂ ರಾವಣೋ ವಾಕ್ಯಮಬ್ರವೀತ್ ॥ ೧೨

ಏತದ್ರಾಮಾಶ್ರಮಪದಂ ದೃಶ್ಯತೇ ಕದಲೀವೃತಮ್ ।
ಕ್ರಿಯತಾಂ ತತ್ ಸಖೇ ಶೀಘ್ರಂ ಯದರ್ಥಂ ವಯಮಾಗತಾಃ ॥ ೧೩

ಸ ರಾವಣವಚಃ ಶ್ರುತ್ವಾ ಮಾರೀಚೋ ರಾಕ್ಷಸಸ್ತದಾ ।
ಮೃಗೋ ಭೂತ್ವಾಶ್ರಮದ್ವಾರಿ ರಾಮಸ್ಯ ವಿಚಚಾರ ಹ ॥ ೧೪

ಸ ತು ರೂಪಂ ಸಮಾಸ್ಥಾಯ ಮಹದದ್ಭುತದರ್ಶನಮ್ ।
ಮಣಿಪ್ರವರಶೃಂಗಾಗ್ರಃ ಸಿತಾಸಿತಮುಖಾಕೃತಿಃ ॥ ೧೫

ರಕ್ತಪದ್ಮೋತ್ಪಲಮುಖ ಇಂದ್ರನೀಲೋತ್ಪಲಶ್ರವಾಃ ।
ಕಿಂಚಿದಭ್ಯುನ್ನತಗ್ರೀವ ಇಂದ್ರನೀಲದಲಾಧರಃ ॥ ೧೬

ಕುಂದೇಂದುವಜ್ರಸಂಕಾಶಮುದರಂ ಚಾಸ್ಯ ಭಾಸ್ವರಮ್ ।
ಮಧೂಕನಿಭಪಾರ್ಶ್ವಶ್ಚ ಪದ್ಮಕಿಂಜಲ್ಕಸಂನಿಭಃ ॥ ೧೭

---

ವನ್ನು ಕಂಡನು. ಆಮೇಲೆ ರಾವಣನು ಸುವರ್ಣಮಯವಾದ ರಥದಿಂದಿಳಿದು, ಮಾರೀಚನ ಕೈಯನ್ನು ಹಿಡಿದುಕೊಂಡು "ಅಯ್ಯಾ ಮಿತ್ರ, ಬಾಳೆಯತೋಟದಿಂದ ಪರಿವೃತವಾಗಿ ಕಾಣಿಸುತ್ತಿರುವ ಆಶ್ರಮವೇ ರಾಮನದು. ನಾವು ಯಾವುದಕ್ಕಾಗಿ ಇಲ್ಲಿಗೆ ಬಂದೆವೊ ಆ ಕಾರ್ಯವನ್ನು ಬೇಗನೆ ನಿರ್ವಹಿಸು" ಎಂದನು (೧೧–೧೩). ಆಗ ಮಾರೀಚನು ರಾವಣನ ಹೇಳಿಕೆಯಂತೆ ಜಿಂಕೆಯ ರೂಪವನ್ನು ತಾಳಿ ಶ್ರೀರಾಮನ ಆಶ್ರಮದ ಬಳಿಯಲ್ಲಿ ಸುಳಿಯತೊಡಗಿದನು. ನೋಡಲು ಅತ್ಯದ್ಭುತ ವಾದ ಜಿಂಕೆಯ ರೂಪವನ್ನು ಮಾರೀಚನು ಧರಿಸಿದನು. ಆ ಜಿಂಕೆಗೆ ಇಂದ್ರನೀಲ ಮಣಿಯಂಥ ಕೊಂಬುಗಳಿದ್ದವು. ಮುಖದಲ್ಲಿ ಬೆಳ್ಳಗೂ ಕಪ್ಪಗೂ ಇರುವ ಸುಂದರ ರೇಖೆಗಳಿದ್ದವು (೧೪–೧೫). ಮುಖದ ಒಂದು ಪಾರ್ಶ್ವವು ಕೆಂಪು ಕಮಲ ದಂತೆಯೂ ಇನ್ನೊಂದು ಪಾರ್ಶ್ವವು ನೀಲೋತ್ಪಲದಂತೆಯೂ ಇದ್ದವು. ಕಿವಿಗಳು ಇಂದ್ರನೀಲಮಣಿಯಂತೆ ಕಪ್ಪಾಗಿ ಇಂದೀವರದಳಗಳಂತಿದ್ದವು. ಕತ್ತು ಸ್ವಲ್ಪ ನೀಳವಾಗಿ ಮೇಲಕ್ಕೆ ಚಾಚಿಕೊಂಡಿತ್ತು. ತುಟಿಯು ಇಂದ್ರನೀಲಮಣಿಯಂತೆ ಹೊಳೆಯುತ್ತಿದ್ದಿತು (೧೬). ಆ ಜಿಂಕೆಯ ಉದರವು ಮಲ್ಲಿಗೆಯಂತೆ–ಚಂದ್ರನಂತೆ-ವಜ್ರದಂತೆ ಮಿನುಗುತ್ತಿತ್ತು. ಅದರ ಪಕ್ಕೆಗಳು ಹಿಪ್ಪೆಯ ಹೂವಿನಂತೆ ಮನೋಜ್ಞ

ವೈಡೂರ್ಯಸಂಕಾಶಖುರಸ್ತನುಜಂಘಃ ಸುಸಂಹತಃ ।
ಇಂದ್ರಾಯುಧಸವರ್ಣೇನ ಪುಚ್ಛೇನೋರ್ಧ್ವಂ ವಿರಾಜತಾ ॥ ೧೮

ಮನೋಹರಃ ಸ್ನಿಗ್ಧವರ್ಣೋ ರತ್ನೈರ್ನಾನಾವಿಧೈರ್ವೃತಃ ।
ಕ್ಷಣೇನ ರಾಕ್ಷಸೋ ಜಾತೋ ಮೃಗಃ ಪರಮಶೋಭನಃ ॥ ೧೯

ವನಂ ಪ್ರಜ್ವಲಯನ್ ರಮ್ಯಂ ರಾಮಾಶ್ರಮಪದಂ ಚ ತತ್ ।
ಮನೋಹರಂ ದರ್ಶನೀಯಂ ರೂಪಂ ಕೃತ್ವಾ ಸ ರಾಕ್ಷಸಃ ॥ ೨೦

ಪ್ರಲೋಭನಾರ್ಥಂ ವೈದೇಹ್ಯಾ ನಾನಾಧಾತುವಿಚಿತ್ರಿತಮ್ ।
ವಿಚರನ್ ಗಚ್ಛತೇ ತಸ್ಮಾಚ್ಛಾದ್ವಲಾನಿ ಸಮಂತತಃ ॥ ೨೧

ರೂಪ್ಯೈರ್ಬಿಂದುಶತೈಶ್ಚಿತ್ರೋ ಭೂತ್ವಾ ಸ ಪ್ರಿಯದರ್ಶನಃ ।
ವಿಟಪೀನಾಂ ಕಿಸಲಯಾನ್ ಭಂಕ್ತ್ವಾದನ್ ವಿಚಚಾರ ಹ ॥ ೨೨

---

ವಾಗಿದ್ದವು. ಆ ಮೃಗದ ಇತರ ದೇಹಭಾಗವು ಕಮಲದ ಕೇಸರಗಳ ಬಣ್ಣವಾಗಿತ್ತು (೧೭). ಅದರ ಕಾಲ್ಗೊರಸುಗಳು ವೈಡೂರ್ಯಮಣಿಯಂತೆ ಹೊಳೆಯುತ್ತಿದ್ದವು. ಮೊಳಕಾಲು ತೆಳ್ಳಗಿದ್ದಿತಲ್ಲದೆ ಅವಯವಗಳೆಲ್ಲವೂ ಮಾಟವಾಗಿ ಮುದ್ದಾಗಿದ್ದವು. ಕಾಮನಬಿಲ್ಲಿನಂತೆ ವಿವಿಧವರ್ಣಗಳಿಂದ ವಿರಾಜಿಸುತ್ತಿದ್ದ ಬಾಲವನ್ನು ಜಿಂಕೆಯು ಮೇಲಕ್ಕೆ ಎತ್ತಿಕೊಂಡಿತ್ತು (೧೮). ವಿವಿಧ ರತ್ನರಾಶಿಗಳಿಂದ ಚಿತ್ರಿತವಾದಂತೆ ಕಾಣುತ್ತಿದ್ದ ಆ ಮೃಗವು ನುಣುಪಾದ ಮೈಯುಳ್ಳದ್ದಾಗಿ ಮನೋಹರವಾಗಿತ್ತು. ಈ ರೀತಿಯಲ್ಲಿ ಆ ರಾಕ್ಷಸನು ಒಂದು ಕ್ಷಣದಲ್ಲಿ ಬಹಳ ಮುದ್ದಾದ ಮೃಗವಾಗಿಬಿಟ್ಟನು (೧೯). ಹೀಗೆ ಆ ಮಾರೀಚನು ನೋಡಬೇಕಾದಂಥ ಮನೋಹರವಾದ ಮೃಗರೂಪವನ್ನು ಧರಿಸಿ ಆ ವನವನ್ನೂ ಶ್ರೀರಾಮನ ಆಶ್ರಮ ಪ್ರದೇಶವನ್ನೂ ಬೆಳಗಿಸುತ್ತ ತಿರುಗಾಡಿದನು. ಅವನು ವೈದೇಹಿಯನ್ನು ಮೋಸಗೊಳಿಸುವುದಕ್ಕಾಗಿ ವಿವಿಧವರ್ಣದ ರೂಪವನ್ನು ತಳೆದಿದ್ದನು. ಆಶ್ರಮದ ಸುತ್ತಲೂ ಇದ್ದ ಹುಲ್ಲುಗಾವಲಿನಲ್ಲಿ ಹುಲ್ಲುಮೇಯುವಂತೆ ನಟಿಸುತ್ತ ಸಂಚರಿಸಿದನು (೨೦–೨೧). ಆ ಮೃಗವು ಬೆಳ್ಳಿಯಂತಿರುವ ನೂರಾರು ಬಿಳಿಯ ಚುಕ್ಕೆಗಳಿಂದ ಕೂಡಿ ಅಂದವಾಗಿತ್ತು. ಅದು ಗಿಡಗಳ ಚಿಗುರೆಲೆಗಳನ್ನು ಕಿತ್ತು ತಿನ್ನುತ್ತ

ಕದಲೀಗೃಹಕಂ ಗತ್ವಾ ಕರ್ಣಿಕಾರಾನಿತಸ್ತತಃ ।
ಸಮಾಶ್ರಯನ್ ಮಂದಗತಿಂ ಸೀತಾಸಂದರ್ಶನಂ ತಥಾ ॥ ೨೩

ರಾಜೀವಚಿತ್ರಪೃಷ್ಠಃ ಸ ವಿರರಾಜ ಮಹಾಮೃಗಃ ।
ರಾಮಾಶ್ರಮಪದಾಭ್ಯಾಶೇ ವಿಚಚಾರ ಯಥಾಸುಖಮ್ ॥ ೨೪

ಪುನರ್ಗತ್ವಾ ನಿವೃತ್ತಶ್ಚ ವಿಚಚಾರ ಮೃಗೋತ್ತಮಃ ।
ಗತ್ವಾ ಮುಹೂರ್ತಂ ತ್ವರಯಾ ಪುನಃ ಪ್ರತಿನಿವರ್ತತೇ ॥ ೨೫

ವಿಕ್ರೀಡಂಶ್ಚ ಕ್ವಚಿದ್ಭೂಮೌ ಪುನರೇವ ನಿಷೀದತಿ ।
ಆಶ್ರಮದ್ವಾರಮಾಗಮ್ಯ ಮೃಗಯೂಥಾನಿ ಗಚ್ಛತಿ ॥ ೨೬

ಮೃಗಯೂಥೈರನುಗತಃ ಪುನರೇವ ನಿವರ್ತತೇ ।
ಸೀತಾದರ್ಶನಮಾಕಾಂಕ್ಷನ್ ರಾಕ್ಷಸೋ ಮೃಗತಾಂ ಗತಃ ॥ ೨೭

ಪರಿಭ್ರಮತಿ ಚಿತ್ರಾಣಿ ಮಂಡಲಾನಿ ವಿನಿಷ್ಪತನ್ ।
ಸಮುದ್ವೀಕ್ಷ್ಯ ಚ ತಂ ಸರ್ವೇ ಮೃಗಾ ಹ್ಯನ್ಯೇ ವನೇಚರಾಃ ॥ ೨೮

---

ಅಲೆಯುತ್ತಿತ್ತು. ಆ ಜಿಂಕೆಯು ಬಾಳೆಯತೋಟಕ್ಕೆ ಹೋಗಿ, ಅಲ್ಲಿಂದ ಕರ್ಣಿಕಾರಗಿಡಗಳ ಮಧ್ಯದಲ್ಲಿ ಸುತ್ತಿ, ಸೀತೆಯು ಕಾಣಬಹುದಾದ ಸ್ಥಳಕ್ಕೆ ಮೆಲ್ಲಗೆ ಬಂದಿತು (೨೨-೨೩). ತಾವರೆಯ ಹೂವಿನಂತಿದ್ದ ಅದರ ಬೆನ್ನು ವಿಸ್ಮಯಕರವಾಗಿತ್ತು. ಆ ಮೃಗವು ಶ್ರೀರಾಮನ ಪರ್ಣಶಾಲೆಯ ಸಮೀಪದಲ್ಲಿ ಸ್ವೇಚ್ಛೆಯಿಂದ ಸಂಚರಿಸಲಾರಂಭಿಸಿತು (೨೪). ಅದು ಒಂದುಸಲ ಹೊರಟುಹೋಗುವುದು, ಮತ್ತೆ ಬರುವುದು, ಒಂದು ಕ್ಷಣ ತ್ವರೆಯಿಂದ ಓಡುತ್ತ ಹೋಗುವುದು, ಪುನಃ ಹಿಂದಿರುಗುವುದು, ಅಲ್ಲಿಯೇ ಆಟವಾಡುವುದು, ನೆಲದಮೇಲೆ ಮಲಗುವುದು. ಆಶ್ರಮದ ಬಾಗಿಲಿಗೆ ಹೋಗಿ ಮತ್ತೆ ಬಂದು ಇತರ ಮೃಗಗಳ ಗುಂಪಿನಲ್ಲಿ ಸೇರುವುದು (೨೫-೨೬). ಆ ಮೃಗಗಳೊಡನೆ ಅಲೆದು ಪುನಃ ಅವುಗಳೊಡನೆ ಆಶ್ರಮದ ಬಾಗಿಲಿಗೆ ಬರುವುದು—ಈ ರೀತಿಯಲ್ಲಿ ಮಾರೀಚನು ಮಾಯಾಮೃಗವಾಗಿ, ತನ್ನನ್ನು ಸೀತೆಯು ನೋಡಲೆಂದು ಆಟವಾಡಿದನು (೨೭). ಚಿತ್ರಗತಿಯಿಂದ ಮಂಡಲಾಕಾರವಾಗಿ ಸುತ್ತಿದನು. ವನದಲ್ಲಿದ್ದ ಇತರ ಮೃಗಗಳು ಆ ಜಿಂಕೆಯನ್ನು ಕಂಡು ಸಮೀಪಕ್ಕೆ ಬಂದು ಮೂಸಿನೋಡಿ ಕೂಡಲೇ ದಶದಿಕ್ಕುಗಳಿಗೆ

ಉಪಾಗಮ್ಯ ಸಮಾಘ್ರಾಯ ವಿದ್ರವಂತಿ ದಿಶೋ ದಶ ।
ರಾಕ್ಷಸಃ ಸೋಽಪಿ ತಾನ್ ವನ್ಯಾನ್ ಮೃಗಾನ್ ಮೃಗವಧೇ ರತಃ ॥

ಪ್ರಚ್ಛಾದನಾರ್ಥಂ ಭಾವಸ್ಯ ನ ಭಕ್ಷಯತಿ ಸಂಸ್ಪೃಶನ್ ।
ತಸ್ಮಿನ್ನೇವ ತತಃ ಕಾಲೇ ವೈದೇಹೀ ಶುಭಲೋಚನಾ ॥ ೩೦

ಕುಸುಮಾಪಚಯವ್ಯಗ್ರಾ ಪಾದಪಾನಭ್ಯವರ್ತತ ।
ಕರ್ಣಿಕಾರಾನಶೋಕಾಂಶ್ಚ ಚೂತಾಂಶ್ಚ ಮದಿರೇಕ್ಷಣಾ ॥ ೩೧

ಕುಸುಮಾನ್ಯವಚಿನ್ವಂತೀ ಚಚಾರ ರುಚಿರಾನನಾ ।
ಅನರ್ಹಾರಣ್ಯವಾಸಸ್ಯ ಸಾ ತಂ ರತ್ನಮಯಂ ಮೃಗಮ್ ॥ ೩೨

ಮುಕ್ತಾಮಣಿವಿಚಿತ್ರಾಂಗಂ ದದರ್ಶ ಪರಮಾಂಗನಾ ।
ಸಾ ತಂ ರುಚಿರದಂತೋಷ್ಠಂ ರೂಪ್ಯಧಾತುತನೂರುಹಮ್ ॥ ೩೩

ವಿಸ್ಮಯೋತ್ಫುಲ್ಲನಯನಾ ಸಸ್ನೇಹಂ ಸಮುದೈಕ್ಷತ ।
ಸ ಚ ತಾಂ ರಾಮದಯಿತಾಂ ಪಶ್ಯನ್ ಮಾಯಾಮಯೋ ಮೃಗಃ ॥

---

ಓಡಿಹೋಗುತ್ತಿದ್ದವು. ಆ ರಾಕ್ಷಸನಿಗೆ ಮೃಗಗಳನ್ನು ಕೊಂದು ತಿನ್ನಬೇಕೆಂದು ಅಭಿಲಾಷೆಯಿದ್ದರೂ, ತನ್ನ ರಾಕ್ಷಸತ್ವವನ್ನು ಮರೆಮಾಚುವುದಕ್ಕಾಗಿ ಮೃಗಗಳ ಸ್ಪರ್ಶವಾದರೂ ಸುಮ್ಮನಿದ್ದನು (೨೮–೨೯). ಆ ಸಮಯದಲ್ಲಿ ಎಲ್ಲೆಡೆಯೂ ಶುಭವನ್ನೇ ನೋಡಲು ಬಯಸುವ ವೈದೇಹಿಯು ಹೂಗಳನ್ನು ಬಿಡಿಸುವುದರಲ್ಲಿ ನಿರತಳಾಗಿದ್ದಳು. ಆ ಮದಿರೇಕ್ಷಣೆಯು ಕರ್ಣಿಕಾರ, ಅಶೋಕ, ಚೂತ ಮುಂತಾದ ವೃಕ್ಷಗಳಲ್ಲಿ ಹೂಗಳನ್ನು ಬಿಡಿಸುತ್ತ ಪ್ರಸನ್ನಮುಖಿಯಾಗಿ ಉಲ್ಲಾಸದಿಂದ ಸಂಚರಿಸುತ್ತ ಬಂದಳು (೩೦–೩೧). ಅರಣ್ಯವಾಸಕ್ಕೆ ಯೋಗ್ಯಳಲ್ಲದ ಆ ಸುಕುಮಾರಿಗೆ ರತ್ನಮಯವಾದ ಆ ಮೃಗವು ಗೋಚರಿಸಿತು. ಮುತ್ತಿನಮಣಿಗಳಿಂದ ಸಿಂಗರಿಸಲ್ಪಟ್ಟಂತೆಯೂ ಸುಂದರವಾದ ಹಲ್ಲು ತುಟಿಗಳುಳ್ಳದ್ದಾಗಿಯೂ ಬೆಳ್ಳಿ ಮುಂತಾದ ಧಾತುಗಳಿಂದ ಮಾಡಿದಂತೆ ಮಿನುಗುವ ರೋಮವುಳ್ಳದ್ದಾಗಿಯೂ ಇದ್ದ ಆ ಮೃಗವನ್ನು ಸೀತೆಯು ಅಚ್ಚರಿಯಿಂದ ಕಣ್ಣರಳಿಸಿ ಪ್ರೇಮದಿಂದ ನೋಡಿದಳು (೩೨–೩೩). ಶ್ರೀರಾಮನ ಕಾಂತೆಯು ತನ್ನನ್ನು ನೋಡುವುದನ್ನು ಆ ಮಾಯಾಮೃಗವು

ವಿಚಚಾರ ಪುನಶ್ಚಿತ್ರಂ ದೀಪಯನ್ನಿವ ತದ್ವನಮ್ ।
ಅದೃಷ್ಟಪೂರ್ವಂ ತಂ ದೃಷ್ಟ್ವಾ ನಾನಾರತ್ನಮಯಂ ಮೃಗಮ್ ॥

ವಿಸ್ಮಯಂ ಪರಮಂ ಸೀತಾ ಜಗಾಮ ಜನಕಾತ್ಮಜಾ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಿಚತ್ವಾರಿಂಶಃ ಸರ್ಗಃ

---

## ತ್ರಿಚತ್ವಾರಿಂಶಃ ಸರ್ಗಃ

### ಲಕ್ಷ್ಮಣಶಂಕಾಪ್ರತಿಸಮಾಧಾನಮ್

ಸಾ ತಂ ಸಂಪ್ರೇಕ್ಷ್ಯ ಸುಶ್ರೋಣೀ ಕುಸುಮಾನ್ಯವಚಿನ್ವತೀ ।
ಹೈಮರಾಜತವರ್ಣಾಭ್ಯಾಂ ಪಾರ್ಶ್ವಾಭ್ಯಾಮುಪಶೋಭಿತಮ್ ॥ ೧

ಪ್ರಹೃಷ್ಟಾ ಚಾನವದ್ಯಾಂಗೀ ಮೃಷ್ಟಹಾಟಕವರ್ಣಿನೀ ।
ಭರ್ತಾರಮಭಿಚಕ್ರಂದ ಲಕ್ಷ್ಮಣಂ ಚಾಪಿ ಸಾಯುಧಮ್ ॥ ೨

---

ಗಮನಿಸಿತು. ಕೂಡಲೇ ಆ ಮೃಗವು ವನವನ್ನು ಬೆಳಗುವುದೋ ಎಂಬಂತೆ ಚಿತ್ರಗತಿಯಿಂದ ಸುಳಿದಾಡಲಾರಂಭಿಸಿತು. ನಾನಾರತ್ನಮಯವಾದಂತಿದ್ದ ಆ ಬಗೆಯ ಮೃಗವನ್ನು ಸೀತೆಯು ಹಿಂದೆ ನೋಡಿರಲಿಲ್ಲ. ಮಾಯಾಮೃಗವನ್ನು ಕಂಡು ಜಾನಕಿಯು ವಿಸ್ಮಿತಳಾದಳು (೩೪–೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೆರಡನೆಯ ಸರ್ಗ

---

## ಸರ್ಗ ೪೩

ಚಿತ್ರವರ್ಣದ ಆ ಜಿಂಕೆ ಮಾಯಾಮೃಗವೆಂದು ಲಕ್ಷ್ಮಣನ ಹೇಳಿಕೆ.
ಸೀತೆಯ ಹಠ. ಶ್ರೀರಾಮನು ಲಕ್ಷ್ಮಣನಿಗೆ ಸಮಾಧಾನ ಹೇಳಿ
ಸೀತೆಯನ್ನು ರಕ್ಷಿಸುತ್ತಿರಬೇಕೆಂದು ತಿಳಿಸುವುದು

ಹೂಗಳನ್ನು ಬಿಡಿಸುತ್ತಿದ್ದ ಸೀತೆಯು, ಒಂದು ಪಾರ್ಶ್ವದಲ್ಲಿ ಚಿನ್ನದ ಬಣ್ಣ–ಇನ್ನೊಂದು ಪಾರ್ಶ್ವದಲ್ಲಿ ಬೆಳ್ಳಿಯ ಬಣ್ಣಗಳಿಂದ ಮನೋಹರವಾದ ಆ ಜಿಂಕೆಯನ್ನು ಕಂಡಳು. ಸುವರ್ಣವರ್ಣೆಯಾದ ಆ ಚೆಲುವೆಯು ತನ್ನ ಪತಿಯನ್ನೂ

ತಯಾಹೂತೌ ನರವ್ಯಾಘ್ರೌ ವೈದೇಹ್ಯಾ ರಾಮಲಕ್ಷ್ಮಣೌ ।
ವೀಕ್ಷಮಾಣೌ ತು ತಂ ದೇಶಂ ತದಾ ದದೃಶತುರ್ಮೃಗಮ್ ॥ ೩

ಶಂಕಮಾನಸ್ತು ತಂ ದೃಷ್ಟ್ವಾ ಲಕ್ಷ್ಮಣೋ ರಾಮಮಬ್ರವೀತ್ ।
ತಮೇವೈತಮಹಂ ಮನ್ಯೇ ಮಾರೀಚಂ ರಾಕ್ಷಸಂ ಮೃಗಮ್ ॥ ೪

ಚರಂತೋ ಮೃಗಯಾಂ ಹೃಷ್ಟಾಃ ಪಾಪೇನೋಪಾಧಿನಾ ವನೇ ।
ಅನೇನ ನಿಹತಾ ರಾಮ ರಾಜಾನಃ ಕಾಮರೂಪಿಣಾ ॥ ೫

ಅಸ್ಯ ಮಾಯಾವಿದೋ ಮಾಯಾ ಮೃಗರೂಪಮಿದಂ ಕೃತಮ್
ಭಾನುಮತ್ ಪುರುಷವ್ಯಾಘ್ರ ಗಂಧರ್ವಪುರಸಂನಿಭಮ್ ॥ ೬

ಮೃಗೋ ಹ್ಯೇವಂವಿಧೋ ರತ್ನವಿಚಿತ್ರೋ ನಾಸ್ತಿ ರಾಘವ ।
ಜಗತ್ಯಾಂ ಜಗತೀನಾಥ ಮಾಯೈಷಾ ಹಿ ನ ಸಂಶಯಃ ॥ ೭

ಏವಂ ಬ್ರುವಾಣಂ ಸೌಮಿತ್ರಿಂ ಪ್ರತಿವಾರ್ಯ ಶುಚಿಸ್ಮಿತಾ ।
ಉವಾಚ ಸೀತಾ ಸಂಹೃಷ್ಟಾ ಚರ್ಮಣಾ ಹೃತಚೇತನಾ ॥ ೮

---

ಆಯುಧಪಾಣಿಯಾಗಿದ್ದ ಲಕ್ಷ್ಮಣನನ್ನೂ ಕೂಗಿ ಕರೆದಳು (೧–೨). ಆಗ ನರಶ್ರೇಷ್ಠರಾದ ರಾಮಲಕ್ಷ್ಮಣರು ಬಂದು ಅತ್ತಿತ್ತ ನೋಡುತ್ತಿರುವಾಗ ಆ ಮೃಗವು ಗೋಚರಿಸಿತು. ಲಕ್ಷ್ಮಣನು ಜಿಂಕೆಯನ್ನು ನೋಡಿ ಸಂದೇಹಪಡುತ್ತ ಶ್ರೀರಾಮನ ಕಡೆಗೆ ತಿರುಗಿ, "ಅಣ್ಣ, ಈ ಮೃಗವು ಮಾರೀಚನೆಂಬ ಆ ರಾಕ್ಷಸನೇ ಸರಿಯೆಂದು ತೋರುತ್ತದೆ! (೩–೪). ಈ ಪಾಪಿಯು ಕಾಮರೂಪಿ. ಕಾಡಿನಲ್ಲಿ ಸಂತೋಷದಿಂದ ಬೇಟೆಯಾಡುವ ಎಷ್ಟೋ ಮಂದಿ ರಾಜರನ್ನು, ಈತನು ಮೃಗವೇಷವನ್ನು ಧರಿಸಿ ಕಪಟದಿಂದ ಕೊಂದಿದ್ದಾನೆ. ಈ ರಾಕ್ಷಸನು ವಿವಿಧಮಾಯೆಗಳನ್ನು ಬಲ್ಲನು. ಈ ಮೃಗರೂಪವು ಅವನ ಮಾಯೆ. ಹೊಳೆಯುವ ಈ ರೂಪ ಗಂಧರ್ವನಗರದಂತೆ* ಕೃತಕ (೫–೬). ರತ್ನಮಯವಾದ ಈ ಬಗೆಯ ವಿಚಿತ್ರಮೃಗವು ಜಗತ್ತಿನಲ್ಲಿ ಎಲ್ಲಾದರೂ ಇರುವುದುಂಟೆ? ಶ್ರೀರಾಮ, ಇದು ಮಾಯೆಯೇ ಸರಿ; ಸಂದೇಹ ಬೇಡ" ಎಂದು ಹೇಳಿದನು (೭). ಮೃಗಚರ್ಮದ ಸೊಗಸಿಗೆ

---

* ಆಕಾಶದಲ್ಲಿ ಮೋಡಗಳು ಹರಡಿ ಮನೆಗಳಂತೆಯೂ ನಗರದಂತೆಯೂ ಕಾಣುವುದುಂಟು. ಆ ದೃಶ್ಯಕ್ಕೆ ಗಂಧರ್ವನಗರವೆಂದು ಹೆಸರು.

ಆರ್ಯಪುತ್ರಾಭಿರಾಮೋಽಸೌ ಮೃಗೋ ಹರತಿ ಮೇ ಮನಃ
ಆನಯೈನಂ ಮಹಾಬಾಹೋ ಕ್ರೀಡಾರ್ಥಂ ನೋ ಭವಿಷ್ಯತಿ ॥ ೯

ಇಹಾಶ್ರಮಪದೇಽಸ್ಮಾಕಂ ಬಹವಃ ಪುಣ್ಯದರ್ಶನಾಃ ।
ಮೃಗಾಶ್ಚರಂತಿ ಸಹಿತಾಃ ಸೃಮರಾಶ್ಚಮರಾಸ್ತಥಾ ॥ ೧೦

ಋಕ್ಷಾಃ ಪೃಷತಸಂಘಾಶ್ಚ ವಾನರಾಃ ಕಿಂನರಾಸ್ತಥಾ ।
ವಿಚರಂತಿ ಮಹಾಬಾಹೋ ರೂಪಶ್ರೇಷ್ಠಾ ಮನೋಹರಾಃ ॥ ೧೧

ನ ಚಾಸ್ಯ ಸದೃಶೋ ರಾಜನ್ ದೃಷ್ಟಪೂರ್ವೋ ಮೃಗಃ ಪುರಾ ।
ತೇಜಸಾ ಕ್ಷಮಯಾ ದೀಪ್ತ್ಯಾ ಯಥಾಯಂ ಮೃಗಸತ್ತಮಃ ॥ ೧೨

ನಾನಾವರ್ಣವಿಚಿತ್ರಾಂಗೋ ರತ್ನಬಿಂದುಸಮಾಚಿತಃ ।
ದ್ಯೋತಯನ್ ವನಮವ್ಯಗ್ರಂ ಶೋಭತೇ ಶಶಿಸಂನಿಭಃ ॥ ೧೩

ಅಹೋ ರೂಪಮಹೋ ಲಕ್ಷ್ಮೀಃ ಸ್ವರಸಂಪಚ್ಚ ಶೋಭನಾ ।
ಮೃಗೋಽದ್ಭುತೋ ವಿಚಿತ್ರಾಂಗೋ ಹೃದಯಂ ಹರತೀವ ಮೇ ॥

---

ಸೀತೆಯು ಮೋಹಿಸಿದ್ದಳು. ಅವಳು ಸೌಮಿತ್ರಿಯ ಮಾತಿಗೆ ಅಡ್ಡಬಂದು ನಲಿಯುತ್ತ ನಸುನಗೆಯಿಂದ ಶ್ರೀರಾಮನನ್ನು ಕುರಿತು "ಆರ್ಯಪುತ್ರ, ಈ ಮೃಗವು ಬಹಳ ಚೆನ್ನಾಗಿದೆ. ನನ್ನ ಮನಸ್ಸನ್ನು ಸೂರೆಗೊಳ್ಳುತ್ತಿದೆ. ಇದನ್ನು ಹಿಡಿದು ಕೊಡು. ನಾವು ಇದರೊಡನೆ ಆಟವಾಡಬಹುದು (೮–೯). ನಮ್ಮ ಆಶ್ರಮದ ಬಳಿ ಚೆನ್ನಾಗಿ ಕಾಣುವ ಎಷ್ಟೋ ಮೃಗಗಳಿವೆ. ಚಮರ, ಸೃಮರ, ಕರಡಿ, ಜಿಂಕೆಗಳು ಗುಂಪುಗುಂಪಾಗಿ ಸಂಚರಿಸುತ್ತವೆ. ಕಪಿಗಳೂ ಕಿಂನರಮೃಗಗಳೂ ಇವೆ. ನೋಡಲು ಅಂದವಾದ ಶ್ರೇಷ್ಠಮೃಗಗಳಿದ್ದರೂ ಇಂಥ ಮೃಗವನ್ನು ನಾನು ನೋಡಿಯೇ ಇಲ್ಲ. ಇದರ ಬಣ್ಣ, ಇದರ ಸೌಮ್ಯತೆ, ಈ ಮೃಗೋತ್ತಮದ ಕಾಂತಿ—ಇನ್ನೊಂದು ಮೃಗಕ್ಕೆ ಇಲ್ಲ (೧೦–೧೨). ನಾನಾ ಬಣ್ಣಗಳಿಂದ ಇದರ ದೇಹವು ಎಷ್ಟು ವಿಚಿತ್ರವಾಗಿದೆ! ಮೈಮೇಲೆ ರತ್ನದ ಕಣಗಳು ಹರಡಿದಂತಿವೆ! ಚಂದ್ರನಂತೆ ಈ ವನವನ್ನೇ ತನ್ನ ಕಾಂತಿಯಿಂದ ಬೆಳಗಿಸುತ್ತಿದೆ! (೧೩). ಅಬ್ಬಾ! ಇದರ ರೂಪವೇ! ಇದರ ಸೌಂದರ್ಯವೇ! ಇದರ ಧ್ವನಿಯು

ಯದಿ ಗ್ರಹಣಮಭ್ಯೇತಿ ಜೀವನ್ನೇವ ಮೃಗಸ್ತವ ।
ಆಶ್ಚರ್ಯಭೂತಂ ಭವತಿ ವಿಸ್ಮಯಂ ಜನಯಿಷ್ಯತಿ ॥ ೧೫

ಸಮಾಪ್ತವನವಾಸಾನಾಂ ರಾಜ್ಯಸ್ಥಾನಾಂ ಚ ನಃ ಪುನಃ ।
ಅಂತಃಪುರವಿಭೂಷಾರ್ಥೋ ಮೃಗ ಏಷ ಭವಿಷ್ಯತಿ ॥ ೧೬

ಭರತಸ್ಯಾರ್ಯಪುತ್ರಸ್ಯ ಶ್ವಶ್ರೂಣಾಂ ಮಮ ಚ ಪ್ರಭೋ ।
ಮೃಗರೂಪಮಿದಂ ವ್ಯಕ್ತಂ ವಿಸ್ಮಯಂ ಜನಯಿಷ್ಯತಿ ॥ ೧೭

ಜೀವನ್ನ ಯದಿ ತೇಽಭ್ಯೇತಿ ಗ್ರಹಣಂ ಮೃಗಸತ್ತಮಃ ।
ಅಜಿನಂ ನರಶಾರ್ದೂಲ ರುಚಿರಂ ಮೇ ಭವಿಷ್ಯತಿ ॥ ೧೮

ನಿಹತಸ್ಯಾಸ್ಯ ಸತ್ತ್ವಸ್ಯ ಜಾಂಬೂನದಮಯತ್ವಚಿ ।
ಶಷ್ಪಬೃಸ್ಯಾಂ ವಿನೀತಾಯಾಮಿಚ್ಛಾಮ್ಯಹಮುಪಾಸಿತುಮ್ ॥ ೧೯

ಕಾಮವೃತ್ತಮಿದಂ ರೌದ್ರಂ ಸ್ತ್ರೀಣಾಮಸದೃಶಂ ಮತಮ್ ।
ವಪುಷಾ ತ್ವಸ್ಯ ಸತ್ತ್ವಸ್ಯ ವಿಸ್ಮಯೋ ಜನಿತೋ ಮಮ ॥ ೨೦

---

ಎಷ್ಟು ಇಂಪಾಗಿದೆ! ಚಿತ್ರದೇಹದ ಈ ಮೃಗವು ಅದ್ಭುತವಾಗಿದೆ! ನನ್ನ ಹೃದಯವನ್ನು ಸೆಳೆಯುತ್ತಿದೆ. (೧೪). ಈ ಜಿಂಕೆಯು ಬದುಕಿರುವಂತೆಯೇ ನಿನಗೆ ಸಿಕ್ಕಿದರೆ, ಇದೊಂದು ಅಚ್ಚರಿಯ ಮೃಗವೆನಿಸುತ್ತದೆ. ಸರ್ವರಿಗೂ ವಿಸ್ಮಯವನ್ನುಂಟುಮಾಡುತ್ತದೆ. ನಾವು ವನವಾಸವನ್ನು ಮುಗಿಸಿ ಪುನಃ ರಾಜ್ಯಕ್ಕೆ ಹಿಂದಿರುಗಿಹೋದಮೇಲೆ, ನಮ್ಮ ಅಂತಃಪುರದಲ್ಲಿ ಈ ಮೃಗವು ಒಂದು ಅಲಂಕಾರವಾಗಿರುವುದು (೧೫–೧೬). ನಾಥ, ನನ್ನ ಮೈದುನನಾದ ಭರತನಿಗೂ ನನ್ನ ಅತ್ತೆಯರಿಗೂ ಈ ಮೃಗದ ರೂಪವು ಎಷ್ಟು ವಿಸ್ಮಯವನ್ನುಂಟುಮಾಡುವುದೋ! ಇದು ಬದುಕಿರುವಂತೆಯೇ ನಿನಗೆ ಸಿಗದಿದ್ದರೆ, ಪುರುಷೋತ್ತಮ, ಮನೋಹರವಾದ ಇದರ ಚರ್ಮವಾದರೂ ನನಗೆ ದೊರೆಯುತ್ತದೆ! (೧೭–೧೮). (ಒಂದುವೇಳೆ) ಇದನ್ನು ಸಂಹರಿಸಬೇಕಾಗಿ ಬಂದರೆ ಸುವರ್ಣಮಯವಾದ ಚರ್ಮ ದೊರೆಯುತ್ತದೆ. ಹುಲ್ಲಿನ ಚಾಪೆಯಮೇಲೆ ಈ ಚರ್ಮವನ್ನು ಹಾಸಿ ಅದರಲ್ಲಿ (ನಿನ್ನೊಡನೆ) ಕುಳಿತುಕೊಳ್ಳಬೇಕೆಂದು ನನಗೆ ಆಸೆ! ನಾನು ಹೀಗೆ ಸ್ವೇಚ್ಛೆಯಿಂದ ಹಠಮಾಡುವುದು ಕ್ರೂರತನವೇನೋ ಹೌದು; ಸ್ತ್ರೀಯರಿಗೆ ಯೋಗ್ಯವಲ್ಲ. ಆದರೂ

ತೇನ ಕಾಂಚನರೋಮ್ಣಾ ತು ಮಣಿಪ್ರವರಶೃಂಗಿಣಾ ।
ತರುಣಾದಿತ್ಯವರ್ಣೇನ ನಕ್ಷತ್ರಪಥವರ್ಚಸಾ ॥ ೨೧

ಏವಂ ಸೀತಾವಚಃ ಶ್ರುತ್ವಾ ದೃಷ್ಟ್ವಾ ಚ ಮೃಗಮದ್ಭುತಮ್ ।
ಬಭೂವ ರಾಘವಸ್ಯಾಪಿ ಮನೋ ವಿಸ್ಮಯಮಾಗತಮ್ ॥ ೨೨

ಲೋಭಿತಸ್ತೇನ ರೂಪೇಣ ಸೀತಯಾ ಚ ಪ್ರಚೋದಿತಃ ।
ಉವಾಚ ರಾಘವೋ ಹೃಷ್ಟೋ ಭ್ರಾತರಂ ಲಕ್ಷ್ಮಣಂ ವಚಃ ॥ ೨೩

ಪಶ್ಯ ಲಕ್ಷ್ಮಣ ವೈದೇಹ್ಯಾಃ ಸ್ಪೃಹಾಂ ಮೃಗಗತಾಮಿಮಾಮ್ ।
ರೂಪಶ್ರೇಷ್ಠತಯಾ ಹ್ಯೇಷ ಮೃಗೋಽದ್ಯ ನ ಭವಿಷ್ಯತಿ ॥ ೨೪

ನ ವನೇ ನಂದನೋದ್ದೇಶೇ ನ ಚೈತ್ರರಥಸಂಶ್ರಯೇ ।
ಕುತಃ ಪೃಥಿವ್ಯಾಂ ಸೌಮಿತ್ರೇ ಯೋಽಸ್ಯ ಕಶ್ಚಿತ್ ಸಮೋ ಮೃಗಃ ॥

ಪ್ರತಿಲೋಮಾನುಲೋಮಾಶ್ಚ ರುಚಿರಾ ರೋಮರಾಜಯಃ ।
ಶೋಭಂತೇ ಮೃಗಮಾಶ್ರಿತ್ಯ ಚಿತ್ರಾಃ ಕನಕಬಿಂದುಭಿಃ ॥ ೨೬

---

ಈ ಪ್ರಾಣಿಯ ಸುಂದರಾಕೃತಿಯು ನನ್ನ ಕೌತುಕವನ್ನು ಕೆರಳಿಸಿದೆ (೧೯–೨೦). ಚಿನ್ನದ ರೋಮಗಳು, ಇಂದ್ರನೀಲಮಣಿಯ ಕೊಂಬುಗಳು, ಬಾಲಸೂರ್ಯನ ಹೊಂಬಣ್ಣ, ತಾರಾಪುಂಜದಂತಿರುವ ಬೆಳ್ಳಿಯ ಚುಕ್ಕೆಗಳು — ಇವುಗಳಿಂದ ಈ ಮೃಗವು ನನಗೆ ವಿಸ್ಮಯವನ್ನು ಹುಟ್ಟಿಸಿದೆ" ಎಂದು ಹೇಳಿದಳು (೨೧). ಹೀಗೆ ಸೀತೆಯ ಮಾತನ್ನು ಕೇಳಿದ್ದರಿಂದಲೂ ಅದ್ಭುತವಾದ ಆ ಮೃಗವನ್ನು ತಾನೇ ನೋಡಿದ್ದರಿಂದಲೂ ರಾಘವನ ಮನಸ್ಸಿನಲ್ಲಿಯೂ ಕುತೂಹಲ ಹುಟ್ಟಿತು. ಮೃಗದ ರೂಪವು ಆಸೆ ಹುಟ್ಟಿಸಿತು; ಸೀತೆಯೂ ಪ್ರೇರಿಸಿದಳು. ಆಗ ಶ್ರೀರಾಮನು ಹರ್ಷದಿಂದ ತಮ್ಮನಾದ ಲಕ್ಷ್ಮಣನನ್ನು ನೋಡಿ ಹೀಗೆಂದನು (೨೨–೨೩): "ನೋಡು ಲಕ್ಷ್ಮಣ, ವೈದೇಹಿಗೆ ಈ ಜಿಂಕೆಯಲ್ಲಿ ಎಷ್ಟು ಆಸೆಯಿದೆ ಎಂಬುದನ್ನು! ಈ ಬಗೆಯ ಶ್ರೇಷ್ಠರೂಪದ ಮೃಗವು ಇನ್ನೆಲ್ಲಿಯೂ ಇರಲಾರದು. ನಂದನವನದಲ್ಲಿಯೂ ಇಲ್ಲ, ಚೈತ್ರರಥೋದ್ಯಾನದಲ್ಲಿಯೂ ಇಲ್ಲ. ಇಂತಿರುವ ಇನ್ನೊಂದು ಮೃಗವು ಈ ಪೃಥಿವಿಯಲ್ಲಿ ಎಲ್ಲಿದೆ, ಲಕ್ಷ್ಮಣ? (೨೪–೨೫). ಇದರ ರೋಮ

ಪಶ್ಯಾಸ್ಯ ಜೃಂಭಮಾಣಸ್ಯ ದೀಪ್ತಾಮಗ್ನಿಶಿಖೋಪಮಾಮ್ ।
ಜಿಹ್ವಾಂ ಮುಖಾನ್ನಿಃಸರಂತೀಂ ಮೇಘಾದಿವ ಶತಹ್ರದಾಮ್ ॥ ೨೭

ಮಸಾರಗಲ್ಲರ್ಕಮುಖಃ ಶಂಖಮುಕ್ತಾನಿಭೋದರಃ ।
ಕಸ್ಯ ನಾಮಾಭಿರೂಪೋಽಸೌ ನ ಮನೋ ಲೋಭಯೇನ್ಮೃಗಃ ॥ ೨೮

ಕಸ್ಯ ರೂಪಮಿದಂ ದೃಷ್ಟ್ವಾ ಜಾಂಬೂನದಮಯಪ್ರಭಮ್ ।
ನಾನಾರತ್ನಮಯಂ ದಿವ್ಯಂ ನ ಮನೋ ವಿಸ್ಮಯಂ ವ್ರಜೇತ್ ॥ ೨೯

ಮಾಂಸಹೇತೋರಪಿ ಮೃಗಾನ್ ವಿಹಾರಾರ್ಥಂ ಚ ಧನ್ವಿನಃ ।
ಘ್ನಂತಿ ಲಕ್ಷ್ಮಣ ರಾಜಾನೋ ಮೃಗಯಾಯಾಂ ಮಹಾವನೇ ॥ ೩೦

ಧನಾನಿ ವ್ಯವಸಾಯೇನ ವಿಚೀಯಂತೇ ಮಹಾವನೇ ।
ಧಾತವೋ ವಿವಿಧಾಶ್ಚಾಪಿ ಮಣಿರತ್ನಸುವರ್ಣಿನಃ ॥ ೩೧

ತತ್ಸಾರಮಖಿಲಂ ನೃಣಾಂ ಧನಂ ನಿಚಯವರ್ಧನಮ್ ।
ಮನಸಾ ಚಿಂತಿತಂ ಸರ್ವಂ ಯಥಾ ಶುಕ್ರಸ್ಯ ಲಕ್ಷ್ಮಣ ॥ ೩೨

---

ಗಳು ಅನುಲೋಮವಿಲೋಮವಾಗಿ ಎಷ್ಟು ಮನೋಜ್ಞವಾಗಿವೆ! ಚಿನ್ನದ ಚುಕ್ಕೆಗಳಿಂದ ಚಿತ್ರವರ್ಣವಾಗಿ ರಾಜಿಸುತ್ತಿವೆ. ಆ ಜಿಂಕೆಯು ಆಕಳಿಸುವಾಗ ಬೆಂಕಿಯ ಜ್ವಾಲೆಯಂತೆ ಬೆಳಗುವ ಅದರ ನಾಲಿಗೆಯನ್ನು ನೋಡು! ಮುಗಿಲಿನಿಂದ ಹೊರಡುವ ಮಿಂಚಿನಂತೆ, ಬಾಯಿಂದ ಹೊಳೆಯುತ್ತ ಹೊರಬರುವುದು (೨೬–೨೭). ಇಂದ್ರನೀಲಮಣಿಯಿಂದ ಮಾಡಿದ ಬಟ್ಟಲಿನಂತೆ ಇದರ ಮುಖವು ಮಾಟವಾಗಿದೆ. ಶಂಖದಂತೆಯೂ ಮುತ್ತಿನಂತೆಯೂ ಬೆಳ್ಳನೆಯ ಹೊಟ್ಟೆಯಿದೆ. ಈ ಮನೋಜ್ಞವಾದ ಮೃಗವು ಯಾರ ಮನಸ್ಸನ್ನು ಸೆಳೆಯದಿದ್ದೀತು? ನಾನಾ ರತ್ನಮಯವಾಗಿ ಬಂಗಾರದಂತೆ ಬೆಳಗುವ ಈ ದಿವ್ಯರೂಪವನ್ನು ನೋಡಿದಾಗ ಯಾರ ಮನಸ್ಸಿಗೆ ವಿಸ್ಮಯವಾಗದಿದ್ದೀತು? (೨೮–೨೯). ಲಕ್ಷ್ಮಣ, ರಾಜರು ಧನುರ್ಧಾರಿಗಳಾಗಿ ಅರಣ್ಯಕ್ಕೆ ಬಂದು ಮಾಂಸಕ್ಕಾಗಿಯೂ ಮನೋವಿನೋದಕ್ಕಾಗಿಯೂ ಬೇಟೆಯಾಡಿ ಮೃಗಗಳನ್ನು ಕೊಲ್ಲುತ್ತಾರೆ. ಮಹಾರಣ್ಯದಲ್ಲಿ ಉದ್ಯಮವನ್ನು ಮಾಡಿ ಬೆಲೆಬಾಳುವ ವಸ್ತುಗಳನ್ನೂ ರತ್ನ ಚಿನ್ನಗಳಿರುವ ಗೈರಿಕಾದಿ ವಿವಿಧ ಧಾತುಗಳನ್ನೂ ಸಂಗ್ರಹಿಸುತ್ತಾರೆ (೩೦–೩೧). ಸಾರಾಂಶವೇನೆಂದರೆ,

ಅರ್ಥೀ ಯೇನಾರ್ಥಕೃತ್ಯೇನ ಸಂವ್ರಜತ್ಯವಿಚಾರಯನ್ ।
ಸಮರ್ಥಮರ್ಥಶಾಸ್ತ್ರಜ್ಞಾಃ ಪ್ರಾಹುರರ್ಥ್ಯಾಶ್ಚ ಲಕ್ಷ್ಮಣ ॥ ೩೩

ಏತಸ್ಯ ಮೃಗರತ್ನಸ್ಯ ಪರಾರ್ಧ್ಯೇ ಕಾಂಚನತ್ವಚಿ ।
ಉಪವೇಕ್ಷ್ಯತಿ ವೈದೇಹೀ ಮಯಾ ಸಹ ಸುಮಧ್ಯಮಾ ॥ ೩೪

ನ ಕಾದಲೀ ನ ಪ್ರಿಯಕೀ ನ ಪ್ರವೇಣೀ ನ ಚಾವಿಕೀ ।
ಭವೇದೇತಸ್ಯ ಸದೃಶೀ ಸ್ಪರ್ಶನೇನೇತಿ ಮೇ ಮತಿಃ ॥ ೩೫

ಏಷ ಚೈವ ಮೃಗಃ ಶ್ರೀಮಾನ್ ಯಶ್ಚ ದಿವ್ಯೋ ನಭಶ್ಚರಃ ।
ಉಭಾವೇತೌ ಮೃಗೌ ದಿವ್ಯೌ ತಾರಾಮೃಗಮಹೀಮೃಗೌ ॥ ೩೬

ಯದಿ ವಾಯಂ ತಥಾ ಯನ್ಮಾಂ ಭವೇದ್ವದಸಿ ಲಕ್ಷ್ಮಣ ।
ಮಾಯೈಷಾ ರಾಕ್ಷಸಸ್ಯೇತಿ ಕರ್ತವ್ಯೋಽಸ್ಯ ವಧೋ ಮಯಾ ॥ ೩೭

ಎಲ್ಲ ಅಮೂಲ್ಯವಸ್ತುವೂ ಜನರ ಸಂಪತ್ತನ್ನು ಬೆಳೆಸಲು ಉಪಯುಕ್ತವಾಗುತ್ತದೆ. ಈ ವಿಚಾರವೆಲ್ಲವೂ ಅರ್ಥಶಾಸ್ತ್ರಜ್ಞನಾದ ಶುಕ್ರಾಚಾರ್ಯನು ವಿವೇಚಿಸಿದ್ದೇ ಸರಿ (೩೨). ಯಾವ ಅರ್ಥಾಪೇಕ್ಷಿಯು ವಸ್ತುವಿನ ಪ್ರಯೋಜನವನ್ನು ಕಂಡು ಅದನ್ನು ಸಂಪಾದಿಸಲು ಮುಂದುವರಿಯುವನೋ ಆ ವಸ್ತುವೇ ಅರ್ಥವೆನಿಸಿಕೊಳ್ಳುತ್ತದೆ. ಅರ್ಥಶಾಸ್ತ್ರಜ್ಞರೂ ಅರ್ಥಸಾಧನಚತುರರೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ* (೩೩). ಇದೊಂದು (ಸಂಗ್ರಹಿಸಬೇಕಾದ) ಮೃಗರತ್ನ. ಇದರ ಅಮೂಲ್ಯವಾದ ಹೊಂಬಣ್ಣದ ಚರ್ಮದಮೇಲೆ ವೈದೇಹಿಯು ನನ್ನೊಡನೆ ಕುಳಿತುಕೊಳ್ಳುವಳು! ಕದಳಿ, ಪ್ರಿಯಕಿ, ಪ್ರವೇಣಿ ಎಂಬ ಮೃಗಗಳ ಚರ್ಮವಾಗಲಿ, ಕುರಿಯ ಉಣ್ಣೆಯ ಬಟ್ಟೆಯಾಗಲಿ ಮುಟ್ಟಲು ಇದರಷ್ಟು ಮೃದುವಾಗಿರಲಾರದೆಂದು ನನಗೆ ತೋರುತ್ತದೆ! (೩೪–೩೫). ಭೂತಳದಲ್ಲಿ ಇದೊಂದು ಮೃಗ, ಗಗನತಳದಲ್ಲಿ ಮೃಗಶೀರ್ಷವೆಂಬ ದಿವ್ಯಮೃಗ–ಹೀಗೆ ಮಹೀಮೃಗ ತಾರಾಮೃಗಗಳೆಂಬ ಎರಡು ಮೃಗಗಳೇ ಉತ್ತಮೋತ್ತಮ ಮೃಗಗಳು (೩೬). ಲಕ್ಷ್ಮಣ, ಒಂದುವೇಳೆ ನೀನು ಹೇಳುವಂತೆ ಇದು ರಾಕ್ಷಸನ ಮಾಯೆಯೇ ಆಗಿದ್ದರೆ, ಈ ರಾಕ್ಷಸನನ್ನು ನಾನು

* ೩೨, ೩೩ನೆಯ ಶ್ಲೋಕಗಳಿಗೆ ವ್ಯಾಖ್ಯಾನಕಾರರು ವಿವಿಧಾರ್ಥಗಳನ್ನು ಹೇಳಿದ್ದಾರೆ. ಅನುಬಂಧವನ್ನು ನೋಡಿ.

ಏತೇನ ಹಿ ನೃಶಂಸೇನ ಮಾರೀಚೇನಾಕೃತಾತ್ಮನಾ ।
ವನೇ ವಿಚರತಾ ಪೂರ್ವಂ ಹಿಂಸಿತಾ ಮುನಿಪುಂಗವಾಃ ॥ ೩೮

ಉತ್ಥಾಯ ಬಹವೋ ಯೇನ ಮೃಗಯಾಯಾಂ ಜನಾಧಿಪಾಃ ।
ನಿಹತಾಃ ಪರಮೇಷ್ವಾಸಾಸ್ತಸ್ಮಾದ್ವಧ್ಯಸ್ತ್ವಯಂ ಮೃಗಃ ॥ ೩೯

ಪುರಸ್ತಾದಿಹ ವಾತಾಪಿಃ ಪರಿಭೂಯ ತಪಸ್ವಿನಃ ।
ಉದರಸ್ಥೋ ದ್ವಿಜಾನ್ ಹಂತಿ ಸ್ವಗರ್ಭೋಽಶ್ವತರೀಮಿವ ॥ ೪೦

ಸ ಕದಾಚಿಚ್ಚಿರಾಲ್ಲೋಭಾದಾಸಸಾದ ಮಹಾಮುನಿಮ್ ।
ಅಗಸ್ತ್ಯಂ ತೇಜಸಾ ಯುಕ್ತಂ ಭಕ್ಷ್ಯಸ್ತಸ್ಯ ಬಭೂವ ಹ ॥ ೪೧

ಸಮುತ್ಥಾನೇ ಚ ತದ್ರೂಪಂ ಕರ್ತುಕಾಮಂ ಸಮೀಕ್ಷ್ಯ ತಮ್ ।
ಉತ್ಸ್ಮಯಿತ್ವಾ ತು ಭಗವಾನ್ ವಾತಾಪಿಮಿದಮಬ್ರವೀತ್ ॥ ೪೨

---

ಸಂಹರಿಸಲೇಬೇಕು. ಘಾತುಕನೂ ದುರ್ಬುದ್ಧಿಯೂ ಆದ ಈ ಮಾರೀಚನು ಹಿಂದೆ ಕಾಡಿನಲ್ಲಿ ಅಲೆಯುತ್ತಿದ್ದು, ಅನೇಕ ಮುನಿಶ್ರೇಷ್ಠರನ್ನು ಹಿಂಸೆಪಡಿಸಿದ್ದಾನೆ (೩೭–೩೮) ಬೇಟೆಗೆ ಬಂದ ಧನುರ್ವಿದ್ಯಾವಿಶಾರದರಾದ ಬಹುಮಂದಿ ನರೇಂದ್ರ ರನ್ನು ಈತನು ಗಪ್ಪನೆ ಮೇಲೆಬಿದ್ದು ಕೊಂದಿದ್ದಾನೆ. ಆದ್ದರಿಂದ ಈ ಮೃಗವನ್ನು ಕೊಲ್ಲಲೇಬೇಕು (೩೯). ಇಲ್ಲಿ ಹಿಂದೆ ವಾತಾಪಿಯು ತಪಸ್ವಿಗಳನ್ನು ಅವಮಾನ ಪಡಿಸುತ್ತ, ಅವರ ಹೊಟ್ಟೆಯನ್ನು ಸೇರಿ ಆ ದ್ವಿಜರನ್ನು ಕೊಲ್ಲುತ್ತಿದ್ದನು. ತನ್ನ ಗರ್ಭವೇ ಅಶ್ವತರಿ*ಯನ್ನು ಸೀಳಿ ಕೊಲ್ಲುವಂತೆ ಕೊಲ್ಲುತ್ತಿದ್ದನು. (೪೦). ಬಹು ಕಾಲವಾದಮೇಲೆ ಒಂದುಸಲ ಅವನು ದುರುದ್ದೇಶದಿಂದ, ಮಹಾತೇಜಸ್ವಿಗಳಾದ ಅಗಸ್ತ್ಯಮುನಿಗಳಿಗೆ ಆಹಾರವಾಗಿ ಅವರ ಉದರದೊಳಕ್ಕೆ ಹೋದನು (೪೧). (ಶ್ರಾದ್ಧಭೋಜನವಾಗಿ) ಏಳುವ ಸಮಯದಲ್ಲಿ ವಾತಾಪಿಯು ತನ್ನ ರಾಕ್ಷಸರೂಪ ವನ್ನು ತಾಳಲು ಬಯಸಿದನು. ಅದನ್ನು ತಿಳಿದು ಭಗವಾನ್ ಅಗಸ್ತ್ಯರು ನಕ್ಕು 'ಎಲೈ ವಾತಾಪಿ, ನೀನು ಸದಾಚಾರವನ್ನು ಬದಿಗೊತ್ತಿ ಬ್ರಾಹ್ಮಣೋತ್ತಮರನ್ನು

---

* ಅಶ್ವತರಿ = ಕತ್ತೆಯಿಂದ ಕುದುರೆಯಲ್ಲಿ ಜನಿಸಿದ ಪ್ರಾಣಿ ; ಹೇಸರಗತ್ತೆ. ಇದರ ಮರಿ ಹುಟ್ಟುವಾಗ ತಾಯಿ ಸಾಯುತ್ತದೆಯೆಂದು ಪ್ರಸಿದ್ಧಿ.

ತ್ವಯಾವಿಗಣ್ಯ ವಾತಾಪೇ ಪರಿಭೂತಾಃ ಸ್ವತೇಜಸಾ ।
ಜೀವಲೋಕೇ ದ್ವಿಜಶ್ರೇಷ್ಠಾಸ್ತಸ್ಮಾದಸಿ ಜರಾಂ ಗತಃ ॥ ೪೩

ತದೇತನ್ನ ಭವೇದ್ರಕ್ಷೋ ವಾತಾಪಿರಿವ ಲಕ್ಷ್ಮಣ ।
ಮದ್ವಿಧಂ ಯೋಽತಿಮನ್ಯೇತ ಧರ್ಮನಿತ್ಯಂ ಜಿತೇಂದ್ರಿಯಮ್ ॥ ೪೪

ಭವೇದ್ಧತೋಽಯಂ ವಾತಾಪಿರಗಸ್ತ್ಯೇನೇವ ಮಾಂ ಗತಃ ।
ಇಹ ತ್ವಂ ಭವ ಸಂನದ್ಧೋ ಯಂತ್ರಿತೋ ರಕ್ಷ ಮೈಥಿಲೀಮ್ ॥ ೪೫

ಅಸ್ಯಾಮಾಯತ್ತಮಸ್ಮಾಕಂ ಯತ್ ಕೃತ್ಯಂ ರಘುನಂದನ ।
ಅಹಮೇನಂ ವಧಿಷ್ಯಾಮಿ ಗ್ರಹೀಷ್ಯಾಮ್ಯಪಿ ವಾ ಮೃಗಮ್ ॥ ೪೬

ಯಾವದ್ಗಚ್ಛಾಮಿ ಸೌಮಿತ್ರೇ ಮೃಗಮಾನಯಿತುಂ ದ್ರುತಮ್ ।
ಪಶ್ಯ ಲಕ್ಷ್ಮಣ ವೈದೇಹೀಂ ಮೃಗತ್ವಚಿ ಗತಸ್ಪೃಹಾಮ್ ॥ ೪೭

ತ್ವಚಾ ಪ್ರಧಾನಯಾ ಹ್ಯೇಷ ಮೃಗೋಽದ್ಯ ನ ಭವಿಷ್ಯತಿ ।
ಅಪ್ರಮತ್ತೇನ ತೇ ಭಾವ್ಯಮಾಶ್ರಮಸ್ಥೇನ ಸೀತಯಾ ॥ ೪೮

---

ಶಕ್ತಿಯ ಮದದಿಂದ ಹಿಂಸೆಪಡಿಸಿದೆಯಲ್ಲವೆ? ಆದ್ದರಿಂದ, (ನನ್ನ ಹೊಟ್ಟೆಯಲ್ಲಿ) ಜೀರ್ಣವಾಗಿಹೋದೆ!' ಎಂದು ಹೇಳಿದರಂತೆ (೪೨-೪೩). ಆದ್ದರಿಂದ, ಲಕ್ಷ್ಮಣ, ವಾತಾಪಿಯಂತೆ ಈ ರಾಕ್ಷಸನೂ ಇನ್ನು ಬದುಕಿರಬಾರದು. ನನ್ನಂತೆ ಧರ್ಮನಿಷ್ಠರೂ ಜಿತೇಂದ್ರಿಯರೂ ಆದವರನ್ನು ಅಲಕ್ಷಿಸಿ ಈತನು ಎಲ್ಲೆಮೀರಿ ನಡೆಯುತ್ತಿದ್ದಾನೆ (೪೪). ಈಗ ನನ್ನ ಹತ್ತಿರಕ್ಕೆ ಬಂದ ಈತನು, ಅಗಸ್ತ್ಯರಿಂದ ವಾತಾಪಿಯು ಹತನಾದಂತೆ ಹತನಾಗಲಿ. ಲಕ್ಷ್ಮಣ, ನೀನು ಎಚ್ಚರಿಕೆಯಿಂದ ಸನ್ನದ್ಧನಾಗಿ ತಪ್ಪದೆ ಮೈಥಿಲಿಯನ್ನು ರಕ್ಷಿಸುತ್ತಿರು. ನಮ್ಮ ಕರ್ತವ್ಯವೆಲ್ಲವೂ ಮುಖ್ಯವಾಗಿ ಇವಳ ರಕ್ಷಣೆಗಾಗಿಯೇ. ನಾನು ಈ ಮೃಗವನ್ನು ಕೊಲ್ಲುವೆನು, ಅಥವಾ ಜೀವಸಹಿತವಾಗಿ ಹಿಡಿಯುವೆನು (೪೫-೪೬). ಸೌಮಿತ್ರಿ, ಈ ಮೃಗವನ್ನು ಹಿಡಿದು ತರಲು ಕೂಡಲೇ ಹೊರಡುವೆನು. ನೋಡು ಲಕ್ಷ್ಮಣ, ವೈದೇಹಿಯು ಈ ಮೃಗದ ಚರ್ಮದಲ್ಲಿ ಎಷ್ಟು ಆಸೆಯನ್ನಿಟ್ಟುಕೊಂಡಿದ್ದಾಳೆ! (೪೭). ಸರ್ವೋತ್ತಮವಾದ ಚರ್ಮವಿರುವುದರಿಂದಲೇ ಈ ಮೃಗವು ಇಂದು

ಯಾವತ್ ಪೃಷತಮೇಕೇನ ಸಾಯಕೇನ ನಿಹನ್ಮ್ಯಹವ್ ।
ಹತ್ವೈತಚ್ಚರ್ಮ ಚಾದಾಯ ಶೀಘ್ರಮೇಷ್ಯಾಮಿ ಲಕ್ಷ್ಮಣ ॥ ೪೯

ಪ್ರದಕ್ಷಿಣೇನಾತಿಬಲೇನ ಪಕ್ಷಿಣಾ
ಜಟಾಯುಷಾ ಬುದ್ಧಿಮತಾ ಚ ಲಕ್ಷ್ಮಣ ।
ಭವಾಪ್ರಮತ್ತಃ ಪರಿಗೃಹ್ಯ ಮೈಥಿಲೀಂ
ಪ್ರತಿಕ್ಷಣಂ ಸರ್ವತ ಏವ ಶಂಕಿತಃ ॥ ೫೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಿಚತಾರ್ತ್ವಿಂಶಃ ಸರ್ಗಃ

ಉಳಿಯುವುದಿಲ್ಲ. ನೀನು ಆಶ್ರಮದಲ್ಲಿ ಬಹಳ ಎಚ್ಚರಿಕೆಯಿಂದ ಸೀತೆಯೊಂದಿಗೆ ಇರು. (ಇದು ಸಿಗದಿದ್ದರೆ) ಒಂದು ಬಾಣವನ್ನು ಪ್ರಯೋಗಿಸಿ ಈ ಜಿಂಕೆಯನ್ನು ಕೊಂದುಹಾಕುತ್ತೇನೆ. ಕೊಂದು ಇದರ ಚರ್ಮವನ್ನು ತೆಗೆದುಕೊಂಡು ಬೇಗನೆ ಬಂದುಬಿಡುತ್ತೇನೆ. (೪೮-೪೯). ಕಾರ್ಯದಕ್ಷನಾದ ಜಟಾಯುವು ನಿನಗೆ ನೆರವಾಗಿರುತ್ತಾನೆ. ಅವನು ಬಲಶಾಲಿ; ಬುದ್ಧಿವಂತ. ಲಕ್ಷ್ಮಣ, ಪ್ರತಿನಿಮಿಷದಲ್ಲಿ ಎಲ್ಲಿಂದ ಯಾವ ಭಯ ಸಂಭವಿಸುವುದೋ ಎಂದು ಸಂದೇಹಿಸುತ್ತ, ಮೈಥಿಲಿಯನ್ನು ಜೋಪಾನವಾಗಿ ನೋಡಿಕೊಳ್ಳುತ್ತಿರು" ಎಂದು ಹೇಳಿದನು (೫೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತುಮೂರನೆಯ ಸರ್ಗ

## ಚತುಶ್ಚತ್ವಾರಿಂಶಃ ಸರ್ಗಃ

### ಮಾರೀಚವಂಚನಾ

ತಥಾ ತು ತಂ ಸಮಾದಿಶ್ಯ ಭ್ರಾತರಂ ರಘುನಂದನಃ ।
ಬಬಂಧಾಸಿಂ ಮಹಾತೇಜಾ ಜಾಂಬೂನದಮಯತ್ಸರುಮ್ ॥ ೧

ತತಸ್ತ್ರ್ಯವನತಂ ಚಾಪಮಾದಾಯಾತ್ಮವಿಭೂಷಣಮ್ ।
ಆಬಧ್ಯ ಚ ಕಲಾಪೌ ದ್ವೌ ಜಗಾಮೋದಗ್ರವಿಕ್ರಮಃ ॥ ೨

ತಂ ವಂಚಯಾನೋ ರಾಜೇಂದ್ರಮಾಪತಂತಂ ನಿರೀಕ್ಷ್ಯ ವೈ ।
ಬಭೂವಾಂತರ್ಹಿತಸ್ತ್ರಾಸಾತ್ ಪುನಃ ಸಂದರ್ಶನೇಽಭವತ್ ॥ ೩

ಬದ್ಧಾಸಿರ್ಧನುರಾದಾಯ ಪ್ರದುದ್ರಾವ ಯತೋ ಮೃಗಃ ।
ತಂ ಸ್ಮ ಪಶ್ಯತಿ ರೂಪೇಣ ದ್ಯೋತಮಾನಮಿವಾಗ್ರತಃ ॥ ೪

### ಸರ್ಗ ೪೪

ಮೃಗವೇಷಧಾರಿಯಾದ ಮಾರೀಚನು ಶ್ರೀರಾಮನನ್ನು ವಂಚಿಸಿ ಬಹುದೂರ ಕರೆದುಕೊಂಡು ಹೋಗುವುದು. ಕುಪಿತನಾದ ಶ್ರೀರಾಮನಿಂದ ಬಾಣಪ್ರಯೋಗ. ಮಾರೀಚನು ಸಾಯುವಾಗ 'ಹಾ ಸೀತೇ! ಹಾ ಲಕ್ಷ್ಮಣಾ!' ಎಂದು ಕೂಗುವುದು.

ಈ ಪ್ರಕಾರವಾಗಿ ರಘುನಂದನನು ತಮ್ಮನಿಗೆ ಸೂಚನೆಯನ್ನಿತ್ತು, ಸುವರ್ಣಮಯವಾದ ಖಡ್ಗವನ್ನು (ಸೊಂಟಕ್ಕೆ) ಸಿಕ್ಕಿಸಿಕೊಂಡನು. ಅನಂತರ ಎರಡು ಬತ್ತಳಿಕೆಗಳನ್ನು (ಬೆನ್ನಿಗೆ) ಬಿಗಿದುಕಟ್ಟಿದನು. ಆ ಪರಾಕ್ರಮಿಯು ಮೂರುಕಡೆ ಬಾಗಿದ್ದ ಮತ್ತು ತನಗೆ ಅಲಂಕಾರಪ್ರಾಯವಾದ ಕೋದಂಡವನ್ನು ಹಿಡಿದು ಹೊರಟನು (೧-೨). ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ರಾಜೇಂದ್ರನಾದ ಶ್ರೀರಾಮನನ್ನು ನೋಡಿ, ವಂಚಿಸುವುದಕ್ಕಾಗಿ ಬಂದಿದ್ದ ಮಾರೀಚನಿಗೆ ಭಯವಾಯಿತು. ಕೂಡಲೇ ಅವನು ಮರೆಯಾದನು. ಮತ್ತೆ (ರಾವಣನ) ಭಯದಿಂದ ಶ್ರೀರಾಮನಿಗೆ ಕಾಣಿಸಿಕೊಂಡನು (೩). ಖಡ್ಗವನ್ನು ಬಿಗಿದು ಕಟ್ಟಿದ್ದ ಶ್ರೀರಾಮನು ಧನುಷ್ಪಾಣಿಯಾಗಿ ಮೃಗವನ್ನು ಅಟ್ಟಿಸಿಕೊಂಡು ಓಡುತ್ತ

ಅವೇಕ್ಷ್ಯಾವೇಕ್ಷ್ಯ ಧಾವಂತಂ ಧನುಷ್ಪಾಣಿಂ ಮಹಾವನೇ ।
ಅತಿವೃತ್ತಮಿಷೋಃ ಪಾತಾಲ್ಲೋಭಯಾನಂ ಕದಾಚನ ॥ ೫

ಶಂಕಿತಂ ತು ಸಮುದ್ಭ್ರಾಂತಮುತ್ಪತಂತಮಿವಾಂಬರೇ ।
ದೃಶ್ಯಮಾನಮದೃಶ್ಯಂ ಚ ವನೋದ್ದೇಶೇಷು ಕೇಷುಚಿತ್ ॥ ೬

ಛಿನ್ನಾಭ್ರೈರಿವ ಸಂವೀತಂ ಶಾರದಂ ಚಂದ್ರಮಂಡಲಮ್ ।
ಮುಹೂರ್ತಾದೇವ ದದೃಶೇ ಮುಹುರ್ದೂರಾತ್ ಪ್ರಕಾಶತೇ ॥ ೭

ದರ್ಶನಾದರ್ಶನಾದೇವಂ ಸೋऽಪಾಕರ್ಷತ ರಾಘವಮ್ ।
ಸುದೂರಮಾಶ್ರಮಸ್ಯಾಸ್ಯ ಮಾರೀಚೋ ಮೃಗತಾಂ ಗತಃ ॥ ೮

ಆಸೀತ್ ಕ್ರುದ್ಧಸ್ತು ಕಾಕುತ್ಸ್ಥೋ ವಿವಶಸ್ತೇನ ಮೋಹಿತಃ ।
ಅಥಾವತಸ್ಥೇ ಸಂಭ್ರಾಂತಶ್ಛಾಯಾಮಾಶ್ರಿತ್ಯ ಶಾದ್ವಲೇ ॥ ೯

---

ಹೋದನು. ಒಂದೊಂದುಸಲ ಮೃಗವು ಸಮೀಪದಲ್ಲಿಯೇ ಎದುರಿಗೆ ತನ್ನ ಸುಂದರ ರೂಪದಿಂದ ವಿರಾಜಿಸುವುದು ಶ್ರೀರಾಮನಿಗೆ ಕಾಣಿಸುತ್ತಿತ್ತು (೪). ಶ್ರೀರಾಮನು ಧನುಷ್ಪಾಣಿಯಾಗಿ ಧಾವಿಸುತ್ತ ಬರುವುದನ್ನು ನೋಡುತ್ತ ನೋಡುತ್ತ, ಆ ಮೃಗವು ಬಾಣದ ಪೆಟ್ಟಿಗೆ ಹೆದರಿ ಆ ಮಹಾರಣ್ಯದಲ್ಲಿ ಓಡಿಹೋಗಿ ಮರೆಯಾಗುತ್ತಿತ್ತು. ಮತ್ತೆ ಕಾಣಿಸಿಕೊಂಡು ಶ್ರೀರಾಮನಿಗೆ ಆಸೆಯನ್ನು ಹುಟ್ಟಿಸುತ್ತಿತ್ತು (೫). ಕೆಲವು ವನಪ್ರದೇಶಗಳಲ್ಲಿ ಆ ಮಾಯಾಮೃಗವು ಹೆದರಿ ಕಂಗಾಲಾಗಿ ನೆಗೆದು ಕುಪ್ಪಳಿಸಿ ಆಕಾಶದಲ್ಲಿ ಹಾರಿಹೋಗುತ್ತಿದೆಯೋ ಎಂಬಂತೆ ಕಾಣಿಸುತ್ತಲೂ ಮರುಕ್ಷಣದಲ್ಲಿ ಮರೆಯಾಗುತ್ತಲೂ ಇದ್ದಿತು. ಶರತ್ಕಾಲದ ಚಂದ್ರಮಂಡಲವು ಮೇಘಖಂಡಗಳಲ್ಲಿ ಒಂದು ಕ್ಷಣ ಅದೃಶ್ಯವಾಗಿ ಮತ್ತೆ ದೃಶ್ಯವಾಗುವಂತೆ, ಆ ಮೃಗವು ಶ್ರೀರಾಮನಿಗೆ ಕಾಣಿಸುತ್ತಿದ್ದಿತು. ಒಂದು ಕ್ಷಣ ಹತ್ತಿರದಲ್ಲಿ ಗೋಚರಿಸಿದರೆ ಮರುಕ್ಷಣ ದೂರದಲ್ಲಿ ಗೋಚರಿಸುತ್ತಿತ್ತು (೬-೭). ಹೀಗೆ ದೃಷ್ಟಿಗೆ ಬೀಳುತ್ತ ಮಾಯವಾಗುತ್ತ ಆ ಜಿಂಕೆಯು ರಾಘವನನ್ನು ಬಹುದೂರದವರೆಗೆ ಸೆಳೆದೊಯ್ದಿತು. ಹರಿಣರೂಪವನ್ನು ಧರಿಸಿದ ಆ ಮಾರೀಚನು ಶ್ರೀರಾಮನನ್ನು ಆಶ್ರಮದಿಂದ ಬಹಳ ದೂರ ಕರೆದೊಯ್ದನು (೮). ಕಾಕುತ್ಸ್ಥನಿಗೆ ಕೋಪ ಬಂದಿತು. ಅವನು

ಸ ತಮುನ್ಮಾದಯಾಮಾಸ ಮೃಗರೂಪೋ ನಿಶಾಚರಃ ।
ಮೃಗೈಃ ಪರಿವೃತೋ ವನ್ಯೈರದೂರಾತ್ ಪ್ರತ್ಯದೃಶ್ಯತ ॥ ೧೦

ಗ್ರಹೀತುಕಾಮಂ ದೃಷ್ಟ್ವೈನಂ ಪುನರೇವಾಭ್ಯಧಾವತ ।
ತತ್ಕ್ಷಣಾದೇವ ಸಂತ್ರಾಸಾತ್ ಪುನರಂತರ್ಹಿತೋಽಭವತ್ ॥ ೧೧

ಪುನರೇವ ತತೋ ದೂರಾದ್ವೃಕ್ಷಷಂಡಾದ್ವಿನಿಃಸೃತಮ್ ।
ದೃಷ್ಟ್ವಾ ರಾಮೋ ಮಹಾತೇಜಾಸ್ತಂ ಹಂತುಂ ಕೃತನಿಶ್ಚಯಃ ॥ ೧೨

ಭೂಯಸ್ತು ಶರಮುದ್ಧೃತ್ಯ ಕುಪಿತಸ್ತತ್ರ ರಾಘವಃ ।
ಸೂರ್ಯರಶ್ಮಿಪ್ರತೀಕಾಶಂ ಜ್ವಲಂತಮರಿಮರ್ದನಃ ॥ ೧೩

ಸಂಧಾಯ ಸುದೃಢೇ ಚಾಪೇ ವಿಕೃಷ್ಯ ಬಲವದ್ಬಲೀ ।
ತಮೇವ ಮೃಗಮುದ್ದಿಶ್ಯ ಶ್ವಸಂತಮಿವ ಪನ್ನಗಮ್ ॥ ೧೪

ಮುಮೋಚ ಜ್ವಲಿತಂ ದೀಪ್ತಮಸ್ತ್ರಂ ಬ್ರಹ್ಮವಿನಿರ್ಮಿತಮ್ ।
ಶರೀರಂ ಮೃಗರೂಪಸ್ಯ ವಿನಿರ್ಭಿದ್ಯ ಶರೋತ್ತಮಃ ॥ ೧೫

---

ಕುತೂಹಲದಿಂದ ಮರುಳಾಗಿ ಮಾರೀಚನ ಮೋಸಕ್ಕೆ ಒಳಗಾಗಿದ್ದನು. ಆಮೇಲೆ ಶ್ರೀರಾಮನು ಒಂದು ಹುಲ್ಲುಗಾವಲಿನ ಮರದ ನೆರಳಲ್ಲಿ ಮುಂದೇನು ಮಾಡಬೇಕೆಂದು ತೋರದೆ ನಿಂತುಕೊಂಡನು. ಅಷ್ಟರಲ್ಲಿ ಆ ರಾಕ್ಷಸನು ಸ್ವಲ್ಪದೂರದಲ್ಲಿ ಪುನಃ ಮೃಗರೂಪದಲ್ಲಿ ಕಾಣಿಸಿಕೊಂಡನು. ಕಾಡಿನಲ್ಲಿದ್ದ ಜಿಂಕೆಗಳ ಪರಿವಾರದೊಡನೆ ಆ ಮಾಯಾಮೃಗವು ನಿಂತಿದ್ದಿತು. ಮತ್ತೆ ಆ ಮೃಗವು ಶ್ರೀರಾಮನನ್ನು ಮರುಳುಮಾಡಿತು (೯-೧೦). ತನ್ನನ್ನು ಹಿಡಿಯಬೇಕೆಂದು ಶ್ರೀರಾಮನು ಬರುತ್ತಿರುವುದನ್ನು ಕಂಡು, ಮತ್ತೆ ಆ ಮೃಗವು ಪಲಾಯನಮಾಡಿತು. ಆ ನಿಮಿಷದಲ್ಲಿಯೇ ಹೆದರಿಕೆಯಿಂದ ಪುನಃ ಅದೃಶ್ಯವಾಯಿತು. ಮತ್ತೆ ಸ್ವಲ್ಪಹೊತ್ತಿನಲ್ಲಿ ದೂರದಲ್ಲಿದ್ದ ಮರದ ಜಾಡಿನಿಂದ ಹೊರಗೆ ಬಂದುದು ಶ್ರೀರಾಮನಿಗೆ ಗೋಚರಿಸಿತು. ಆಗ ಶ್ರೀರಾಮನು ಆ ಮೃಗವನ್ನು ಕೊಲ್ಲಬೇಕೆಂದು ನಿರ್ಧರಿಸಿದನು (೧೧-೧೨). ಆತನು ಕ್ರುದ್ಧನಾಗಿ ಸೂರ್ಯರಶ್ಮಿಯಂತೆ ಮಿರುಗುವ ಶರವೊಂದನ್ನು ಹಿರಿದು, ದೃಢವಾದ ತನ್ನ ಧನುಸ್ಸಿಗೆ ಆಳವಡಿಸಿ ಸೆಳೆದು ಆ ಮೃಗಕ್ಕೆ ಗುರಿಯಿಟ್ಟು ಹೊಡೆದನು. ಬ್ರಹ್ಮದತ್ತವಾದ ದಿವ್ಯಾಸ್ತ್ರವು ಸರ್ಪದಂತೆ ಭುಗಿಲೆದ್ದು, ಸಿಡಿಲಿ

ಮಾರೀಚಸ್ಯೈವ ಹೃದಯಂ ಬಿಭೇದಾಶನಿಸಂನಿಭಃ ।
ತಾಲಮಾತ್ರಮಥೋತ್ಪ್ಲುತ್ಯ ನ್ಯಪತತ್ ಸ ಶರಾತುರಃ ॥ ೧೬

ವಿನದನ್ ಭೈರವಂ ನಾದಂ ಧರಣ್ಯಾಮಲ್ಪಜೀವಿತಃ ।
ಮ್ರಿಯಮಾಣಸ್ತು ಮಾರೀಚೋ ಜಹೌ ತಾಂ ಕೃತ್ರಿಮಾಂ ತನುಮ್

ಸ್ಮೃತ್ವಾ ತದ್ವಚನಂ ರಕ್ಷೋ ದಧ್ಯೌ ಕೇನ ತು ಲಕ್ಷ್ಮಣಮ್ ।
ಇಹ ಪ್ರಸ್ಥಾಪಯೇತ್ ಸೀತಾ ಶೂನ್ಯೇ ತಾಂ ರಾವಣೋ ಹರೇತ್ ॥

ಸ ಪ್ರಾಪ್ತಕಾಲಮಾಜ್ಞಾಯ ಚಕಾರ ಚ ತತಃ ಸ್ವರಮ್ ।
ಸದೃಶಂ ರಾಘವಸ್ಯೈವ ಹಾ ಸೀತೇ ಲಕ್ಷ್ಮಣೇತಿ ಚ ॥ ೧೯

ತೇನ ಮರ್ಮಣಿ ನಿರ್ವಿದ್ಧಃ ಶರೇಣಾನುಪಮೇನ ಚ ।
ಮೃಗರೂಪಂ ತು ತತ್ತ್ಯಕ್ತ್ವಾ ರಾಕ್ಷಸಂ ರೂಪಮಾಸ್ಥಿತಃ ॥ ೨೦

ಚಕ್ರೇ ಸ ಸುಮಹಾಕಾಯೋ ಮಾರೀಚೋ ಜೀವಿತಂ ತ್ಯಜನ್ ।
ತತೋ ವಿಚಿತ್ರಕೇಯೂರಃ ಸರ್ವಾಭರಣಭೂಷಿತಃ ॥ ೨೧

---

ನಂತೆ ಮೊರೆಯುತ್ತ ಎರಗಿ, ಮೃಗವೇಷಧಾರಿಯಾದ ಮಾರೀಚನ ಎದೆಯನ್ನು ಸೀಳಿತು. (೧೩-೧೫). ಅಸ್ತ್ರಾಘಾತದ ರಭಸಕ್ಕೆ ಮಾರೀಚನು ಭಯಂಕರವಾಗಿ ಅರಚುತ್ತ ತಾಳೆಯಮರದಷ್ಟು ಎತ್ತರ ಹಾರಿಬಿದ್ದನು! ಸಾವು ಸಮೀಪಿಸಿತು. ಕೃತ್ರಿಮವಾದ ಮಾಯಾಶರೀರವು ತೊಲಗಿತು (೧೬). ಆಗಲೂ ರಾವಣನು ಹೇಳಿದ್ದ ಮಾತು ಸ್ಮರಣೆಗೆ ಬಂದಿತು. 'ಯಾವ ಯುಕ್ತಿಯನ್ನು ಮಾಡಿದರೆ ಸೀತೆಯು ಲಕ್ಷ್ಮಣನನ್ನು ಇಲ್ಲಿಗೆ ಕಳುಹಿಸಹುದು. ಶೂನ್ಯವಾದ ಆಶ್ರಮದಲ್ಲಿರುವ ಸೀತೆಯನ್ನು ರಾವಣನು ಅಪಹರಿಸಬಹುದು' ಎಂಬುದನ್ನು ಆ ರಾಕ್ಷಸನು ಚಿಂತಿಸಿದನು (೧೭-೧೯). ಇದೇ ಕಾಲೋಚಿತವೆಂದು ನಿರ್ಧರಿಸಿ ಆ ಮಾರೀಚನು ಶ್ರೀರಾಮನ ಧ್ವನಿಯಂತೆಯೇ ಇರುವ ಧ್ವನಿಯಿಂದ 'ಹಾ ಸೀತೆ! ಹಾ ಲಕ್ಷ್ಮಣಾ!' ಎಂದು ಕೂಗಿದನು. ಅಸಾಧಾರಣವಾದ ರಾಮಬಾಣದಿಂದ ಮಾರೀಚನ ಮರ್ಮಸ್ಥಳವು ಜರ್ಝರಿತವಾಗಿತ್ತು. ಅವನ ಮೃಗರೂಪವು ಹೋಗಿ ರಾಕ್ಷಸರೂಪವು ಬಂದಿತ್ತು (೨೦). ಆತನು ಪ್ರಾಣಬಿಡುವಾಗ ಮಹತ್ತರವಾದ

ಹೇಮಮಾಲೀ ಮಹಾದಂಷ್ಟ್ರೋ ರಾಕ್ಷಸೋಽಭೂಚ್ಛರಾಹತಃ ।
ತಂ ದೃಷ್ಟ್ವಾ ಪತಿತಂ ಭೂಮೌ ರಾಕ್ಷಸಂ ಘೋರದರ್ಶನಮ್ ॥ ೨೨

ರಾಮೋ ರುಧಿರಸಿಕ್ತಾಂಗಂ ವೇಷ್ಟಮಾನಂ ಮಹೀತಲೇ ।
ಜಗಾಮ ಮನಸಾ ಸೀತಾಂ ಲಕ್ಷ್ಮಣಸ್ಯ ವಚಃ ಸ್ಮರನ್ ॥ ೨೩

ಮಾರೀಚಸ್ಯೈವ ಮಾಯೈಷಾ ಪೂರ್ವೋಕ್ತಂ ಲಕ್ಷ್ಮಣೇನ ತು ।
ತತ್ತಥಾ ಹ್ಯಭವಚ್ಚಾದ್ಯ ಮಾರೀಚೋಽಯಂ ಮಯಾ ಹತಃ ॥ ೨೪

ಹಾ ಸೀತೇ ಲಕ್ಷ್ಮಣೇತ್ಯೇವಮಾಕ್ರುಶ್ಯ ಚ ಮಹಾಸ್ವನಮ್ ।
ಮಮಾರ ರಾಕ್ಷಸಃ ಸೋಽಯಂ ಶ್ರುತ್ವಾ ಸೀತಾ ಕಥಂ ಭವೇತ್ ॥

ಲಕ್ಷ್ಮಣಶ್ಚ ಮಹಾಬಾಹುಃ ಕಾಮವಸ್ಥಾಂ ಗಮಿಷ್ಯತಿ ।
ಇತಿ ಸಂಚಿಂತ್ಯ ಧರ್ಮಾತ್ಮಾ ರಾಮೋ ಹೃಷ್ಟತನೂರುಹಃ ॥ ೨೬

ತತ್ರ ರಾಮಂ ಭಯಂ ತೀವ್ರಮಾವಿವೇಶ ವಿಷಾದಜಮ್ ।
ರಾಕ್ಷಸಂ ಮೃಗರೂಪಂ ತಂ ಹತ್ವಾ ಶ್ರುತ್ವಾ ಚ ತತ್ಸ್ವರಮ್ ॥ ೨೭

---

ತನ್ನ ರಾಕ್ಷಸಶರೀರವನ್ನು ಪಡೆದನು. ವಿಚಿತ್ರವಾದ ಕೇಯೂರಗಳನ್ನು ಧರಿಸಿ ಸರ್ವಾಭರಣಭೂಷಿತನಾಗಿ ಚಿನ್ನದ ಹಾರವನ್ನು ಹಾಕಿಕೊಂಡಿದ್ದ ಮಹಾದಂಷ್ಟ್ರನಾದ ರಾಕ್ಷಸನಾದನು (೨೧). ಆ ಜಿಂಕೆಯು ಘೋರಾಕಾರದ ರಾಕ್ಷಸನಾಗಿ ರಕ್ತದಲ್ಲಿ ನೆನೆದು ನೆಲದಮೇಲೆ ಹೊರಳುತ್ತಿರುವುದನ್ನು ನೋಡಿದೊಡನೆ, ಶ್ರೀರಾಮನಿಗೆ ಸೀತೆಯ ಚಿಂತೆಯುಂಟಾಯಿತು. ಲಕ್ಷ್ಮಣನು ಹೇಳಿದ ಮಾತು ನೆನಪಿಗೆ ಬಂದಿತು (೨೨-೨೩). "ಆಹಾ ! ಇದು ಮಾರೀಚನ ಮಾಯೆಯೇ ಹೌದು. ಲಕ್ಷ್ಮಣನು ಹೇಳಿದಂತೆಯೇ ಆಯಿತು. ಈಗ ನಾನು ಸಂಹರಿಸಿದ್ದು ಮಾರೀಚನನ್ನೇ. ಈ ರಾಕ್ಷಸನು ಸಾಯುವಾಗ 'ಹಾ ಸೀತೆ ! ಲಕ್ಷ್ಮಣಾ !' ಎಂದು ಗಟ್ಟಿಯಾಗಿ ಕೂಗಿ ಪ್ರಾಣಬಿಟ್ಟನಲ್ಲ ! ಇದನ್ನು ಕೇಳಿ ಸೀತೆಯು ಏನಾಗುವಳೋ ? ವೀರನಾದ ಲಕ್ಷ್ಮಣನು ಯಾವ ಅವಸ್ಥೆಯನ್ನು ಪಡೆಯುವನೋ !" ಎಂದು ಧರ್ಮಾತ್ಮನಾದ ಶ್ರೀರಾಮನು ಚಿಂತೆಗೊಳಗಾದನು. ಮೈ ಜುಮ್ಮೆಂದಿತು (೨೪-೨೬). ಯಾವ ಕೇಡು ಕಾದಿದೆಯೋ ಎಂದು ತೀವ್ರವಾದ ಭಯವು ಆವರಿಸಿತು.

ನಿಹತ್ಯ ಪೃಷತಂ ಚಾನ್ಯಂ ಮಾಂಸಮಾದಾಯ ರಾಘವಃ ।
ತ್ವರಮಾಣೋ ಜನಸ್ಥಾನಂ ಸಸಾರಾಭಿಮುಖಸ್ತದಾ ॥ ೨೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುಶ್ಚತ್ವಾರಿಂಶಃ ಸರ್ಗಃ

---

## ಪಂಚಚತ್ವಾರಿಂಶಃ ಸರ್ಗಃ

### ಸೀತಾಪಾರುಷ್ಯಮ್

ಆರ್ತಸ್ವರಂ ತು ತಂ ಭರ್ತುರ್ವಿಜ್ಞಾಯ ಸದೃಶಂ ವನೇ ।
ಉವಾಚ ಲಕ್ಷ್ಮಣಂ ಸೀತಾ ಗಚ್ಛ ಜಾನೀಹಿ ರಾಘವಮ್ ॥ ೧

ನ ಹಿ ಮೇ ಹೃದಯಂ ಸ್ಥಾನೇ ಜೀವಿತಂ ವಾವತಿಷ್ಠತೇ ।
ಕ್ರೋಶತಃ ಪರಮಾರ್ತಸ್ಯ ಶ್ರುತಃ ಶಬ್ದೋ ಮಯಾ ಭೃಶಮ್ ॥ ೨

---

ಮೃಗರೂಪಧಾರಿಯಾದ ಆ ರಾಕ್ಷಸನನ್ನು ಸಂಹರಿಸಿ ಅವನ ಕೂಗನ್ನು ಕೇಳಿ ದ್ದಾಯಿತು. ಆಮೇಲೆ ಶ್ರೀರಾಮನು ಇನ್ನೊಂದು ಜಿಂಕೆಯನ್ನು ಕೊಂದು ಅದರ ಮಾಂಸವನ್ನು ತೆಗೆದುಕೊಂಡು, ಜನಸ್ಥಾನದಲ್ಲಿದ್ದ ತನ್ನ ಆಶ್ರಮದ ಕಡೆಗೆ ತ್ವರೆಯಿಂದ ಹೊರಟನು (೨೭-೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತುನಾಲ್ಕನೆಯ ಸರ್ಗ

---

## ಸರ್ಗ ೪೫

ಮಾರೀಚನ ಕೂಗನ್ನು ಕೇಳಿ, ಶ್ರೀರಾಮನಿಗೆ ವಿಪತ್ತು ಸಂಭವಿಸಿರಬಹುದೆಂದು ಸೀತೆಯ ಶಂಕೆ. ಲಕ್ಷ್ಮಣನ ಸಮಾಧಾನ. ಸೀತೆಯ ಕಠೋರವಚನವನ್ನು ಕೇಳಲಾರದೆ ಲಕ್ಷ್ಮಣನು ಆಶ್ರಮದಿಂದ ಹೊರಡುವುದು.

ಇತ್ತ ಪರ್ಣಶಾಲೆಯಲ್ಲಿದ್ದ ಸೀತೆಗೆ 'ಹಾ ಸೀತೇ! ಹಾ ಲಕ್ಷ್ಮಣಾ!' ಎಂಬ ಆರ್ತಸ್ವರವು ಕೇಳಿಸಿತು. ಆ ಧ್ವನಿಯು ತನ್ನ ಪತಿಯ ಧ್ವನಿಯಂತೆಯೇ ಇದ್ದುದನ್ನು ಕೇಳಿ, ಅವಳು ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ, ಹೊರಡು. ಶ್ರೀರಾಮನಿಗೆ ಏನಾಯಿತೆಂಬುದನ್ನು ತಿಳಿ (೧). ನನ್ನ ಮನಸ್ಸು, ನನ್ನ ಜೀವ-ತಳಮಳಿಸುತ್ತಿವೆ. ನಾನು ಕೇಳಿದ್ದು ನಿಜವಾಗಿಯೂ ಮಹಾಸಂಕಟದಲ್ಲಿ ಸಿಕ್ಕಿ

ಆಕ್ರಂದಮಾನಂ ತು ವನೇ ಭ್ರಾತರಂ ತ್ರಾತುಮರ್ಹಸಿ ।
ತಂ ಕ್ಷಿಪ್ರಮಭಿಧಾವ ತ್ವಂ ಭ್ರಾತರಂ ಶರಣೈಷಿಣಮ್ ॥ ೩

ರಕ್ಷಸಾಂ ವಶಮಾಪನ್ನಂ ಸಿಂಹಾನಾಮಿವ ಗೋವೃಷಮ್ ।
ನ ಜಗಾಮ ತಥೋಕ್ತಸ್ತು ಭ್ರಾತುರಾಜ್ಞಾಯ ಶಾಸನಮ್ ॥ ೪

ತಮುವಾಚ ತತಸ್ತತ್ರ ಕುಪಿತಾ ಜನಕಾತ್ಮಜಾ ।
ಸೌಮಿತ್ರೇ ಮಿತ್ರರೂಪೇಣ ಭ್ರಾತುಸ್ತ್ವಮಸಿ ಶತ್ರುವತ್ ॥ ೫

ಯಸ್ತ್ವಮಸ್ಯಾಮವಸ್ಥಾಯಾಂ ಭ್ರಾತರಂ ನಾಭಿಪತ್ಸ್ಯಸೇ ।
ಇಚ್ಛಸಿ ತ್ವಂ ವಿನಶ್ಯಂತಂ ರಾಮಂ ಲಕ್ಷ್ಮಣ ಮತ್ಕೃತೇ ॥ ೬

ಲೋಭಾನ್ಮಮ ಕೃತೇ ನೂನಂ ನಾನುಗಚ್ಛಸಿ ರಾಘವಮ್ ।
ವ್ಯಸನಂ ತೇ ಪ್ರಿಯಂ ಮನ್ಯೇ ಸ್ನೇಹೋ ಭ್ರಾತರಿ ನಾಸ್ತಿ ತೇ ॥ ೭

ತೇನ ತಿಷ್ಠಸಿ ವಿಸ್ರಬ್ಧಸ್ತಮಪಶ್ಯನ್ ಮಹಾದ್ಯುತಿಮ್ ।
ಕಿಂ ಹಿ ಸಂಶಯಮಾಪನ್ನೇ ತಸ್ಮಿನ್ನಿಹ ಮಯಾ ಭವೇತ್ ॥ ೮

---

ಕೊಂಡ ಶ್ರೀರಾಮನ ಆರ್ತಶಬ್ದ. ಕಾಡಿನಲ್ಲಿ ನೆರವಿಗಾಗಿ ಕೂಗಿಕೊಂಡ ನಿನ್ನ ಅಣ್ಣನನ್ನು ನೀನು ರಕ್ಷಿಸಬೇಕು. ಬೇಗನೆ ಓಡುತ್ತ ಹೋಗು. ನಿನ್ನ ಅಣ್ಣನಿಗೆ ರಕ್ಷಣೆ ಬೇಕಾಗಿದೆ (೨-೩). ಅವನು ಬಹುಮಂದಿ ರಾಕ್ಷಸರ ಕೈಗೆ ಸಿಕ್ಕಿದ್ದಾನೆ. ಸಿಂಹಗಳ ಮಧ್ಯದಲ್ಲಿರುವ ವೃಷಭವಂತಾಗಿದ್ದಾನೆ" ಎಂದು ಹೇಳಿದಳು. ಆದರೆ ಲಕ್ಷ್ಮಣನು ಅಣ್ಣನ ಆಜ್ಞೆಯೊಂದನ್ನೇ ಮನ್ನಿಸಿ ಅಲ್ಲಿಂದ ಚಲಿಸಲಿಲ್ಲ (೪). ಆಗ ಜಾನಕಿಯು ಕುಪಿತಳಾಗಿ "ಲಕ್ಷ್ಮಣ, ನೀನು ಅಣ್ಣನಿಗೆ ಮಿತ್ರನಂತೆ ನಟಿಸುವ ಶತ್ರು. ನಿನ್ನ ಅಣ್ಣನು ಇಂಥ ಸಂಕಟದಲ್ಲಿ ಸಿಕ್ಕಿರುವಾಗಲೂ ಅವನಿಗೆ ನೆರವಾಗಲು ನಿನಗೆ ಇಚ್ಛೆಯಿಲ್ಲ. ಶ್ರೀರಾಮನು ಸಾಯಲೆಂಬುದೇ ನಿನ್ನ ಇಚ್ಛೆ! ನನಗೋಸ್ಕರ ನೀನು ಹೀಗೆ ಮಾಡುತ್ತಿದ್ದೀಯೆ! (೫-೬). ನನ್ನಮೇಲಿನ ಆಸೆಯಿಂದಲೇ ನೀನು ಶ್ರೀರಾಮನಿಗೆ ನೆರವಾಗಿ ಹೋಗಲು ಹಿಂಜರಿಯುತ್ತಿರಬೇಕು! ಅವನಿಗೆ ಕಷ್ಟಬಂದರೇ ನಿನಗೆ ಪ್ರಿಯವೆಂದು ತೋರುತ್ತದೆ. ಅಣ್ಣನಲ್ಲಿ ನಿನಗೆ ಸ್ನೇಹವಿಲ್ಲ (೭). ಆದ್ದರಿಂದ ನಿಶ್ಚಿಂತನಾಗಿ ನಿಂತಿದ್ದೀಯೆ. ಆ ತೇಜಸ್ವಿಯನ್ನು ನೋಡಲು ನಿನಗೆ ಇಚ್ಛೆಯಿಲ್ಲ. ಶ್ರೀರಾಮನು ಪ್ರಾಣಸಂಶಯಕ್ಕೆ ಈಡಾದಮೇಲೆ, ಇಲ್ಲಿ

ಕರ್ತವ್ಯಮಿಹ ತಿಷ್ಠಂತ್ಯಾ ಯತ್ಪ್ರಧಾನಸ್ತ್ವಮಾಗತಃ ।
ಇತಿ ಬ್ರುವಾಣಾಂ ವೈದೇಹೀಂ ಬಾಷ್ಪಶೋಕಪರಿಪ್ಲುತಾಮ್ ॥ ೯

ಅಬ್ರವೀಲ್ಲಕ್ಷ್ಮಣಸ್ತ್ರಸ್ತಾಂ ಸೀತಾಂ ಮೃಗವಧೂಮಿವ ।
ಪನ್ನಗಾಸುರಗಂಧರ್ವದೇವಮಾನುಷರಾಕ್ಷಸೈಃ ॥ ೧೦

ಅಶಕ್ಯಸ್ತವ ವೈದೇಹಿ ಭರ್ತಾ ಜೇತುಂ ನ ಸಂಶಯಃ ।
ದೇವಿ ದೇವಮನುಷ್ಯೇಷು ಗಂಧರ್ವೇಷು ಪತತ್ರಿಷು ॥ ೧೧

ರಾಕ್ಷಸೇಷು ಪಿಶಾಚೇಷು ಕಿಂನರೇಷು ಮೃಗೇಷು ಚ ।
ದಾನವೇಷು ಚ ಘೋರೇಷು ನ ಸ ವಿದ್ಯೇತ ಶೋಭನೇ ॥ ೧೨

ಯೋ ರಾಮಂ ಪ್ರತಿಯುಧ್ಯೇತ ಸಮರೇ ವಾಸವೋಪಮಮ್ ।
ಅವಧ್ಯಃ ಸಮರೇ ರಾಮೋ ನೈವಂ ತ್ವಂ ವಕ್ತುಮರ್ಹಸಿ ॥ ೧೩

ನ ತ್ವಾಮಸ್ಮಿನ್ ವನೇ ಹಾತುಮುತ್ಸಹೇ ರಾಘವಂ ವಿನಾ ।
ಅನಿವಾರ್ಯಂ ಬಲಂ ತಸ್ಯ ಬಲೈರ್ಬಲವತಾಮಪಿ ॥ ೧೪

ನಾನು ಜೀವಿಸಿದ್ದು ಆಗಬೇಕಾದ್ದೇನು? ನೀನು ಬೇರೆ ನನ್ನನ್ನು ಮುಖ್ಯವಾದ ಗುರಿಯಾಗಿಟ್ಟುಕೊಂಡು* ಬಂದಿದ್ದೀಯೆ" ಎಂದು ಕಣ್ಣೀರು ಸುರಿಸುತ್ತ ಶೋಕದಿಂದ ಹಲುಬಿದಳು (೮-೯). ಹೆಣ್ಣುಜಿಂಕೆಯಂತೆ ಹೆದರಿ ಕಂಗಾಲಾದ ಸೀತೆಯನ್ನು ನೋಡಿ ಲಕ್ಷ್ಮಣನು ಹೀಗೆಂದನು: "ತಾಯಿ, ಬರಿಯ ರಾಕ್ಷಸರು ಮಾತ್ರವಲ್ಲ, ಪನ್ನಗ, ಅಸುರ, ಗಂಧರ್ವ, ದೇವ, ಮಾನುಷ, ರಾಕ್ಷಸರೆಲ್ಲರೂ ಒಟ್ಟಾಗಿ ಬಂದರೂ ನಿನ್ನ ಪತಿಯನ್ನು ಜಯಿಸಲು ಸಾಧ್ಯವಿಲ್ಲ. ಇದು ನಿಸ್ಸಂದೇಹವಾದ ವಿಷಯ (೧೦-೧೧). ದೇವಿ, ದೇವೇಂದ್ರಸದೃಶನಾದ ಶ್ರೀರಾಮನನ್ನು ಎದುರಿಸಿ ದೇವ, ಮನುಷ್ಯ, ರಾಕ್ಷಸ, ಪಿಶಾಚಾದಿಗಳಲ್ಲಿ ಯಾವನಿಗೆ ಯುದ್ಧ ಮಾಡುವ ಎದೆಗಾರಿಕೆ ಇದ್ದೀತು? ಅಂಥವನೊಬ್ಬನೂ ಇಲ್ಲ. ರಣಭೂಮಿಯಲ್ಲಿ ಶ್ರೀರಾಮನನ್ನು ವಧಿಸಲು ಶಕ್ಯವೇ ಇಲ್ಲ. ನೀನು ಹಾಗೆಲ್ಲ ಮಾತಾಡಬಾರದು (೧೨-೧೩). ಶ್ರೀರಾಮನಿಲ್ಲದಿರುವಾಗ ಈ ವನದಲ್ಲಿ ನಿನ್ನೊಬ್ಬಳನ್ನೇ ಬಿಟ್ಟು ಹೋಗಲು ನನಗೆ ಮನಸ್ಸು ಬಾರದು. ಎಂತಹ ಬಲಾಢ್ಯರಾದವರು ಸೇನೆಯೊಡ

* ಅನುಬಂಧವನ್ನು ನೋಡಿ.

ತ್ರಿಭಿರ್ಲೋಕೈಃ ಸಮುದ್ಯುಕ್ತೈಃ ಸೇಶ್ವರೈರಪಿ ಸಾಮರೈಃ ।
ಹೃದಯಂ ನಿರ್ವೃತಂ ತೇಽಸ್ತು ಸಂತಾಪಸ್ತ್ಯಜ್ಯತಾಮಯಮ್ ॥ ೧೫
ಆಗಮಿಷ್ಯತಿ ತೇ ಭರ್ತಾ ಶೀಘ್ರಂ ಹತ್ವಾ ಮೃಗೋತ್ತಮಮ್ ।
ನ ಚ ತಸ್ಯ ಸ್ವರೋ ವ್ಯಕ್ತಂ ಮಾಯಯಾ ಕೇನಚಿತ್ಕೃತಃ ॥ ೧೬
ಗಂಧರ್ವನಗರಪ್ರಖ್ಯಾ ಮಾಯಾ ಸಾ ತಸ್ಯ ರಕ್ಷಸಃ ।
ನ್ಯಾಸಭೂತಾಸಿ ವೈದೇಹಿ ನ್ಯಸ್ತಾ ಮಯಿ ಮಹಾತ್ಮನಾ ॥ ೧೭
ರಾಮೇಣ ತ್ವಂ ವರಾರೋಹೇ ನ ತ್ವಾಂ ತ್ಯಕ್ತುಮಿಹೋತ್ಸಹೇ ।
ಕೃತವೈರಾಶ್ಚ ಕಲ್ಯಾಣಿ ವಯಮೇತೈರ್ನಿಶಾಚರೈಃ ॥ ೧೮
ಖರಸ್ಯ ನಿಧನಾದೇವ ಜನಸ್ಥಾನವಧಂ ಪ್ರತಿ ।
ರಾಕ್ಷಸಾ ವಿವಿಧಾ ವಾಚೋ ವಿಸೃಜಂತಿ ಮಹಾವನೇ ॥ ೧೯
ಹಿಂಸಾವಿಹಾರಾ ವೈದೇಹೀ ನ ಚಿಂತಯಿತುಮರ್ಹಸಿ ।
ಲಕ್ಷ್ಮಣೇನೈವಮುಕ್ತಾ ಸಾ ಕ್ರುದ್ಧಾ ಸಂರಕ್ತಲೋಚನಾ ॥ ೨೦

---

ಗೂಡಿ ಬಂದರೂ ಅಣ್ಣನ ಪರಾಕ್ರಮವನ್ನು ತಡೆಗಟ್ಟಲಾರರು. ಮೂರು ಲೋಕದವರೆಲ್ಲರೂ ಒಟ್ಟಾಗಿ ದೇವ ದೇವೇಂದ್ರರೊಡನೆ ಬಂದರೂ ಶ್ರೀರಾಮನ ಬಲವು ದುರ್ಧರ್ಷವಾಗಿರುವುದು. ನಿನ್ನ ಮನಸ್ಸು ನೆಮ್ಮದಿಯಾಗಿರಲಿ. ಈ ಕಳವಳವನ್ನು ತ್ಯಜಿಸು (೧೪-೧೫). ನಿನ್ನ ಪತಿಯು ಆ ಮೃಗವನ್ನು ಸಂಹರಿಸಿ ಬೇಗನೆ ಬರುವನು. ಅದು ಶ್ರೀರಾಮನ ಧ್ವನಿಯಲ್ಲ. ಯಾವನೋ ರಾಕ್ಷಸನು ಮಾಯೆಯಿಂದ ಅದೇ ಧ್ವನಿಯಲ್ಲಿ ಕೂಗಿದ್ದಾನೆ. ಮೃಗರೂಪದಲ್ಲಿ ಬಂದ ಆ ರಾಕ್ಷಸನ ಮಾಯೆಯೇ ಸರಿ. ಅದು ಗಂಧರ್ವನಗರದಂತೆ ವ್ಯಾಮೋಹವನ್ನುಂಟುಮಾಡುತ್ತದೆ. ವೈದೇಹಿ, ಮಹಾತ್ಮನಾದ ಶ್ರೀರಾಮನು ನ್ಯಾಸದಂತೆ ನಿನ್ನ ರಕ್ಷಣೆಯನ್ನು ನನಗೆ ವಹಿಸಿಕೊಟ್ಟಿದ್ದಾನೆ (೧೬-೧೭). ಆದ್ದರಿಂದ ನಿನ್ನನ್ನು ತ್ಯಜಿಸಿ ಹೋಗುವುದು ನನ್ನಿಂದಾಗದು. ದೇವಿ, ಈಗ ನಾವು ಈ ರಾಕ್ಷಸರೊಡನೆ ವೈರವನ್ನು ಬೆಳೆಸಿಕೊಂಡಿದ್ದೇವೆ. ಖರನ ವಧೆ – ಜನಸ್ಥಾನದ ಸಂಹಾರಪ್ರಸಂಗ ಇದಕ್ಕೆ ನಿಮಿತ್ತವಾಗಿದೆ. ಈ ಘೋರಾರಣ್ಯದಲ್ಲಿ ರಾಕ್ಷಸರು ವಿವಿಧರೀತಿಯ ವಿಕೃತಶಬ್ದಗಳನ್ನು ಮಾಡುತ್ತಿದ್ದಾರೆ (೧೮-೧೯). ಪ್ರಾಣಹಿಂಸೆಯು ಅವರಿಗೊಂದು ಆಟವಾಗಿದೆ. ದೇವಿ, ನೀನು ಚಿಂತಿಸಬೇಡ" ಎಂದು ಹೇಳಿದನು. ಅದನ್ನು ಕೇಳಿ

ಅಬ್ರವೀತ್ಪರುಷಂ ವಾಕ್ಯಂ ಲಕ್ಷ್ಮಣಂ ಸತ್ಯವಾದಿನಮ್ ।
ಅನಾರ್ಯಾಕರುಣಾರಂಭ ನೃಶಂಸ ಕುಲಪಾಂಸನ ॥ ೨೧

ಅಹಂ ತವ ಪ್ರಿಯಂ ಮನ್ಯೇ ರಾಮಸ್ಯ ವ್ಯಸನಂ ಮಹತ್ ।
ರಾಮಸ್ಯ ವ್ಯಸನಂ ದೃಷ್ಟ್ವಾ ತೇನೈತಾನಿ ಪ್ರಭಾಷಸೇ ॥ ೨೨

ನೈತಚ್ಚಿತ್ರಂ ಸಪತ್ನೇಷು ಪಾಪಂ ಲಕ್ಷ್ಮಣ ಯದ್ಭವೇತ್ ।
ತ್ವದ್ವಿಧೇಷು ನೃಶಂಸೇಷು ನಿತ್ಯಂ ಪ್ರಚ್ಛನ್ನಚಾರಿಷು ॥ ೨೩

ಸುದುಷ್ಟಸ್ತ್ವಂ ವನೇ ರಾಮಮೇಕಮೇಕೋಽನುಗಚ್ಛಸಿ ।
ಮಮ ಹೇತೋಃ ಪ್ರತಿಚ್ಛನ್ನಃ ಪ್ರಯುಕ್ತೋ ಭರತೇನ ವಾ ॥ ೨೪

ತನ್ನ ಸಿಧ್ಯತಿ ಸೌಮಿತ್ರೇ ತವ ವಾ ಭರತಸ್ಯ ವಾ ।
ಕಥಮಿಂದೀವರಶ್ಯಾಮಂ ಪದ್ಮಪತ್ರನಿಭೇಕ್ಷಣಮ್ ॥ ೨೫

ಉಪಸಂಶ್ರಿತ್ಯ ಭರ್ತಾರಂ ಕಾಮಯೇಯಂ ಪೃಥಗ್ಜನಮ್ ।
ಸಮಕ್ಷಂ ತವ ಸೌಮಿತ್ರೇ ಪ್ರಾಣಾಂಸ್ತ್ಯಕ್ಷ್ಯೇ ನ ಸಂಶಯಃ ॥ ೨೬

---

ಸೀತೆಗೆ ಕೋಪ ಹೆಚ್ಚಿತು. ಕಣ್ಣುಗಳು ಕೆಂಪಾದವು. ಸತ್ಯವನ್ನೇ ನುಡಿದ ಲಕ್ಷ್ಮಣನಿಗೆ ಮತ್ತೆ ಕಠೋರವಾಕ್ಯಗಳನ್ನಾಡಿದಳು : "ಎಲಾ ಅಯೋಗ್ಯ, ಕರುಣೆಯ ಲೇಶವೂ ಇಲ್ಲದ ಘಾತುಕಿ ನೀನು! ಕುಲಗೇಡಿ! (೨೦-೨೧). ಶ್ರೀರಾಮನಿಗೆ ಬಂದ ಘೋರವಾದ ವಿಪತ್ತು ನಿನಗೆ ಪ್ರಿಯವಾಗಿದೆಯೆಂದು ತೋರುತ್ತದೆ. ಶ್ರೀರಾಮನಿಗೆ ಕಷ್ಟಬಂದಿದೆ ಎಂಬುದನ್ನು ತಿಳಿದೇ ಈ ಮಾತುಗಳನ್ನಾಡುತ್ತಿದ್ದೀಯೆ. ನೀನು ಸವತಿಯ ಮಗನಾದ ದಾಯಾದಿಯಲ್ಲವೆ? ನಿನ್ನಂಥ ಘಾತುಕರೂ ಮೋಸಗಾರರೂ ಆದವರಲ್ಲಿ ಕೆಟ್ಟ ಉದ್ದೇಶವಿದ್ದರೆ ಆಶ್ಚರ್ಯವೇನಲ್ಲ (೨೨-೨೩). ಮಹಾದುಷ್ಟ ನೀನು! ಕಾಡಿನಲ್ಲಿ ಅಸಹಾಯನಾದ ಶ್ರೀರಾಮನನ್ನು ನೀನು ಒಂಟಿಯಾಗಿ ಹಿಂಬಾಲಿಸಿ ಬಂದಿದ್ದೀಯೆ. ನನಗೋಸ್ಕರ ಕಪಟತನದಿಂದ ಬಂದಿದ್ದೀಯೆ. ಅಥವಾ ಭರತನೇ ನಿನ್ನನ್ನು ಕಳಿಸಿದ್ದಾನೋ ಏನೋ! (೨೪). ಆದರೆ ಲಕ್ಷ್ಮಣ, ನಿನ್ನ ಉದ್ದೇಶವೂ ನಡೆಯದು! ಭರತನದೂ ನಡೆಯದು! ಇಂದೀವರಶ್ಯಾಮಲಾಂಗನೂ ಪದ್ಮದಳಾಯತಾಕ್ಷನೂ ಆದ ನನ್ನ ಪತಿಯನ್ನು ನಂಬಿರುವ ನಾನು ನಿನ್ನಂಥ ಅಲ್ಪನನ್ನು ಎಂದಿಗಾದರೂ

ರಾಮಂ ವಿನಾ ಕ್ಷಣಮಪಿ ನ ಹಿ ಜೀವಾಮಿ ಭೂತಲೇ ।
ಇತ್ಯುಕ್ತಃ ಪರುಷಂ ವಾಕ್ಯಂ ಸೀತಯಾ ರೋಮಹರ್ಷಣಮ್ ॥ ೨೭

ಅಬ್ರವೀಲ್ಲಕ್ಷ್ಮಣಃ ಸೀತಾಂ ಪ್ರಾಂಜಲಿರ್ವಿಜಿತೇಂದ್ರಿಯಃ ।
ಉತ್ತರಂ ನೋತ್ಸಹೇ ವಕ್ತುಂ ದೈವತಂ ಭವತೀ ಮಮ ॥ ೨೮

ವಾಕ್ಯಮಪ್ರತಿರೂಪಂ ತು ನ ಚಿತ್ರಂ ಸ್ತ್ರೀಷು ಮೈಥಿಲಿ ।
ಸ್ವಭಾವಸ್ತ್ವೇಷ ನಾರೀಣಾಮೇವಂ ಲೋಕೇಷು ದೃಶ್ಯತೇ ॥ ೨೯

ವಿಮುಕ್ತಧರ್ಮಾಶ್ಚಪಲಾಸ್ತೀಕ್ಷ್ಣಾ ಭೇದಕರಾಃ ಸ್ತ್ರಿಯಃ ।
ನ ಸಹೇ ಹೀದೃಶಂ ವಾಕ್ಯಂ ವೈದೇಹಿ ಜನಕಾತ್ಮಜೇ ॥ ೩೦

ಶ್ರೋತ್ರಯೋರುಭಯೋರ್ಮೇಽದ್ಯ ತಪ್ತನಾರಾಚಸಂನಿಭಮ್ ।
ಉಪಶೃಣ್ವಂತು ಮೇ ಸರ್ವೇ ಸಾಕ್ಷಿಭೂತಾ ವನೇಚರಾಃ ॥ ೩೧

ಬಯಸಿಯೇನೆ? ಲಕ್ಷ್ಮಣ, (ನೋಡುತ್ತಿರು) ನಿನ್ನೆದುರಿಗೇ ನಾನು ಪ್ರಾಣವನ್ನು ಬಿಡುತ್ತೇನೆ. ಇದು ನಿಶ್ಚಯ (೨೫-೨೬). ಶ್ರೀರಾಮನನ್ನಗಲಿ ಒಂದು ಕ್ಷಣವೂ ನಾನು ಈ ಭೂಮಿಯಲ್ಲಿ ಬದುಕಿರಲಾರೆ" ಎಂದು ಹೇಳಿದಳು. ಸೀತೆಯು ಆಡಿದ ಮೈನವಿರೇಳಿಸುವ ಈ ಕಠೋರವಾಕ್ಯಗಳನ್ನು ಜಿತೇಂದ್ರಿಯನಾದ ಲಕ್ಷ್ಮಣನು ಕೇಳಿದನು. ಆತನು ಕೈಮುಗಿದುಕೊಂಡು ಸೀತಾದೇವಿಯನ್ನು ಕುರಿತು ಹೀಗೆಂದನು: "ದೇವಿ, ಇದಕ್ಕೆ ಪ್ರತಿಯಾಗಿ ನಾನು ಉತ್ತರ ಹೇಳಲಾರೆ. ನೀನು ನನಗೆ ಪ್ರತ್ಯಕ್ಷ ದೇವತೆಯಾಗಿದ್ದೀಯೆ (೨೭-೨೮). ಯಾರೂ ಆಡಲಾರದ ಅತ್ಯಂತ ಅನುಚಿತವಾದ ಮಾತು ಸ್ತ್ರೀಯರಲ್ಲಿ ಕಂಡುಬಂದರೆ ಅಚ್ಚರಿಯಲ್ಲ. ಲೋಕದಲ್ಲಿ ಹೆಂಗಸರ ಸ್ವಭಾವ ಹೀಗಿರುವುದು ಕಂಡುಬರುತ್ತದೆ. ಹೆಂಗಸರು ಚಂಚಲಚಿತ್ತರಾಗಿ ವಿನಯಾದಿ ಸದ್ಗುಣಗಳನ್ನು ಗಾಳಿಗೆ ತೂರುತ್ತಾರೆ. ಕ್ರೂರ ಹೃದಯರಾಗಿ ಜನರ ಸ್ನೇಹಕ್ಕೆ ಭಂಗವನ್ನು ತರುತ್ತಾರೆ. ವೈದೇಹಿ–ಜನಕರಾಜ ತನಯೆ, ಇಂಥ ಮಾತನ್ನು ನಾನು ಸಹಿಸಲಾರೆ (೨೯-೩೦). ನೀನಾಡಿದ ಮಾತಿನಿಂದ ಕಾಯಿಸಿದ ಕಬ್ಬಿಣದ ಸರಳನ್ನು ನನ್ನ ಕಿವಿಗಳೆರಡರಲ್ಲಿಯೂ ಹಿಡಿದಂತಾಯಿತು! ಸಕಲ ವನದೇವತೆಗಳೂ ನನಗೆ ಸಾಕ್ಷಿಗಳಾಗಿ ಈ ವಿಷಯವನ್ನು

ನ್ಯಾಯವಾದೀ ಯಥಾऽನ್ಯಾಯಮುಕ್ತೋऽಹಂ ಪರುಷಂ ತ್ವಯಾ ।
ಧಿಕ್ತ್ವಾಮದ್ಯ ಪ್ರಣಶ್ಯ ತ್ವಂ ಯನ್ಮಾಮೇವಂ ವಿಶಂಕಸೇ ॥ ೩೨

ಸ್ತ್ರೀತ್ವಾತ್ ದುಷ್ಟಸ್ವಭಾವೇನ ಗುರುವಾಕ್ಯೇ ವ್ಯವಸ್ಥಿತಮ್ ।
ಗಮಿಷ್ಯೇ ಯತ್ರ ಕಾಕುತ್ಸ್ಥಃ ಸ್ವಸ್ತಿ ತೇऽಸ್ತು ವರಾನನೇ ॥ ೩೩

ರಕ್ಷಂತು ತ್ವಾಂ ವಿಶಾಲಾಕ್ಷಿ ಸಮಗ್ರಾ ವನದೇವತಾಃ ।
ನಿಮಿತ್ತಾನಿ ಹಿ ಘೋರಾಣಿ ಯಾನಿ ಪ್ರಾದುರ್ಭವಂತಿ ಮೇ ॥ ೩೪

ಅಪಿ ತ್ವಾಂ ಸಹ ರಾಮೇಣ ಪಶ್ಯೇಯಂ ಪುನರಾಗತಃ ।
ಲಕ್ಷ್ಮಣೇನೈವಮುಕ್ತಾ ಸಾ ರುದಂತೀ ಜನಕಾತ್ಮಜಾ ॥ ೩೫

ಪ್ರತ್ಯುವಾಚ ತತೋ ವಾಕ್ಯಂ ತೀವ್ರಂ ಬಾಷ್ಪಪರಿಪ್ಲುತಾ ।
ಗೋದಾವರೀಂ ಪ್ರವೇಕ್ಷ್ಯಾಮಿ ವಿನಾ ರಾಮೇಣ ಲಕ್ಷ್ಮಣ ॥ ೩೬

ಆಬಂಧಿಷ್ಯೇऽಥ ವಾ ತ್ಯಕ್ಷ್ಯೇ ವಿಷಮೇ ದೇಹಮಾತ್ಮನಃ ।
ಪಿಬಾಮ್ಯಹಂ ವಿಷಂ ತೀಕ್ಷ್ಣಂ ಪ್ರವೇಕ್ಷ್ಯಾಮಿ ಹುತಾಶನಮ್ ॥ ೩೭

---

ಕೇಳಿಕೊಂಡಿರಲಿ. ನಾನು ನ್ಯಾಯವಾದ ಮಾತನ್ನಾಡಿದರೂ ಎಷ್ಟು ಅನ್ಯಾಯವಾಗಿ ಎಂತಹ ಕಠೋರವಾದ ಮಾತನ್ನು ನನಗೆ ಹೇಳಿದೆ! ಥೂ! ನೀನು ಹಾಳಾಗಿಹೋಗು! ನನ್ನನ್ನು ಹೀಗೆ ಶಂಕಿಸುವೆಯಾ? (೩೧-೩೨). ಹೆಂಗಸಾದ್ದರಿಂದ ನಿನಗೆ ದುಷ್ಟಸ್ವಭಾವ ಸಹಜ. ನನ್ನ ಗುರುವಾದ ಅಣ್ಣನ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸುತ್ತಿರುವ ನನ್ನನ್ನು, ಆದ್ದರಿಂದಲೇ ಶಂಕಿಸುತ್ತಿದ್ದೀಯೆ. (ಒಳ್ಳೆಯದು) ಶ್ರೀರಾಮನಿರುವಲ್ಲಿಗೆ ಹೋಗುವೆನು. ದೇವಿ, ನಿನಗೆ ಶುಭವಾಗಲಿ! (೩೩). ಸಮಸ್ತವನದೇವತೆಗಳೂ ನಿನ್ನನ್ನು ಕಾಪಾಡಲಿ! ಈಗ ನನಗಾಗುವ ಕೆಟ್ಟ ಶಕುನಗಳನ್ನು ಗಮನಿಸಿದರೆ—ಪುನಃ ನಾನು ಶ್ರೀರಾಮನೊಡನೆ ಬಂದು ನಿನ್ನನ್ನು ಕಾಣುವೆನೆ!" ಎಂದನು. ಜಾನಕಿಯು ಅಳುತ್ತಿದ್ದಳು (೩೪-೩೫). ಅವಳು ಕಣ್ಣೀರು ಸುರಿಸುತ್ತ ಮತ್ತೆ ಕಠೋರವಾಗಿ "ಶ್ರೀರಾಮನಿಲ್ಲದಿದ್ದರೆ ನಾನು ಗೋದಾವರೀನದಿಯಲ್ಲಿ ಧುಮುಕುವೆನು; ನೇಣುಹಾಕಿಕೊಳ್ಳುವೆನು'; ಕೊರಕಲು ಹಳ್ಳದಲ್ಲಾದರೂ ಬಿದ್ದು ದೇಹವನ್ನು ಬಿಡುವೆನು; ಘೋರವಿಷವನ್ನಾದರೂ

ನ ತ್ವಹಂ ರಾಘವಾದನ್ಯಂ ಪದಾಪಿ ಪುರುಷಂ ಸ್ಪೃಶೇ ।
ಇತಿ ಲಕ್ಷ್ಮಣಮಾಕ್ರುಶ್ಯ ಸೀತಾ ದುಃಖಸಮನ್ವಿತಾ ॥ ೩೮
ಪಾಣಿಭ್ಯಾಂ ರುದತೀ ದುಃಖಾದುದರಂ ಪ್ರಜಘಾನ ಹ ॥

ತಾಮಾರ್ತರೂಪಾಂ ವಿಮನಾ ರುದಂತೀಂ
ಸೌಮಿತ್ರಿರಾಲೋಕ್ಯ ವಿಶಾಲನೇತ್ರಾಮ್ ।
ಆಶ್ವಾಸಯಾಮಾಸ ನ ಚೈವ ಭರ್ತು-
ಸ್ತಂ ಭ್ರಾತರಂ ಕಿಂಚಿದುವಾಚ ಸೀತಾ ॥ ೩೯

ತತಸ್ತು ಸೀತಾಮಭಿವಾದ್ಯ ಲಕ್ಷ್ಮಣಃ
ಕೃತಾಂಜಲಿಃ ಕಿಂಚಿದಭಿಪ್ರಣಮ್ಯ ಚ ।
ಅನ್ವೀಕ್ಷಮಾಣೋ ಬಹುಶಶ್ಚ ಮೈಥಿಲೀಂ
ಜಗಾಮ ರಾಮಸ್ಯ ಸಮೀಪಮಾತ್ಮವಾನ್ ॥ ೪೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚಚತ್ವಾರಿಂಶಃ ಸರ್ಗಃ

ಕುಡಿಯುತ್ತೇನೆ. ಇಲ್ಲವೆ, ಬೆಂಕಿಗೆ ಬೀಳುತ್ತೇನೆ! (೩೬-೩೭). ಲಕ್ಷ್ಮಣ, ಶ್ರೀರಾಮನನ್ನು ಬಿಟ್ಟು ಇನ್ನೊಬ್ಬ ಗಂಡಸನ್ನು (ಎಡ)ಗಾಲಿನಿಂದಲೂ ಮುಟ್ಟಲಾರೆ!" ಎಂದು ದುಃಖಾವೇಶದಿಂದ ಕೂಗಿದಳು. ಕಣ್ಣೀರು ಹರಿಸುತ್ತ ಶೋಕೋದ್ರೇಕದಿಂದ ಎರಡು ಕೈಗಳಿಂದಲೂ ಹೊಟ್ಟೆಯನ್ನು ಬಡಿದುಕೊಂಡಳು (೩೮). ಹೀಗೆ ದುಃಖಾರ್ತಳಾಗಿ ಅಳುತ್ತಿದ್ದ ಸೀತೆಯನ್ನು ನೋಡಿ ಸೌಮಿತ್ರಿಗೆ ಬಹಳ ಖೇದವಾಯಿತು. ಅವನು ಮತ್ತೆ ಅವಳನ್ನು ಸಂತೈಸಲು ಪ್ರಯತ್ನಿಸಿ ನೋಡಿದನು. ಆದರೆ ಸೀತೆಯು ಮೈದುನನೊಡನೆ ಒಂದು ಮಾತನ್ನೂ ಆಡಲಿಲ್ಲ (೩೯). ಅನಂತರ ಲಕ್ಷ್ಮಣನು ಕೈಮುಗಿದುಕೊಂಡು ಸ್ವಲ್ಪ ಬಗ್ಗಿ (ಮನಸ್ಸಿನಲ್ಲಿಯೇ) ಸೀತೆಗೆ ಅಭಿವಾದನೆ ಮಾಡಿದನು. ಆ ಧೀರನು ಮನಸ್ಸನ್ನು ಗಟ್ಟಿಮಾಡಿಕೊಂಡು ಶ್ರೀರಾಮನ ಬಳಿಗೆ ಹೊರಟನು. ಅವನು ಹೋಗುವಾಗ ತಿರುತಿರುಗಿ ಮೈಥಿಲಿಯನ್ನು ನೋಡುತ್ತ ನೋಡುತ್ತ ಮುಂದೆ ಹೋದನು (೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೈದನೆಯ ಸರ್ಗ

## ಷಟ್‌ಚತ್ವಾರಿಂಶಃ ಸರ್ಗಃ

### ರಾವಣಭಿಕ್ಷುಸತ್ಕಾರಃ

ತಥಾ ಪರುಷಮುಕ್ತಸ್ತು ಕುಪಿತೋ ರಾಘವಾನುಜಃ ।
ಸ ವಿಕಾಂಕ್ಷನ್ ಭೃಶಂ ರಾಮಂ ಪ್ರತಸ್ಥೇ ನ ಚಿರಾದಿವ ॥ ೧

ತದಾಸಾದ್ಯ ದಶಗ್ರೀವಃ ಕ್ಷಿಪ್ರಮಂತರಮಾಸ್ಥಿತಃ ।
ಅಭಿಚಕ್ರಾಮ ವೈದೇಹೀಂ ಪರಿವ್ರಾಜಕರೂಪಧೃತ್ ॥ ೨

ಶ್ಲಕ್ಷ್ಣಕಾಷಾಯಸಂವೀತಃ ಶಿಖೀ ಛತ್ರೀ ಉಪಾನಹೀ ।
ವಾಮೇ ಚಾಂಸೇಽವಸಜ್ಯಾಥ ಶುಭೇ ಯಷ್ಟಿಕಮಂಡಲೂ ॥ ೩

ಪರಿವ್ರಾಜಕರೂಪೇಣ ವೈದೇಹೀಮನ್ವಪದ್ಯತ ।
ತಾಮಾಸಸಾದಾತಿಬಲೋ ಭ್ರಾತೃಭ್ಯಾಂ ರಹಿತಾಂ ವನೇ ॥ ೪

### ಸರ್ಗ ೪೬

ಭಿಕ್ಷುವೇಶವನ್ನು ಧರಿಸಿ ರಾವಣನ ಆಗಮನ. ಅವನು ಅತಿಥಿಯೆಂದು ತಿಳಿದು ಸೀತೆಯಿಂದ ಸತ್ಕಾರ

ಸೀತೆಯ ಪರುಷವಚನಗಳಿಂದ ಲಕ್ಷ್ಮಣನು ಕುಪಿತನಾಗಿ, ಶ್ರೀರಾಮನನ್ನು ನೋಡಲೇಬೇಕೆಂದು ಉದ್ದೇಶಿಸಿ, ಕಾಲೆಳೆಯುತ್ತ ಬೇಗಬೇಗನೆ ಹೋದನು. ಅದಕ್ಕಾಗಿ ಕಾದಿದ್ದ ದಶಕಂಠನಿಗೆ ಸರಿಯಾದ ಅವಕಾಶ ಸಿಕ್ಕಿತು. ಕೂಡಲೇ ಅವನು ಪರಿವ್ರಾಜಕವೇಷವನ್ನು ಧರಿಸಿ ವೈದೇಹಿಯಿದ್ದಲ್ಲಿಗೆ ಬಂದನು (೧-೨). ಅವನು ಮೃದುವಾದ ಕಾಷಾಯವಸ್ತ್ರವನ್ನುಟ್ಟು ತಲೆಯಲ್ಲಿ ಶಿಖೆಯನ್ನು ಧರಿಸಿ* ಛತ್ರಿಯನ್ನು ಹಿಡಿದು ಪಾದುಕೆಗಳನ್ನು ಮೆಟ್ಟಿದ್ದನು. ಎಡಹೆಗಲಿಗೆ ದಂಡ ಕಮಂಡಲುಗಳನ್ನು ಅಳವಡಿಸಿಕೊಂಡಿದ್ದನು (೩). ಅರಣ್ಯದಲ್ಲಿ ಅಣ್ಣತಮ್ಮಂದಿರಾದ ರಾಮಲಕ್ಷ್ಮಣರಿಬ್ಬರೂ ಇಲ್ಲದಾಗ ಸೀತೆಯು, ಸೂರ್ಯಚಂದ್ರರಿಬ್ಬರೂ ಇಲ್ಲದ ಸಂಧ್ಯೆಯಂತಾಗಿದ್ದಳು. ಕಾರ್ಗತ್ತಲೆಯು ಸಂಧ್ಯೆಯನ್ನು ಸಮೀಪಿಸುವಂತೆ,

* ಸಂನ್ಯಾಸದಲ್ಲಿ ತ್ರಿದಂಡಿಸಂನ್ಯಾಸವೆಂಬ ಒಂದು ಭೇದ ಉಂಟು. ಆ ಸಂನ್ಯಾಸವನ್ನು ಸ್ವೀಕರಿಸಿದವನಿಗೆ ತಲೆಯಲ್ಲಿ ಶಿಖೆ ಇರುತ್ತದೆ.

ರಹಿತಾಂ ಚಂದ್ರಸೂರ್ಯಾಭ್ಯಾಂ ಸಂಧ್ಯಾಮಿವ ಮಹತ್ತಮಃ ।
ತಾಮಪಶ್ಯತ್ತತೋ ಬಾಲಾಂ ರಾಮಪತ್ನೀಂ ಯಶಸ್ವಿನೀಮ್ ॥ ೫

ರೋಹಿಣೀಂ ಶಶಿನಾ ಹೀನಾಂ ಗ್ರಹವದ್ಭೃಶದಾರುಣಃ ।
ತಮುಗ್ರತೇಜಃಕರ್ಮಾಣಂ ಜನಸ್ಥಾನರುಹಾ ದ್ರುಮಾಃ ॥ ೬

ಸಮೀಕ್ಷ್ಯ ನ ಪ್ರಕಂಪಂತೇ ನ ಪ್ರವಾತಿ ಚ ಮಾರುತಃ ।
ಶೀಘ್ರಸ್ರೋತಾಶ್ಚ ತಂ ದೃಷ್ಟ್ವಾ ವೀಕ್ಷಂತಂ ರಕ್ತಲೋಚನಮ್ ॥ ೭

ಸ್ತಿಮಿತಂ ಗಂತುಮಾರೇಭೇ ಭಯಾದ್ಗೋದಾವರೀ ನದೀ ।
ರಾಮಸ್ಯ ತ್ವಂತರಂ ಪ್ರೇಪ್ಸುರ್ದಶಗ್ರೀವಸ್ತದಂತರೇ ॥ ೮

ಉಪತಸ್ಥೇ ಚ ವೈದೇಹೀಂ ಭಿಕ್ಷುರೂಪೇಣ ರಾವಣಃ ।
ಅಭವ್ಯೋ ಭವ್ಯರೂಪೇಣ ಭರ್ತಾರಮನುಶೋಚತೀಮ್ ॥ ೯

ಅಭ್ಯವರ್ತತ ವೈದೇಹೀಂ ಚಿತ್ರಾಮಿವ ಶನೈಶ್ಚರಃ ।
ಸ ಪಾಪೋ ಭವ್ಯರೂಪೇಣ ತೃಣೈಃ ಕೂಪ ಇವಾವೃತಃ ॥ ೧೦

---

ಬಲಾಢ್ಯನಾದ ರಾವಣನು ಸೀತೆಯ ಬಳಿಗೆ ಬಂದನು (೪). ಚಂದ್ರಮನಿಲ್ಲದಾಗ ರೋಹಿಣಿಯನ್ನು ಪಾಪಗ್ರಹವು ವೀಕ್ಷಿಸುವಂತೆ, ಶ್ರೀರಾಮನ ಪತ್ನಿಯಾದ ಆ ಬಾಲೆಯನ್ನು ದಾರುಣಸ್ವಭಾವದ ರಾವಣನು ಕಣ್ಣಿಟ್ಟು ನೋಡಿದನು. ಉಗ್ರ ತೇಜೋವಂತನೂ ಕ್ರೂರಕರ್ಮನೂ ಆದ ರಾವಣನನ್ನು ನೋಡಿ ಜನಸ್ಥಾನದಲ್ಲಿ ಬೆಳೆದಿದ್ದ ಮರಗಳು ಅಲ್ಲಾಡಲಿಲ್ಲ ! ಗಾಳಿ ಬೀಸಲಿಲ್ಲ ! (೫-೬). ವೇಗವಾಗಿ ಹರಿಯುತ್ತಿದ್ದ ಗೋದಾವರೀನದಿಯು, ಕೆಂಗಣ್ಣಿನಿಂದ ನೋಡುತ್ತಿದ್ದ ರಾವಣನನ್ನು ಕಂಡು ಹೆದರಿ ಮೆಲ್ಲಗೆ ಹರಿಯತೊಡಗಿದಳು ! ಶ್ರೀರಾಮನಿಗೆ ಅಪಕಾರಮಾಡಲು ಅವಕಾಶಕ್ಕಾಗಿ ಹವಣಿಸುತ್ತಿದ್ದ ರಾವಣನು ಭಿಕ್ಷುರೂಪದಿಂದ ವೈದೇಹಿಯ ಬಳಿಗೆ ಬಂದನು ! (೭-೮). ಸಾಧುವೇಷವನ್ನು ಧರಿಸಿದ ಆ ದುಷ್ಟನು, ತನ್ನ ಪತಿಗಾಗಿ ಹಂಬಲಿಸುತ್ತ ಶೋಕಮಗ್ನಳಾಗಿದ್ದ ವೈದೇಹಿಯ ಬಳಿಗೆ ಬಂದನು ! ಚಿತ್ರಾ ನಕ್ಷತ್ರದ ಬಳಿಗೆ ಶನಿಯು ಬಂದಂತೆ ಬಂದನು ! ಮೇಲೆ ಹುಲ್ಲು ಮುಚ್ಚಿದ ಹಾಳುಬಾವಿಯಂತಿದ್ದ ಆ ಪಾಪಿಯು, ಶ್ರೀರಾಮನ ಪತ್ನಿಯಾದ ವೈದೇಹಿಯ ಬಳಿಗೆ

ಅತಿಷ್ಠತ್ಪ್ರೇಕ್ಷ್ಯ ವೈದೇಹೀಂ ರಾಮಪತ್ನೀಂ ಯಶಸ್ವಿನೀಮ್ ।
ಶುಭಾಂ ರುಚಿರದಂತೋಷ್ಠೀಂ ಪೂರ್ಣಚಂದ್ರನಿಭಾನನಾಮ್ ॥ ೧೧

ಆಸೀನಾಂ ಪರ್ಣಶಾಲಾಯಾಂ ಬಾಷ್ಪಶೋಕಾಭಿಪೀಡಿತಾಮ್ ।
ಸ ತಾಂ ಪದ್ಮಪಲಾಶಾಕ್ಷೀಂ ಪೀತಕೌಶೇಯವಾಸಿನೀಮ್ ॥ ೧೨

ಅಭ್ಯಗಚ್ಛತ ವೈದೇಹೀಂ ಹೃಷ್ಟಚೇತಾ ನಿಶಾಚರಃ ।
ಸ ಮನ್ಮಥಶರಾವಿಷ್ಟೋ ಬ್ರಹ್ಮಘೋಷಮುದೀರಯನ್ ॥ ೧೩

ಅಬ್ರವೀತ್ಪ್ರಶ್ರಿತಂ ವಾಕ್ಯಂ ರಹಿತೇ ರಾಕ್ಷಸಾಧಿಪಃ ।
ತಾಮುತ್ತಮಾಂ ಸ್ತ್ರಿಯಂ ಲೋಕೇ ಪದ್ಮಹೀನಾಮಿವ ಶ್ರಿಯಮ್ ॥

ವಿಭ್ರಾಜಮಾನಾಂ ವಪುಷಾ ರಾವಣಃ ಪ್ರಶಶಂಸ ಹ ।
ಕಾ ತ್ವಂ ಕಾಂಚನವರ್ಣಾಭೇ ಪೀತಕೌಶೇಯವಾಸಿನಿ ॥ ೧೫

---

ಬಂದು ನಿಂತನು ! (೯-೧೦). ಕೀರ್ತಿಶಾಲಿನಿಯೂ ಶುಭಾಂಗಿಯೂ ಹೊಳೆಯುವ ದಂತಪಂಕ್ತಿಯುಳ್ಳವಳೂ ಚೆಂದುಟಿಯವಳೂ ಪೂರ್ಣಚಂದ್ರಾನನೆಯೂ ಪದ್ಮದಳಾಯತಾಕ್ಷಿಯೂ ಹಳದಿಯ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟವಳೂ ಆದ ವೈದೇಹಿಯನ್ನು ನೋಡಿ ಆ ರಾಕ್ಷಸನು ಆನಂದದಿಂದ ಹಿಗ್ಗುತ್ತ ಮುಂದೆ ಬಂದನು ! ಸೀತೆಯು ಶೋಕದಲ್ಲಿ ಮುಳುಗಿ ಕಣ್ಣೀರು ಹರಿಸುತ್ತ ಪರ್ಣಶಾಲೆಯಲ್ಲಿ ಕುಳಿತಿದ್ದಳು (೧೧-೧೨). ಕಾಮಪೀಡಿತನಾದ ರಾವಣನು 'ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ಯತಯಃ ಶುದ್ಧಸತ್ತ್ವಾಃ' ಎಂದು ವೇದವಾಕ್ಯವನ್ನು ಘೋಷಿಸುತ್ತ ಬಂದನು ! (೧೩). ಆ ರಾಕ್ಷಸರಾಜನು ಇನ್ನು ಯಾರೂ ಇಲ್ಲದ ಆ ಸ್ಥಳಕ್ಕೆ ಬಂದು ಮೆಲ್ಲುನುಡಿಯಿಂದ ಮಾತನಾಡಲಾರಂಭಿಸಿದನು. ಕೈಯಲ್ಲಿ ಕಮಲವೊಂದಿಲ್ಲದ ಸಾಕ್ಷಾಲ್ಲಕ್ಷ್ಮಿಯಂತೆ ಲಾವಣ್ಯವತಿಯಾಗಿ, ಲೋಕದಲ್ಲಿ ಅತ್ಯುತ್ತಮವಾದ ಸ್ತ್ರೀರತ್ನವೆನಿಸಿದ ಸೀತಾದೇವಿಯನ್ನು ಹೊಗಳುತ್ತ ರಾವಣನು ಹೀಗೆಂದನು : "ಎಲೌ ಬಂಗಾರದ ಮೈಬಣ್ಣದವಳೆ ! ನೀನು ಯಾರು ? ಹಳದಿಯ ರೇಷ್ಮೆಯ ಸೀರೆಯನ್ನುಟ್ಟವಳೆ !, ನೀನು ಯಾರು ? (೧೪-೧೫).

ಕಮಲಾನಾಂ ಶುಭಾಂ ಮಾಲಾಂ ಪದ್ಮಿನೀವ ಹಿ ಬಿಭ್ರತೀ ।
ಹ್ರೀಃ ಶ್ರೀಃ ಕೀರ್ತಿಃ ಶುಭಾ ಲಕ್ಷ್ಮೀರಪ್ಸರಾ ವಾ ಶುಭಾನನೇ ॥ ೧೬

ಭೂತಿರ್ವಾ ತ್ವಂ ವರಾರೋಹೇ ರತಿರ್ವಾ ಸ್ವೈರಚಾರಿಣೀ ।
ಸಮಾಃ ಶಿಖರಿಣಃ ಸ್ನಿಗ್ಧಾಃ ಪಾಂಡರಾ ದಶನಾಸ್ತವ ॥ ೧೭

ವಿಶಾಲೇ ವಿಮಲೇ ನೇತ್ರೇ ರಕ್ತಾಂತೇ ಕೃಷ್ಣತಾರಕೇ ।
ವಿಶಾಲಂ ಜಘನಂ ಪೀನಮೂರೂ ಕರಿಕರೋಪಮೌ ॥ ೧೮

ಏತಾವುಪಚಿತೌ ವೃತ್ತೌ ಸಂಹತೌ ಸಂಪ್ರವಲ್ಗಿತೌ ।
ಪೀನೋನ್ನತಮುಖೌ ಕಾಂತೌ ಸ್ನಿಗ್ಧೌ ತಾಲಫಲೋಪಮೌ ॥ ೧೯

ಮಣಿಪ್ರವೇಕಾಭರಣೌ ರುಚಿರೌ ತೇ ಪಯೋಧರೌ ।
ಚಾರುಸ್ಮಿತೇ ಚಾರುದತಿ ಚಾರುನೇತ್ರೇ ವಿಲಾಸಿನಿ ॥ ೨೦

---

ತಾವರೆಹೂಗಳ ಚೆಲುವಾದ ಮಾಲೆಯನ್ನು ಧರಿಸಿದ* ತಾವರೆಯಬಳ್ಳಿಯಂತಿರುವ ನೀನು ಯಾರು? ನೀನು ಗೌರಿಯೊ,** ಸಂಪದಭಿಮಾನಿದೇವತೆಯೊ, ಕೀರ್ತಿದೇವತೆಯೊ? (೧೬). ಅಥವಾ ಸೌಭಾಗ್ಯದಾಯಿನಿಯಾದ ಲಕ್ಷ್ಮಿಯೊ, ಅಣಿಮಾದಿ ಅಷ್ಟಸಿದ್ಧಿಗಳಲ್ಲೊಬ್ಬಳೊ? ಸುಂದರಿ, ನೀನು ಸ್ವತಂತ್ರವಾಗಿ ಸಂಚರಿಸುತ್ತ ಬಂದ ರತಿಯೊ? ನಿನ್ನ ಹಲ್ಲುಗಳು ಸಮವಾಗಿ ಒಂದೇ ಅಳತೆಯಲ್ಲಿದ್ದು (ಮಲ್ಲಿಗೆಯ ಮೊಗ್ಗಿನಂತೆ) ಅಗ್ರಭಾಗವನ್ನು ಹೊಂದಿವೆ; ಬೆಳ್ಳಗೆ ಹೊಳೆಯುತ್ತಿವೆ (೧೭). ವಿಶಾಲವಾದ ನಿನ್ನ ವಿಮಲನೇತ್ರಗಳು ಅಂಚಿನಲ್ಲಿ ಕೆಂಪಾಗಿವೆ. ಕಣ್ಣುಗುಡ್ಡೆಗಳು ಕಪ್ಪಾಗಿವೆ. ವಿಶಾಲಪೀನಜಘನೆಯಾಗಿ ಕರಿಕರಸದೃಶೋರುವಾಗಿದ್ದೀಯೆ (೧೮). ವರ್ತುಲಾಕಾರವಾಗಿ ಬೆಳೆದು ತಾಳೆಯಹಣ್ಣುಗಳಂತೆ ಚೆಲುವಾದ ನಿನ್ನ ಪೀನೋನ್ನತಸ್ತನಗಳು ಸ್ವಲ್ಪ ಅಲುಗುತ್ತಿವೆ. ಇವು ಮಣಿಮಾಲಾಭೂಷಿತವಾದ್ದರಿಂದ ಇನ್ನೂ ಚಂದವಾಗಿ ಕಾಣಿಸುತ್ತವೆ. ಹೇ ವಿಲಾಸಿನಿ, ನಿನ್ನ

---

* ಸೀತೆಯ ಮುಖ, ಕಣ್ಣು, ಹಸ್ತ, ಪಾದಗಳು ತಾವರೆಯ ಹೂಗಳಂತೆ ಇವೆಯೆಂದು ಅಭಿಪ್ರಾಯ.

** ಹ್ರೀಃ = ಗೌರಿ ; ಭೂದೇವಿ.

ಮನೋ ಹರಸಿ ಮೇ ಕಾಂತೇ ನದೀ ಕೂಲಮಿವಾಂಭಸಾ ।
ಕರಾಂತಮಿತಮಧ್ಯಾಸಿ ಸುಕೇಶೀ ಸಂಹತಸ್ತನೀ ॥ ೨೧

ನೈವ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿಂನರೀ ।
ನೈವಂರೂಪಾ ಮಯಾ ನಾರೀ ದೃಷ್ಟಪೂರ್ವಾ ಮಹೀತಲೇ ॥ ೨೨

ರೂಪಮಗ್ರ್ಯಂ ಚ ಲೋಕೇಷು ಸೌಕುಮಾರ್ಯಂ ವಯಶ್ಚ ತೇ ।
ಇಹ ವಾಸಶ್ಚ ಕಾಂತಾರೇ ಚಿತ್ತಮುನ್ಮಾದಯಂತಿ ಮೇ ॥ ೨೩

ಸಾ ಪ್ರತಿಕ್ರಾಮ ಭದ್ರಂ ತೇ ನ ತ್ವಂ ವಸ್ತುಮಿಹಾರ್ಹಸಿ ।
ರಾಕ್ಷಸಾನಾಮಯಂ ವಾಸೋ ಘೋರಾಣಾಂ ಕಾಮರೂಪಿಣಾಮ್ ॥

ಪ್ರಾಸಾದಾಗ್ರಾಣಿ ರಮ್ಯಾಣಿ ನಗರೋಪವನಾನಿ ಚ ।
ಸಂಪನ್ನಾನಿ ಸುಗಂಧೀನಿ ಯುಕ್ತಾನ್ಯಾಚರಿತುಂ ತ್ವಯಾ ॥ ೨೫

ವರಂ ಮಾಲ್ಯಂ ವರಂ ಭೋಜ್ಯಂ ವರಂ ವಸ್ತ್ರಂ ಚ ಶೋಭನೇ ।
ಭರ್ತಾರಂ ಚ ವರಂ ಮನ್ಯೇ ತ್ವದ್ಯುಕ್ತಮಸಿತೇಕ್ಷಣೇ ॥ ೨೬

---

ಹುಸಿನಗೆಯ ಸೊಗಸೇನು ! ಹಲ್ಲಿನ ಸೊಗಸೇನು ! ಕಣ್ಣಿನ ಸೊಗಸೇನು ! (೧೯-೨೦). ರಮಣಿ, ನೀನು ಹೊಳೆಯ ದಂಡೆಯನ್ನು ಕೊರೆದು ಸೆಳೆದೊಯ್ಯುವಂತೆ ನನ್ನ ಮನಸ್ಸನ್ನು ಸೆಳೆಯುತ್ತಿದ್ದೀಯೆ. ಕೈಯಲ್ಲಿ ಹಿಡಿಯುವಷ್ಟು ನಿನ್ನ ನಡು ಕೃಶವಾಗಿದೆ. ಎಲೌ ಸುಸ್ತನಿ, ನಿನ್ನ ತಲೆಗೂದಲು ಎಷ್ಟು ಚೆಲುವಾಗಿದೆ ! (೨೧). ನಿನ್ನಷ್ಟು ರೂಪವತಿಯಾದ ದೇವತಾಸ್ತ್ರೀಯನ್ನು ನಾನು ನೋಡಿಲ್ಲ. ಈ ಜಗತ್ತಿನಲ್ಲಿ ಗಂಧರ್ವ ಯಕ್ಷ ಕಿನ್ನರರಲ್ಲಾಗಲಿ ಮನುಷ್ಯರಲ್ಲಾಗಲಿ ನಿನ್ನಂಥ ಸುಂದರಿಯನ್ನು ನಾನು ಕಂಡಿಲ್ಲ (೨೨). ಲೋಕದಲ್ಲಿ ಸರ್ವಶ್ರೇಷ್ಠವಾದ ಈ ರೂಪ, ಈ ಕೋಮಲತೆ, ಈ ವಯಸ್ಸು, ಈ ಕಾಡಿನಲ್ಲಿ ವಾಸ—ಇವು ನನ್ನ ಮನಸ್ಸನ್ನು ಹುಚ್ಚೆಬ್ಬಿಸುತ್ತಿವೆ. ನೀನು ಇಲ್ಲಿಂದ ಹೊರಟುಹೋಗು. ಶುಭವಾಗಲಿ ! ನೀನು ಇಲ್ಲಿ ವಾಸವಾಗಿರುವುದು ಸರಿಯಲ್ಲ. ಕಾಮರೂಪಿಗಳಾದ ಘೋರರಾಕ್ಷಸರು ವಾಸವಾಗಿರುವ ಸ್ಥಳವಿದು ! (೨೩-೨೪). ಸಂಪದ್ಭರಿತವಾದ ದಿವ್ಯಭವನಗಳ ಮಹಡಿಗಳಲ್ಲಿಯೂ ಸುಗಂಧವನ್ನು ಬೀರುವ ರಮಣೀಯವಾದ ನಗರೋದ್ಯಾನಗಳಲ್ಲಿಯೂ ನೀನು ತಿರುಗಾಡಿಕೊಂಡು ಇರಬೇಕಾದವಳು. ಕಲ್ಯಾಣಿ, ನೀನು

ಕಾ ತ್ವಂ ಭವಸಿ ರುದ್ರಾಣಾಂ ಮರುತಾಂ ವಾ ವರಾನನೇ ।
ವಸೂನಾಂ ವಾ ವರಾರೋಹೇ ದೇವತಾ ಪ್ರತಿಭಾಸಿ ಮೇ ॥ ೨೭

ನೇಹಾಗಚ್ಛಂತಿ ಗಂಧರ್ವಾ ನ ದೇವಾ ನ ಚ ಕಿಂನರಾಃ ।
ರಾಕ್ಷಸಾನಾಮಯಂ ವಾಸಂ ಕಥಂ ನು ತ್ವಮಿಹಾಗತಾ ॥ ೨೮

ಇಹ ಶಾಖಾಮೃಗಾಃ ಸಿಂಹಾ ದ್ವೀಪಿವ್ಯಾಘ್ರಮೃಗಾಸ್ತಥಾ ।
ಋಕ್ಷಾಸ್ತರಕ್ಷವಃ ಕಂಕಾಃ ಕಥಂ ತೇಭ್ಯೋ ನ ಬಿಭ್ಯಸಿ ॥ ೨೯

ಮದಾನ್ವಿತಾನಾಂ ಘೋರಾಣಾಂ ಕುಂಜರಾಣಾಂ ತರಸ್ವಿನಾಮ್ ।
ಕಥಮೇಕಾ ಮಹಾರಣ್ಯೇ ನ ಬಿಭೇಷಿ ವರಾನನೇ ॥ ೩೦

ಕಾಸಿ ಕಸ್ಯ ಕುತಶ್ಚ ತ್ವಂ ಕಿಂ ನಿಮಿತ್ತಂ ಚ ದಂಡಕಾನ್ ।
ಏಕಾ ಚರಸಿ ಕಲ್ಯಾಣಿ ಘೋರಾನ್ ರಾಕ್ಷಸಸೇವಿತಾನ್ ॥ ೩೧

ಇತಿ ಪ್ರಶಸ್ತಾ ವೈದೇಹೀ ರಾವಣೇನ ದುರಾತ್ಮನಾ ।
ದ್ವಿಜಾತಿವೇಷೇಣ ಹಿ ತಂ ದೃಷ್ಟ್ವಾ ರಾವಣಮಾಗತಮ್ ॥ ೩೨

---

ಉಪಯೋಗಿಸುವ ಮಾಲೆ, ಆಹಾರ, ವಸ್ತ್ರ—ಎಲ್ಲವೂ ಶ್ರೇಷ್ಠವಾಗಿರಬೇಕು. ನಿನಗೆ ಪ್ರಶಸ್ತನಾದ ಪತಿಯಿರಬೇಕೆಂದು ತಿಳಿಯುತ್ತೇನೆ (೨೫-೨೬). ನೀನು ಯಾವಳೋ ದೇವತಾಸ್ತ್ರೀಯೆಂದು ನನಗೆ ತೋರುತ್ತದೆ. ರುದ್ರರು, ಮರುತ್ತುಗಳು ಅಥವಾ ವಸುಗಳಲ್ಲಿ ನೀನು ಯಾರಿಗೆ ಸೇರಿದವಳು ? ಗಂಧರ್ವರು, ದೇವತೆಗಳು, ಕಿನ್ನರರು ಇತ್ತ ಸುಳಿಯುವುದಿಲ್ಲ. ಇದು ರಾಕ್ಷಸರಿರುವ ಸ್ಥಳ. ನೀನು ಇಲ್ಲಿಗೆ ಹೇಗೆ ಬಂದಿರಬಹುದು ! (೨೭-೨೮). ಇಲ್ಲಿ ಕಪಿ, ಸಿಂಹ, ಚಿರತೆ, ಹುಲಿ ಮುಂತಾದ ಕಾಡುಮೃಗಗಳಿವೆ. ಕರಡಿಗಳೂ ಪಟ್ಟೆಹುಲಿಗಳೂ ಇವೆ. ಮಾಂಸಾಹಾರಿಗಳಾದ ಹದ್ದುಗಳಿವೆ. ನಿನಗೆ ಅವುಗಳಿಂದ ಹೆದರಿಕೆಯಾಗುವುದಿಲ್ಲವೆ ? (೨೯). ಭಯಂಕರವಾದ ಮದ್ದಾನೆಗಳು ಇಲ್ಲಿ ರಭಸದಿಂದ ಸಂಚರಿಸುತ್ತವೆ. ಸುಂದರಿ, ಈ ಅರಣ್ಯದಲ್ಲಿ ಒಂಟಿಯಾಗಿರುವೆಯಲ್ಲ, ನಿನಗೆ ಭಯವಾಗುವುದಿಲ್ಲವೆ ? ನೀನು ಯಾರು ? ಯಾರ ಕಡೆಯವಳು ? ಎಲ್ಲಿಂದ ಬಂದಿದ್ದೀಯೆ ? ರಾಕ್ಷಸರಿರುವ ಈ ಘೋರಾರಣ್ಯದಲ್ಲಿ ಒಂಟಿಯಾಗಿ ಏಕೆ ತಿರುಗುತ್ತಿದ್ದೀಯೆ ?" ಎಂದು ಕೇಳಿದನು (೩೦-೩೧). ದುರಾತ್ಮನಾದ ರಾವಣನು ವೈದೇಹಿಯನ್ನು

ಸರ್ವೈರತಿಥಿಸತ್ಕಾರೈಃ ಪೂಜಯಾಮಾಸ ಮೈಥಿಲೀ ।
ಉಪನೀಯಾಸನಂ ಪೂರ್ವಂ ಪಾದ್ಯೇನಾಭಿನಿಮಂತ್ರ್ಯ ಚ ॥ ೩೩

ಅಬ್ರವೀತ್ಸಿದ್ಧಮಿತ್ಯೇವ ತದಾ ತಂ ಸೌಮ್ಯದರ್ಶನಮ್ ॥

ದ್ವಿಜಾತಿವೇಷೇಣ ಸಮೀಕ್ಷ್ಯ ಮೈಥಿಲೀ
ಸಮಾಗತಂ ಪಾತ್ರಕುಸುಂಭಧಾರಿಣಮ್ ।
ಅಶಕ್ಯಮುದ್ದ್ವೇಷ್ಟುಮುಪಾಯದರ್ಶನಾ-
ನ್ನ್ಯಮಂತ್ರಯದ್ಬ್ರಾಹ್ಮಣವತ್ತದಾಂಗನಾ ॥ ೩೪

ಇಯಂ ಬೃಸೀ ಬ್ರಾಹ್ಮಣ ಕಾಮಮಾಸ್ಯತಾ-
ಮಿದಂ ಚ ಪಾದ್ಯಂ ಪ್ರತಿಗೃಹ್ಯತಾಮಿತಿ ।
ಇದಂ ಚ ಸಿದ್ಧಂ ವನಜಾತಮುತ್ತಮಂ
ತ್ವದರ್ಥಮವ್ಯಗ್ರಮಿಹೋಪಭುಜ್ಯತಾಮ್ ॥ ೩೫

ನಿಮಂತ್ರ್ಯಮಾಣಃ ಪ್ರತಿಪೂರ್ಣಭಾಷಿಣೀಂ
ನರೇಂದ್ರಪತ್ನೀಂ ಪ್ರಸಮೀಕ್ಷ್ಯ ಮೈಥಿಲೀಮ್ ।

---

ಹೀಗೆ ಹೊಗಳಿ ಮಾತಾಡಲು, ಅವನು ಬ್ರಾಹ್ಮಣವೇಷದಲ್ಲಿರುವುದನ್ನು ಸೀತೆಯು ಗಮನಿಸಿದಳು.. ಆದ್ದರಿಂದ ಅತಿಥಿಸತ್ಕಾರಗಳನ್ನಿತ್ತು ಅವನನ್ನು ಆದರಿಸಿದಳು. ಮೈಥಿಲಿಯು ಆತನಿಗೆ ಪೀಠವನ್ನಿತ್ತು ಕಾಲುತೊಳೆಯಲು ನೀರನ್ನು ತಂದುಕೊಟ್ಟು ಉಪಚರಿಸಿದಳು. ಸೌಮ್ಯನಾಗಿ ಕಾಣುತ್ತಿದ್ದ ಅವನನ್ನು ನೋಡಿ 'ಪಾಕವು ಸಿದ್ಧವಾಗಿದೆ' ಎಂದು ಮಾತ್ರ ಹೇಳಿದಳು (೩೨-೩೩). ಕಮಂಡಲು ಕಾಷಾಯಗಳನ್ನು ಧರಿಸಿ ಬ್ರಾಹ್ಮಣವೇಷದಲ್ಲಿ ರಾವಣನು ಬಂದುದರಿಂದ, ಅವನು ಬ್ರಾಹ್ಮಣಸಂನ್ಯಾಸಿಯೆಂದು ಮೈಥಿಲಿಯು ತಿಳಿದಳು. ಕಮಂಡಲು, ವೇದಘೋಷ ಮುಂತಾದ ಉಪಾಯಗಳನ್ನು ರಾವಣನು ಆಶ್ರಯಿಸಿದ್ದರಿಂದ, ಸೀತೆಗೆ ಅವನನ್ನು ಉಪೇಕ್ಷಿಸುವುದಕ್ಕಾಗಲಿಲ್ಲ, ಬ್ರಾಹ್ಮಣನೆಂದು ಅವನನ್ನು ಸ್ವಾಗತಿಸಿದಳು (೩೪). "ಹೇ ಬ್ರಾಹ್ಮಣ, ಇದು ಆಸನ; ಕುಳಿತುಕೊ. ಇದು ಪಾದ್ಯ; ಸ್ವೀಕರಿಸು. ಉತ್ತಮವಾದ ಕಂದಮೂಲಾದಿ ವನ್ಯಾಹಾರವು ಸಿದ್ಧವಾಗಿದೆ. ನಿನಗೋಸ್ಕರ ಇಲ್ಲಿ ಇಟ್ಟಿದ್ದೇನೆ. ಸಾವಧಾನವಾಗಿ ಭಕ್ಷಿಸು" ಎಂದು ಹೇಳಿದಳು (೩೫). ಹೀಗೆ

ಪ್ರಸಹ್ಯ ತಸ್ಯಾ ಹರಣೇ ಧೃತಂ ಮನಃ
ಸಮಾರ್ಪಯತ್ಸ್ವಾತ್ಮವಧಾಯ ರಾವಣಃ ॥ ೩೬

ತತಃ ಸುವೇಷಂ ಮೃಗಯಾಗತಂ ಪತಿಂ
ಪ್ರತೀಕ್ಷಮಾಣಾ ಸಹಲಕ್ಷ್ಮಣಂ ತದಾ ।
ವಿವೀಕ್ಷಮಾಣಾ ಹರಿತಂ ದದರ್ಶ ತ-
ನ್ಮಹದ್ವನಂ ನೈವ ತು ರಾಮಲಕ್ಷ್ಮಣೌ ॥ ೩೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಟ್‌ಚತ್ವಾರಿಂಶಃ ಸರ್ಗಃ

ಮೈಥಿಲಿಯು ಸರಿಯಾಗಿ ಮಾತನಾಡುತ್ತ ಸತ್ಕರಿಸುತ್ತಿರಲು, ರಾವಣನು ಅವಳನ್ನು ಬಲಾತ್ಕಾರವಾಗಿ ಅಪಹರಿಸಬೇಕೆಂದು ನಿರ್ಧರಿಸಿಕೊಳ್ಳುತ್ತಿದ್ದನು ! ತನ್ನ ವಧೆಗೆ ತಾನೇ ಸಿದ್ಧವಾಗುತ್ತಿದ್ದನು (೩೬). ಸೀತೆಯಾದರೋ (ಚಡಪಡಿಸುತ್ತ), ಬೇಟೆಗೆ ಹೋಗಿದ್ದ ಸುಂದರಾಕಾರನಾದ ತನ್ನ ಪತಿಯು ಲಕ್ಷ್ಮಣನೊಡನೆ ಬಂದಾನೆ ಎಂದು ಬರವನ್ನು ಕಾಯುತ್ತ ಅವರು ಹೋದ ದಿಕ್ಕನ್ನು ತಿರುತಿರುಗಿ ನೋಡುತ್ತಿದ್ದಳು. ಅವಳಿಗೆ ಕಂಡದ್ದು ವಿಶಾಲವಾದ ಗೊಂಡಾರಣ್ಯ ! ರಾಮಲಕ್ಷ್ಮಣರು ಮಾತ್ರ ಕಾಣಲಿಲ್ಲ ! (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತಾರನೆಯ ಸರ್ಗ

## ಸಪ್ತಚತ್ವಾರಿಂಶಃ ಸರ್ಗಃ

### ರಾವಣಾಧಿಕ್ಷೇಪಃ

ರಾವಣೇನ ತು ವೈದೇಹೀ ತಥಾ ಪೃಷ್ಟಾ ಜಿಹೀರ್ಷತಾ ।
ಪರಿವ್ರಾಜಕಲಿಂಗೇನ ಶಶಂಸಾತ್ಮಾನಮಂಗನಾ ॥ ೧

ಬ್ರಾಹ್ಮಣಶ್ಚಾತಿಥಿಶ್ಚಾಯಮನುಕ್ತೋ ಹಿ ಶಪೇತ ಮಾಮ್ ।
ಇತಿ ಧ್ಯಾತ್ವಾ ಮುಹೂರ್ತಂ ತು ಸೀತಾ ವಚನಮಬ್ರವೀತ್ ॥ ೨

ದುಹಿತಾ ಜನಕಸ್ಯಾಹಂ ಮೈಥಿಲಸ್ಯ ಮಹಾತ್ಮನಃ ।
ಸೀತಾ ನಾಮ್ನಾಸ್ಮಿ ಭದ್ರಂ ತೇ ರಾಮಸ್ಯ ಮಹಿಷೀ ಪ್ರಿಯಾ ॥ ೩

ಉಷಿತ್ವಾ ದ್ವಾದಶ ಸಮಾ ಇಕ್ಷ್ವಾಕೂಣಾಂ ನಿವೇಶನೇ ।
ಭುಂಜಾನಾಮಾನುಷಾನ್ ಭೋಗಾನ್ ಸರ್ವಕಾಮಸಮೃದ್ಧಿನೀ ॥ ೪

### ಸರ್ಗ ೪೭

ಸೀತೆಯು ಭಯದಿಂದ ತನ್ನ ವೃತ್ತಾಂತವನ್ನು ತಿಳಿಸುವುದು. ರಾವಣನು ತನ್ನ ವೈಭವವನ್ನು ಹೇಳಿಕೊಂಡು ತನ್ನ ಹೆಂಡತಿಯಾಗುವಂತೆ ಸೀತೆಯನ್ನು ಕೇಳುವುದು. ಸೀತೆಯ ಧಿಕ್ಕಾರ

ವೈದೇಹಿಯನ್ನು ಅಪಹರಿಸಲು ಹೊಂಚುಹಾಕಿ ಸಂನ್ಯಾಸಿಯ ವೇಷದಲ್ಲಿ ಬಂದಿದ್ದ ರಾವಣನು ಅವಳ ವೃತ್ತಾಂತವನ್ನು ಕೇಳಿದನು. ಆಗ ಸೀತಾದೇವಿಯು ಸ್ವಲ್ಪ ಹಿಂದೆ ಮುಂದೆ ನೋಡಿ "ಎಷ್ಟಾದರೂ ಇವನು ಬ್ರಾಹ್ಮಣ, ಅತಿಥಿಯಾಗಿ ಬಂದಿದ್ದಾನೆ. ಹೇಳದಿದ್ದರೆ ನನ್ನನ್ನು ಶಪಿಸಿಬಿಟ್ಟಾನು" ಎಂದು ಆಲೋಚಿಸಿ ಹೀಗೆಂದಳು (೧-೨): "ಜನಕರಾಜನೆಂಬ ಮಹಾತ್ಮನು ಮಿಥಿಲೆಗೆ ಅಧಿಪತಿ ಯಾಗಿದ್ದಾನೆ. ನಾನು ಅವನ ಮಗಳು. ನನ್ನ ಹೆಸರು ಸೀತೆ. ಅಯ್ಯಾ-ಬ್ರಾಹ್ಮಣ, ನಿನಗೆ ಒಳ್ಳೆಯದಾಗಲಿ! ನಾನು ಶ್ರೀರಾಮನ ಪ್ರಿಯಪತ್ನಿ (೩). ಶ್ರೀರಾಮನ ಪತ್ನಿಯಾಗಿ ನಾನು ಇಕ್ಷ್ವಾಕುರಾಜರ ಅರಮನೆಯಲ್ಲಿ ಹನ್ನೆರಡು ವರ್ಷಗಳ ಕಾಲ ಸುಖವಾಗಿ ಇದ್ದೆ. ಸಕಲ ಇಷ್ಟಾರ್ಥಗಳನ್ನೂ ಪಡೆದು ಇತರ ಮಾನುಷದುರ್ಲಭವಾದ ಭೋಗಗಳನ್ನು ಅನುಭವಿಸುತ್ತಲಿದ್ದೆ (೪). ಹೀಗಿರಲು ಹದಿಮೂರನೆಯ ವರ್ಷದಲ್ಲಿ ದಶರಥಮಹಾರಾಜನು ತನ್ನ ಮಂತ್ರಿಗಳೊಡನೆ

ತತಸ್ತ್ರಯೋದಶೇ ವರ್ಷೇ ರಾಜಾಮಂತ್ರಯತ ಪ್ರಭುಃ ।
ಅಭಿಷೇಚಯಿತುಂ ರಾಮಂ ಸಮೇತೋ ರಾಜಮಂತ್ರಿಭಿಃ ॥ ೫

ತಸ್ಮಿನ್ ಸಂಭ್ರಿಯಮಾಣೇ ತು ರಾಘವಸ್ಯಾಭಿಷೇಚನೇ ।
ಕೈಕೇಯೀ ನಾಮ ಭರ್ತಾರಮಾರ್ಯಾ ಸಾ ಯಾಚತೇ ವರಮ್ ॥ ೬

ಪ್ರತಿಗೃಹ್ಯ ತು ಕೈಕೇಯೀ ಶ್ವಶುರಂ ಸುಕೃತೇನ ಮೇ ।
ಮಮ ಪ್ರವ್ರಾಜನಂ ಭರ್ತುರ್ಭರತಸ್ಯಾಭಿಷೇಚನಮ್ ॥ ೭

ದ್ವಾವಯಾಚತ ಭರ್ತಾರಂ ಸತ್ಯಸಂಧಂ ನೃಪೋತ್ತಮಮ್ ।
ನಾದ್ಯ ಭೋಕ್ಷ್ಯೇ ನ ಚ ಸ್ವಪ್ಸ್ಯೇ ನ ಚ ಪಾಸ್ಯೇ ಕಥಂಚನ ॥ ೮

ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ।
ಇತಿ ಬ್ರುವಾಣಾಂ ಕೈಕೇಯೀಂ ಶ್ವಶುರೋ ಮೇ ಸ ಮಾನದಃ ॥ ೯

ಅಯಾಚತಾರ್ಥೈರನ್ವರ್ಥೈರ್ನ ಚ ಯಾಚ್ಞಾಂ ಚಕಾರ ಸಾ ।
ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ ॥ ೧೦

---

ಸಮಾಲೋಚಿಸಿ, ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ಉದ್ಯುಕ್ತನಾದನು. ರಘುನಂದನನ ಪಟ್ಟಾಭಿಷೇಕಕ್ಕಾಗಿ ಸಂಭಾರಗಳು ಸಿದ್ಧವಾಗುತ್ತಿದ್ದವು. ಆಗ ಕೈಕೇಯಿಯೆಂಬ ನನ್ನ ಅತ್ತೆಯೊಬ್ಬಳು ತನ್ನ ಪತಿಯೊಡನೆ ವರವನ್ನು ಸಲ್ಲಿಸ ಬೇಕೆಂದು ಬೇಡಿದಳು (೫-೬). ಕೈಕೇಯಿಯು ನನ್ನ ಮಾವನೊಡನೆ ಹಠಹಿಡಿ ದಳು. ನನ್ನ ಸುಕೃತ ಹಾಗಿತ್ತು. ನನ್ನ ಪತಿಯು ಅರಣ್ಯಕ್ಕೆ ಹೋಗಬೇಕೆಂದೂ ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವಾಗಬೇಕೆಂದೂ ಎರಡು ವರಗಳನ್ನು ಅವಳು ತನ್ನ ಪತಿಯಲ್ಲಿ ಕೇಳಿಕೊಂಡಳು (೭). ಆ ರಾಜಶ್ರೇಷ್ಠನಾದರೋ ಸತ್ಯಸಂಧ. "ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿದರೆ, ನಾನು ಊಟಮಾಡುವು ದಿಲ್ಲ; ಮಲಗುವುದಿಲ್ಲ; (ನೀರನ್ನೂ) ಕುಡಿಯುವುದಿಲ್ಲ. ನನ್ನ ಬದುಕು ಇಲ್ಲಿಗೆ ಮುಗಿಯಿತು" ಎಂದು ಕೈಕೇಯಿಯು ಹಠಹಿಡಿದಳು (೮-೯). ನನ್ನ ಮಾವನು ತನ್ನ ಪತ್ನಿಯ ಅಭಿಮಾನವನ್ನು ರಕ್ಷಿಸುವುದಕ್ಕಾಗಿ, ಅವಳಿಗೆ ಬೇಕೆನಿಸಿದ ಇತರ ಯಾವ ಇಷ್ಟಾರ್ಥಗಳನ್ನಾದರೂ ಸಲ್ಲಿಸುವುದಾಗಿ ಹೇಳಿದನು. ಅವನು ಬೇಡಿ

ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ ।
ರಾಮೇತಿ ಪ್ರಥಿತೋ ಲೋಕೇ ಗುಣವಾನ್ ಸತ್ಯವಾನ್ ಶುಚಿಃ ॥ ೧೧

ವಿಶಾಲಾಕ್ಷೋ ಮಹಾಬಾಹುಃ ಸರ್ವಭೂತಹಿತೇ ರತಃ ।
ಕಾಮಾರ್ತಸ್ತು ಮಹಾತೇಜಾಃ ಪಿತಾ ದಶರಥಃ ಸ್ವಯಮ್ ॥ ೧೨

ಕೈಕೇಯ್ಯಾಃ ಪ್ರಿಯಕಾಮಾರ್ಥಂ ತಂ ರಾಮಂ ನಾಭ್ಯಷೇಚಯತ್ ।
ಅಭಿಷೇಕಾಯ ತು ಪಿತುಃ ಸಮೀಪಂ ರಾಮಮಾಗತಮ್ ॥ ೧೩

ಕೈಕೇಯೀ ಮಮ ಭರ್ತಾರಮಿತ್ಯುವಾಚ ಧೃತಂ ವಚಃ ।
ತವ ಪಿತ್ರಾ ಸಮಾಜ್ಞಪ್ತಂ ಮಮೇದಂ ಶೃಣು ರಾಘವ ॥ ೧೪

ಭರತಾಯ ಪ್ರದಾತವ್ಯಮಿದಂ ರಾಜ್ಯಮಕಂಟಕಮ್ ।
ತ್ವಯಾ ಹಿ ಖಲು ವಸ್ತವ್ಯಂ ನವ ವರ್ಷಾಣಿ ಪಂಚ ಚ ॥ ೧೫

---

ಕೊಂಡರೂ ಕೈಕೇಯಿಯು ಒಪ್ಪಲಿಲ್ಲ. ನನ್ನ ಪತಿ ಮಹಾತೇಜಸ್ವಿ. ಇಪ್ಪತ್ತೈದು ವರ್ಷ ವಯಸ್ಸಿನ ತರುಣ (೧೦). ಆಗ ನನಗೆ ಹದಿನೆಂಟು ವರ್ಷಗಳಾಗಿದ್ದವು.* ಶ್ರೀರಾಮನೆಂಬ ಹೆಸರು ಲೋಕವಿಖ್ಯಾತವಾಗಿತ್ತು. ಅವನು ಗುಣವಂತ, ಸತ್ಯಸಂಧ, ಪರಿಶುದ್ಧಚಿತ್ತ. ಆತನು ವಿಶಾಲಾಕ್ಷ, ಆಜಾನುಬಾಹು, ಸಕಲಜೀವಿಗಳಿಗೂ ಹಿತವನ್ನು ಕೋರತಕ್ಕವನು. ಅವನ ತಂದೆಯಾದ ದಶರಥಮಹಾರಾಜನು ಮಹಾತೇಜಸ್ವಿಯಾದರೂ ಕಾಮಾರ್ತನಾಗಿದ್ದನು (೧೧-೧೨). ಕೈಕೇಯಿಗೆ ಸಂತೋಷವಾಗಲೆಂದು ಅವನು ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲಿಲ್ಲ. ಶ್ರೀರಾಮನು ಅಭಿಷೇಕದ ಕಾರ್ಯಾರ್ಥವಾಗಿ ತಂದೆಯ ಬಳಿಗೆ ಹೋದಾಗ, ಕೈಕೇಯಿಯು ದೃಢನಿರ್ಧಾರದ ಒಂದು ಮಾತನ್ನು ಹೇಳಿದಳು. ಏನೆಂದರೆ, "ರಾಘವ, ನಿನ್ನ ತಂದೆಯ ಆಜ್ಞೆಯಾಗಿದೆ. ಅದನ್ನು ಕೇಳು (೧೩-೧೪): ಭರತನಿಗೆ ಈ ಕೋಸಲರಾಜ್ಯವನ್ನು ನಿಷ್ಕಂಟಕವಾಗಿ ಒಪ್ಪಿಸಿಬಿಡಬೇಕು. ನೀನು ಹದಿನಾಲ್ಕುವರ್ಷ ಕಾಡಿನಲ್ಲಿ ಇರಬೇಕು. ಆದ್ದರಿಂದ, ಕಾಕುತ್ಸ್ಥ, ನೀನು ಕಾಡಿಗೆ ಹೊರಟುಹೋಗು. ನಿನ್ನ ತಂದೆಯನ್ನು ಸುಳ್ಳಿನ ಬಂಧನದಿಂದ ಬಿಡಿಸು"

* ಅನುಬಂಧವನ್ನು ನೋಡಿ.

ವನೇ ಪ್ರವ್ರಜ ಕಾಕುತ್ಸ್ಥ ಪಿತರಂ ಮೋಚಯಾನೃತಾತ್ ।
ತಥೇತ್ಯುಕ್ತ್ವಾ ಚ ತಾಂ ರಾಮಃ ಕೈಕೇಯೀಮಕುತೋಭಯಃ ॥ ೧೬

ಚಕಾರ ತದ್ವಚಸ್ತಸ್ಯಾ ಮಮ ಭರ್ತಾ ದೃಢವ್ರತಃ ।
ದದ್ಯಾನ್ನ ಪ್ರತಿಗೃಹ್ಣೀಯಾತ್ ಸತ್ಯಂ ಬ್ರೂಯಾನ್ನ ಚಾನೃತಮ್॥ ೧೭

ಏತದ್ಬ್ರಾಹ್ಮಣ ರಾಮಸ್ಯ ವ್ರತಂ ಧೃತಮನುತ್ತಮಮ್ ।
ತಸ್ಯ ಭ್ರಾತಾ ತು ವೈಮಾತ್ರೋ ಲಕ್ಷ್ಮಣೋ ನಾಮ ವೀರ್ಯವಾನ್ ॥

ರಾಮಸ್ಯ ಪುರುಷವ್ಯಾಘ್ರಃ ಸಹಾಯಃ ಸಮರೇಽರಿಹಾ ।
ಸ ಭ್ರಾತಾ ಲಕ್ಷ್ಮಣೋ ನಾಮ ಧರ್ಮಚಾರೀ ದೃಢವ್ರತಃ ॥ ೧೯

ಅನ್ವಗಚ್ಛದ್ಧನುಷ್ಪಾಣಿಃ ಪ್ರವ್ರಜಂತಂ ಮಯಾ ಸಹ ।
ಜಟೀ ತಾಪಸರೂಪೇಣ ಮಯಾ ಸಹ ಸಹಾನುಜಃ ॥ ೨೦

ಪ್ರವಿಷ್ಟೋ ದಂಡಕಾರಣ್ಯಂ ಧರ್ಮನಿತ್ಯೋ ಜಿತೇಂದ್ರಿಯಃ ।
ತೇ ವಯಂ ಪ್ರಚ್ಯುತಾ ರಾಜ್ಯಾತ್ ಕೈಕೇಯ್ಯಾಸ್ತು ಕೃತೇ ತ್ರಯಃ ॥

---

ಎಂದು ಹೇಳಿದಳು. ಶ್ರೀರಾಮನು ನಿರ್ಭೀತಿಯಿಂದ 'ಹಾಗೆಯೇ ಆಗಲಿ' ಎಂದು ಕೈಕೇಯಿಗೆ ಹೇಳಿದನು (೧೫-೧೬); ಮತ್ತೂ ಹಾಗೆಯೇ ಮಾಡಿದನು. ನನ್ನ ಗಂಡನು ಹಿಡಿದ ಕಾರ್ಯದಲ್ಲಿ ದೃಢನಿಷ್ಠೆಯುಳ್ಳವನು. ಅವನು ಇನ್ನೊಬ್ಬರಿಗೆ ಏನುಬೇಕಾದರೂ ಕೊಡುವನೇ ಹೊರತು, ತಾನು ತೆಗೆದುಕೊಳ್ಳಲಿಕ್ಕಿಲ್ಲ. ಸತ್ಯವನ್ನೇ ಹೇಳುವನೇ ಹೊರತು, ಸುಳ್ಳು ಅವನ ಬಳಿ ಸುಳಿಯಲಿಕ್ಕಿಲ್ಲ (೧೭). ಬ್ರಾಹ್ಮಣ, ಇದು ಶ್ರೀರಾಮನು ಹಿಡಿದ ಶ್ರೇಷ್ಠವಾದ ವ್ರತ. ಅವನಿಗೆ ಲಕ್ಷ್ಮಣನೆಂಬ ವೀರನಾದ ತಮ್ಮನೊಬ್ಬನಿದ್ದಾನೆ. ಅವನು ಇನ್ನೊಬ್ಬ ಚಿಕ್ಕಮ್ಮನ ಮಗ. ಆ ಪುರುಷಶ್ರೇಷ್ಠನು ಶ್ರೀರಾಮನಿಗೆ ಸಹಾಯಕನಾಗಿದ್ದಾನೆ. ರಣರಂಗದಲ್ಲಿ ಶತ್ರುಗಳನ್ನು ಧ್ವಂಸಮಾಡಬಲ್ಲನು. ಲಕ್ಷ್ಮಣನೆಂಬ ಆ ಸೋದರನು ಧರ್ಮನಿಷ್ಠ; ದೃಢವ್ರತ (೧೮-೧೯). ಕಾಡಿಗೆ ಹೊರಟುಬಂದ ಶ್ರೀರಾಮನನ್ನು ಹಿಂಬಾಲಿಸಿ ಲಕ್ಷ್ಮಣನೂ ಧನುರ್ಧಾರಿಯಾಗಿ ನನ್ನಂತೆ ಬಂದಿದ್ದಾನೆ. ನನ್ನ ಪತಿಯು ಜಟೆಯನ್ನು ಬೆಳೆಸಿ ತಾಪಸನಾಗಿ ನನ್ನನ್ನೂ ತಮ್ಮನನ್ನೂ ಕರೆದುಕೊಂಡು ಈ ದಂಡಕಾರಣ್ಯಕ್ಕೆ ಬಂದಿದ್ದಾನೆ (೨೦). ಅವನು ಜಿತೇಂದ್ರಿಯನಾಗಿ ಯಾವಾಗಲೂ

ವಿಚರಾಮ ದ್ವಿಜಶ್ರೇಷ್ಠ ವನಂ ಗಂಭೀರಮೋಜಸಾ ।
ಸಮಾಶ್ವಸ ಮುಹೂರ್ತಂ ತು ಶಕ್ಯಂ ವಸ್ತುಮಿಹ ತ್ವಯಾ ॥ ೨೨

ಆಗಮಿಷ್ಯತಿ ಮೇ ಭರ್ತಾ ವನ್ಯಮಾದಾಯ ಪುಷ್ಕಲಮ್ ।
ರುರೂನ್ ಗೋಧಾನ್ ವರಾಹಾಂಶ್ಚ ಹತ್ವಾದಾಯಾಮಿಷಾನ್ ಬಹೂನ್ ॥

ಸ ತ್ವಂ ನಾಮ ಚ ಗೋತ್ರಂ ಚ ಕುಲಂ ಚಾಚಕ್ಷ್ವ ತತ್ತ್ವತಃ ।
ಏಕಶ್ಚ ದಂಡಕಾರಣ್ಯೇ ಕಿಮರ್ಥಂ ಚರಸಿ ದ್ವಿಜ ॥ ೨೪

ಏವಂ ಬ್ರುವಂತ್ಯಾಂ ಸೀತಾಯಾಂ ರಾಮಪತ್ನ್ಯಾಂ ಮಹಾಬಲಃ ।
ಪ್ರತ್ಯುವಾಚೋತ್ತರಂ ತೀವ್ರಂ ರಾವಣೋ ರಾಕ್ಷಸಾಧಿಪಃ ॥ ೨೫

ಯೇನ ವಿತ್ರಾಸಿತಾ ಲೋಕಾಃ ಸದೇವಾಸುರಮಾನುಷಾಃ ।
ಅಹಂ ಸ ರಾವಣೋ ನಾಮ ಸೀತೇ ರಕ್ಷೋಗಣೇಶ್ವರಃ ॥ ೨೬

ತ್ವಾಂ ತು ಕಾಂಚನವರ್ಣಾಭಾಂ ದೃಷ್ಟ್ವಾ ಕೌಶೇಯವಾಸಿನೀಮ್ ।
ರತಿಂ ಸ್ವಕೇಷು ದಾರೇಷು ನಾಧಿಗಚ್ಛಾಮ್ಯನಿಂದಿತೇ ॥ ೨೭

---

ಧರ್ಮಮಾರ್ಗದಲ್ಲಿಯೇ ನಡೆಯುತ್ತಾನೆ. ಹೀಗೆ ಕೈಕೇಯಿಯಿಂದ ನಾವು ಮೂವರು ರಾಜ್ಯದಿಂದ ಹೊರಗೆ ಬರಬೇಕಾಯಿತು. ಬ್ರಾಹ್ಮಣೋತ್ತಮ, ಈ ದಟ್ಟವಾದ ಅರಣ್ಯವನ್ನು ನಮ್ಮ ತೇಜೋಬಲದಿಂದ ಸುತ್ತುತ್ತಿದ್ದೇವೆ. ಸ್ವಲ್ಪ ಹೊತ್ತು ವಿಶ್ರಮಿಸು. ಇಲ್ಲಿ ನೀನು ತಂಗುವುದಕ್ಕೆ ಸಾಧ್ಯವಿದೆ (೨೧-೨೨). ನನ್ನ ಪತಿಯು ಯಥೇಚ್ಛವಾಗಿ ವನ್ಯಾಹಾರವನ್ನು ತೆಗೆದುಕೊಂಡು ಬರುವನು. ಜಿಂಕೆ, ಗೋಧ, ವರಾಹ ಮುಂತಾದ ಭಕ್ಷಣಯೋಗ್ಯವಾದ ಮೃಗಗಳನ್ನು ಕೊಂದು ತರುವನು (೨೩). ಎಲೈ ಬ್ರಾಹ್ಮಣನೆ, ನಿನ್ನ ಹೆಸರೇನು? ಗೋತ್ರ ಯಾವುದು? ವಂಶ ಯಾವುದು? ದಿಟವಾಗಿ ಹೇಳು. ಈ ದಂಡಕಾರಣ್ಯದಲ್ಲಿ ಏಕಾಕಿಯಾಗಿ ಏಕೆ ಸಂಚರಿಸುತ್ತಿದ್ದೀಯೆ?" ಎಂದಳು (೨೪). ಹೀಗೆ ಶ್ರೀರಾಮನ ಪತ್ನಿಯಾದ ಸೀತಾದೇವಿಯು ಕೇಳಲು, ರಾಕ್ಷಸೇಶ್ವರನಾದ ರಾವಣನು ಕರ್ಣಕಠೋರವಾದ ಉತ್ತರವನ್ನು ಕೊಟ್ಟನು: "ಸೀತೆ, ದೇವಾಸುರಮನುಷ್ಯಲೋಕಗಳು ಯಾರಿಗೆ ಹೆದರಿ ನಡುಗುತ್ತವೆಯೋ ಅಂಥ ರಾಕ್ಷಸೇಶ್ವರನಾದ ರಾವಣನೇ ನಾನು! (೨೫-೨೬). ಸುಂದರಿ, ರೇಷ್ಮೆಯ ಸೀರೆಯನ್ನುಟ್ಟು ಸುವರ್ಣವರ್ಣೆಯಾಗಿರುವ ನಿನ್ನನ್ನು

ಬಹ್ವೀನಾಮುತ್ತಮಸ್ತ್ರೀಣಾಮಾಹೃತಾನಾಮಿತಸ್ತತಃ ।
ಸರ್ವಾಸಾಮೇವ ಭದ್ರಂ ತೇ ಮಮಾಗ್ರಮಹಿಷೀ ಭವ ॥ ೨೮

ಲಂಕಾ ನಾಮ ಸಮುದ್ರಸ್ಯ ಮಧ್ಯೇ ಮಮ ಮಹಾಪುರೀ ।
ಸಾಗರೇಣ ಪರಿಕ್ಷಿಪ್ತಾ ನಿವಿಷ್ಟಾ ಗಿರಿಮೂರ್ಧನಿ ॥ ೨೯

ತತ್ರ ಸೀತೇ ಮಯಾ ಸಾರ್ಧಂ ವನೇಷು ವಿಹರಿಷ್ಯಸಿ ।
ನ ಚಾಸ್ಯ ವನವಾಸಸ್ಯ ಸ್ಪೃಹಯಿಷ್ಯಸಿ ಭಾಮಿನಿ ॥ ೩೦

ಪಂಚ ದಾಸ್ಯಃ ಸಹಸ್ರಾಣಿ ಸರ್ವಾಭರಣಭೂಷಿತಾಃ ।
ಸೀತೇ ಪರಿಚರಿಷ್ಯಂತಿ ಭಾರ್ಯಾ ಭವಸಿ ಮೇ ಯದಿ ॥ ೩೧

ರಾವಣೇನೈವಮುಕ್ತಾ ತು ಕುಪಿತಾ ಜನಕಾತ್ಮಜಾ ।
ಪ್ರತ್ಯುವಾಚಾನವದ್ಯಾಂಗೀ ತಮನಾದೃತ್ಯ ರಾಕ್ಷಸಮ್ ॥ ೩೨

ಮಹಾಗಿರಿಮಿವಾಕಂಪ್ಯಂ ಮಹೇಂದ್ರಸದೃಶಂ ಪತಿಮ್ ।
ಮಹೋದಧಿಮಿವಾಕ್ಷೋಭ್ಯಮಹಂ ರಾಮಮನುವ್ರತಾ ॥ ೩೩

---

ಕಂಡಮೇಲೆ ನನ್ನ ಹೆಂಡತಿಯರಲ್ಲಿ ನನಗೆ ಸಂತುಷ್ಟಿಯೇ ದೊರೆಯದಾಗಿದೆ! ಬಹುಮಂದಿ ಉತ್ತಮಸ್ತ್ರೀಯರನ್ನು ಬೇರೆ ಬೇರೆ ಸ್ಥಳಗಳಿಂದ ನಾನು ಸಂಗ್ರಹಿಸಿ ತಂದಿದ್ದೇನೆ. ಅವರೆಲ್ಲರಮೇಲೆ ನೀನು ಪ್ರಧಾನರಾಣಿಯಾಗಿರು! (೨೭-೨೮). ಸಮುದ್ರಮಧ್ಯದಲ್ಲಿ ಲಂಕೆಯೆಂಬ ಒಂದು ಮಹಾನಗರವಿದೆ. ಅದು ನನ್ನದು. ಆ ನಗರವು ಸುತ್ತಲೂ ಸಾಗರದಿಂದ ಸುತ್ತುವರಿಯಲ್ಪಟ್ಟು ಒಂದು ಪರ್ವತದ ಶಿಖರದಮೇಲಿದೆ. ಸೀತೆ, ಅಲ್ಲಿ ನೀನು ನನ್ನೊಡನೆ ಉದ್ಯಾನವನಗಳಲ್ಲಿ ವಿಹರಿಸ ಬಹುದು. ಆಮೇಲೆ ನೀನು ಈ ವನವಾಸವನ್ನು ಎಂದೆಂದಿಗೂ ಬಯಸಲಾರೆ! (೨೯-೩೦). ಸೀತೆ, ನೀನು ನನ್ನ ಭಾರ್ಯೆಯಾದರೆ ಸರ್ವಾಭರಣಭೂಷಿತೆಯ ರಾದ ಹತ್ತುಸಾವಿರ ದಾಸಿಯರು ನಿನ್ನ ಸೇವೆಗೈಯುವರು!" ಎಂದು ಹೇಳಿದನು (೩೧). ರಾವಣನು ಹೀಗೆಂದೊಡನೆ ಜಾನಕಿಯು ಕುಪಿತಳಾದಳು. ಅವಳು ಆ ರಾಕ್ಷಸನನ್ನು ಲೆಕ್ಕಿಸದೆ ತಿರುಗಿ ಹೇಳಿದಳು: "ನನ್ನ ಪತಿಯು ಮಹಾಪರ್ವತ ದಂತೆ ಅಲ್ಲಾಡಿಸಲು ಅಶಕ್ಯನೂ ಮಹಾಸಾಗರದಂತೆ ದುರ್ಧರ್ಷನೂ ಆಗಿದ್ದಾನೆ. ದೇವೇಂದ್ರಸಮಾನನಾದ ಶ್ರೀರಾಮನನ್ನು ನಾನು ನಂಬಿದ್ದೇನೆ (೩೨-೩೩).

ಸರ್ವಲಕ್ಷಣಸಂಪನ್ನಂ ನ್ಯಗ್ರೋಧಪರಿಮಂಡಲಮ್ ।
ಸತ್ಯಸಂಧಂ ಮಹಾಭಾಗಮಹಂ ರಾಮಮನುವ್ರತಾ ॥ ೩೪

ಮಹಾಬಾಹುಂ ಮಹೋರಸ್ಕಂ ಸಿಂಹವಿಕ್ರಾಂತಗಾಮಿನಮ್ ।
ನೃಸಿಂಹಂ ಸಿಂಹಸಂಕಾಶಮಹಂ ರಾಮಮನುವ್ರತಾ ॥ ೩೫

ಪೂರ್ಣಚಂದ್ರಾನನಂ ರಾಮಂ ರಾಜವತ್ಸಂ ಜಿತೇಂದ್ರಿಯಮ್ ।
ಪೃಥುಕೀರ್ತಿಂ ಮಹಾತ್ಮಾನಮಹಂ ರಾಮಮನುವ್ರತಾ ॥ ೩೬

ತ್ವಂ ಪುನರ್ಜಂಬುಕಃ ಸಿಂಹೀಂ ಮಾಮಿಚ್ಛಸಿ ಸುದುರ್ಲಭಾಮ್ ।
ನಾಹಂ ಶಕ್ಯಾ ತ್ವಯಾ ಸ್ಪ್ರಷ್ಟುಮಾದಿತ್ಯಸ್ಯ ಪ್ರಭಾ ಯಥಾ ॥ ೩೭

ಪಾದಪಾನ್ ಕಾಂಚನಾನ್ನೂನಂ ಬಹೂನ್ ಪಶ್ಯಸಿ ಮಂದಭಾಕ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯಸ್ತ್ವಮಿಚ್ಛಸಿ ರಾವಣ ॥ ೩೮

---

ಸಮಸ್ತಶುಭಲಕ್ಷಣಸಂಪನ್ನನೂ ನ್ಯಗ್ರೋಧಪರಿಮಂಡಲನೂ* ಸತ್ಯಸಂಧನೂ ಮಹಾಪುರುಷನೂ ಆದ ಶ್ರೀರಾಮನನ್ನು ನಾನು ನಂಬಿದ್ದೇನೆ. ಆಜಾನುಬಾಹುವೂ ವಿಶಾಲವಕ್ಷನೂ ಸಿಂಹಗಂಭೀರಗಾಮಿಯೂ ಸಿಂಹದಂತೆ ವೀರಾಗ್ರಣಿಯೂ ಪುರುಷೋತ್ತಮನೂ ಆದ ಶ್ರೀರಾಮನನ್ನು ನಾನು ನಂಬಿದ್ದೇನೆ (೩೪-೩೫). ಪೂರ್ಣಚಂದ್ರಾನನನೂ ಆನಂದದಾಯಿಯೂ ರಾಜಕುಮಾರನೂ ಜಿತೇಂದ್ರಿಯನೂ ಮಹಾಕೀರ್ತಿಶಾಲಿಯೂ ಮಹಾತ್ಮನೂ ಆದ ಶ್ರೀರಾಮಚಂದ್ರನನ್ನು ನಾನು ನಂಬಿದ್ದೇನೆ (೩೬). ಎಲಾ ರಾಕ್ಷಸ, ನೀನು ಒಂದು ಗುಳ್ಳೇನರಿ! ಸಿಂಹಪತ್ನಿಯಾದ ಈ ಸಿಂಹಿಯನ್ನು ನೀನು ಬಯಸುವೆಯಾ? ಸರ್ವಥಾ ನಿನಗೆ ನಾನು ದುರ್ಲಭಳು. ಸೂರ್ಯನ ಪ್ರಭೆಯನ್ನು ಬೇರೆ ಮಾಡಲು ಶಕ್ಯವಾದೀತೆ? ಹಾಗೆ ನೀನು ನನ್ನನ್ನು ಮುಟ್ಟಲೂ ಸಾಧ್ಯವಿಲ್ಲ (೩೭). ಎಲಾ ಬುದ್ಧಿಗೇಡಿ, ರಾಘವನ ಪ್ರಿಯಪತ್ನಿಯನ್ನು ಬಯಸುವೆಯಾ? ನಿಜವಾಗಿಯೂ ನಿನಗೆ ಚಿನ್ನದ ಮರಗಳು**

---

* ಅನುಬಂಧವನ್ನು ನೋಡಿ.

** ಸಾಯುವ ಕಾಲ ಬಂದಾಗ ಮನುಷ್ಯನಿಗೆ ಚಿನ್ನದ ಮರಗಳು ಕಾಣಿಸುತ್ತವೆಯೆಂದು ಶಕುನಶಾಸ್ತ್ರ ಹೇಳುತ್ತದೆ.

ಕ್ಷುಧಿತಸ್ಯ ಹಿ ಸಿಂಹಸ್ಯ ಮೃಗಶತ್ರೋಸ್ತರಸ್ವಿನಃ ।
ಆಶೀವಿಷಸ್ಯ ವದನಾದ್ದಂಷ್ಟ್ರಾಮಾದಾತುಮಿಚ್ಛಸಿ ॥ ೩೯

ಮಂದರಂ ಪರ್ವತಶ್ರೇಷ್ಠಂ ಪಾಣಿನಾ ಹರ್ತುಮಿಚ್ಛಸಿ ।
ಕಾಲಕೂಟಂ ವಿಷಂ ಪೀತ್ವಾ ಸ್ವಸ್ತಿಮಾನ್ ಗಂತುಮಿಚ್ಛಸಿ ॥ ೪೦

ಅಕ್ಷಿ ಸೂಚ್ಯಾ ಪ್ರಮೃಜಸಿ ಜಿಹ್ವಯಾ ಲೇಢಿ ಚ ಕ್ಷುರಮ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ ॥ ೪೧

ಅವಸಜ್ಯ ಶಿಲಾಂ ಕಂಠೇ ಸಮುದ್ರಂ ತರ್ತುಮಿಚ್ಛಸಿ ।
ಸೂರ್ಯಾಚಂದ್ರಮಸೌ ಚೋಭೌ ಪಾಣಿಭ್ಯಾಂ ಹರ್ತುಮಿಚ್ಛಸಿ ॥ ೪೨

ಯೋ ರಾಮಸ್ಯ ಪ್ರಿಯಾಂ ಭಾರ್ಯಾಂ ಪ್ರಧರ್ಷಯಿತುಮಿಚ್ಛಸಿ ।
ಅಗ್ನಿಂ ಪ್ರಜ್ವಲಿತಂ ದೃಷ್ಟ್ವಾ ವಸ್ತ್ರೇಣಾಹರ್ತುಮಿಚ್ಛಸಿ ॥ ೪೩

ಕಲ್ಯಾಣವೃತ್ತಾಂ ರಾಮಸ್ಯ ಯೋ ಭಾರ್ಯಾಂ ಹರ್ತುಮಿಚ್ಛಸಿ ।
ಅಯೋಮುಖಾನಾಂ ಶೂಲಾನಾಂ ಮಧ್ಯೇ ಚರಿತುಮಿಚ್ಛಸಿ ॥ ೪೪

ರಾಮಸ್ಯ ಸದೃಶೀಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ ॥

---

ಕಾಣಿಸುತ್ತಿರಬೇಕು! ಮೃಗಗಳನ್ನು ಕೊಂದು ಮುಕ್ಕುವ ಹಸಿದ ಸಿಂಹದ ಬಾಯಿಂದ, ಘೋರಸರ್ಪದ ಬಾಯಿಂದ, ಅದರ ಹಲ್ಲನ್ನು ಕೀಳಲು ಬಯಸುತ್ತಿದ್ದೀಯೆ! (೩೮-೩೯). ಮಂದರಪರ್ವತವನ್ನು ಕೈಯಿಂದ ಹೊರಲು ಬಯಸಿದ್ದೀಯೆ. ಕಾಲಕೂಟವಿಷವನ್ನು ಕುಡಿದು ಕ್ಷೇಮವಾಗಿ ಹೋಗಬಹುದೆಂದು ತಿಳಿದಿದ್ದೀಯೆ. ರಾಘವನ ಪ್ರಿಯಪತ್ನಿಯನ್ನು ಬಯಸುವ ನೀನು ಕಣ್ಣನ್ನು ಸೂಜಿಯಿಂದ ತಿವಿದುಕೊಳ್ಳುತ್ತಿದ್ದೀಯೆ! ಕತ್ತಿಯ ಅಲಗನ್ನು ನಾಲಿಗೆಯಿಂದ ನೆಕ್ಕುತ್ತಿದ್ದೀಯೆ! (೪೦-೪೧). ಕೊರಳಿಗೆ ಕಲ್ಲನ್ನು ಕಟ್ಟಿಕೊಂಡು ಸಮುದ್ರವನ್ನು ಈಜಹೊರಟಿದ್ದೀಯೆ. ಸೂರ್ಯಚಂದ್ರರಿಬ್ಬರನ್ನೂ ಎರಡು ಕೈಗಳಿಂದ ಕೀಳ ಹೊರಟಿದ್ದೀಯೆ. ಶ್ರೀರಾಮನ ಪ್ರಿಯಪತ್ನಿಯಮೇಲೆ ಕೈಮಾಡಲು ಹೊರಟಿರುವ ನೀನು, ಉರಿಯುವ ಬೆಂಕಿಯನ್ನು ಬಟ್ಟೆಯಲ್ಲಿ ತರಲು ಹೊರಟಿದ್ದೀಯೆ (೪೨-೪೩). ಶ್ರೀರಾಮನ ಸಚ್ಚರಿತೆಯಾದ ಭಾರ್ಯೆಯನ್ನು–ಅವನಿಗೆ ಅನುರೂಪಳಾದ

ಯದಂತರಂ ಸಿಂಹಶೃಗಾಲಯೋರ್ವನೇ
ಯದಂತರಂ ಸ್ಯಂದಿನಿಕಾಸಮುದ್ರಯೋಃ ।
ಸುರಾಗ್ರ್ಯಸೌವೀರಕಯೋರ್ಯದಂತರಂ
ತದಂತರಂ ವೈ ತವ ರಾಘವಸ್ಯ ಚ ॥ ೪೫

ಯದಂತರಂ ಕಾಂಚನಸೀಸಲೋಹಯೋ-
ರ್ಯದಂತರಂ ಚಂದನವಾರಿಪಂಕಯೋಃ ।
ಯದಂತರಂ ಹಸ್ತಿಬಿಡಾಲಯೋರ್ವನೇ
ತದಂತರಂ ದಾಶರಥೇಸ್ತ್ವನೈವ ಚ ॥ ೪೬

ಯದಂತರಂ ವಾಯಸವೈನತೇಯಯೋ-
ರ್ಯದಂತರಂ ಮದ್ಗುಮಯೂರಯೋರಪಿ ।
ಯದಂತರಂ ಸಾರಸಗೃಧ್ರಯೋರ್ವನೇ
ತದಂತರಂ ದಾಶರಥೇಸ್ತ್ವನೈವ ಚ ॥ ೪೭

ತಸ್ಮಿನ್ ಸಹಸ್ರಾಕ್ಷಸಮಪ್ರಭಾವೇ
ರಾಮೇ ಸ್ಥಿತೇ ಕಾರ್ಮುಕಬಾಣಪಾಣೌ ।
ಹೃತಾಪಿ ತೇಽಹಂ ನ ಜರಾಂ ಗಮಿಷ್ಯೇ
ವಜ್ರಂ ಯಥಾ ಮಕ್ಷಿಕಯಾವಗೀರ್ಣಮ್ ॥ ೪೮

---

ಭಾರ್ಯೆಯನ್ನು–ಅಪಹರಿಸಲು ಬಯಸುವೆಯಾ ? ಚೂಪಾದ ಉಕ್ಕಿನ ಶೂಲಗಳ ಮೇಲೆ ನಡೆಯಲು ಬಯಸುವೆಯಾ ? (೪೪). ವನದಲ್ಲಿರುವ ಕಂಠೀರವ-ಜಂಬುಕಗಳಿಗೆ, ಸಮುದ್ರ-ಹಳ್ಳಗಳಿಗೆ, ಅಮೃತ-ಗಂಜಿಗಳಿಗೆ ಎಷ್ಟು ವ್ಯತ್ಯಾಸವಿದೆಯೋ ಶ್ರೀರಾಮನಿಗೂ ನಿನಗೂ ಅಷ್ಟು ವ್ಯತ್ಯಾಸವಿದೆ (೪೫). ಅಪರಂಜಿ-ಸೀಸಗಳಿಗೆ, ಶ್ರೀಗಂಧ-ನೀರಿನ ತಳದಲ್ಲಿರುವ ಕೆಸರುಗಳಿಗೆ, ಆನೆ-ಬೆಕ್ಕುಗಳಿಗೆ ಎಷ್ಟು ಅಂತರವಿದೆಯೋ ಆ ದಶರಥಪುತ್ರನಿಗೂ ನಿನಗೂ ಅಷ್ಟು ಭೇದವಿದೆ (೪೬). ಗರುಡ-ವಾಯಸಗಳಿಗೆ, ನವಿಲು-ನೀರುಕಾಗೆಗಳಿಗೆ, ಹಂಸ-ಹದ್ದುಗಳಿಗೆ ಎಷ್ಟು ಭೇದವಿದೆಯೋ ಶ್ರೀರಾಮನಿಗೂ ನಿನಗೂ ಅಷ್ಟು ಭೇದವಿದೆ (೪೭). ದೇವೇಂದ್ರ ಸಮಾನವೀರ್ಯನಾದ ಶ್ರೀರಾಮನು ಧನುರ್ಬಾಣಗಳನ್ನು ಹಿಡಿದು ನಿಂತಿರಲಾಗಿ, ಎಲಾ ರಾವಣ, ನೀನು ನನ್ನನ್ನು ಕದ್ದೊಯ್ದರೂ ನಿನಗೆ ದಕ್ಕಲಾರೆ. ನೊಣವು

ಇತೀವ ತದ್ವಾಕ್ಯಮದುಷ್ಟಭಾವಾ
ಸುಧೃಷ್ಟಮುಕ್ತ್ವಾ ರಜನೀಚರಂ ತಮ್ ।
ಗಾತ್ರಪ್ರಕಂಪಾದ್ವ್ಯಥಿತಾ ಬಭೂವ
ವಾತೋದ್ಧತಾ ಸಾ ಕದಲೀವ ತನ್ವೀ ॥ ೪೯

ತಾಂ ವೇಪಮಾನಾಮುಪಲಕ್ಷ್ಯ ಸೀತಾಂ
ಸ ರಾವಣೋ ಮೃತ್ಯುಸಮಪ್ರಭಾವಃ ।
ಕುಲಂ ಬಲಂ ನಾಮ ಚ ಕರ್ಮ ಚ ಸ್ವಂ
ಸಮಾಚಚಕ್ಷೇ ಭಯಕಾರಣಾರ್ಥಮ್ ॥ ೫೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತಚತ್ವಾರಿಂಶಃ ಸರ್ಗಃ

ವಜ್ರವನ್ನು ನುಂಗಿದಂತಾದೀತು" ಎಂದು ಅಬ್ಬರಿಸಿದಳು (೪೮). ಶುದ್ಧಚಿತ್ತಳಾದ ಆ ವನಿತೆಯು ಈ ರೀತಿಯಲ್ಲಿ ಆ ನಿಶಾಚರನಿಗೆ ಗಡುಸಾದ ಉತ್ತರವನ್ನು ಕೊಟ್ಟಳು. ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ, ಆ ತನ್ವಿಯು ಭಯದಿಂದ ತಲ್ಲಣಿಸಿ ಗಡಗಡನೆ ನಡುಗುತ್ತಿದ್ದಳು (೪೯). ಸೀತೆಯು ದಿಕ್ಕುಗೆಟ್ಟು ನಡುಗುತ್ತಿರುವುದನ್ನು ಕಂಡು, ಮೃತ್ಯುವಿನಂತೆ ಉಗ್ರನಾದ ರಾವಣನು ತನ್ನ ಕುಲಬಲಗಳನ್ನೂ ತನ್ನ ಕ್ರೂರಕರ್ಮಗಳನ್ನೂ ಬಿಡಿಸಿ ಹೇಳಲಾರಂಭಿಸಿದನು. ಸೀತೆಯು ಮತ್ತಷ್ಟು ಹೆದರಲೆಂಬುದೇ ಅವನ ಉದ್ದೇಶವಾಗಿತ್ತು (೫೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೇಳನೆಯ ಸರ್ಗ

## ಅಷ್ಟಚತ್ವಾರಿಂಶಃ ಸರ್ಗಃ

### ರಾವಣವಿಕತ್ಥನಮ್

ಏವಂ ಬ್ರುವಂತ್ಯಾಂ ಸೀತಾಯಾಂ ಸಂರಬ್ಧಃ ಪರುಷಂ ವಚಃ ।
ಲಲಾಟೇ ಭ್ರುಕುಟೀಂ ಕೃತ್ವಾ ರಾವಣಃ ಪ್ರತ್ಯುವಾಚ ಹ ॥ ೧

ಭ್ರಾತಾ ವೈಶ್ರವಣಸ್ಯಾಹಂ ಸಾಪತ್ನ್ಯೋ ವರವರ್ಣಿನಿ ।
ರಾವಣೋ ನಾಮ ಭದ್ರಂ ತೇ ದಶಗ್ರೀವಃ ಪ್ರತಾಪವಾನ್ ॥ ೨

ಯಸ್ಯ ದೇವಾಃ ಸಗಂಧರ್ವಾಃ ಪಿಶಾಚಪತಗೋರಗಾಃ ।
ವಿದ್ರವಂತಿ ಭಯಾದ್ಭೀತಾ ಮೃತ್ಯೋರಿವ ಸದಾ ಪ್ರಜಾಃ ॥ ೩

ಯೇನ ವೈಶ್ರವಣೋ ಭ್ರಾತಾ ವೈಮಾತ್ರಃ ಕಾರಣಾಂತರೇ ।
ದ್ವಂದ್ವಮಾಸಾದಿತಃ ಕ್ರೋಧಾದ್ರಣೇ ವಿಕ್ರಮ್ಯ ನಿರ್ಜಿತಃ ॥ ೪

ಯದ್ಭಯಾರ್ತಃ ಪರಿತ್ಯಜ್ಯ ಸ್ವಮಧಿಷ್ಠಾನಮೃದ್ಧಿಮತ್ ।
ಕೈಲಾಸಂ ಪರ್ವತಶ್ರೇಷ್ಠಮಧ್ಯಾಸ್ತೇ ನರವಾಹನಃ ॥ ೫

## ಸರ್ಗ ೪೮

### ರಾವಣನ ಆತ್ಮಪ್ರಶಂಸೆ

ಸೀತೆಯಾಡಿದ ಪರುಷವಚನಗಳನ್ನು ಕೇಳಿ ರಾವಣನು ಕ್ರುದ್ಧನಾದನು. ಅವನು ಹುಬ್ಬುಗಂಟಿಕ್ಕಿ ಹೇಳಿದನು : "ಸುಂದರಿ, ನಾನು ಕುಬೇರನ ತಮ್ಮ. ಅವನ ಮಲತಾಯಿಯ ಮಗನಾದ ರಾವಣ. ದಶಕಂಠನೆಂಬ ಪ್ರತಾಪಶಾಲಿ (೧-೨). ದೇವಗಂಧರ್ವಾದಿ ಸಕಲಪ್ರಜೆಗಳೂ ನನ್ನನ್ನು ಕಂಡರೆ ಮೃತ್ಯುವನ್ನು ಕಂಡಂತಾಗಿ ಕಂಗೆಟ್ಟು, ದಿಕ್ಕುದಿಕ್ಕಿಗೆ ಓಡಿಹೋಗುವರು! ಒಂದು ಸಲ ಕಾರಣಾಂತರದಿಂದ ನನ್ನ ಅಣ್ಣನಾದ ಕುಬೇರನೊಡನೆ ಯುದ್ಧ ಒದಗಲು, ನಾನು ಕೋಪಗೊಂಡು ಅವನನ್ನು ಸೋಲಿಸಿಬಿಟ್ಟೆನು (೩-೪). ನನ್ನ ಭಯದಿಂದ ತಲ್ಲಣಿಸಿ ಐಶ್ವರ್ಯಸಮೃದ್ಧವಾದ ತನ್ನ ವಾಸಸ್ಥಾನವನ್ನು ಬಿಟ್ಟು, ಆ ಕುಬೇರನು

ಯಸ್ಯ ತತ್ ಪುಷ್ಪಕಂ ನಾಮ ವಿಮಾನಂ ಕಾಮಗಂ ಶುಭಮ್ ।
ವೀರ್ಯಾದಾವರ್ಜಿತಂ ಭದ್ರೇ ಯೇನ ಯಾಮಿ ವಿಹಾಯಸಮ್ ॥ ೬

ಮಮ ಸಂಜಾತರೋಷಸ್ಯ ಮುಖಂ ದೃಷ್ಟ್ವೈವ ಮೈಥಿಲಿ ।
ವಿದ್ರವಂತಿ ಪರಿತ್ರಸ್ತಾಃ ಸುರಾಃ ಶಕ್ರಪುರೋಗಮಾಃ ॥ ೭

ಯತ್ರ ತಿಷ್ಠಾಮ್ಯಹಂ ತತ್ರ ಮಾರುತೋ ವಾತಿ ಶಂಕಿತಃ ।
ತೀವ್ರಾಂಶುಃ ಶಿಶಿರಾಂಶುಶ್ಚ ಭಯಾತ್ ಸಂಪದ್ಯತೇ ರವಿಃ ॥ ೮

ನಿಷ್ಕಂಪಪತ್ರಾಸ್ತರವೋ ನದ್ಯಶ್ಚ ಸ್ತಿಮಿತೋದಕಾಃ ।
ಭವಂತಿ ಯತ್ರ ಯತ್ರಾಹಂ ತಿಷ್ಠಾಮಿ ವಿಚರಾಮಿ ಚ ॥ ೯

ಮಮ ಪಾರೇ ಸಮುದ್ರಸ್ಯ ಲಂಕಾ ನಾಮ ಪುರೀ ಶುಭಾ ।
ಸಂಪೂರ್ಣಾ ರಾಕ್ಷಸೈರ್ಘೋರೈರ್ಯಥೇಂದ್ರಸ್ಯಾಮರಾವತೀ ॥ ೧೦

ಪ್ರಾಕಾರೇಣ ಪರಿಕ್ಷಿಪ್ತಾ ಪಾಂಡರೇಣ ವಿರಾಜತಾ ।
ಹೇಮಕಕ್ಷ್ಯಾ ಪುರೀ ರಮ್ಯಾ ವೈಡೂರ್ಯಮಯತೋರಣಾ ॥ ೧೧

---

ಕೈಲಾಸಪರ್ವತಕ್ಕೆ ಓಡಿಹೋಗಿ ಅಲ್ಲಿ ನೆಲೆಸಿದ್ದಾನೆ! ಅವನ ಹತ್ತಿರ ಕಾಮಗಾಮಿಯಾದ ಪುಷ್ಪಕವೆಂಬ ದಿವ್ಯವಿಮಾನವಿತ್ತು. ನನ್ನ ಪರಾಕ್ರಮದಿಂದ, ಭದ್ರೆ, ಅದನ್ನು ಕಿತ್ತುಕೊಂಡು ಗಗನಮಾರ್ಗದಲ್ಲಿ ಸಂಚರಿಸುತ್ತಿದ್ದೇನೆ (೫-೬). ರೋಷಾವಿಷ್ಟನಾದ ನನ್ನ ಮುಖವನ್ನು ನೋಡಿದರೆ ಸಾಕು. ಮೈಥಿಲಿ, ಮಹಾರಥರೆನಿಸಿದ ಇಂದ್ರನೇ ಮೊದಲಾದ ದೇವತೆಗಳು ಹೆದರಿ ನಡುಗಿಹೋಗುತ್ತಾರೆ! (೭). ನಾನು ನಿಂತ ಜಾಗದಲ್ಲಿ ವಾಯುವು ಹೆದಹೆದರುತ್ತ ಬೀಸುತ್ತಾನೆ. ಉಗ್ರಕಿರಣನೆನಿಸಿದ ಸೂರ್ಯನು ಭೀತಿಯಿಂದ ಶೀತಕಿರಣನಾಗುತ್ತಾನೆ! ನಾನು ನಿಂತಲ್ಲಿ, ನಾನು ತಿರುಗುವಲ್ಲಿ—ಮರಗಳು ಎಲೆಯನ್ನಾಡಿಸದೆ ನಿಶ್ಚಲವಾಗಿ ನಿಲ್ಲುತ್ತವೆ; ನದಿಗಳು ಹರಿಯುವುದನ್ನು ಗಪ್ಪನೆ ನಿಲ್ಲಿಸುತ್ತವೆ! (೮-೯). ಸಂಪದ್ಭರಿತವಾದ ನನ್ನ ಲಂಕಾನಗರಿಯು ಸಮುದ್ರದ ಆಚೆಯ ದಡದಲ್ಲಿದೆ. ಘೋರರಾದ ರಾಕ್ಷಸರಿಂದ ತುಂಬಿ, ಇಂದ್ರನ ಅಮರಾವತಿಯಂತೆ ವೈಭವಪೂರ್ಣವಾಗಿದೆ. ಆ ನಗರದ ಸುತ್ತಲೂ ಶುಭ್ರವಾದ ಬೆಳ್ಳನೆಯ ಪ್ರಾಕಾರ ಉಂಟು. ದಿವ್ಯಭವನಗಳ ಪಡಸಾಲೆ

ಹಸ್ತ್ಯಶ್ವರಥಸಂಬಾಧಾ ತೂರ್ಯನಾದವಿನಾದಿತಾ ।
ಸರ್ವಕಾಲಫಲೈರ್ವೃಕ್ಷೈಃ ಸಂಕುಲೋದ್ಯಾನಶೋಭಿತಾ ॥ ೧೨

ತತ್ರ ತ್ವಂ ವಸತೀ ಸೀತೇ ರಾಜಪುತ್ರಿ ಮಯಾ ಸಹ ।
ನ ಸ್ಮರಿಷ್ಯಸಿ ನಾರೀಣಾಂ ಮಾನುಷೀಣಾಂ ಮನಸ್ವಿನೀ ॥ ೧೩

ಭುಂಜಾನಾ ಮಾನುಷಾನ್ ಭೋಗಾನ್ ದಿವ್ಯಾಂಶ್ಚ ವರವರ್ಣಿನಿ ।
ನ ಸ್ಮರಿಷ್ಯಸಿ ರಾಮಸ್ಯ ಮಾನುಷಸ್ಯ ಗತಾಯುಷಃ ॥ ೧೪

ಸ್ಥಾಪಯಿತ್ವಾ ಪ್ರಿಯಂ ಪುತ್ರಂ ರಾಜ್ಯೇ ದಶರಥೇನ ಯಃ ।
ಮಂದವೀರ್ಯಃ ಸುತೋ ಜ್ಯೇಷ್ಠಸ್ತತಃ ಪ್ರಸ್ಥಾಪಿತೋ ವನಮ್ ॥೧೫

ತೇನ ಕಿಂ ಭ್ರಷ್ಟರಾಜ್ಯೇನ ರಾಮೇಣ ಗತಚೇತಸಾ ।
ಕರಿಷ್ಯಸಿ ವಿಶಾಲಾಕ್ಷಿ ತಾಪಸೇನ ತಪಸ್ವಿನಾ ॥ ೧೬

ಸರ್ವರಾಕ್ಷಸಭರ್ತಾರಂ ಕಾಮಯ ಸ್ವಯಮಾಗತಮ್ ।
ನ ಮನ್ಮಥಶರಾವಿಷ್ಟಂ ಪ್ರತ್ಯಾಖ್ಯಾತುಂ ತ್ವಮರ್ಹಸಿ ॥ ೧೭

---

ಗಳೆಲ್ಲವೂ ಸುವರ್ಣಭೂಷಿತವಾಗಿ ರಮಣೀಯವಾಗಿವೆ. ವೈಡೂರ್ಯದ ತೋರಣಗಳು ವಿರಾಜಿಸುತ್ತವೆ (೧೦-೧೧). ನನ್ನ ಲಂಕೆಯು ಆನೆ, ಕುದುರೆ, ರಥಗಳಿಂದ ಕಿಕ್ಕಿರಿದು ತುಂಬಿದೆ. ವಾದ್ಯಘೋಷವು ಮೊಳಗುತ್ತಿರುವುದು. ಉದ್ಯಾನವನಗಳಲ್ಲಿರುವ ವೃಕ್ಷಗಳು ಎಲ್ಲ ಸಮಯದಲ್ಲಿಯೂ ಫಲಗಳನ್ನು ನೀಡುತ್ತವೆ (೧೨). ಸೀತೆ-ರಾಜಕುಮಾರಿ, ಲಂಕೆಯಲ್ಲಿ ನೀನು ನನ್ನೊಡನಿದ್ದರೆ ಭೋಗದಲ್ಲಿ ನಿರತಳಾಗಿ ಮನುಷ್ಯಸ್ತ್ರೀಯರನ್ನೇ ಮರೆತುಬಿಡುವೆ. ಶೋಭನೆ, ಅಲ್ಲಿ ನೀನು ಮಾನುಷ ಭೋಗಗಳನ್ನೂ ದಿವ್ಯಭೋಗಗಳನ್ನೂ ಅನುಭವಿಸಬಹುದು. ಆಯುಸ್ಸು ತೀರಿಹೋದ, ಮನುಷ್ಯಮಾತ್ರನಾದ ಈ ರಾಮನು ನಿನ್ನ ನೆನಪಿಗೇ ಬರುವುದಿಲ್ಲ ! (೧೩-೧೪). ದಶರಥರಾಜನು ತನ್ನ ಪ್ರಿಯಪುತ್ರನಾದ ಭರತನನ್ನು ರಾಜ್ಯದಲ್ಲಿ ಸ್ಥಾಪಿಸಿ ಈತನನ್ನು ಹೊರಗಟ್ಟಿದ್ದಾನೆ. ಇವನು ಹಿರಿಯಮಗನಾದರೂ ಕೈಲಾಗದ ಹೇಡಿಯೆಂದು ತಿಳಿದೇ ಕಾಡಿಗೆ ಓಡಿಸಿದ್ದಾನೆ! (೧೫). ರಾಜ್ಯವನ್ನು ಕಳೆದುಕೊಂಡು ಬುದ್ಧಿಗೆಟ್ಟಿರುವ ರಾಮನಿಂದ ಆಗಬೇಕಾದ್ದೇನು ? ಹೇ ವಿಶಾಲಾಕ್ಷಿ, ಕೈಲಾಗದೆ ತಪಸ್ಸುಮಾಡಲು ಬಂದಿರುವ ಈ ದರಿದ್ರನನ್ನು ಕಟ್ಟಿಕೊಂಡು ಏನು ಮಾಡುತ್ತೀಯೆ ? (೧೬). ಸಮಸ್ತರಾಕ್ಷಸರಿಗೂ ಅಧೀಶ್ವರನಾದವನು ತಾನಾಗಿ

ಪ್ರತ್ಯಾಖ್ಯಾಯ ಹಿ ಮಾಂ ಭೀರು ಪರಿತಾಪಂ ಗಮಿಷ್ಯಸಿ ।
ಚರಣೇನಾಭಿಹತ್ಯೇವ ಪುರೂರವಸಮುರ್ವಶೀ ॥ ೧೮

ಅಂಗುಲ್ಯಾ ನ ಸಮೋ ರಾಮೋ ಮಮ ಯುದ್ಧೇ ಸ ಮಾನುಷಃ ।
ತವ ಭಾಗ್ಯೇನ ಸಂಪ್ರಾಪ್ತಂ ಭಜಸ್ವ ವರವರ್ಣಿನಿ ॥ ೧೯

ಏವಮುಕ್ತಾ ತು ವೈದೇಹೀ ಕ್ರುದ್ಧಾ ಸಂರಕ್ತಲೋಚನಾ ।
ಅಬ್ರವೀತ್ ಪರುಷಂ ವಾಕ್ಯಂ ರಹಿತೇ ರಾಕ್ಷಸಾಧಿಪಮ್ ॥ ೨೦

ಕಥಂ ವೈಶ್ರವಣಂ ದೇವಂ ಸರ್ವಭೂತನಮಸ್ಕೃತಮ್ ।
ಭ್ರಾತರಂ ವ್ಯಪದಿಶ್ಯ ತ್ವಮಶುಭಂ ಕರ್ತುಮಿಚ್ಛಸಿ ॥ ೨೧

ಅವಶ್ಯಂ ವಿನಶಿಷ್ಯಂತಿ ಸರ್ವೇ ರಾವಣ ರಾಕ್ಷಸಾಃ ।
ಯೇಷಾಂ ತ್ವಂ ಕರ್ಕಶೋ ರಾಜಾ ದುರ್ಬುದ್ಧಿರಜಿತೇಂದ್ರಿಯಃ ॥ ೨೨

ಅಪಹೃತ್ಯ ಶಚೀಂ ಭಾರ್ಯಾಂ ಶಕ್ಯಮಿಂದ್ರಸ್ಯ ಜೀವಿತುಮ್ ।
ನ ಚ ರಾಮಸ್ಯ ಭಾರ್ಯಾಂ ಮಾಮುಪನೀಯಾಸ್ತಿ ಜೀವಿತಮ್ ॥ ೨೩

---

ನಿನ್ನ ಬಳಿಗೆ ಬಂದಿದ್ದಾನೆ, ಇವನನ್ನು ವರಿಸು! ಕಾಮಸಂತಪ್ತನಾದ ಈತನನ್ನು ನಿರಾಕರಿಸುವುದು ನಿನಗೆ ತರವಲ್ಲ. ಸುಂದರಿ, ಹೆದರುವೆಯೇಕೆ? ನನ್ನನ್ನು ನಿರಾಕರಿಸಿದರೆ, ಆಮೇಲೆ ಪಶ್ಚಾತ್ತಾಪಪಡಬೇಕಾದೀತು. ಊರ್ವಶಿಯು ಪುರೂರವನನ್ನು ಕಾಲಿಂದ ಒದೆದು ವ್ಯಥೆಪಟ್ಟಂತಾದೀತು! (೧೭-೧೮). ಅಲ್ಪಮನುಷ್ಯನಾದ ಆ ರಾಮನು ಯುದ್ಧದಲ್ಲಿ ನನ್ನ ಒಂದು ಬೆರಳಿಗೆ ಸಮನಲ್ಲ! ನಿನ್ನ ಭಾಗ್ಯದಿಂದ ನಾನು ಬಂದಿದ್ದೇನೆ! ನನ್ನನ್ನು ವರಿಸು" ಎಂದು ಹೇಳಿದನು (೧೯). ಕ್ರುದ್ಧಳಾದ ವೈದೇಹಿಯ ಕಣ್ಣುಗಳು ಕೆಂಪಡರಿದವು. ಜನಸಹಾಯವಿಲ್ಲದ ಸ್ಥಳದಲ್ಲಿ ತಾನಿದ್ದರೂ ಅವಳು ರಾಕ್ಷಸರಾಜನಿಗೆ ಕಠೋರವಾಕ್ಯಗಳನ್ನು ಹೇಳಿದಳು (೨೦) : "ಎಲೈ ರಾವಣ, ಕುಬೇರನು ಸರ್ವಜನವಂದ್ಯನಾದ ದೇವತಾಪುರುಷ. ಅವನನ್ನು ಅಣ್ಣನೆಂದು ಬೇರೆ ಹೇಳಿಕೊಂಡು, ಅವನಿಗೆ ಕೇಡನ್ನು ಹೇಗೆತಾನೆ ಬಯಸಿದೆ? ಕರ್ಕಶನೂ ದುರ್ಬುದ್ಧಿಯೂ ಅಜಿತೇಂದ್ರಿಯನೂ ಆದ ನೀನು ರಾಕ್ಷಸರಿಗೆ ರಾಜನೆಂದಮೇಲೆ, ರಾವಣ, ಅವರೆಲ್ಲರೂ ನಿಶ್ಚಯವಾಗಿ ನಾಶಹೊಂದುವರು (೨೧-೨೨). ಇಂದ್ರನ ಭಾರ್ಯೆಯಾದ ಶಚೀದೇವಿಯನ್ನು ಅಪಹರಿಸಿದರೂ ಬದುಕಲು

ಜೀವೇಚ್ಚಿರಂ ವಜ್ರಧರಸ್ಯ ಹಸ್ತಾ-
ಚ್ಛಚೀಂ ಪ್ರಧೃಷ್ಯಾಪ್ರತಿರೂಪರೂಪಾಮ್ ।
ನ ಮಾದೃಶೀಂ ರಾಕ್ಷಸ ದೂಷಯಿತ್ವಾ
ಪೀತಾಮೃತಸ್ಯಾಪಿ ತವಾಸ್ತಿ ಮೋಕ್ಷಃ ॥ ೨೪

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಚತ್ವಾರಿಂಶಃ ಸರ್ಗಃ

ಸಾಧ್ಯವಾದೀತು; ಆದರೆ ಶ್ರೀರಾಮನ ಭಾರ್ಯೆಯಾದ ನನ್ನನ್ನು ಅಪಹರಿಸಿದರೆ ಮಾತ್ರ ನಿನ್ನ ಜೀವ ಉಳಿಯದು (೨೩). ಅಸಾಧಾರಣ ರೂಪವತಿಯಾದ ಶಚಿಯನ್ನು ಬಲಾತ್ಕರಿಸಿದವನು, ವಜ್ರಧಾರಿಯಾದ ಇಂದ್ರನ ಕೈಯಿಂದ ತಪ್ಪಿಸಿ ಕೊಂಡು ಬಹುಕಾಲ ಬದುಕಿದರೂ ಬದುಕಬಹುದು. ಆದರೆ, ರಾಕ್ಷಸ, ನನ್ನನ್ನು ಬಲಾತ್ಕರಿಸಿದರೆ, ನೀನು ಅಮೃತವನ್ನೇ ಕುಡಿದಿದ್ದರೂ ನಿನಗೆ ಉಳಿಗಾಲವಿಲ್ಲ" ಎಂದಳು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೆಂಟನೆಯ ಸರ್ಗ

## ಏಕೋನಪಂಚಾಶಃ ಸರ್ಗಃ

### ಸೀತಾಪಹರಣಮ್

ಸೀತಾಯಾ ವಚನಂ ಶ್ರುತ್ವಾ ದಶಗ್ರೀವಃ ಪ್ರತಾಪವಾನ್ ।
ಹಸ್ತೇ ಹಸ್ತಂ ಸಮಾಹತ್ಯ ಚಕಾರ ಸುಮಹದ್ವಪುಃ ॥ ೧

ಸ ಮೈಥಿಲೀಂ ಪುನರ್ವಾಕ್ಯಂ ಬಭಾಷೇ ವಾಕ್ಯಕೋವಿದಃ ।
ನೋನ್ಮತ್ತಯಾ ಶ್ರುತೌ ಮನ್ಯೇ ಮಮ ವೀರ್ಯಪರಾಕ್ರಮೌ ॥ ೨

ಉದ್ವಹೇಯಂ ಭುಜಾಭ್ಯಾಂ ತು ಮೇದಿನೀಮಂಬರೇ ಸ್ಥಿತಃ ।
ಆಪಿಬೇಯಂ ಸಮುದ್ರಂ ಚ ಹನ್ಯಾಂ ಮೃತ್ಯುಂ ರಣೇ ಸ್ಥಿತಃ ॥ ೩

ಅರ್ಕಂ ರುಂಧ್ಯಾಂ ಶರೈಸ್ತೀಕ್ಷ್ಣೈರ್ನಿರ್ಭಿಂದ್ಯಾಂ ಹಿ ಮಹೀತಲಮ್ ।
ಕಾಮರೂಪಿಣಮುನ್ಮತ್ತೇ ಪಶ್ಯ ಮಾಂ ಕಾಮದಂ ಪತಿಮ್ ॥ ೪

### ಸರ್ಗ ೪೯

ರಾವಣನು ಸೀತೆಯನ್ನು ಬಲಾತ್ಕಾರದಿಂದ ರಥದಲ್ಲಿ ಕುಳ್ಳಿರಿಸಿಕೊಂಡು ಲಂಕೆಗೆ ಹೊರಡುವುದು. ಸೀತೆಯ ರೋದನ. ದಾರಿಯಲ್ಲಿ ಜಟಾಯುವನ್ನು ಕಂಡು ತನ್ನ ವೃತ್ತಾಂತವನ್ನು ಕೂಗಿ ಹೇಳುವುದು.

ಪ್ರತಾಪಶಾಲಿಯಾದ ದಶಕಂಠನು ಸೀತೆಯ ನುಡಿಯನ್ನು ಕೇಳಿ (ಕೋಪಾವೇಶದಿಂದ) ಕೈಬಡಿದನು. ಮರುಕ್ಷಣದಲ್ಲಿ ಬೃಹದಾಕಾರವನ್ನು ತಾಳಿದನು. ವಾಗ್ವಿಶಾರದನಾದ ಆ ರಾವಣನು ಪುನಃ ಮೈಥಿಲಿಯನ್ನು ಕುರಿತು "ಉನ್ಮತ್ತಳಾದ ನೀನು ನನ್ನ ವೀರ್ಯಪರಾಕ್ರಮಗಳನ್ನು ಕಿವಿಗೊಟ್ಟು ಆಲಿಸಲಿಲ್ಲವೆಂದು ತೋರುತ್ತದೆ (೧-೨). ಗಗನತಳದಲ್ಲಿ ನಿಂತು ಈ ಭೂಮಿಯನ್ನು ನಾನು ಮೇಲೆತ್ತಬಲ್ಲೆನು! ಸಮುದ್ರವನ್ನೇ ಬಾಯಿಂದ ಹೀರಬಲ್ಲೆನು! ರಣರಂಗದಲ್ಲಿ ಮೃತ್ಯುವನ್ನೇ ಕೊಂದೆಸೆಯಬಲ್ಲೆನು! (೩). ಸೂರ್ಯನನ್ನು ಹಿಡಿದು ನಿಲ್ಲಿಸಿಯೇನು! ತೀಕ್ಷ್ಣಾಸ್ತ್ರಗಳಿಂದ ಈ ಭೂಮಿಯನ್ನು ಪುಡಿಪುಡಿಮಾಡಿಯೇನು! ಏ ಹುಚ್ಚಿ, ಇಷ್ಟಬಂದ ರೂಪವನ್ನು ಧರಿಸಬಲ್ಲ ನಾನು ನಿನ್ನ ಇಷ್ಟಾರ್ಥವನ್ನು ಸಲ್ಲಿಸತಕ್ಕ ಪತಿಯೆಂದು ಭಾವಿಸು" ಎಂದು ಹೇಳಿದನು (೪).

ಏವಮುಕ್ತವತಸ್ತಸ್ಯ ರಾವಣಸ್ಯ ಶಿಖಿಪ್ರಭೇ ।
ಕ್ರುದ್ಧಸ್ಯ ಹರಿಪರ್ಯಂತೇ ರಕ್ತೇ ನೇತ್ರೇ ಬಭೂವತುಃ ॥ ೫

ಸದ್ಯಃ ಸೌಮ್ಯಂ ಪರಿತ್ಯಜ್ಯ ಭಿಕ್ಷುರೂಪಂ ಸ ರಾವಣಃ ।
ಸ್ವಂ ರೂಪಂ ಕಾಲರೂಪಾಭಂ ಭೇಜೇ ವೈಶ್ರವಣಾನುಜಃ ॥ ೬

ಸಂರಕ್ತನಯನಃ ಶ್ರೀಮಾಂಸ್ತಪ್ತಕಾಂಚನಭೂಷಣಃ ।
ಕ್ರೋಧೇನ ಮಹತಾವಿಷ್ಟೋ ನೀಲಜೀಮೂತಸಂನಿಭಃ ॥ ೭

ದಶಾಸ್ಯೋ ವಿಂಶತಿಭುಜೋ ಬಭೂವ ಕ್ಷಣದಾಚರಃ ।
ಸ ಪರಿವ್ರಾಜಕಚ್ಛದ್ಮ ಮಹಾಕಾಯೋ ವಿಹಾಯ ತತ್ ॥ ೮

ಪ್ರತಿಪೇದೇ ಸ್ವಕಂ ರೂಪಂ ರಾವಣೋ ರಾಕ್ಷಸಾಧಿಪಃ ।
ಸಂರಕ್ತನಯನಃ ಕ್ರೋಧಾಜ್ಜೀಮೂತನಿಚಯಪ್ರಭಃ ॥ ೯

ರಕ್ತಾಂಬರಧರಸ್ತಸ್ಥೌ ಸ್ತ್ರೀರತ್ನಂ ಪ್ರೇಕ್ಷ್ಯ ಮೈಥಿಲೀಮ್ ।
ಸೀತಾಮಸಿತಕೇಶಾಂತಾಂ ಭಾಸ್ಕರಸ್ಯ ಪ್ರಭಾಮಿವ ॥ ೧೦

---

ಹಾಗೆ ಹೇಳುವಾಗ ಕ್ರುದ್ಧನಾದ ರಾವಣನ ಕೆಂಗಣ್ಣುಗಳು ಬೆಂಕಿಯಂತಾದವು. ಅವುಗಳ ಅಂಚು ಪಿಂಗಳವರ್ಣವಾಯಿತು. ಸೌಮ್ಯವಾದ ಭಿಕ್ಷುರೂಪವನ್ನು ಪರಿತ್ಯಜಿಸಿ, ರಾವಣನು ಕಾಲಯಮನಂತಿದ್ದ ನಿಜರೂಪವನ್ನು ಧರಿಸಿದನು (೫-೬). ಸಿಟ್ಟಿನಿಂದ ಕಿಡಿಕಿಡಿಯಾದ ಆ ತೇಜಸ್ವಿಯು ರಕ್ತನೇತ್ರನೂ ಸುವರ್ಣಾಭರಣ ಭೂಷಿತನೂ ನೀಲಮೇಘದಂತೆ ಕೃಷ್ಣದೇಹನೂ ಆಗಿ ಗೋಚರಿಸಿದನು. ಆ ನಿಶಾಚರನು ಸಂನ್ಯಾಸಿ ವೇಷವನ್ನು ತೊರೆದು, ಹತ್ತು ತಲೆ, ಇಪ್ಪತ್ತು ಕೈಗಳುಳ್ಳ ಬೃಹದಾಕಾರವನ್ನು ತಳೆದುನಿಂತನು (೭-೮). ಆ ರಾಕ್ಷಸೇಂದ್ರನು ಕೋಪಾವಿಷ್ಟನಾಗಿ ಕೆಂಗಣ್ಣುಗಳಿಂದ ನೋಡುತ್ತ, ಕಗ್ಗೆ ಮೇಘಪಂಕ್ತಿಯಂತೆ ಹೊಳೆಯುತ್ತ, ನಿಜರೂಪವನ್ನು ಧರಿಸಿ ನಿಂತನು. ರಕ್ತಾಂಬರಧಾರಿಯಾದ ರಾವಣನು ಸ್ತ್ರೀರತ್ನವೆನಿಸಿದ ಮೈಥಿಲಿಯನ್ನು ನೋಡುತ್ತ ನಿಂತನು. ಕಪ್ಪುಕೂದಲಿನ ಚೆಲುವೆಯಾದ ಸೀತೆಯು ಹಳದಿ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟು ಚಿನ್ನದ ಒಡವೆಗಳನ್ನು ತೊಟ್ಟು ಸೂರ್ಯಪ್ರಭೆಯಂತೆ ವಿರಾಜಿಸುತ್ತಿದ್ದಳು (೯-೧೦).

ವಸನಾಭರಣೋಪೇತಾಂ ಮೈಥಿಲೀಂ ರಾವಣೋಽಬ್ರವೀತ್ ।
ತ್ರಿಷು ಲೋಕೇಷು ವಿಖ್ಯಾತಂ ಯದಿ ಭರ್ತಾರಮಿಚ್ಛಸಿ ॥ ೧೧

ಮಾಮಾಶ್ರಯ ವರಾರೋಹೇ ತವಾಹಂ ಸದೃಶಃ ಪತಿಃ ।
ಮಾಂ ಭಜಸ್ವ ಚಿರಾಯ ತ್ವಮಹಂ ಶ್ಲಾಘ್ಯಃ ಪತಿಸ್ತವ ॥ ೧೨

ನೈವ ಚಾಹಂ ಕ್ವಚಿದ್ಭದ್ರೇ ಕರಿಷ್ಯೇ ತವ ವಿಪ್ರಿಯಮ್ ।
ತ್ಯಜ್ಯತಾಂ ಮಾನುಷೋ ಭಾವೋ ಮಯಿ ಭಾವಃ ಪ್ರಣೀಯತಾಮ್ ॥

ರಾಜ್ಯಾಚ್ಚ್ಯುತಮಸಿದ್ಧಾರ್ಥಂ ರಾಮಂ ಪರಿಮಿತಾಯುಷಮ್ ।
ಕೈರ್ಗುಣೈರನುರಕ್ತಾಸಿ ಮೂಢೇ ಪಂಡಿತಮಾನಿನಿ ॥ ೧೪

ಯಃ ಸ್ತ್ರಿಯಾ ವಚನಾದ್ರಾಜ್ಯಂ ವಿಹಾಯ ಸಸುಹೃಜ್ಜನಮ್ ।
ಅಸ್ಮಿನ್ ವ್ಯಾಲಾನುಚರಿತೇ ವನೇ ವಸತಿ ದುರ್ಮತಿಃ ॥ ೧೫

ಇತ್ಯುಕ್ತ್ವಾ ಮೈಥಿಲೀಂ ವಾಕ್ಯಂ ಪ್ರಿಯಾರ್ಹಾಂ ಪ್ರಿಯವಾದಿನೀಮ್।
ಅಭಿಗಮ್ಯ ಸುದುಷ್ಟಾತ್ಮಾ ರಾಕ್ಷಸಃ ಕಾಮಮೋಹಿತಃ ॥ ೧೬

---

(ಸೂರ್ಯಪ್ರಭೆಯನ್ನು ಅಡ್ಡಗಟ್ಟುವ ಮೇಘದಂತಿದ್ದ) ರಾವಣನು ಅವಳನ್ನು ಕುರಿತು "ಸುಂದರಿ, ನಿನಗೆ ಲೋಕತ್ರಯವಿಖ್ಯಾತನಾದ ಗಂಡನು ಬೇಕೆಂದಿದ್ದರೆ ನನ್ನನ್ನು ವರಿಸು. ನಾನೇ ನಿನಗೆ ಯೋಗ್ಯನಾದ ಪತಿ. ಶಾಶ್ವತವಾಗಿ ನನ್ನನ್ನು ಆಶ್ರಯಿಸು. ನಿನಗೆ ನಾನೇ ಪ್ರಶಸ್ತನಾದ ಪತಿಯೆಂದು ತಿಳಿ (೧೧-೧೨). ಭದ್ರೆ, ನಿನಗೆ ಸಂತೋಷವಾಗದ ಕಾರ್ಯವನ್ನು ನಾನೆಂದಿಗೂ ಮಾಡುವುದಿಲ್ಲ. ಆ ಮನುಷ್ಯನಲ್ಲಿರುವ ಸ್ನೇಹವನ್ನು ಆಚೆಗೆ ತಳ್ಳು. ನಿನ್ನ ಸ್ನೇಹವು ನನ್ನ ಕಡೆಗೆ ಹರಿಯಲಿ! (೧೩). ಆಸೆ ಕೈಗೂಡದೆ ರಾಜ್ಯಭ್ರಷ್ಟನಾಗಿ ಅಲ್ಪಜೀವಿಯಾಗಿರುವ ರಾಮನನ್ನು ಯಾವ ಗುಣಗಳಿವೆಯೆಂದು ಪ್ರೀತಿಸುತ್ತಿದ್ದೀಯೆ! ಅಯ್ಯೋ ಮೂಢಾತ್ಮಳೆ, ಬಹಳ ಬಲ್ಲೆಯೆಂದು ತಿಳಿದುಕೊಂಡಿದ್ದೀಯಲ್ಲ! (೧೪). ಒಬ್ಬ ಹೆಂಗಸು ಹೇಳಿಬಿಟ್ಟಳೆಂದು ರಾಜ್ಯವನ್ನೂ ಬಂಧುಬಳಗವನ್ನೂ ಪರಿತ್ಯಜಿಸಿ ಆ ರಾಮನು ಕಾಡಿಗೆ ಬಂದಿದ್ದಾನಲ್ಲ! ವನ್ಯಜಂತುಗಳು ಅಲೆಯುವ ಅರಣ್ಯದಲ್ಲಿ ಆ ಬುದ್ಧಿಗೇಡಿಯು ವಾಸವಾಗಿದ್ದಾನಲ್ಲ!" ಎಂದನು (೧೫). ಪ್ರಿಯಂವದೆಯೂ

ಜಗ್ರಾಹ ರಾವಣಃ ಸೀತಾಂ ಬುಧಃ ಖೇ ರೋಹಿಣೀಮಿವ ।
ವಾಮೇನ ಸೀತಾಂ ಪದ್ಮಾಕ್ಷೀಂ ಮೂರ್ಧಜೇಷು ಕರೇಣ ಸಃ ॥ ೧೭

ಊರ್ವೋಸ್ತು ದಕ್ಷಿಣೇನೈವ ಪರಿಜಗ್ರಾಹ ಪಾಣಿನಾ ।
ತಂ ದೃಷ್ಟ್ವಾ ಮೃತ್ಯುಸಂಕಾಶಂ ತೀಕ್ಷ್ಣದಂಷ್ಟ್ರಂ ಮಹಾಭುಜವರ್ ॥

ಪ್ರಾದ್ರವನ್ ಗಿರಿಸಂಕಾಶಂ ಭಯಾರ್ತಾ ವನದೇವತಾಃ ।
ಸ ಚ ಮಾಯಾಮಯೋ ದಿವ್ಯಃ ಖರಯುಕ್ತಃ ಖರಸ್ವನಃ ॥ ೧೯

ಪ್ರತ್ಯದೃಶ್ಯತ ಹೇಮಾಂಗೋ ರಾವಣಸ್ಯ ಮಹಾರಥಃ ।
ತತಸ್ತಾಂ ಪರುಷೈರ್ವಾಕ್ಯೈರ್ಭರ್ತ್ಸಯನ್ ಸ ಮಹಾಸ್ವನಃ ॥ ೨೦

ಅಂಕೇನಾದಾಯ ವೈದೇಹೀಂ ರಥಮಾರೋಪಯತ್ತದಾ ।
ಸಾ ಗೃಹೀತಾ ವಿಚುಕ್ರೋಶ ರಾವಣೇನ ಯಶಸ್ವಿನೀ ॥ ೨೧

---

ಪ್ರಿಯವಚನಾರ್ಹಳೂ ಆದ ಮೈಥಿಲಿಗೆ ಕಾಮಮೋಹಿತನಾದ ಆ ದುಷ್ಟ ರಾಕ್ಷಸನು ಇಂಥ ಕರ್ಕಶವಾಕ್ಯವನ್ನು ಹೇಳಿದನು. ಹೇಳುತ್ತಲೇ ಮುಂದೆ ಬಂದು, ಆಕಾಶದಲ್ಲಿ ಬುಧನು ರೋಹಿಣಿಯನ್ನು ತುಡುಕುವಂತೆ,* ಪದ್ಮನೇತ್ರೆಯಾದ ಸೀತೆಯನ್ನು ತುಡುಕಿದನು. ಅವಳ ಕೇಶಪಾಶವನ್ನು ಎಡಗೈಯಿಂದ ಹಿಡಿದನು. (೧೬-೧೭). ಬಲಗೈಯಿಂದ ಅವಳ ತೊಡೆಗಳ ಹಿಂಭಾಗವನ್ನು ಹಿಡಿದನು. ಬೆಟ್ಟದಂತೆ ಬೆಳೆದಿದ್ದ ಮಹಾಭುಜನಾದ ರಾವಣನು ತೀಕ್ಷ್ಣವಾದ ಹಲ್ಲುಗಳನ್ನು ಕಿರಿದಿರಲು, ಮೃತ್ಯುವಿನಂತೆ ಗೋಚರಿಸಿದನು. ವನದೇವತೆಗಳು ಅವನನ್ನು ನೋಡಿ ತಲ್ಲಣಿಸಿ ದಿಕ್ಕುದಿಕ್ಕಿಗೆ ಓಡಿಹೋದರು (೧೮-೧೯). ಅಷ್ಟರಲ್ಲಿ ಖರಗಳನ್ನು ಹೂಡಿದ್ದ ರಾವಣನ ಮಾಯಾಮಯವಾದ ಸುವರ್ಣ ರಥವು ಕಿರ್ರೆಂದು ಧ್ವನಿಗೈಯುತ್ತ ಬಂದು ಕಾಣಿಸಿಕೊಂಡಿತು. ರಾವಣನು ವೈದೇಹಿಯನ್ನು ಕೆಟ್ಟ ಮಾತುಗಳಿಂದ ಗದರಿಸುತ್ತ, ಗರ್ಜಿಸುತ್ತ, ಅವಳ ಹಿಂಭಾಗವನ್ನು ಹಿಡಿದು ಹೊತ್ತು ರಥದೊಳಗೆ ಹೇರಿದನು. ಆ ಯಶಸ್ವಿನಿಯು 'ಹೋ' ಎಂದು ಅರಚು

---

* ಇದು ಅಭೂತೋಪಮಾ ಎಂಬ ಅಲಂಕಾರ. ಬುಧನ ತಂದೆ ಚಂದ್ರ. ಚಂದ್ರನ ಹೆಂಡತಿ ರೋಹಿಣಿ. ಬುಧನಿಗೆ ರೋಹಿಣಿ ತಾಯಿಗೆ ಸಮಾನಳು. ತಾಯಿಯನ್ನು ಕೆಣಕಿದಂತಹ ಪಾಪಕಾರ್ಯವಿದು ಎಂದು ಅಭಿಪ್ರಾಯ.

*

ರಾಮೇತಿ ಸೀತಾ ದುಃಖಾರ್ತಾ ರಾಮಂ ದೂರಗತಂ ವನೇ ।
ತಾಮಕಾಮಾಂ ಸ ಕಾಮಾರ್ತಃ ಪನ್ನಗೇಂದ್ರವಧೂಮಿವ ॥ ೨೨

ವಿವೇಷ್ಟಮಾನಾಮಾದಾಯ ಉತ್ಪಪಾತಾಥ ರಾವಣಃ ।
ತತಃ ಸಾ ರಾಕ್ಷಸೇಂದ್ರೇಣ ಹ್ರಿಯಮಾಣಾ ವಿಹಾಯಸಾ ॥ ೨೩

ಭೃಶಂ ಚುಕ್ರೋಶ ಮತ್ತೇವ ಭ್ರಾಂತಚಿತ್ತಾ ಯಥಾತುರಾ ।
ಹಾ ಲಕ್ಷ್ಮಣ ಮಹಾಬಾಹೋ ಗುರುಚಿತ್ತಪ್ರಸಾದಕ ॥ ೨೪

ಹ್ರಿಯಮಾಣಾಂ ನ ಜಾನೀಷೇ ರಕ್ಷಸಾ ಮಾಮಮರ್ಷಿಣಾ ।
ಜೀವಿತಂ ಸುಖಮರ್ಥಾಂಶ್ಚ ಧರ್ಮಹೇತೋಃ ಪರಿತ್ಯಜನ್ ॥ ೨೫

ಹ್ರಿಯಮಾಣಾಮಧರ್ಮೇಣ ಮಾಂ ರಾಘವ ನ ಪಶ್ಯಸಿ ।
ನನು ನಾಮಾವಿನೀತಾನಾಂ ವಿನೇತಾಸಿ ಪರಂತಪ ॥ ೨೬

ಕಥಮೇವಂವಿಧಂ ಪಾಪಂ ನ ತ್ವಂ ಶಾಧಿ ಹಿ ರಾವಣಮ್ ।
ನ ತು ಸದ್ಯೋಽವಿನೀತಸ್ಯ ದೃಶ್ಯತೇ ಕರ್ಮಣಃ ಫಲಮ್ ॥ ೨೭

---

ತ್ತಿದ್ದಳು (೨೦-೨೧). ಸೀತೆಯು ದುಃಖಾರ್ತಳಾಗಿ 'ರಾಮಾ! ರಾಮಾ!'
ಎಂದು ಗಟ್ಟಿಯಾಗಿ ಕೂಗುತ್ತಿದ್ದಳು. ಶ್ರೀರಾಮನು ಕಾಡಿನಲ್ಲಿ ದೂರ ಹೋಗಿ
ದ್ದನು. ನಿಷ್ಕಾಮಳಾದ ಸೀತೆಯು ಹೆಣ್ಣು ಸರ್ಪದಂತೆ ಹೊರಳಾಡುತ್ತಿರಲು,
ಕಾಮಾರ್ತನಾದ ರಾವಣನು ಅವಳನ್ನು ಹೊತ್ತು ಗಗನಮಾರ್ಗವನ್ನಡರಿದನು
(೨೨). ರಾವಣನು ಸೀತೆಯನ್ನು ಆಕಾಶ ಮಾರ್ಗದಲ್ಲಿ ಅಪಹರಿಸಿಕೊಂಡು
ಹೋಗುತ್ತಿರಲು, ಅವಳು ಶೋಕವಿಹ್ವಲಳಾಗಿ ಹುಚ್ಚುಹಿಡಿದವಳಂತೆ ಪ್ರಜ್ಞೆತಪ್ಪಿ
ದವಳಂತೆ ವಿಧವಿಧವಾಗಿ ಹಲುಬಿ ಕೂಗಿಕೊಂಡಳು : "ಹಾ ಲಕ್ಷ್ಮಣ! ಮಹಾ
ಬಾಹು! ಅಣ್ಣನ ಅಭಿಮತದಂತೆ ನಡೆದುಕೊಂಡೆ ನೀನು! (೨೩-೨೪). ಈ
ರಾಕ್ಷಸನು ವೈರಬುದ್ಧಿಯಿಂದ ನನ್ನನ್ನು ಎಳೆದೊಯ್ಯುತ್ತಿದ್ದಾನೆ, ನಿನಗೆ ತಿಳಿ
ಯದೆ? ರಾಘವ, ಧರ್ಮರಕ್ಷಣೆಗಾಗಿ ಧನ, ಸುಖ, ಜೀವಿತಗಳನ್ನೇ ಮುಡಿಪಾಗಿ
ಒಪ್ಪಿಸಿದವನು ನೀನು. ಇಷ್ಟು ಅಧರ್ಮದಿಂದ ಇವನು ನನ್ನನ್ನು ಎಳೆದೊಯ್ಯು
ವುದು ನಿನಗೆ ಕಾಣಿಸದೆ? ವೀರಾಗ್ರಣಿ, ನೀನು ದುಷ್ಟರನ್ನು ದಂಡಿಸಿ ತಿದ್ದತಕ್ಕವ
ನಲ್ಲವೇ? (೨೫-೨೬). ಇಂಥ ಪಾಪಿಯಾದ ರಾವಣನನ್ನು ಹೇಗೆ ತಾನೆ

ಕಾಲೋಽಪ್ಯಂಗೀಭವತ್ಯತ್ರ ಸಸ್ಯಾನಾಮಿವ ಪಕ್ತಯೇ ।
ಸ ಕರ್ಮ ಕೃತವಾನೇತತ್ ಕಾಲೋಪಹತಚೇತನಃ ॥ ೨೮

ಜೀವಿತಾಂತಕರಂ ಘೋರಂ ರಾಮಾದ್ವ್ಯಸನಮಾಪ್ನುಹಿ ।
ಹಂತೇದಾನೀಂ ಸಕಾಮಾಸ್ತು ಕೈಕೇಯೀ ಸಹ ಬಾಂಧವೈಃ ॥ ೨೯

ಹ್ರಿಯೇ ಯದ್ಧರ್ಮಕಾಮಸ್ಯ ಧರ್ಮಪತ್ನೀ ಯಶಸ್ವಿನಃ ।
ಆಮಂತ್ರಯೇ ಜನಸ್ಥಾನೇ ಕರ್ಣಿಕಾರಾನ್ ಸುಪುಷ್ಪಿತಾನ್ ॥ ೩೦

ಕ್ಷಿಪ್ರಂ ರಾಮಾಯ ಶಂಸಧ್ವಂ ಸೀತಾಂ ಹರತಿ ರಾವಣಃ ।
ಮಾಲ್ಯವಂತಂ ಶಿಖರಿಣಂ ವಂದೇ ಪ್ರಸ್ರವಣಂ ಗಿರಿಮ್ ॥ ೩೧

ಕ್ಷಿಪ್ರಂ ರಾಮಾಯ ಶಂಸ ತ್ವಂ ಸೀತಾಂ ಹರತಿ ರಾವಣಃ ।
ಹಂಸಕಾರಂಡವಾಕೀರ್ಣಾಂ ವಂದೇ ಗೋದಾವರೀಂ ನದೀಮ್ ॥ ೩೨

---

ಶಿಕ್ಷಿಸದೆ ಇದ್ದೀಯ? ಕೆಟ್ಟ ಜನರ ಕೆಟ್ಟ ಕೆಲಸಕ್ಕೆ ತಕ್ಕ ಫಲವು ಕೂಡಲೇ ದೊರೆಯುವುದಿಲ್ಲ! ಫಲ ದೊರೆಯಲು ಕಾಲವೂ ಒದಗಿ ಬರಬೇಕು. ಸಸಿಯು ಪೈರು ಕೊಡಲು ಕೆಲವು ಕಾಲ ಬೇಕು. ಎಲೇ ರಾಕ್ಷಸ, ನಿನಗೆ ಕೇಡುಗಾಲ ಬಂದು ನಿನ್ನ ಬುದ್ಧಿಗೆ ಬಡಿದದ್ದರಿಂದ ಈ ದುಷ್ಕೃತ್ಯವನ್ನು ಮಾಡಿದ್ದೀಯೆ! (೨೭-೨೮). ಶ್ರೀರಾಮನಿಂದ ನಿನಗೆ ಪ್ರಾಣಾಂತಕವಾದ ಘೋರ ವಿಪತ್ತು ಬರಲಿ! ಅಯ್ಯೋ! ಈಗ ಕೈಕೇಯಿ ತನ್ನ ಇಷ್ಟಾರ್ಥವು ಸಂದಿತೆಂದು ಬಂಧುಬಳಗದೊಡನೆ ನಲಿದಾಳು! ಧರ್ಮವನ್ನೇ ಗುರಿಯಾಗಿ ಇಟ್ಟುಕೊಂಡು ಕೀರ್ತಿಶಾಲಿಯಾದವನು ಶ್ರೀರಾಮ. ಆವನ ಧರ್ಮಪತ್ನಿಯಾದ ನನ್ನನ್ನೂ ಇವನು ಎಳೆದೊಯ್ಯುವಂತಾಯಿತಲ್ಲ! ಜನಸ್ಥಾನದಲ್ಲಿರುವ ಪುಷ್ಪಿತಕರ್ಣಿಕಾರವೃಕ್ಷಗಳೇ, ನಿಮ್ಮನ್ನು ಬೇಡಿಕೊಳ್ಳುತ್ತೇನೆ (೨೯-೩೦): ರಾವಣನು ಸೀತೆಯನ್ನು ಒಯ್ಯುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳಿರಿ! ಹೂಮಾಲೆಗಳಿಂದ ರಂಜಿಸುವ ಸುಂದರಶಿಖರಶಾಲಿಯಾದ ಪ್ರಸ್ರವಣಗಿರಿಯನ್ನು ವಂದಿಸುತ್ತೇನೆ. ಗಿರಿರಾಜ, ರಾವಣನು ಸೀತೆಯನ್ನು ಒಯ್ಯುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳು! ಹಂಸಕಾರಂಡವಪಕ್ಷಿಗಳಿಂದ ತುಂಬಿದ ಗೋದಾವರೀನದಿಯೇ, ನಿನಗೆ ಕೈಮುಗಿಯುತ್ತೇನೆ (೩೧-೩೨).

ಕ್ಷಿಪ್ರಂ ರಾಮಾಯ ಶಂಸ ತ್ವಂ ಸೀತಾಂ ಹರತಿ ರಾವಣಃ ।
ದೈವತಾನಿ ಚ ಯಾನ್ಯಸ್ಮಿನ್ ವನೇ ವಿವಿಧಪಾದಪೇ ॥ ೩೩

ನಮಸ್ಕರೋಮ್ಯಹಂ ತೇಭ್ಯೋ ಭರ್ತುಃ ಶಂಸತ ಮಾಂ ಹೃತಾಮ್ ।
ಯಾನಿ ಕಾನಿಚಿದಪ್ಯತ್ರ ಸತ್ತ್ವಾನಿ ನಿವಸಂತ್ಯುತ ॥ ೩೪

ಸರ್ವಾಣಿ ಶರಣಂ ಯಾಮಿ ಮೃಗಪಕ್ಷಿಗಣಾನಪಿ ।
ಹ್ರಿಯಮಾಣಾಂ ಪ್ರಿಯಾಂ ಭರ್ತುಃ ಪ್ರಾಣೇಭ್ಯೋಽಪಿ
ಗರೀಯಸೀಮ್ ॥ ೩೫

ವಿವಶಾಪಹೃತಾ ಸೀತಾ ರಾವಣೇನೇತಿ ಶಂಸತ ।
ವಿದಿತ್ವಾ ಮಾಂ ಮಹಾಬಾಹುರಮುತ್ರಾಪಿ ಮಹಾಬಲಃ ॥ ೩೬

ಆನೇಷ್ಯತಿ ಪರಾಕ್ರಮ್ಯ ವೈವಸ್ವತಹೃತಾಮಪಿ ।
ಸಾ ತದಾ ಕರುಣಾ ವಾಚೋ ವಿಲಪಂತೀ ಸುದುಃಖಿತಾ ॥ ೩೭

ವನಸ್ಪತಿಗತಂ ಗೃಧ್ರಂ ದದರ್ಶಾಯತಲೋಚನಾ ।
ಸಾ ತಮುದ್ವೀಕ್ಷ್ಯ ಸುಶ್ರೋಣೀ ರಾವಣಸ್ಯ ವಶಂ ಗತಾ ॥ ೩೮

---

ರಾವಣನು ಸೀತೆಯನ್ನು ಅಪಹರಿಸುತ್ತಿದ್ದಾನೆಂದು ಶ್ರೀರಾಮನಿಗೆ ಬೇಗ ಹೇಳು ! ಈ ವನದ ವಿವಿಧವೃಕ್ಷಗಳಲ್ಲಿ ನೆಲೆಸಿದ ದೇವತೆಗಳೆಲ್ಲರಿಗೂ ನಮಸ್ಕರಿಸುತ್ತೇನೆ. ರಾವಣನು ಸೀತೆಯನ್ನು ಒಯ್ದನೆಂದು ನೀವು ನನ್ನ ಪತಿಗೆ ಹೇಳಿರಿ ! (೩೩-೩೪). ಇಲ್ಲಿರುವ ಸಮಸ್ತಪ್ರಾಣಿಗಳಿಗೆ–ಮೃಗಪಕ್ಷಿಗಳಿಗೆ ಶರಣಾಗಿದ್ದೇನೆ. ನನ್ನ ಪತಿಯು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ನನ್ನನ್ನು ರಾವಣನು ಅಪಹರಿಸಿದನೆಂದು ನನ್ನ ಪತಿಗೆ ಹೇಳಿರಿ ! ಪರಾಧೀನಳಾದ ಸೀತೆಯನ್ನು ಬಲಾತ್ಕಾರದಿಂದ ಅಪಹರಿಸಿದನೆಂದು ಹೇಳಿರಿ ! (೩೫-೩೬). ನಾನು ಲೋಕಾಂತರದಲ್ಲಿದ್ದರೂ ನನ್ನ ಸುದ್ದಿ ತಿಳಿದರೆ ಮಹಾಬಲನಾದ ಆ ವೀರಾಗ್ರಣಿಯು ನನ್ನನ್ನು ಬಿಡಿಸಿಕೊಂಡು ಬರುವನು. ಯಮನು ನನ್ನನ್ನು ಎಳೆದೊಯ್ದರೂ ಶ್ರೀರಾಮನು ತನ್ನ ಪರಾಕ್ರಮದಿಂದ ನನ್ನನ್ನು ಬಿಡಿಸಿ ತರುವನು" ಎಂದು ಹಂಬಲಿಸಿದಳು. ಅತಿದುಃಖದಿಂದ ಕರುಣಾಪೂರ್ಣವಾದ ಮಾತುಗಳನ್ನು ಹೇಳಿ ಹಲುಬಿದಳು (೩೭). ರಾವಣನ ವಶದಲ್ಲಿದ್ದ ಸೀತೆಗೆ ಅಷ್ಟರಲ್ಲಿ ಮರದಮೇಲೆ ಕುಳಿತಿದ್ದ ಒಂದು

ಸಮಾಕ್ರಂದದ್ಭಯಪರಾ ದುಃಖೋಪಹತಯಾ ಗಿರಾ ।
ಜಟಾಯೋ ಪಶ್ಯ ಮಾಮಾರ್ಯ ಹ್ರಿಯಮಾಣಾಮನಾಥವತ್ ॥ ೩೯

ಅನೇನ ರಾಕ್ಷಸೇಂದ್ರೇಣಾಕರುಣಂ ಪಾಪಕರ್ಮಣಾ ।
ನೈಷ ವಾರಯಿತುಂ ಶಕ್ಯಸ್ತವ ಕ್ರೂರೋ ನಿಶಾಚರಃ ॥ ೪೦

ಸತ್ತ್ವವಾನ್ ಜಿತಕಾಶೀ ಚ ಸಾಯುಧಶ್ಚೈವ ದುರ್ಮತಿಃ ।
ರಾಮಾಯ ತು ಯಥಾತತ್ತ್ವಂ ಜಟಾಯೋ ಹರಣಂ ಮಮ ॥ ೪೧

ಲಕ್ಷ್ಮಣಾಯ ಚ ತತ್ ಸರ್ವಮಾಖ್ಯಾತವ್ಯಮಶೇಷತಃ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನಪಂಚಾಶಃ ಸರ್ಗಃ

ಗೃಧ್ರವು ಕಾಣಿಸಿತು. ಆ ಸುಂದರಿಯು ಕಣ್ಣರಳಿಸಿ ಅದನ್ನೇ ದಿಟ್ಟಿಸಿ ನೋಡಿ ದುಃಖದಿಂದ ಬಿಕ್ಕುತ್ತ "ಅಪ್ಪಾ–ಜಟಾಯು, ನನ್ನ ಕಡೆಗೆ ನೋಡು! ಅನಾಥೆಯಾದ ನನ್ನನ್ನು ಈ ರಾಕ್ಷಸನು ಒಯ್ಯುತ್ತಿದ್ದಾನೆ (೩೮-೩೯). ಈ ಪಾಪಿಯು ನಿಷ್ಕರುಣೆಯಿಂದ ಅಪಹರಿಸುತ್ತಿದ್ದಾನೆ. ಈ ಕ್ರೂರಾತ್ಮನನ್ನು ತಡೆಯಲು ನಿನ್ನಿಂದಾಗಲಾರದು (೪೦). ಈ ದುಷ್ಟನು ಬಲಾಢ್ಯ; ವಿಜಯಶಾಲಿ; ಆಯುಧಗಳನ್ನು ಹಿಡಿದಿದ್ದಾನೆ. ಜಟಾಯು, ನನ್ನ ಅಪಹಾರದ ಸುದ್ದಿಯೆಲ್ಲವನ್ನೂ ಶ್ರೀರಾಮನಿಗೆ ತಿಳಿಸು. ಈ ವೃತ್ತಾಂತವೆಲ್ಲವನ್ನೂ ಲಕ್ಷ್ಮಣನಿಗೂ ತಿಳಿಸು" ಎಂದು ಕೂಗಿ ಹೇಳಿದಳು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ನಲವತ್ತೊಂಬತ್ತನೆಯ ಸರ್ಗ

## ಪಂಚಾಶಃ ಸರ್ಗಃ

### ಜಟಾಯುರಭಿಯೋಗಃ

ತಂ ಶಬ್ದಮವಸುಪ್ತಸ್ತು ಜಟಾಯುರಥ ಶುಶ್ರುವೇ ।
ನಿರೀಕ್ಷ್ಯ ರಾವಣಂ ಕ್ಷಿಪ್ರಂ ವೈದೇಹೀಂ ಚ ದದರ್ಶ ಸಃ ॥ ೧

ತತಃ ಪರ್ವತಕೂಟಾಭಸ್ತೀಕ್ಷ್ಣತುಂಡಃ ಖಗೋತ್ತಮಃ ।
ವನಸ್ಪತಿಗತಃ ಶ್ರೀಮಾನ್ ವ್ಯಾಜಹಾರ ಶುಭಾಂ ಗಿರಮ್ ॥ ೨

ದಶಗ್ರೀವ ಸ್ಥಿತೋ ಧರ್ಮೇ ಪುರಾಣೇ ಸತ್ಯಸಂಶ್ರಯಃ ।
ಭ್ರಾತಸ್ತ್ವಂ ನಿಂದಿತಂ ಕರ್ಮ ಕರ್ತುಂ ನಾರ್ಹಸಿ ಸಾಂಪ್ರತಮ್ ॥ ೩

ಜಟಾಯುರ್ನಾಮ ನಾಮ್ನಾಹಂ ಗೃಧ್ರರಾಜೋ ಮಹಾಬಲಃ ।
ರಾಜಾ ಸರ್ವಸ್ಯ ಲೋಕಸ್ಯ ಮಹೇಂದ್ರವರುಣೋಪಮಃ ॥ ೪

### ಸರ್ಗ ೫೦

ಜಟಾಯುವು ರಾವಣನಿಗೆ ಬುದ್ಧಿವಾದವನ್ನು ಹೇಳುವುದು. ರಾವಣನು ಕೇಳದಿರಲು ಜಟಾಯುವು ಯುದ್ಧಸನ್ನದ್ಧನಾಗುವುದು.

ನಿದ್ದೆಯ ಜೋಮಿನಲ್ಲಿದ್ದ ಜಟಾಯುವಿಗೆ ಸೀತೆಯ ಆಕ್ರಂದನಶಬ್ದವು ಕೇಳಿಸಿತು. ತಟಕ್ಕನೆ ಅವನು ಕಣ್ಣೆತ್ತಿ ನೋಡಲು, ರಾವಣನೂ ವೈದೇಹಿಯೂ ಗೋಚರಿಸಿದರು. ಪರ್ವತಶಿಖರದಂತಿದ್ದ ಆ ಪಕ್ಷಿಶ್ರೇಷ್ಠನ ಕೊಕ್ಕು ತೀಕ್ಷ್ಣವಾಗಿತ್ತು. ಆತನು ವೃಕ್ಷದಲ್ಲಿ ಕುಳಿತೇ ರಾವಣನನ್ನುದ್ದೇಶಿಸಿ ಹಿತವಚನವನ್ನು ಹೇಳಿದನು (೧-೨). "ರಾವಣ, ನೀನು ಸನಾತನಧರ್ಮದಲ್ಲಿ ನಿಷ್ಠೆಯಿಂದ ಇದ್ದವನು. ಸತ್ಯವನ್ನು ನಂಬಿದವನು.* ಹೀಗಿರಲು, ತಮ್ಮ, ಈಗ ನೀನು ಈ ದುಷ್ಕೃತ್ಯವನ್ನೆಸಗುವುದು ಸರಿಯಲ್ಲ! (೩). ನಾನು ಜಟಾಯುವೆಂಬ ಬಲಾಢ್ಯನಾದ ಗೃಧ್ರರಾಜ. ದಶರಥಪುತ್ರನಾದ ಶ್ರೀರಾಮನು ಸಕಲಜನರಿಗೂ

---

* '......ಸ್ಥಿತೋ ಧರ್ಮೇ ಪುರಾಣೇ ಸತ್ಯಸಂಶ್ರಯಃ' ಎಂಬುದನ್ನು ವ್ಯಾಖ್ಯಾನಕಾರರು ಜಟಾಯುವಿಗೆ ಅನ್ವಯಿಸಿ 'ನಾನು ಧರ್ಮನಿಷ್ಠ, ಸತ್ಯಸಂಧ' ಎಂದು ಜಟಾಯುವು ಹೇಳಿಕೊಳ್ಳುವಂತೆ ಅರ್ಥಮಾಡಿದ್ದಾರೆ.

ಲೋಕಾನಾಂ ಚ ಹಿತೇ ಯುಕ್ತೋ ರಾಮೋ ದಶರಥಾತ್ಮಜಃ ।
ತಸ್ಯೈಷಾ ಲೋಕನಾಥಸ್ಯ ಧರ್ಮಪತ್ನೀ ಯಶಸ್ವಿನೀ ॥ ೫

ಸೀತಾ ನಾಮ ವರಾರೋಹಾ ಯಾಂ ತ್ವಂ ಹರ್ತುಮಿಹೇಚ್ಛಸಿ ।
ಕಥಂ ರಾಜಾ ಸ್ಥಿತೋ ಧರ್ಮೇ ಪರದಾರಾನ್ ಪರಾಮೃಶೇತ್ ॥ ೬

ರಕ್ಷಣೀಯಾ ವಿಶೇಷೇಣ ರಾಜದಾರಾ ಮಹಾಬಲ ।
ನಿವರ್ತಯ ಮತಿಂ ನೀಚಾಂ ಪರದಾರಾಭಿಮರ್ಶನಾತ್ ॥ ೭

ನ ತತ್ ಸಮಾಚರೇದ್ಧೀರೋ ಯತ್ ಪರೋಽಸ್ಯ ವಿಗರ್ಹಯೇತ್ ।
ಯಥಾತ್ಮನಸ್ತಥಾನ್ಯೇಷಾಂ ದಾರಾ ರಕ್ಷ್ಯಾ ವಿಪಶ್ಚಿತಾ ॥ ೮

ಧರ್ಮಮರ್ಥಂ ಚ ಕಾಮಂ ಚ ಶಿಷ್ಟಾಃ ಶಾಸ್ತ್ರೇಷ್ವನಾಗತಮ್ ।
ವ್ಯವಸ್ಯಂತ್ಯನು ರಾಜಾನಂ ಪೌಲಸ್ತ್ಯಕುಲನಂದನ ॥ ೯

ರಾಜಾ ಧರ್ಮಶ್ಚ ಕಾಮಶ್ಚ ದ್ರವ್ಯಾಣಾಂ ಚೋತ್ತಮೋ ನಿಧಿಃ ।
ಧರ್ಮಃ ಶುಭಂ ವಾ ಪಾಪಂ ವಾ ರಾಜಮೂಲಂ ಪ್ರವರ್ತತೇ ॥ ೧೦

---

ಅಧಿಪತಿ. ದೇವೇಂದ್ರನಿಗೂ ವರುಣನಿಗೂ ಸಮಾನನಾದವನು. ಪ್ರಜೆಗಳ ಹಿತದಲ್ಲಿ ನಿರತನಾಗಿರತಕ್ಕವನು. ನೀನು ಅಪಹರಿಸಬೇಕೆಂದು ಉದ್ದೇಶಿಸಿರುವ ಈ ತರುಣಿಯು ಆ ಲೋಕನಾಥನ ಧರ್ಮಪತ್ನಿ (೪-೫). ಸೀತೆಯೆಂದು ಈಕೆಯ ಹೆಸರು. ಧರ್ಮನಿಷ್ಠನಾದ ರಾಜನು ಪರಸ್ತ್ರೀಯರನ್ನು ಮುಟ್ಟಬಹುದೆ? ಅದರಲ್ಲಿಯೂ ವಿಶೇಷವಾಗಿ ಇನ್ನೊಬ್ಬ ರಾಜನ ಪತ್ನಿಯನ್ನು ಬಲಾಢ್ಯನಾದ ನೀನು ರಕ್ಷಿಸಬೇಕು. ಪರಸ್ತ್ರೀಯರನ್ನು ಕಣಕುವ ಈ ಕೆಟ್ಟಬುದ್ಧಿಯನ್ನು ತೊರೆದುಬಿಡು! (೬-೭). ಇನ್ನೊಬ್ಬನು ನಿಂದಿಸಬಹುದಾದ ಕಾರ್ಯವನ್ನು ವಿವೇಕಿಯು ಮಾಡಬಾರದು. ಪ್ರಾಜ್ಞನಾದವನು ತನ್ನಂತೆಯೇ ಇನ್ನೊಬ್ಬರೂ ಎಂದು ತಿಳಿದು ಅವರ ಹೆಂಡತಿಯರ ಮಾನವನ್ನು ರಕ್ಷಿಸಬೇಕು (೮). ರಾವಣ, ಪುಲಸ್ತ್ಯನ ಶ್ರೇಷ್ಠಕುಲದಲ್ಲಿ ಜನಿಸಿದವನು ನೀನು. ಶಾಸ್ತ್ರಗಳಿಂದ ತಿಳಿಯದ ಧರ್ಮಾರ್ಥಗಳನ್ನಾಗಲಿ ಕಾಮವನ್ನಾಗಲಿ ಶಿಷ್ಟರಾದವರು ರಾಜನ ಆಚಾರವನ್ನು ಕಂಡು ನಿಶ್ಚಯಿಸಿಕೊಳ್ಳುತ್ತಾರೆ (೯). ರಾಜನೇ ಧರ್ಮಕಾಮಗಳಿಗೆ ಪ್ರವರ್ತಕ. ರಾಜನೇ ಅರ್ಥಕ್ಕೆ ನಿಧಿ. ಧರ್ಮವಾಗಲಿ, ಒಳ್ಳೆಯದಾಗಲಿ, ಕೆಟ್ಟದಾಗಲಿ–

ಪಾಪಸ್ವಭಾವಶ್ಚಪಲಃ ಕಥಂ ತ್ವಂ ರಕ್ಷಸಾಂ ವರ ।
ಐಶ್ವರ್ಯಮಭಿಸಂಪ್ರಾಪ್ತೋ ವಿಮಾನಮಿವ ದುಷ್ಕೃತೀ ॥ ೧೧

ಕಾಮಂ ಸ್ವಭಾವೋ ಯೋ ಯಸ್ಯ ನ ಶಕ್ಯಃ ಪರಿಮಾರ್ಜಿತುಮ್ ।
ನ ಹಿ ದುಷ್ಟಾತ್ಮನಾಮಾರ್ಯಮಾವಸತ್ಯಾಲಯೇ ಚಿರಮ್ ೧೨

ವಿಷಯೇ ವಾ ಪುರೇ ವಾ ತೇ ಯದಾ ರಾಮೋ ಮಹಾಬಲಃ ।
ನಾಪರಾಧ್ಯತಿ ಧರ್ಮಾತ್ಮಾ ಕಥಂ ತಸ್ಯಾಪರಾಧ್ಯಸಿ ॥ ೧೩

ಯದಿ ಶೂರ್ಪಣಖಾಹೇತೋರ್ಜನಸ್ಥಾನಗತಃ ಖರಃ ।
ಅತಿವೃತ್ತೋ ಹತಃ ಪೂರ್ವಂ ರಾಮೇಣಾಕ್ಲಿಷ್ಟಕರ್ಮಣಾ ॥ ೧೪

ಅತ್ರ ಬ್ರೂಹಿ ಯಥಾತತ್ತ್ವಂ ಕೋ ರಾಮಸ್ಯ ವ್ಯತಿಕ್ರಮಃ ।
ಯಸ್ಯ ತ್ವಂ ಲೋಕನಾಥಸ್ಯ ಭಾರ್ಯಾಂ ಹೃತ್ವಾ ಗಮಿಷ್ಯಸಿ ॥ ೧೫

ಕ್ಷಿಪ್ರಂ ವಿಸೃಜ ವೈದೇಹೀಂ ಮಾ ತ್ವಾ ಘೋರೇಣ ಚಕ್ಷುಷಾ ।
ದಹೇದ್ದಹನಭೂತೇನ ವೃತ್ರಮಿಂದ್ರಾಶನಿರ್ಯಥಾ ॥ ೧೬

---

ರಾಜನ ಪ್ರಚೋದನೆಯಿಂದ ನಡೆಯುತ್ತದೆ (೧೦). ಎಲೈ ರಾಕ್ಷಸೇಂದ್ರ, ಇಂಥ ಪಾಪಬುದ್ಧಿಯೂ ಚಾಪಲ್ಯವೂ ನಿನಗೆ ಹೇಗೆ ಅಂಟಿತು ? ನಿನಗೆ ರಾಕ್ಷಸಾಧಿಪತ್ಯವು ದೊರಕಿದ್ದು, ಪಾಪಿಗೆ ದೇವಲೋಕಗಾಮಿಯಾದ ವಿಮಾನವು ದೊರಕಿದಂತೆ ಅಚ್ಚರಿಯೇ ಸರಿ ! (೧೧). ಯಾವನಿಗೆ ಯಾವುದು ಸಹಜಗುಣವೋ ಅದನ್ನು ಪರಿವರ್ತಿಸಲು ಎಷ್ಟಾದರೂ ಸಾಧ್ಯವಿಲ್ಲ. ದುಷ್ಟರ ಹೃದಯದಲ್ಲಿ ಒಳ್ಳೆಯ ಬುದ್ಧಿವಾಸ ಬಹಳ ಹೊತ್ತು ನಿಲ್ಲದು. ಧರ್ಮಾತ್ಮನೂ ಬಲಾಢ್ಯನೂ ಆದ ಶ್ರೀರಾಮನು ನಿನ್ನ ರಾಷ್ಟ್ರದಲ್ಲಾಗಲಿ ನಿನ್ನ ನಗರದಲ್ಲಾಗಲಿ ಯಾವ ಅಪರಾಧವನ್ನೂ ಮಾಡಿಲ್ಲ. ಹೀಗಿರುವಾಗ ನೀನು ಅವನಿಗೆ ಅಪರಾಧವೆಸಗಲು ನಿಮಿತ್ತವಾದರೂ ಏನು ? (೧೨-೧೩). ಜನಸ್ಥಾನದಲ್ಲಿದ್ದ ಖರನು ಶೂರ್ಪಣಖಿಗೋಸ್ಕರ ಉದ್ದಂಡನಾಗಿ ಎಲ್ಲೆಮೀರಿ ಹೋದಾಗ, ಶ್ರೀರಾಮನು ಅವನನ್ನು ಸಂಹರಿಸಿದ್ದುಂಟು. ಈ ವಿಷಯದಲ್ಲಿ ಶ್ರೀರಾಮನ ತಪ್ಪೇನಿದೆಯೆಂಬುದನ್ನು ನೀನೇ ದಿಟವಾಗಿ ಹೇಳು. ಆ ಲೋಕನಾಥನ ಭಾರ್ಯೆಯನ್ನು ಅಪಹರಿಸಿಕೊಂಡು ಹೋಗುತ್ತಿರುವೆಯಲ್ಲ ! (೧೪-೧೫). ರಾವಣ, ವೈದೇಹಿಯನ್ನು ಕೂಡಲೇ ಬಿಟ್ಟುಬಿಡು ! ಶ್ರೀರಾಮನ

ಸರ್ಪಮಾಶೀವಿಷಂ ಬದ್ಧ್ವಾ ವಸ್ತ್ರಾಂತೇ ನಾವಬುಧ್ಯಸೇ।
ಗ್ರೀವಾಯಾಂ ಪ್ರತಿಮುಕ್ತಂ ಚ ಕಾಲಪಾಶಂ ನ ಪಶ್ಯಸಿ॥ ೧೭

ಸ ಭಾರಃ ಸೌಮ್ಯ ಭರ್ತವ್ಯೋ ಯೋ ನರಂ ನಾವಸಾದಯೇತ್।
ತದನ್ನಮಪಿ ಭೋಕ್ತವ್ಯಂ ಜೀರ್ಯತೇ ಯದನಾಮಯಮ್॥ ೧೮

ಯತ್ ಕೃತ್ವಾ ನ ಭವೇದ್ಧರ್ಮೋ ನ ಕೀರ್ತಿರ್ನ ಯಶೋ ಭುವಿ।
ಶರೀರಸ್ಯ ಭವೇತ್ ಖೇದಃ ಕಸ್ತತ್ ಕರ್ಮ ಸಮಾಚರೇತ್॥ ೧೯

ಷಷ್ಟಿರ್ವರ್ಷಸಹಸ್ರಾಣಿ ಮಮ ಜಾತಸ್ಯ ರಾವಣ।
ಪಿತೃಪೈತಾಮಹಂ ರಾಜ್ಯಂ ಯಥಾವದನುತಿಷ್ಠತಃ॥ ೨೦

ವೃದ್ಧೋಽಹಂ ತ್ವಂ ಯುವಾ ಧನ್ವೀ ಸಶರಃ ಕವಚೀ ರಥೀ।
ತಥಾಪ್ಯಾದಾಯ ವೈದೇಹೀಂ ಕುಶಲೀ ನ ಗಮಿಷ್ಯಸಿ॥ ೨೧

---

ಘೋರನೇತ್ರವು ಬೆಂಕಿಯಾಗಿ ನಿನ್ನನ್ನು ಸುಟ್ಟು ಬೂದಿಮಾಡೀತು! ಇಂದ್ರನ ವಜ್ರಾಯುಧವು ವೃತ್ರನನ್ನು ಕೊಂದಂತೆ ನಿನ್ನನ್ನು ಕೊಂದು ಎಸೆದೀತು! (೧೬). ವಿಷಸರ್ಪವನ್ನು ಸೆರಗಿಗೆ ಕಟ್ಟಿಕೊಂಡಿರುವೆಯೆಂಬುದು ನಿನಗೆ ಗೊತ್ತಿಲ್ಲ. ಮೃತ್ಯು ಪಾಶವು ನಿನ್ನ ಕೊರಳಿಗೆ ಬಿಗಿದಿದೆಯೆಂಬುದು ನಿನಗೆ ತಿಳಿದಿಲ್ಲ. ರಾವಣ, ಹೊರ ಬಹುದಾದ ಭಾರವನ್ನು ಮನುಷ್ಯನು ಹೊರಬೇಕು. ತಾನು ಕುಸಿದುಹೋಗು ವಂಥ ಭಾರವನ್ನು ಹೊರಬಾರದು. ಯಾವುದು ರೋಗವನ್ನು ತರದೆ ಸುಲಭ ವಾಗಿ ಜೀರ್ಣವಾಗುವುದೋ ಅಂಥ ಅನ್ನವನ್ನು ಊಟಮಾಡಬೇಕು (೧೭-೧೮). ಯಾವುದನ್ನು ಮಾಡಿದರೆ ಪುಣ್ಯವಿಲ್ಲವೋ, ಕೀರ್ತಿಯಿಲ್ಲವೋ, ಒಳ್ಳೆಯ ಹೆಸ ರಿಲ್ಲವೋ, ದೇಹಕ್ಕೆ ಆಯಾಸಮಾತ್ರ ಆಗುವುದೋ, ಅಂಥ ಕಾರ್ಯವನ್ನು ಯಾವನು ಮಾಡಿಯಾನು? (೧೯). ರಾವಣ, ನಾನು ಜನಿಸಿ ಅರುವತ್ತು ಸಾವಿರ ವರ್ಷಗಳಾದವು. ಪಿತೃಪಿತಾಮಹಪರಂಪರೆಯಿಂದ ಬಂದ ಪಕ್ಷಿರಾಜ್ಯ ವನ್ನು ಕ್ರಮವರಿತು ಪಾಲಿಸಿದ್ದೇನೆ. ನಾನು ವೃದ್ಧ; ನೀನು ಯುವಕ. ಧನು ರ್ಬಾಣಗಳನ್ನು ಧರಿಸಿದ್ದೀಯೆ. ಕವಚವನ್ನು ತೊಟ್ಟಿದ್ದೀಯೆ. ರಥವಿದೆ. ಆದರೂ ನೀನು ವೈದೇಹಿಯೊಡನೆ ಕ್ಷೇಮದಿಂದ ಮುಂದಕ್ಕೆ ಅಡಿಯಿಡಲಾರೆ! (೨೦-೨೧).

ನ ಶಕ್ತಸ್ತ್ವಂ ಬಲಾದ್ಧರ್ತುಂ ವೈದೇಹೀಂ ಮಮ ಪಶ್ಯತಃ ।
ಹೇತುಭಿರ್ನ್ಯಾಯಸಂಯುಕ್ತೈರ್ಧ್ರುವಾಂ ವೇದಶ್ರುತೀಮಿವ ॥ ೨೨

ಯುಧ್ಯಸ್ವ ಯದಿ ಶೂರೋಽಸಿ ಮುಹೂರ್ತಂ ತಿಷ್ಠ ರಾವಣ ।
ಶಯಿಷ್ಯಸೇ ಹತೋ ಭೂಮೌ ಯಥಾ ಪೂರ್ವಂ ಖರಸ್ತಥಾ ॥ ೨೩

ಅಸಕೃತ್ ಸಂಯುಗೇ ಯೇನ ನಿಹತಾ ದೈತ್ಯದಾನವಾಃ ।
ನಚಿರಾಚ್ಚೀರವಾಸಾಸ್ತ್ವಾಂ ರಾಮೋ ಯುಧಿ ವಧಿಷ್ಯತಿ ॥ ೨೪

ಕಿಂ ನು ಶಕ್ಯಂ ಮಯಾ ಕರ್ತುಂ ಗತೌ ದೂರಂ ನೃಪಾತ್ಮಜೌ ।
ಕ್ಷಿಪ್ರಂ ತ್ವಂ ನಶ್ಯಸೇ ನೀಚ ತಯೋರ್ಭೀತೋ ನ ಸಂಶಯಃ ॥ ೨೫

ನ ಹಿ ಮೇ ಜೀವಮಾನಸ್ಯ ನಯಿಷ್ಯಸಿ ಶುಭಾಮಿಮಾಮ್ ।
ಸೀತಾಂ ಕಮಲಪತ್ರಾಕ್ಷೀಂ ರಾಮಸ್ಯ ಮಹಿಷೀಂ ಪ್ರಿಯಾಮ್ ॥ ೨೬

ಅವಶ್ಯಂ ತು ಮಯಾ ಕಾರ್ಯಂ ಪ್ರಿಯಂ ತಸ್ಯ ಮಹಾತ್ಮನಃ ।
ಜೀವಿತೇನಾಪಿ ರಾಮಸ್ಯ ತಥಾ ದಶರಥಸ್ಯ ಚ ॥ ೨೭

---

ಶಾಶ್ವತವಾದ ವೇದವಾಣಿಯನ್ನು ನೈಯಾಯಿಕರ ಹೇತುವಾದಗಳಿಂದ ಅರ್ಥಾಂತರಗೊಳಿಸಲು ಸಾಧ್ಯವಾಗದು. ಹಾಗೆ ನನ್ನ ಕಣ್ಣೆದುರಿನಲ್ಲಿ ವೈದೇಹಿಯನ್ನು ಬಲಾತ್ಕಾರದಿಂದ ಒಯ್ಯಲು ನಿನಗೆ ಸಾಧ್ಯವಿಲ್ಲ (೨೨). ನೀನು ಶೂರನಾದರೆ (ಶ್ರೀರಾಮನೊಡನೆ) ಯುದ್ಧ ಮಾಡು! ರಾವಣ, (ಅವನು ಬರುವವರೆಗೆ) ಕ್ಷಣಕಾಲ ನಿಲ್ಲು! ಹಿಂದೆ ಖರನು ಸತ್ತಂತೆ ನೀನೂ ಸತ್ತು ನೆಲದಮೇಲೆ ಉರುಳುತ್ತೀಯೆ (೨೩). ಶ್ರೀರಾಮನು ದೈತ್ಯದಾನವರನ್ನು ಎಷ್ಟೋ ಸಲ ಯುದ್ಧದಲ್ಲಿ ಕೊಂದಿದ್ದಾನೆ. ನಾರುಬಟ್ಟೆಯುಟ್ಟ ಆತನೇ ನಿನ್ನನ್ನು ಶೀಘ್ರದಲ್ಲಿ ಕೊಂದು ಹಾಕುವನು (೨೪). ಆ ರಾಜಕುಮಾರರು ಬಹುದೂರ ಹೋಗಿಬಿಟ್ಟಿದ್ದಾರೆ. ನಾನು ಏನುಮಾಡಲಿ? ಎಲಾ ನೀಚ, ಬಹು ಬೇಗನೆ ನೀನು ನಾಶವಾಗುತ್ತೀಯೆ. ಆ ರಾಜಪುತ್ರರಿಗೆ ನೀನು ನಿಶ್ಚಯವಾಗಿಯೂ ಹೆದರಿದ್ದೀಯೆ (೨೫). ನಾನು ಬದುಕಿರುವವರೆಗೆ, ಶುಭಾಂಗಿಯಾದ ಸೀತಾದೇವಿಯನ್ನು ನೀನು ಒಯ್ಯಲಾರೆ! ಈ ಪದ್ಮನೇತ್ರೆಯು ಶ್ರೀರಾಮನ ಪ್ರೀತಿಪಾತ್ರಳಾದ ರಾಣಿ. ಮಹಾತ್ಮನಾದ

ತಿಷ್ಠ ತಿಷ್ಠ ದಶಗ್ರೀವ ಮುಹೂರ್ತಂ ಪಶ್ಯ ರಾವಣ ।
ಯುದ್ಧಾತಿಥ್ಯಂ ಪ್ರದಾಸ್ಯಾಮಿ ಯಥಾಪ್ರಾಣಂ ನಿಶಾಚರ ॥ ೨೮
ವೃಂತಾದಿವ ಫಲಂ ತ್ವಾಂ ತು ಪಾತಯೇಯಂ ರಥೋತ್ತಮಾತ್ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚಾಶಃ ಸರ್ಗಃ

---

## ಏಕಪಂಚಾಶಃ ಸರ್ಗಃ

### ಜಟಾಯುರಾವಣಯುದ್ಧಮ್

ಇತ್ಯುಕ್ತಸ್ಯ ಯಥಾನ್ಯಾಯಂ ರಾವಣಸ್ಯ ಜಟಾಯುಷಾ ।
ಕ್ರುದ್ಧಸ್ಯಾಗ್ನಿನಿಭಾಃ ಸರ್ವಾ ರೇಜುರ್ವಿಂಶತಿದೃಷ್ಟಯಃ ॥ ೧

ಸಂರಕ್ತನಯನಃ ಕೋಪಾತ್ ತಪ್ತಕಾಂಚನಕುಂಡಲಃ ।
ರಾಕ್ಷಸೇಂದ್ರೋಽಭಿದುದ್ರಾವ ಪತಗೇಂದ್ರಮಮರ್ಷಣಃ ॥ ೨

---

ಶ್ರೀರಾಮನಿಗೂ ದಶರಥನಿಗೂ ಪ್ರಿಯವಾದ ಕಾರ್ಯವನ್ನು ನಾನು ಮಾಡಲೇಬೇಕು. ಪ್ರಾಣವನ್ನಾದರೂ ಒಪ್ಪಿಸಿ ಅವರ ಕಾರ್ಯವನ್ನು ನಡೆಸಬೇಕು (೨೬-೨೭). ಎಲೇ ರಾವಣ, ನಿಲ್ಲು ನಿಲ್ಲು ! ಸ್ವಲ್ಪ ಇತ್ತ ನೋಡು. ನನಗೆ ಶಕ್ತಿಯಿದ್ದಷ್ಟು ಯುದ್ಧದ ಆತಿಥ್ಯವನ್ನು ಅರ್ಪಿಸುತ್ತೇನೆ ! ತೊಟ್ಟಿನಿಂದ ಹಣ್ಣನ್ನು ಉದುರಿಸುವಂತೆ, ರಥದಿಂದ ನಿನ್ನನ್ನು ಉರುಳಿಸುತ್ತೇನೆ !" ಎಂದನು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತನೆಯ ಸರ್ಗ

---

## ಸರ್ಗ ೫೧

ಜಟಾಯುರಾವಣರ ಯುದ್ಧ. ಜಟಾಯುವಿನ ರೆಕ್ಕೆ ಮತ್ತು ಕಾಲುಗಳನ್ನು ರಾವಣನು ಕತ್ತರಿಸುವುದು. ಸೀತೆಯ ವಿಲಾಪ.

ಈ ಪ್ರಕಾರ ನ್ಯಾಯವಾಗಿ ನುಡಿದ ಜಟಾಯುವಿನ ಮಾತನ್ನು ಕೇಳಿ ರಾವಣನು ಕ್ರುದ್ಧನಾದನು. ಅವನ ವಿಂಶತಿನೇತ್ರಗಳೂ ಬೆಂಕಿಯಂತೆ ಕಿಡಿಗೆದರಿದವು. ಸುವರ್ಣಕುಂಡಲಮಂಡಿತನಾದ ರಾಕ್ಷಸೇಂದ್ರನ ಸಹನೆ ತಪ್ಪಿತು.

ಸ ಸಂಪ್ರಹಾರಸ್ತುಮುಲಸ್ತಯೋಸ್ತಸ್ಮಿನ್ ಮಹಾವನೇ ।
ಬಭೂವ ವಾತೋದ್ಧತಯೋರ್ಮೇಘಯೋರ್ಗಗನೇ ಯಥಾ ॥ ೩

ತದ್ಬಭೂವಾದ್ಭುತಂ ಯುದ್ಧಂ ಗೃಧ್ರ ರಾಕ್ಷಸಯೋಸ್ತದಾ ।
ಸಪಕ್ಷಯೋರ್ಮಾಲ್ಯವತೋರ್ಮಹಾಪರ್ವತಯೋರಿವ ॥ ೪

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಅಭ್ಯವರ್ಷನ್ಮಹಾಘೋರೈರ್ಗೃಧ್ರರಾಜಂ ಮಹಾಬಲಃ ॥ ೫

ಸ ತಾನಿ ಶರಜಾಲಾನಿ ಗೃಧ್ರಃ ಪತ್ರರಥೇಶ್ವರಃ ।
ಜಟಾಯುಃ ಪ್ರತಿಜಗ್ರಾಹ ರಾವಣಾಸ್ತ್ರಾಣಿ ಸಂಯುಗೇ ॥ ೬

ತಸ್ಯ ತೀಕ್ಷ್ಣನಖಾಭ್ಯಾಂ ತು ಚರಣಾಭ್ಯಾಂ ಮಹಾಬಲಃ ।
ಚಕಾರ ಬಹುಧಾ ಗಾತ್ರೇ ವ್ರಣಾನ್ ಪತಗಸತ್ತಮಃ ॥ ೭

ಅಥ ಕ್ರೋಧಾದ್ದಶಗ್ರೀವೋ ಜಗ್ರಾಹ ದಶ ಮಾರ್ಗಣಾನ್ ।
ಮೃತ್ಯುದಂಡನಿಭಾನ್ ಘೋರಾನ್ ಶತ್ರೋರ್ನಿಧನಕಾಂಕ್ಷಯಾ ॥ ೮

ಸ ತೈರ್ಬಾಣೈರ್ಮಹಾವೀರ್ಯಃ ಪೂರ್ಣಮುಕ್ತೈರಜಿಹ್ಮಗೈಃ ।
ಬಿಭೇದ ನಿಶಿತೈಸ್ತೀಕ್ಷ್ಣೈರ್ಗೃಧ್ರಂ ಘೋರೈಃ ಶಿಲೀಮುಖೈಃ ॥ ೯

---

ಅವನು ಕೆಂಗಣ್ಣಿನಿಂದ ನೋಡುತ್ತ ಆ ಪಕ್ಷೀಂದ್ರನಮೇಲೆ ಆಕ್ರಮಣಮಾಡಿದನು (೧-೨). ಗಗನತಳದಲ್ಲಿ ಬಿರುಗಾಳಿಯಿಂದ ಮೇಲೇರಿಬಂದ ಎರಡು ಮಹಾ ಮೇಘಗಳಂತಿದ್ದ ರಾವಣಜಟಾಯುಗಳಿಗೆ ಆ ವನಮಧ್ಯದಲ್ಲಿ ಭೀಕರವಾದ ಕಾಳಗವು ಆರಂಭವಾಯಿತು (೩). ಅವರೀರ್ವರ ಕಾಳಗವು ರೆಕ್ಕೆಗಳಿಂದೊಡಗೂಡಿ ಹೂಗಳಿಂದ ರಂಜಿಸುವ ಎರಡು ಮಹಾಪರ್ವತಗಳಿಗೆ ನಡೆಯುವ ಕಾಳಗವೋ ಎಂಬಂತೆ ಅಚ್ಚರಿಯನ್ನುಂಟುಮಾಡಿತು (೪). ಬಲಾಢ್ಯನಾದ ರಾವಣನು ನಾಲೀಕ, ನಾರಾಚ, ವಿಕರ್ಣಿಗಳೆಂಬ ತೀಕ್ಷ್ಣವಾದ ಘೋರಾಸ್ತ್ರಗಳನ್ನು ಜಟಾಯುವಿನಮೇಲೆ ಸುರಿದನು. ಆ ಗೃಧ್ರರಾಜನು ರಣರಂಗದಲ್ಲಿ ರಾವಣನ ಶರಜಾಲಗಳನ್ನು ಎದುರಿಸಿದನು. ಆ ಪಕ್ಷಿಶ್ರೇಷ್ಠನು ತನ್ನ ಕಾಲುಗಳಲ್ಲಿದ್ದ ಹರಿತ ವಾದ ಉಗುರುಗಳಿಂದ ರಾವಣನ ದೇಹವನ್ನು ಪರಚಿ ಬಹಳ ಗಾಯಗಳನ್ನು ಮಾಡಿದನು (೫-೭). ಆಗ ದಶಕಂಠನು ಕ್ರೋಧದಿಂದ ಮೃತ್ಯುದಂಡದಂತಿದ್ದ ಹತ್ತು ಘೋರಾಸ್ತ್ರಗಳನ್ನು ಹಿರಿದನು. ಜಟಾಯುವು ಶತ್ರುವೆಂದೂ ಅವನನ್ನು

ಸ ರಾಕ್ಷಸರಥೇ ಪಶ್ಯನ್ ಜಾನಕೀಂ ಬಾಷ್ಪಲೋಚನಾವರ್ ।
ಅಚಿಂತಯಿತ್ವಾ ತಾನ್ ಬಾಣಾನ್ ರಾಕ್ಷಸಂ ಸಮಭಿದ್ರವತ್ ॥ ೧೦

ತತೋಽಸ್ಯ ಸಶರಂ ಚಾಪಂ ಮುಕ್ತಾಮಣಿವಿಭೂಷಿತವರ್ ।
ಚರಣಾಭ್ಯಾಂ ಮಹಾತೇಜಾ ಬಭಂಜ ಪತಗೇಶ್ವರಃ ॥ ೧೧

ತತೋಽನ್ಯದ್ಧನುರಾದಾಯ ರಾವಣಃ ಕ್ರೋಧಮೂರ್ಚ್ಛಿತಃ ।
ವವರ್ಷ ಶರವರ್ಷಾಣಿ ಶತಶೋಽಥ ಸಹಸ್ರಶಃ ॥ ೧೨

ಶರೈರಾವಾರಿತಸ್ತಸ್ಯ ಸಂಯುಗೇ ಪತಗೇಶ್ವರಃ ।
ಕುಲಾಯಮುಪಸಂಪ್ರಾಪ್ತಃ ಪಕ್ಷೀವ ಪ್ರಬಭೌ ತದಾ ॥ ೧೩

ಸ ತಾನಿ ಶರವರ್ಷಾಣಿ ಪಕ್ಷಾಭ್ಯಾಂ ಚ ವಿಧೂಯ ಚ ।
ಚರಣಾಭ್ಯಾಂ ಮಹಾತೇಜಾ ಬಭಂಜಾಸ್ಯ ಮಹದ್ಧನುಃ ॥ ೧೪

ತಚ್ಚಾಗ್ನಿಸದೃಶಂ ದೀಪ್ತಂ ರಾವಣಸ್ಯ ಶರಾವರವರ್ ।
ಪಕ್ಷಾಭ್ಯಾಂ ಸ ಮಹಾವೀರ್ಯೋ ವ್ಯಾಧುನೋತ್ ಪತಗೇಶ್ವರಃ ॥

---

ಕೊಲ್ಲಬೇಕೆಂದೂ ನಿರ್ಧರಿಸಿ, ಆ ಕೂರಂಬುಗಳನ್ನು ಆಕರ್ಣಾಂತವಾಗಿ ಸೆಳೆದು ಜಟಾಯುವಿನಮೇಲೆ ಬಿಟ್ಟು ಅವನ ದೇಹವನ್ನು ಕೊರೆದನು (೮-೯). ಜಟಾಯುವು ರಾವಣನ ರಥದಲ್ಲಿ ಕಣ್ಣೀರು ಸುರಿಸುತ್ತಿದ್ದ ಜಾನಕಿಯನ್ನು ನೋಡಿ, ಆ ಕೂರಂಬಗಳ ಯಾತನೆಯನ್ನು ಸಹಿಸಿಕೊಂಡು ಅವುಗಳನ್ನು ಲೆಕ್ಕಿಸದೆ, ಮತ್ತೆ ರಾವಣನನ್ನು ಆಕ್ರಮಿಸಿದನು. ಆ ತೇಜಸ್ವಿಯು ಮುತ್ತಿನ ಮಣಿಗಳಿಂದ ಅಲಂಕೃತ ವಾಗಿದ್ದ ರಾವಣನ ಧನುಸ್ಸನ್ನೂ ಹೂಡಿದ್ದ ಬಾಣವನ್ನೂ ಕಾಲುಗಳಿಂದ ಒದೆದು ಮುರಿದೆಸೆದನು (೧೦-೧೧). ರಾವಣನು ರೋಷಾವಿಷ್ಟನಾಗಿ ಮತ್ತೊಂದು ಧನುಸ್ಸನ್ನು ಹಿಡಿದು ನೂರುಗಟ್ಟಲೆ–ಸಾವಿರಗಟ್ಟಲೆ ಶರಗಳನ್ನು ಹೂಡಿ ಜಟಾಯು ವಿನಮೇಲೆ ಬಾಣಗಳ ಮಳೆಗರೆದನು. ಸುತ್ತಲೂ ರಾವಣನ ಬಾಣಗಳು ಮುಚ್ಚಿ ಹೋಗಿರಲು, ಮಧ್ಯದಲ್ಲಿದ್ದ ಜಟಾಯುವು ಗೂಡಿನಲ್ಲಿರುವ ಒಂದು ಹಕ್ಕಿಯಂತೆ ಕಾಣಿಸಿದನು ! (೧೨-೧೩). ಆ ಮಹಾತೇಜಸ್ವಿಯು ತನ್ನ ಸುತ್ತಲೂ ಹರಡಿದ ಬಾಣಜಾಲವನ್ನು ರೆಕ್ಕೆಗಳಿಂದ ಕೊಡವಿ ಬಯಲೆಬ್ಬಿಸಿ, ರಾವಣನ ಮಹಾ ಧನುಸ್ಸನ್ನು ತನ್ನ ಚರಣಗಳಿಂದ ಮತ್ತೆ ಮುರಿದನು. ಮಹಾಶೂರನಾದ ಆ ಪಕ್ಷಿರಾಜನು ಬೆಂಕಿಯಂತೆ ಕಳಕಳಿಸುತ್ತಿದ್ದ ರಾವಣನ ಕವಚವನ್ನು

ಕಾಂಚನೋರಶ್ಛದಾನ್ ದಿವ್ಯಾನ್ ಪಿಶಾಚವದನಾನ್ ಖರಾನ್ ।
ತಾಂಶ್ಚಾಸ್ಯ ಜವಸಂಪನ್ನಾನ್ ಜಘಾನ ಸಮರೇ ಬಲೀ ॥ ೧೬

ವರಂ ತ್ರಿವೇಣುಸಂಪನ್ನಂ ಕಾಮಗಂ ಪಾವಕಾರ್ಚಿಷಮ್ ।
ಮಣಿಹೇಮವಿಚಿತ್ರಾಂಗಂ ಬಭಂಜ ಚ ಮಹಾರಥಮ್ ॥ ೧೭

ಪೂರ್ಣಚಂದ್ರಪ್ರತೀಕಾಶಂ ಛತ್ರಂ ಚ ವ್ಯಜನೈಃ ಸಹ ।
ಪಾತಯಾಮಾಸ ವೇಗೇನ ಗ್ರಾಹಿಭೀ ರಾಕ್ಷಸೈಃ ಸಹ ॥ ೧೮

ಸಾರಥೇಶ್ಚಾಸ್ಯ ವೇಗೇನ ತುಂಡೇನೈವ ಮಹಚ್ಛಿರಃ ।
ಪುನರ್ವ್ಯಪಾಹರಚ್ಛ್ರೀಮಾನ್ ಪಕ್ಷಿರಾಜೋ ಮಹಾಬಲಃ ॥ ೧೯

ಸ ಭಗ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಅಂಕೇನಾದಾಯ ವೈದೇಹೀಂ ಪಪಾತ ಭುವಿ ರಾವಣಃ ॥ ೨೦

ದೃಷ್ಟ್ವಾ ನಿಪತಿತಂ ಭೂಮೌ ರಾವಣಂ ಭಗ್ನವಾಹನಮ್ ।
ಸಾಧು ಸಾಧ್ವಿತಿ ಭೂತಾನಿ ಗೃಧ್ರರಾಜಮಪೂಜಯನ್ ॥ ೨೧

---

ರೆಕ್ಕೆಗಳಿಂದ ಅಪ್ಪಳಿಸಿ ಕಳಚಿ ಹಾರಿಸಿದನು (೧೪-೧೫). (ರಾವಣನ ರಥಕ್ಕೆ ಹೂಡಿದ್ದ) ದಿವ್ಯಖರಗಳು ಚಿನ್ನದ ಎದೆ ಕಟ್ಟುಗಳಿಂದ ಅಲಂಕೃತವಾಗಿದ್ದವು. ಪಿಶಾಚಮುಖಗಳೂ ವೇಗಶಾಲಿಗಳೂ ಆಗಿದ್ದ ಆ ಖರಗಳನ್ನು ಬಲಾಢ್ಯನಾದ ಜಟಾಯುವು ಕೊಂದುಹಾಕಿದನು. ಮೂಕಿಯಿಂದ ಅಲಂಕೃತವಾಗಿ ಕಾಮ ಗಾಮಿಯೂ ಅಗ್ನಿಸಂಕಾಶವೂ ರತ್ನ ಸುವರ್ಣಗಳಿಂದ ಭೂಷಿತವೂ ಆದ ರಾವಣನ ಮಹಾರಥವನ್ನು ಜಟಾಯುವು ಭಗ್ನಗೊಳಿಸಿದನು (೧೬-೧೭). ಪೂರ್ಣಚಂದ್ರ ನಂತೆ ಹೊಳೆಯುತ್ತಿದ್ದ ಶ್ವೇತಚ್ಛತ್ರ ಚಾಮರಗಳನ್ನು ತನ್ನ ರೆಕ್ಕೆಗಳ ವೇಗದಿಂದ ಹೊಡೆದುರುಳಿಸಿದನು. ಅವುಗಳನ್ನು ಹಿಡಿದಿದ್ದ ರಾಕ್ಷಸರೂ ಛತ್ರಚಾಮರಗಳೊಡನೆ ಉರುಳಿ ಬಿದ್ದರು (೧೮). ಮಹಾಬಲಶಾಲಿಯಾದ ಆ ಪಕ್ಷಿರಾಜನು ರಾವಣನ ಸಾರಥಿಯ ಶಿರಸ್ಸನ್ನು ತನ್ನ ಕೊಕ್ಕಿನಿಂದ ಕುಕ್ಕಿ ಕತ್ತರಿಸಿದನು. ಈ ಪ್ರಕಾರ ದಲ್ಲಿ ರಾವಣನ ಧನುಸ್ಸು ಮುರಿಯಿತು, ರಥವು ಭಗ್ನವಾಯಿತು, ಖರಗಳು ಸತ್ತವು, ಸಾರಥಿಯು ಹತನಾದನು. ಕೂಡಲೆ ರಾವಣನು ಸೀತೆಯನ್ನು ಸೊಂಟದಲ್ಲಿ ಅವುಚಿಹಿಡಿದು ಧರೆಗೆ ಧುಮುಕಿದನು (೧೯-೨೦). ವಾಹನವು

**ಪರಿಶ್ರಾಂತಂ ತು ತಂ ದೃಷ್ಟ್ವಾ ಜರಯಾ ಪಕ್ಷಿಯೂಥಪಮ್ ।**
**ಉತ್ಪಪಾತ ಪುನರ್ಹೃಷ್ಟೋ ಮೈಥಿಲೀಂ ಗೃಹ್ಯ ರಾವಣಃ ॥** ೨೨

**ತಂ ಪ್ರಹೃಷ್ಟಂ ನಿಧಾಯಾಂಕೇ ಗಚ್ಛಂತಂ ಜನಕಾತ್ಮಜಾಮ್ ।**
**ಗೃಧ್ರರಾಜಃ ಸಮುತ್ಪತ್ಯ ಸಮಭಿದ್ರುತ್ಯ ರಾವಣಮ್ ॥** ೨೩

**ಸಮಾವಾರ್ಯ ಮಹಾತೇಜಾ ಜಟಾಯುರಿದಮಬ್ರವೀತ್ ।**
**ವಜ್ರಸಂಸ್ಪರ್ಶಬಾಣಸ್ಯ ಭಾರ್ಯಾಂ ರಾಮಸ್ಯ ರಾವಣ ॥** ೨೪

**ಅಲ್ಪಬುದ್ಧೇ ಹರಸ್ಯೇನಾಂ ವಧಾಯ ಖಲು ರಕ್ಷಸಾಮ್ ।**
**ಸಮಿತ್ರಬಂಧುಃ ಸಾಮಾತ್ಯಃ ಸಬಲಃ ಸಪರಿಚ್ಛದಃ ॥** ೨೫

**ವಿಷಪಾನಂ ಪಿಬಸ್ಯೇತತ್ ಪಿಪಾಸಿತ ಇವೋದಕಮ್ ।**
**ಅನುಬಂಧಮಜಾನಂತಃ ಕರ್ಮಣಾಮವಿಚಕ್ಷಣಾಃ ॥** ೨೬

---

ಭಗ್ನವಾದ್ದರಿಂದ ರಾವಣನು ನೆಲಕ್ಕೆ ಇಳಿಯುವಂತಾದುದನ್ನು ಕಂಡು, ವನದೇವತೆಗಳೇ ಮೊದಲಾದವರು 'ಭಲಾ ! ಭಲಾ !' ಎಂದು ಜಟಾಯುವನ್ನು (ಮನಸ್ಸಿನಲ್ಲಿಯೇ) ಹೊಗಳಿದರು (೨೧). (ಅಷ್ಟು ಪರಾಕ್ರಮವನ್ನು ಮೆರೆಸಿದ) ಪಕ್ಷಿರಾಜನು ಮುಪ್ಪಿನಿಂದ ಬಳಲಿಹೋಗಿದ್ದನು. ಅವನು ಆಯಾಸಪಡುತ್ತಿದ್ದುದನ್ನು ಕಂಡು ರಾವಣನು ಹರ್ಷದಿಂದ ಮೈಥಿಲಿಯನ್ನು ಎತ್ತಿಕೊಂಡು ಪುನಃ ಆಕಾಶಕ್ಕೆ ನೆಗೆದನು. ಜಾನಕಿಯನ್ನು ಕಂಕುಳಲ್ಲಿ ಅವಚಿಕೊಂಡು ಹರ್ಷದಿಂದ ಧಾವಿಸುತ್ತಿದ್ದ ರಾವಣನನ್ನು ಕಂಡು, ಕೂಡಲೇ ಗೃಧ್ರರಾಜನು ಆಕಾಶಕ್ಕೆ ಹಾರಿ ಅಡ್ಡಗಟ್ಟಿದನು ! (೨೨–೨೩). ಮಹಾತೇಜಸ್ವಿಯಾದ ಜಟಾಯುವು ರಾವಣನನ್ನು ತಡೆದು ನಿಲ್ಲಿಸಿ, "ಎಲಾ ರಾವಣ, ಶ್ರೀರಾಮನ ಭಾರ್ಯೆಯನ್ನು ಅಪಹರಿಸುವೆಯಾ ? ಬುದ್ಧಿಹೀನ ! ಅವನ ಬಾಣಗಳು ಸಿಡಿಲಿನಂತೆ ಬಂದು ಹೊಡೆದಾವು ! (೨೪). ರಾಕ್ಷಸರೆಲ್ಲರೂ ಸತ್ತುಹೋಗಲೆಂದು ಪ್ರಯತ್ನಮಾಡುತ್ತಿದ್ದೀಯೆ ! ನಿನ್ನ ಮಿತ್ರರು, ಬಂಧುಗಳು, ಅಮಾತ್ಯರು, ಸೇನೆ, ಪರಿವಾರ—ಇವರೆಲ್ಲರನ್ನೂ ಜೊತೆಗೆ ಸೇರಿಸಿಕೊಂಡು ವಿಷವನ್ನು ಕುಡಿಯುತ್ತಿದ್ದೀಯೆ (ಅವರಿಗೂ ಕುಡಿಸುತ್ತಿದ್ದೀಯೆ) ! ತೃಷೆಯಿಂದ ಬಳಲಿದವನು ನೀರನ್ನು ಕುಡಿಯುವಂತೆ ಧಾರಾಳವಾಗಿ ಕುಡಿಯುತ್ತಿದ್ದೀಯೆ ! (೨೫). ಅವಿವೇಕಿಗಳು ತಮ್ಮ ದುಷ್ಕೃತ್ಯದ ಪರಿಣಾಮ

ಶೀಘ್ರಮೇವ ವಿನಶ್ಯಂತಿ ಯಥಾ ತ್ವಂ ವಿನಶಿಷ್ಯಸಿ ।
ಬದ್ಧಸ್ತ್ವಂ ಕಾಲಪಾಶೇನ ಕ್ವ ಗತಸ್ತಸ್ಯ ಮೋಕ್ಷ್ಯಸೇ ॥ ೨೭

ವಧಾಯ ಬಡಿಶಂ ಗೃಹ್ಯ ಸಾಮಿಷಂ ಜಲಜೋ ಯಥಾ ।
ನ ಹಿ ಜಾತು ದುರಾಧರ್ಷೌ ಕಾಕುತ್ಸ್ಥೌ ತವ ರಾವಣ ॥ ೨೮

ಧರ್ಷಣಂ ಚಾಶ್ರಮಸ್ಯಾಸ್ಯ ಕ್ಷಮಿಷ್ಯೇತೇ ತು ರಾಘವೌ ।
ಯಥಾ ತ್ವಯಾ ಕೃತಂ ಕರ್ಮ ಭೀರುಣಾ ಲೋಕಗರ್ಹಿತಮ್ ॥ ೨೯

ತಸ್ಕರಾಚರಿತೋ ಮಾರ್ಗೋ ನೈಷ ವೀರನಿಷೇವಿತಃ ।
ಯುದ್ಧ್ಯಸ್ವ ಯದಿ ಶೂರೋಽಸಿ ಮುಹೂರ್ತಂ ತಿಷ್ಠ ರಾವಣ ॥ ೩೦

ಶಯಿಷ್ಯಸೇ ಹತೋ ಭೂಮೌ ಯಥಾ ಭ್ರಾತಾ ಖರಸ್ತಥಾ ।
ಪರೇತಕಾಲೇ ಪುರುಷೋ ಯತ್ ಕರ್ಮ ಪ್ರತಿಪದ್ಯತೇ ॥ ೩೧

ವಿನಾಶಾಯಾತ್ಮನೋಽಧರ್ಮ್ಯಂ ಪ್ರತಿಪನ್ನೋಽಸಿ ಕರ್ಮ ತತ್ ।
ಪಾಪಾನುಬಂಧೋ ವೈ ಯಸ್ಯ ಕರ್ಮಣಃ ಕರ್ಮ ಕೋ ನು ತತ್ ॥

---

ವನ್ನರಿಯದೆ ಹಾಳಾಗಿ ಹೋಗುತ್ತಾರೆ. ನೀನು ಹೇಗೆ ನಾಶವಾಗುವೆಯೋ ಹಾಗೆ! ಯಮಪಾಶವು ನಿನ್ನನ್ನು ಬಿಗಿದುಕಟ್ಟಿದೆ. ಎಲ್ಲಿ ಹೋದರೆ ತಪ್ಪಿಸಿ ಕೊಂಡೀಯೆ ? (೨೬–೨೭). ಮಾಂಸದ ಆಸೆಗೆ ಮೀನು ಗಾಳದ ಕೊಕ್ಕೆಯನ್ನು ನುಂಗಿದಂತೆ, ಈ ಕೃತ್ಯವು ನಿನ್ನ ವಧೆಗೆ ಕಾರಣವಾಗುವುದು. ಎಲಾ ರಾವಣ, ವೀರಾಗ್ರಣಿಗಳಾದ ಶ್ರೀರಾಮಲಕ್ಷ್ಮಣರು, ಅವರ ಆಶ್ರಮಕ್ಕೆ ನುಗ್ಗಿ ನೀನು ಮಾಡಿದ ಈ ದುರಾಕ್ರಮಣವನ್ನು ಎಂದೆಂದಿಗೂ ಕ್ಷಮಿಸುವುದಿಲ್ಲ. ಹೇಡಿಯಾದ ನೀನು ಲೋಕನಿಂದ್ಯವಾದ ದುಷ್ಕೃತ್ಯವನ್ನಾಚರಿಸಿದ್ದೀಯೆ (೨೮–೨೯). ಇದು ಕಳ್ಳರು ಮಾಡುವ ಕೆಲಸ. ವೀರರು ಆಚರಿಸತಕ್ಕದ್ದಲ್ಲ. ರಾವಣ, ನೀನು ವೀರನಾದರೆ ಒಂದು ಗಳಿಗೆ ನಿಂತು ಯುದ್ಧಮಾಡು! ನಿನ್ನ ಸೋದರನಾದ ಖರನು ಸತ್ತಂತೆ ಸತ್ತು ಉರುಳುವೆ. ಸಾಯುವ ಕಾಲ ಬಂದಾಗ ಮನುಷ್ಯನು ಯಾವ ದುಷ್ಕೃತ್ಯಕ್ಕೆ ಕೈಹಾಕುವನೋ ಅಂಥ ಅಧರ್ಮಕಾರ್ಯಕ್ಕೆ ಕೈಹಾಕಿದ್ದೀಯೆ. ಇದು ನಿನ್ನ ವಿನಾಶಕ್ಕಾಗಿಯೇ (೩೦–೩೧). ಯಾವ ಕರ್ಮಕ್ಕೆ

**ಕುರ್ವೀತ ಲೋಕಾಧಿಪತಿಃ ಸ್ವಯಂಭೂರ್ಭಗವಾನಪಿ ।**
**ಏವಮುಕ್ತ್ವಾ ಶುಭಂ ವಾಕ್ಯಂ ಜಟಾಯುಸ್ತಸ್ಯ ರಕ್ಷಸಃ ॥ ೩೩**

**ನಿಪಪಾತ ಭೃಶಂ ಪೃಷ್ಠೇ ದಶಗ್ರೀವಸ್ಯ ವೀರ್ಯವಾನ್ ।**
**ತಂ ಗೃಹೀತ್ವಾ ನಖೈಸ್ತೀಕ್ಷ್ಣೈರ್ವಿದದಾರ ಸಮಂತತಃ ॥ ೩೪**

**ಅಧಿರೂಢೋ ಗಜಾರೋಹೋ ಯಥಾ ಸ್ಯಾದ್ದುಷ್ಟವಾರಣಮ್ ।**
**ವಿದದಾರ ನಖೈರಸ್ಯ ತುಂಡಂ ಪೃಷ್ಠೇ ಸಮರ್ಪಯನ್ ॥ ೩೫**

**ಕೇಶಾಂಶ್ಚೋತ್ಪಾಟಯಾಮಾಸ ನಖಪಕ್ಷಮುಖಾಯುಧಃ ।**
**ಸ ತಥಾ ಗೃಧ್ರರಾಜೇನ ಕ್ಲಿಶ್ಯಮಾನೋ ಮುಹುರ್ಮುಹುಃ ॥ ೩೬**

**ಅಮರ್ಷಸ್ಫುರಿತೋಷ್ಠಃ ಸನ್ ಪ್ರಾಕಂಪತ ಸ ರಾವಣಃ ।**
**ಸ ಪರಿಷ್ವಜ್ಯ ವೈದೇಹೀಂ ವಾಮೇನಾಂಕೇನ ರಾವಣಃ ॥ ೩೭**

**ತಲೇನಾಭಿಜಘಾನಾಶು ಜಟಾಯುಂ ಕ್ರೋಧಮೂರ್ಛಿತಃ ।**
**ಜಟಾಯುಸ್ತಮಭಿಕ್ರಮ್ಯ ತುಂಡೇನಾಸ್ಯ ಖಗಾಧಿಪಃ ॥ ೩೮**

---

ಪಾಪವು ಗಂಟುಬೀಳುವುದೋ ಆ ದುಷ್ಕರ್ಮವನ್ನು ಲೋಕೇಶ್ವರನಾದ ಭಗವಾನ್ ಬ್ರಹ್ಮದೇವನೂ ಮಾಡಲಾರ" ಎಂದು ಹೇಳಿದನು. ಹೀಗೆ ಹೇಳಿ ಆ ಪರಾಕ್ರಮಿಯು (ರಾವಣನ ಬೆನ್ನಟ್ಟಿಹೋಗಿ) ತನ್ನ ಹರಿತವಾದ ಉಗುರುಗಳಿಂದ ದಶಕಂಠನ ಬೆನ್ನನ್ನು ಪರಚಿ ಪರಚಿ ಗಾಯಗೊಳಿಸಿದನು (೩೨–೩೪). ಹಿಡಿತ ದಪ್ಪಿದ ಪುಂಡಾನೆಯನ್ನು ಮಾವುತನು (ಅಂಕುಶದಿಂದ) ಇರಿಯುವಂತೆ ಜಟಾಯುವು ರಾವಣನ ಬೆನ್ನನ್ನು ಕೊಕ್ಕಿನಿಂದ ಕುಕ್ಕಿ ಉಗುರುಗಳಿಂದ ತರಿದನು. ತಲೆಗೂದಲುಗಳನ್ನು ಕಿತ್ತನು! ಆ ಗೃಧ್ರರಾಜನಿಗೆ ನಖ ಮುಖ ರೆಕ್ಕೆಗಳೇ ಆಯುಧಗಳಾದವು! (೩೫–೩೬). ಹೀಗೆ ಜಟಾಯುವು ಪುನಃಪುನಃ ಹಿಂಸೆಯನ್ನು ಕೊಡುತ್ತಿರಲು, ರಾವಣನು ಕೋಪೋದ್ದೀಪಿತನಾದನು. ಅವನ ತುಟಿಗಳು ಅಲುಗಿದವು. ಆತನು ಸೀತೆಯನ್ನು ಎಡಕಂಕುಳಲ್ಲಿ ಒತ್ತಿಹಿಡಿದು ಬಲಗೈಯಿಂದ ಜಟಾಯುವನ್ನು ಗುದ್ದಿದನು (೩೭). ಆಗ ಪಕ್ಷಿರಾಜನು ರಾವಣನ ಮೇಲೆ ಎರಗಿ ಕೊಕ್ಕಿನಿಂದ ಅವನ ಹತ್ತು ಎಡದೋಳುಗಳನ್ನು ಕಚ್ಚಿ ಕತ್ತರಿ

ವಾಮಬಾಹೂನ್ ದಶ ತದಾ ವ್ಯಪಾಹರದರಿಂದಮಃ ।
ಸಂಛಿನ್ನಬಾಹೋಃ ಸದ್ಯೈವ ಬಾಹವಃ ಸಹಸಾಭವನ್ ॥ ೩೯

ವಿಷಜ್ವಾಲಾವಲೀಯುಕ್ತಾ ವಲ್ಮೀಕಾದಿವ ಪನ್ನಗಾಃ ।
ತತಃ ಕ್ರೋಧಾದ್ದಶಗ್ರೀವಃ ಸೀತಾಮುತ್ಸೃಜ್ಯ ರಾವಣಃ ॥ ೪೦

ಮುಷ್ಟಿಭ್ಯಾಂ ಚರಣಾಭ್ಯಾಂ ಚ ಗೃಧ್ರರಾಜಮಪೋಥಯತ್ ।
ತತೋ ಮುಹೂರ್ತಂ ಸಂಗ್ರಾಮೋ ಬಭೂವಾತುಲವೀರ್ಯಯೋಃ

ರಾಕ್ಷಸಾನಾಂ ಚ ಮುಖ್ಯಸ್ಯ ಪಕ್ಷಿಣಾಂ ಪ್ರವರಸ್ಯ ಚ ।
ತಸ್ಯ ವ್ಯಾಯಚ್ಛಮಾನಸ್ಯ ರಾಮಸ್ಯಾರ್ಥೇ ಸ ರಾವಣಃ ॥ ೪೨

ಪಕ್ಷೌ ಪಾರ್ಶ್ವೌ ಚ ಪಾದೌ ಚ ಖಡ್ಗಮುದ್ಧೃತ್ಯ ಸೋಽಚ್ಛಿನತ್ ।
ಸ ಛಿನ್ನಪಕ್ಷಃ ಸಹಸಾ ರಕ್ಷಸಾ ರೌದ್ರಕರ್ಮಣಾ ॥ ೪೩

ನಿಪಪಾತ ಹತೋ ಗೃಧ್ರೋ ಧರಣ್ಯಾಮಲ್ಪಜೀವಿತಃ ।
ತಂ ದೃಷ್ಟ್ವಾ ಪತಿತಂ ಭೂಮೌ ಕ್ಷತಜಾರ್ದ್ರಂ ಜಟಾಯುಷಮ್ ॥
ಅಭ್ಯಧಾವತ ವೈದೇಹೀ ಸ್ವಬಂಧುಮಿವ ದುಃಖಿತಾ ॥

---

ಸಿದನು. ಆದರೆ ಹೊಸದಾಗಿ ಹತ್ತು ತೋಳುಗಳು ಥಟ್ಟನೆ ಹುಟ್ಟಿಬಂದವು! ವಿಷಜ್ವಾಲೆಯನ್ನುಗುಳುವ ಸರ್ಪಗಳು ಹುತ್ತದಿಂದ ಹೊರಬರುವಂತೆ ಜಿಗಿದು ಬಂದವು! (೩೮–೩೯). ದಶಕಂಠನು ಸಿಟ್ಟಿನಿಂದ ಸೀತೆಯನ್ನು ನೆಲಕ್ಕಿಳಿಸಿ, ಜಟಾಯುವನ್ನು ಮುಷ್ಟಿಗಳಿಂದ ಗುದ್ದಿ ಗುದ್ದಿ ಕಾಲುಗಳಿಂದ ಒದ್ದನು. ಅಸಾಧಾರಣ ಪರಾಕ್ರಮಿಗಳಾದ ರಾಕ್ಷಸೇಂದ್ರನಿಗೂ ಪಕ್ಷೀಂದ್ರನಿಗೂ ಒಂದು ಮುಹೂರ್ತಕಾಲ ಸಂಗ್ರಾಮವು ನಡೆಯಿತು (೪೦–೪೧). ಜಟಾಯುವು ಶ್ರೀರಾಮನಿಗೋಸ್ಕರ ಹೆಣಗಾಡುತ್ತಿದ್ದನು. ರಾವಣನು ಖಡ್ಗವನ್ನು ಹಿರಿದು ಜಟಾಯುವಿನ ಎರಡು ರೆಕ್ಕೆಗಳನ್ನೂ ಕತ್ತರಿಸಿ ರೆಕ್ಕೆಗಳ ಬುಡವನ್ನು ಕೆತ್ತಿ ಎರಡು ಕಾಲುಗಳನ್ನೂ ಕಡಿದನು (೪೨). ಹೀಗೆ ಘೋರಕರ್ಮಿಯಾದ ರಾಕ್ಷಸನು ರೆಕ್ಕೆಗಳನ್ನು ಕತ್ತರಿಸಲು, ಜಟಾಯುವು ದೊಪ್ಪನೆ ನೆಲದ ಮೇಲೆ ಬಿದ್ದನು. ಪ್ರಾಣಹೋಗುವ ಸ್ಥಿತಿಯಲ್ಲಿ ಗಾಯಗೊಂಡು ಉರುಳಿದನು. ಜಟಾಯುವು ರಕ್ತಸಿಕ್ತನಾಗಿ ಬಿದ್ದುದನ್ನು ಕಂಡು ವೈದೇಹಿಯು ತನ್ನ ಆಪ್ತಬಂಧುವೇ ಗಾಯಗೊಂಡನೆಂದು ದುಃಖಾರ್ತಳಾಗಿ ಅವನ

ತಂ ನೀಲಜೀಮೂತನಿಕಾಶಕಲ್ಪಂ
ಸಪಾಂಡರೋರಸ್ಕಮುದಾರವೀರ್ಯಮ್ ।
ದದರ್ಶ ಲಂಕಾಧಿಪತಿಃ ಪೃಥಿವ್ಯಾಂ
ಜಟಾಯುಷಂ ಶಾಂತಮಿವಾಗ್ನಿದಾವಮ್ ॥ ೪೫

ತತಸ್ತು ತಂ ಪತ್ರರಥಂ ಮಹೀತಲೇ
ನಿಪಾತಿತಂ ರಾವಣವೇಗಮರ್ದಿತಮ್ ।
ಪುನಃ ಪರಿಷ್ವಜ್ಯ ಶಶಿಪ್ರಭಾನನಾ
ರುರೋದ ಸೀತಾ ಜನಕಾತ್ಮಜಾ ತದಾ ॥ ೪೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕಪಂಚಾಶಃ ಸರ್ಗಃ

ಬಳಿಗೆ ಓಡಿಬಂದಳು (೪೩–೪೪). ಆ ಗೃಧ್ರರಾಜನು ನೀಲಮೇಘದಂತೆ ನೀಲ ವಿಶಾಲದೇಹನಾಗಿ ನೆಲದಮೇಲೆ ಬಿದ್ದಿದ್ದನು. ಬಿಳುಪಾದ ಎದೆಯ ಭಾಗ ಕಾಣಿಸುತ್ತಿತ್ತು. (ರಕ್ತಸಿಕ್ತನಾದ) ಆ ವೀರನು ಉರಿದು ಶಾಂತವಾದ ಕಾಳ್ಗಿಚ್ಚಿನಂತೆ ಮಲಗಿದುದನ್ನು ರಾವಣನು ನೋಡುತ್ತಿದ್ದನು (೪೫). ರಾವಣನ ತೀವ್ರವೇಗದ ಹೊಡೆತಕ್ಕೆ ಸಿಕ್ಕಿ ಆ ಪಕ್ಷಿರಾಜನು ಭೂಮಿಯಲ್ಲಿ ಬಿದ್ದಿದ್ದನು. ಇಂದುಮುಖಿಯಾದ ಜಾನಕಿಯು ಆತನನ್ನು ಆಲಿಂಗಿಸಿಕೊಂಡು ಅಳತೊಡಗಿದಳು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೊಂದನೆಯ ಸರ್ಗ

## ದ್ವಿಪಂಚಾಶಃ ಸರ್ಗಃ

### ಸೀತಾವಿಕ್ರೋಶಃ

ತಮಲ್ಪಜೀವಿತಂ ಗೃಧ್ರಂ ಸ್ಫುರಂತಂ ರಾಕ್ಷಸಾಧಿಪಃ ।
ದದರ್ಶ ಭೂಮೌ ಪತಿತಂ ಸಮೀಪೇ ರಾಘವಾಶ್ರಮಾತ್ ॥ ೧

ಸಾ ತು ತಾರಾಧಿಪಮುಖೀ ರಾವಣೇನ ಸಮೀಕ್ಷ್ಯ ತಮ್ ।
ಗೃಧ್ರರಾಜಂ ವಿನಿಹತಂ ವಿಲಲಾಪ ಸುದುಃಖಿತಾ ॥ ೨

ಆಲಿಂಗ್ಯ ಗೃಧ್ರಂ ನಿಹತಂ ರಾವಣೇನ ಬಲೀಯಸಾ ।
ವಿಲಲಾಪ ಸುದುಃಖಾರ್ತಾ ಸೀತಾ ಶಶಿನಿಭಾನನಾ ॥ ೩

ನಿಮಿತ್ತಂ ಲಕ್ಷಣಂ ಸ್ವಪ್ನಂ ಶಕುನಿಸ್ವರದರ್ಶನಮ್ ।
ಅವಶ್ಯಂ ಸುಖದುಃಖೇಷು ನರಾಣಾಂ ಪ್ರತಿದೃಶ್ಯತೇ ॥ ೪

ನೂನಂ ರಾಮ ನ ಜಾನಾಸಿ ಮಹದ್ವ್ಯಸನಮಾತ್ಮನಃ ।
ಧಾವಂತಿ ನೂನಂ ಕಾಕುತ್ಸ್ಥ ಮದರ್ಥಂ ಮೃಗಪಕ್ಷಿಣಃ ॥ ೫

### ಸರ್ಗ ೫೨

ರಾವಣನು ಅಳುತ್ತಿದ್ದ ಸೀತೆಯನ್ನು ಹಿಡಿದೆಳೆದು ಆಕಾಶಮಾರ್ಗದಲ್ಲಿ ಒಯ್ಯುವುದು

ಶ್ರೀರಾಮನ ಪರ್ಣಶಾಲೆಗೆ ಸ್ವಲ್ಪದೂರದಲ್ಲಿ ಈ ಹೊಡೆದಾಟವು ನಡೆದಿತ್ತು. ಜಟಾಯುವು ನೆಲದಮೇಲೆ ಬಿದ್ದು ಮರಣಾವಸ್ಥೆಯಲ್ಲಿ ಹೊರಳಾಡುವುದನ್ನು ರಾವಣನು ನೋಡಿದನು. ಅವನಿಂದ ಹತನಾಗಿ ಬಿದ್ದ ಜಟಾಯುವನ್ನು ಕಂಡು ಚಂದ್ರಮುಖಿಯಾದ ಸೀತೆಯು ಮತ್ತಷ್ಟು ಶೋಕಾರ್ತಳಾದಳು. ಅವನನ್ನು ಆಲಿಂಗಿಸಿಕೊಂಡು ಗೋಳಾಡಿದಳು (೧–೩): "ಹಾ! ಜನರಿಗೆ ಸುಖದುಃಖಗಳ ಕಾಲ ಬಂದಾಗ ಅವುಗಳನ್ನು ಸೂಚಿಸುವ ನಿಮಿತ್ತಗಳು ಕಂಡುಬರುತ್ತವೆ. ಲಕ್ಷಣ*, ಸ್ವಪ್ನ, ಹಕ್ಕಿಗಳ ಕೂಗು ಇವೆಲ್ಲ ಅದರ ಚಿಹ್ನೆಗಳು (೪). ಶ್ರೀರಾಮ, ನಿನಗೆ ಬಂದಿರುವ ಮಹಾಕಷ್ಟದ ಅರಿವು ನಿನಗಾಗದೆ? ನನ್ನ ನಿಮಿತ್ತವಾಗಿ

---

* ಲಕ್ಷಣ — ಕಣ್ಣು ಹಾರುವುದು ಮುಂತಾದದ್ದು.

ಅಯಂ ಹಿ ಕೃಪಯಾ ರಾಮ ಮಾಂ ತ್ರಾತುಮಭಿಸಂಗತಃ ।
ಶೇತೇ ವಿನಿಹತೋ ಭೂಮೌ ಮಮಾಭಾಗ್ಯಾದ್ವಿಹಂಗಮಃ ॥ ೬

ತ್ರಾಹಿ ಮಾಮದ್ಯ ಕಾಕುತ್ಸ್ಥ ಲಕ್ಷ್ಮಣೇತಿ ವರಾಂಗನಾ ।
ಸುಸಂತ್ರಸ್ತಾ ಸಮಾಕ್ರಂದಚ್ಛೃಣ್ವತಾಂ ತು ಯಥಾಂತಿಕೇ ॥ ೭

ತಾಂ ಕ್ಲಿಷ್ಟಮಾಲ್ಯಾಭರಣಾಂ ವಿಲಪಂತೀಮನಾಥವತ್ ।
ಅಭ್ಯಧಾವತ ವೈದೇಹೀಂ ರಾವಣೋ ರಾಕ್ಷಸಾಧಿಪಃ ॥ ೮

ತಾಂ ಲತಾಮಿವ ವೇಷ್ಟಂತೀಮಾಲಿಂಗಂತೀಂ ಮಹಾದ್ರುಮಾನ್ ।
ಮುಂಚ ಮುಂಚೇತಿ ಬಹುಶಃ ಪ್ರವದನ್ ರಾಕ್ಷಸಾಧಿಪಃ ॥ ೯

ಕ್ರೋಶಂತೀಂ ರಾಮ ರಾಮೇತಿ ರಾಮೇಣ ರಹಿತಾಂ ವನೇ ।
ಜೀವಿತಾಂತಾಯ ಕೇಶೇಷು ಜಗ್ರಾಹಾಂತಕಸಂನಿಭಃ ॥ ೧೦

ಪ್ರಧರ್ಷಿತಾಯಾಂ ಸೀತಾಯಾಂ ಬಭೂವ ಸಚರಾಚರಮ್ ।
ಜಗತ್ ಸರ್ವಮಮರ್ಯಾದಂ ತಮಸಾಂಧೇನ ಸಂವೃತಮ್ ॥ ೧೧

---

ಅಶುಭವನ್ನು ಸೂಚಿಸುತ್ತ ಮೃಗಪಕ್ಷಿಗಳು ಓಡುತ್ತಿವೆಯಲ್ಲವೆ ? ಈ ಪಕ್ಷಿರಾಜನು ಕೃಪೆಮಾಡಿ ನನ್ನನ್ನು ಕಾಪಾಡಲು ಮುಂದೆ ಬಂದನು. ನನ್ನ ದುರ್ಭಾಗ್ಯದಿಂದ ಹತನಾಗಿ ಭೂಮಿಯಲ್ಲಿ ಮಲಗಿದನು (೫–೬). ಶ್ರೀರಾಮ, ಲಕ್ಷ್ಮಣ, ನನ್ನನ್ನು ಕಾಪಾಡಿ ! " ಎಂದು ಕೂಗಿದಳು. ಸಮೀಪದಲ್ಲಿ ಕೇಳಿಸಿಕೊಳ್ಳತಕ್ಕವರು ಇದ್ದಾರೋ ಎಂಬಂತೆ ಕರೆದಳು ! ಅವಳು ಮುಡಿದಿದ್ದ ಹೂಗಳು ತೊಟ್ಟಿದ್ದ ಒಡವೆಗಳೂ ಅಸ್ತವ್ಯಸ್ತವಾಗಿದ್ದವು. ದಿಕ್ಕಿಲ್ಲದ ಅನಾಥೆಯಂತೆ ಅಳುತ್ತಿದ್ದಳು. ರಾವಣನು ಮತ್ತೆ ಅವಳ ಕಡೆಗೆ ನುಗ್ಗಿದನು (೭–೮). ಸೀತೆಯು ಅಲ್ಲಿದ್ದ ಮರಗಳನ್ನು ಬಳ್ಳಿಯಂತೆ ಬಳಸಿ ಅಪ್ಪಿಕೊಂಡು 'ರಾಮಾ ! ರಾಮಾ !' ಎಂದು ಕೂಗಿಕೊಳ್ಳುತ್ತಿದ್ದಳು. ರಾವಣನು 'ಬಿಡು ! ಬಿಟ್ಟುಬಿಡು !' ಎನ್ನುತ್ತ ಅವಳನ್ನು ಹಿಂಬಾಲಿಸಿ ಹೋಗುತ್ತಿದ್ದನು. ಕೊನೆಗೆ, ಯಮಸದೃಶನಾದ ರಾವಣನು ಸೀತೆಯ ಮುಡಿಯನ್ನು ಹಿಡಿದೆಳೆದನು. ಅಲ್ಲಿಗೆ ರಾವಣನ ಆಯುಸ್ಸು ಮುಗಿಯಿತು ! (೯–೧೦). ಸೀತೆಯಮೇಲೆ ಹೀಗೆ ಆಕ್ರಮಣ ನಡೆದೊಡನೆ, ಚರಾಚರವಾದ

ನ ವಾತಿ ಮಾರುತಸ್ತತ್ರ ನಿಷ್ಪ್ರಭೋಽಭೂದ್ದಿವಾಕರಃ ।
ದೃಷ್ಟ್ವಾ ಸೀತಾಂ ಪರಾಮೃಷ್ಟಾಂ ದೀನಾಂ ದಿವ್ಯೇನ ಚಕ್ಷುಷಾ ॥ ೧೨

ಕೃತಂ ಕಾರ್ಯಮಿತಿ ಶ್ರೀಮಾನ್ ವ್ಯಾಜಹಾರ ಪಿತಾಮಹಃ ।
ಪ್ರಹೃಷ್ಟಾ ವ್ಯಥಿತಾಶ್ಚಾಸನ್ ಸರ್ವೇ ತೇ ಪರಮರ್ಷಯಃ ॥ ೧೩

ದೃಷ್ಟ್ವಾ ಸೀತಾಂ ಪರಾಮೃಷ್ಟಾಂ ದಂಡಕಾರಣ್ಯವಾಸಿನಃ ।
ರಾವಣಸ್ಯ ವಿನಾಶಂ ಚ ಪ್ರಾಪ್ತಂ ಬುದ್ಧ್ವಾ ಯದೃಚ್ಛಯಾ ॥ ೧೪

ಸ ತು ತಾಂ ರಾಮ ರಾಮೇತಿ ರುದಂತೀಂ ಲಕ್ಷ್ಮಣೇತಿ ಚ ।
ಜಗಾಮಾದಾಯ ಚಾಕಾಶಂ ರಾವಣೋ ರಾಕ್ಷಸೇಶ್ವರಃ ॥ ೧೫

ತಪ್ತಾಭರಣವರ್ಣಾಂಗೀ ಪೀತಕೌಶೇಯವಾಸಿನೀ ।
ರರಾಜ ರಾಜಪುತ್ರೀ ತು ವಿದ್ಯುತ್ಸೌದಾಮಿನೀ ಯಥಾ ॥ ೧೬

ಉದ್ಧೂತೇನ ಚ ವಸ್ತ್ರೇಣ ತಸ್ಯಾಃ ಪೀತೇನ ರಾವಣಃ ।
ಅಧಿಕಂ ಪ್ರತಿಬಭ್ರಾಜ ಗಿರಿರ್ದೀಪ್ತ ಇವಾಗ್ನಿನಾ ॥ ೧೭

---

ಜಗತ್ತೆಲ್ಲವೂ ಏರುಪೇರಾಯಿತು! ಕಾಳ್ಗತ್ತಲೆ ಮುಸುಕಿದಂತಾಯಿತು! ಆ ಸ್ಥಳದಲ್ಲಿ ಗಾಳಿ ಬೀಸಲಿಲ್ಲ! ಸೂರ್ಯನು ಮಂಕಾದನು! ಬ್ರಹ್ಮದೇವನು ದೀನಳಾದ ಸೀತೆಯ ಮುಡಿಗೆ ರಾವಣನು ಕೈಮಾಡಿದನೆಂಬುದನ್ನು ದಿವ್ಯದೃಷ್ಟಿಯಿಂದ ತಿಳಿದು, 'ನಮ್ಮ ಕಾರ್ಯ ಸಿದ್ಧಿಸಿತು' ಎಂದು ಉದ್ಗರಿಸಿದನು! (೧೧–೧೨). ಸೀತೆಯ ಮೇಲೆ ರಾವಣನು ಕೈಮಾಡಿದುದನ್ನು ಜ್ಞಾನದೃಷ್ಟಿಯಿಂದ ತಿಳಿದು, ದಂಡಕಾರಣ್ಯವಾಸಿಗಳಾದ ಮಹರ್ಷಿಗಳು ದುಃಖಿತರಾದರು. ದೈವಗತಿಯಿಂದ ರಾವಣನ ಮರಣವು ಸನ್ನಿಹಿತವಾಯಿತೆಂದು ಸಂತುಷ್ಟರೂ ಆದರು! (೧೩–೧೪) 'ರಾಮ! ರಾಮ! ಲಕ್ಷ್ಮಣ!' ಎಂದು ಅಳುತ್ತಿದ್ದ ಜಾನಕಿಯನ್ನು ಎತ್ತಿಕೊಂಡು ರಾಕ್ಷಸೇಶ್ವರನಾದ ರಾವಣನು ಆಕಾಶವನ್ನಡರಿದನು. ಬಂಗಾರದ ಮೈಬಣ್ಣದವಳಾಗಿ ಹಳದಿಯ ರೇಷ್ಮೆಸೀರೆಯನ್ನುಟ್ಟಿದ್ದ ಸೀತೆಯು ರಾವಣನ ಪಾರ್ಶ್ವದಲ್ಲಿ, ಸುದಾಮಪರ್ವತದಮೇಲೆ ಮಿಂಚುವ ಮಿಂಚಿನಂತೆ ಮಿಂಚುತ್ತಿದ್ದಳು (೧೫–೧೬). ಅವಳ ಹಳದಿಯ ಸೀರೆಯು (ಗಾಳಿಗೆ) ಹಾರಾಡುತ್ತಿರಲು, ಬೆಂಕಿಬಿದ್ದ ಬೆಟ್ಟದಂತೆ ರಾವಣನು ಕಾಣುತ್ತಿದ್ದನು. ಸರ್ವಮಂಗಳೆಯಾದ ಸೀತೆಯು ಧರಿಸಿದ್ದ ಕಂಪು

ತಸ್ಯಾಃ ಪರಮಕಲ್ಯಾಣ್ಯಾಸ್ತಾಮ್ರಾಣಿ ಸುರಭೀಣಿ ಚ ।
ಪದ್ಮಪತ್ರಾಣಿ ವೈದೇಹ್ಯಾ ಅಭ್ಯಕೀರ್ಯಂತ ರಾವಣಮ್ ॥ ೧೮

ತಸ್ಯಾಃ ಕೌಶೇಯಮುದ್ಧೂತಮಾಕಾಶೇ ಕನಕಪ್ರಭಮ್ ।
ಬಭೌ ಚಾದಿತ್ಯರಾಗೇಣ ತಾಮ್ರಮಭ್ರಮಿವಾತಪೇ ॥ ೧೯

ತಸ್ಯಾಸ್ತದ್ವಿಮಲಂ ವಕ್ತ್ರಮಾಕಾಶೇ ರಾವಣಾಂಕಗಮ್ ।
ನ ರರಾಜ ವಿನಾ ರಾಮಂ ವಿನಾಲಮಿವ ಪಂಕಜಮ್ ॥ ೨೦

ಬಭೂವ ಜಲದಂ ನೀಲಂ ಭಿತ್ತ್ವಾ ಚಂದ್ರ ಇವೋದಿತಃ ।
ಸುಲಲಾಟಂ ಸುಕೇಶಾಂತಂ ಪದ್ಮಗರ್ಭಾಭಮವ್ರಣಮ್ ॥ ೨೧

ಶುಕ್ಲೈಃ ಸುವಿಮಲೈರ್ದಂತೈಃ ಪ್ರಭಾವದ್ಭಿರಲಂಕೃತಮ್ ।
ತಸ್ಯಾಃ ಸುನಯನಂ ವಕ್ತ್ರಮಾಕಾಶೇ ರಾವಣಾಂಕಗಮ್ ॥ ೨೨

ರುದಿತಂ ವ್ಯಪಮೃಷ್ಟಾಸ್ರಂ ಚಂದ್ರವತ್ ಪ್ರಿಯದರ್ಶನಮ್ ।
ಸುನಾಸಂ ಚಾರು ತಾಮ್ರೋಷ್ಠಮಾಕಾಶೇ ಹಾಟಕಪ್ರಭಮ್ ॥ ೨೩

---

ಬೀರುವ ಕೆಂಪನೆಯ ತಾವರೆಯ ದಳಗಳು ರಾವಣನ ಮೈಮೇಲೆ ತೂರಾಡಿದವು (೧೭–೧೮). ಚಿನ್ನದಂತೆ ಹೊಳೆಯುವ ದುಕೂಲವು ಗಗನದಲ್ಲಿ ಹಾರಾಡುತ್ತ, ಕೆಂಪುಮೋಡದಂತೆ ಬಿಸಿಲಿನಿಂದ ಬೆಳಗುತ್ತಿತ್ತು. ಶ್ರೀರಾಮನಿಲ್ಲದುದರಿಂದ ಸೀತೆಯ ನಿರ್ಮಲವದನವು ರಾವಣನ ಪಾರ್ಶ್ವದಲ್ಲಿ ಕಳೆಗೆಟ್ಟಿತ್ತು. ನಾಳವನ್ನು ಕಿತ್ತೆಸೆದ ಕಮಲದಂತೆ ಕಾಣುತ್ತಿತ್ತು (೧೯-೨೦). ಸುಂದರವಾದ ಹಣೆಯುಳ್ಳದ್ದಾಗಿ ತಾವರೆಯ ಕರ್ಣಿಕೆಯ ಬಣ್ಣವನ್ನು ತಳೆದಿದ್ದ ಅವಳ ನುಣ್ಣನೆಯ ಮುಖವು ಹರಡಿದ್ದ ಕೇಶರಾಶಿಯ ನಡುವೆ, ಕಪ್ಪು ಮೋಡದ ಮಧ್ಯದಲ್ಲುದಿಸಿದ ಚಂದ್ರನಂತೆ ತೋರುತ್ತಿತ್ತು (೨೧). ಆಕಾಶಮಾರ್ಗದಲ್ಲಿ ರಾವಣನ ಪಾರ್ಶ್ವದಲ್ಲಿದ್ದ ಅವಳ ಮುಖವು ಮನೋಹರ ನೇತ್ರಯುಕ್ತವಾಗಿ, ಸ್ವಚ್ಛವಾಗಿ ಹೊಳೆಯುವ ಬಿಳಿಯ ಹಲ್ಲುಗಳಿಂದ ರಮಣೀಯವಾಗಿತ್ತು (೨೨). ಚಂದ್ರನಂತೆ ನೇತ್ರಾನಂದಕರವಾದ ಸೀತೆಯ ವದನದಲ್ಲಿ ಕಣ್ಣೀರು ಒಸರುತ್ತಿತ್ತು. ಹಾಗೆಯೇ ಒರಸಿಹೋಗುತ್ತಿತ್ತು. ಅಂದವಾದ ಮೂಗು, ಚೆಂದುಟಿ, ಅಪರಂಜಿಯ ಬಣ್ಣ – ಇವುಗಳಿಂದ ಮುಖವು

ರಾಕ್ಷಸೇಂದ್ರಸಮಾಧೂತಂ ತಸ್ಯಾಸ್ತದ್ವದನಂ ಶುಭಮ್ ।
ಶುಶುಭೇ ನ ವಿನಾ ರಾಮಂ ದಿವಾ ಚಂದ್ರ ಇವೋದಿತಃ ॥ ೨೪

ಸಾ ಹೇಮವರ್ಣಾ ನೀಲಾಂಗಂ ಮೈಥಿಲೀ ರಾಕ್ಷಸಾಧಿಪಮ್ ।
ಶುಶುಭೇ ಕಾಂಚನೀ ಕಾಂಚೀ ನೀಲಂ ಗಜಮಿವಾಶ್ರಿತಾ ॥ ೨೫

ಸಾ ಪದ್ಮಗೌರೀ ಹೇಮಾಭಾ ರಾವಣಂ ಜನಕಾತ್ಮಜಾ ।
ವಿದ್ಯುದ್ಘನಮಿವಾವಿಶ್ಯ ಶುಶುಭೇ ತಪ್ತಭೂಷಣಾ ॥ ೨೬

ತಸ್ಯಾ ಭೂಷಣಘೋಷೇಣ ವೈದೇಹ್ಯಾ ರಾಕ್ಷಸಾಧಿಪಃ ।
ಬಭೌ ಸಚಪಲೋ ನೀಲಃ ಸಘೋಷ ಇವ ತೋಯದಃ ॥ ೨೭

ಉತ್ತಮಾಂಗಾಚ್ಚ್ಯುತಾ ತಸ್ಯಾಃ ಪುಷ್ಪವೃಷ್ಟಿಃ ಸಮಂತತಃ ।
ಸೀತಾಯಾ ಹ್ರಿಯಮಾಣಾಯಾಃ ಪಪಾತ ಧರಣೀತಲೇ ॥ ೨೮

ಸಾ ತು ರಾವಣವೇಗೇನ ಪುಷ್ಪವೃಷ್ಟಿಃ ಸಮಂತತಃ ।
ಸಮಾಧೂತಾ ದಶಗ್ರೀವಂ ಪುನರೇವಾಭ್ಯವರ್ತತ ॥ ೨೯

---

ಮನೋಜ್ಞವಾಗಿತ್ತು (೨೩). ಆದರೂ ರಾವಣನ ಭಯದಿಂದ ನಡುಗುತ್ತಿದ್ದ ಜಾನಕಿಯ ಮಂಗಳವದನವು ಶ್ರೀರಾಮನಿಲ್ಲದುದರಿಂದ ಹಗಲಿನ ಚಂದ್ರನಂತಾಗಿ, ಮೊದಲಿನಂತೆ ಶೋಭಿಸಲಿಲ್ಲ (೨೪). ಕಪ್ಪುದೇಹದ ರಾಕ್ಷಸರಾಜನು ಸುವರ್ಣಾಂಗಿಯಾದ ಮೈಥಿಲಿಯನ್ನು ಕಂಕುಳಲ್ಲಿ ಹಿಡಿದಿರಲು ಕರಿಯ ಆನೆಗೆ ಚಿನ್ನದ ಪಟ್ಟಿಯನ್ನು ಹಾಕಿದಂತಿತ್ತು (೨೫). ಪದ್ಮದಂತೆಯೂ ಸ್ವರ್ಣದಂತೆಯೂ ಸ್ವಚ್ಛವರ್ಣಳಾಗಿ ಚಿನ್ನದ ಒಡವೆಗಳನ್ನು ಧರಿಸಿದ್ದ ಜಾನಕಿಯು ರಾವಣನ ಪಾರ್ಶ್ವದಲ್ಲಿ, ಮೋಡದ ಬಳಿಯಲ್ಲಿ ಮಿನುಗುವ ಮಿಂಚಿನಂತೆ ಕಾಣಿಸಿದಳು (೨೬). ವೈದೇಹಿಯು ತೊಟ್ಟಿದ್ದ ಒಡವೆಗಳು ಘುಲ್ ಘುಲ್ ಎಂದು ಧ್ವನಿಗೈಯುತ್ತಿರಲು, ಮಿಂಚಿನೊಡನೆ ಗುಡುಗುವ ನೀಲಮೇಘದಂತೆ ರಾವಣನು ಗೋಚರಿಸಿದನು (೨೭). ಆ ರಾಕ್ಷಸನು ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ, ಅವಳು ಶಿರಸ್ಸಿನಲ್ಲಿ ಮುಡಿದಿದ್ದ ಹೂವು ಮಳೆಯಂತೆ ಭೂತಳದಮೇಲೆ ತೂರಿತು. ಸುತ್ತಲೂ ತೂರಿದ ಹೂಗಳ ರಾಶಿಯು ದಶಗ್ರೀವನ ಗಮನವೇಗದಿಂದ ಸೆಳೆಯಲ್ಪಟ್ಟು, ಅವನ ಹಿಂದೆ

ಅಭ್ಯವರ್ತತ ಪುಷ್ಪಾಣಾಂ ಧಾರಾ ವೈಶ್ರವಣಾನುಜಮ್ ।
ನಕ್ಷತ್ರಮಾಲಾ ವಿಮಲಾ ಮೇರುಂ ನಗಮಿವೋನ್ನತಮ್ ॥ ೩೦

ಚರಣಾನ್ನೂಪುರಂ ಭ್ರಷ್ಟಂ ವೈದೇಹ್ಯಾ ರತ್ನಭೂಷಿತಮ್ ।
ವಿದ್ಯುನ್ಮಂಡಲಸಂಕಾಶಂ ಪಪಾತ ಮಧುರಸ್ವನಮ್ ॥ ೩೧

ತರುಪ್ರವಾಲರಕ್ತಾ ಸಾ ನೀಲಾಂಗಂ ರಾಕ್ಷಸೇಶ್ವರಮ್ ।
ಪ್ರಾಶೋಭಯತ ವೈದೇಹೀ ಗಜಂ ಕಕ್ಷ್ಯೇವ ಕಾಂಚನೀ ॥ ೩೨

ತಾಂ ಮಹೋಲ್ಕಾಮಿವಾಕಾಶೇ ದೀಪ್ಯಮಾನಾಂ ಸ್ವತೇಜಸಾ ।
ಜಹಾರಾಕಾಶಮಾವಿಶ್ಯ ಸೀತಾಂ ವೈಶ್ರವಣಾನುಜಃ ॥ ೩೩

ತಸ್ಯಾಸ್ತಾನ್ಯಗ್ನಿವರ್ಣಾನಿ ಭೂಷಣಾನಿ ಮಹೀತಲೇ ।
ಸಘೋಷಾಣ್ಯವಶೀರ್ಯಂತ ಕ್ಷೀಣಾಸ್ತಾರಾ ಇವಾಂಬರಾತ್ ೩೪

ತಸ್ಯಾಃ ಸ್ತನಾಂತರಾದ್ಭ್ರಷ್ಟೋ ಹಾರಸ್ತಾರಾಧಿಪದ್ಯುತಿಃ ।
ವೈದೇಹ್ಯಾ ನಿಪತನ್ ಭಾತಿ ಗಂಗೇವ ಗಗನಾಚ್ಚ್ಯುತಾ ॥ ೩೫

---

ಹಾರಿಹೋಗುತ್ತಿತ್ತು (೨೮–೨೯). ಹಾಗೆ ಹಾರಿಹೋಗುವ ಹೂವಿನ ಧಾರೆಯು ಉನ್ನತವಾದ ಮೇರುಪರ್ವತವನ್ನು ಹಿಂಬಾಲಿಸಿ ಬಳಸುವ ವಿಮಲ ತಾರಾಪುಂಜ ದಂತೆ ಕೆಂಗೊಳಿಸಿತು. ವೈದೇಹಿಯ ಪಾದದಿಂದ ರತ್ನಭೂಷಿತವಾದ ಕಾಲಂದಿಗೆಯು ಕಳಚಿ, ಕುಲುಕುಲು ಎಂದು ಇಂಪಾಗಿ ಧ್ವನಿಗೈಯುತ್ತ ಮಿಂಚಿನ ಗೊಂಚಲಿನಂತೆ ಬಿದ್ದಿತು (೩೦–೩೧). ಮರದ ಚಿಗುರೆಲೆಯಂತೆ ಅರುಣವರ್ಣಳಾಗಿದ್ದ ವೈದೇಹಿ ಯಿಂದ ರಾವಣನಿಗೆ ಒಂದು ಶೋಭೆಯುಂಟಾಯಿತು. ಕರ್ರಗಿದ್ದ ಆ ರಾಕ್ಷಸೇಶ್ವರನು ನಡುವಿಗೆ ಚಿನ್ನದ ಸರಪಳಿಯಿಂದ ಭೂಷಿತವಾದ ಆನೆಯಂತೆ ಗೋಚರಿಸಿದನು (೩೨). ತನ್ನ ದೇಹಕಾಂತಿಯಿಂದ ದೊಡ್ಡ ಉಲ್ಕೆಯಂತೆ ಬೆಳಗುತ್ತಿದ್ದ ಸೀತೆ ಯನ್ನು, ಕುಬೇರಾನುಜನು ಆಕಾಶಮಾರ್ಗದಲ್ಲಿ ಒಯ್ಯುತ್ತಿದ್ದನು. ಅಗ್ನಿಯಂತೆ ಹೊಳೆಯುತ್ತಿದ್ದ ಸೀತೆಯ ಆಭರಣಗಳು ಝಣ ಝಣ ಎಂದು ಶಬ್ದಮಾಡುತ್ತ ಭೂಮಿಗೆ ಬಿದ್ದವು; ಪುಣ್ಯವು ಮುಗಿದು ಧರೆಗಿಳಿಯುವ ತಾರೆಗಳಂತೆ ಕಂಡವು (೩೩–೩೪); ಚಂದ್ರನಂತೆ ಚಂದವಾದ ಮುತ್ತಿನ ಸರವು ಜಾನಕಿಯ ಸ್ತನಮಧ್ಯದಿಂದ ಜಾರಿ ಬೀಳುವಾಗ, ಗಗನದಿಂದಿಳಿಯುವ ಗಂಗೆಯೋ ಎಂಬಂತೆ

ಉತ್ಪಾತವಾತಾಭಿಹತಾ ನಾನಾದ್ವಿಜಗಣಾಯುತಾಃ ।
ಮಾ ಭೈರಿತಿ ವಿಧೂತಾಗ್ರಾ ವ್ಯಾಜಹ್ರುರಿವ ಪಾದಪಾಃ ॥ ೩೬

ನಲಿನ್ಯೋ ಧ್ವಸ್ತಕಮಲಾಸ್ತ್ರಸ್ತಮೀನಜಲೇಚರಾಃ ।
ಸಖೀಮಿವ ಗತೋಚ್ಛ್ವಾಸಾಮನ್ವಶೋಚಂತ ಮೈಥಿಲೀಮ್ ॥ ೩೭

ಸಮಂತಾದಭಿಸಂಪತ್ಯ ಸಿಂಹವ್ಯಾಘ್ರಮೃಗದ್ವಿಜಾಃ ।
ಅನ್ವಧಾವಂಸ್ತದಾ ರೋಷಾತ್ ಸೀತಾಂ ಛಾಯಾನುಗಾಮಿನಃ ॥ ೩೮

ಜಲಪ್ರಪಾತಾಸ್ರಮುಖಾಃ ಶೃಂಗೈರುಚ್ಛ್ರಿತಬಾಹವಃ ।
ಸೀತಾಯಾಂ ಹ್ರಿಯಮಾಣಾಯಾಂ ವಿಕ್ರೋಶಂತೀವ ಪರ್ವತಾಃ ॥

ಹ್ರಿಯಮಾಣಾಂ ತು ವೈದೇಹೀಂ ದೃಷ್ಟ್ವಾ ದೀನೋ ದಿವಾಕರಃ ।
ಪ್ರತಿಧ್ವಸ್ತಪ್ರಭಃ ಶ್ರೀಮಾನಾಸೀತ್ ಪಾಂಡರಮಂಡಲಃ ॥ ೪೦

ನಾಸ್ತಿ ಧರ್ಮಃ ಕುತಃ ಸತ್ಯಂ ನಾರ್ಜವಂ ನಾನೃಶಂಸತಾ ।
ಯತ್ರ ರಾಮಸ್ಯ ವೈದೇಹೀಂ ಭಾರ್ಯಾಂ ಹರತಿ ರಾವಣಃ ॥ ೪೧

---

ಕಂಗೊಳಿಸಿತು (೩೫). ಆ ಸಮಯದಲ್ಲಿ ಉತ್ಪಾತವಾತವು ಬೀಸಿತು. ಮರಗಳಲ್ಲಿ ಹಕ್ಕಿಗಳ ಹಿಂಡು ಕೂಗುತ್ತಿರಲು, ತುದಿಯಲ್ಲಾಡುತ್ತಿದ್ದ ಆ ಮರಗಳು 'ಸೀತೆ, ಹೆದರಬೇಡ!' ಎಂದು ಅಭಯವಚನವನ್ನು ನೀಡುವಂತೆ ಗೋಚರಿಸಿದವು! (೩೬). ತಾವರೆಯ ಕೊಳಗಳಲ್ಲಿ ತಾವರೆಗಳು ಬಾಡಿದವು. ಮೀನುಗಳೇ ಮೊದಲಾದ ಜಲಚರಗಳು ಹೆದರಿದವು. ಗೆಳತಿಯಾದ ಮೈಥಿಲಿಯು ಉಸಿರುಕಟ್ಟಿ ಎಚ್ಚರದಪ್ಪಿದಂತಿದ್ದುದನ್ನು ಕಂಡು, ಆ ಕೊಳಗಳು ಅನುಕಂಪೆಯಿಂದ ಶೋಕಿಸುವಂತೆ ತೋರಿದವು (೩೭). ಸಿಂಹವ್ಯಾಘ್ರ ಮುಂತಾದ ಮೃಗಗಳೂ ಪಕ್ಷಿಗಳೂ ಸುತ್ತಲೂ ನೆಗೆಯುತ್ತ ಹಾರುತ್ತ ಬಂದು, ರಾವಣನಮೇಲಿನ ರೋಷದಿಂದ ಸೀತೆಯ ನೆರಳನ್ನು ಹಿಡಿದು ಹಿಂಬಾಲಿಸಿ ಓಡಿದವು (೩೮). ರಾವಣನು ಸೀತೆಯನ್ನು ಅಪಹರಿಸುವನೆಂದು ಪರ್ವತಗಳು ಜಲಪಾತದ ರೂಪದಿಂದ ಕಣ್ಣೀರು ಹರಿಸುತ್ತ ಶಿಖರಗಳೆಂಬ ಕೈಗಳನ್ನೆತ್ತಿ ಗೋಳಾಡುತ್ತವೆಯೋ ಎಂಬಂತೆ ತೋರಿತು (೩೯). ವೈದೇಹಿಯ ಅಪಹಾರವನ್ನು ಕಂಡು ಸೂರ್ಯನು ದೈನ್ಯದಿಂದ ನಿಸ್ತೇಜನಾಗಿ ಕೇವಲ ಬಿಳಿಯ ಮಂಡಲವಾಗಿ ಗೋಚರಿಸಿದನು. "ಅಯ್ಯೋ! ಶ್ರೀರಾಮನ ಪತ್ನಿಯಾದ ಜಾನಕಿಯನ್ನು ರಾವಣನು ಅಪಹರಿಸುತ್ತಾನೆಂದರೆ,

ಇತಿ ಸರ್ವಾಣಿ ಭೂತಾನಿ ಗಣಶಃ ಪರ್ಯದೇವಯನ್ ।
ವಿತ್ರಸ್ತಕಾ ದೀನಮುಖಾ ರುರುದುರ್ಮೃಗಪೋತಕಾಃ ॥ ೪೨

ಉದ್ವೀಕ್ಷ್ಯೋದ್ವೀಕ್ಷ್ಯ ನಯನೈರಸ್ರಪಾತಾವಿಲೇಕ್ಷಣಾಃ ।
ಸುಪ್ರವೇಪಿತಗಾತ್ರಾಶ್ಚ ಬಭೂವುರ್ವನದೇವತಾಃ ॥ ೪೩

ವಿಕ್ರೋಶಂತೀಂ ದೃಢಂ ಸೀತಾಂ ದೃಷ್ಟ್ವಾ ದುಃಖಂ ತಥಾಗತಾಮ್ ।
ತಾಂ ತು ಲಕ್ಷ್ಮಣ ರಾಮೇತಿ ಕ್ರೋಶಂತೀಂ ಮಧುರಸ್ವರಾಮ್ ॥ ೪೪

ಅವೇಕ್ಷಮಾಣಾಂ ಬಹುಶೋ ವೈದೇಹೀಂ ಧರಣೀತಲಮ್ ।
ಸ ತಾಮಾಕುಲಕೇಶಾಂತಾಂ ವಿಪ್ರಮೃಷ್ಟವಿಶೇಷಕಾಮ್ ॥ ೪೫

ಜಹಾರಾತ್ಮವಿನಾಶಾಯ ದಶಗ್ರೀವೋ ಮನಸ್ವಿನೀಮ್ ॥

ತತಸ್ತು ಸಾ ಚಾರುದತೀ ಶುಚಿಸ್ಮಿತಾ
ವಿನಾಕೃತಾ ಬಂಧುಜನೇನ ಮೈಥಿಲೀ ।

---

ಲೋಕದಲ್ಲಿ ಧರ್ಮವೆಂಬುದು ಇಲ್ಲ ; ಸತ್ಯವು ಎಲ್ಲಿದೆ ? ಋಜುತ್ವ ದಯೆಗಳಿಗೆ ಅವಕಾಶವಿಲ್ಲ ” ಎಂದು ಸಕಲರೂ ಗೋಳಾಡಿದರು. ಮೃಗಗಳೂ ಅವುಗಳ ಮರಿಗಳೂ ಹೆದರಿ ದೈನ್ಯದಿಂದ ದುಃಖಿಸಿದವು (೪೦–೪೨). ಅವು ಮೇಲಕ್ಕೆ ನೋಡಿ ನೋಡಿ ಕಣ್ಣೀರು ಸುರಿಸಿದವು. ಆ ಬಗೆಯಲ್ಲಿ ಕಷ್ಟಕ್ಕೆ ಸಿಕ್ಕಿ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದ ಸೀತೆಯನ್ನು ಕಂಡು, ವನದೇವತೆಗಳು ಗಡಗಡನೆ ನಡುಗಿದರು (೪೩). ‘ಲಕ್ಷ್ಮಣಾ ! ರಾಮಾ ! ’ ಎಂದು ಮಧುರಕಂಠದಿಂದ ಆಕ್ರಂದಿಸುತ್ತ, ವೈದೇಹಿಯು ಭೂಮಿಯ ಕಡೆಗೆ ಮತ್ತೆ ಮತ್ತೆ ನೋಡುತ್ತಿದ್ದಳು. ಅವಳ ಕೇಶರಾಶಿಯು ಬಿಚ್ಚಿ ಹರಡಿತ್ತು. ತಿಲಕವು ಅಳಿಸಿತ್ತು. ದೃಢಚಿತ್ತಳಾದ ಆ ಪತಿವ್ರತೆಯನ್ನು ದಶಗ್ರೀವನು ಬಲಾತ್ಕಾರದಿಂದ ಒಯ್ಯುತ್ತಿದ್ದನು (೪೪–೪೫). ಸುಂದರ ದಂತಪಂಕ್ತಿಯವಳೂ ವಿಮಲಮಂದಸ್ಮಿತೆಯೂ ಆದ ಮೈಥಿಲಿಯು ಆಪ್ತರಾದ ಶ್ರೀರಾಮಲಕ್ಷ್ಮಣರಿಂದ ವಿಯುಕ್ತಳಾಗಿದ್ದಳು. ಅವರೀರ್ವರನ್ನೂ ಕಾಣದೆ

ಅಪಶ್ಯತೀ ರಾಘವಲಕ್ಷ್ಮಣಾವುಭೌ
ವಿವರ್ಣವಕ್ತ್ರಾ ಭಯಭಾರಪೀಡಿತಾ ॥ ೪೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಿಪಂಚಾಶಃ ಸರ್ಗಃ

---

## ತ್ರಿಪಂಚಾಶಃ ಸರ್ಗಃ

### ರಾವಣಭರ್ತ್ಸನಮ್

ಖಮುತ್ಪತಂತಂ ತಂ ದೃಷ್ಟ್ವಾ ಮೈಥಿಲೀ ಜನಕಾತ್ಮಜಾ ।
ದುಃಖಿತಾ ಪರಮೋದ್ವಿಗ್ನಾ ಭಯೇ ಮಹತಿ ವರ್ತಿನೀ ॥ ೧

ರೋಷರೋದನತಾಮ್ರಾಕ್ಷೀ ಭೀಮಾಕ್ಷಂ ರಾಕ್ಷಸಾಧಿಪಮ್ ।
ರುದತೀ ಕರುಣಂ ಸೀತಾ ಹ್ರಿಯಮಾಣೇದಮಬ್ರವೀತ್ ॥ ೨

---

ಸೀತೆಯ ಮುಖವು (ನಿರಾಸೆಯಿಂದ) ಬಣ್ಣಗೆಟ್ಟಿತು. ಅವಳು ಅತ್ಯಂತ ಭಯದಿಂದ ಕಂಗೆಟ್ಟಳು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೆರಡನೆಯ ಸರ್ಗ

---

## ಸರ್ಗ ೫೩

### ಸೀತೆಯು ರಾವಣನನ್ನು ನಿಂದಿಸುವುದು

ಜಾನಕಿಯು ತನ್ನನ್ನು ರಾವಣನು ಆಕಾಶಮಾರ್ಗದಲ್ಲಿ ಎತ್ತಿಕೊಂಡು ಹೋಗುವಾಗ ಶೋಕಾರ್ತಳಾಗಿ ಭಯದಿಂದ ನಡುಗುತ್ತಿದ್ದಳು. ರೋಷದಿಂದಲೂ ರೋದನದಿಂದಲೂ ಅವಳ ನೇತ್ರಗಳು ಕೆಂಪಾಗಿದ್ದವು. ಮನ ಕರಗುವಂತೆ ಗೋಳೋ ಎಂದು ಅಳುತ್ತ ಅವಳು ಹೀಗೆಂದಳು (೧) : "ಎಲಾ ನೀಚ–ರಾವಣ, ನಾನು ಒಂಟಿಯಾಗಿರುವೆನೆಂದರಿತು ನನ್ನನ್ನು ಕದ್ದುಕೊಂಡು ಓಡಿಹೋಗುತ್ತಿರುವೆ

ನ ವ್ಯಪತ್ರಪಸೇ ನೀಚ ಕರ್ಮಣಾನೇನ ರಾವಣ ।
ಜ್ಞಾತ್ವಾ ವಿರಹಿತಾಂ ಯನ್ಮಾಂ ಚೋರಯಿತ್ವಾ ಪಲಾಯಸೇ ॥ ೩

ತ್ವಯೈವ ನೂನಂ ದುಷ್ಟಾತ್ಮನ್ ಭೀರುಣಾ ಹರ್ತುಮಿಚ್ಛತಾ ।
ಮಮಾಪವಾಹಿತೋ ಭರ್ತಾ ಮೃಗರೂಪೇಣ ಮಾಯಯಾ ॥ ೪

ಯೋ ಹಿ ಮಾಮುದ್ಯತಸ್ತ್ರಾತುಂ ಸೋಽಪ್ಯಯಂ ವಿನಿಪಾತಿತಃ ।
ಗೃಧ್ರರಾಜಃ ಪುರಾಣೋಽಸೌ ಶ್ವಶುರಸ್ಯ ಸಖಾ ಮಮ ॥ ೫

ಪರಮಂ ಖಲು ತೇ ವೀರ್ಯಂ ದೃಶ್ಯತೇ ರಾಕ್ಷಸಾಧಮ ।
ವಿಶ್ರಾವ್ಯ ನಾಮಧೇಯಂ ಹಿ ಯುದ್ಧೇ ನಾಸ್ಮಿ ಜಿತಾ ತ್ವಯಾ ॥ ೬

ಈದೃಶಂ ಗರ್ಹಿತಂ ಕರ್ಮ ಕಥಂ ಕೃತ್ವಾ ನ ಲಜ್ಜಸೇ ।
ಸ್ತ್ರಿಯಾಶ್ಚ ಹರಣಂ ನೀಚ ರಹಿತೇ ತು ಪರಸ್ಯ ಚ ॥ ೭

ಕಥಯಿಷ್ಯಂತಿ ಲೋಕೇಷು ಪುರುಷಾಃ ಕರ್ಮ ಕುತ್ಸಿತಮ್ ।
ಸುನೃಶಂಸಮಧರ್ಮಿಷ್ಠಂ ತವ ಶೌಂಡೀರ್ಯಮಾನಿನಃ ॥ ೮

---

ಯಲ್ಲ, ಈ ಹೇಡಿ ಕೆಲಸದಿಂದ ನಿನಗೆ ನಾಚಿಕೆಯಾಗುವುದಿಲ್ಲವೆ? (೨-೩). ದುರಾತ್ಮ, ಹೇಡಿಯಾದ ನೀನು ನನ್ನನ್ನು ಅಪಹರಿಸಲು ಹೊಂಚುಹಾಕಿದ್ದೆ. ಅದಕ್ಕಾಗಿ ನೀನೇ ಮಾಯಾಮೃಗವನ್ನು ಕಳಿಸಿ ಮೋಸದಿಂದ ನನ್ನ ಪತಿಯನ್ನು ದೂರದವರೆಗೆ ಒಯ್ದಿರಬೇಕು (೪). ನನ್ನನ್ನು ಉಳಿಸಲು ಬರದ ವೃದ್ಧನಾದ ಈ ಗೃಧ್ರರಾಜನನ್ನೂ ಹೊಡೆದುರುಳಿಸಿದ್ದೀಯೆ. ಈತನು ನನ್ನ ಮಾವನ ಮಿತ್ರ. ನಿನ್ನ ಪರಾಕ್ರಮ ಅಸದೃಶವಾಗಿದೆಯಲ್ಲವೆ! ಥೂ ಅಧಮ! ರಣರಂಗದಲ್ಲಿ ನಿನ್ನ ಹೆಸರನ್ನು ಘೋಷಿಸಿ ಹೊಡೆದಾಡಿ ನನ್ನನ್ನು ನೀನು ಗೆದ್ದು ತರಲಿಲ್ಲ (೫-೬). ಇಂಥ ನೀಚಕೃತ್ಯವನ್ನು ಮಾಡಿದರೂ ನಿನಗೆ ನಾಚಿಕೆಯಿಲ್ಲವೆ? ಪರಸ್ತ್ರೀಯನ್ನು ಅದರಲ್ಲಿಯೂ ರಕ್ಷಕರಿಲ್ಲದೆ ಏಕಾಕಿನಿಯಾದವಳನ್ನು ಕದಿಯಬಹುದೆ? ಶೂರನೆಂದು ತಿಳಿದುಕೊಂಡಿರುವ ನೀನು ಎಷ್ಟು ಕ್ರೂರವಾದ—ಎಷ್ಟು ಧರ್ಮವಿರುದ್ಧವಾದ ತುಚ್ಛಕಾರ್ಯವನ್ನು ಮಾಡಿದೆ! ಇದನ್ನು ಜನರು ಲೋಕದಲ್ಲಿ ಶಾಶ್ವತವಾಗಿ

ಧಿಕ್ ತೇ ಶೌರ್ಯಂ ಚ ಸತ್ತ್ವಂ ಚ ಯತ್ತ್ವಂ ಕಥಿತವಾಂಸ್ತದಾ ।
ಕುಲಾಕ್ರೋಶಕರಂ ಲೋಕೇ ಧಿಕ್ ತೇ ಚಾರಿತ್ರಮೀದೃಶಮ್ ॥ ೯

ಕಿಂ ಕರ್ತುಂ ಶಕ್ಯಮೇವಂ ಹಿ ಯಜ್ಜವೇನೈವ ಧಾವಸಿ ।
ಮುಹೂರ್ತಮಪಿ ತಿಷ್ಠ ತ್ವಂ ನ ಜೀವನ್ ಪ್ರತಿಯಾಸ್ಯಸಿ ॥ ೧೦

ನ ಹಿ ಚಕ್ಷುಷ್ಪಥಂ ಪ್ರಾಪ್ಯ ತಯೋಃ ಪಾರ್ಥಿವಪುತ್ರಯೋಃ ।
ಸಸೈನ್ಯೋಽಪಿ ಸಮರ್ಥಸ್ತ್ವಂ ಮುಹೂರ್ತಮಪಿ ಜೀವಿತುಮ್ ॥ ೧೧

ನ ತ್ವಂ ತಯೋಃ ಶರಸ್ಪರ್ಶಂ ಶಕ್ತಃ ಸೋಢುಂ ಕಥಂಚನ ।
ವನೇ ಪ್ರಜ್ವಲಿತಸ್ಯೇವ ಸ್ಪರ್ಶಮಗ್ನೇರ್ವಿಹಂಗಮಃ ॥ ೧೨

ಸಾಧು ಕೃತ್ವಾತ್ಮನಃ ಪಥ್ಯಂ ಸಾಧು ಮಾಂ ಮುಂಚ ರಾವಣ ।
ಮತ್ಪ್ರಧರ್ಷಣರುಷ್ಟೋ ಹಿ ಭ್ರಾತ್ರಾ ಸಹ ಪತಿರ್ಮಮ ॥ ೧೩

ವಿಧಾಸ್ಯತಿ ವಿನಾಶಾಯ ತ್ವಂ ಮಾಂ ಯದಿ ನ ಮುಂಚಸಿ ।
ಯೇನ ತ್ವಂ ವ್ಯವಸಾಯೇನ ಬಲಾನ್ಮಾಂ ಹರ್ತುಮಿಚ್ಛಸಿ ॥ ೧೪

---

ಆಡಿಕೊಳ್ಳುವರು (೭–೮). ದೊಡ್ಡದಾಗಿ ನಿನ್ನ ಪರಾಕ್ರಮವನ್ನು ಕೊಚ್ಚಿಕೊಂಡೆಯಲ್ಲ, ಥೂ ನಿನ್ನ ಪರಾಕ್ರಮವೇ! ನಿನ್ನ ಶೌರ್ಯಕ್ಕೆ ಧಿಕ್ಕಾರ! ನಿನ್ನ ಕುಲಕ್ಕೆ ಕೆಟ್ಟ ಹೆಸರು ತಂದ ನಿನ್ನ ನಡೆತೆಗೆ ಬೆಂಕಿಹಾಕಲಿ! ಹೀಗೆ ವೇಗದಿಂದ ಓಡಿಹೋದರೆ ಏನು ಮಾಡಲು ಸಾಧ್ಯ? ಒಂದು ಅರಗಳಿಗೆಯಾದರೂ ತಡೆದರೆ, ನೀನು ಜೀವಸಹಿತ ಮುಂದೆ ಹೆಜ್ಜೆ ಇಡಲಾರೆ (೯–೧೦) ನೀನು ಆ ರಾಜಪುತ್ರರ ಕಣ್ಣಿಗೆ ಬಿದ್ದರೆ ಸಾಕು, ಸೇನಾಸಮೇತನಾಗಿದ್ದರೂ ನೀನು ಅರಗಳಿಗೆ ಬದುಕಲಾರೆ. ಅವರೀರ್ವರ ಬಾಣದ ಹೊಡೆತವನ್ನು ತಡೆದುಕೊಳ್ಳಲು ನಿನಗೆ ಎಂದಿಗೂ ಸಾಧ್ಯವಿಲ್ಲ. ಕಾಳ್ಗಿಚ್ಚನ ಜ್ವಾಲೆಯ ಸ್ಪರ್ಶವನ್ನು ಹಕ್ಕಿಯು ತಡೆದುಕೊಂಡೀತೆ? (೧೧–೧೨). ರಾವಣ, ನನ್ನನ್ನು ಬೇಗನೆ ಬಿಟ್ಟುಬಿಡು. ಇದೇ ನಿನಗೆ ಒಳ್ಳೆಯದೆಂದು ತಿಳಿ. ಬಿಡದಿದ್ದರೆ ನನ್ನ ಮೇಲೆ ಕೈಮಾಡಿದ್ದರಿಂದ ನನ್ನ ಪತಿಯು ಕುಪಿತನಾಗುವನು. ತನ್ನ ತಮ್ಮನೊಡನೆ ಬಂದು ನಿನ್ನನ್ನು ವಧಿಸುವನು (೧೩). ಎಲಾ ನೀಚ, ಯಾವ ಉದ್ದೇಶದಿಂದ ನನ್ನನ್ನು ಅಪಹರಿಸುವೆಯೋ ಅದು

ವ್ಯವಸಾಯಃ ಸ ತೇ ನೀಚ ಭವಿಷ್ಯತಿ ನಿರರ್ಥಕಃ ।
ನ ಹ್ಯಹಂ ತಮಪಶ್ಯಂತೀ ಭರ್ತಾರಂ ವಿಬುಧೋಪಮಮ್ ॥ ೧೫

ಉತ್ಸಹೇ ಶತ್ರುವಶಗಾ ಪ್ರಾಣಾನ್ ಧಾರಯಿತುಂ ಚಿರಮ್ ।
ನ ನೂನಂ ಚಾತ್ಮನಃ ಶ್ರೇಯಃ ಪಥ್ಯಂ ವಾ ಸಮವೇಕ್ಷಸೇ ॥ ೧೬

ಮೃತ್ಯುಕಾಲೇ ಯಥಾ ಮರ್ತ್ಯೋ ವಿಪರೀತಾನಿ ಸೇವತೇ ।
ಮುಮೂರ್ಷೂಣಾಂ ಹಿ ಸರ್ವೇಷಾಂ ಯತ್ಪಥ್ಯಂ ತನ್ನ ರೋಚತೇ ॥

ಪಶ್ಯಾಮದ್ಯ ಹಿ ಕಂಠೇ ತ್ವಾಂ ಕಾಲಪಾಶಾವಪಾಶಿತಮ್ ।
ಯಥಾ ಚಾಸ್ಮಿನ್ ಭಯಸ್ಥಾನೇ ನ ಬಿಭೇಷಿ ದಶಾನನ ॥ ೧೮

ವ್ಯಕ್ತಂ ಹಿರಣ್ಮಯಾನ್ ಹಿ ತ್ವಂ ಸಂಪಶ್ಯಸಿ ಮಹೀರುಹಾನ್ ।
ನದೀಂ ವೈತರಣೀಂ ಘೋರಾಂ ರುಧಿರೌಘಪ್ರವಾಹಿನೀಮ್ ॥ ೧೯

ಅಸಿಪತ್ರವನಂ ಚೈವ ಭೀಮಂ ಪಶ್ಯಸಿ ರಾವಣ ।
ತಪ್ತಕಾಂಚನಪುಷ್ಪಾಂ ಚ ವೈಡೂರ್ಯಪ್ರವರಚ್ಛದಾಮ್ ॥ ೨೦

---

ಎಂದಿಗೂ ಫಲಿಸುವುದಿಲ್ಲ. ದೇವತೆಯಂತಿರುವ ನನ್ನ ಪತಿಯನ್ನು ಕಾಣದೆ ಶತ್ರುವಿನ ಬಳಿಯಲ್ಲಿ ಎಂದಿಗೂ ನಾನು ಪ್ರಾಣಸಹಿತ ಉಳಿಯುವುದಿಲ್ಲ (೧೪-೧೫) ನಿನಗೆ ಮುಂದಿನ ಶ್ರೇಯಸ್ಸೂ ಬೇಡವಾಗಿದೆ; ಈಗಿನ ಹಿತವೂ ಬೇಡವಾಗಿದೆ. ಮನುಷ್ಯನಿಗೆ ಸಾಯುವ ಕಾಲ ಬಂದಾಗ ಅಪಥ್ಯವಾದ್ದನ್ನೇ ಸೇವಿಸುತ್ತಾನೆ. ಸಾಯುವವರಿಗೆ ಪಥ್ಯದ ಮಾತು ರುಚಿಸದು (೧೬-೧೭). ಮೃತ್ಯುಪಾಶವು ಬಂದು ನಿನ್ನ ಕುತ್ತಿಗೆಗೆ ಸುತ್ತಿರುವುದು ನನಗೆ ಕಾಣುತ್ತಿದೆ! ಇಂಥ ವಿಪತ್ತಿನ ಕಾಲ ನಿನಗೆ ಬಂದಿದ್ದರೂ ನಿರ್ಭಯನಾಗಿರುವೆಯಲ್ಲ! ಚಿನ್ನದ ಮರಗಳು ನಿನಗೆ ಕಾಣಿಸುತ್ತಿರಬೇಕು! ರಕ್ತಮಯವಾಗಿ ಹರಿಯುವ ಘೋರವಾದ ವೈತರಣೀ ನದಿಯು ಗೋಚರಿಸುತ್ತಿರಬೇಕು! (೧೮-೧೯). ಭೀಕರವಾದ ಅಸಿಪತ್ರವನ ವೆಂಬ ನರಕವು ನಿನ್ನ ಕಣ್ಣೆದುರಿಗಿರಬೇಕು! ಸುಡುವ ಚಿನ್ನದ ಹೂಗಳಿಂದಲೂ ವೈಡೂರ್ಯದ ಎಲೆಗಳಿಂದಲೂ ಚೂಪಾದ ಕಬ್ಬಿಣದ ಮುಳ್ಳುಗಳಿಂದಲೂ ವ್ಯಾಪ್ತ ವಾಗಿ ಭೀಕರವಾದ ಶಾಲ್ಮಲೀವೃಕ್ಷವನ್ನು ನೀನು ಖಂಡಿತವಾಗಿ ನೋಡುವೆ! (೨೦).

ದ್ರಕ್ಷ್ಯಸೇ ಶಾಲ್ಮಲೀಂ ತೀಕ್ಷ್ಣಾಮಾಯಸೈಃ ಕಂಟಕೈಶ್ಚಿತಾಮ್ ।
ನ ಹಿ ತ್ವಮೀದೃಶಂ ಕೃತ್ವಾ ತಸ್ಯಾಲೀಕಂ ಮಹಾತ್ಮನಃ ॥ ೨೧

ಧರಿತುಂ ಶಕ್ಷ್ಯಸಿ ಚಿರಂ ವಿಷಂ ಪೀತ್ವೇವ ನಿರ್ಘೃಣ ।
ಬದ್ಧಸ್ತ್ವ ಕಾಲಪಾಶೇನ ದುರ್ನಿವಾರೇಣ ರಾವಣ ॥ ೨೨

ಕ್ವ ಗತೋ ಲಪ್ಸ್ಯಸೇ ಶರ್ಮ ಭರ್ತುರ್ಮಮ ಮಹಾತ್ಮನಃ ।
ನಿಮೇಷಾಂತರಮಾತ್ರೇಣ ವಿನಾ ಭ್ರಾತರಮಾಹವೇ । ೨೩

ರಾಕ್ಷಸಾ ನಿಹತಾ ಯೇನ ಸಹಸ್ರಾಣಿ ಚತುರ್ದಶ ।
ಸ ಕಥಂ ರಾಘವೋ ವೀರಃ ಸರ್ವಾಸ್ತ್ರಕುಶಲೋ ಬಲೀ ॥ ೨೪

ನ ತ್ವಾಂ ಹನ್ಯಾಚ್ಛರೈಸ್ತೀಕ್ಷ್ಣೈ ರಿಷ್ಟಭಾರ್ಯಾಪಹಾರಿಣಮ್ ।
ಏತಚ್ಚಾನ್ಯಚ್ಚ ಪರುಷಂ ವೈದೇಹೀ ರಾವಣಾಂಕಗಾ ॥ ೨೫

ಭಯಶೋಕಸಮಾವಿಷ್ಟಾ ಕರುಣಂ ವಿಲಲಾಪ ಹ ॥

ತಥಾ ಭೃಶಾರ್ತಾಂ ಬಹು ಚೈವ ಭಾಷಿಣೀಂ
ವಿಲಾಪಪೂರ್ವಂ ಕರುಣಂ ಚ ಭಾಮಿನೀಮ್ ।

---

ಮಹಾತ್ಮನಾದ ಶ್ರೀರಾಮನನ್ನು ಈ ರೀತಿಯಲ್ಲಿ ವಂಚಿಸಿ ನೀನು ಬದುಕಲಾರೆ. ವಿಷವನ್ನು ಕುಡಿದವನು ಬದುಕುವನೆ? ಕ್ರೂರಾತ್ಮ—ರಾವಣ, ದುರ್ನಿವಾರವಾದ ಯಮಪಾಶವು ನಿನ್ನನ್ನು ಬಿಗಿದಿದೆ (೨೧-೨೨). ಮಹಾತ್ಮನಾದ ನನ್ನ ಪತಿಯೊಡನೆ ವೈರವನ್ನು ಬೆಳೆಸಿದಮೇಲೆ, ಎಲ್ಲಿಗೆ ಹೋದರೆ ತಾನೇ ನಿನಗೆ ಕ್ಷೇಮವಾದೀತು? ಆತನು ತನ್ನ ತಮ್ಮನ ಸಹಾಯವನ್ನೂ ಬಯಸದೆ ಒಬ್ಬನೇ ಒಂದು ನಿಮಿಷದಲ್ಲಿ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನು ಧ್ವಂಸ ಮಾಡಿದ್ದಾನೆ. ವೀರಾಗ್ರಣಿಯಾದ ರಾಘವನು ಸರ್ವಾಸ್ತ್ರಕುಶಲ; ಅತ್ಯಂತ ಬಲಶಾಲಿ (೨೩-೨೪). ಅವನ ಪ್ರಿಯಪತ್ನಿಯನ್ನು ಅಪಹರಿಸಿದ ನಿನ್ನನ್ನು ತೀಕ್ಷ್ಣಾಸ್ತ್ರಗಳಿಂದ ಕೊಲ್ಲದೆ ಬಿಡುವನೆ?" ಈ ರೀತಿಯಲ್ಲಿ ವೈದೇಹಿಯು ಎಷ್ಟೋ ಪರುಷವಚನಗಳನ್ನಾಡಿದಳು. ಭಯಶೋಕಗಳಲ್ಲಿ ಮುಳುಗಿ ಎದೆಕರಗುವಂತೆ ಅತ್ತಳು (೨೫). ಆ ವನಿತೆಯು ಶೋಕಾರ್ತಳಾಗಿ ಬಹುಬಗೆಯಿಂದ ಹಲುಬುತ್ತ, ಎದೆ ಮಿಡಿಯುವಂತೆ ಅಳುತ್ತ, ಮನಕರಗುವಂತೆ ಮಿಸುಕುತ್ತ ವಿವಶಳಾಗಿ

ಜಹಾರ ಪಾಪಃ ಕರುಣಂ ವಿವೇಷ್ಟತೀಂ
ನೃಪಾತ್ಮಜಾಮಾಗತಗಾತ್ರವೇಪಥುಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಿಪಂಚಾಶಃ ಸರ್ಗಃ

---

## ಚತುಃಪಂಚಾಶಃ ಸರ್ಗಃ

### ಲಂಕಾಪ್ರಾಪಣಮ್

ಹ್ರಿಯಮಾಣಾ ತು ವೈದೇಹೀ ಕಂಚಿನ್ನಾಥಮಪಶ್ಯತೀ ।
ದದರ್ಶ ಗಿರಿಶೃಂಗಸ್ಥಾನ್ ಪಂಚ ವಾನರಪುಂಗವಾನ್ ॥ ೧

ತೇಷಾಂ ಮಧ್ಯೇ ವಿಶಾಲಾಕ್ಷೀ ಕೌಶೇಯಂ ಕನಕಪ್ರಭಮ್ ।
ಉತ್ತರೀಯಂ ವರಾರೋಹಾ ಶುಭಾನ್ಯಾಭರಣಾನಿ ಚ ॥ ೨

---

ನಡುಗುತ್ತಿದ್ದಳು. ಆದರೆ ಪಾಪಿಯಾದ ರಾವಣನು (ಅದೊಂದನ್ನೂ ಗಮನಿಸದೆ) ಆ ರಾಜಪುತ್ರಿಯನ್ನು ಒಯ್ದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತುಮೂರನೆಯ ಸರ್ಗ

---

## ಸರ್ಗ ೫೪

ರಾವಣನು ಸೀತೆಯನ್ನು ಲಂಕೆಗೆ ಒಯ್ಯುವುದು. ದಾರಿಯಲ್ಲಿ ಋಷ್ಯಮೂಕ
ಪರ್ವತದಮೇಲೆ ಕೆಲವು ವಾನರರನ್ನು ಕಂಡು, ಸೀತೆಯು ತನ್ನ
ಒಡವೆಗಳನ್ನು ಅವರ ಮಧ್ಯದಲ್ಲಿ ಎಸೆಯುವುದು

ರಾವಣನು ವೈದೇಹಿಯನ್ನು ಒಯ್ಯುತ್ತಿರುವಾಗ, ಅವಳಿಗೆ ತನ್ನನ್ನು ಉಳಿಸ ಬಲ್ಲ ಯಾವ ರಕ್ಷಕನೂ ಗೋಚರಿಸಲಿಲ್ಲ. ಕೆಳಗೆ ಋಷ್ಯಮೂಕಗಿರಿಯ ಶಿಖರ ದಲ್ಲಿ ಐವರು ವಾನರಶ್ರೇಷ್ಠರು ಕುಳಿತಿದ್ದುದು ಅವಳಿಗೆ ಗೋಚರಿಸಿತು (೧). ಆಗ ಸೀತೆಯು ಅವರನ್ನು ಕಣ್ಣರಳಿಸಿ ನೋಡುತ್ತ, ಚಿನ್ನದಂತೆ ಮಿನುಗುತ್ತಿದ್ದ ತನ್ನ

ಮುಮೋಚ ಯದಿ ರಾಮಾಯ ಶಂಸೇಯುರಿತಿ ಮೈಥಿಲೀ ।
ವಸ್ತ್ರಮುತ್ಸೃಜ್ಯ ತನ್ಮಧ್ಯೇ ನಿಕ್ಷಿಪ್ತಂ ಸಹಭೂಷಣಮ್ ॥ ೩
ಸಂಭ್ರಮಾತ್ತು ದಶಗ್ರೀವಸ್ತತ್ ಕರ್ಮ ನ ಸ ಬುದ್ಧವಾನ್ ।
ಪಿಂಗಾಕ್ಷಾಸ್ತಾಂ ವಿಶಾಲಾಕ್ಷೀಂ ನೇತ್ರೈ ರನಿಮಿಷ್ಯೈರಿವ ॥ ೪
ವಿಕ್ರೋಶಂತೀಂ ತಥಾ ಸೀತಾಂ ದದೃಶುರ್ವಾನರರ್ಷಭಾಃ ।
ಸ ಚ ಪಂಪಾಮತಿಕ್ರಮ್ಯ ಲಂಕಾಮಭಿಮುಖಃ ಪುರೀಮ್ ॥ ೫
ಜಗಾಮ ರುದತೀಂ ಗೃಹ್ಯ ವೈದೇಹೀಂ ರಾಕ್ಷಸೇಶ್ವರಃ ।
ತಾಂ ಜಹಾರ ಸುಸಂಹೃಷ್ಟೋ ರಾವಣೋ ಮೃತ್ಯುಮಾತ್ಮನಃ ॥ ೬
ಉತ್ಸಂಗೇನೇವ ಭುಜಗೀಂ ತೀಕ್ಷ್ಣದಂಷ್ಟ್ರಾಂ ಮಹಾವಿಷಾಮ್ ।
ವನಾನಿ ಸರಿತಃ ಶೈಲಾನ್ ಸರಾಂಸಿ ಚ ವಿಹಾಯಸಾ ॥ ೭
ಸ ಕ್ಷಿಪ್ರಂ ಸಮತೀಯಾಯ ಶರಶ್ಚಾಪಾದಿವ ಚ್ಯುತಃ ।
ತಿಮಿನಕ್ರನಿಕೇತಂ ತು ವರುಣಾಲಯಮಕ್ಷಯಮ್ ॥ ೮

---

ಉತ್ತರೀಯವನ್ನೂ ಉತ್ತಮವಾದ ಆಭರಣಗಳನ್ನೂ ಆ ವಾನರರ ಮಧ್ಯದಲ್ಲಿ ಎಸೆದಳು (೨). ಒಂದು ವೇಳೆ ದೈವಗತಿಯಿಂದ ಅವರು ಶ್ರೀರಾಮನಿಗೆ ತನ್ನ ವೃತ್ತಾಂತವನ್ನು ಹೇಳಬಹುದೆಂದು ಮೈಥಿಲಿಯ ಉದ್ದೇಶವಾಗಿತ್ತು. ಆದ್ದರಿಂದ ವಸ್ತ್ರದಲ್ಲಿ ಆಭರಣಗಳನ್ನು ಸುತ್ತಿ ಅವರ ಮಧ್ಯದಲ್ಲೆಸೆದಳು (೩). ಚಿತ್ತಕ್ಷೋಭ ದಿಂದ ತ್ವರೆಪಡುತ್ತಿದ್ದ ರಾವಣನಿಗೆ ಅದು ಗೊತ್ತಾಗಲಿಲ್ಲ. ಪಿಂಗಳನೇತ್ರರಾದ ಆ ವಾನರೋತ್ತಮರು, 'ರಾಮ! ರಾಮ!' ಎಂದು ಅರಚುತ್ತಿದ್ದ ವೈದೇಹಿ ಯನ್ನು ಎವೆಯಿಕ್ಕದೆ ಕಣ್ಣಿಟ್ಟು ನೋಡಿದರು (೪). ರಾವಣನು ಪಂಪಾ ಸರೋವರವನ್ನು ದಾಟಿ ಲಂಕಾಭಿಮುಖನಾಗಿ ಹೋಗುತ್ತಿದ್ದನು. ವೈದೇಹಿಯು ತನ್ನ ವಶಳಾದಳೆಂದು ಆ ರಾಕ್ಷಸೇಶ್ವರನು ಹರ್ಷದಿಂದ ಉಬ್ಬಿದ್ದನು. ಆ ರಾವಣನು ತನ್ನ ಮೃತ್ಯುವನ್ನು ಒಯ್ಯುವಂತೆ, ಅಳುತ್ತಿದ್ದ ಸೀತೆಯನ್ನು ತನ್ನೊಡನೆ ಒಯ್ದನು (೫-೬). ಘೋರವಿಷಪೂರ್ಣವಾದ ತೀಕ್ಷ್ಣದಂತಗಳಿರುವ ಸರ್ಪಿಣಿಯನ್ನು ತೊಡೆಯಮೇಲೆ ಇರಿಸಿಕೊಳ್ಳುವಂತೆ ಸೀತೆಯನ್ನು ಅವಚಿ ಹಿಡಿದು, ರಾವಣನು ವನಗಳು, ಹೊಳೆಗಳು, ಬೆಟ್ಟಗಳು ಮತ್ತು ಕೊಳಗಳನ್ನು ಆಕಾಶಮಾರ್ಗದಲ್ಲಿ ದಾಟಿಹೋದನು (೭). ಧನುಸ್ಸಿನಿಂದ ಚಿಮ್ಮಿಹೋದ ಬಾಣವೋ ಎಂಬಂತೆ

ಸರಿತಾಂ ಶರಣಂ ಗತ್ವಾ ಸಮತೀಯಾಯ ಸಾಗರಮ್ ।
ಸಂಭ್ರಮಾತ್ ಪರಿವೃತ್ತೋರ್ಮಿ ರುದ್ಧಮೀನಮಹೋರಗಃ ॥ ೯

ವೈದೇಹ್ಯಾಂ ಹ್ರಿಯಮಾಣಾಯಾಂ ಬಭೂವ ವರುಣಾಲಯಃ ।
ಅಂತರಿಕ್ಷಗತಾ ವಾಚಃ ಸಸೃಜುಶ್ಚಾರಣಾಸ್ತದಾ ॥ ೧೦

ಏತದಂತೋ ದಶಗ್ರೀವ ಇವ ಸಿದ್ಧಾಸ್ತದಾಽಬ್ರುವನ್ ।
ಸ ತು ಸೀತಾಂ ವಿವೇಷ್ಟಂತೀಮಂಕೇನಾದಾಯ ರಾವಣಃ ॥ ೧೧

ಪ್ರವಿವೇಶ ಪುರೀಂ ಲಂಕಾಂ ರೂಪಿಣೀಂ ಮೃತ್ಯುಮಾತ್ಮನಃ ।
ಸೋಽಭಿಗಮ್ಯ ಪುರೀಂ ಲಂಕಾಂ ಸುವಿಭಕ್ತಮಹಾಪಥಾಮ್ ॥ ೧೨

ಸಂರೂಢಕಕ್ಷ್ಯಾಬಹುಲಂ ಸ್ವಮಂತಃಪುರಮಾವಿಶತ್ ।
ತತ್ರ ತಾಮಸಿತಾಪಾಂಗೀಂ ಶೋಕಮೋಹಪರಾಯಣಾಮ್ ॥ ೧೩

---

ಮಹಾವೇಗದಲ್ಲಿ ಅವನು ಹೋಗುತ್ತಿದ್ದನು. ಮುಂದೆ ತಿಮಿಗಳಿಗೂ ಮೊಸಳೆಗಳಿಗೂ ಆವಾಸಸ್ಥಾನವಾದ ಸಮುದ್ರವು ಕಾಣಿಸಿತು. ವಿವಿಧ ನದಿಗಳು ಬಂದು ಸೇರುವ ವಿಶಾಲವಾದ ಆ ಸಮುದ್ರವನ್ನು ರಾವಣನು ದಾಟಿಹೋದನು (೮). ಹೀಗೆ ರಾವಣನು ವೈದೇಹಿಯನ್ನು ಅಪಹರಿಸಿಕೊಂಡು ಹೋಗುವಾಗ, ಸಮುದ್ರರಾಜನಿಗೆ ಭಯವಾಯಿತು. ಅಲೆಗಳು ಅಡಗಿದವು. ಮೀನುಗಳೂ ಮಹಾಸರ್ಪಗಳೂ ಸಂಚರಿಸದೆ ಅವಿತುಕೊಂಡವು (೯). ಅಂತರಿಕ್ಷದಲ್ಲಿದ್ದ ಸಿದ್ಧರೂ ಚಾರಣರೂ "ಇಲ್ಲಿಗೆ ದಶಕಂಠನ ಅವತಾರ ಮುಗಿಯಿತು ! " ಎಂದು ಉದ್ಗರಿಸಿದರು. ಹೊರಳಾಡುತ್ತಿದ್ದ ಸೀತೆಯನ್ನು ರಾವಣನು ಕಂಕುಳಲ್ಲಿ ಹಿಡಿದು, ಸಾಕ್ಷಾತ್ ಮೃತ್ಯುದೇವತೆಯನ್ನು ಮನೆಗೆ ತರುವಂತೆ ಲಂಕಾನಗರವನ್ನು ಪ್ರವೇಶಿಸಿದನು (೧೦-೧೧). ವಿಶಾಲವಾದ ಬೀದಿಗಳಿಂದ ರಮಣೀಯವಾದ ಲಂಕೆಯನ್ನು ಪ್ರವೇಶಿಸಿ, ಜನನಿಬಿಡವಾದ ಕಕ್ಷ್ಯಗಳಿರುವ ತನ್ನ ಅಂತಃಪುರವನ್ನು ಹೊಕ್ಕನು. ಅವನು ಅಂತಃಪುರದ ಒಂದು ಕಡೆಯಲ್ಲಿ ಸೀತೆಯನ್ನಿರಿಸಿದನು. ಅವಳು ಶೋಕದಲ್ಲಿ ಮುಳುಗಿ ದಿಕ್ಕುಗಾಣದೆ ಎಚ್ಚರದಪ್ಪುತ್ತಿದ್ದಳು. ರಾಕ್ಷಸಭವನದಲ್ಲಿ ಆ ಸುಂದರಿಯು ಮಯನಿರ್ಮಿತವಾದ ಒಂದು ರಾಕ್ಷಸ ಮಾಯೆಯೋ ಎಂಬಂತೆ ಕಂಗೊಳಿಸಿದಳು.

ನಿದಧೇ ರಾವಣಃ ಸೀತಾಂ ಮಯೋ ಮಾಯಾಮಿವಾಸುರೀಮ್ ।
ಅಬ್ರವೀಚ್ಚ ದಶಗ್ರೀವಃ ಪಿಶಾಚೀರ್ಘೋರದರ್ಶನಾಃ ॥ ೧೪

ಯಥಾ ನೇಮಾಂ ಪುಮಾನ್ ಸ್ತ್ರೀ ವಾ ಸೀತಾಂ ಪಶ್ಯತ್ಯಸಂಮತಃ ।
ಮುಕ್ತಾಮಣಿಸುವರ್ಣಾನಿ ವಸ್ತ್ರಾಣ್ಯಾಭರಣಾನಿ ಚ ॥ ೧೫

ಯದ್ಯದಿಚ್ಛೇತ್ತದೈವಾಸ್ಯಾ ದೇಯಂ ಮಚ್ಛಂದತೋ ಯಥಾ ।
ಯಾ ಚ ವಕ್ಷ್ಯತಿ ವೈದೇಹೀಂ ವಚನಂ ಕಿಂಚಿದಪ್ರಿಯಮ್ ॥ ೧೬

ಅಜ್ಞಾನಾದ್ಯದಿ ವಾ ಜ್ಞಾನಾನ್ನ ತಸ್ಯಾ ಜೀವಿತಂ ಪ್ರಿಯಮ್ ।
ತಥೋಕ್ತ್ವಾ ರಾಕ್ಷಸೀಸ್ತಾಸ್ತು ರಾಕ್ಷಸೇಂದ್ರಃ ಪ್ರತಾಪವಾನ್ ॥ ೧೭

ನಿಷ್ಕ್ರಮ್ಯಾಂತಃಪುರಾತ್ತಸ್ಮಾತ್ ಕಿಂ ಕೃತ್ಯಮಿತಿ ಚಿಂತಯನ್ ।
ದದರ್ಶಾಷ್ಟೌ ಮಹಾವೀರ್ಯಾನ್ ರಾಕ್ಷಸಾನ್ ಪಿಶಿತಾಶನಾನ್ ॥

ಸ ತಾನ್ ದೃಷ್ಟ್ವಾ ಮಹಾವೀರ್ಯೋ ವರದಾನೇನ ಮೋಹಿತಃ ।
ಉವಾಚೈತಾನಿದಂ ವಾಕ್ಯಂ ಪ್ರಶಸ್ಯ ಬಲವೀರ್ಯತಃ ॥ ೧೯

---

ಆಮೇಲೆ ರಾವಣನು ಘೋರಾಕೃತಿಯ ಪಿಶಾಚಿಗಳಂತಿದ್ದ ಕೆಲವು ರಾಕ್ಷಸಿಯರನ್ನು ಕರೆದು ಹೀಗೆ ಆಜ್ಞಾಪಿಸಿದನು (೧೨-೧೪): "ಎಲೈ ರಾಕ್ಷಸಿಯರೆ, ಈ ಸೀತೆಗೆ ನೀವು ಕಾವಲಾಗಿ ರಕ್ಷಿಸುತ್ತಿರಬೇಕು. ನನ್ನ ಅನುಮತಿಯಿಲ್ಲದೆ ಇನ್ನೊಬ್ಬ ಪುರುಷನಾಗಲಿ ಸ್ತ್ರೀಯಾಗಲಿ ಇವಳನ್ನು ನೋಡಕೂಡದು. ಈ ಸೀತೆಯು ಮುತ್ತು, ರತ್ನ, ಒಡವೆ, ವಸ್ತ್ರ—ಯಾವುದನ್ನು ಎಷ್ಟು ಕೇಳಿದರೂ ತಂದು ಕೊಡಿರಿ. ಅದಕ್ಕೆ ನನ್ನ ಒಪ್ಪಿಗೆಯುಂಟು (೧೫–೧೬). ತಿಳಿದೋ ತಿಳಿಯದೆಯೋ ಯಾವಳೂ ಸೀತೆಗೆ ಅಪ್ರಿಯವಾದ ಒಂದು ಮಾತನ್ನೂ ಆಡತಕ್ಕದ್ದಲ್ಲ. ಹಾಗೆ ಯಾವಳಾದರೂ ಮಾತನಾಡಿದರೆ, ಅವಳು ತನ್ನ ಪ್ರಾಣದ ಆಸೆಯನ್ನು ತೊರೆದಿರಬೇಕು !" ಎಂದು ಆಜ್ಞಾಪಿಸಿದನು (೧೭). ರಾಕ್ಷಸೇಂದ್ರನು ಈ ರೀತಿಯಲ್ಲಿ ಆಜ್ಞೆಯನ್ನಿತ್ತು ಅಂತಃಪುರದಿಂದ ಹೊರಟನು. ಅವನು ಮುಂದಿನ ಕೃತ್ಯವೇನೆಂದು ಚಿಂತಿಸಿ ಪರಾಕ್ರಮಿಗಳೂ ಮಾಂಸಾಹಾರಿಗಳೂ ಆದ ಎಂಟು ಮಂದಿ ರಾಕ್ಷಸರನ್ನು ಕಂಡನು (೧೮). ತನಗೆ ವರಬಲವಿದೆಯೆಂದು ಉನ್ಮತ್ತನಾದ ರಾವಣನು ಆ ರಾಕ್ಷಸರ ಬಲಪರಾಕ್ರಮಗಳನ್ನು ಹೊಗಳಿ ಹೀಗೆಂದನು : "ಎಲೈ

ನಾನಾಪ್ರಹರಣಾಃ ಕ್ಷಿಪ್ರಮಿತೋ ಗಚ್ಛತ ಸತ್ವರಾಃ ।
ಜನಸ್ಥಾನಂ ಹತಸ್ಥಾನಂ ಭೂತಪೂರ್ವಂ ಖರಾಲಯಮ್ ॥ ೨೦

ತತ್ರೋಷ್ಯತಾಂ ಜನಸ್ಥಾನೇ ಶೂನ್ಯೇ ನಿಹತರಾಕ್ಷಸೇ ।
ಪೌರುಷಂ ಬಲಮಾಶ್ರಿತ್ಯ ತ್ರಾಸಮುತ್ಸೃಜ್ಯ ದೂರತಃ ॥ ೨೧

ಬಲಂ ಹಿ ಸುಮಹದ್ಯನ್ಮೇ ಜನಸ್ಥಾನೇ ನಿವೇಶಿತಮ್ ।
ಸದೂಷಣಖರಂ ಯುದ್ಧೇ ಹತಂ ರಾಮೇಣ ಸಾಯಕೈಃ ॥ ೨೨

ತತ್ರ ಕ್ರೋಧೋ ಮಮಾಮರ್ಷಾಧ್ಧೈರ್ಯಸ್ಯೋಪರಿ ವರ್ಧತೇ ।
ವೈರಂ ಚ ಸುಮಹಜ್ಜಾತಂ ರಾಮಂ ಪ್ರತಿ ಸುದಾರುಣಮ್ ॥ ೨೩

ನಿರ್ಯಾತಯಿತುಮಿಚ್ಛಾಮಿ ತಚ್ಚ ವೈರಮಹಂ ರಿಪೋಃ ।
ನ ಹಿ ಲಪ್ಸ್ಯಾಮ್ಯಹಂ ನಿದ್ರಾಮಹತ್ವಾ ಸಂಯುಗೇ ರಿಪುಮ್ ॥ ೨೪

ತಂ ತ್ವಿದಾನೀಮಹಂ ಹತ್ವಾ ಖರದೂಷಣಘಾತಿನಮ್ ।
ರಾಮಂ ಶರ್ಮೋಪಲಪ್ಸ್ಯಾಮಿ ಧನಂ ಲಬ್ಧ್ವೇವ ನಿರ್ಧನಃ ॥ ೨೫

---

ರಾಕ್ಷಸರೆ, ನೀವು ವಿವಿಧಾಯುಧಗಳನ್ನು ಧರಿಸಿ ಕೂಡಲೆ ಜನಸ್ಥಾನಕ್ಕೆ ಹೋಗ ತಕ್ಕದ್ದು. ಜನಸ್ಥಾನವು ಈಗ ಹತಸ್ಥಾನವಾಗಿದೆ. ಹಿಂದೆ ಖರನಿದ್ದ ಸ್ಥಳವದು (೧೯-೨೦). ಅಲ್ಲಿದ್ದ ರಾಕ್ಷಸರು ಹತರಾಗಿದ್ದಾರೆ. ಆ ನಿರ್ಜನಪ್ರದೇಶದಲ್ಲಿ ನೀವು ವಾಸವಾಗಿರತಕ್ಕದ್ದು. ಅಂಜಿಕೆಯನ್ನು ದೂರವಿಟ್ಟು ನಿಮ್ಮ ಪೌರುಷವನ್ನು ನೆಚ್ಚಿ ಕೊಂಡಿರಬೇಕು. ನಾನು ಜನಸ್ಥಾನದಲ್ಲಿರಿಸಿದ್ದ ಮಹಾಸೇನೆಯೂ ಖರದೂಷಣರೂ ಯುದ್ಧದಲ್ಲಿ ಹತರಾಗಿದ್ದಾರೆ. ರಾಮನೆಂಬವನು ಅಸ್ತ್ರಗಳಿಂದ ಅವರನ್ನು ಕೊಂದಿದ್ದಾನೆ (೨೧-೨೨). ಆ ಕೃತ್ಯದಿಂದ ನನ್ನ ಸಹನೆ ತಪ್ಪಿದೆ. ನನ್ನ ಸ್ಥಿರವಾದ ತಾಳ್ಮೆಯನ್ನು ಮೀರಿ ರೋಷ ಉಕ್ಕುತ್ತಿದೆ. ರಾಮನಿಗೂ ನನಗೂ ಉಲ್ಬಣವಾದ ವೈರವು ಬೆಳೆಯಿತು. ವೈರಕ್ಕೆ ತಕ್ಕಂತೆ ಆ ಶತ್ರುವಿನಮೇಲೆ ಸೇಡು ತೀರಿಸಿಕೊಳ್ಳ ಬೇಕೆಂದು ಉದ್ದೇಶಿಸಿದ್ದೇನೆ. ಆ ವೈರಿಯನ್ನು ಕಾಳಗದಲ್ಲಿ ಕೊಂದಲ್ಲದೆ ನನಗೆ ನಿದ್ರೆ ಬರದು (೨೩-೨೪). ದರಿದ್ರನಿಗೆ ಐಶ್ವರ್ಯವು ಲಭಿಸಿದಾಗ ಸಂತೋಷ. ಹಾಗೆಯೇ ಖರದೂಷಣರನ್ನು ಕೊಂದಿರತಕ್ಕ ರಾಮನನ್ನು ವಧಿಸಿದಾಗಲೇ ನನಗೆ

ಜನಸ್ಥಾನೇ ವಸದ್ಭಿಸ್ತು ಭವದ್ಭೀ ರಾಮಮಾಶ್ರಿತಾ ।
ಪ್ರವೃತ್ತಿರುಪನೇತವ್ಯಾ ಕಿಂ ಕರೋತೀತಿ ತತ್ತ್ವತಃ ॥ ೨೬

ಅಪ್ರಮಾದಾಚ್ಚ ಗಂತವ್ಯಂ ಸರ್ವೈರಪಿ ನಿಶಾಚರೈಃ ।
ಕರ್ತವ್ಯಶ್ಚ ಸದಾ ಯತ್ನೋ ರಾಘವಸ್ಯ ವಧಂ ಪ್ರತಿ ॥ ೨೭

ಯುಷ್ಮಾಕಂ ಚ ಬಲಜ್ಞೋಽಹಂ ಬಹುಶೋ ರಣಮೂರ್ಧನಿ ।
ಅತಶ್ಚಾಸ್ಮಿನ್ ಜನಸ್ಥಾನೇ ಮಯಾ ಯೂಯಂ ನಿಯೋಜಿತಾಃ ॥

ತತಃ ಪ್ರಿಯಂ ವಾಕ್ಯಮುಪೇತ್ಯ ರಾಕ್ಷಸಾ
ಮಹಾರ್ಥಮಷ್ಟಾವಭಿವಾದ್ಯ ರಾವಣಮ್ ।
ವಿಹಾಯ ಲಂಕಾಂ ಸಹಿತಾಃ ಪ್ರತಸ್ಥಿರೇ
ಯತೋ ಜನಸ್ಥಾನಮಲಕ್ಷ್ಯದರ್ಶನಾಃ ॥. ೨೯

ತತಸ್ತು ಸೀತಾಮುಪಲಭ್ಯ ರಾವಣಃ
ಸುಸಂಪ್ರಹೃಷ್ಟಃ ಪರಿಗೃಹ್ಯ ಮೈಥಿಲೀಮ್ ।

---

ನೆಮ್ಮದಿ (೨೫). ಆದ್ದರಿಂದ ನೀವು ಜನಸ್ಥಾನದಲ್ಲಿ ವಾಸವಾಗಿದ್ದು, ರಾಮನು ಈಗ ಏನುಮಾಡುತ್ತಿದ್ದಾನೆಂದು ಸರಿಯಾಗಿ ತಿಳಿದು, ನನಗೆ ಸುದ್ದಿಯನ್ನು ಮುಟ್ಟಿಸುತ್ತಿರಬೇಕು. ನೀವೆಲ್ಲರೂ ಬಲು ಎಚ್ಚರಿಕೆಯಿಂದ ಆ ಪ್ರಾಂತದಲ್ಲಿ ಸಂಚರಿಸಬೇಕು ; ಮತ್ತು ರಾಮನನ್ನು ಕೊಲ್ಲುವುದಕ್ಕಾಗಿ ಸದಾ ಹವಣಿಸುತ್ತಿರಬೇಕು (೨೬-೨೭), ಎಲೈ ರಾಕ್ಷಸರೆ, ನೀವು ಎಷ್ಟು ಪರಾಕ್ರಮಿಗಳೆಂಬುದು ನನಗೆ ಗೊತ್ತಿದೆ. ಎಷ್ಟೋಸಲ ರಣರಂಗದಲ್ಲಿ ನಿಮ್ಮ ಸಾಹಸವನ್ನು ಕಂಡಿದ್ದೇನೆ. ಆದ್ದರಿಂದಲೇ ಜನಸ್ಥಾನಕ್ಕೆ ಹೋಗಲು ನಿಮ್ಮನ್ನು ನಿಯೋಜಿಸುತ್ತಿದ್ದೇನೆ" ಎಂದು ಹೇಳಿದನು (೨೮). ರಾವಣನು ತಮ್ಮ ವಿಷಯದಲ್ಲಿ ದೊಡ್ಡಮಾತನ್ನಾಡಿದನೆಂದು ಆ ರಾಕ್ಷಸರಿಗೆ ಸಂತೋಷವಾಯಿತು. ಆ ಎಂಟು ಮಂದಿ ರಾಕ್ಷಸರೂ ರಾವಣನಿಗೆ ನಮಸ್ಕರಿಸಿ ಆಯುಧಗಳೊಡನೆ ಲಂಕೆಯಿಂದ ಹೊರಟರು ; ಯಾರಿಗೂ ಕಾಣಿಸಿಕೊಳ್ಳದಂತೆ ಜನಸ್ಥಾನಕ್ಕೆ ಹೋದರು (೨೯). ಮಿಥಿಲೇಶ್ವರನ ಪುತ್ರಿಯಾದ ಸೀತೆಯು ಕೈಸೇರಿದಳೆಂದು ರಾವಣನು ಹರ್ಷದಿಂದ ಉಬ್ಬಿದನು. ಈ

ಪ್ರಸಜ್ಯ ರಾಮೇಣ ಚ ವೈರಮುತ್ತಮಂ
ಬಭೂವ ಮೋಹಾನ್ಮುದಿತಃ ಸ ರಾಕ್ಷಸಃ ॥ ೩೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುಃಪಂಚಾಶಃ ಸರ್ಗಃ

---

## ಪಂಚಪಂಚಾಶಃ ಸರ್ಗಃ

### ಸೀತಾವಿಲೋಭನೋದ್ಯಮಃ

ಸಂದಿಶ್ಯ ರಾಕ್ಷಸಾನ್ ಘೋರಾನ್ ರಾವಣೋಽಷ್ಟೌ ಮಹಾಬಲಾನ್ ।
ಆತ್ಮಾನಂ ಬುದ್ಧಿವೈಕ್ಲವ್ಯಾತ್ ಕೃತಕೃತ್ಯಮಮನ್ಯತ ॥ ೧

ಸ ಚಿಂತಯಾನೋ ವೈದೇಹೀಂ ಕಾಮಬಾಣಪ್ರಪೀಡಿತಃ ।
ಪ್ರವಿವೇಶ ಗೃಹಂ ರಮ್ಯಂ ಸೀತಾಂ ದ್ರಷ್ಟುಮಭಿತ್ವರನ್ ॥ ೨

ಸ ಪ್ರವಿಶ್ಯ ತು ತದ್ವೇಶ್ಮ ರಾವಣೋ ರಾಕ್ಷಸಾಧಿಪಃ ।
ಅಪಶ್ಯದ್ರಾಕ್ಷಸೀಮಧ್ಯೇ ಸೀತಾಂ ಶೋಕಪರಾಯಣಾಮ್ ॥ ೩

---

ಪ್ರಕಾರವಾಗಿ ಶ್ರೀರಾಮನೊಡನೆ ಭೀಕರವಾದ ವೈರವನ್ನು ಬೆಳೆಸಿ, ಆ ರಾಕ್ಷಸನು ಅಜ್ಞಾನವಶನಾಗಿ ಸಂತೋಷಪಡುತ್ತಿದ್ದನು ! (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತುನಾಲ್ಕನೆಯ ಸರ್ಗ

---

## ಸರ್ಗ ೫೫

### ರಾವಣನು ಸೀತೆಗೆ ತನ್ನ ಅರಮನೆಯ ವೈಭವವನ್ನು ತೋರಿಸಿ ತನ್ನನ್ನು ವರಿಸುವಂತೆ ಕೇಳಿಕೊಳ್ಳುವುದು

ಈ ರೀತಿಯಲ್ಲಿ ರಾವಣನು ಬಲಾಢ್ಯರಾದ ಎಂಟು ಮಂದಿ ರಾಕ್ಷಸರನ್ನು ಜನಸ್ಥಾನಕ್ಕೆ ಕಳಿಸಿದನು. ತಾನು ಕೃತಕೃತ್ಯನಾದೆನೆಂದು ಬುದ್ಧಿ ದೌರ್ಬಲ್ಯದಿಂದ ತಿಳಿದುಕೊಂಡನು. ಮತ್ತೆ ವೈದೇಹಿಯನ್ನೇ ಚಿಂತಿಸುತ್ತ ಕಾಮಪೀಡಿತನಾಗಿ, ಅವಳನ್ನು ನೋಡಬೇಕೆಂದು ವೈದೇಹಿಯಿದ್ದ ರಮ್ಯವಾದ ಅಂತಃಪುರಕ್ಕೆ ಧಾವಿಸಿದನು (೧-೨). ರಾಕ್ಷಸೇಶ್ವರನು ಆ ಗೃಹವನ್ನು ಪ್ರವೇಶಿಸಿ ರಾಕ್ಷಸಿಯರ ಮಧ್ಯದಲ್ಲಿ ಶೋಕಾರ್ತ

ಅಶ್ರುಪೂರ್ಣಮುಖೀಂ ದೀನಾಂ ಶೋಕಭಾರಾಭಿಪೀಡಿತಾಮ್ ।
ವಾಯುವೇಗೈರಿವಾಕ್ರಾಂತಾಂ ಮಜ್ಜಂತೀಂ ನಾವಮರ್ಣವೇ ॥ ೪

ಮೃಗಯೂಥಪರಿಭ್ರಷ್ಟಾಂ ಮೃಗೀಂ ಶ್ವಭಿರಿವಾವೃತಾಮ್ ।
ಅಧೋಮುಖಮುಖೀಂ ಸೀತಾಮಭ್ಯೇತ್ಯ ಚ ನಿಶಾಚರಃ ॥ ೫

ತಾಂ ತು ಶೋಕಪರಾಂ ದೀನಾಮವಶಾಂ ರಾಕ್ಷಸಾಧಿಪಃ ।
ಸ ಬಲಾದ್ದರ್ಶಯಾಮಾಸ ಗೃಹಂ ದೇವಗೃಹೋಪಮಮ್ ॥ ೬

ಹರ್ಮ್ಯಪ್ರಾಸಾದಸಂಬಾಧಂ ಸ್ತ್ರೀಸಹಸ್ರನಿಷೇವಿತಮ್ ।
ನಾನಾಪಕ್ಷಿಗಣೈರ್ಜುಷ್ಟಂ ನಾನಾರತ್ನಸಮನ್ವಿತಮ್ ॥ ೭

ದಾಂತಕೈಸ್ತಾಪನೀಯೈಶ್ಚ ಸ್ಫಾಟಿಕೈ ರಾಜತೈರಪಿ ।
ವಜ್ರವೈಡೂರ್ಯಚಿತ್ರೈಶ್ಚ ಸ್ತಂಭೈರ್ದೃಷ್ಟಿ ಮನೋಹರೈಃ ॥ ೮

---

ಳಾಗಿದ್ದ ಸೀತಾದೇವಿಯನ್ನು ಕಂಡನು. ದೈನ್ಯದಿಂದ ಕುಳಿತಿದ್ದ ಅವಳ ಮುಖದ ಮೇಲೆ ಕಣ್ಣೀರು ಹರಿಯುತ್ತಿತ್ತು. ಹೊರಲಾರದ ಶೋಕದ ಹೊರೆ ಅವಳನ್ನು ನುಗ್ಗುಮಾಡಿತ್ತು. ಬಿರುಗಾಳಿಯ ರಭಸಕ್ಕೆ ಹೊಯ್ದಾಡಿ ಕಡಲಲ್ಲಿ ಮುಳುಗುತ್ತಿರುವ ನಾವೆಯಂತಿದ್ದಳು (೩-೪). ಹಿಂಡಿನಿಂದ ತಪ್ಪಿಸಿಕೊಂಡ ಹರಿಣಿಯನ್ನು ನಾಯಿಗಳು ಮುತ್ತಿಕೊಂಡಂತೆ, ಜಾನಕಿಯನ್ನು ರಾಕ್ಷಸಿಯರು ಮುತ್ತಿಕೊಂಡಿದ್ದರು. ಆಕೆ ತಲೆತಗ್ಗಿಸಿ ದುಃಖಿಸುತ್ತ ಕುಳಿತಿರಲು, ರಾವಣನು ಬಂದನು (೫). ಪರಾಧೀನಳಾಗಿ ದೈನ್ಯದಿಂದ ದುಃಖಿಸುತ್ತಲಿದ್ದ ವೈದೇಹಿಯನ್ನು ಒತ್ತಾಯದಿಂದ ರಾವಣನು ಕರೆದೊಯ್ದು, ದೇವಭವನದಂತಿದ್ದ ತನ್ನ ಅರಮನೆಯನ್ನು ತೋರಿಸಿದನು (೬). ಉತ್ತಮ ಗೃಹಗಳಿಂದಲೂ ವಿಶಾಲವಾದ ಭವ್ಯಭವನಗಳಿಂದಲೂ ನಿಬಿಡವಾದ ಅರಮನೆಯ ವಿವಿಧ ಪ್ರದೇಶಗಳನ್ನು ತೋರಿಸಿದನು. ಸಾವಿರಾರು ಸ್ತ್ರೀಯರು ಅಲ್ಲಿ ಸುತ್ತಾಡುತ್ತಿದ್ದರು. ನಾನಾಬಗೆಯ ಪಕ್ಷಿಗಳನ್ನು ಅಲ್ಲಿ ಸಾಕಿದ್ದರು. ವಿವಿಧ ರತ್ನಗಳಿಂದ ಭವನಗಳು ಅಲಂಕೃತವಾಗಿದ್ದವು (೭). ದಂತ, ಚಿನ್ನ, ಸ್ಫಟಿಕ, ಬೆಳ್ಳಿ, ವಜ್ರ, ವೈಡೂರ್ಯಾದಿಗಳಿಂದ ಮನೋಹರವಾದ ಕಂಬಗಳಿಂದ ಆ ಭವನಗಳು ನಿರ್ಮಿತವಾಗಿದ್ದವು. ದಿವ್ಯದುಂದುಭಿಗಳು ಮೊಳಗುತ್ತಿದ್ದವು. ಅಪರಂಜಿಯ ತೋರಣಗಳು ಮನೋಜ್ಞವಾಗಿದ್ದವು.

ದಿವ್ಯದುಂದುಭಿನಿರ್ಹ್ರಾದಂ ತಪ್ತಕಾಂಚನತೋರಣಮ್ ।
ಸೋಪಾನಂ ಕಾಂಚನಂ ಚಿತ್ರಮಾರುರೋಹ ತಯಾ ಸಹ ॥ ೯

ದಾಂತಕಾ ರಾಜತಾಶ್ಚೈವ ಗವಾಕ್ಷಾಃ ಪ್ರಿಯದರ್ಶನಾಃ ।
ಹೇಮಜಾಲಾವೃತಾಶ್ಚಾಸಂಸ್ತತ್ರ ಪ್ರಾಸಾದಪಂಕ್ತಯಃ ॥ ೧೦

ಸುಧಾಮಣಿವಿಚಿತ್ರಾಣಿ ಭೂಮಿಭಾಗಾನಿ ಸರ್ವಶಃ ।
ದಶಗ್ರೀವಃ ಸ್ವಭವನೇ ಪ್ರಾದರ್ಶಯತ ಮೈಥಿಲೀಮ್ ॥ ೧೧

ದೀರ್ಘಿಕಾಃ ಪುಷ್ಕರಿಣ್ಯಶ್ಚ ನಾನಾವೃಕ್ಷಸಮನ್ವಿತಾಃ ।
ರಾವಣೋ ದರ್ಶಯಾಮಾಸ ಸೀತಾಂ ಶೋಕಪರಾಯಣಾಮ್ ॥ ೧೨

ದರ್ಶಯಿತ್ವಾ ತು ವೈದೇಹ್ಯಾಃ ಕೃತ್ಸ್ನಂ ತದ್ಭವನೋತ್ತಮಮ್ ।
ಉವಾಚ ವಾಕ್ಯಂ ಪಾಪಾತ್ಮಾ ಸೀತಾಂ ಲೋಭಿತುಮಿಚ್ಛಯಾ ॥ ೧೩

ದಶರಾಕ್ಷಸಕೋಟ್ಯಶ್ಚ ದ್ವಾವಿಂಶತಿರಥಾಪರಾಃ ।
ತೇಷಾಂ ಪ್ರಭುರಹಂ ಸೀತೇ ಸರ್ವೇಷಾಂ ಭೀಮಕರ್ಮಣಾಮ್ ॥ ೧೪

---

ಅವೆಲ್ಲವನ್ನೂ ತೋರಿಸುವುದಕ್ಕಾಗಿ ರಾವಣನು ಸೀತೆಯನ್ನು ಬಲಾತ್ಕಾರವಾಗಿ ಕರೆದುಕೊಂಡು ಕಾಂಚನಮಯವಾದ ವಿಚಿತ್ರ ಸೋಪಾನವನ್ನು ಹತ್ತಿ ಹೋದನು (೮-೯). ಅಲ್ಲಿ ಆನೆಯ ದಂತಗಳಿಂದಲೂ ಬೆಳ್ಳಿಯಿಂದಲೂ ರಚಿಸಲ್ಪಟ್ಟ ಸುಂದರವಾದ ಗವಾಕ್ಷಗಳಿದ್ದವು. ಬಂಗಾರದಿಂದ ಅಲಂಕರಿಸಿದ ಕಿಟಕಿಗಳಿದ್ದವು. ಉಪ್ಪರಿಗೆಯ ಸಾಲುಗಳು ವಿಸ್ತರಿಸಿದ್ದವು (೧೦). ಸುಣ್ಣವನ್ನು ತೊಡೆದು ನಾನಾ ರತ್ನಗಳಿಂದ ಭೂಷಿಸಿದ್ದ ವಿವಿಧ ಸ್ಥಳಗಳಿದ್ದವು. ರಾವಣನು ತನ್ನ ಅರಮನೆಯ ಆ ವೈಭವವೆಲ್ಲವನ್ನೂ ಮೈಥಿಲಿಗೆ ಪ್ರದರ್ಶಿಸಿದನು. ಸ್ವಚ್ಛವಾದ ನೀರಿನ ಕೊಳಗಳನ್ನೂ ತಾವರೆಗಳಿರುವ ಪುಷ್ಕರಿಣಿಗಳನ್ನೂ ಸೀತೆಗೆ ತೋರಿಸಿದನು. ಅವಳಾದರೋ ಶೋಕಪರಾಯಣಳಾಗಿ (ಯಾವುದರಲ್ಲಿಯೂ ಆಸಕ್ತಿಯಿಲ್ಲದಿದ್ದಳು) (೧೧-೧೨). ಈ ರೀತಿಯಲ್ಲಿ ತನ್ನ ದಿವ್ಯಭವನದ ಎಲ್ಲ ವೈಭವವನ್ನೂ ತೋರಿಸಿ ಅವಳೊಡನೆ ಮಾತನಾಡಲುಪಕ್ರಮಿಸಿದನು. ಸೀತಾದೇವಿಯನ್ನು ಮರುಳು ಗೊಳಿಸಬೇಕೆಂಬುದು ಆ ದುರಾತ್ಮನ ಉದ್ದೇಶವಾಗಿತ್ತು. ಅವನು ಹೀಗೆಂದನು (೧೩) : "ಸೀತೆ, ನನ್ನ ಬಳಿ ಹತ್ತುಕೋಟಿ ರಾಕ್ಷಸರ ಸೇನಾಬಲವಿದೆ. ಅಲ್ಲದೆ ಇಪ್ಪತ್ತೆರಡುಕೋಟಿ ರಾಕ್ಷಸರ ಪ್ರಜಾಬಲವಿದೆ. ಅವರೆಲ್ಲರೂ ಭೀಮ ಪರಾಕ್ರಮಿ

ವರ್ಜಯಿತ್ವಾ ಜರಾವೃದ್ಧಾನ್ ಬಾಲಾಂಶ್ಚ ರಜನೀಚರಾನ್ ।
ಸಹಸ್ರಮೇಕಮೇಕಸ್ಯ ಮಮ ಕಾರ್ಯಪುರಃಸರಮ್ ॥ ೧೫

ಯದಿದಂ ರಾಜತಂತ್ರಂ ಮೇ ತ್ವಯಿ ಸರ್ವಂ ಪ್ರತಿಷ್ಠಿತಮ್ ।
ಜೀವಿತಂ ಚ ವಿಶಾಲಾಕ್ಷಿ ತ್ವಂ ಮೇ ಪ್ರಾಣೈರ್ಗರೀಯಸೀ ॥ ೧೬

ಬಹೂನಾಂ ಸ್ತ್ರೀಸಹಸ್ರಾಣಾಂ ಮಮ ಯೋಽಸೌ ಪರಿಗ್ರಹಃ ।
ತಾಸಾಂ ತ್ವಮೀಶ್ವರೀ ಸೀತೇ ಮಮ ಭಾರ್ಯಾ ಭವ ಪ್ರಿಯೇ ॥ ೧೭

ಸಾಧು ಕಿಂ ತೇಽನ್ಯಥಾ ಬುದ್ಧ್ಯಾ ರೋಚಯಸ್ವ ವಚೋ ಮಮ ।
ಭಜಸ್ವ ಮಾಭಿತಪ್ತಸ್ಯ ಪ್ರಸಾದಂ ಕರ್ತುಮರ್ಹಸಿ ॥ ೧೮

ಪರಿಕ್ಷಿಪ್ತಾ ಸಮುದ್ರೇಣ ಲಂಕೇಯಂ ಶತಯೋಜನಾ ।
ನೇಯಂ ಧರ್ಷಯಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ॥ ೧೯

ನ ದೇವೇಷು ನ ಯಕ್ಷೇಷು ನ ಗಂಧರ್ವೇಷು ನರ್ಷಿಷು ।
ಅಹಂ ಪಶ್ಯಾಮಿ ಲೋಕೇಷು ಯೋ ಮೇ ವೀರ್ಯಸಮೋ ಭವೇತ್ ॥

---

ಗಳು. ಈ ಮೂವತ್ತೆರಡು ಕೋಟಿ ರಾಕ್ಷಸರಿಗೆ ನಾನು ಪ್ರಭುವಾಗಿದ್ದೇನೆ! (೧೪). ಈ ಸಂಖ್ಯೆಯಲ್ಲಿ ಮುಪ್ಪಿನ ಮುದುಕರೂ ಬಾಲಕರೂ ಸೇರಿಲ್ಲ! ನನ್ನೊಬ್ಬನಿಗೆ ಒಂದು ಸಾವಿರ ಪರಿಚಾರಕರಿದ್ದಾರೆ. ಈ ನನ್ನ ರಾಜಪರಿಕರವೆಲ್ಲವೂ, ಹೇ ವಿಶಾಲಾಕ್ಷಿ, ನಿನಗೆ ಅಧೀನವಾಗಿದೆ. ನನ್ನ ಪ್ರಾಣವೂ ಸಹ ನಿನ್ನ ಕೈಯಲ್ಲಿದೆ. ನನಗೆ ನೀನು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾಗಿದ್ದೀಯೆ (೧೫-೧೬). ನನ್ನ ಅಂತಃಪುರದಲ್ಲಿ ನಾನು ಪರಿಗ್ರಹಿಸಿರುವ ಸಾವಿರಾರು ಸ್ತ್ರೀಯರಿದ್ದಾರೆ. ಅವರೆಲ್ಲರಿಗೂ, ಸೀತೆ, ನೀನು ಈಶ್ವರಿಯಾಗು! ಪ್ರಿಯೆ, ನನ್ನ ಪತ್ನಿಯಾಗು! ಇದೇ ನಿನಗೆ ಒಳ್ಳೆಯದು. ಅನ್ಯಥಾ ಚಿಂತಿಸುವೆಯೇಕೆ? ನನ್ನ ಮಾತನ್ನು ಕೇಳು; ನನ್ನವಳಾಗು. ಮನ್ಮಥಾಗ್ನಿಯಲ್ಲಿ ಬೆಂದುಹೋಗುತ್ತಿರುವ ನನ್ನಮೇಲೆ ದಯೆದೋರು! (೧೭-೧೮). ಈ ಲಂಕಾದ್ವೀಪವು ಸುತ್ತಲೂ ಸಮುದ್ರದಿಂದ ಆವೃತವಾಗಿದೆ. ಭೂಪ್ರದೇಶದಿಂದ ನೂರು ಯೋಜನ ದೂರದಲ್ಲಿದೆ. ಇಂದ್ರನೊಡನೆ ದೇವಾಸುರರೇ ಒಟ್ಟುಗೂಡಿ ಬಂದರೂ ಲಂಕೆಯು ಅವರಿಗೆ ಜಗ್ಗದು (೧೯). ದೇವ ಯಕ್ಷ ಗಂಧರ್ವರಲ್ಲಾಗಲಿ, ಋಷಿಗಳಲ್ಲಾಗಲಿ, ನನಗೆ ಸಾಟಿಯಾದ ಇನ್ನೊಬ್ಬ

ರಾಜ್ಯಭ್ರಷ್ಟೇನ ದೀನೇನ ತಾಪಸೇನ ಪದಾತಿನಾ ।
ಕಿಂ ಕರಿಷ್ಯಸಿ ರಾಮೇಣ ಮಾನುಷೇಣಾಲ್ಪತೇಜಸಾ ॥ ೨೧

ಭಜಸ್ವ ಸೀತೇ ಮಾಮೇವ ಭರ್ತಾಹಂ ಸದೃಶಸ್ತವ ।
ಯೌವನಂ ಹ್ಯಧ್ರುವಂ ಭೀರು ರಮಸ್ವೇಹ ಮಯಾ ಸಹ ॥ ೨೨

ದರ್ಶನೇ ಮಾ ಕೃಥಾ ಬುದ್ಧಿಂ ರಾಘವಸ್ಯ ವರಾನನೇ ।
ಕಾಸ್ಯ ಶಕ್ತಿರಿಹಾಗಂತುಮಪಿ ಸೀತೇ ಮನೋರಥೈಃ ॥ ೨೩

ನ ಶಕ್ಯೋ ವಾಯುರಾಕಾಶೇ ಪಾಶೈರ್ಬಂದ್ಧುಂ ಮಹಾಜವಃ ।
ದೀಪ್ಯಮಾನಸ್ಯ ಚಾಪ್ಯಗ್ನೇರ್ಗ್ರಹೀತುಂ ವಿಮಲಾ ಶಿಖಾ ॥ ೨೪

ತ್ರಯಾಣಾಮಪಿ ಲೋಕಾನಾಂ ನ ತಂ ಪಶ್ಯಾಮಿ ಶೋಭನೇ ।
ವಿಕ್ರಮೇಣ ನಯೇದ್ಯಸ್ತ್ವಾಂ ಮದ್ಬಾಹುಪರಿಪಾಲಿತಾಮ್ ॥ ೨೫

ಲಂಕಾಯಾಂ ಸುಮಹದ್ರಾಜ್ಯಮಿದಂ ತ್ವಮನುಪಾಲಯ ।
ತ್ವತ್ಪ್ರೇಷ್ಯಾ ಮದ್ವಿಧಾಶ್ಚೈವ ದೇವಾಶ್ಚಾಪಿ ಚರಾಚರಾಃ ॥ ೨೬

---

ಪರಾಕ್ರಮಿಯನ್ನು ಮೂರು ಲೋಕಗಳಲ್ಲಿಯೂ ಕಾಣೆ. ಸೀತೆ, ಮನುಷ್ಯ ಮಾತ್ರನಾದ ರಾಮನಿಂದ ನಿನಗೆ ಆಗಬೇಕಾದ್ದೇನು ? ಅವನೊಬ್ಬ ರಾಜ್ಯ ಭ್ರಷ್ಟನಾದ ದರಿದ್ರ ! ಬರಿಯ ಕಾಲ್ನಡಗೆಯಲ್ಲಿ ಅಲೆಯುವ ತಾಪಸ ! ಅವನ ಶೌರ್ಯವೂ ಅತ್ಯಲ್ಪ ! (೨೦-೨೧) ಆದ್ದರಿಂದ, ಸೀತೆ, ನನ್ನನ್ನು ವರಿಸು. ನಾನೇ ನಿನಗೆ ಯೋಗ್ಯನಾದ ಪತಿ ! ಸುಂದರಿ, ಯೌವನವು ಶಾಶ್ವತವಲ್ಲ ! ಈ ಕಾಲದಲ್ಲಿ ನನ್ನೊಡನೆ ಆನಂದವನ್ನನುಭವಿಸು (೨೨). ಮನೋಹರೆ, ಪುನಃ ರಾಮನ ದರ್ಶನವಾದೀತೆಂದು ಎಂದಿಗೂ ಎಣಿಸಬೇಡ. ಇಲ್ಲಿಗೆ ಬರುವ ಶಕ್ತಿ ಅವನಿಗೆಲ್ಲಿಯದು ? ಸೀತೆ, ಅವನ ಊಹೆಗೂ ನಿಲುಕದಂಥ ಸ್ಥಳವಿದು ! (೨೩). ಆಕಾಶದಲ್ಲಿ ಮಹಾವೇಗದಿಂದ ಬೀಸುವ ವಾಯುವನ್ನು ಹಗ್ಗದಿಂದ ಕಟ್ಟಿಹಾಕಲಾದೀತೆ ? ಉರಿಯುವ ಬೆಂಕಿಯ ಜಗಜಗಿಸುವ ಜ್ವಾಲೆಯನ್ನು ಕೈಯಲ್ಲಿ ಹಿಡಿಯಲಾದೀತೆ ? ಅದು ಹೇಗೆ ಅಸಾಧ್ಯವೋ ಹಾಗೆ, ನನ್ನ ಬಾಹುಬಲದಿಂದ ರಕ್ಷಿತಳಾದ ನಿನ್ನನ್ನು ಪರಾಕ್ರಮದಿಂದ ಬಿಡಿಸಿಕೊಂಡು ಹೋಗುವುದು ಅಸಾಧ್ಯ. ಸುಂದರಿ, ಈ ಮೂರು ಲೋಕಗಳಲ್ಲಿಯೂ ಅಂತಹ ವೀರನೊಬ್ಬನನ್ನೂ ನಾನು ಕಾಣೆ (೨೪-೨೫). ಲಂಕಾನಗರದಲ್ಲಿದ್ದು ಈ ವಿಶಾಲವಾದ ರಾಜ್ಯಕ್ಕೆ ಒಡತಿಯಾಗಿ ನೀನೇ ಇದನ್ನು ಪಾಲಿಸು.

ಅಭಿಷೇಕೋದಕಕ್ಲಿನ್ನಾ ತುಷ್ಟಾ ಚ ರಮಯಸ್ವ ಮಾಮ್ ।
ದುಷ್ಕೃತಂ ಯತ್ಪುರಾ ಕರ್ಮ ವನವಾಸೇನ ತದ್ಗತಮ್ ॥ ೨೭

ಯಶ್ಚ ತೇ ಸುಕೃತೋ ಧರ್ಮಸ್ತಸ್ಯೇಹ ಫಲಮಾಪ್ನುಹಿ ।
ಇಹ ಮಾಲ್ಯಾನಿ ಸರ್ವಾಣಿ ದಿವ್ಯಗಂಧಾನಿ ಮೈಥಿಲಿ ॥ ೨೮

ಭೂಷಣಾನಿ ಚ ಮುಖ್ಯಾನಿ ಸೇವಸ್ವ ಚ ಮಯಾ ಸಹ ।
ಪುಷ್ಪಕಂ ನಾಮ ಸುಶ್ರೋಣಿ ಭ್ರಾತುರ್ವೈಶ್ರವಣಸ್ಯ ಮೇ ॥ ೨೯

ವಿಮಾನಂ ಸೂರ್ಯಸಂಕಾಶಂ ತರಸಾ ನಿರ್ಜಿತಂ ಮಯಾ ।
ವಿಶಾಲಂ ರಮಣೀಯಂ ಚ ತದ್ವಿಮಾನಂ ಮನೋಜವಮ್ ॥ ೩೦

ತತ್ರ ಸೀತೇ ಮಯಾ ಸಾರ್ಧಂ ವಿಹರಸ್ವ ಯಥಾಸುಖಮ್ ।
ವದನಂ ಪದ್ಮಸಂಕಾಶಂ ವಿಮಲಂ ಚಾರುದರ್ಶನಮ್ ॥ ೩೧

---

ನಾನು ನಿನ್ನ ಸೇವಕನಾಗಿರುವೆನು ! ನನ್ನಂತೆ ಸಕಲ ದೇವತೆಗಳೂ ನಿನ್ನ ದಾಸರಾಗುವರು. ಈ ಚರಾಚರವಾದ ಜಗತ್ತೇ ನಿನ್ನ ಕೈಕೆಳಗಿರುವುದು (೨೬). ಸೀತೆ, ನನ್ನ ಪಟ್ಟದ ರಾಣಿಯಾಗು. ಪಟ್ಟಾಭಿಷೇಕದ ಜಲದಲ್ಲಿ ಸ್ನಾನಮಾಡಿ ಸಂತುಷ್ಟಳಾಗು. ನಿನ್ನ ಪಟ್ಟಾಭಿಷೇಕವನ್ನು ನೋಡಿ ನಾನು ನಲಿಯುವಂತೆ ಮಾಡು. ನೀನು ಮಾಡಿದ ಪಾಪಶೇಷವಾವುದೋ ಇದ್ದಿತೆಂದು ತೋರುತ್ತದೆ, ಅದು ವನವಾಸದಿಂದ ತೀರಿಹೋಯಿತು ! (೨೭). ಇನ್ನು ಮೇಲೆ ನಿನ್ನ ಮಹತ್ತರವಾದ ಪುಣ್ಯದ ಫಲವನ್ನು ಇಲ್ಲಿ ಅನುಭವಿಸು ! ಮೈಥಿಲಿ, ದಿವ್ಯ ಪರಿಮಳವುಳ್ಳ ಸಕಲಪುಷ್ಪಗಳೂ ಇಲ್ಲಿವೆ. ಶ್ರೇಷ್ಠವಾದ ಆಭರಣಗಳಿವೆ. ಅವೆಲ್ಲವನ್ನೂ ನನ್ನೊಡನೆ ಭೋಗಿಸುತ್ತಿರು. ನನ್ನ ಅಣ್ಣನಾದ ವೈಶ್ರವಣನ ಪುಷ್ಪಕವಿಮಾನವು ನನ್ನ ವಶದಲ್ಲಿದೆ (೨೮-೨೯). ಸೂರ್ಯನಂತೆ ವಿರಾಜಿಸುತ್ತದೆ. ವಿಶಾಲರಮಣೀಯವಾದ ಆ ವಿಮಾನವು ಮನೋವೇಗವುಳ್ಳದ್ದು. ವಿಕ್ರಮದಿಂದ ಅದನ್ನು ಗೆದ್ದು ತಂದಿದ್ದೇನೆ. ಸೀತೆ, ಅದರಲ್ಲಿ ನನ್ನೊಡನೆ ಕುಳಿತು ಸುಖವಾಗಿ ವಿಹರಿಸುತ್ತಿರು. ಪದ್ಮದಂತಿರುವ ನಿನ್ನ ಮುಖವು ಎಷ್ಟು ಸ್ವಚ್ಛವಾಗಿ ನೋಡಲು ಎಷ್ಟು ಚೆನ್ನಾಗಿದೆ ! (೩೦-೩೧).

**ಶೋಕಾರ್ತಂ ತು ವರಾರೋಹೇ ನ ಭ್ರಾಜತಿ ವರಾನನೇ ।**
**ಏವಂ ವದತಿ ತಸ್ಮಿನ್ ಸಾ ವಸ್ತ್ರಾಂತೇನ ವರಾಂಗನಾ ॥ ೩೨**

**ಪಿಧಾಯೇಂದುನಿಭಂ ಸೀತಾ ಮುಖಮಶ್ರೂಣ್ಯವರ್ತಯತ್ ।**
**ಧ್ಯಾಯಂತೀ ತಾಮಿವಾಸ್ವಸ್ಥಾಂ ದೀನಾಂ ಚಿಂತಾಹತಪ್ರಭಾವಮ್ ॥**

**ಉವಾಚ ವಚನಂ ಪಾಪೋ ರಾವಣೋ ರಾಕ್ಷಸೇಶ್ವರಃ ।**
**ಅಲಂ ವ್ರೀಡೇನ ವೈದೇಹಿ ಧರ್ಮಲೋಪಕೃತೇ ನ ಚ ॥ ೩೪**

**ಆರ್ಷೋಽಯಂ ದೈವನಿಷ್ಯಂದೋ ಯಸ್ತ್ವಾಮಭಿಗಮಿಷ್ಯತಿ ।**
**ಏತೌ ಪಾದೌ ಮಯಾ ಸ್ನಿಗ್ಧೌ ಶಿರೋಭಿಃ ಪರಿಪೀಡಿತೌ ॥ ೩೫**

**ಪ್ರಸಾದಂ ಕುರು ಮೇ ಕ್ಷಿಪ್ರಂ ವಶ್ಯೋ ದಾಸೋಽಹಮಸ್ಮಿ ತೇ ।**
**ಇಮಾಃ ಶೂನ್ಯಾ ಮಯಾ ವಾಚಃ ಶುಷ್ಯಮಾಣೇನ ಭಾಷಿತಾಃ ॥ ೩೬**

---

ಸುಶ್ರೋಣಿ-ಸುಂದರಾನನೆ, ನೀನು ಶೋಕಿಸುವುದರಿಂದ ಮುಖವು ಕಂದಿದೆ, ಮೊದಲಿನಷ್ಟು ಕಾಂತಿಯುಕ್ತವಾಗಿಲ್ಲ !" ಎಂದನು. ರಾವಣನು ಹೀಗೆ ಹೇಳುತ್ತಿರುವಾಗ ಆ ಸಾಧ್ವಿಯು ಚಂದ್ರಸಂಕಾಶವಾದ ತನ್ನ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಗಳಗಳನೆ ಅತ್ತಳು. ಜಾನಕಿಯು ಶ್ರೀರಾಮನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳು. ರೋಗದಿಂದ ನರಳುವವಳಂತೆ ದೀನಳಾಗಿದ್ದಳು. ಚಿಂತಿಸಿ ಚಿಂತಿಸಿ ಕಾಂತಿಗೆಟ್ಟಿದ್ದಳು (೩೨-೩೩). ಪಾಪಿಯಾದ ರಾವಣನು ಅವಳನ್ನು ನೋಡಿ ಮತ್ತೆ "ವೈದೇಹಿ, ಇದಕ್ಕಾಗಿ ನಾಚಬೇಡ. ಧರ್ಮಲೋಪವಾಗುವುದೆಂದೂ ಚಿಂತಿಸಬೇಡ. ನಿನ್ನನ್ನು ವರಿಸತಕ್ಕವನು ವಿಶ್ರವಸ್ಸೆಂಬ ಋಷಿಯ ಪುತ್ರ. ಬ್ರಹ್ಮದೇವನ ವಂಶದಲ್ಲಿ ಜನಿಸಿದವನು. ನಿನ್ನ ಮೃದುವಾದ ಪಾದಗಳಿಗೆ ತನ್ನ ತಲೆ ಮುಟ್ಟಿಸಿ ನಮಸ್ಕರಿಸುತ್ತೇನೆ. ! ಪಾದಗಳಿಗೆ ನೋವಾಗಬಹುದೋ ಏನೋ !) (೩೪–೩೫). ದೇವಿ, ನನ್ನನ್ನು ಅನುಗ್ರಹಿಸು ! ತ್ವರೆಮಾಡು ! ನೀನು ಆಜ್ಞಾಪಿಸುವಂತೆ ನಡೆಯುವ ದಾಸನಾಗಿದ್ದೇನೆ ! ಬಹಳ ನೊಂದುಗೊಂಡು ನಾನು ಈ ಬಗೆಯ ದೈನ್ಯದ ಮಾತುಗಳನ್ನು ಆಡಿದ್ದೇನೆ. ರಾವಣನು ಇನ್ನೊಬ್ಬ ಸ್ತ್ರೀಗೆ ಎಂದಿಗೂ ತಲೆಬಾಗತಕ್ಕವನಲ್ಲ !" ಎಂದು ನುಡಿದನು. ಈ ರೀತಿಯಲ್ಲಿ

ನ ಚಾಪಿ ರಾವಣಃ ಕಾಂಚಿನ್ಮೂರ್ಧ್ನಾ ಸ್ತ್ರೀಂ ಪ್ರಣಮೇತ ಹ ।
ಏವಮುಕ್ತ್ವಾ ದಶಗ್ರೀವೋ ಮೈಥಿಲೀಂ ಜನಕಾತ್ಮಜಾಮ್ ॥ ೩೭
ಕೃತಾಂತವಶಮಾಪನ್ನೋ ಮಮೇಯಮಿತಿ ಮನ್ಯತೇ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚಪಂಚಾಶಃ ಸರ್ಗಃ

---

## ಷಟ್‌ಪಂಚಾಶಃ ಸರ್ಗಃ

### ವತ್ಸರಾವಧಿಕರಣಮ್

ಸಾ ತಥೋಕ್ತಾ ತು ವೈದೇಹೀ ನಿರ್ಭಯಾ ಶೋಕಕರ್ಶಿತಾ ।
ತೃಣಮಂತರತಃ ಕೃತ್ವಾ ರಾವಣಂ ಪ್ರತ್ಯಭಾಷತ ॥ ೧

ರಾಜಾ ದಶರಥೋ ನಾಮ ಧರ್ಮಸೇತುರಿವಾಚಲಃ ।
ಸತ್ಯಸಂಧಃ ಪರಿಜ್ಞಾತೋ ಯಸ್ಯ ಪುತ್ರಃ ಸ ರಾಘವಃ ॥ ೨

---

ರಾವಣನು ಜಾನಕಿಗೆ ಹೇಳಿ, ಅವಳು ತನ್ನವಳಾದಳೆಂದು ತಿಳಿದುಕೊಂಡನು. ಕಾಲನಿಗೆ ಅಧೀನನಾದ್ದರಿಂದ ಹಾಗೆ ಭಾವಿಸಿದನು (೩೬-೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೈದನೆಯ ಸರ್ಗ

---

## ಸರ್ಗ ೫೬

ಸೀತಾದೇವಿಯು ರಾವಣನನ್ನು ಧಿಕ್ಕರಿಸಿ ಮಾತನಾಡುವುದು. ರಾವಣನು ಹನ್ನೆರಡು ತಿಂಗಳು ಅವಧಿಯನ್ನಿತ್ತು ಅಶೋಕವನದಲ್ಲಿ ಇರಿಸುವುದು

ರಾವಣನು ಹಾಗೆ ಹೇಳಲು ಶೋಕಾವಿಷ್ಟಳಾದ ವೈದೇಹಿಯು ನಡುವೆ ಹುಲ್ಲುಕಡ್ಡಿಯನ್ನಿಟ್ಟು, * ನಿರ್ಭಯದಿಂದ ರಾವಣನಿಗೆ ಉತ್ತರಕೊಟ್ಟಳು (೧) : "ದಶರಥ ಮಹಾರಾಜನು ಸೇತುವಿನಂತೆ ಧರ್ಮವನ್ನು ನೆಲೆಗೆ ನಿಲ್ಲಿಸಿದ ಸೀಮಾ ಪುರುಷ. ಪರ್ವತದಂತೆ ಸ್ಥಿರಸ್ವಭಾವದವನು. ಸತ್ಯಸಂಧನೆಂದು ವಿಖ್ಯಾತ ನಾಗಿದ್ದಾನೆ. ರಘುವಂಶತಿಲಕನಾದ ಶ್ರೀರಾಮನು ಆತನ ಪುತ್ರ.

---

* ಅನುಬಂಧವನ್ನು ನೋಡಿ.

ರಾಮೋ ನಾಮ ಸ ಧರ್ಮಾತ್ಮಾ ತ್ರಿಷು ಲೋಕೇಷು ವಿಶ್ರುತಃ ।
ದೀರ್ಘಬಾಹುರ್ವಿಶಾಲಾಕ್ಷೋ ದೈವತಂ ಸ ಪತಿರ್ಮಮ ॥ ೩

ಇಕ್ಷ್ವಾಕೂಣಾಂ ಕುಲೇ ಜಾತಃ ಸಿಂಹಸ್ಕಂಧೋ ಮಹಾದ್ಯುತಿಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಯಸ್ತೇ ಪ್ರಾಣಾನ್ ಹರಿಷ್ಯತಿ ॥ ೪

ಪ್ರತ್ಯಕ್ಷಂ ಯದ್ಯಹಂ ತಸ್ಯ ತ್ವಯಾ ಸ್ಯಾಂ ಧರ್ಷಿತಾ ಬಲಾತ್ ।
ಶಯಿತಾ ತ್ವಂ ಹತಃ ಸಂಖ್ಯೇ ಜನಸ್ಥಾನೇ ಯಥಾ ಖರಃ ॥ ೫

ಯ ಏತೇ ರಾಕ್ಷಸಾಃ ಪ್ರೋಕ್ತಾ ಘೋರರೂಪಾ ಮಹಾಬಲಾಃ ।
ರಾಘವೇ ನಿರ್ವಿಷಾಃ ಸರ್ವೇ ಸುಪರ್ಣೇ ಪನ್ನಗಾ ಯಥಾ ॥ ೬

ತಸ್ಯ ಜ್ಯಾವಿಪ್ರಮುಕ್ತಾಸ್ತೇ ಶರಾಃ ಕಾಂಚನಭೂಷಣಾಃ ।
ಶರೀರಂ ವಿಧಮಿಷ್ಯಂತಿ ಗಂಗಾಕೂಲಮಿವೋರ್ಮಯಃ ॥ ೭

ಅಸುರೈರ್ವಾ ಸುರೈರ್ವಾ ತ್ವಂ ಯದ್ಯವಧ್ಯೋಽಸಿ ರಾವಣ ।
ಉತ್ಪಾದ್ಯ ಸುಮಹದ್ವೈರಂ ಜೀವಂಸ್ತಸ್ಯ ನ ಮೋಕ್ಷ್ಯಸೇ ॥ ೮

---

ಧರ್ಮಾತ್ಮನೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗಿದ್ದಾನೆ. ಆಜಾನುಬಾಹುವೂ ವಿಶಾಲಾಕ್ಷನೂ ಆದ ಶ್ರೀರಾಮನೇ ನನ್ನ ದೇವತೆ, ನನ್ನ ಪತಿ (೨-೩). ಆತನು ಇಕ್ಷ್ವಾಕುವಂಶದಲ್ಲಿ ಜನಿಸಿದವನು. ಸಿಂಹದಂತಹ ಭುಜಕಟ್ಟುಳ್ಳ ಮಹಾತೇಜಸ್ವಿ. ಅವನು ತಮ್ಮನಾದ ಲಕ್ಷ್ಮಣನೊಡನೆ ಬಂದು ನಿನ್ನ ಪ್ರಾಣವನ್ನು ಹೀರುವನು! ಅವನೆದುರಿಗೆ ನೀನು ನನ್ನನ್ನು ಅತಿಕ್ರಮಿಸಿ ನಡೆದಿದ್ದರೆ, ಇಷ್ಟರಲ್ಲಿ ನೀನು ಯುದ್ಧದಲ್ಲಿ ಸತ್ತುಬೀಳುತ್ತಿದ್ದೆ. ಜನಸ್ಥಾನದಲ್ಲಿ ಖರನಿಗಾದ ಗತಿ ನಿನಗಾಗುತ್ತಿತ್ತು (೪-೫). ನಿನ್ನ ವಶದಲ್ಲಿರುವ ರಾಕ್ಷಸರು ಘೋರರೂಪಿಗಳೆಂದೂ ಬಲಾಢ್ಯರೆಂದೂ ಹೇಳಿಕೊಂಡೆಯಲ್ಲ, ರಾಘವನೆದುರಿಗೆ ಅವರ ಕೊಬ್ಬು ನಡೆಯದು. ಗರುಡನೆದುರಿಗೆ ಹಾವುಗಳಂತೆ ಅವರು ನಿರ್ವಿಷರಾಗುವರು. ಚಿನ್ನದ ಹಿಡಿಗಳುಳ್ಳ ಆತನ ಬಾಣಗಳು ಧನುಸ್ಸಿನ ಹೆದೆಯಿಂದ ಚಿಮ್ಮಿದವೆಂದರೆ, ನಿನ್ನ ದೇಹವನ್ನು ಹಿಸಿದು ಹಾಕುವುವು. ಗಂಗಾನದಿಯಲ್ಲಿ ನುಗ್ಗಿಬರುವ ಅಲೆಗಳು ದಡವನ್ನು ಕೊರೆಯುವಂತೆ ಕೊರೆಯುವುವು (೬-೭). ರಾವಣ, ದೈತ್ಯರಿಗೂ ದೇವತೆಗಳಿಗೂ ನೀನು ಅವಧ್ಯನಾಗಿರಬಹುದು. ಆದರೆ ಶ್ರೀರಾಮನೊಡನೆ ಮಹಾವೈರವನ್ನು ಬೆಳೆಸಿದಮೇಲೆ ನೀನು ಜೀವಸಹಿತ ಉಳಿಯುವುದಿಲ್ಲ. ವೀರಾಗ್ರಣಿಯಾದ

ಸ ತೇ ಜೀವಿತಶೇಷಸ್ಯ ರಾಘವೋಽಂತಕರೋ ಬಲೀ ।
ಪಶೋರ್ಯೂಪಗತಸ್ಯೇವ ಜೀವಿತಂ ತವ ದುರ್ಲಭಮ್ ॥ ೯

ಯದಿ ಪಶ್ಯೇತ್ ಸ ರಾಮಸ್ತ್ವಾಂ ರೋಷದೀಪ್ತೇನ ಚಕ್ಷುಷಾ ।
ರಕ್ಷಸ್ತ್ವಮದ್ಯ ನಿರ್ದಗ್ಧೋ ಯಥಾ ರುದ್ರೇಣ ಮನ್ಮಥಃ ॥ ೧೦

ಯಶ್ಚಂದ್ರಂ ನಭಸೋ ಭೂಮೌ ಪಾತಯೇನ್ನಾಶಯೇತ ವಾ ।
ಸಾಗರಂ ಶೋಷಯೇದ್ವಾಪಿ ಸ ಸೀತಾಂ ಮೋಚಯೇದಿಹ ॥ ೧೧

ಗತಾಯುಸ್ತ್ವಂ ಗತಶ್ರೀಕೋ ಗತಸತ್ತ್ವೋ ಗತೇಂದ್ರಿಯಃ ।
ಲಂಕಾ ವೈಧವ್ಯಸಂಯುಕ್ತಾ ತ್ವತ್ಕೃತೇ ನ ಭವಿಷ್ಯತಿ ॥ ೧೨

ನ ತೇ ಪಾಪಮಿದಂ ಕರ್ಮ ಸುಖೋದರ್ಕಂ ಭವಿಷ್ಯತಿ ।
ಯಾಹಂ ನೀತಾ ವಿನಾಭಾವಂ ಪತಿಪಾರ್ಶ್ವಾತ್ತ್ವಯಾ ಬಲಾತ್ ॥

ಸ ಹಿ ದೇವರಸಂಯುಕ್ತೋ ಮಮ ಭರ್ತಾ ಮಹಾದ್ಯುತಿಃ ।
ನಿರ್ಭಯೋ ವೀರ್ಯಮಾಶ್ರಿತ್ಯ ಶೂನ್ಯೇ ವಸತಿ ದಂಡಕೇ ॥ ೧೪

ರಾಘವನು ಉಳಿದಿರುವ ನಿನ್ನ ಆಯುಸ್ಸನ್ನು ಮುಗಿಸಿಬಿಡುವನು. ಯೂಪ ಸ್ತಂಭಕ್ಕೆ ಬಿಗಿಯಲ್ಪಟ್ಟ ಪಶುವಾಗಿದ್ದೀಯೆ. ನೀನು ಬದುಕುವುದು ಅಸಾಧ್ಯ (೮–೯). ಶ್ರೀರಾಮನು ನಿನ್ನನ್ನು ಕೆಂಗಣ್ಣಿನಿಂದ ನೋಡಿದರೆ ಸಾಕು, ಎಲೇ ರಾಕ್ಷಸ, ಪರಮೇಶ್ವರನಿಂದ ಮನ್ಮಥನು ಸುಟ್ಟುಹೋದಂತೆ ಸುಟ್ಟು ಬೂದಿ ಯಾಗುತ್ತೀಯೆ! ಯಾವಾತನು ಚಂದ್ರನನ್ನು ಆಕಾಶದಿಂದ ನೆಲಕ್ಕೆ ಉರುಳಿಸಬಲ್ಲನೋ—ಇಷ್ಟಪಟ್ಟರೆ ಚಂದ್ರನನ್ನೇ ನಾಶಗೊಳಿಸಬಲ್ಲನೋ, ಯಾವಾತನು ಸಮುದ್ರವನ್ನು ಒಣಗಿಸಬಲ್ಲನೋ, ಆ ವೀರಶ್ರೇಷ್ಠನು ಈ ಸೀತೆಯನ್ನು ಬಿಡಿಸಿಕೊಂಡುಹೋಗಬಲ್ಲ! (೧೦–೧೧). ನಿನ್ನ ಆಯುಸ್ಸು ಮುಗಿಯಿತು! ನಿನ್ನ ವೈಭವ ಗತಿಸಿತು! ನಿನ್ನ ಬಲ ಕುಗ್ಗಿತು! ಅದಕ್ಕೆ ತಕ್ಕಂತೆ ನಿನ್ನ ಬುದ್ಧಿ ವಿಪರೀತವಾಯಿತು! ನಿನ್ನ ತಪ್ಪಿನಿಂದ ಲಂಕೆ ವಿಧವೆಯಾಗುವಳು. ಲಂಕೆಗೆ ಉಳಿಗಾಲವಿಲ್ಲ (೧೨). ಪತಿಸಾನ್ನಿಧ್ಯ ದಿಂದ ನನ್ನನ್ನು ಬಲಾತ್ಕಾರವಾಗಿ ಅಗಲಿಸಿದೆಯಲ್ಲ, ಈ ಪಾಪಕೃತ್ಯವು ನಿನಗೆ ಪರಿಣಾಮದಲ್ಲಿ ಸುಖಕರವಾಗದು. ನನ್ನ ಪತಿಯು ನನ್ನ ಮೈದುನ ನೊಡನೆ ದಂಡಕಾರಣ್ಯದಲ್ಲಿದ್ದಾನೆ. ಮಹಾತೇಜಸ್ವಿಯಾದ ಆ ವೀರನು ಶೂನ್ಯಾರಣ್ಯದಲ್ಲಿಯೂ ನಿರ್ಭಯದಿಂದ ತನ್ನ ಪರಾಕ್ರಮವನ್ನು ಅವಲಂಬಿಸಿ

ಸ ತೇ ದರ್ಪಂ ಬಲಂ ವೀರ್ಯಮುತ್ಸೇಕಂ ಚ ತಥಾವಿಧಮ್ ।
ಅಪನೇಷ್ಯತಿ ಗಾತ್ರೇಭ್ಯಃ ಶರವರ್ಷೇಣ ಸಂಯುಗೇ ॥ ೧೫

ಯದಾ ವಿನಾಶೋ ಭೂತಾನಾಂ ದೃಶ್ಯತೇ ಕಾಲಚೋದಿತಃ ।
ತದಾ ಕಾರ್ಯೇ ಪ್ರಮಾದ್ಯಂತಿ ನರಾಃ ಕಾಲವಶಂ ಗತಾಃ ॥ ೧೬

ಮಾಂ ಪ್ರಧೃಷ್ಯ ಸ ತೇ ಕಾಲಃ ಪ್ರಾಪ್ತೋಽಯಂ ರಾಕ್ಷಸಾಧಮ ।
ಆತ್ಮನೋ ರಾಕ್ಷಸಾನಾಂ ಚ ವಧಾಯಾಂತಃಪುರಸ್ಯ ಚ ॥ ೧೭

ನ ಶಕ್ಯಾ ಯಜ್ಞಮಧ್ಯಸ್ಥಾ ವೇದಿಃ ಸ್ರುಗ್ಭಾಂಡಮಂಡಿತಾ ।
ದ್ವಿಜಾತಿಮಂತ್ರಸಂಪೂತಾ ಚಂಡಾಲೇನಾವಮರ್ದಿತುಮ್ ॥ ೧೮

ತಥಾಹಂ ಧರ್ಮನಿತ್ಯಸ್ಯ ಧರ್ಮಪತ್ನೀ ಪತಿವ್ರತಾ ।
ತ್ವಯಾ ಸ್ಪ್ರಷ್ಟುಂ ನ ಶಕ್ಯಾಸ್ಮಿ ರಾಕ್ಷಸಾಧಮ ಪಾಪಿನಾ ॥ ೧೯

ಕ್ರೀಡಂತೀ ರಾಜಹಂಸೇನ ಪದ್ಮಷಂಡೇಷು ನಿತ್ಯದಾ ।
ಹಂಸೀ ಸಾ ತೃಣಷಂಡಸ್ಥಂ ಕಥಂ ದ್ರಕ್ಷ್ಯೇತ ಮದ್ಗುಕಮ್ ॥ ೨೦

---

ಕೊಂಡಿದ್ದಾನೆ. (೧೩–೧೪). ಆತನು ರಣರಂಗದಲ್ಲಿ ಶರವೃಷ್ಟಿಯನ್ನು ಸುರಿಸಿ, ನಿನ್ನ ದರ್ಪವನ್ನೂ ಬಲಪರಾಕ್ರಮಗಳನ್ನೂ ಈ ಕೊಬ್ಬನ್ನೂ ಮೈಯಿಂದ ಕರಗಿಸುವನು ! ಜನರಿಗೆ ಕಾಲವಶದಿಂದ ಸರ್ವನಾಶವು ಒದಗಿ ಬಂದರೆ, ಅವರು ಕಾಲಾಧೀನರಾಗಿ ಬುದ್ಧಿಗೆಡುವರು; ತಪ್ಪುದಾರಿಗೆ ಜಾರುವರು (೧೫–೧೬), ಎಲೇ ನೀಚರಾಕ್ಷಸ, ನನ್ನನ್ನು ಬಲಾತ್ಕರಿಸುತ್ತಿರುವ ನಿನಗೆ ಅಂಥ ಸರ್ವನಾಶದ ಕಾಲ ಬಂದಿದೆ. ನೀನು, ನಿನ್ನ ರಾಕ್ಷಸರು, ನಿನ್ನ ಅಂತಃಪುರದವರು—ಇವರೆಲ್ಲರಿಗೂ ನಾಶಕಾಲ ಬಂದಿದೆ (೧೭). ಯಜ್ಞಶಾಲೆಯಲ್ಲಿ ಸ್ರುಕ್ ಮುಂತಾದ ಯಜ್ಞಪಾತ್ರೆಗಳಿಂದ ಅಲಂಕೃತವಾಗಿ, ದ್ವಿಜರ ವೇದಮಂತ್ರಗಳಿಂದ ಪರಿಶುದ್ಧವಾಗಿರುವ ಯಜ್ಞವೇದಿಯನ್ನು ಚಂಡಾಲನು ಮುಟ್ಟಲು ಯೋಗ್ಯವೆ? ಶಕ್ಯವೆ? (೧೮). ಹಾಗೆ ಧರ್ಮಪರಾಯಣನಾದ ಶ್ರೀರಾಮನ ಧರ್ಮಪತ್ನಿಯೂ ಪತಿವ್ರತೆಯೂ ಆದ ನನ್ನನ್ನು, ಎಲಾ ರಾಕ್ಷಸಾಧಮ, ನೀನು ಮುಟ್ಟುವುದಕ್ಕೆ ಅರ್ಹನಲ್ಲ (೧೯). ತಾವರೆಗಳ ವನದಲ್ಲಿ ಸದಾ ರಾಜಹಂಸದೊಡನೆ ವಿಹರಿಸುವ ರಾಜಹಂಸಿಯು, ಹುಲ್ಲಿನ ಪೊದೆಯಲ್ಲಿರುವ ನೀರುಕಾಗೆಯನ್ನು ಕಣ್ಣೆಂದಾದರೂ

*

ಇದಂ ಶರೀರಂ ನಿಃಸಂಜ್ಞಂ ಬಂಧ ವಾ ಖಾದಯಸ್ವ ವಾ ।
ನೇದಂ ಶರೀರಂ ರಕ್ಷ್ಯಂ ಮೇ ಜೀವಿತಂ ವಾಪಿ ರಾಕ್ಷಸ ॥ ೨೧

ನ ತು ಶಕ್ಷ್ಯಾಮ್ಯುಪಕ್ರೋಶಂ ಪೃಥಿವ್ಯಾಂ ದಾತುಮಾತ್ಮನಃ ।
ಏವಮುಕ್ತ್ವಾ ತು ವೈದೇಹೀ ಕ್ರೋಧಾತ್ ಸುಪರುಷಂ ವಚಃ ॥ ೨೨

ರಾವಣಂ ಮೈಥಿಲೀ ತತ್ರ ಪುನರ್ನೋವಾಚ ಕಿಂಚನ ।
ಸೀತಾಯಾ ವಚನಂ ಶ್ರುತ್ವಾ ಪರುಷಂ ರೋಮಹರ್ಷಣಮ್ ॥ ೨೩

ಪ್ರತ್ಯುವಾಚ ತತಃ ಸೀತಾಂ ಭಯಸಂದರ್ಶನಂ ವಚಃ ।
ಶೃಣು ಮೈಥಿಲಿ ಮದ್ವಾಕ್ಯಂ ಮಾಸಾನ್ ದ್ವಾದಶ ಭಾಮಿನಿ ॥ ೨೪

ಕಾಲೇನಾನೇನ ನಾಭ್ಯೇಷಿ ಯದಿ ಮಾಂ ಚಾರುಹಾಸಿನಿ ।
ತತಸ್ತ್ವಾಂ ಪ್ರಾತರಾಶಾರ್ಥಂ ಸೂದಾಶ್ಛೇತ್ಸ್ಯಂತಿ ಲೇಶಶಃ ॥ ೨೫

ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಃ ಶತ್ರುರಾವಣಃ ।
ರಾಕ್ಷಸೀಶ್ಚ ತತಃ ಕ್ರುದ್ಧ ಇದಂ ವಚನಮಬ್ರವೀತ್ ॥ ೨೬

---

ನೋಡೀತೇ ? ಈ ಶರೀರ ಜಡವಾದದ್ದು. ಇದನ್ನು ಸೆರೆಮನೆಯಲ್ಲಾದರೂ ಬಂಧಿಸು; ತಿನ್ನುವುದಾದರೂ ತಿಂದುಬಿಡು. ಈ ದೇಹವನ್ನು ಪೋಷಿಸ ಬೇಕೆಂದೂ ಪ್ರಾಣವನ್ನು ರಕ್ಷಿಸಿಕೊಳ್ಳಬೇಕೆಂದೂ ನನಗೆ ಇಚ್ಛೆಯಿಲ್ಲ (೨೦–೨೧). ಲೋಕದಲ್ಲಿ ಕೆಟ್ಟ ಹೆಸರನ್ನು ತಂದುಕೊಳ್ಳಲು ಮಾತ್ರ ನನಗೆ ಸಾಧ್ಯವಿಲ್ಲ" ಎಂದು ವೈದೇಹಿಯು ಕಟುವಾಗಿ ಹೇಳಿ ಸುಮ್ಮನಾದಳು. ಪುನಃ ರಾವಣನೊಡನೆ ಮಾತಾಡಲಿಲ್ಲ. ಮೈನವಿರೇಳಿಸುವಂಥ ಸೀತೆಯ ಕಠೋರವಾಕ್ಯವನ್ನು ಕೇಳಿ ರಾವಣನು ಹೆದರಿಸುವ ಮಾತಿನಿಂದ ಹೀಗೆಂದನು (೨೨–೨೩) : "ಎಲೌ ಕೋಪನೆ, ನನ್ನ ಮಾತನ್ನು ಗಮನವಿಟ್ಟು ಕೇಳು : ಹನ್ನೆರಡು ತಿಂಗಳು ನಿನಗೆ ಅವಧಿಯನ್ನು ಕೊಟ್ಟಿದ್ದೇನೆ. ಸುಂದರಿ, ಅಷ್ಟರಲ್ಲಿ ನೀನು ನನ್ನ ವಶಳಾಗಿ ಬಾರದಿದ್ದರೆ, ನನ್ನ ಅಡಿಗೆಯವರು ಬೆಳಗಿನ ತಿಂಡಿಗಾಗಿ ನಿನ್ನನ್ನು ತುಂಡುತುಂಡಾಗಿ ಕಡಿಯುತ್ತಾರೆ !" (೨೪–೨೫). ಶತ್ರುರಾವಣನೆನಿಸಿದ ರಾವಣನು ಕ್ರೋಧದಿಂದ ಹೀಗೆ ಕಟುವಾಗಿ ನುಡಿದು, ಸಮೀಪದಲ್ಲಿದ್ದ ರಾಕ್ಷಸಿಯರನ್ನು ಕರೆದು "ಎಲೈ ರಾಕ್ಷಸಿಯರೆ, ಈಕೆಯ

ಶೀಘ್ರಮೇವ ಹಿ ರಾಕ್ಷಸ್ಯೋ ವಿಕೃತಾ ಘೋರದರ್ಶನಾಃ ।
ದರ್ಪಮಸ್ಯಾ ವಿನೇಷ್ಯಧ್ವಂ ಮಾಂಸಶೋಣಿತಭೋಜನಾಃ ॥ ೨೭

ವಚನಾದೇವ ತಾಸ್ತಸ್ಯ ಸುಘೋರಾ ರಾಕ್ಷಸೀಗಣಾಃ ।
ಕೃತಪ್ರಾಂಜಲಯೋ ಭೂತ್ವಾ ಮೈಥಿಲೀಂ ಪರ್ಯವಾರಯನ್ ॥ ೨೮

ಸ ತಾಃ ಪ್ರೋವಾಚ ರಾಜಾಸೌ ರಾವಣೋ ಘೋರದರ್ಶನಃ ।
ಪ್ರಚಾಲ್ಯ ಚರಣೋತ್ಕರ್ಷೈರ್ದಾರಯನ್ನಿವ ಮೇದಿನೀಮ್ ॥ ೨೯

ಅಶೋಕವನಿಕಾಮಧ್ಯೇ ಮೈಥಿಲೀ ನೀಯತಾಮಿಯಮ್ ।
ತತ್ರೇಯಂ ರಕ್ಷ್ಯತಾಂ ಗೂಢಂ ಯುಷ್ಮಾಭಿಃ ಪರಿವಾರಿತಾ ॥ ೩೦

ತತ್ರೈನಾಂ ತರ್ಜನೈರ್ಘೋರೈಃ ಪುನಃ ಸಾಂತ್ವೈಶ್ಚ ಮೈಥಿಲೀಮ್ ।
ಆನಯಧ್ವಂ ವಶಂ ಸರ್ವಾ ವನ್ಯಾಂ ಗಜವಧೂಮಿವ ॥ ೩೧

ಇತಿ ಪ್ರತಿಸಮಾದಿಷ್ಟಾ ರಾಕ್ಷಸ್ಯೋ ರಾವಣೇನ ತಾಃ ।
ಅಶೋಕವನಿಕಾಂ ಜಗ್ಮುರ್ಮೈಥಿಲೀಂ ಪ್ರತಿಗೃಹ್ಯ ತು ॥ ೩೨

---

ದರ್ಪವನ್ನು ನೀವು ಶೀಘ್ರದಲ್ಲಿ ಅಡಗಿಸಿರಿ. ವಿಕಾರಾಕೃತಿಯವರೂ ಭಯಂಕರಸ್ವರೂಪರೂ ಆಗಿ ಇವಳೆದುರಿಗೆ ಮಾಂಸವನ್ನು ಮೆದ್ದು ನೆತ್ತರನ್ನು ಕುಡಿದು ಇವಳ ಸೊಕ್ಕನ್ನು ಅಡಗಿಸಿರಿ!" ಎಂದು ಆಜ್ಞೆಯಿತ್ತನು (೨೬-೨೭). ರಾವಣನು ಆಜ್ಞೆಯಿತ್ತೊಡನೆ ಘೋರಾಕೃತಿಯ ರಾಕ್ಷಸಿಯರು ಅವನಿಗೆ ಕೈ ಮುಗಿದು ಮೈಥಿಲಿಯನ್ನು ಸುತ್ತುಗಟ್ಟಿದರು. ದೈತ್ಯೇಶ್ವರನಾದ ರಾವಣನು ಭೀಕರಾಕಾರನಾಗಿ ಭೂಮಿಯನ್ನು ಒಡೆಯುವನೋ ಎಂಬಂತೆ ನೆಲವನ್ನು ನಡುಗಿಸುತ್ತ ಹೆಜ್ಜೆಯಿಟ್ಟು, "ಇವಳನ್ನು ಅಶೋಕವನದ ಮಧ್ಯಕ್ಕೆ ಎಳೆದೊಯ್ಯಿರಿ. ಎಲೈ ರಾಕ್ಷಸಿಯರೇ, ಅಲ್ಲಿ ಇವಳನ್ನು ಗುಪ್ತವಾಗಿಟ್ಟು ಸುತ್ತುಗಟ್ಟಿ ಇವಳಿಗೆ ನೀವು ಕಾವಲಾಗಿರತಕ್ಕದ್ದು (೨೮-೩೦). ಅಲ್ಲಿ ಭಯಂಕರವಾಗಿ ಹೆದರಿಸುತ್ತಲೂ ಒಳ್ಳೆಯ ಮಾತುಗಳನ್ನು ನುಡಿಯುತ್ತಲೂ ಇವಳನ್ನು ದಾರಿಗೆ ತನ್ನಿರಿ. ಕಾಡಾನೆಯನ್ನು ವಶಕ್ಕೆ ತರುವಂತೆ ನಯಭಯಗಳಿಂದ ಈ ಸೀತೆಯನ್ನು ಸ್ವಾಧೀನಕ್ಕೆ ತನ್ನಿರಿ" ಎಂದು ಆಜ್ಞಾಪಿಸಿದನು (೩೧). ಅದರಂತೆ ಆ ರಾಕ್ಷಸಿಯರು ಮೈಥಿಲಿಯನ್ನು ಕರೆದುಕೊಂಡು

ಸರ್ವಕಾಲಫಲೈರ್ವೃಕ್ಷೈರ್ನಾನಾಪುಷ್ಪಫಲೈರ್ವೃತಾಮ್ ।
ಸರ್ವಕಾಲಮದೈಶ್ಚಾಪಿ ದ್ವಿಜೈಃ ಸಮುಪಸೇವಿತಾಮ್ ॥ ೩೩

ಸಾ ತು ಶೋಕಪರೀತಾಂಗೀ ಮೈಥಿಲೀ ಜನಕಾತ್ಮಜಾ ।
ರಾಕ್ಷಸೀವಶಮಾಪನ್ನಾ ವ್ಯಾಘ್ರೀಣಾಂ ಹರಿಣೀ ಯಥಾ ॥ ೩೪

ಶೋಕೇನ ಮಹತಾ ಗ್ರಸ್ತಾ ಮೈಥಿಲೀ ಜನಕಾತ್ಮಜಾ ।
ನ ಶರ್ಮ ಲಭತೇ ಭೀರುಃ ಪಾಶಬದ್ಧಾ ಮೃಗೀ ಯಥಾ ॥ ೩೫

ನ ವಿಂದತೇ ತತ್ರ ತು ಶರ್ಮ ಮೈಥಿಲೀ
ವಿರೂಪನೇತ್ರಾಭಿರತೀವ ತರ್ಜಿತಾ ।
ಪತಿಂ ಸ್ಮರಂತೀ ದಯಿತಂ ಚ ದೈವತಂ
ವಿಚೇತನಾಭೂದ್ಭಯಶೋಕಪೀಡಿತಾ ॥ ೩೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಟ್ಪಂಚಾಶಃ ಸರ್ಗಃ

---

ಅಶೋಕವನಕ್ಕೆ ಹೊರಟುಹೋದರು. ಅಶೋಕವನವಾದರೋ ಸರ್ವಕಾಲದಲ್ಲಿಯೂ ಫಲಪುಷ್ಪಗಳನ್ನು ಕೊಡುವ ವಿವಿಧ ವೃಕ್ಷಗಳಿಂದ ರಮಣೀಯವಾಗಿತ್ತು. ಮದಿಸಿದ ಹಕ್ಕಿಗಳಿಂದ ತುಂಬಿತ್ತು (೩೨–೩೩). ಆದರೆ ಶೋಕಾರ್ತಳಾದ ಜಾನಕಿಯು ರಾಕ್ಷಸಿಯರಿಗೆ ಅಧೀನಳಾಗಿ, ಹೆಣ್ಣು ಹುಲಿಗಳ ಕೈಗೆ ಸಿಕ್ಕಿದ ಹರಿಣಿಯಂತಾದಳು. ಮಹಾದುಃಖಕ್ಕೆ ಪಕ್ಕಾದಳು. ಹಗ್ಗದಿಂದ ಕಟ್ಟಿದ ಜಿಂಕೆಯಂತೆ ಹೆಜ್ಜೆ ಹೆಜ್ಜೆಗೆ ಹೆದರಿದಳು. (ಅಶೋಕವನದ ಸೊಬಗಿನಿಂದ) ಅವಳ ಮನಸ್ಸಿಗೆ ಸಂತೋಷವಾಗಲಿಲ್ಲ (೩೪–೩೫). ಆ ರಾಕ್ಷಸಿಯರು ವಿಕಾರವಾದ ಕಣ್ಣುಗಳಿಂದ ಸೀತೆಯನ್ನು ವಿಧವಿಧವಾಗಿ ಹೆದರಿಸುತ್ತಿದ್ದರು. ಸೀತೆಯು ತನ್ನ ದಯಿತನೂ ದೇವತೆಯೂ ಆದ ಶ್ರೀರಾಮಚಂದ್ರನನ್ನೇ ನೆನೆಸಿಕೊಳ್ಳುತ್ತ ಆಗಾಗ ಎಚ್ಚರದಪ್ಪುತ್ತಿದ್ದಳು. ಭಯಶೋಕಗಳಿಂದ ಬಸವಳಿದಳು. ಅವಳ ಮನಸ್ಸಿಗೆ ನೆಮ್ಮದಿಯ ಲೇಶವೂ ಇಲ್ಲವಾಯಿತು. (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತಾರನೆಯ ಸರ್ಗ

## ಸಪ್ತಪಂಚಾಶಃ ಸರ್ಗಃ

### ರಾಮಪ್ರತ್ಯಾಗಮನಮ್

ರಾಕ್ಷಸಂ ಮೃಗರೂಪೇಣ ಚರಂತಂ ಕಾಮರೂಪಿಣಮ್ ।
ನಿಹತ್ಯ ರಾಮೋ ಮಾರೀಚಂ ತೂರ್ಣಂ ಪಥಿ ನಿವರ್ತತೇ ॥ ೧

ತಸ್ಯ ಸಂತ್ವರಮಾಣಸ್ಯ ದ್ರಷ್ಟುಕಾಮಸ್ಯ ಮೈಥಿಲೀಮ್ ।
ಕ್ರೂರಸ್ವನೋಽಥ ಗೋಮಾಯುರ್ವಿನನಾದಾಸ್ಯ ಪೃಷ್ಠತಃ ॥ ೨

ಸ ತಸ್ಯ ಸ್ವರಮಾಜ್ಞಾಯ ದಾರುಣಂ ರೋಮಹರ್ಷಣಮ್ ।
ಚಿಂತಯಾಮಾಸ ಗೋಮಾಯೋಃ ಸ್ವರೇಣ ಪರಿಶಂಕಿತಃ ॥ ೩

ಅಶುಭಂ ಬತ ಮನ್ಯೇಽಹಂ ಗೋಮಾಯುರ್ವಾಶತೇ ಯಥಾ ।
ಸ್ವಸ್ತಿ ಸ್ಯಾದಪಿ ವೈದೇಹ್ಯಾ ರಾಕ್ಷಸೈರ್ಭಕ್ಷಣಂ ವಿನಾ ॥ ೪

ಮಾರೀಚೇನ ತು ವಿಜ್ಞಾಯ ಸ್ವರಮಾಲಕ್ಷ್ಯ ಮಾಮಕಮ್ ।
ಆಕ್ರುಷ್ಟಂ ಮೃಗರೂಪೇಣ ಲಕ್ಷ್ಮಣಃ ಶೃಣುಯಾದ್ಯದಿ ॥ ೫

### ಸರ್ಗ ೫೭

ಶ್ರೀರಾಮನು ಮಾರೀಚನನ್ನು ಕೊಂದು ಚಿಂತಾಕುಲನಾಗಿ ಹಿಂದಿರುಗುವುದು.
ದಾರಿಯಲ್ಲಿ ಲಕ್ಷ್ಮಣನನ್ನು ಕಾಣುವುದು

ಇತ್ತ ಶ್ರೀರಾಮನು ಮೃಗವೇಷದಲ್ಲಿ ಬಂದ ಕಾಮರೂಪಿಯಾದ ಮಾರೀಚನನ್ನು ವಧಿಸಿ, ಬೇಗಬೇಗನೆ ತನ್ನ ಆಶ್ರಮದ ಕಡೆಗೆ ಹಿಂದಿರುಗಿ ಬರುತ್ತಿದ್ದನು. ಅವನು ಮೈಥಿಲಿಯನ್ನು ಮೊದಲು ನೋಡಬೇಕೆಂದು ತ್ವರೆಯಿಂದ ಬರುತ್ತಿರಲು, ಅವನ ಹಿಂದುಗಡೆ ನರಿಯೊಂದು ಕೆಟ್ಟಧ್ವನಿಯಿಂದ ಊಳಿಟ್ಟಿತು (೧–೨). ರೋಮಾಂಚಗೊಳಿಸುವ ಆ ದಾರುಣಶಬ್ದವನ್ನು ಕೇಳಿ ಶ್ರೀರಾಮನು ತಲ್ಲಣಿಸಿದನು. ನರಿಯ ಕೂಗಿನಿಂದ ಶಂಕೆಯು ಹೆಚ್ಚಿ ಅವನು ಚಿಂತೆಗೊಳಗಾದನು : "ಅಕಟಾ ! ಈ ನರಿಯು ಕೂಗುವುದನ್ನು ಕೇಳಿದರೆ, ಯಾವುದೋ ಅಶುಭವು ಕಾದಿದೆಯೆಂದು ತಿಳಿಯುತ್ತದೆ. ವೈದೇಹಿಯು ಕುಶಲದಿಂದ ಇದ್ದಿರಬಹುದೆ ? ರಾಕ್ಷಸರು ಅವಳನ್ನು ಭಕ್ಷಿಸದಿರಬಹುದೆ ? (೩–೪). ಮೃಗರೂಪಿಯಾದ ಮಾರೀಚನು ನನ್ನ ಸ್ವರವು ಹೇಗಿದೆಯೆಂಬುದನ್ನು ತಿಳಿದು ಅದನ್ನೇ ಅನುಸರಿಸಿ, 'ಹಾ ಸೀತೇ,

ಸ ಸೌಮಿತ್ರಿಃ ಸ್ವರಂ ಶ್ರುತ್ವಾ ತಾಂ ಚ ಹಿತ್ವಾ ಚ ಮೈಥಿಲೀಮ್ ।
ತಯೈವ ಪ್ರಹಿತಃ ಕ್ಷಿಪ್ರಂ ಮತ್ಸಕಾಶಮಿಹೈಷ್ಯತಿ ॥ ೬

ರಾಕ್ಷಸೈಃ ಸಹಿತೈರ್ನೂನಂ ಸೀತಾಯಾ ಈಪ್ಸಿತೋ ವಧಃ ।
ಕಾಂಚನಶ್ಚ ಮೃಗೋ ಭೂತ್ವಾ ವ್ಯಪನೀಯಾಶ್ರಮಾತ್ತು ಮಾಮ್ ॥

ದೂರಂ ನೀತ್ವಾ ತು ಮಾರೀಚೋ ರಾಕ್ಷಸೋಽಭೂಚ್ಛರಾಹತಃ ।
ಹಾ ಲಕ್ಷ್ಮಣ ಹತೋಽಸ್ಮೀತಿ ಯದ್ವಾಕ್ಯಂ ವ್ಯಾಜಹಾರ ಹ ॥ ೮

ಅಪಿ ಸ್ವಸ್ತಿ ಭವೇದ್ದ್ವಾಭ್ಯಾಂ ರಹಿತಾಭ್ಯಾಂ ಮಯಾ ವನೇ ।
ಜನಸ್ಥಾನನಿಮಿತ್ತಂ ಹಿ ಕೃತವೈರೋಽಸ್ಮಿ ರಾಕ್ಷಸೈಃ ॥ ೯

ನಿಮಿತ್ತಾನಿ ಚ ಘೋರಾಣಿ ದೃಶ್ಯಂತೇಽದ್ಯ ಬಹೂನಿ ಚ ।
ಇತ್ಯೇವಂ ಚಿಂತಯನ್ ರಾಮಃ ಶ್ರುತ್ವಾ ಗೋಮಾಯುನಿಃಸ್ವನಮ್ ॥

ಆತ್ಮನಶ್ಚಾಪನಯನಾನ್ಮೃಗರೂಪೇಣ ರಕ್ಷಸಾ ।
ಆಜಗಾಮ ಜನಸ್ಥಾನಂ ರಾಘವಃ ಪರಿಶಂಕಿತಃ ॥ ೧೧

---

ಹಾ ಲಕ್ಷ್ಮಣಾ' ಎಂದು ಕೂಗಿದ್ದಾನೆ. ಲಕ್ಷ್ಮಣನಿಗೆ ಆ ಶಬ್ದವು ಕೇಳಿಸಿದರೆ ಅವನು ಮೈಥಿಲಿಯನ್ನು ಅಲ್ಲಿಯೇ ಬಿಟ್ಟು, ನನ್ನನ್ನು ಹುಡುಕಿಕೊಂಡು ಬಂದುಬಿಡುವನು. ಕೂಡಲೇ ಹೋಗಬೇಕೆಂದು ಸೀತೆಯೂ ಲಕ್ಷ್ಮಣನನ್ನು ನಿರ್ಬಂಧಿಸುವಳು (೫–೬). ರಾಕ್ಷಸರೆಲ್ಲರೂ ಒಟ್ಟುಗೂಡಿ ಸೀತೆಯನ್ನು ವಧಿಸಬೇಕೆಂದು ಸಂಚುಮಾಡಿರಬೇಕು. ಆದ್ದರಿಂದಲೇ ಮಾರೀಚನೂ ಚಿನ್ನದ ಜಿಂಕೆಯಾಗಿ ಬಂದು ನನ್ನನ್ನು ಆಶ್ರಮದಿಂದ ಇಷ್ಟುದೂರ ಕರೆತಂದನು (೭). ಬಹುದೂರ ನನ್ನನ್ನು ಕರೆದೊಯ್ದು, ಅಲ್ಲಿ ನಾನು ಶರದಿಂದ ಹೊಡೆದಾಗ ರಾಕ್ಷಸನಾಗಿ ತೋರಿದನು. ಆಗಲೂ 'ಹಾ ಲಕ್ಷ್ಮಣಾ ! ನಾನು ಸತ್ತೆ !' ಎಂದು ಕೂಗಿದನಲ್ಲವೆ ? (೮). ನಾನು ಸೀತಾಲಕ್ಷ್ಮಣರಿಬ್ಬರನ್ನೇ ವನದಲ್ಲಿ ಬಿಟ್ಟು, ಇತ್ತ ಬಂದುಬಿಟ್ಟೆನಲ್ಲ ! ಅವರು ಕ್ಷೇಮವಾಗಿ ಇದ್ದಿರಬಹುದೆ ? ಬಹಳ ಘೋರವಾದ ಕೆಟ್ಟಶಕುನಗಳಾಗುತ್ತಿವೆಯಲ್ಲ !" ಎಂದು ಶ್ರೀರಾಮನು ಚಿಂತಾಕುಲನಾದನು. ಮುಖ್ಯವಾಗಿ ನರಿಯ ಕೆಟ್ಟಕೂಗು, ರಾಕ್ಷಸನು ಮೃಗರೂಪದಿಂದ ಬಂದು ತನ್ನನ್ನು ದೂರದವರೆಗೆ ಕರೆದೊಯ್ದುದು—ಆತನ ವ್ಯಥೆಗೆ ನಿಮಿತ್ತವಾಗಿದ್ದವು. ರಾಘವನು ಹೀಗೆ ವಿಧವಿಧವಾಗಿ ಶಂಕಿಸುತ್ತಲೇ

ತಂ ದೀನಮಾನಸಂ ದೀನಮಾಸೇದುರ್ಮೃಗಪಕ್ಷಿಣಃ ।
ಸವ್ಯಂ ಕೃತ್ವಾ ಮಹಾತ್ಮಾನಂ ಘೋರಾಂಶ್ಚ ಸಸೃಜುಃ ಸ್ವರಾನ್ ॥ ೧೨

ತಾನಿ ದೃಷ್ಟ್ವಾ ನಿಮಿತ್ತಾನಿ ಮಹಾಘೋರಾಣಿ ರಾಘವಃ ।
ನ್ಯವರ್ತತಾಥ ತ್ವರಿತೋ ಜವೇನಾಶ್ರಮಮಾತ್ಮನಃ ॥ ೧೩

ಸ ತು ಸೀತಾಂ ವರಾರೋಹಾಂ ಲಕ್ಷ್ಮಣಂ ಚ ಮಹಾಬಲಮ್ ।
ಆಜಗಾಮ ಜನಸ್ಥಾನಂ ಚಿಂತಯನ್ನೇವ ರಾಘವಃ ॥ ೧೪

ತತೋ ಲಕ್ಷ್ಮಣಮಾಯಾಂತಂ ದದರ್ಶ ವಿಗತಪ್ರಭಮ್ ।
ತತೋಽವಿದೂರೇ ರಾಮೇಣ ಸಮೀಯಾಯ ಸ ಲಕ್ಷ್ಮಣಃ ॥ ೧೫

ವಿಷಣ್ಣಃ ಸುವಿಷಣ್ಣೇನ ದುಃಖಿತೋ ದುಃಖಭಾಗಿನಾ ।
ಸಂಜಗರ್ಹೇಽಥ ತಂ ಭ್ರಾತಾ ದೃಷ್ಟ್ವಾ ಲಕ್ಷ್ಮಣಮಾಗತಮ್ ॥ ೧೬

ವಿಹಾಯ ಸೀತಾಂ ವಿಜನೇ ವನೇ ರಾಕ್ಷಸಸೇವಿತೇ ।
ಗೃಹೀತ್ವಾ ಚ ಕರಂ ಸವ್ಯಂ ಲಕ್ಷ್ಮಣಂ ರಘುನಂದನಃ ॥ ೧೭

---

ಜನಸ್ಥಾನದಲ್ಲಿದ್ದ ಪರ್ಣಶಾಲೆಯ ಕಡೆಗೆ ಬರುತ್ತಿದ್ದನು (೯–೧೧). ಆ ಮಹಾತ್ಮನು ದೀನಮನಸ್ಕನಾಗಿ ತಳಮಳಿಸುತ್ತ ಬರುತ್ತಿರಲು, ಮೃಗಪಕ್ಷಿಗಳು ಅಪ್ರದಕ್ಷಿಣವಾಗಿ ಅವನನ್ನು ಬಳಸುತ್ತ ವಿಕಾರವಾಗಿ ಕೂಗಿಕೊಂಡವು. ರಾಘವನು ಆ ದುರ್ನಿಮಿತ್ತಗಳನ್ನು ನೋಡಿ ಮತ್ತಷ್ಟು ತ್ವರೆಯಿಂದ ತನ್ನ ಆಶ್ರಮದಕಡೆಗೆ ಧಾವಿಸುತ್ತ ಬಂದನು (೧೨–೧೩). ಆತನು ತನ್ನ ಕಾಂತೆಯಾದ ಸೀತಾದೇವಿಯನ್ನೂ ಬಲಾಢ್ಯನಾದ ಲಕ್ಷ್ಮಣನನ್ನೂ ಕುರಿತು ಚಿಂತಿಸುತ್ತಲೇ ಜನಸ್ಥಾನದ ಕಡೆಗೆ ಬಂದನು. ದೂರದಲ್ಲಿ ಲಕ್ಷ್ಮಣನು ದೈನ್ಯದಿಂದ ಕಳೆಗುಂದಿ ಬರುತ್ತಿರುವುದು ಕಾಣಿಸಿತು! ಸ್ವಲ್ಪ ಹೊತ್ತಿನಲ್ಲಿ ಲಕ್ಷ್ಮಣನು ಶ್ರೀರಾಮನ ಸಮೀಪಕ್ಕೆ ಬಂದುಬಿಟ್ಟನು! (೧೫–೧೫). ವಿಷಣ್ಣನಾದ ಲಕ್ಷ್ಮಣನು ವಿಷಣ್ಣನಾಗಿದ್ದ ಶ್ರೀರಾಮನ ಸಮೀಪಕ್ಕೆ ಬಂದನು. ಶೋಕಾರ್ತನಾದ ಲಕ್ಷ್ಮಣನು ಶೋಕಾರ್ತನಾಗಿದ್ದ ಅಣ್ಣನ ಬಳಿಗೆ ಬಂದನು. ರಾಕ್ಷಸರ ಹಾವಳಿಗೆ ಒಳಗಾದ ನಿರ್ಜನವಾದ ಅರಣ್ಯದಲ್ಲಿ ಸೀತೆಯೊಬ್ಬಳನ್ನೇ ಬಿಟ್ಟು ಲಕ್ಷ್ಮಣನು ಏಕೆ ಬಂದನೆಂದು

ಉವಾಚ ಮಧುರೋದರ್ಕಮಿದಂ ವಚನಮಾರ್ತವತ್ ।
ಅಹೋ ಲಕ್ಷ್ಮಣ ಗರ್ಹ್ಯಂ ತೇ ಕೃತಂ ಯಸ್ತ್ವಂ ವಿಹಾಯ ತಾಮ್ ॥

ಸೀತಾಮಿಹಾಗತಃ ಸೌಮ್ಯ ಕಚ್ಚಿತ್ ಸ್ವಸ್ತಿ ಭವೇದಿಹ ।
ನ ಮೇಽಸ್ತಿ ಸಂಶಯೋ ವೀರ ಸರ್ವಥಾ ಜನಕಾತ್ಮಜಾ ॥ ೧೯

ವಿನಷ್ಟಾ ಭಕ್ಷಿತಾ ವಾಪಿ ರಾಕ್ಷಸೈರ್ವನಚಾರಿಭಿಃ ।
ಅಶುಭಾನ್ಯೇವ ಭೂಯಿಷ್ಠಂ ಯಥಾ ಪ್ರಾದುರ್ಭವಂತಿ ಮೇ ॥ ೨೦

ಅಪಿ ಲಕ್ಷ್ಮಣ ಸೀತಾಯಾಃ ಸಾಮಗ್ರ್ಯಂ ಪ್ರಾಪ್ನುಯಾವಹೇ ।
ಜೀವಂತ್ಯಾಃ ಪುರುಷವ್ಯಾಘ್ರ ಸುತಾಯಾ ಜನಕಸ್ಯ ವೈ ॥ ೨೧

ಯಥಾ ವೈ ಮೃಗಸಂಘಾಶ್ಚ ಗೋಮಾಯುಶ್ಚೈವ ಭೈರವಮ್ ।
ವಾಶಂತೇ ಶಕುನಾಶ್ಚಾಪಿ ಪ್ರದೀಪ್ತಾಮಭಿತೋ ದಿಶಮ್ ॥ ೨೨

ಅಪಿ ಸ್ವಸ್ತಿ ಭವೇತ್ತಸ್ಯಾ ರಾಜಪುತ್ರ್ಯಾ ಮಹಾಬಲ ॥
ಇದಂ ಹಿ ರಕ್ಷೋ ಮೃಗಸಂನಿಕಾಶಂ
ಪ್ರಲೋಭ್ಯ ಮಾಂ ದೂರಮನುಪ್ರಯಾತಮ್ ।

---

ಅಣ್ಣನು ತಮ್ಮನನ್ನು ಆಕ್ಷೇಪಿಸಿದನು (೧೬-೧೭). ರಘುನಂದನನು ಲಕ್ಷ್ಮಣನ ಎಡಗೈಯನ್ನು ದೈನ್ಯದಿಂದ ಹಿಡಿದುಕೊಂಡು ಮೃದುವಾಗಿಯೇ "ಅಯ್ಯೋ! ಲಕ್ಷ್ಮಣ, ನೀನು ತಪ್ಪು ಮಾಡಿದೆ! ಸೀತೆಯೊಬ್ಬಳನ್ನೇ ಬಿಟ್ಟು ಬಂದೆಯಲ್ಲ! ಸೌಮ್ಯ, ಈಗ ಒಳ್ಳೆಯದಾದೀತೆ! ಈ ವನದಲ್ಲಿ ಅಲೆಯುವ ರಾಕ್ಷಸರು ಜಾನಕಿಯನ್ನು ಕೊಂದಿರಬಹುದು; ಇಲ್ಲವೇ ತಿಂದಿರಬಹುದು. ಸಂದೇಹವೇ ಇಲ್ಲ. ನನಗಾಗುವ ದುಶ್ಶಕುನಗಳನ್ನು ನೋಡಿದರೆ ಹಾಗೆನಿಸುತ್ತದೆ (೧೮-೨೦). ಸೀತೆಯು ಪೂರ್ಣಕ್ಷೇಮದಲ್ಲಿರುವುದನ್ನು ನಾವು ನೋಡುವೆವೆ, ಲಕ್ಷ್ಮಣ? ಜನಕಮಹಾರಾಜನ ಮಗಳು ಬದುಕಿರುವುದನ್ನು ಕಾಣುವೆವೆ, ಲಕ್ಷ್ಮಣ? ಆ ನರಿ, ಈ ಮೃಗಗಳು, ಈ ಪಕ್ಷಿಗಳು—ಸೂರ್ಯನು ಬೆಳಗುವ ದಿಕ್ಕಿಗೆ ಅಭಿಮುಖವಾಗಿ ನಿಂತು ವಿಕಾರವಾಗಿ ಕೂಗಿಕೊಳ್ಳುತ್ತಿವೆಯಲ್ಲ, ತಮ್ಮ ಆ ರಾಜಕುಮಾರಿಯು ಕ್ಷೇಮದಲ್ಲಿರಬಹುದೆ? (೨೧-೨೨). ಈ ರಾಕ್ಷಸನು ಮೃಗರೂಪದಿಂದ ನನಗೆ ಆಸೆಹುಟ್ಟಿಸಿ ಬಹುದೂರ ಕರೆ

ಹತಂ ಕಥಂಚಿನ್ಮಹತಾ ಶ್ರಮೇಣ
ಸ ರಾಕ್ಷಸೋಽಭೂನ್ಮ್ರಿಯಮಾಣ ಏವ ॥ ೨೩

ಮನಶ್ಚ ಮೇ ದೀನಮಿಹಾಪ್ರಹೃಷ್ಟಂ
ಚಕ್ಷುಶ್ಚ ಸವ್ಯಂ ಕುರುತೇ ವಿಕಾರಮ್ ।
ಅಸಂಶಯಂ ಲಕ್ಷ್ಮಣ ನಾಸ್ತಿ ಸೀತಾ
ಹೃತಾ ಮೃತಾ ವಾ ಪಥಿ ವರ್ತತೇ ವಾ ॥ ೨೪

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತಪಂಚಾಶಃ ಸರ್ಗಃ

ದೊಯ್ದನು. ನನಗೆ ಬಹಳ ಶ್ರಮವಾಯಿತು. ಕಡೆಗೆ ನಾನು ಕೊಂದೆನು. ಸಾಯುವಾಗ ಅವನು ರಾಕ್ಷಸನಾಗಿ ಕಾಣಿಸಿದನು (೨೩). ನನ್ನ ಮನಸ್ಸು ವಿಷಣ್ಣವಾಗಿದೆ. ಶಾಂತಿಯ ಲೇಶವೂ ಇಲ್ಲ. ಎಡಗಣ್ಣು ಅದುರುತ್ತಿದೆ. ಲಕ್ಷ್ಮಣ, ನಿಃಸಂಶಯವಾಗಿ ಸೀತೆ ಇಲ್ಲ ! ಅವಳನ್ನು ಯಾರೋ ಅಪಹರಿಸಿರಬೇಕು, ಕೊಂದಿರಬೇಕು ; ಅಥವಾ ಅರ್ಧದಾರಿಯಲ್ಲಿ ಒಯ್ಯುತ್ತಿರಬೇಕು" ಎಂದು ವಿಲಪಿಸಿದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೇಳನೆಯ ಸರ್ಗ

## ಅಷ್ಟಪಂಚಾಶಃ ಸರ್ಗಃ

### ಅನಿಮಿತ್ತದರ್ಶನಮ್

ಸ ದೃಷ್ಟ್ವಾ ಲಕ್ಷ್ಮಣಂ ದೀನಂ ಶೂನ್ಯಂ ದಶರಥಾತ್ಮಜಃ ।
ಪರ್ಯಪೃಚ್ಛತ ಧರ್ಮಾತ್ಮಾ ವೈದೇಹೀಮಾಗತಂ ವಿನಾ ॥ ೧

ಪ್ರಸ್ಥಿತಂ ದಂಡಕಾರಣ್ಯಂ ಯಾ ಮಾಮನುಜಗಾಮ ಹ ।
ಕ್ವ ಸಾ ಲಕ್ಷ್ಮಣ ವೈದೇಹೀ ಯಾಂ ಹಿತ್ವಾ ತ್ವಮಿಹಾಗತಃ ॥ ೨

ರಾಜ್ಯಭ್ರಷ್ಟಸ್ಯ ದೀನಸ್ಯ ದಂಡಕಾನ್ ಪರಿಧಾವತಃ ।
ಕ್ವ ಸಾ ದುಃಖಸಹಾಯಾ ಮೇ ವೈದೇಹೀ ತನುಮಧ್ಯಮಾ ॥ ೩

ಯಾಂ ವಿನಾ ನೋತ್ಸಹೇ ವೀರ ಮುಹೂರ್ತಮಪಿ ಜೀವಿತುಮ್ ।
ಕ್ವ ಸಾ ಪ್ರಾಣಸಹಾಯಾ ಮೇ ಸೀತಾ ಸುರಸುತೋಪಮಾ ॥ ೪

ಪತಿತ್ವಮಮರಾಣಾಂ ವಾ ಪೃಥಿವ್ಯಾಶ್ಚಾಪಿ ಲಕ್ಷ್ಮಣ ।
ತಾಂ ವಿನಾ ತಪನೀಯಾಭಾಂ ನೇಚ್ಛೇಯಂ ಜನಕಾತ್ಮಜಾಮ್ ॥ ೫

### ಸರ್ಗ ೫೮

ಸೀತೆಯನ್ನು ಪುನಃ ಕಾಣುವುದು ದುರ್ಲಭವೆಂದೆಣಿಸಿ ಶ್ರೀರಾಮನ ವಿಲಾಪ

ಲಕ್ಷ್ಮಣನು ಏನನ್ನೂ ಹೇಳಲಾರದೆ ಶೂನ್ಯಮನಸ್ಕನಾಗಿ ದೈನ್ಯದಿಂದ ನಿಂತಿದ್ದನು. ವೈದೇಹಿಯನ್ನು ಒಂಟಿಯಾಗಿ ಬಿಟ್ಟುಬಂದಿದ್ದ ಅವನನ್ನು ನೋಡಿ ಶ್ರೀರಾಮನು ಮತ್ತೆ ಹಲುಬಿದನು (೧): "ವತ್ಸ, ದಂಡಕಾರಣ್ಯಕ್ಕೆ ಹೊರಟಾಗಲೂ ವೈದೇಹಿ ನನ್ನನ್ನು ಹಿಂಬಾಲಿಸಿ ಬಂದಳು. ಅವಳೀಗ ಎಲ್ಲಿ? ನೀನು ಅವಳನ್ನು ಅಲ್ಲಿಯೇ ಬಿಟ್ಟುಬರಬಹುದೆ? (೨). ನಾನು ರಾಜ್ಯಭ್ರಷ್ಟನಾಗಿ ದೈನ್ಯದಿಂದ ದಂಡಕಾರಣ್ಯದಲ್ಲಿ ಅತ್ತಿತ್ತ ಅಲೆಯುವಾಗ, ನನ್ನ ಕಷ್ಟಕ್ಕೆ ನೆರವಾಗಿ ಸಹಭಾಗಿನಿಯಾಗಿದ್ದ ವೈದೇಹಿ ಎಲ್ಲಿ? (೩). ಲಕ್ಷ್ಮಣ, ಯಾರನ್ನು ಅಗಲಿ ಅರಗಳಿಗೆಯೂ ನಾನು ಬದುಕಿರಲಾರೆನೋ, ದೇವಕನ್ಯೆಯಂತಿರುವ ಆ ನನ್ನ ಪ್ರಾಣಕಾಂತೆ ಎಲ್ಲಿ? ಕನಕಾಂಗಿಯಾದ ಜಾನಕಿಯು ನನ್ನೊಡನಿಲ್ಲದಿದ್ದರೆ, ಲಕ್ಷ್ಮಣ, ದೇವೇಂದ್ರಪದವಿಯು ಬಂದರೂ ನನಗೆ

ಕಚ್ಚಿಜ್ಜೀವತಿ ವೈದೇಹೀ ಪ್ರಾಣೈಃ ಪ್ರಿಯತರಾ ಮಮ ।
ಕಚ್ಚಿತ್ ಪ್ರವ್ರಾಜನಂ ಸೌಮ್ಯ ನ ಮೇ ಮಿಥ್ಯಾ ಭವಿಷ್ಯತಿ ॥ ೬

ಸೀತಾನಿಮಿತ್ತಂ ಸೌಮಿತ್ರೇ ಮೃತೇ ಮಯಿ ಗತೇ ತ್ವಯಿ ।
ಕಚ್ಚಿತ್ ಸಕಾಮಾ ಸುಖಿತಾ ಕೈಕೇಯೀ ಸಾ ಭವಿಷ್ಯತಿ ॥ ೭

ಸಪುತ್ರರಾಜ್ಯಾಂ ಸಿದ್ಧಾರ್ಥಾಂ ಮೃತಪುತ್ರಾ ತಪಸ್ವಿನೀ ।
ಉಪಸ್ಥಾಸ್ಯತಿ ಕೌಸಲ್ಯಾ ಕಚ್ಚಿತ್ ಸೌಮ್ಯ ನ ಕೈಕಯೀಮ್ ॥ ೮

ಯದಿ ಜೀವತಿ ವೈದೇಹೀ ಗಮಿಷ್ಯಾಮ್ಯಾಶ್ರಮಂ ಪುನಃ ।
ಸುವೃತ್ತಾ ಯದಿ ವೃತ್ತಾ ಸಾ ಪ್ರಾಣಾಂಸ್ತ್ಯಕ್ಷ್ಯಾಮಿ ಲಕ್ಷ್ಮಣ ॥ ೯

ಯದಿ ಮಾಮಾಶ್ರಮಗತಂ ವೈದೇಹೀ ನಾಭಿಭಾಷತೇ ।
ಪುನಃ ಪ್ರಹಸಿತಾ ಸೀತಾ ವಿನಶಿಷ್ಯಾಮಿ ಲಕ್ಷ್ಮಣ ॥ ೧೦

---

ಬೇಡ: ಭೂಲೋಕದ ಚಕ್ರವರ್ತಿಪದವಿಯೂ ಬೇಡ (೪-೫). ತಮ್ಮ, ಪ್ರಾಣಕ್ಕಿಂತಲೂ ನನಗೆ ಪ್ರಿಯಳಾದ ವೈದೇಹಿ ಬದುಕಿರುವಳೆ? ಹದಿನಾಲ್ಕು ವರ್ಷಗಳವರೆಗೆ ವನವಾಸ ಮಾಡುವೆನೆಂಬ ನನ್ನ ಪ್ರತಿಜ್ಞೆ ಸುಳ್ಳಾಗದೆ ಇದ್ದೀತೆ?* ಸೌಮಿತ್ರಿ, ಸೀತಾವಿಯೋಗದಿಂದ ನಾನು ಸತ್ತು, ನೀನು ಅಯೋಧ್ಯೆಗೆ ಹೋಗಲು, ಕೈಕೇಯಿಯು ತನ್ನ ಇಷ್ಟ ಕೈಗೂಡಿತೆಂದು ಸಂತೋಷಿಸಬಹುದಲ್ಲವೆ? (೬-೭). ಮಗನಿಗೆ ರಾಜ್ಯವು ದಕ್ಕಿತೆಂದು ಕೃತಕೃತ್ಯಳಾಗಿ ನಲಿಯುವ ಕೈಕೇಯಿಯನ್ನು, ತಮ್ಮ, ಮಗನನ್ನು ಕಳೆದುಕೊಂಡು ಅನಾಥೆಯಾದ ನನ್ನ ತಾಯಿ ಸೇವೆಮಾಡಬೇಕಾಗಿ ಬಂದೀತಲ್ಲವೆ? (೮). ವೈದೇಹಿಯು ಬದುಕಿರುವುದು ದಿಟವಾದರೆ ಮಾತ್ರ ನಾನು ಆಶ್ರಮದೊಳಗೆ ಕಾಲಿಟ್ಟೇನು. ಹಾಗಿಲ್ಲದೆ ಆ ಸುಶೀಲೆಯು ಮೃತಳಾಗಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವೆನು, ಲಕ್ಷ್ಮಣ (೯). ನಾನು ಆಶ್ರಮದ ಬಳಿಗೆ ಹೋದಾಗ, ನಗುಮುಖದ ಸೀತೆಯು ಬಂದು ಮಾತನಾಡಿಸದಿದ್ದರೆ—ಸತ್ತು

---

* ವನವಾಸವು ಮುಗಿಯದೆ ಸೀತಾವಿಯೋಗದಿಂದ ನಾನು ಪ್ರಾಣಬಿಡಬೇಕಾಗುವುದೋ ಏನೋ ಎಂದು ಅಭಿಪ್ರಾಯ.

ಬ್ರೂಹಿ ಲಕ್ಷ್ಮಣ ವೈದೇಹೀ ಯದಿ ಜೀವತಿ ವಾ ನ ವಾ ।
ತ್ವಯಿ ಪ್ರಮತ್ತೇ ರಕ್ಷೋಭಿರ್ಭಕ್ಷಿತಾ ವಾ ತಪಸ್ವಿನೀ ॥ ೧೧

ಸುಕುಮಾರೀ ಚ ಬಾಲಾ ಚ ನಿತ್ಯಂ ಚಾದುಃಖದರ್ಶಿನೀ ।
ಮದ್ವಿಯೋಗೇನ ವೈದೇಹೀ ವ್ಯಕ್ತಂ ಶೋಚತಿ ದುರ್ಮನಾಃ ॥ ೧೨

ಸರ್ವಥಾ ರಕ್ಷಸಾ ತೇನ ಜಿಹ್ಮೇನ ಸುದುರಾತ್ಮನಾ ।
ವದತಾ ಲಕ್ಷ್ಮಣೇತ್ಯುಚ್ಚೈಸ್ತವಾಪಿ ಜನಿತಂ ಭಯಮ್ ॥ ೧೩

ಶ್ರುತಸ್ತು ಶಂಕೇ ವೈದೇಹ್ಯಾ ಸ ಸ್ವರಃ ಸದೃಶೋ ಮಮ ।
ತ್ರಸ್ತಯಾ ಪ್ರೇಷಿತಸ್ತ್ವಂ ಚ ದ್ರಷ್ಟುಂ ಮಾಂ ಶೀಘ್ರಮಾಗತಃ ॥ ೧೪

ಸರ್ವಥಾ ತು ಕೃತಂ ಕಷ್ಟಂ ಸೀತಾಮುತ್ಸೃಜತಾ ವನೇ ।
ಪ್ರತಿಕರ್ತುಂ ನೃಶಂಸಾನಾಂ ರಕ್ಷಸಾಂ ದತ್ತಮಂತರಮ್ ॥ ೧೫

ದುಃಖಿತಾಃ ಖರಘಾತೇನ ರಾಕ್ಷಸಾಃ ಪಿಶಿತಾಶನಾಃ ।
ತೈಃ ಸೀತಾ ನಿಹತಾ ಘೋರೈರ್ಭವಿಷ್ಯತಿ ನ ಸಂಶಯಃ ॥ ೧೬

---

ಹೋಗುವೆನು, ಲಕ್ಷ್ಮಣ. ಹೇಳು ತಮ್ಮ, ವೈದೇಹಿ ಬದುಕಿರುವಳೋ ಇಲ್ಲವೋ? ನೀನು ಅಜಾಗರೂಕನಾಗಿದ್ದಾಗ, ರಾಕ್ಷಸರೇನಾದರೂ ಬಂದು ಆ ತಪಸ್ವಿನಿಯನ್ನು ತಿಂದುಬಿಟ್ಟರೋ ಹೇಗೆ? (೧೦-೧೧). ಸುಕುಮಾರಿಯಾದ ಆ ಹುಡುಗಿ ಕಷ್ಟವನ್ನು ಕಂಡವಳಲ್ಲ. ಸ್ವಲ್ಪ ಕಾಲ ನನ್ನ ವಿರಹವಾದರೂ ಖಿನ್ನಳಾಗಿ ದುಃಖಿಸುತ್ತಿದ್ದಳು. ಸರ್ವಥಾ ದುರಾತ್ಮನೂ ವಂಚಕನೂ ಆದ ಆ ರಾಕ್ಷಸನು 'ಲಕ್ಷ್ಮಣಾ' ಎಂದು ಗಟ್ಟಿಯಾಗಿ ಕೂಗಿದ್ದರಿಂದ ನಿನಗೂ ಅಂಜಿಕೆಯಾಗಿರಬೇಕು (೧೨-೧೩). ನನ್ನ ಧ್ವನಿಯಂತೆಯೇ ಇದ್ದ ಆ ಧ್ವನಿಯು ವೈದೇಹಿಗೂ ಕೇಳಿಸಿರಬೇಕೆಂದು ಊಹಿಸುತ್ತೇನೆ. ಅವಳು ಬೆಚ್ಚಿಬಿದ್ದು ನಿನ್ನನ್ನು ಇಲ್ಲಿಗೆ ಕಳಿಸಿರಬೇಕು. ನೀನು ನನ್ನನ್ನು ನೋಡಬೇಕೆಂದು ತ್ವರೆಯಿಂದ ಬಂದಿದ್ದೀಯೆ (೧೪). ಒಟ್ಟಿನಲ್ಲಿ ನೀನು ಸೀತೆಯನ್ನು ಬಿಟ್ಟುಬಂದುದು ತಪ್ಪಾಯಿತು. ಘಾತುಕರಾದ ರಾಕ್ಷಸರಿಗೆ ಸೇಡುತೀರಿಸಿಕೊಳ್ಳಲು ಅವಕಾಶ ಸಿಕ್ಕಿತು. ಖರನನ್ನು ಸಂಹರಿಸಿದ್ದರಿಂದ

ಅಹೋಽಸ್ಮಿನ್ ವ್ಯಸನೇ ಮಗ್ನಃ ಸರ್ವಥಾ ಶತ್ರುಸೂದನ ।
ಕಿಂ ನ್ವಿದಾನೀಂ ಕರಿಷ್ಯಾಮಿ ಶಂಕೇ ಪ್ರಾಪ್ತವ್ಯಮೀದೃಶಮ್ ॥ ೧೭

ಇತಿ ಸೀತಾಂ ವರಾರೋಹಾಂ ಚಿಂತಯನ್ನೇವ ರಾಘವಃ ।
ಆಜಗಾಮ ಜನಸ್ಥಾನಂ ತ್ವರಯಾ ಸಹಲಕ್ಷ್ಮಣಃ ॥ ೧೮

ವಿಗರ್ಹಮಾಣೋಽನುಜಮಾರ್ತರೂಪಂ
ಕ್ಷುಧಾ ಶ್ರಮಾಚ್ಚೈವ ಪಿಪಾಸಯಾ ಚ ।
ವಿನಿಃಶ್ವಸನ್ ಶುಷ್ಕಮುಖೋ ವಿವರ್ಣಃ
ಪ್ರತಿಶ್ರಯಂ ಪ್ರಾಪ್ಯ ಸಮೀಕ್ಷ್ಯ ಶೂನ್ಯಮ್ ॥ ೧೯

ಸ್ವಮಾಶ್ರಮಂ ಸಂಪ್ರವಿಗಾಹ್ಯ ವೀರೋ
ವಿಹಾರದೇಶಾನನುಸೃತ್ಯ ಕಾಂಶ್ಚಿತ್ ।

---

ಮಾಂಸಾಹಾರಿಗಳಾದ ರಾಕ್ಷಸರಿಗೆ ವ್ಯಥೆಯಾಗಿದೆ. ಭಯಂಕರ ಸ್ವಭಾವದ ಆ ರಾಕ್ಷಸರು ಸೀತೆಯನ್ನು ಕೊಲ್ಲುವರೆಂಬುದರಲ್ಲಿ ಸಂದೇಹವಿಲ್ಲ (೧೫-೧೬). ಅಯ್ಯೋ ! ಲಕ್ಷ್ಮಣ, ಮಹಾವ್ಯಸನದಲ್ಲಿ ನಾನು ಮುಳುಗಿಹೋದೆ. ಈಗ ಏನು ಮಾಡಲಿ ! ಇದೇ ನನ್ನ ಪ್ರಾಪ್ತಿಯೆಂದು ತೋರುತ್ತದೆ." ಈ ರೀತಿ ಯಲ್ಲಿ ರಾಘವನು ಸೀತೆಯ ವಿಷಯವಾಗಿ ಚಿಂತಿಸುತ್ತಲೇ, ಲಕ್ಷ್ಮಣನೊಡನೆ ತ್ವರೆಯಿಂದ ಜನಸ್ಥಾನದಲ್ಲಿದ್ದ ಆಶ್ರಮದ ಬಳಿಗೆ ಧಾವಿಸಿದನು (೧೭-೧೮). ಹಸಿವು, ಬಳಲಿಕೆ, ಬಾಯಾರಿಕೆಗಳಿಂದ ಶ್ರೀರಾಮನು ನೊಂದು ಕಂದಿದ್ದನು. ಮುಖವು ಬಾಡಿತ್ತು ; ನಿಟ್ಟುಸಿರು ಬಿಡುತ್ತಿದ್ದನು. ಮೊದಲೇ ದುಃಖಿತ ನಾಗಿದ್ದ ಲಕ್ಷ್ಮಣನನ್ನು ಸೀತೆಯನ್ನಗಲಿ ಬಂದುದಕ್ಕಾಗಿ ಆಕ್ಷೇಪಿಸುತ್ತ ಶ್ರೀರಾಮನು ತ್ವರೆಯಿಂದ ಆಶ್ರಮದ ಸಮೀಪಕ್ಕೆ ಹೋದನು. ಆಶ್ರಮ ಪ್ರದೇಶವು ಶೂನ್ಯವಾಗಿತ್ತು (೧೯). ಆಮೇಲೆ ಆ ವೀರನು ತನ್ನ ಆಶ್ರಮ ವನ್ನು ಪ್ರವೇಶಿಸಿ ನೋಡಲು ಅದೂ ಶೂನ್ಯವಾಗಿತ್ತು. ಸೀತೆಯು ತಿರುಗಾಡುತ್ತಿದ್ದ ಕೆಲವು ಸ್ಥಳಗಳನ್ನು ಹುಡುಕಿದನು. ಸೀತೆಯು ಇದ್ದಿರ ಬಹುದಾದ ಸ್ಥಳ ಇದು—ಅದು ಎಂದು ಎಲ್ಲೆಲ್ಲಿಯೂ ಹುಡುಕಿದನು.

ಏತತ್ತದಿತ್ಯೇವ ನಿವಾಸಭೂಮೌ
ಪ್ರಹೃಷ್ಟರೋಮಾ ವ್ಯಥಿತೋ ಬಭೂವ ॥ ೨೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಪಂಚಾಶಃ ಸರ್ಗಃ

---

## ಏಕೋನಷಷ್ಟಿತಮಃ ಸರ್ಗಃ

### ಲಕ್ಷ್ಮಣಾಗಮನವಿಗರ್ಹಣಮ್

ಅಥಾಶ್ರಮಾದುಪಾವೃತ್ತಮಂತರಾ ರಘುನಂದನಃ ।
ಪರಿಪಪ್ರಚ್ಛ ಸೌಮಿತ್ರಿಂ ರಾಮೋ ದುಃಖಾದಿದಂ ವಚಃ ॥ ೧

ತಮುವಾಚ ಕಿಮರ್ಥಂ ತ್ವಮಾಗತೋಽಪಾಸ್ಯ ಮೈಥಿಲೀಮ್ ।
ಯದಾ ಸಾ ತವ ವಿಶ್ವಾಸಾದ್ವನೇ ವಿರಹಿತಾ ಮಯಾ ॥ ೨

---

(ಸೀತೆಗೆ ಏನಾಗಿರಬಹುದೋ ಎಂಬ ತಲ್ಲಣದಿಂದ) ರೋಮಾಂಚವಾಯಿತು. ಶ್ರೀರಾಮನು ವ್ಯಥೆಯಲ್ಲಿ ಮುಳುಗಿದನು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೆಂಟನೆಯ ಸರ್ಗ

---

## ಸರ್ಗ ೫೯*

ಸೀತೆಯೊಬ್ಬಳನ್ನೇ ಬಿಟ್ಟುಬರಲು ಕಾರಣವೇನೆಂದು ಶ್ರೀರಾಮನು
ಲಕ್ಷ್ಮಣನನ್ನು ಆಕ್ಷೇಪಿಸುವುದು. ಲಕ್ಷ್ಮಣನ ಉತ್ತರ.
ಶ್ರೀರಾಮನ ಅಸಮಾಧಾನ.

ಶ್ರೀರಾಮನು ಆಶ್ರಮದಿಂದ ಬಂದಿದ್ದ ಲಕ್ಷ್ಮಣನನ್ನು ಕುರಿತು ದಾರಿಯಲ್ಲಿ ದುಃಖದಿಂದ "ಲಕ್ಷ್ಮಣ, ಮೈಥಿಲಿಯನ್ನು ಪರಿತ್ಯಜಿಸಿ ನೀನು ಬಂದದ್ದೇಕೆ ? ನಿನ್ನನ್ನು ನಂಬಿಯೇ ಅಲ್ಲವೆ ನಾನು ಅವಳನ್ನು ಅರಣ್ಯದಲ್ಲಿ

* ಹಿಂದಿನ ಸರ್ಗದ ಕಡೆಯ ಎರಡು ಶ್ಲೋಕಗಳಲ್ಲಿ ಸಂಕ್ಷೇಪವಾಗಿ ಹೇಳಿದ ವೃತ್ತಾಂತವನ್ನು ಈ ಸರ್ಗದಲ್ಲಿ ವಿಸ್ತರಿಸಿ ಪುನಃ ಹೇಳಿದೆ.

ದೃಷ್ಟ್ವೈವಾಭ್ಯಾಗತಂ ತ್ವಾಂ ಮೇ ಮೈಥಿಲೀಂ ತ್ಯಜ್ಯ ಲಕ್ಷ್ಮಣ ।
ಶಂಕಮಾನಂ ಮಹತ್ ಪಾಪಂ ಯತ್ ಸತ್ಯಂ ವ್ಯಥಿತಂ ಮನಃ ॥ ೩

ಸ್ಫುರತೇ ನಯನಂ ಸವ್ಯಂ ಬಾಹುಶ್ಚ ಹೃದಯಂ ಚ ಮೇ ।
ದೃಷ್ಟ್ವಾ ಲಕ್ಷ್ಮಣ ದೂರೇ ತ್ವಾಂ ಸೀತಾವಿರಹಿತಂ ಪಥಿ ॥ ೪

ಏವಮುಕ್ತಸ್ತು ಸೌಮಿತ್ರಿರ್ಲಕ್ಷ್ಮಣಃ ಶುಭಲಕ್ಷಣಃ ।
ಭೂಯೋ ದುಃಖಸಮಾವಿಷ್ಟೋ ದುಃಖಿತಂ ರಾಮಮಬ್ರವೀತ್ ॥ ೫

ನ ಸ್ವಯಂ ಕಾಮಕಾರೇಣ ತಾಂ ತ್ಯಕ್ತ್ವಾಹಮಿಹಾಗತಃ ।
ಪ್ರಚೋದಿತಸ್ತಯೈವೋಗ್ರೈಸ್ತ್ವತ್ಸಕಾಶಮಿಹಾಗತಃ ॥ ೬

ಆರ್ಯೇಣೇವ ಪರಿಕ್ರುಷ್ಟಂ ಹಾ ಸೀತೇ ಲಕ್ಷ್ಮಣೇತಿ ಚ ।
ಪರಿತ್ರಾಹೀತಿ ಯದ್ವಾಕ್ಯಂ ಮೈಥಿಲ್ಯಾಸ್ತಚ್ಛ್ರುತಿಂ ಗತಮ್ ॥ ೭

ಸಾ ತಮಾರ್ತಸ್ವರಂ ಶ್ರುತ್ವಾ ತವ ಸ್ನೇಹೇನ ಮೈಥಿಲೀ ।
ಗಚ್ಛ ಗಚ್ಛೇತಿ ಮಾಮಾಹ ರುದತೀ ಭಯವಿಹ್ವಲಾ ॥ ೮

---

ಬಿಟ್ಟು ಬಂದೆನು ? (೧-೨). ನೀನು ಸೀತೆಯನ್ನು ಬಿಟ್ಟು ಏಕಾಕಿಯಾಗಿ ಬಂದುದನ್ನು ನೋಡಿದೊಡನೆ, ಸತ್ಯವಾಗಿಯೂ ನನ್ನ ಎದೆ ಝಲ್ಲೆಂದಿತು. ಏನೋ ದೊಡ್ಡ ಅಪಾಯವು ಸಂಭವಿಸಿದೆಯೆಂದು ಶಂಕೆಯಾಯಿತು (೩). ಲಕ್ಷ್ಮಣ, ಸೀತಾರಹಿತನಾಗಿ ನೀನು ಬರುತ್ತಿರುವುದನ್ನು ದೂರದಲ್ಲಿ ನೋಡಿದಾಗಲೇ, ನನ್ನ ಎಡಗಣ್ಣು ಎಡದೋಳು ಹಾರಿದವು; ಎದೆಯು ಡವಡವನೆ ಹೊಡೆದುಕೊಂಡಿತು" ಎಂದು ಹೇಳಿದನು. ಶುಭಲಕ್ಷಣನಾದ ಲಕ್ಷ್ಮಣನಿಗೆ ಮತ್ತಷ್ಟು ದುಃಖ ಒತ್ತರಿಸಿತು. ಅವನು ಶೋಕಾರ್ತನಾದ ಶ್ರೀರಾಮನಿಗೆ ಹೀಗೆಂದನು (೪-೫): "ಅಣ್ಣಾ, ನಾನಾಗಿ ಸ್ವೇಚ್ಛೆಯಿಂದ ಆಕೆಯನ್ನು ಬಿಟ್ಟುಬರಲಿಲ್ಲ. ಆಕೆಯೇ ಉಗ್ರವಾಕ್ಯಗಳನ್ನಾಡಿ ನಾನು ಹೋಗಬೇಕೆಂದು ನಿರ್ಬಂಧಿಸಿದಳು. ನೀನು ಕೂಗಿಕೊಂಡಂತೆಯೇ 'ಹಾ ಸೀತೇ–ಲಕ್ಷ್ಮಣಾ, ಕಾಪಾಡು' ಎಂಬ ದೀನಧ್ವನಿಯು ಮೈಥಿಲಿಯ ಕಿವಿಗೆ ಕೇಳಿಸಿತು (೬-೭). ಕೂಡಲೇ ಅವಳು ಭಯದಿಂದ ತಲ್ಲಣಿಸಿ ನಿನ್ನಲ್ಲಿರುವ ಪ್ರೇಮದಿಂದ 'ಲಕ್ಷ್ಮಣ, ಹೋಗು ಹೋಗು' ಎಂದು ಕಣ್ಣೀರುಸುರಿಸುತ್ತ ನನಗೆ ಹೇಳಿದಳು. ನಾನು

ಪ್ರಚೋದ್ಯಮಾನೇನ ಮಯಾ ಗಚ್ಛೇತಿ ಬಹುಶಸ್ತಯಾ ।
ಪ್ರತ್ಯುಕ್ತಾ ಮೈಥಿಲೀ ವಾಕ್ಯಮಿದಂ ತ್ವತ್ಪ್ರತ್ಯಯಾನ್ವಿತಮ್ ॥ ೯

ನ ತತ್ ಪಶ್ಯಾಮ್ಯಹಂ ರಕ್ಷೋ ಯದಸ್ಯ ಭಯಮಾವಹೇತ್ ।
ನಿರ್ವೃತಾ ಭವ ನಾಸ್ತ್ಯೇತತ್ ಕೇನಾಪ್ಯೇವಮುದಾಹೃತಮ್ ॥ ೧೦

ವಿಗರ್ಹಿತಂ ಚ ನೀಚಂ ಚ ಕಥಮಾರ್ಯೋಽಭಿಧಾಸ್ಯತಿ ।
ತ್ರಾಹೀತಿ ವಚನಂ ಸೀತೇ ಯಸ್ತ್ರಾಯೇತ್ ತ್ರಿದಶಾನಪಿ ॥ ೧೧

ಕಿಂ ನಿಮಿತ್ತಂ ತು ಕೇನಾಪಿ ಭ್ರಾತುರಾಲಂಬ್ಯ ಮೇ ಸ್ವರಮ್ ।
ರಾಕ್ಷಸೇನೇರಿತಂ ವಾಕ್ಯಂ ತ್ರಾಹಿ ತ್ರಾಹೀತಿ ಶೋಭನೇ ॥ ೧೨

ವಿಸ್ವರಂ ವ್ಯಾಹೃತಂ ವಾಕ್ಯಂ ಲಕ್ಷ್ಮಣ ತ್ರಾಹಿ ಮಾಮಿತಿ ।
ನ ಭವತ್ಯಾ ವ್ಯಥಾ ಕಾರ್ಯಾ ಕುನಾರೀಜನಸೇವಿತಾ ॥ ೧೩

ಅಲಂ ವೈಕ್ಲವ್ಯಮಾಲಂಬ್ಯ ಸ್ವಸ್ಥಾ ಭವ ನಿರುತ್ಸುಕಾ ।
ನ ಸೋಽಸ್ತಿ ತ್ರಿಷು ಲೋಕೇಷು ಪುಮಾನ್ ಯೋ ರಾಘವಂ ರಣೇ ॥

---

ಹೋಗಬೇಕೆಂದು ಅವಳು ಮತ್ತೆ ಮತ್ತೆ ಒತ್ತಾಯಮಾಡಿದಳು. (ನಿನ್ನ ಪರಾಕ್ರಮದ ವಿಷಯದಲ್ಲಿ) ನನಗೆ ದೃಢವಿಶ್ವಾಸವಿದ್ದುದರಿಂದ ನಾನು ಹೀಗೆಂದೆನು (೮-೯) : "ದೇವಿ, ಶ್ರೀರಾಮನಿಗೆ ಭಯವನ್ನು ತರುವ ರಾಕ್ಷಸನನ್ನು ನಾನು ಕಂಡಿಲ್ಲ. ನೀನು ನೆಮ್ಮದಿಯಲ್ಲಿರು. ಇದು ಏನೂ ಅಲ್ಲ. ಯಾವನೋ ಹೀಗೆ ಕೂಗಿದ್ದಾನೆ. ಅಣ್ಣನ ಬಾಯಿಂದ ಇಷ್ಟು ನಿಂದ್ಯವಾದ ಹೇಡಿಮಾತು ಎಂದಿಗಾದರೂ ಬಂದೀತೆ? ದೇವತೆಗಳನ್ನೇ ರಕ್ಷಿಸಬಲ್ಲ ವೀರನು 'ತ್ರಾಹಿ' ಎಂದಾನೆ? (೧೦-೧೧). ಏನೋ ಒಂದು ಉದ್ದೇಶದಿಂದ ಯಾವನೋ ಒಬ್ಬ ರಾಕ್ಷಸನು ನನ್ನ ಅಣ್ಣನ ಕಂಠಸ್ವರವನ್ನೇ ಅನುಕರಿಸಿ 'ತ್ರಾಹಿ ತ್ರಾಹಿ' ಎಂದು ಕೂಗಿಕೊಂಡಿದ್ದಾನೆ. 'ಲಕ್ಷ್ಮಣಾ, ನನ್ನನ್ನು ಕಾಪಾಡು' ಎಂಬ ಮಾತಿನ ಸ್ವರವೂ ಸರಿಯಾಗಿ ಅಣ್ಣನ ಸ್ವರದಂತಿಲ್ಲ. ದೇವಿ, ಇದಕ್ಕಾಗಿ ನೀನು ಚಿಂತಿಸಬೇಡ. ಏನೂ ತಿಳಿಯದ ಸಾಮಾನ್ಯ ಹೆಂಗಸರಂತೆ ದುಃಖಿಸಬೇಡ (೧೨-೧೩). ಈ ತಳಮಳವು ಬೇಡ. ನಿಶ್ಚಿಂತಳಾಗಿ ಸಮಾಧಾನದಿಂದಿರು. ಯುದ್ಧದಲ್ಲಿ ರಾಘವನನ್ನು

ಜಾತೋ ವಾ ಜಾಯಮಾನೋ ವಾ ಸಂಯುಗೇ ಯಃ
ಪರಾಜಯೇತ್ ।
ನ ಜಯ್ಯೋ ರಾಘವೋ ಯುದ್ಧೇ ದೇವೈಃ ಶಕ್ರಪುರೋಗಮೈಃ ॥ ೧೫

ಏವಮುಕ್ತ್ವಾ ತು ವೈದೇಹೀ ಪರಿಮೋಹಿತಚೇತನಾ ।
ಉವಾಚಾಶ್ರೂಣಿ ಮುಂಚಂತೀ ದಾರುಣಂ ಮಾಮಿದಂ ವಚಃ ॥ ೧೬

ಭಾವೋ ಮಯಿ ತವಾತ್ಯರ್ಥಂ ಪಾಪ ಏವ ನಿವೇಶಿತಃ ।
ವಿನಷ್ಟೇ ಭ್ರಾತರಿ ಪ್ರಾಪ್ತುಂ ನ ಚ ತ್ವಂ ಮಾಮವಾಪ್ಸ್ಯಸಿ ॥ ೧೭

ಸಂಕೇತಾದ್ಭರತೇನ ತ್ವಂ ರಾಮಂ ಸಮನುಗಚ್ಛಸಿ ।
ಕ್ರೋಶಂತಂ ಹಿ ಯಥಾತ್ಯರ್ಥಂ ನೈನಮಭ್ಯವಪದ್ಯಸೇ ॥ ೧೮

ರಿಪುಃ ಪ್ರಚ್ಛನ್ನಚಾರೀ ತ್ವಂ ಮದರ್ಥಮನುಗಚ್ಛಸಿ ।
ರಾಘವಸ್ಯಾಂತರಂ ಪ್ರೇಪ್ಸುಸ್ತಥೈನಂ ನಾಭಿಪದ್ಯಸೇ ॥ ೧೯

---

ಸೋಲಿಸಬಲ್ಲ ಗಂಡಸು ಮೂರು ಲೋಕದಲ್ಲಿಯೂ ಇಲ್ಲ. ಅಂತಹ ವೀರನು ಹಿಂದೆ ಹುಟ್ಟಲಿಲ್ಲ, ಮುಂದೆ ಹುಟ್ಟಲಾರ. ಇಂದ್ರಾದಿ ದೇವತೆಗಳೇ ಬಂದರೂ ಶ್ರೀರಾಮನನ್ನು ಜಯಿಸಲು ಸಾಧ್ಯವಿಲ್ಲ" ಎಂದು ಹೇಳಿದೆನು (೧೪-೧೫). ಅಣ್ಣ, ಈ ರೀತಿ ನಾನು ಹೇಳಿದರೂ ವೈದೇಹಿಯು ಕೇಳಲಿಲ್ಲ. ಅವಳಿಗೆ ವಿವೇಕ ತಪ್ಪಿತು. ಕಣ್ಣೀರು ಸುರಿಸುತ್ತ ಅವಾಚ್ಯವಾದ ಕ್ರೂರವಾಕ್ಯವನ್ನು ನನಗೆ ಹೇಳಿದಳು (೧೬): "ಲಕ್ಷ್ಮಣ, ನನ್ನಲ್ಲಿ ನೀನು ಅತ್ಯಂತ ಪಾಪಬುದ್ಧಿಯನ್ನಿಟ್ಟಿದ್ದೀಯೆ. ನಿನ್ನ ಅಣ್ಣನು ವಿನಾಶ ಹೊಂದಿದಮೇಲೆ ನನ್ನನ್ನು ಪಡೆಯಬೇಕೆಂದಿದ್ದೀಯೆ. ಆದರೆ ನಾನು ನಿನಗೆ ದೊರೆಯಲಾರೆ (೧೭). ಭರತನೊಡನೆ ಒಳಸಂಚನ್ನು ನಡೆಸಿ, ನೀನು ಶ್ರೀರಾಮನನ್ನು ಹಿಂಬಾಲಿಸಿ ಬರುತ್ತಿದ್ದೀಯೆ! ಇಷ್ಟು ಸ್ಪಷ್ಟವಾಗಿ ಆತನು ಆರ್ತಸ್ವರದಿಂದ ಕೂಗಿಕೊಂಡರೂ ಅವನ ಬಳಿಗೆ ಹೋಗದಿದ್ದೀಯೆ! (೧೮). ಗೂಢಚಾರಿಯಾದ ಶತ್ರು ನೀನು! ನನಗೋಸ್ಕರ ಹಿಂಬಾಲಿಸಿದ್ದೀಯೆ. ಶ್ರೀರಾಮನಿಗೆ ವಿಪತ್ತು ಬರಲೆಂದು ಸಮಯವನ್ನು ಕಾಯುತ್ತಿದ್ದೀಯೆ. ಆದ್ದರಿಂದಲೇ

*

ಏವಮುಕ್ತೋ ಹಿ ವೈದೇಹ್ಯಾ ಸಂರಬ್ಧೋ ರಕ್ತಲೋಚನಃ ।
ಕ್ರೋಧಾತ್ ಪ್ರಸ್ಫುರಮಾಣೋಷ್ಠ ಆಶ್ರಮಾದಸ್ಮಿ ನಿರ್ಗತಃ ॥ ೨೦

ಏವಂ ಬ್ರುವಾಣಂ ಸೌಮಿತ್ರಿಂ ರಾಮಃ ಸಂತಾಪಮೋಹಿತಃ ।
ಅಬ್ರವೀದ್ದುಷ್ಕೃತಂ ಸೌಮ್ಯ ತಾಂ ವಿನಾ ಯತ್ತ್ವಮಾಗತಃ ॥ ೨೧

ಜಾನನ್ನಪಿ ಸಮರ್ಥಂ ಮಾಂ ರಕ್ಷಸಾಂ ವಿನಿವಾರಣೇ ।
ಅನೇನ ಕ್ರೋಧವಾಕ್ಯೇನ ಮೈಥಿಲ್ಯಾ ನಿಃಸೃತೋ ಭವಾನ್ ॥ ೨೨

ನ ಹಿ ತೇ ಪರಿತುಷ್ಯಾಮಿ ತ್ಯಕ್ತ್ವಾ ಯದಸಿ ಮೈಥಿಲೀಮ್ ।
ಕ್ರುದ್ಧಾಯಾಃ ಪರುಷಂ ವಾಕ್ಯಂ ಶ್ರುತ್ವಾ ಯತ್ತ್ವಮಿಹಾಗತಃ ॥ ೨೩

ಸರ್ವಥಾ ತ್ವಪನೀತಂ ತೇ ಸೀತಯಾ ಯತ್ ಪ್ರಚೋದಿತಃ ।
ಕ್ರೋಧಸ್ಯ ವಶಮಾಪನ್ನೋ ನಾಕರೋಃ ಶಾಸನಂ ಮಮ ॥ ೨೪

ಅಸೌ ಹಿ ರಾಕ್ಷಸಃ ಶೇತೇ ಶರೇಣಾಭಿಹತೋ ಮಯಾ ।
ಮೃಗರೂಪೇಣ ಯೇನಾಹಮಾಶ್ರಮಾದಪವಾಹಿತಃ ॥ ೨೫

---

ಹೋಗಲು ಹಿಂಜರಿಯುತ್ತೀಯೆ" ಎಂದು ಹೇಳಿದಳು (೧೯). ಅಣ್ಣ, ವೈದೇಹಿಯು ಹೀಗೆ ಹೇಳಿದ್ದರಿಂದ ನನಗೆ ಬಹಳ ವ್ಯಥೆಯಾಯಿತು. ಕಣ್ಣು ಕೆಂಪಡರಿತು. ಕ್ರೋಧದಿಂದ ನನ್ನ ತುಟಿಯು ಅದುರಲಾರಂಭಿಸಿತು. ಆಗ ನಾನು ಆಶ್ರಮದಿಂದ ಇತ್ತ ಹೊರಟುಬಂದೆನು" ಎಂದು ಲಕ್ಷ್ಮಣನು ಹೇಳಿದನು (೨೦). ಆಗ ಶ್ರೀರಾಮನು ವ್ಯಸನದಿಂದ ಕಂಗೆಟ್ಟು "ತಮ್ಮ, ಅವಳನ್ನು ತ್ಯಜಿಸಿ ನೀನು ಬರಬಾರದಾಗಿತ್ತು. ರಾಕ್ಷಸರನ್ನು ನಿಗ್ರಹಿಸುವುದಕ್ಕೆ ನಾನು ಸಮರ್ಥನೆಂದು ನಿನಗೆ ಗೊತ್ತಿದ್ದರೂ ಮೈಥಿಲಿಯ ಸಿಟ್ಟಿನ ಮಾತನ್ನು ಕೇಳಿ ಹೊರಟುಬಂದಿದ್ದೀಯೆ (೨೧-೨೨). ಸೀತೆಯನ್ನು ನೀನು ಬಿಟ್ಟುಬಂದುದು ನನಗೆ ಒಪ್ಪಿಗೆಯಾಗಲಿಲ್ಲ. ಅವಳು ಕೋಪಗೊಂಡು ಕ್ರೂರವಾದ ಮಾತನ್ನಾಡಿದಳೆಂದು ನೀನು ಬಂದುಬಿಡಬಹುದೆ? ಅವಳ ಮಾತಿನಿಂದ ನೀನು ರೇಗಿ ದುಡುಕಿದುದು ಸರ್ವಥಾ ಸರಿಯಲ್ಲ. ನೀನು ಕ್ರೋಧವಶನಾಗಿ ನನ್ನ ಆಜ್ಞೆಯನ್ನು ನಡೆಸದೇಹೋದೆ (೨೩-೨೪). ಮೃಗರೂಪದಿಂದ ಬಂದು ನನ್ನನ್ನು ಆಶ್ರಮದಿಂದ ಸೆಳೆದೊಯ್ದ ಆ ರಾಕ್ಷಸನು ಅಲ್ಲಿ ಸತ್ತುಬಿದ್ದಿದ್ದಾನೆ. ಒಂದೇ ಬಾಣದಿಂದ ಅವನನ್ನು ಕೊಂದಿದ್ದೇನೆ (೨೫).

ವಿಕೃಷ್ಯ ಚಾಪಂ ಪರಿಧಾಯ ಸಾಯಕಂ
ಸಲೀಲಬಾಣೇನ ಚ ತಾಡಿತೋ ಮಯಾ ।
ಮಾರ್ಗೀಂ ತನುಂ ತ್ಯಜ್ಯ ಸ ವಿಕ್ಲವಸ್ವರೋ
ಬಭೂವ ಕೇಯೂರಧರಃ ಸ ರಾಕ್ಷಸಃ ॥ ೨೬

ಶರಾಹತೇನೈವ ತದಾರ್ತಯಾ ಗಿರಾ
ಸ್ವರಂ ಮಮಾಲಂಬ್ಯ ಸುದೂರಸಂಶ್ರವಮ್ ।
ಉದಾಹೃತಂ ತದ್ವಚನಂ ಸುದಾರುಣಂ
ತ್ವಮಾಗತೋ ಯೇನ ವಿಹಾಯ ಮೈಥಿಲೀಮ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನಷಷ್ಟಿತಮಃ ಸರ್ಗಃ

ಧನುಸ್ಸನ್ನೆಳೆದು ಲೀಲಾಮಾತ್ರದಿಂದ ಒಂದು ಬಾಣವನ್ನು ನಾನು ಹೊಡೆಯಲಾಗಿ, ಅವನ ಮೃಗರೂಪವು ಮಾಯವಾಯಿತು. ಆರ್ತಸ್ವರದಿಂದ ಕಿರಿಚುತ್ತ ಕೇಯೂರಧಾರಿಯಾದ ರಾಕ್ಷಸನಾಗಿ ಅವನು ಬಿದ್ದನು (೨೬). ನನ್ನ ಬಾಣದ ಹೊಡೆತವು ಬಿದ್ದೊಡನೆ, ನನ್ನ ಕಂಠಧ್ವನಿಯನ್ನು ಅನುಸರಿಸಿ ಬಹುದೂರ ಕೇಳುವಂತೆ ಅವನು ಆರ್ತಸ್ವರದಿಂದ ಕೂಗಿದನು. ಗಾಬರಿಗೊಳಿಸುವ ಆ ಕೂಗನ್ನು ಕೇಳಿ ನೀನು ಮೈಥಿಲಿಯನ್ನು ಬಿಟ್ಟು ಇಲ್ಲಿಗೆ ಬಂದಿದ್ದೀಯೆ" ಎಂದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಐವತ್ತೊಂಬತ್ತನೆಯ ಸರ್ಗ

## ಷಷ್ಟಿತಮಃ ಸರ್ಗಃ

### ರಾಮೋನ್ಮಾದಃ

ಭೃಶಮಾವ್ರಜಮಾನಸ್ಯ ತಸ್ಯಾಧೋವಾಮಲೋಚನಮ್ ।
ಪ್ರಾಸ್ಫುರಚ್ಚಾಸ್ಖಲದ್ರಾಮೋ ವೇಪಥುಶ್ಚಾಪ್ಯಜಾಯತ ॥ ೧

ಉಪಾಲಕ್ಷ್ಯ ನಿಮಿತ್ತಾನಿ ಸೋಽಶುಭಾನಿ ಮುಹುರ್ಮುಹುಃ ।
ಅಪಿ ಕ್ಷೇಮಂ ನು ಸೀತಾಯಾ ಇತಿ ವೈ ವ್ಯಾಜಹಾರ ಚ ॥ ೨

ತ್ವರಮಾಣೋ ಜಗಾಮಾಥ ಸೀತಾದರ್ಶನಲಾಲಸಃ ।
ಶೂನ್ಯಮಾವಸಥಂ ದೃಷ್ಟ್ವಾ ಬಭೂವೋದ್ವಿಗ್ನಮಾನಸಃ ॥ ೩

ಉದ್ಭ್ರಮನ್ನಿವ ವೇಗೇನ ವಿಕ್ಷಿಪನ್ ರಘುನಂದನಃ ।
ತತ್ರ ತತ್ರೋಟಜಸ್ಥಾನಮಭಿವೀಕ್ಷ್ಯ ಸಮಂತತಃ ॥ ೪

ದದರ್ಶ ಪರ್ಣಶಾಲಾಂ ಚ ರಹಿತಾಂ ಸೀತಯಾ ತದಾ ।
ಶ್ರಿಯಾ ವಿರಹಿತಾಂ ಧ್ವಸ್ತಾಂ ಹೇಮಂತೇ ಪದ್ಮಿನೀಮಿವ ॥ ೫

## ಸರ್ಗ ೬೦

### ಶ್ರೀರಾಮನು ಸೀತಾವಿರಹದಿಂದ ಉನ್ಮಾದವಶನಾಗುವುದು.

ಶ್ರೀರಾಮನು ಆಶ್ರಮದ ಕಡೆಗೆ ಬರುತ್ತಿರುವಾಗ ಅವನ ಎಡಗಣ್ಣಿನ ಕೆಳರೆಪ್ಪೆಯು ಮತ್ತೆ ಮತ್ತೆ ಅದುರಿತು. ಅವನು ಆಗಾಗ ಎಡವಿದನು. ಮೈಯಲ್ಲಿ ನಡುಕವು ತಲೆದೋರಿತು (೧). ಹೀಗೆ ಮೇಲೆಮೇಲೆ ದುರ್ನಿಮಿತ್ತಗಳಾಗುವುದನ್ನು ಕಂಡು, 'ಸೀತೆಯು ಕ್ಷೇಮದಿಂದಿರಬಹುದೆ?' ಎಂಬ ಸೊಲ್ಲು ಅವನ ಬಾಯಿಂದ ಹೊರಡುತ್ತಿತ್ತು (೨). ಸೀತೆಯನ್ನು ನೋಡುವ ತವಕದಿಂದ ಬೇಗಬೇಗನೆ ನಡೆಯುತ್ತ ಆಶ್ರಮದ ಬಳಿಗೆ ಬಂದನು. ಆಶ್ರಮವು ಶೂನ್ಯವಾಗಿತ್ತು. ಮನಸ್ಸಿನ ತಳಮಳ ಹೆಚ್ಚಿತು. ರಘುನಂದನನು ಕಳವಳದಿಂದ, ಹಾರುವನೋ ಎಂಬಂತೆ ಮೈಕೈಗಳನ್ನು ಚಾಲಿಸುತ್ತ, ಗರಗರನೆ ಸುತ್ತುತ್ತ, ಪರ್ಣಶಾಲೆಯ ಮೂಲೆಮೂಲೆಗಳನ್ನು ಹುಡುಕಿ ನೋಡಿದನು (೩-೪). ಪರ್ಣಶಾಲೆಯಲ್ಲಿ ಸೀತೆಯಿಲ್ಲವೆಂಬುದು ತಿಳಿಯಿತು. ಚಳಿಗಾಲದಲ್ಲಿ ಕಾಂತಿಹೀನವಾಗಿ ಹಾಳುಬಿದ್ದ ತಾವರೆಯ ಕೊಳದಂತೆ ಪರ್ಣಶಾಲೆಯಿತ್ತು.

**ರುದಂತಮಿವ ವೃಕ್ಷೈಶ್ಚ ಮ್ಲಾನಪುಷ್ಪಮೃಗದ್ವಿಜಮ್ ।**
**ಶ್ರಿಯಾ ವಿಹೀನಂ ವಿಧ್ವಸ್ತಂ ಸಂತ್ಯಕ್ತವನದೇವತಮ್ ॥ ೬**

**ವಿಪ್ರಕೀರ್ಣಾಜಿನಕುಶಂ ವಿಪ್ರವಿದ್ಧಬೃಸೀಕಟಮ್ ।**
**ದೃಷ್ಟ್ವಾ ಶೂನ್ಯೋಟಜಸ್ಥಾನಂ ವಿಲಲಾಪ ಪುನಃ ಪುನಃ ॥ ೭**

**ಹೃತಾ ಮೃತಾ ವಾ ನಷ್ಟಾ ವಾ ಭಕ್ಷಿತಾ ವಾ ಭವಿಷ್ಯತಿ ।**
**ನಿಲೀನಾಪ್ಯಥವಾ ಭೀರುರಥವಾ ವನಮಾಶ್ರಿತಾ ॥ ೮**

**ಗತಾ ವಿಚೇತುಂ ಪುಷ್ಪಾಣಿ ಫಲಾನ್ಯಪಿ ಚ ವಾ ಪುನಃ ।**
**ಅಥವಾ ಪದ್ಮಿನೀಂ ಯಾತಾ ಜಲಾರ್ಥಂ ವಾ ನದೀಂ ಗತಾ ॥ ೯**

**ಯತ್ನಾನ್ಮೃಗಯಮಾಣಸ್ತು ನಾಸಸಾದ ವನೇ ಪ್ರಿಯಾಮ್ ।**
**ಶೋಕರಕ್ತೇಕ್ಷಣಃ ಶೋಕಾದುನ್ಮತ್ತ ಇವ ಲಕ್ಷ್ಯತೇ ॥ ೧೦**

---

ಆಶ್ರಮ ಪ್ರದೇಶದಲ್ಲಿದ್ದ ಮರಗಳಲ್ಲಿ (ದುಂಬಿಗಳು ಗುಯ್ ಎಂದು ಶಬ್ದ ಮಾಡುತ್ತಿರಲು) ಆ ಪ್ರದೇಶವು ಅಳುತ್ತಿದೆಯೋ ಎಂಬಂತೆ ತೋರಿತು. ಸೀತೆಯು ಕಿತ್ತುತಂದಿದ್ದ ಹೂಗಳು ಬಾಡಿದ್ದವು. ಮೃಗಗಳೂ ಹಕ್ಕಿಗಳೂ ಶಬ್ದಮಾಡದೆ ತೆಪ್ಪಗಿದ್ದವು. ವನದೇವತೆಗಳು ಹೆದರಿ ಹೊರಟುಹೋದ್ದರಿಂದ ಆ ಪ್ರದೇಶವು ಕಾಂತಿಗುಂದಿ ಹಾಳುಸುರಿಯುತ್ತಿದ್ದಿತು (೫-೬). ಆಶ್ರಮದಲ್ಲಿ ಕೃಷ್ಣಾಜಿನ, ದರ್ಭೆಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಆಸನ, ಚಾಪೆ ಮುಂತಾದ ಉಪಕರಣಗಳು ಅತ್ತಿತ್ತ ಚದರಿ ಹರಡಿದ್ದವು. ಬಿಕೋ ಎನ್ನು ತ್ತಿದ್ದ ಆಶ್ರಮವನ್ನು ನೋಡಿ ಶ್ರೀರಾಮನಿಗೆ ದುಃಖ ಉಕ್ಕಿತು, ಬಿಕ್ಕಿ ಬಿಕ್ಕಿ ಅತ್ತನು (೭). "ಸೀತೆಯನ್ನು ಯಾರಾದರೂ ಅಪಹರಿಸಿಕೊಂಡು ಹೋದರೆ? ಅವಳು ಎಲ್ಲಾದರೂ ಅಡಗಿಕೊಂಡಿರಬಹುದೆ? ರಾಕ್ಷಸರು ಭಕ್ಷಿಸಿರಬಹುದೆ? ವಿನೋದಕ್ಕಾಗಿ ಅವಿತುಕೊಂಡಿರಬಹುದೆ? ಅಥವಾ (ಒಬ್ಬಳೇ ಇರಲು ಹೆದರಿ ನನ್ನನ್ನು ಹುಡುಕುತ್ತ) ಕಾಡಿನೊಳಗೆ ಬಂದು ಬಿಟ್ಟಳೋ? (೮). ಹೂಗಳನ್ನೋ ಹಣ್ಣುಗಳನ್ನೋ ಕೀಳಲು ಹೋಗಿರುವಳೋ? (ಸ್ನಾನಕ್ಕಾಗಿ) ತಾವರೆಯ ಕೊಳಕ್ಕೆ ಹೋದಳೋ? ನೀರಿಗಾಗಿ ನದಿಗೆ ಹೋದಳೋ?" ಎಂದು ವಿಲಪಿಸುತ್ತ ಎಷ್ಟು ಅರಸಿದರೂ ಸೀತೆಯು ಕಾಣಲಿಲ್ಲ. ಶೋಕದಿಂದ ಶ್ರೀರಾಮನ ಕಣ್ಣುಗಳು ಕೆಂಪಾದವು. ಅವನು

ವೃಕ್ಷಾದ್ವೃಕ್ಷಂ ಪ್ರಧಾವನ್ ಸ ಗಿರೇಶ್ಚಾದ್ರಿಂ ನದಾನ್ನದೀಮ್ ।
ಬಭೂವ ವಿಲಪನ್ ರಾಮಃ ಶೋಕಪಂಕಾರ್ಣವಾಪ್ಲುತಃ ॥ ೧೧

ಅಪಿ ಕಚ್ಚಿತ್ತ್ವಯಾ ದೃಷ್ಟಾ ಸಾ ಕದಂಬಪ್ರಿಯಾ ಪ್ರಿಯಾ ।
ಕದಂಬ ಯದಿ ಜಾನೀಷೇ ಶಂಸ ಸೀತಾಂ ಶುಭಾನನಾಮ್ ॥ ೧೨

ಸ್ನಿಗ್ಧಪಲ್ಲವಸಂಕಾಶಾ ಪೀತಕೌಶೇಯವಾಸಿನೀ ।
ಶಂಸಸ್ವ ಯದಿ ವಾ ದೃಷ್ಟಾ ಬಿಲ್ವ ಬಿಲ್ವೋಪಮಸ್ತನೀ ॥ ೧೩

ಅಥವಾರ್ಜುನ ಶಂಸ ತ್ವಂ ಪ್ರಿಯಾಂ ತಾಮರ್ಜುನಪ್ರಿಯಾಮ್ ।
ಜನಕಸ್ಯ ಸುತಾ ಭೀರುರ್ಯದಿ ಜೀವತಿ ವಾ ನ ವಾ ॥ ೧೪

ಕಕುಭಃ ಕಕುಭೋರೂಂ ತಾಂ ವ್ಯಕ್ತಂ ಜಾನಾತಿ ಮೈಥಿಲೀಮ್ ।
ಯಥಾ ಪಲ್ಲವಪುಷ್ಪಾಢ್ಯೋ ಭಾತಿ ಹ್ಯೇಷ ವನಸ್ಪತಿಃ ॥ ೧೫

---

ಹುಚ್ಚನಂತಾದನು (೯-೧೦). ಅನಂತರ ಮರದಿಂದ ಮರಕ್ಕೆ, ಬೆಟ್ಟದಿಂದ ಬೆಟ್ಟಕ್ಕೆ, ಹೊಳೆಯಿಂದ ಹೊಳೆಗೆ, ಓಡುತ್ತ ಸುತ್ತುತ್ತ ಹುಡುಕಿ ಸಾಕಾಯಿತು. ಶ್ರೀರಾಮನು ಶೋಕವೆಂಬ ಕೆಸರಿನ ಕಡಲಿನಲ್ಲಿ ಮುಳುಗಿಹೋದನು (ಕಂಡ ಕಂಡ ಮರವನ್ನೂ ಮೃಗವನ್ನೂ ಕರೆದು ಹುಚ್ಚನಂತೆ ಮಾತಾಡಿದನು) (೧೧): "ಓ ಕದಂಬವೃಕ್ಷವೆ! ನನ್ನ ಪ್ರಿಯೆಯನ್ನು ಕಂಡೆಯಾ? ನಿನ್ನ ಹೂಗಳಲ್ಲಿ ಅವಳಿಗೆ ಬಹಳ ಪ್ರೀತಿಯಿತ್ತು. ನಿನಗೆ ಗೊತ್ತಿದ್ದರೆ ಸೀತೆ ಎಲ್ಲಿದ್ದಾಳೆಂದು ಹೇಳು. ಎಲೈ ಬಿಲ್ವವೃಕ್ಷವೆ! ನೀನು ಸೀತೆಯನ್ನು ಕಂಡಿದ್ದರೆ ಹೇಳು. ಎಳೆಯ ಚಿಗುರಿನಂತೆ ಅವಳ ಮೈಬಣ್ಣವಿದೆ. ಹಳದಿಯ ರೇಷ್ಮೆಸೀರೆಯನ್ನುಟ್ಟದ್ದಳು. ನಿನ್ನ ಹಣ್ಣುಗಳಂತೆ ಅವಳ ಸ್ತನಗಳಿದ್ದವು (೧೨-೧೩). ಎಲೆ ಕರವೀರ! ನನ್ನ ಕಾಂತೆಯನ್ನು ಕಂಡೆಯಾ? ಅವಳಿಗೆ ಕರವೀರದ ಹೂಗಳನ್ನು ಕಂಡರೆ ಬಹಳ ಪ್ರೀತಿ. ಅವಳು ಜನಕಮಹಾರಾಜನ ಮಗಳು. ಸ್ವಲ್ಪ ಹೆದರುವ ಸ್ವಭಾವದವಳು. ಆ ಸೀತೆ ಬದುಕಿರುವಳೋ ಇಲ್ಲವೋ ಹೇಳು (೧೪). ಆಹಾ! ಈ ಮತ್ತಿಯಮರಕ್ಕೆ ಮೈಥಿಲಿಯ ವಿಷಯ ಗೊತ್ತಿರಬೇಕು! ಏಕೆಂದರೆ, ಈ ವೃಕ್ಷವು ಚಿಗುರೆಗೆ ಹೂಗಳಿಂದ ನಲಿಯು

ಭ್ರಮರೈರುಪಗೀತಶ್ಚ ಯಥಾ ದ್ರುಮವರೋ ಹ್ಯಯಮ್ ।
ಏಷ ವ್ಯಕ್ತಂ ವಿಜಾನಾತಿ ತಿಲಕಸ್ತಿಲಕಪ್ರಿಯಾಮ್ ॥ ೧೬

ಅಶೋಕ ಶೋಕಾಪನುದ ಶೋಕೋಪಹತಚೇತಸಮ್ ।
ತ್ವನ್ನಾಮಾನಂ ಕುರು ಕ್ಷಿಪ್ರಂ ಪ್ರಿಯಾಸಂದರ್ಶನೇನ ಮಾಮ್ ॥ ೧೭

ಯದಿ ತಾಲ ತ್ವಯಾ ದೃಷ್ಟಾ ಪಕ್ವತಾಲಫಲಸ್ತನೀ ।
ಕಥಯಸ್ವ ವರಾರೋಹಾಂ ಕಾರುಣ್ಯಂ ಯದಿ ತೇ ಮಯಿ ॥ ೧೮

ಯದಿ ದೃಷ್ಟಾ ತ್ವಯಾ ಸೀತಾ ಜಂಬು ಜಾಂಬೂನದಪ್ರಭಾ ।
ಪ್ರಿಯಾಂ ಯದಿ ವಿಜಾನೀಷೇ ನಿಃಶಂಕಂ ಕಥಯಸ್ವ ಮೇ ॥ ೧೯

ಅಹೋ ತ್ವಂ ಕರ್ಣಿಕಾರಾದ್ಯ ಸುಪುಷ್ಪೈಃ ಶೋಭಸೇ ಭೃಶಮ್ ।
ಕರ್ಣಿಕಾರ ಪ್ರಿಯಾ ಸಾಧ್ವೀ ಶಂಸ ದೃಷ್ಟಾ ಪ್ರಿಯಾ ಯದಿ ॥ ೨೦

---

ತ್ತಿದೆ. ಎಲೈ ಮರವೆ, ನನ್ನ ಸೀತೆಯ ತೊಡೆಗಳು ನಿನ್ನಂತೆ ಚೆಲುವಾಗಿದ್ದವು (೧೫). ಓಹೋ! ಈ ವೃಕ್ಷಶ್ರೇಷ್ಠದ ಸುತ್ತಲೂ ದುಂಬಿಗಳು ಹಾಡುತ್ತಿವೆ. ಈ ತಿಲಕವೃಕ್ಷಕ್ಕೆ ಸೀತೆಯ ವೃತ್ತಾಂತ ತಿಳಿದಿರಬಹುದು. ಓ ಮರವೆ! ನನ್ನ ಸೀತೆಗೆ ನಿನ್ನ ಹೂಗಳನ್ನು ಕಂಡರೆ ಬಹಳ ಆಸೆ (೧೬). ಅಯ್ಯಾ–ಅಶೋಕವೃಕ್ಷ! ಶೋಕವನ್ನು ಪರಿಹರಿಸುತ್ತೀಯೆಂದು ಹೆಸರು ಗಳಿಸಿದ್ದೀಯೆ. ನಾನು ಶೋಕದಿಂದ ದಿಕ್ಕುಗಾಣದೆ ಹೋಗಿದ್ದೇನೆ. ನನ್ನ ಪ್ರಿಯೆಯನ್ನು ತೋರಿಸಿ ನಿನ್ನಂತೆ ನನ್ನನ್ನೂ ಅಶೋಕನನ್ನಾಗಿ ಮಾಡು (೧೭). ಓ ತಾಳೆಯಮರವೆ! ಮಾಗಿದ ತಾಳೆಯ ಹಣ್ಣುಗಳಂತೆ ಸ್ತನಗಳಿರುವ ಒಬ್ಬ ಸುಂದರಿಯನ್ನು ನೋಡಿದೆಯಾ? ನನ್ನಲ್ಲಿ ಮರುಕವಿದ್ದರೆ ಅವಳು ಎಲ್ಲಿರುವಳೆಂದು ಹೇಳು (೧೮). ಅಪ್ಪಾ–ನೇರಳೆಯಮರವೆ! ಬಂಗಾರದ ಮೈಬಣ್ಣವಿರುವ ನನ್ನ ಸೀತೆಯನ್ನು ಕಂಡೆಯಾ? ಗೊತ್ತಿದ್ದರೆ ನಿರ್ಭಯವಾಗಿ ಹೇಳು. ಓ ಕಣಗಿಲೆಯ ಗಿಡವೆ! ಅಂದವಾದ ಹೂಗಳಿಂದ ಈ ದಿನ ಎಷ್ಟು ಚೆನ್ನಾಗಿ ಕಾಣುತ್ತಿದ್ದೀಯೆ! ನನ್ನ ಪ್ರಿಯೆಗೆ ಕಣಗಿಲೆಹೂಗಳಲ್ಲಿ ಬಹಳ ಅಭಿರುಚಿ. ನೀನು ಅವಳನ್ನು ನೋಡಿದೆಯಾ? ನೋಡಿದ್ದರೆ ಹೇಳು" ಎಂದು ಹಲುಬಿ

ಚೂತನೀಪಮಹಾಸಾಲಾನ್ ಪನಸಾನ್ ಕುರವಾನ್ ಧವಾನ್ ।
ದಾಡಿಮಾನಸನಾನ್ ಗತ್ವಾ ದೃಷ್ಟ್ವಾ ರಾಮೋ ಮಹಾಯಶಾಃ ॥ ೨೧
ಬಕುಲಾನಥ ಪುಂನಾಗಾನ್ ಚಂಪಕಾನ್ ಕೇತಕೀಸ್ತಥಾ ।
ಪೃಚ್ಛನ್ ರಾಮೋ ವನೇ ಭ್ರಾಂತ ಉನ್ಮತ್ತ ಇವ ಲಕ್ಷ್ಯತೇ ॥ ೨೨
ಅಥವಾ ಮೃಗಶಾವಾಕ್ಷೀಂ ಮೃಗ ಜಾನಾಸಿ ಮೈಥಿಲೀಮ್ ।
ಮೃಗವಿಪ್ರೇಕ್ಷಣೀ ಕಾಂತಾ ಮೃಗೀಭಿಃ ಸಹಿತಾ ಭವೇತ್ ॥ ೨೩
ಗಜ ಸಾ ಗಜನಾಸೋರೂರ್ಯದಿ ದೃಷ್ಟಾ ತ್ವಯಾ ಭವೇತ್ ।
ತಾಂ ಮನ್ಯೇ ವಿದಿತಾಂ ತುಭ್ಯಮಾಖ್ಯಾಹಿ ವರವಾರಣ ॥ ೨೪
ಶಾರ್ದೂಲ ಯದಿ ಸಾ ದೃಷ್ಟಾ ಪ್ರಿಯಾ ಚಂದ್ರನಿಭಾನನಾ ।
ಮೈಥಿಲೀ ಮಮ ವಿಸ್ರಬ್ಧಂ ಕಥಯಸ್ವ ನ ತೇ ಭಯಮ್ ॥ ೨೫
ಕಿಂ ಧಾವಸಿ ಪ್ರಿಯೇ ದೂರಂ ದೃಷ್ಟಾಸಿ ಕಮಲೇಕ್ಷಣೇ ।
ವೃಕ್ಷೈರಾಚ್ಛಾದ್ಯ ಚಾತ್ಮಾನಂ ಕಿಂ ಮಾಂ ನ ಪ್ರತಿಭಾಷಸೇ ॥ ೨೬

---

ದನು (೧೯-೨೦). ಹೀಗೆಯೇ ಮಾವು, ಈಚಲು, ಸಾಲ, ಹಲಸು, ಗೋರಂಟೆ, ಧವ, ದಾಳಿಂಬ, ಬಂಧೂಕ, ಬಕುಳ, ಪುನ್ನಾಗ, ಸಂಪಗೆ, ಕೇದಿಗೆ ಮುಂತಾದ ಗಿಡಮರಗಳನ್ನು ಕಂಡು ಸೀತೆಯ ವಿಷಯವನ್ನು ಕೇಳುತ್ತ ಶ್ರೀರಾಮನು ಉನ್ಮತ್ತನಂತೆ ಅಲೆದಾಡಿದನು (೨೧–೨೨). ಕಾಡಿನಲ್ಲಿ ಮೃಗಗಳನ್ನು ಕಂಡಾಗ ಅವುಗಳನ್ನೂ ಕೇಳಿದನು : "ಎಲೈ ಹರಿಣವೆ! ಹರಿಣ ನೇತ್ರೆಯಾದ ಮೈಥಿಲಿಯನ್ನು ಬಲ್ಲೆಯಾ? ಅವಳು ನಿನ್ನಂತೆಯೇ ಚಂಚಲಾಕ್ಷಿ. ಹೆಣ್ಣು ಜಿಂಕೆಗಳೊಡನೆ ಆಡಲು ಹೋಗಿರಬಹುದೆ? (೨೩). ಓ ಗಜರಾಜ! ನಿನ್ನ ಸೊಂಡಿಲಂತೆ ಅವಳ ತೊಡೆಯಿದ್ದಿತು. ನೀನು ಅವಳನ್ನು ಕಂಡಿರಬಹುದೆಂದು ತಿಳಿದಿದ್ದೇನೆ. ನನ್ನ ಸೀತೆ ಎಲ್ಲಿದ್ದಾಳೆ ಹೇಳು (೨೪). ಅಯ್ಯಾ–ವ್ಯಾಘ್ರರಾಜ! ಚಂದ್ರಮುಖಿಯಾದ ನನ್ನ ಕಾಂತೆಯ ಸುದ್ದಿಯೇನಾದರೂ ನಿನಗೆ ಗೊತ್ತೆ? ಮರೆಮಾಚದೆ ಹೇಳು, ಹೆದರಬೇಡ" ಎಂದನು (೨೫). ಮತ್ತೆ ಭ್ರಾಂತಿಯಿಂದ ಹಲುಬಿದನು : "ಆ! ಪ್ರಿಯೆ! ನಿನ್ನನ್ನು ಕಂಡುಬಿಟ್ಟೆನು! ಏಕೆ ದೂರ ಓಡುವೆ? ಎಲೆ ಕಮಲೇಕ್ಷಣೆ! ಮರಗಳ ಹಿಂದೆ ಬಚ್ಚಿಟ್ಟುಕೊಳ್ಳುತ್ತೀಯಾ? ನನ್ನೊಡನೆ ಏಕೆ ಮಾತನಾಡೆ? (೨೬).

ತಿಷ್ಠ ತಿಷ್ಠ ವರಾರೋಹೇ ನ ತೇಽಸ್ತಿ ಕರುಣಾ ಮಯಿ ।
ನಾತ್ಯರ್ಥಂ ಹಾಸ್ಯಶೀಲಾಸಿ ಕಿಮರ್ಥಂ ಮಾಮುಪೇಕ್ಷಸೇ ॥ ೨೭

ಪೀತಕೌಶೇಯಕೇನಾಸಿ ಸೂಚಿತಾ ವರವರ್ಣಿನಿ ।
ಧಾವಂತ್ಯಪಿ ಮಯಾ ದೃಷ್ಟಾ ತಿಷ್ಠ ಯದ್ಯಸ್ತಿ ಸೌಹೃದಮ್ ॥ ೨೮

ನೈವ ಸಾ ನೂನಮಥವಾ ಹಿಂಸಿತಾ ಚಾರುಹಾಸಿನೀ ।
ಕೃಚ್ಛ್ರಂ ಪ್ರಾಪ್ತಂ ಹಿ ಮಾಂ ನೂನಂ ಯಥೋಪೇಕ್ಷಿತುಮರ್ಹತಿ ॥

ವ್ಯಕ್ತಂ ಸಾ ಭಕ್ಷಿತಾ ಬಾಲಾ ರಾಕ್ಷಸೈಃ ಪಿಶಿತಾಶನೈಃ ।
ವಿಭಜ್ಯಾಂಗಾನಿ ಸರ್ವಾಣಿ ಮಯಾ ವಿರಹಿತಾ ಪ್ರಿಯಾ ॥ ೩೦

ನೂನಂ ತಚ್ಛುಭದಂತೋಷ್ಠಂ ಸುನಾಸಂ ಚಾರುಕುಂಡಲಮ್ ।
ಪೂರ್ಣಚಂದ್ರನಿಭಂ ಗ್ರಸ್ತಂ ಮುಖಂ ನಿಷ್ಪ್ರಭತಾಂ ಗತಮ್ ॥ ೩೧

ಸಾ ಹಿ ಚಂಪಕವರ್ಣಾಭಾ ಗ್ರೀವಾ ಗ್ರೈವೇಯಶೋಭಿತಾ ।
ಕೋಮಲಾ ವಿಲಪಂತ್ಯಾಸ್ತು ಕಾಂತಾಯಾ ಭಕ್ಷಿತಾ ಶುಭಾ ॥ ೩೨

---

ಏ ಚೆಲುವೆ! ನಿಲ್ಲು ನಿಲ್ಲು! ನನ್ನಲ್ಲಿ ನಿನಗೆ ಮರುಕ ಬೇಡವೆ? ನೀನು ಇಷ್ಟೊಂದು ಹಾಸ್ಯಮಾಡುತ್ತಿರಲಿಲ್ಲ. ಸೀತೆ! ನನ್ನನ್ನೇಕೆ ಉಪೇಕ್ಷಿಸುತ್ತೀಯೆ? ಆಹಾ! ನಿನ್ನ ಪೀತಾಂಬರವು ಕಂಡುಹೋಯಿತು! ನೀನು ಓಡುವುದನ್ನು ನೋಡಿಬಿಟ್ಟೆನು! ನನ್ನಲ್ಲಿ ಸ್ನೇಹವಿದ್ದರೆ ಅಲ್ಲಿಯೇ ನಿಲ್ಲು (೨೭-೨೮). ಅಯ್ಯೋ! ಅವಳು ಸೀತೆಯಲ್ಲ. ಅವಳನ್ನು ಯಾರೋ ಕೊಂದುಹಾಕಿರಬೇಕು. ಅವಳು ನಕ್ಕರೆ ಎಷ್ಟು ಚೆನ್ನಾಗಿ ಕಾಣುತ್ತಿತ್ತು! ಈ ಸಂಕಟದಲ್ಲಿ ನಾನು ತೊಳಲುತ್ತಿದ್ದರೂ ನನ್ನನ್ನು ಉಪೇಕ್ಷಿಸುವಳೇ? ಇಲ್ಲ. ಮಾಂಸಾಹಾರಿಗಳಾದ ರಾಕ್ಷಸರು ಆ ಹುಡುಗಿಯನ್ನು ತಿಂದುದೇ ಹೌದು. ನಾನಿಲ್ಲದಾಗ ನನ್ನ ಇನಿಯಳನ್ನು ಹಿಸಿದು ಹಿಸಿದು ರಾಕ್ಷಸರು ತಿಂದಿರಬೇಕು (೨೯-೩೦). ಶುಭ್ರವಾದ ಅವಳ ಹಲ್ಲುಗಳೋ! ಅವಳ ತುಟಿಯೋ! ಅಂದವಾದ ಆ ಮೂಗೋ! ಹೊಳೆಯುವ ಕರ್ಣಕುಂಡಲಗಳೋ! ಪೂರ್ಣಚಂದ್ರನಂತಿರುವ ಆ ಮುಖವು ಎಷ್ಟು ಚೆಲುವಾಗಿತ್ತು! ರಾಕ್ಷಸರು ತಿನ್ನುವಾಗ, ಅಯ್ಯೋ, ಅದು ಕಾಂತಿಗುಂದಿ ಎಷ್ಟು ಸೊರಗಿತೊ! (೩೧). ಅವಳ ಕೊರಳು ಎಷ್ಟು ಚೆನ್ನಾಗಿತ್ತು! ಸಂಪಿಗೆಹೂವಿನ ಬಣ್ಣ! ಮೇಲೆ ಮುಕ್ತಾ

ನೂನಂ ವಿಕ್ಷಿಪ್ಯಮಾಣೌ ತೌ ಬಾಹೂ ಪಲ್ಲವಕೋಮಲೌ ।
ಭಕ್ಷಿತೌ ವೇಪಮಾನಾಗ್ರೌ ಸಹಸ್ತಾಭರಣಾಂಗದೌ ॥ ೩೩

ಮಯಾ ವಿರಹಿತಾ ಬಾಲಾ ರಕ್ಷಸಾಂ ಭಕ್ಷಣಾಯ ವೈ ।
ಸಾರ್ಥೇನೇವ ಪರಿತ್ಯಕ್ತಾ ಭಕ್ಷಿತಾ ಬಹುಬಾಂಧವಾ ॥ ೩೪

ಹಾ ಲಕ್ಷ್ಮಣ ಮಹಾಬಾಹೋ ಪಶ್ಯಸಿ ತ್ವಂ ಪ್ರಿಯಾಂ ಕ್ವಚಿತ್ ।
ಹಾ ಪ್ರಿಯೇ ಕ್ವ ಗತಾ ಭದ್ರೇ ಹಾ ಸೀತೇತಿ ಪುನಃ ಪುನಃ ॥ ೩೫

ಇತ್ಯೇವಂ ವಿಲಪನ್ ರಾಮಃ ಪರಿಧಾವನ್ ವನಾದ್ವನಮ್ ।
ಕ್ವಚಿದುದ್ಭ್ರಮತೇ ವೇಗಾತ್ ಕ್ವಚಿದ್ವಿಭ್ರಮತೇ ಬಲಾತ್ ॥ ೩೬

ಕ್ವಚಿನ್ಮತ್ತ ಇವಾಭಾತಿ ಕಾಂತಾನ್ವೇಷಣತತ್ಪರಃ ।
ಸ ವನಾನಿ ನದೀಃ ಶೈಲಾನ್ ಗಿರಿಪ್ರಸ್ರವಣಾನಿ ಚ ॥ ೩೭

---

ಹಾರದ ಅಲಂಕಾರ! ನನ್ನ ಕಾಂತೆ ಗೋಳಾಡುತ್ತಿರುವಾಗ ಆ ಕೋಮಲವಾದ ಕೊರಳನ್ನು, ಅಯ್ಯೋ, ರಾಕ್ಷಸರು ಮುರಿದು ತಿಂದುಬಿಟ್ಟಿದ್ದಾರೆ (೩೨). ಚಿಗುರಿನಂತೆ ಕೋಮಲವಾದ ಕೈಗಳನ್ನು ಆ ಸಮಯದಲ್ಲಿ ಹೇಗೆ ಹೇಗೆ ಕೊಡವಿದಳೋ! ಹವ್ವನೆ ಹೆದರಿ ಕೈಗಳು ಎಷ್ಟು ನಡುಗಿದವೋ! ಕೈಬಳೆ ಅಂಗದಗಳ ಸಹಿತ ಆ ರಾಕ್ಷಸರು ತೋಳುಗಳನ್ನು ತಿಂದಿದ್ದಾರೆ (೩೩). ಆ ಬಾಲೆಯನ್ನು ರಾಕ್ಷಸರು ತಿನ್ನಲೆಂದೇ ನಾನು ಬಿಟ್ಟುಹೋದೆನೆ! ಬಂಧುಗಳಿದ್ದರೂ ಅಬಲೆಯಾದ ಹೆಂಗಸನ್ನು ದಾರಿಹೋಕರು ನಡುದಾರಿಯಲ್ಲಿ ಬಿಟ್ಟು ಹೋದಂತಾಯಿತು (೩೪). ಹಾ ಮಹಾಬಾಹು! ಲಕ್ಷ್ಮಣಾ! ನಿನಗೆ ಎಲ್ಲಾದರೂ ಸೀತೆ ಕಾಣಿಸುವಳೆ? ಹಾ ಪ್ರಿಯೇ! ಸೀತೆ! ಎಲ್ಲಿ ಹೋದೆ?" ಎಂದು ಮತ್ತೆ ಮತ್ತೆ ವಿಲಪಿಸಿದನು (೩೫). ಹೀಗೆ ಶ್ರೀರಾಮನು ಗೋಳಿಡುತ್ತ ವನದಿಂದ ವನಕ್ಕೆ ಧಾವಿಸುತ್ತಿದ್ದನು. ಕೆಲವು ಕಡೆ ಭ್ರಾಂತಿಯಿಂದ ಸೀತೆಯನ್ನು ಕಂಡಂತಾಗಿ ಓಡುತ್ತಿದ್ದನು. ಸೀತೆಯನ್ನು ಹೋಲುವ ಲತಾದಿಗಳನ್ನು ನೋಡಿ ಸೀತೆಯೆಂದು ಮರುಳಾಗುತ್ತಿದ್ದನು. ಅವನು ತನ್ನ ಕಾಂತೆಯನ್ನು ಅರಸುತ್ತ ಹುಚ್ಚನಂತಾದನು. ಒಂದೆಡೆಯೂ ನಿಲ್ಲದೆ ವನ, ನದಿ, ಬೆಟ್ಟ, ಬೆಟ್ಟದಲ್ಲಿ ಹರಿಯುವ ಹಳ್ಳ, ದುರ್ಗಮವಾದ ಅರಣ್ಯ—ಇವುಗಳಲ್ಲಿ

**ಕಾನನಾನಿ ಚ ವೇಗೇನ ಭ್ರಮತ್ಯಪರಿಸಂಸ್ಥಿತಃ ||**

**ತಥಾ ಸ ಗತ್ವಾ ವಿಪುಲಂ ಮಹದ್ವನಂ**
**ಪರೀತ್ಯ ಸರ್ವಂ ತ್ವಥ ಮೈಥಿಲೀಂ ಪ್ರತಿ |**
**ಅನಿಷ್ಠಿತಾಶಃ ಸ ಚಕಾರ ಮಾರ್ಗಣೇ**
**ಪುನಃ ಪ್ರಿಯಾಯಾಃ ಪರಮಂ ಪರಿಶ್ರಮಮ್ ||** ೩೮

**ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಷ್ಟಿತಮಃ ಸರ್ಗಃ**

---

## ಏಕಷಷ್ಟಿತಮಃ ಸರ್ಗಃ

### ಸೀತಾನ್ವೇಷಣಮ್

**ದೃಷ್ಟ್ವಾಶ್ರಮಪದಂ ಶೂನ್ಯಂ ರಾಮೋ ದಶರಥಾತ್ಮಜಃ |**
**ರಹಿತಾಂ ಪರ್ಣಶಾಲಾಂ ಚ ವಿಧ್ವಸ್ತಾನ್ಯಾಸನಾನಿ ಚ ||** ೧

---

ಅಲೆದನು (೩೬-೩೭). ಈ ರೀತಿಯಲ್ಲಿ ಶ್ರೀರಾಮನು ಎಡಬಲದ ಸಕಲ ವನ ಪ್ರದೇಶಗಳನ್ನೂ ಹುಡುಕಿದನು. ಎಲ್ಲಿಯೂ ಅವನ ಆಸೆ ಫಲಿಸಲಿಲ್ಲ. ಆದರೂ ತನ್ನ ಕಾಂತೆಯನ್ನು ಹುಡುಕುವುದಕ್ಕಾಗಿ ಆಯಾಸವನ್ನು ಗಣಿಸದೆ ಪ್ರಯತ್ನ ಮಾಡುತ್ತಿದ್ದನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತನೆಯ ಸರ್ಗ

---

## ಸರ್ಗ ೬೧

ಸೀತೆಯನ್ನು ಹುಡುಕಿ ಕಾಣದೆ ಶ್ರೀರಾಮನ ದುಃಖ ; ಲಕ್ಷ್ಮಣನ ಸಾಂತ್ವನ ; ಪುನಃ ಶ್ರೀರಾಮನ ವಿಲಾಪ.

ಆಶ್ರಮಪ್ರದೇಶವೂ ಪರ್ಣಶಾಲೆಯೂ ಸೀತಾರಹಿತವಾಗಿ ಶೂನ್ಯವಾಗಿರುವುದನ್ನೂ ಪರ್ಣಶಾಲೆಯಲ್ಲಿ ಕುಳಿತುಕೊಳ್ಳುವ ಚಾಪೆ ಮುಂತಾದ ಉಪಕರಣಗಳು ಚಲ್ಲಾಪಿಲ್ಲಿಯಾಗಿರುವುದನ್ನೂ ಕಂಡು, ಶ್ರೀರಾಮನು ಜಾನಕಿಗಾಗಿ ಎಲ್ಲೆಡೆಯೂ ಚೆನ್ನಾಗಿ ಹುಡುಕಿ ನೋಡಿದನು. ಎಲ್ಲಿಯೂ ಅವಳ

ಅದೃಷ್ಟ್ವಾ ತತ್ರ ವೈದೇಹೀಂ ಸಂನಿರೀಕ್ಷ್ಯ ಚ ಸರ್ವಶಃ ।
ಉವಾಚ ರಾಮಃ ಪ್ರಾಕ್ರುಶ್ಯ ಪ್ರಗೃಹ್ಯ ರುಚಿರೌ ಭುಜೌ ॥ ೨

ಕ್ವ ನು ಲಕ್ಷ್ಮಣ ವೈದೇಹೀ ಕಂ ವಾ ದೇಶಮಿತೋ ಗತಾ ।
ಕೇನಾಹೃತಾ ವಾ ಸೌಮಿತ್ರೇ ಭಕ್ಷಿತಾ ಕೇನ ವಾ ಪ್ರಿಯಾ ॥ ೩

ವೃಕ್ಷೇಣಾಚ್ಛಾದ್ಯ ಯದಿ ಮಾಂ ಸೀತೇ ಹಸಿತುಮಿಚ್ಛಸಿ ।
ಅಲಂ ತೇ ಹಸಿತೇನಾದ್ಯ ಮಾಂ ಭಜಸ್ವ ಸುದುಃಖಿತಮ್ ॥ ೪

ಯೈಃ ಸಹ ಕ್ರೀಡಸೇ ಸೀತೇ ವಿಶ್ವಸ್ತೈರ್ಮೃಗಪೋತಕೈಃ ।
ಏತೇ ಹೀನಾಸ್ತ್ವಯಾ ಸೌಮ್ಯೇ ಧ್ಯಾಯಂತ್ಯಸ್ರಾವಿಲೇಕ್ಷಣಾಃ ॥ ೫

ಸೀತಯಾ ರಹಿತೋಽಹಂ ವೈ ನ ಹಿ ಜೀವಾಮಿ ಲಕ್ಷ್ಮಣ ।
ಮೃತಂ ಶೋಕೇನ ಮಹತಾ ಸೀತಾಹರಣಜೇನ ಮಾಮ್ ॥ ೬

ಪರಲೋಕೇ ಮಹಾರಾಜೋ ನೂನಂ ದ್ರಕ್ಷ್ಯತಿ ಮೇ ಪಿತಾ ।
ಕಥಂ ಪ್ರತಿಜ್ಞಾಂ ಸಂಶ್ರುತ್ಯ ಮಯಾ ತ್ವಮಭಿಯೋಜಿತಃ ॥ ೭

---

ಸುಳಿವು ಕಾಣಲಿಲ್ಲ. ಆಗ ಶ್ರೀರಾಮನು ದುಃಖದಿಂದ 'ಸೀತೇ' ಎಂದು ಕೂಗಿ ಸುಂದರವಾದ ತನ್ನ ಬಾಹುಗಳನ್ನು ನೀಡಿ ಗೋಳಾಡಲಾರಂಭಿಸಿದನು (೧-೨) : "ಲಕ್ಷ್ಮಣ, ವೈದೇಹಿ ಎಲ್ಲಿರಬಹುದು? ಇಲ್ಲಿಂದ ಎಲ್ಲಿಗೆ ಹೋಗಿರಬಹುದು? ಯಾರಾದರೂ ಅಪಹರಿಸಿಕೊಂಡು ಹೋಗಿರಬಹುದೆ? ಲಕ್ಷ್ಮಣ, ಯಾರಾದರೂ ನನ್ನ ಕಾಂತೆಯನ್ನು ತಿಂದುಬಿಟ್ಟಿರಬಹುದೆ? (೩). ಹಾ ಸೀತೇ, ಎಲ್ಲಾದರೂ ಮರದ ಹಿಂದೆ ಮರೆಯಾಗಿ ನಿಂತು ಹಾಸ್ಯಮಾಡಬೇಕೆಂದಿರುವೆಯಾ? ನಿನ್ನ ಹಾಸ್ಯ ಸಾಕು, ಬೇಗನೆ ಬಂದುಬಿಡು. ದುಃಖದಿಂದ ನೊಂದುಹೋಗಿದ್ದೇನೆ (೪). ಸೀತೆ, (ಇಲ್ಲಿ ನೋಡು) ಈ ಜಿಂಕೆಯ ಮರಿಗಳು ನೀನಿಲ್ಲವೆಂದು ಕಣ್ಣೀರು ಸುರಿಸುತ್ತಿವೆ. ಸ್ನೇಹದಿಂದಿದ್ದ ಈ ಮರಿಗಳೊಡನೆ ಆಡುತ್ತಿದ್ದೆಯಲ್ಲ! ಲಕ್ಷ್ಮಣ, ಸೀತೆಯಿಲ್ಲದಮೇಲೆ ನಾನು ಬದುಕಲಾರೆ. ಸೀತಾಪಹಾರದಿಂದ ಜನಿಸಿದ ಮಹತ್ತರವಾದ ಈ ಶೋಕದಿಂದ ನಾನು ಸಾಯುವೆನು (೫-೬). ನನ್ನ ತಂದೆಯಾದ ಮಹಾರಾಜನು ಪರಲೋಕದಲ್ಲಿ ನನ್ನನ್ನು ನೋಡಿಯೇ ನೋಡುವನು. ಆಗ 'ಎಲೈ ರಾಮ, ನಾನು ನೇಮಿಸಿದಂತೆ ಪ್ರತಿಜ್ಞೆಮಾಡಿ ನೀನು ಕಾಡಿಗೆ ಹೋಗಿದ್ದೆಯಲ್ಲ. ಗೊತ್ತುಮಾಡಿದ ಕಾಲಾವಧಿಯು ಮುಗಿಯದೆ ನನ್ನ ಸಮೀಪಕ್ಕೆ ಬಂದೆಯಾ?

ಅಪೂರಯಿತ್ವಾ ತಂ ಕಾಲಂ ಮತ್ಸಕಾಶಮಿಹಾಗತಃ ।
ಕಾಮವೃತ್ತಮನಾರ್ಯಂ ಮಾಂ ಮೃಷಾವಾದಿನಮೇವ ಚ ॥ ೮
ಧಿಕ್ ತ್ವಾಮಿತಿ ಪರೇ ಲೋಕೇ ವ್ಯಕ್ತಂ ವಕ್ಷ್ಯತಿ ಮೇ ಪಿತಾ ।
ವಿವಶಂ ಶೋಕಸಂತಪ್ತಂ ದೀನಂ ಭಗ್ನಮನೋರಥಮ್ ॥ ೯
ಮಾಮಿಹೋತ್ಸೃಜ್ಯ ಕರುಣಂ ಕೀರ್ತಿರ್ನರಮಿವಾನೃಜುಮ್ ।
ಕ್ವ ಗಚ್ಛಸಿ ವರಾರೋಹೇ ಮಾಂ ನೋತ್ಸೃಜ ಸುಮಧ್ಯಮೇ ॥ ೧೦
ತ್ವಯಾ ವಿರಹಿತಶ್ಚಾಹಂ ತ್ಯಕ್ಷ್ಯೇ ಜೀವಿತಮಾತ್ಮನಃ ।
ಇತೀವ ವಿಲಪನ್ ರಾಮಃ ಸೀತಾದರ್ಶನಲಾಲಸಃ ॥ ೧೧
ನ ದದರ್ಶ ಸುದುಃಖಾರ್ತೋ ರಾಘವೋ ಜನಕಾತ್ಮಜಾಮ್ ।
ಅನಾಸಾದಯಮಾನಂ ತಂ ಸೀತಾಂ ಶೋಕಪರಾಯಣಮ್ ॥ ೧೨
ಪಂಕಮಾಸಾದ್ಯ ವಿಪುಲಂ ಸೀದಂತಮಿವ ಕುಂಜರಮ್ ।
ಲಕ್ಷ್ಮಣೋ ರಾಮಮತ್ಯರ್ಥಮುವಾಚ ಹಿತಕಾಮ್ಯಯಾ ॥ ೧೩

---

ನೀನು ಮನಸ್ಸಿಗೆ ತೋರಿದಂತೆ ನಡೆಯತಕ್ಕವನು; ಅನಾರ್ಯ; ಅಸತ್ಯವಾದಿ; ನಿನಗೆ ಧಿಕ್ಕಾರ!' ಎಂಬುದಾಗಿ ನನ್ನ ತಂದೆ ಪರಲೋಕದಲ್ಲಿ ನನಗೆ ಹೇಳಿಯೇ ಹೇಳುವನು! (೭-೮). ಓ ಸೀತೇ, ನನ್ನ ಕಾಂತೇ, ಎಲ್ಲಿ ಹೋದೆ? ನಿನ್ನನ್ನೇ ನಂಬಿದ್ದ ನಾನು ದಿಕ್ಕುತೋರದವನಾಗಿದ್ದೇನೆ. ಶೋಕಸಂತಪ್ತನಾಗಿದ್ದೇನೆ. ದೀನನಾಗಿದ್ದೇನೆ. ನನ್ನ ಆಸೆಯೆಲ್ಲ ಮಣ್ಣುಪಾಲಾಯಿತು. ನನ್ನನ್ನು ಶೋಚನೀಯ ಸ್ಥಿತಿಯಲ್ಲಿ ಬಿಟ್ಟುಹೋಗುವೆಯಾ? ಮೋಸಗಾರನನ್ನು ಕೀರ್ತಿದೇವತೆಯು ಬಿಟ್ಟುಹೋಗುವಂತೆ ಹೋಗುವೆಯಾ? ಸುಂದರಿ, ಎಲ್ಲಿಗೆ ಹೋಗುವೆ? ನನ್ನ ಕೈಬಿಡಬೇಡ (೯-೧೦). ನನ್ನನ್ನು ತ್ಯಜಿಸಿದರೆ ನಿಶ್ಚಯವಾಗಿಯೂ ನಾನು ಪ್ರಾಣವನ್ನು ಬಿಡುವೆನು" ಎಂದು ಸೀತಾದರ್ಶನಕ್ಕಾಗಿ ಹಾತೊರೆಯುತ್ತ ಶ್ರೀರಾಮನು ವಿಲಪಿಸಿದನು. ಎಷ್ಟು ಅಲೆದರೂ ರಾಘವನಿಗೆ ಜಾನಕಿಯು ಗೋಚರಿಸಲಿಲ್ಲ. ಜಾನಕಿಯನ್ನು ಕಾಣದೆ ಅವನು ಶೋಕದಲ್ಲಿ ಮುಳುಗಿದನು (೧೧-೧೨). ಅಗಾಧವಾದ ಕೆಸರಿನಲ್ಲಿ ಗಜರಾಜನು ಸಿಕ್ಕಿಕೊಂಡಂತೆ ಪರಿತಪಿಸಿದನು. ಆಗ ಲಕ್ಷ್ಮಣನು ಶ್ರೀರಾಮನ ಮನಸ್ಸಿಗೆ ಸಮಾಧಾನವಾಗಲೆಂದು ಉಚಿತವಾದ ರೀತಿಯಲ್ಲಿ

ಮಾ ವಿಷಾದಂ ಮಹಾಬುದ್ಧೇ ಕುರು ಯತ್ನಂ ಮಯಾ ಸಹ ।
ಇದಂ ಗಿರಿವನಂ ಶೂರ ಬಹುಕಂದರಶೋಭಿತಮ್ ॥ ೧೪

ಪ್ರಿಯಕಾನನಸಂಚಾರಾ ವನೋನ್ಮತ್ತಾ ಚ ಮೈಥಿಲೀ ।
ಸಾ ವನಂ ವಾ ಪ್ರವಿಷ್ಟಾ ಸ್ಯಾನ್ನಲಿನೀಂ ವಾ ಸುಪುಷ್ಪಿತಾಮ್ ॥ ೧೫

ಸರಿತಂ ವಾಪಿ ಸಂಪ್ರಾಪ್ತಾ ಮೀನವಂಜುಲಸೇವಿತಾಮ್ ।
ಸ್ನಾತುಕಾಮಾ ನಿಲೀನಾ ಸ್ಯಾದ್ಧಾಸಕಾಮಾ ವನೇ ಕ್ವಚಿತ್ ॥ ೧೬

ವಿತ್ರಾಸಯಿತುಕಾಮಾ ವಾ ಲೀನಾ ಸ್ಯಾತ್ ಕಾನನೇ ಕ್ವಚಿತ್ ।
ಜಿಜ್ಞಾಸಮಾನಾ ವೈದೇಹೀ ತ್ವಾಂ ಮಾಂ ಚ ಪುರುಷರ್ಷಭ ॥ ೧೭

ತಸ್ಯಾ ಹ್ಯನ್ವೇಷಣೇ ಶ್ರೀಮನ್ ಕ್ಷಿಪ್ರಮೇವ ಯತಾವಹೈ ।
ವನಂ ಸರ್ವಂ ವಿಚಿನ್ವಾನೌ ಯತ್ರ ಸಾ ಜನಕಾತ್ಮಜಾ ॥ ೧೮

ಮನ್ಯಸೇ ಯದಿ ಕಾಕುತ್ಸ್ಥ ಮಾ ಸ್ಮ ಶೋಕೇ ಮನಃ ಕೃಥಾಃ ।
ಏವಮುಕ್ತಸ್ತು ಸೌಹಾರ್ದಾಲ್ಲಕ್ಷ್ಮಣೇನ ಸಮಾಹಿತಃ ॥ ೧೯

---

ಹೀಗೆಂದನು ; "ಅಣ್ಣ, ನೀನು ವಿವೇಕಶಾಲಿ. ಹೀಗೆ ವಿಷಾದಪಡಬಾರದು. ಸೀತಾದೇವಿಯನ್ನು ನಾವಿಬ್ಬರೂ ಶ್ರಮವಹಿಸಿ ಹುಡುಕೋಣ, ಈ ಬೆಟ್ಟದ ವನದಲ್ಲಿ ಗುಹೆಗಳಂತೆ ದಟ್ಟವಾದ ಲತಾಗೃಹಗಳಿವೆ (೧೩-೧೪). ಸೀತಾದೇವಿಗೆ ವನದಲ್ಲಿ ಸಂಚರಿಸುವುದೆಂದರೆ ಬಹಳ ಪ್ರೀತಿ. ವನವನ್ನು ಕಂಡರೆ ಹರ್ಷದಿಂದ ಹಿಗ್ಗುತ್ತಾಳೆ. ಅವಳು ಈ ವನದೊಳಗೆ ಹೋಗಿರಬಹುದು. ಹೂಗಳು ಅರಳಿರುವ ತಾವರೆಯ ಕೊಳಕ್ಕೆ ಹೋಗಿರಬಹುದು. ಸೆಕೆಯನ್ನು ತಡೆಯಲಾರದೆ ಸ್ನಾನಕ್ಕಾಗಿ ನದಿಗೆ ಹೋಗಿದ್ದರೂ ಇರಬಹುದು. ಅಲ್ಲಿರುವ ಮೀನುಗಳನ್ನೂ ವೇತಸಹುಲ್ಲುಗಳನ್ನೂ ನೋಡಿ ಸಂತೋಷಿಸುತ್ತಿರುವ ಸಂಭವವೂ ಉಂಟು. ಹಾಸ್ಯಕ್ಕಾಗಿ ಎಲ್ಲಾದರೂ ಅಡಗಿಕೊಂಡಿರುವಳೋ ಏನೋ ! (೧೫-೧೬). ಬೇಕೆಂದು ನಮ್ಮನ್ನು ಹೆದರಿಸುವುದಕ್ಕಾಗಿ ಕಾಡಿನಲ್ಲಿ ಅವಿತುಕೊಂಡಿದ್ದರೂ ಇರಬಹುದು. ನಾವು ಏನು ಮಾಡುತ್ತೇವೆಂದು ತಿಳಿಯುವ ಕುತೂಹಲದಿಂದ ಹಾಗೆ ಮಾಡಿರಬಹುದು. ಪುರುಷೋತ್ತಮ–ಶ್ರೀರಾಮ, ಸೀತಾದೇವಿಯನ್ನು ಅರಸಲು ತೀವ್ರವಾಗಿ ಪ್ರಯತ್ನಿಸೋಣ. ಈ ಅರಣ್ಯವನ್ನೆಲ್ಲ ಶೋಧಿಸೋಣ (೧೭-೧೮). ನಿನಗೆ ಯೋಗ್ಯವೆನಿಸಿದಂತೆ

ಸಹ ಸೌಮಿತ್ರಿಣಾ ರಾಮೋ ವಿಚೇತುಮುಪಚಕ್ರಮೇ |
ತೌ ವನಾನಿ ಗಿರೀಂಶ್ಚೈವ ಸರಿತಶ್ಚ ಸರಾಂಸಿ ಚ || ೨೦

ನಿಖಿಲೇನ ವಿಚಿನ್ವಾನೌ ಸೀತಾಂ ದಶರಥಾತ್ಮಜೌ |
ತಸ್ಯ ಶೈಲಸ್ಯ ಸಾನೂನಿ ಗುಹಾಶ್ಚ ಶಿಖರಾಣಿ ಚ || ೨೧

ನಿಖಿಲೇನ ವಿಚಿನ್ವಂತೌ ನೈವ ತಾವಭಿಜಗ್ಮತುಃ |
ವಿಚಿತ್ಯ ಸರ್ವತಃ ಶೈಲಂ ರಾಮೋ ಲಕ್ಷ್ಮಣಮಬ್ರವೀತ್ || ೨೨

ನೇಹ ಪಶ್ಯಾಮಿ ಸೌಮಿತ್ರೇ ವೈದೇಹೀಂ ಪರ್ವತೇ ಶುಭಾಮ್ |
ತತೋ ದುಃಖಾಭಿಸಂತಪ್ತೋ ಲಕ್ಷ್ಮಣೋ ವಾಕ್ಯಮಬ್ರವೀತ್ || ೨೩

ವಿಚರನ್ ದಂಡಕಾರಣ್ಯಂ ಭ್ರಾತರಂ ದೀಪ್ತತೇಜಸಮ್ |
ಪ್ರಾಪ್ಸ್ಯಸಿ ತ್ವಂ ಮಹಾಪ್ರಾಜ್ಞ ಮೈಥಿಲೀಂ ಜನಕಾತ್ಮಜಾಮ್ || ೨೪

ಯಥಾ ವಿಷ್ಣುರ್ಮಹಾಬಾಹುರ್ಬಲಿಂ ಬದ್ಧ್ವಾ ಮಹೀಮಿಮಾಮ್ |
ಏವಮುಕ್ತಸ್ತು ಸೌಹಾರ್ದಾಲ್ಲಕ್ಷ್ಮಣೇನ ಸ ರಾಘವಃ || ೨೫

---

ಮಾಡೋಣ. ಅಣ್ಣ, ದುಃಖಿಸಬೇಡ" ಎಂದು ಸಂತೈಸಿದನು. ಲಕ್ಷ್ಮಣನು ಸ್ನೇಹಪೂರ್ಣವಾಗಿ ಈ ಪ್ರಕಾರ ನುಡಿಯಲು, ಶ್ರೀರಾಮನ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿತು (೧೯). ಅವನು ಲಕ್ಷ್ಮಣನೊಡನೆ ಮತ್ತೆ ಸೀತಾನ್ವೇಷಣೆಯಲ್ಲಿ ತೊಡಗಿದನು. ಕಾಡು, ಬೆಟ್ಟ, ಹೊಳೆ, ಕೊಳ—ಮುಂತಾದವುಗಳನ್ನೆಲ್ಲ ಆ ದಶರಥಾತ್ಮಜರು ಸಮಗ್ರವಾಗಿ ಅರಸಿದರು. ಸಮೀಪದಲ್ಲಿದ್ದ ಒಂದು ಪರ್ವತದ ತಪ್ಪಲುಗಳನ್ನೂ ಗುಹೆಗಳನ್ನೂ ಶಿಖರಗಳನ್ನೂ ಶೋಧಿಸಿದರು. ಎಲ್ಲಿಯೂ ಸೀತೆ ಕಾಣಲಿಲ್ಲ. ಆ ಪರ್ವತವನ್ನೆಲ್ಲ ಸುತ್ತಿದಮೇಲೆ ಶ್ರೀರಾಮನು "ಸೌಮಿತ್ರಿ, ಇಲ್ಲಿಯೂ ವೈದೇಹಿ ಕಾಣಿಸುವುದಿಲ್ಲ" ಎಂದನು (೨೦–೨೨). ಲಕ್ಷ್ಮಣನಿಗೆ ದುಃಖ ಉಕ್ಕಿಬಂದಿತು. ಅವನು "ಅಣ್ಣ, ಮಹಾಪ್ರಾಜ್ಞನಾದ ನಿನಗೆ ನಾನೇನು ಹೇಳಬಲ್ಲೆ? ದಂಡಕಾರಣ್ಯವನ್ನೇ ಶೋಧಿಸೋಣ. ಮಹಾವಿಷ್ಣುವು ಬಲಿಚಕ್ರವರ್ತಿಯನ್ನೇ ಬಂಧಿಸಿ ಭೂದೇವಿಯನ್ನು ಪಡೆಯಲಿಲ್ಲವೆ? ಹಾಗೆ ನೀನು ನಿನ್ನ ಸಾಹಸದಿಂದ ಜನಕಪುತ್ರಿಯನ್ನು ಪಡೆಯುವೆ" ಎಂದನು. ಲಕ್ಷ್ಮಣನು ಸ್ನೇಹದಿಂದ ಕರಗಿ ಆ ಮಾತನ್ನಾಡಿದನು (೨೩–೨೫).

ಉವಾಚ ದೀನಯಾ ವಾಚಾ ದುಃಖಾಭಿಹತಚೇತನಃ ।
ವನಂ ಸರ್ವಂ ಸುವಿಚಿತಂ ಪದ್ಮಿನ್ಯಃ ಫುಲ್ಲಪಂಕಜಾಃ ॥ ೨೬

ಗಿರಿಶ್ಚಾಯಂ ಮಹಾಪ್ರಾಜ್ಞ ಬಹುಕಂದರನಿರ್ಝರಃ ।
ನ ಹಿ ಪಶ್ಯಾಮಿ ವೈದೇಹೀಂ ಪ್ರಾಣೇಭ್ಯೋಽಪಿ ಗರೀಯಸೀಮ್ ॥ ೨೭

ಏವಂ ಸ ವಿಲಪನ್ ರಾಮಃ ಸೀತಾಹರಣಕರ್ಶಿತಃ ।
ದೀನಃ ಶೋಕಸಮಾವಿಷ್ಟೋ ಮುಹೂರ್ತಂ ವಿಹ್ವಲೋಽಭವತ್ ॥ ೨೮

ಸ ವಿಹ್ವಲಿತಸರ್ವಾಂಗೋ ಗತಬುದ್ಧಿರ್ವಿಚೇತನಃ ।
ನಿಷಸಾದಾತುರೋ ದೀನೋ ನಿಃಶ್ವಸ್ಯಾಶೀತಮಾಯತಮ್ ॥ ೨೯

ಬಹುಶಃ ಸ ತು ನಿಃಶ್ವಸ್ಯ ರಾಮೋ ರಾಜೀವಲೋಚನಃ ।
ಹಾ ಪ್ರಿಯೇತಿ ವಿಚುಕ್ರೋಶ ಬಹುಶೋ ಬಾಷ್ಪಗದ್ಗದಃ ॥ ೩೦

ತಂ ತತಃ ಸಾಂತ್ವಯಾಮಾಸ ಲಕ್ಷ್ಮಣಃ ಪ್ರಿಯಬಾಂಧವಃ ।
ಬಹುಪ್ರಕಾರಂ ಧರ್ಮಜ್ಞಃ ಪ್ರಶ್ರಿತಃ ಪ್ರಶ್ರಿತಾಂಜಲಿಃ ॥ ೩೧

---

ಶೋಕದಿಂದ ಶ್ರೀರಾಮನ ಚೈತನ್ಯ ಉಡುಗಿತ್ತು. ಅವನು ದೈನ್ಯದಿಂದ "ಲಕ್ಷ್ಮಣ, ನೀನು ಮಹಾಪ್ರಾಜ್ಞನಲ್ಲವೆ? ವನವನ್ನು ಸಂಪೂರ್ಣವಾಗಿ ಶೋಧಿಸಿದೆವು. ತಾವರೆಯ ಕೊಳಗಳಲ್ಲಿ ಹುಡುಕಿದೆವು (೨೬). ಈ ಬೆಟ್ಟದಲ್ಲಿರುವ ಗವಿಗಳನ್ನೂ ಗಿರಿನದಿಗಳನ್ನೂ ಅರಸಿದೆವು. ಎಲ್ಲಿಯೂ ಪ್ರಾಣಕಾಂತೆಯಾದ ವೈದೇಹಿ ದೊರೆಯಲಿಲ್ಲ" ಎಂದು ವಿಲಪಿಸಿದನು. ಸೀತಾಪಹರಣದಿಂದಾದ ದುಃಖವು ಅವನನ್ನು ಕಿತ್ತೆಳೆಯುತ್ತಿತ್ತು. ಅವನು ದೀನನಾಗಿ ಶೋಕದಲ್ಲಿ ಮುಳುಗಿದನು. ಚೈತನ್ಯಗುಂದಿ ಪರವಶನಾದನು (೨೭–೨೮). ಶ್ರೀರಾಮನ ಸರ್ವಾಂಗಗಳೂ ಸ್ವಾಧೀನತಪ್ಪಿ ಕುಸಿದವು. ಬುದ್ಧಿಗೆ ಮಬ್ಬು ಕವಿಯಿತು; ಶಕ್ತಿಯುಡುಗಿತು; ಚಿಂತೆ ಮುಸುಕಿತು. ಶ್ರೀರಾಮನು ದೈನ್ಯದಿಂದ ದೀರ್ಘವಾಗಿ ಬಿಸುಸುಯ್ದು ಹಾಗೆಯೇ ಕುಳಿತುಬಿಟ್ಟನು (೨೯). ಉಸ್ಸೆಂದು ಮತ್ತೆ ಮತ್ತೆ ಬಿಸುಸುಯ್ದನು. ಕಣ್ಣಲ್ಲಿ ನೀರುತುಂಬಿತು. ಗಂಟಲು ಬಿಗಿಯಿತು. ಆ ರಾಜೀವನೇತ್ರನು ಗದ್ಗದ ಧ್ವನಿಯಿಂದ 'ಹಾ ಪ್ರಿಯೇ!' ಎಂದು ಕೂಗಿಕೊಂಡನು (೩೦). ಆಗ ಭ್ರಾತೃವತ್ಸಲನಾದ ಲಕ್ಷ್ಮಣನು ಅಣ್ಣನನ್ನು ಬಹುವಿಧದಲ್ಲಿ ಸಂತೈಸತೊಡಗಿದನು. ಆ ಧರ್ಮಜ್ಞನು ಕೈಮುಗಿದುಕೊಂಡು (ಅಷ್ಟು ಹತಾಶನಾಗ

ಅನಾದೃತ್ಯ ತು ತದ್ವಾಕ್ಯಂ ಲಕ್ಷ್ಮಣೋಷ್ಠಪುಟಾಚ್ಚ್ಯುತಮ್ ।
ಅಪಶ್ಯಂಸ್ತಾಂ ಪ್ರಿಯಾಂ ಸೀತಾಂ ಪ್ರಾಕ್ರೋಶತ್ಸ ಪುನಃ ಪುನಃ ॥ ೩೨

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕಷಷ್ಟಿತಮಃ ಸರ್ಗಃ

---

## ದ್ವಿಷಷ್ಟಿತಮಃ ಸರ್ಗಃ

### ರಾಘವವಿಲಾಪಃ

ಸೀತಾಮಪಶ್ಯನ್ ಧರ್ಮಾತ್ಮಾ ಶೋಕೋಪಹತಚೇತನಃ ।
ವಿಲಲಾಪ ಮಹಾಬಾಹೂ ರಾಮಃ ಕಮಲಲೋಚನಃ ॥ ೧

ಪಶ್ಯನ್ನಿವ ಸ ತಾಂ ಸೀತಾಮಪಶ್ಯನ್ ಮದನಾರ್ದಿತಃ ।
ಉವಾಚ ರಾಘವೋ ವಾಕ್ಯಂ ವಿಲಾಪಾಶ್ರಯದುರ್ವಚಮ್ ॥ ೨

---

ಬಾರದೆಂದು) ಶ್ರೀರಾಮನನ್ನು ವಿನಯದಿಂದ ಬೇಡಿಕೊಂಡನು (೩೧). ಆದರೆ ಲಕ್ಷ್ಮಣನ ಸಾಂತ್ವನವಾಕ್ಯಗಳನ್ನು ಶ್ರೀರಾಮನು ಗಮನಿಸಲಿಲ್ಲ. ತನ್ನ ಪ್ರಿಯಳಾದ ಸೀತೆಯು ಕಾಣದಾದಳೆಂದು ಅವನು ಮತ್ತೆ ಮತ್ತೆ ವಿಲಪಿಸಿದನು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೊಂದನೆಯ ಸರ್ಗ

---

## ಸರ್ಗ ೬೨

### ಲಕ್ಷ್ಮಣನೆದುರಿಗೆ ಶ್ರೀರಾಮನ ವಿಲಾಪ

ಧರ್ಮಾತ್ಮನಾದ ಶ್ರೀರಾಮನು ಸೀತಾವಿರಹದಿಂದ ದುಃಖದಲ್ಲಿ ಮುಳುಗಿಹೋದನು. ಆಜಾನುಬಾಹುವಾದ ಆ ಕಮಲನೇತ್ರನು ಗೋಳಾಡ ತೊಡಗಿದನು. ವಿರಹತಾಪದಿಂದ ವಿಷಣ್ಣನಾದ ರಾಘವನು ಸೀತೆಯಿಲ್ಲದಿದ್ದರೂ ಎದುರಿಗೆ ಸೀತೆಯನ್ನು ಕಂಡಂತೆ ವರ್ಣಿಸಲಸದಳವಾದ ರೀತಿಯಲ್ಲಿ ಹಲುಬ

*

ತ್ವಮಶೋಕಸ್ಯ ಶಾಖಾಭಿಃ ಪುಷ್ಪಪ್ರಿಯತಯಾ ಪ್ರಿಯೇ ।
ಆವೃಣೋಷಿ ಶರೀರಂ ತೇ ಮಮ ಶೋಕವಿವರ್ಧನೀ ॥ ೩

ಕದಲೀಕಾಂಡಸದೃಶೌ ಕದಲ್ಯಾ ಸಂವೃತಾವುಭೌ ।
ಊರೂ ಪಶ್ಯಾಮಿ ತೇ ದೇವಿ ನಾಸಿ ಶಕ್ತಾ ನಿಗೂಹಿತುಮ್ ॥ ೪

ಕರ್ಣಿಕಾರವನಂ ಭದ್ರೇ ಹಸಂತೀ ದೇವಿ ಸೇವಸೇ ।
ಅಲಂ ತೇ ಪರಿಹಾಸೇನ ಮಮ ಬಾಧಾವಹೇನ ವೈ ॥ ೫

ಪರಿಹಾಸೇನ ಕಿಂ ಸೀತೇ ಪರಿಶ್ರಾಂತಸ್ಯ ಮೇ ಪ್ರಿಯೇ ।
ಅಯಂ ಸ ಪರಿಹಾಸೋಽಪಿ ಸಾಧು ದೇವಿ ನ ರೋಚತೇ ॥ ೬

ವಿಶೇಷೇಣಾಶ್ರಮಸ್ಥಾನೇ ಹಾಸೋಽಯಂ ನ ಪ್ರಶಸ್ಯತೇ ।
ಅವಗಚ್ಛಾಮಿ ತೇ ಶೀಲಂ ಪರಿಹಾಸಪ್ರಿಯಂ ಪ್ರಿಯೇ ॥ ೭

ಆಗಚ್ಛ ತ್ವಂ ವಿಶಾಲಾಕ್ಷಿ ಶೂನ್ಯೋಽಯಮುಟಜಸ್ತವ ।
ಸುವ್ಯಕ್ತಂ ರಾಕ್ಷಸೈಃ ಸೀತಾ ಭಕ್ಷಿತಾ ವಾ ಹೃತಾಪಿ ವಾ ॥ ೮

---

ಲಾರಂಭಿಸಿದನು (೧–೨): "ಓ ಪ್ರಿಯೇ, ಅಶೋಕವೃಕ್ಷದ ಹಿಂದೆ ಕೊಂಬೆಗಳ ಹಿಂದೆ ಬಚ್ಚಿಟ್ಟುಕೊಳ್ಳುವೆಯಾ! ಹೂಗಳು ನಿನಗೆ ಅಷ್ಟು ಪ್ರಿಯವಾದುವಲ್ಲವೆ? ನನ್ನ ಶೋಕ ಹೆಚ್ಚುವುದಿಲ್ಲವೆ? (೩). ಬಾಳೆಯಗಿಡದ ಹಿಂದೆ ಅಡಗಿದರೇನಾಯಿತು? ಬಾಳೆಯ ದಿಂಡಿನಂತಿರುವ ನಿನ್ನ ತೊಡೆಗಳೆರಡೂ ಕಾಣುತ್ತಿವೆ! ಸೀತೆ, ನೀನು ಅವಿತುಕೊಳ್ಳಲಾರೆ! ಭದ್ರೆ, ನಗುನಗುತ್ತ ಕಣಗಿಲೆಗಿಡಗಳ ಹಿಂದೆ ನಿಂತಿರುವೆಯಾ? ನಿನ್ನ ಪರಿಹಾಸ ಸಾಕು. ನನಗೆ ಸಂಕಟವಾಗುತ್ತಿದೆ (೪–೫). ಓ ಕಾಂತೇ, ಬಹಳ ಬಳಲಿಹೋಗಿದ್ದೇನೆ. ಈಗ ನನಗೆ ಹಾಸ್ಯ ಬೇಕಾಗಿದೆಯೆ? ದೇವಿ, ಈ ಬಗೆಯ ಹಾಸ್ಯ ನನಗೆ ರುಚಿಸುವುದಿಲ್ಲ. ಆಶ್ರಮದಲ್ಲಿರುವಾಗ ಇಷ್ಟು ಹಾಸ್ಯ ಒಳ್ಳೆಯದಲ್ಲ. ಪ್ರಿಯೇ, ನಿನ್ನದು ಬಹಳ ಹಾಸ್ಯಸ್ವಭಾವವೆಂಬುದು ನನಗೆ ಗೊತ್ತು! (೬–೭). ವಿಶಾಲಾಕ್ಷಿ, ಬೇಗ ಬಂದುಬಿಡು! ನೀನಿಲ್ಲದೆ ನಮ್ಮ ಪರ್ಣಶಾಲೆ ಬಿಣ್ಣೆನಿಸುತ್ತಿದೆ! ಅಯ್ಯೋ! ಲಕ್ಷ್ಮಣ, ಸೀತೆಯನ್ನು ರಾಕ್ಷಸರು ಭಕ್ಷಿಸಿದ್ದೇ ನಿಶ್ಚಯ. ಅಥವಾ ಅವಳನ್ನು ರಾಕ್ಷಸರು ಎಲ್ಲಿಗೋ ಅಪಹರಿಸಿಕೊಂಡುಹೋಗಿ

ನ ಹಿ ಸಾ ವಿಲಪಂತಂ ಮಾಮುಪಸಂಪ್ರೈತಿ ಲಕ್ಷ್ಮಣ ।
ಏತಾನಿ ಮೃಗಯೂಥಾನಿ ಸಾಶ್ರುನೇತ್ರಾಣಿ ಲಕ್ಷ್ಮಣ ॥ ೯

ಶಂಸಂತೀವ ಹಿ ವೈದೇಹೀಂ ಭಕ್ಷಿತಾಂ ರಜನೀಚರೈಃ ।
ಹಾ ಮಮಾರ್ಯೇ ಕ್ವ ಯಾತಾಸಿ ಹಾ ಸಾಧ್ವಿ ವರವರ್ಣಿನಿ ॥ ೧೦

ಹಾ ಸಕಾಮಾದ್ಯ ಕೈಕೇಯೀ ದೇವೀ ಸಾಪಿ ಭವಿಷ್ಯತಿ ।
ಸೀತಯಾ ಸಹ ನಿರ್ಯಾತೋ ವಿನಾ ಸೀತಾಮುಪಾಗತಃ ॥ ೧೧

ಕಥಂ ನಾಮ ಪ್ರವೇಕ್ಷ್ಯಾಮಿ ಶೂನ್ಯಮಂತಃಪುರಂ ಪುನಃ ।
ನಿರ್ವೀರ್ಯ ಇತಿ ಲೋಕೋ ಮಾಂ ನಿರ್ದಯಶ್ಚೇತಿ ವಕ್ಷ್ಯತಿ ॥ ೧೨

ಕಾತರತ್ವಂ ಪ್ರಕಾಶಂ ಹಿ ಸೀತಾಪನಯನೇನ ಮೇ ।
ನಿವೃತ್ತವನವಾಸಶ್ಚ ಜನಕಂ ಮಿಥಿಲಾಧಿಪಮ್ ॥ ೧೩

ಕುಶಲಂ ಪರಿಪೃಚ್ಛಂತಂ ಕಥಂ ಶಕ್ಷ್ಯೇ ನಿರೀಕ್ಷಿತುಮ್ ।
ವಿದೇಹರಾಜೋ ನೂನಂ ಮಾಂ ದೃಷ್ಟ್ವಾ ವಿರಹಿತಂ ತಯಾ ॥ ೧೪

---

ದ್ದಾರೆ (೮). ಅವಳು ಇಲ್ಲಿ ಇದ್ದಿದ್ದರೆ, ಇಷ್ಟು ನಾನು ಗೋಳಾಡುತ್ತಿದ್ದರೂ ಬರದೆ ಇರುವಳೆ? ಲಕ್ಷ್ಮಣ, ಅಲ್ಲಿ ನೋಡು, ಜಿಂಕೆಗಳು ಕಣ್ಣೀರುತುಂಬಿವೆ. ರಾಕ್ಷಸರು ವೈದೇಹಿಯನ್ನು ತಿಂದುಬಿಟ್ಟಿದ್ದಾರೆಂದು ಅವು ಹೇಳುವಂತೆ ಕಾಣಿಸುತ್ತಿದೆಯಲ್ಲವೆ? ಹಾ! ನನ್ನ ಆರಾಧ್ಯದೇವತೆ! ಎಲ್ಲಿ ಹೋದೆ? ಹಾ! ಸಾಧ್ವಿ, ಮನೋಹರೆ (೯–೧೦). ಆಹಾ! ಕೈಕೇಯೀದೇವಿಯ ಅಪೇಕ್ಷೆ ಇಂದಿಗೆ ಕೈಗೂಡುವುದು! ನಾನು ಬರುವಾಗ ಸೀತೆಯೊಡನೆ ಹೊರಟುಬಂದೆ. ಈಗ ಸೀತೆಯಿಲ್ಲದೆ ಹೇಗೆ ಅಯೋಧ್ಯೆಗೆ ಹೋಗಲಿ? ಶೂನ್ಯವಾದ ಅಂತಃಪುರವನ್ನು ಹೇಗೆತಾನೆ ಪ್ರವೇಶಿಸಲಿ? 'ಇವನೊಬ್ಬ ಕೈಲಾಗದವನು, ನಿರ್ದಯ' ಎಂದು ಜನರು ನನ್ನನ್ನು ನೋಡಿ ಆಡಿಕೊಳ್ಳುವರು (೧೧–೧೨). ಸೀತೆಯನ್ನು ಕಳೆದುಕೊಂಡದ್ದರಿಂದ ನಾನು ಕೈಲಾಗದವನೆಂಬುದು ಸ್ಪಷ್ಟವಾಯಿತು. ವನವಾಸವು ಕಳೆದಮೇಲೆ ಮಿಥಿಲಾಧಿಪತಿಯಾದ ಜನಕಮಹಾರಾಜನನ್ನು ಹೇಗೆ ನೋಡಲಿ? ಆತನು ಕುಶಲಪ್ರಶ್ನೆಯನ್ನು ಕೇಳುವಾಗ ತಲೆಯೆತ್ತಿ ಹೇಗೆತಾನೆ ಅವನನ್ನು ಈಕ್ಷಿಸಲಿ? ಸೀತೆಯಿಲ್ಲದೆ ನಾನು ಒಂಟಿಯಾಗಿರುವುದನ್ನು ಜನಕರಾಜನು ಕಾಣುವನು

ಸುತಾಸ್ನೇಹೇನ ಸಂತಪ್ತೋ ಮೋಹಸ್ಯ ವಶಮೇಷ್ಯತಿ ।
ಅಥವಾ ನ ಗಮಿಷ್ಯಾಮಿ ಪುರೀಂ ಭರತಪಾಲಿತಾಮ್ ॥ ೧೫

ಸ್ವರ್ಗೋಽಪಿ ಸೀತಯಾ ಹೀನಃ ಶೂನ್ಯ ಏವ ಮತೋ ಮಮ ।
ಮಾಮಿಹೋತ್ಸೃಜ್ಯ ಹಿ ವನೇ ಗಚ್ಛಾಯೋಧ್ಯಾಂ ಪುರೀಂ ಶುಭಾಮ್ ॥

ನ ತ್ವಹಂ ತಾಂ ವಿನಾ ಸೀತಾಂ ಜೀವೇಯಂ ಹಿ ಕಥಂಚನ ।
ಗಾಢಮಾಶ್ಲಿಷ್ಯ ಭರತೋ ವಾಚ್ಯೋ ಮದ್ವಚನಾತ್ತ್ವಯಾ ॥ ೧೭

ಅನುಜ್ಞಾತೋಽಸಿ ರಾಮೇಣ ಪಾಲಯೇತಿ ವಸುಂಧರಾಮ್ ।
ಅಂಬಾ ಚ ಮಮ ಕೈಕೇಯೀ ಸುಮಿತ್ರಾ ಚ ತ್ವಯಾ ವಿಭೋ ॥ ೧೮

ಕೌಸಲ್ಯಾ ಚ ಯಥಾನ್ಯಾಯಮಭಿವಾದ್ಯಾ ಮಮಾಜ್ಞಯಾ ।
ರಕ್ಷಣೀಯಾ ಪ್ರಯತ್ನೇನ ಭವತಾ ಸೂಕ್ತಕಾರಿಣಾ ॥ ೧೯

ಸೀತಾಯಾಶ್ಚ ವಿನಾಶೋಽಯಂ ಮಮ ಚಾಮಿತ್ರಕರ್ಶನ ।
ವಿಸ್ತರೇಣ ಜನನ್ಯಾ ಮೇ ವಿನಿವೇದ್ಯಸ್ತ್ವಯಾ ಭವೇತ್ ॥ ೨೦

---

(೧೩–೧೪). ಕೂಡಲೆ, ಅಯ್ಯೋ, ತನ್ನ ಮಗಳಲ್ಲಿರುವ ವಾತ್ಸಲ್ಯದಿಂದ ನೊಂದು ಕಂಗೆಟ್ಟು ಆತನು ಮೂರ್ಛೆಹೋಗುವುದೇ ನಿಶ್ಚಯ. ಅಥವಾ ನಾನು ಅಯೋಧ್ಯೆಗೆ ಹೋಗುವುದೇ ಇಲ್ಲ. ಹೇಗೂ ಭರತನು ಅದನ್ನು ಪಾಲಿಸಿಕೊಂಡಿದ್ದಾನೆ (೧೫). ಸೀತೆಯಿಲ್ಲದಿದ್ದರೆ ಸ್ವರ್ಗವೂ ನನಗೆ ಶೂನ್ಯ ವಾಗಿ ತೋರುವುದು. ಲಕ್ಷ್ಮಣ, ನನ್ನನ್ನು ಇಲ್ಲಿಯೇ ಕಾಡುಪಾಲಾಗಿ ಬಿಟ್ಟು ನೀನು ಅಯೋಧ್ಯೆಗೆ ಹೊರಟುಹೋಗು ! ನಾನು ಸೀತಾವಿಯುಕ್ತ ನಾದಮೇಲೆ ಹೇಗಿದ್ದರೂ ಬದುಕುವುದಿಲ್ಲ. ಲಕ್ಷ್ಮಣ, ಭರತನನ್ನು ಗಾಢವಾಗಿ ಅಪ್ಪಿಕೊಂಡು, ಈ ಮಾತನ್ನು ನಾನು ಹೇಳಿದ್ದೇನೆಂದು ತಿಳಿಸು (೧೬–೧೭) : “ಭರತ, ರಾಮನು ನಿನಗೆ ಅನುಜ್ಞೆಯನ್ನಿತ್ತಿದ್ದಾನೆ. ಇನ್ನುಮೇಲೆ ನೀನು ರಾಜ್ಯವನ್ನು ಪಾಲಿಸು” ಎಂದು ಹೇಳು. ಅಪ್ಪಾ–ಲಕ್ಷ್ಮಣ, ತಾಯಂದಿ ರಾದ ಕೈಕೇಯಿ, ಸುಮಿತ್ರೆ, ಕೌಸಲ್ಯೆ—ಇವರಿಗೆ ಕ್ರಮವರಿತು ನನ್ನ ಅಭಿವಾದನೆಗಳನ್ನರ್ಪಿಸು. ಅವರು ಹೇಳಿದಂತೆ ನಡೆಯುತ್ತ ಅವರ ಯೋಗ ಕ್ಷೇಮಗಳನ್ನು ನೋಡಿಕೊ. ಇದು ನನ್ನ ಆಜ್ಞೆಯೆಂದು ತಿಳಿ (೧೮–೧೯). ಸೀತೆಯು ನಾಶವಾದ ವೃತ್ತಾಂತವನ್ನು, ಲಕ್ಷ್ಮಣ, ನನ್ನ ಅಮ್ಮನಿಗೆ ಹೇಳು.

ಇತಿ ವಿಲಪತಿ ರಾಘವೇ ಸುದೀನೇ
ವನಮುಪಗಮ್ಯ ತಯಾ ವಿನಾ ಸುಕೇಶ್ಯಾ ।
ಭಯವಿಕಲಮುಖಸ್ತು ಲಕ್ಷ್ಮಣೋಽಪಿ
ವ್ಯಥಿತಮನಾ ಭೃಶಮಾತುರೋ ಬಭೂವ ॥ ೨೧

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಿಷಷ್ಟಿತಮಃ ಸರ್ಗಃ

---

## ತ್ರಿಷಷ್ಟಿತಮಃ ಸರ್ಗಃ

### ದುಃಖಾನುಚಿಂತನಮ್

ಸ ರಾಜಪುತ್ರಃ ಪ್ರಿಯಯಾ ವಿಹೀನಃ
ಶೋಕೇನ ಮೋಹೇನ ಚ ಪೀಡ್ಯಮಾನಃ ।
ವಿಷಾದಯನ್ ಭ್ರಾತರಮಾರ್ತರೂಪೋ
ಭೂಯೋ ವಿಷಾದಂ ಪ್ರವಿವೇಶ ತೀವ್ರಮ್ ॥ ೧

---

ವಿಸ್ತಾರವಾಗಿ ಬಿಡಿಸಿ ಹೇಳು" ಎಂದು ವಿಲಪಿಸಿದನು. ಹೀಗೆ ರಾಘವನು ಸೀತಾವಿಯುಕ್ತನಾಗಿ ಅತ್ಯಂತದೈನ್ಯದಿಂದ ಅರಣ್ಯದಲ್ಲಿ ಶೋಕಿಸುತ್ತಿದ್ದನು. ಅವನ ಸ್ಥಿತಿಯನ್ನು ಕಂಡು ಲಕ್ಷ್ಮಣನಿಗೆ ಭಯವಾಯಿತು. ಮುಖವು ಬಾಡಿತು. ವ್ಯಥೆಯು ಮನಸ್ಸನ್ನು ಆವರಿಸಿತು. ಲಕ್ಷ್ಮಣನು ತಲ್ಲಣಗೊಂಡು ಚಿಂತಾಕ್ರಾಂತನಾದನು (೨೦–೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೆರಡನೆಯ ಸರ್ಗ

---

## ಸರ್ಗ ೬೩

ಶ್ರೀರಾಮನು ಸೀತೆಯನ್ನು ಸ್ಮರಿಸಿಕೊಂಡು ದುಃಖಿಸುವುದು.
ಲಕ್ಷ್ಮಣನ ಸಮಾಧಾನ.

ರಾಜಕುಮಾರನಾದ ಶ್ರೀರಾಮನಿಗೆ ಕಾಂತಾವಿಯೋಗದಿಂದ ಶೋಕ ಉಲ್ಬಣಿಸಿತು. ಚಿಂತೆ ಪೀಡಿಸಿತು. ಘೋರವಾದ ವಿಷಾದವಾವರಿಸಿತು. ಅವನು ದುಃಖಾರ್ತನಾದುದನ್ನು ಕಂಡು ತಮ್ಮನಾದ ಲಕ್ಷ್ಮಣನಿಗೆ ವ್ಯಥೆ

ಸ ಲಕ್ಷ್ಮಣಂ ಶೋಕವಶಾಭಿಪನ್ನಂ
ಶೋಕೇ ನಿಮಗ್ನೋ ವಿಪುಲೇ ತು ರಾಮಃ ।
ಉವಾಚ ವಾಕ್ಯಂ ವ್ಯಸನಾನುರೂಪ-
ಮುಷ್ಣಂ ವಿನಿಃಶ್ವಸ್ಯ ರುದನ್ ಸಶೋಕಮ್ ॥ ೨

ನ ಮದ್ವಿಧೋ ದುಷ್ಕೃತಕರ್ಮಕಾರೀ
ಮನ್ಯೇ ದ್ವಿತೀಯೋಽಸ್ತಿ ವಸುಂಧರಾಯಾಮ್ ।
ಶೋಕೇನ ಶೋಕೋ ಹಿ ಪರಂಪರಾಯಾ
ಮಾಮೇತಿ ಭಿಂದನ್ ಹೃದಯಂ ಮನಶ್ಚ ॥ ೩

ಪೂರ್ವಂ ಮಯಾ ನೂನಮಭೀಪ್ಸಿತಾನಿ
ಪಾಪಾನಿ ಕರ್ಮಾಣ್ಯಸಕೃತ್ ಕೃತಾನಿ ।
ತತ್ರಾಯಮದ್ಯಾಪತಿತೋ ವಿಪಾಕೋ
ದುಃಖೇನ ದುಃಖಂ ಯದಹಂ ವಿಶಾಮಿ ॥ ೪

ರಾಜ್ಯಪ್ರಣಾಶಃ ಸ್ವಜನೈರ್ವಿಯೋಗಃ
ಪಿತುರ್ವಿನಾಶೋ ಜನನೀವಿಯೋಗಃ ।

---

ಅಧಿಕವಾಯಿತು (೧). ಶೋಕನಿಮಗ್ನನಾದ ಶ್ರೀರಾಮನು ವ್ಯಥೆಯಲ್ಲಿ ಮುಳುಗಿದ ಲಕ್ಷ್ಮಣನಿಗೆ ವ್ಯಸನದಿಂದ ಮತ್ತೆ ಹೇಳಲಾರಂಭಿಸಿದನು. ಕಣ್ಣೀರು ಮಿಡಿಯುತ್ತ ಬಿಸುಸುಯ್ದು ಅವನು ಹೀಗೆಂದನು (೨): "ಲಕ್ಷ್ಮಣ, ಈ ಜಗತ್ತಿನಲ್ಲಿ ನನ್ನಂತಹ ದುಷ್ಕರ್ಮಿಯು ಇನ್ನೊಬ್ಬನಿಲ್ಲ. ಒಂದಾದಮೇಲೆ ಒಂದರಂತೆ ಶೋಕಪ್ರಸಂಗವು ನನ್ನಮೇಲೆ ಹೇಗೆ ಬಂದೆರಗುತ್ತಿದೆ, ನೋಡು! ಹೃದಯವನ್ನು ಭೇದಿಸುವ, ಮನಸ್ಸನ್ನು ಕತ್ತರಿಸುವ ಶೋಕಪರಂಪರೆಗಳು! (೩). ಪೂರ್ವಜನ್ಮದಲ್ಲಿ ನಾನು ಎಷ್ಟು ಪಾಪಕೃತ್ಯಗಳನ್ನು ಮಾಡಿರುವೆನೋ! ಉದ್ದೇಶಪೂರ್ವಕವಾಗಿ ಮತ್ತೆಮತ್ತೆ ಪಾಪಕೃತ್ಯಗಳನ್ನು ನಾನು ಆಚರಿಸಿರಬೇಕು. ಅವುಗಳು ಈಗ ಫಲವನ್ನು ಕೊಡಲಾರಂಭಿಸಿವೆ. ಆದ್ದರಿಂದ ಒಂದರ ಹಿಂದೆ ಇನ್ನೊಂದು ದುಃಖವನ್ನು ಅನುಭವಿಸುತ್ತಿದ್ದೇನೆ (೪). ಮೊದಲು ರಾಜ್ಯವು ತಪ್ಪಿತು. ಬಂಧುಗಳನ್ನು ಅಗಲಿದೆನು. ತಂದೆಯ ಮರಣವಾಯಿತು. ತಾಯಿಯನ್ನು ಬಿಟ್ಟುಬಂದೆನು ಲಕ್ಷ್ಮಣ, ಇವುಗಳನ್ನು ಚಿಂತಿಸಿದರೆ ನನ್ನ ಶೋಕವು ಉಕ್ಕಿಹರಿಯುವುದು (೫).

ಸರ್ವಾಣಿ ಮೇ ಲಕ್ಷ್ಮಣ ಶೋಕವೇಗ-
ಮಾಪೂರಯಂತಿ ಪ್ರವಿಚಿಂತಿತಾನಿ || ೫

ಸರ್ವಂ ತು ದುಃಖಂ ಮಮ ಲಕ್ಷ್ಮಣೇದಂ
ಶಾಂತಂ ಶರೀರೇ ವನಮೇತ್ಯ ಶೂನ್ಯಮ್ |
ಸೀತಾವಿಯೋಗಾತ್ ಪುನರಪ್ಯುದೀರ್ಣಂ
ಕಾಷ್ಠೈರಿವಾಗ್ನಿಃ ಸಹಸಾ ಪ್ರದೀಪ್ತಃ || ೬

ಸಾ ನೂನಮಾರ್ಯಾ ಮಮ ರಾಕ್ಷಸೇನ
ಬಲಾದ್ಧೃತಾ ಖಂ ಸಮುಪೇತ್ಯ ಭೀರುಃ |
ಅಪಸ್ವರಂ ಸಸ್ವರವಿಪ್ರಲಾಪಾ
ಭಯೇನ ವಿಕ್ರಂದಿತವತ್ಯಭೀಕ್ಷ್ಣಮ್ || ೭

ತೌ ಲೋಹಿತಸ್ಯ ಪ್ರಿಯದರ್ಶನಸ್ಯ
ಸದೋಚಿತಾವುತ್ತಮಚಂದನಸ್ಯ |
ವೃತ್ತೌ ಸ್ತನೌ ಶೋಣಿತಪಂಕದಿಗ್ಧೌ
ನೂನಂ ಪ್ರಿಯಾಯಾ ಮಮ ನಾಭಿಪಾತಃ || ೮

ತಚ್ಛ್ಲಕ್ಷ್ಣಸುವ್ಯಕ್ತಮೃದುಪ್ರಲಾಪಂ
ತಸ್ಯಾ ಮುಖಂ ಕುಂಚಿತಕೇಶಭಾರಮ್ |

---

ಈ ಶೂನ್ಯಾರಣ್ಯಕ್ಕೆ ಬಂದಮೇಲೆ ಆ ಸಕಲದುಃಖವೂ ನನ್ನ ದೇಹದಲ್ಲಿ ಅಡಗಿ ಶಾಂತವಾಗಿತ್ತು. ಈಗ ಸೀತಾವಿಯೋಗದಿಂದ ಅದೆಲ್ಲವೂ ಭುಗಿಲ್ ಎಂದು ಮತ್ತೆ ಮೇಲೆದ್ದಿತು. ಒಣಕಟ್ಟಿಗೆಗಳನ್ನು ಚಾಚಿದರೆ ಧಗ್ಗನೆ ಬೆಂಕಿ ಹತ್ತಿಕೊಳ್ಳುವಂತಾಯಿತು (೬). ನನ್ನ ಸೀತೆಯನ್ನು ರಾಕ್ಷಸನು ಬಲಾತ್ಕಾರದಿಂದ ಆಕಾಶಮಾರ್ಗದಲ್ಲಿ ಕೊಂಡೊಯ್ದಿದ್ದಾನೆ. ಭೀರುಸ್ವಭಾವದ ಆ ದೇವಿಯು ಹವ್ವನೆ ಹೆದರಿ ಅದೆಷ್ಟು ಅತ್ತಳೋ! ಧ್ವನಿಗೆಟ್ಟು ಎಷ್ಟು ಕೂಗಿಕೊಂಡಳೋ! (೭). ನನ್ನ ಪ್ರಿಯೆಯ ವರ್ತುಲಸ್ತನಗಳು ಮನೋಹರವಾದ ಕೆಂಪುಬಣ್ಣದ ಹರಿಚಂದನದಿಂದ ಚೆಲುವಾಗಿದ್ದವು. (ರಾಕ್ಷಸನು ಅವಳನ್ನು ಭಕ್ಷಿಸುವುದಕ್ಕಾಗಿ ಹಿಸಿದಾಗ) ರಕ್ತದಿಂದ ಅವು ತೊಯ್ದುಹೋಗಿರಬೇಕು. ಅಯ್ಯೋ! ನನಗೆ ಇನ್ನೂ ಸಾವು ಬರಲಿಲ್ಲ! (೮). ಅವಳು ಎಷ್ಟು ಮಧುರವಾಗಿ, ಸ್ಪಷ್ಟವಾಗಿ, ಮೃದುವಾಗಿ ಮಾತನಾಡುತ್ತಿದ್ದಳು.

ರಕ್ಷೋವಶಂ ನೂನಮುಪಾಗತಾಯಾ
ನ ಭ್ರಾಜತೇ ರಾಹುಮುಖೇ ಯಥೇಂದುಃ ॥ ೯

ತಾಂ ಹಾರಪಾಶಸ್ಯ ಸದೋಚಿತಾಯಾ
ಗ್ರೀವಾಂ ಪ್ರಿಯಾಯಾ ಮಮ ಸುವ್ರತಾಯಾಃ ।
ರಕ್ಷಾಂಸಿ ನೂನಂ ಪರಿಪೀತವಂತಿ
ವಿಭಿದ್ಯ ಶೂನ್ಯೇ ರುಧಿರಾಶನಾನಿ ॥ ೧೦

ಮಯಾ ವಿಹೀನಾ ವಿಜನೇ ವನೇ ಯಾ
ರಕ್ಷೋಭಿರಾಹೃತ್ಯ ವಿಕೃಷ್ಯಮಾಣಾ ।
ನೂನಂ ವಿನಾದಂ ಕುರರೀವ ದೀನಾ
ಸಾ ಮುಕ್ತವತ್ಯಾಯತಕಾಂತನೇತ್ರಾ ॥ ೧೧

ಅಸ್ಮಿನ್ ಮಯಾ ಸಾರ್ಧಮುದಾರಶೀಲಾ
ಶಿಲಾತಲೇಽಪೂರ್ವಮುಪೋಪವಿಷ್ಟಾ ।
ಕಾಂತಸ್ಮಿತಾ ಲಕ್ಷ್ಮಣ ಜಾತಹಾಸಾ
ತ್ವಾಮಾಹ ಸೀತಾ ಬಹುವಾಕ್ಯಜಾತಮ್ ॥ ೧೨

---

ಮುಖದಮೇಲೆ ಗುಂಗುರುಗುಂಗುರಾದ ಮುಂಗುರುಳು ಹೇಗೆ ಎಸೆಯುತ್ತಿತ್ತು! ರಾಕ್ಷಸರ ಕೈಗೆ ಸಿಕ್ಕಿದಾಗ ಆ ಮುಖವು ಹೇಗಾಗಿರಬಹುದು? ರಾಹುವಿನ ಬಾಯಿಗೆ ಸಿಕ್ಕಿದ ಚಂದ್ರನಂತಾಗಿರಬಹುದು! (೯). ಸಾಧ್ವಿಯಾದ ನನ್ನ ಕಾಂತೆಯು ಕೊರಳಲ್ಲಿ ಮುತ್ತಿನಸರವು ಸದಾ ಶೋಭಿಸುತ್ತಿತ್ತು. ನಾನಿಲ್ಲದಾಗ ರಾಕ್ಷಸರು ಬಂದು ಆ ಕೊರಳನ್ನು ಕಚ್ಚಿ ರಕ್ತವನ್ನು ಹೀರಿಬಿಟ್ಟಿದ್ದಾರೆ! (೧೦). ರಾಕ್ಷಸರು ಬಂದು ನಿರ್ಜನವಾದ ವನದಲ್ಲಿ ಅವಳನ್ನು ದರದರನೆ ಎಳೆದುಕೊಂಡುಹೋಗಿರುವುದೇ ಹೌದು. ಆಗ ಕುರರಪಕ್ಷಿಯಂತೆ ದಿಕ್ಕಿಲ್ಲದೆ ಎಷ್ಟು ದೈನ್ಯದಿಂದ ಅವಳು ಕೂಗಿಕೊಂಡಳೋ! ನಾನು ಸಹಾಯಕ್ಕೆ ಬಂದೇನೆಂದು ಕಣ್ಣರಳಿಸಿ ಎಷ್ಟು ನೋಡಿದಳೋ! (೧೧). ಇದೇ ಶಿಲಾತಲದಲ್ಲಿ ನನ್ನೊಡನೆ ಮೋಹಕವಾಗಿ ನಸುನಗುತ್ತ ಆ ಸುಶೀಲೆ ಕುಳಿತಿರುತ್ತಿದ್ದಳು. ಲಕ್ಷ್ಮಣ, ಸೀತೆ ಇಲ್ಲಿ ಕುಳಿತು ವಿನೋದವಾಗಿ

ಗೋದಾವರೀಯಂ ಸರಿತಾಂ ವರಿಷ್ಠಾ
ಪ್ರಿಯಾ ಪ್ರಿಯಾಯಾ ಮಮ ನಿತ್ಯಕಾಲವ್ ।
ಅಪ್ಯತ್ರ ಗಚ್ಛೇದಿತಿ ಚಿಂತಯಾಮಿ
ನೈಕಾಕಿನೀ ಯಾತಿ ಹಿ ಸಾ ಕದಾಚಿತ್ ॥ ೧೩

ಪದ್ಮಾನನಾ ಪದ್ಮವಿಶಾಲನೇತ್ರಾ
ಪದ್ಮಾನಿ ವಾನೇತುಮಭಿಪ್ರಯಾತಾ ।
ತದಪ್ಯಯುಕ್ತಂ ನ ಹಿ ಸಾ ಕದಾಚಿ-
ನ್ಮಯಾ ವಿನಾ ಗಚ್ಛತಿ ಪಂಕಜಾನಿ ॥ ೧೪

ಕಾಮಂ ತ್ವಿದಂ ಪುಷ್ಪಿತವೃಕ್ಷಷಂಡಂ
ನಾನಾವಿಧೈಃ ಪಕ್ಷಿಗಣೈರುಪೇತಮ್ ।
ವನಂ ಪ್ರಯಾತಾ ನು ತದಪ್ಯಯುಕ್ತ-
ಮೇಕಾಕಿನೀ ಸಾತಿಬಿಭೇತಿ ಭೀರುಃ ॥ ೧೫

ಆದಿತ್ಯ ಭೋ ಲೋಕಕೃತಾಕೃತಜ್ಞ
ಲೋಕಸ್ಯ ಸತ್ಯಾನೃತಕರ್ಮಸಾಕ್ಷಿನ್ ।

---

ನಿನ್ನೊಂದಿಗೆ ಹರಟುತ್ತಿದ್ದಳಲ್ಲವೆ? (೧೨). ಶ್ರೇಷ್ಠವಾದ ಈ ಗೋದಾವರೀ ನದಿಯಲ್ಲಿ ನನ್ನ ಕಾಂತೆಗೆ ಬಹಳ ಪ್ರೀತಿ. ಸೀತೆ ಅಲ್ಲಿಗೇನಾದರೂ ಹೋಗಿರಬಹುದೆ ಎಂದು ಶಂಕಿಸುತ್ತೇನೆ. ಆದರೆ, ನನ್ನನ್ನು ಬಿಟ್ಟು ಏಕಾಕಿನಿಯಾಗಿ ಅವಳು ಎಂದೂ ಅಲ್ಲಿಗೆ ಹೋಗುತ್ತಿರಲಿಲ್ಲ! (೧೩). ಆ ಕಮಲಮುಖಿಗೆ, ಕಮಲನಯನೆಗೆ – ಕಮಲಗಳಮೇಲೆ ಅಧಿಕಪ್ರೇಮ! ಅವಳು ಕಮಲಗಳನ್ನು ತರಲು (ತಾವರೆಯಕೊಳಕ್ಕೆ) ಹೋಗಿರಬಹುದೆ? ಹೋಗಿರಲಾರಳು! ನಾನಿಲ್ಲದೆ ಅವಳು ಕಮಲಗಳನ್ನು ತರಲು ಹೋಗುತ್ತಲೇ ಇರಲಿಲ್ಲ! (೧೪). ಆ ವನದಲ್ಲಿ ಕಾಣುವ ಮರಗಳು ಚೆನ್ನಾಗಿ ಅರಳಿರುವುದೇನೋ ದಿಟ. ನಾನಾಬಗೆಯ ಹಕ್ಕಿಗಳು ಹಾರಾಡುತ್ತಿವೆ. ಸೀತೆ ಅಲ್ಲಿಗೆ ಹೋಗಿರಬಹುದೆ? ಇರಲಾರದು! ಅವಳು ಭಯಶೀಲೆ. ಒಂಟಿಯಾಗಿ ಹೋಗಲು ಬಹಳ ಅಂಜುತ್ತಾಳೆ (೧೫). ಭೋ ಸೂರ್ಯದೇವ! ಲೋಕದ ಕೃತ್ಯಾಕೃತ್ಯಗಳೆಲ್ಲವೂ ನಿನಗೆ ತಿಳಿಯುತ್ತವೆ. ಜನರಾಡುವ ಸತ್ಯ–ಸುಳ್ಳುಗಳೆಲ್ಲವೂ ನಿನಗೆ

ಮಮ ಪ್ರಿಯಾ ಸಾ ಕ್ವ ಗತಾ ಹೃತಾ ವಾ
ಶಂಸಸ್ವ ಮೇ ಶೋಕವಶಸ್ಯ ನಿತ್ಯಮ್ ॥ ೧೬

ಲೋಕೇಷು ಸರ್ವೇಷು ಚ ನಾಸ್ತಿ ಕಿಂಚಿ-
ದ್ಯತ್ತೇ ನ ನಿತ್ಯಂ ವಿದಿತಂ ಭವೇತ್ತತ್ ।
ಶಂಸಸ್ವ ವಾಯೋ ಕುಲಶಾಲಿನೀಂ ತಾಂ
ಹೃತಾ ಮೃತಾ ವಾ ಪಥಿ ವರ್ತತೇ ವಾ ॥ ೧೭

ಇತೀವ ತಂ ಶೋಕವಿಧೇಯದೇಹಂ
ರಾಮಂ ವಿಸಂಜ್ಞಂ ವಿಲಪಂತಮೇವಮ್ ।
ಉವಾಚ ಸೌಮಿತ್ರಿರದೀನಸತ್ತ್ವೋ
ನ್ಯಾಯ್ಯೇ ಸ್ಥಿತಃ ಕಾಲಯುತಂ ಚ ವಾಕ್ಯಮ್ ॥ ೧೮

ಶೋಕಂ ವಿಮುಂಚಾರ್ಯ ಧೃತಿಂ ಭಜಸ್ವ
ಸೋತ್ಸಾಹತಾ ಚಾಸ್ತು ವಿಮಾರ್ಗಣೇಽಸ್ಯಾಃ ।
ಉತ್ಸಾಹವಂತೋ ಹಿ ನರಾ ನ ಲೋಕೇ
ಸೀದಂತಿ ಕರ್ಮಸ್ವತಿದುಷ್ಕರೇಷು ॥ ೧೯

---

ಗೋಚರ. ಕರ್ಮಸಾಕ್ಷಿ ನೀನು. ನನ್ನ ಪ್ರಿಯಳು ಎಲ್ಲಿ ಹೋಗಿದ್ದಾಳೆ, ಹೇಳು. ಯಾರಾದರೂ ಅವಳನ್ನು ಅಪಹರಿಸಿದರೆ? ಶೋಕಾರ್ತನಾಗಿದ್ದೇನೆ. ನೀನಾದರೂ ಹೇಳು (೧೬). ಓ ಮಾರುತ! ಮೂರುಲೋಕಗಳಲ್ಲಿಯೂ ನಿನಗೆ ಗೊತ್ತಾಗದ ವಿಷಯವಿಲ್ಲ. ಸತ್ಕುಲಪ್ರಸೂತೆಯಾದ ನನ್ನ ಕುಲವಧು ಎಲ್ಲಿರುವಳು, ಹೇಳು. ಅಪಹೃತಳಾಗಿರುವಳೆ? ಮೃತಳಾದಳೆ? ದಾರಿ ಹಿಡಿದು ಬರುತ್ತಿರುವಳೆ?" (೧೭). ಈ ರೀತಿಯಲ್ಲಿ ಶ್ರೀರಾಮನು ಶೋಕವಶನಾಗಿ ಪ್ರಜ್ಞೆಯಿಲ್ಲದೆ ಹಲುಬುತ್ತಿದ್ದನು. ಆಗ ಧೈರ್ಯಶಾಲಿಯೂ ನ್ಯಾಯಮಾರ್ಗನಿರತನೂ ಆದ ಸೌಮಿತ್ರಿಯು ಕಾಲೋಚಿತವಾದ ಸಮಾಧಾನವಾಕ್ಯವನ್ನು ಹೇಳಿದನು (೧೮); "ಅಣ್ಣ, ದುಃಖಿಸಬೇಡ. ಮನಸ್ಸಿಗೆ ಧೈರ್ಯವನ್ನು ತಂದುಕೊ. ಸೀತಾದೇವಿಯನ್ನು ಹುಡುಕುವ ಉತ್ಸಾಹ ಹೆಚ್ಚಲಿ. ಉತ್ಸಾಹಶಕ್ತಿಯುಳ್ಳ ಪುರುಷರು ದುಷ್ಕರಕಾರ್ಯಗಳನ್ನೂ ಸಾಧಿಸದೆ ಇರುವುದಿಲ್ಲ" ಎಂದನು (೧೯).

ಇತೀವ ಸೌಮಿತ್ರಿಮುದಗ್ರಪೌರುಷಮ್
ಬ್ರುವಂತಮಾರ್ತೋ ರಘುವಂಶವರ್ಧನಃ ।
ನ ಚಿಂತಯಾಮಾಸ ಧೃತಿಂ ವಿಮುಕ್ತವಾನ್
ಪುನಶ್ಚ ದುಃಖಂ ಮಹದಭ್ಯುಪಾಗಮತ್ ॥ ೨೦

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಿಷಷ್ಟಿತಮಃ ಸರ್ಗಃ

---

## ಚತುಃಷಷ್ಟಿತಮಃ ಸರ್ಗಃ

### ರಾಮಕ್ರೋಧಃ

ಸ ದೀನೋ ದೀನಯಾ ವಾಚಾ ಲಕ್ಷ್ಮಣಂ ವಾಕ್ಯಮಬ್ರವೀತ್ ।
ಶೀಘ್ರಂ ಲಕ್ಷ್ಮಣ ಜಾನೀಹಿ ಗತ್ವಾ ಗೋದಾವರೀಂ ನದೀಮ್ ॥ ೧

ಅಪಿ ಗೋದಾವರೀಂ ಸೀತಾ ಪದ್ಮಾನ್ಯಾನಯಿತುಂ ಗತಾ ।
ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಪುನರೇವ ಹಿ ॥ ೨

---

ಹೀಗೆ ಪೌರುಷದಲ್ಲಿ ಅತಿಶಯವಾದ ನಿಷ್ಠೆಯುಳ್ಳ ಸೌಮಿತ್ರಿಯು ಸಂತೈಸುವ ಮಾತನ್ನು ಹೇಳುತ್ತಿದ್ದರೂ ರಘುವಂಶತಿಲಕನು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಆತನು ದುಃಖಾರ್ತನಾಗಿ ಮನಃಸ್ಥೈರ್ಯವನ್ನು ಕಳೆದುಕೊಂಡು ಮಹತ್ತರವಾದ ಶೋಕದಲ್ಲಿ ಮುಳುಗಿದನು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತುಮೂರನೆಯ ಸರ್ಗ

---

## ಸರ್ಗ ೬೪

ಸೀತೆಯನ್ನು ಪುನಃ ಅರಸುವುದು. ಶ್ರೀರಾಮನ ಕ್ರೋಧ. ಜಗತ್ತನ್ನೇ ನಾಶಮಾಡುವೆನೆಂದು ಧನುಸ್ಸಿನಲ್ಲಿ ಶರಸಂಧಾನ.

ಅನಂತರ ಶ್ರೀರಾಮನು ಲಕ್ಷ್ಮಣನನ್ನು ನೋಡಿ ದೈನ್ಯದಿಂದ "ಲಕ್ಷ್ಮಣ, ಗೋದಾವರೀನದಿಗೆ ಹೋಗಿ ಇನ್ನೊಮ್ಮೆ ಪರಿಶೀಲಿಸು! ಬೇಗನೆ ಹೋಗಿ ಬಾ. ತಾವರೆಗಳನ್ನು ತರುವುದಕ್ಕಾಗಿ ಸೀತೆ ಅಲ್ಲಿಗೆ ಹೋಗಿರಬಹುದೇನೋ!" ಎಂದನು. ಲಕ್ಷ್ಮಣನು ಮತ್ತೆ ಗೋದಾವರೀನದಿಗೆ

ನದೀಂ ಗೋದಾವರೀಂ ರಮ್ಯಾಂ ಜಗಾಮ ಲಘುವಿಕ್ರಮಃ ।
ತಾಂ ಲಕ್ಷ್ಮಣಸ್ತೀರ್ಥವತೀಂ ವಿಚಿತ್ವಾ ರಾಮಮಬ್ರವೀತ್ ॥ ೩

ನೈನಾಂ ಪಶ್ಯಾಮಿ ತೀರ್ಥೇಷು ಕ್ರೋಶತೋ ನ ಶೃಣೋತಿ ಮೇ ।
ಕಂ ನು ಸಾ ದೇಶಮಾಪನ್ನಾ ವೈದೇಹೀ ಕ್ಲೇಶನಾಶಿನೀ ॥ ೪

ನ ಹಿ ತಂ ವೇದ್ಮಿ ವೈ ರಾಮ ಯತ್ರ ಸಾ ತನುಮಧ್ಯಮಾ ।
ಲಕ್ಷ್ಮಣಸ್ಯ ವಚಃ ಶ್ರುತ್ವಾ ದೀನಃ ಸಂತಾಪಮೋಹಿತಃ ॥ ೫

ರಾಮಃ ಸಮಭಿಚಕ್ರಾಮ ಸ್ವಯಂ ಗೋದಾವರೀಂ ನದೀಮ್ ।
ಸ ತಾಮುಪಸ್ಥಿತೋ ರಾಮಃ ಕ್ವ ಸೀತೇತ್ಯೇವಮಬ್ರವೀತ್ ॥ ೬

ಭೂತಾನಿ ರಾಕ್ಷಸೇಂದ್ರೇಣ ವಧಾರ್ಹೇಣ ಹೃತಾಮಪಿ ।
ನ ತಾಂ ಶಶಂಸೂ ರಾಮಾಯ ತಥಾ ಗೋದಾವರೀ ನದೀ ॥ ೭

ತತಃ ಪ್ರಚೋದಿತಾ ಭೂತೈಃ ಶಂಸಾಸ್ಮೈ ತಾಂ ಪ್ರಿಯಾಮಿತಿ ।
ನ ಚ ಸಾಭ್ಯವದತ್ ಸೀತಾಂ ಪೃಷ್ಟಾ ರಾಮೇಣ ಶೋಚತಾ ॥ ೮

---

ಹೊರಟನು (೧–೨). ಅವನು ತ್ವರೆಯಿಂದ ಬೇಗಬೇಗನೆ ಹೆಜ್ಜೆಯಿಡುತ್ತ ಹೋಗಿ, ನದಿಗೆ ಇಳಿಯಬಹುದಾದ ಸ್ಥಳವೆಲ್ಲವನ್ನೂ ಹುಡುಕಿಬಂದು ಶ್ರೀರಾಮನಿಗೆ "ಅಣ್ಣಾ, ನದಿಗೆ ಮೆಟ್ಟಲುಗಳಿರುವ ಪ್ರದೇಶವೆಲ್ಲವನ್ನೂ ಅರಸಿದೆನು. ಕೂಗಿ ಕರೆದರೂ ಉತ್ತರವಿಲ್ಲ. ವೈದೇಹಿಯು ಎಲ್ಲಿಗೆ ಹೋಗಿರಬಹುದು? ಅವಳು ಗೋಚರಿಸಿದರೆ ಮಾತ್ರ ನಮ್ಮ ಶ್ರಮ ಸಾರ್ಥಕವಾಗುವುದು (೩–೪). ಶ್ರೀರಾಮ, ಆಕೆ ಎಲ್ಲಿರಬಹುದೆಂಬುದು ನನ್ನ ಊಹೆಗೆ ನಿಲುಕದು" ಎಂದು ಹೇಳಿದನು. ಲಕ್ಷ್ಮಣನ ಮಾತನ್ನು ಕೇಳಿ ಶ್ರೀರಾಮನ ವ್ಯಥೆ ಹೆಚ್ಚಿತು. ಅವನು ಕಂಗೆಟ್ಟು ಪುನಃ ಗೋದಾವರೀನದಿಯ ಕಡೆಗೆ ತಾನೇ ಹೊರಟನು. ನದಿಯನ್ನು ಸಮೀಪಿಸಿ ಓ ಗೋದಾವರೀನದಿಯೆ, ಸೀತೆ ಎಲ್ಲಿದ್ದಾಳೆ?" ಎಂದು ಕೇಳಿದನು (೫–೬). ಆಗ ವಧಾರ್ಹನಾದ ರಾವಣನು ಸೀತಾದೇವಿಯನ್ನು ಅಪಹರಿಸಿದ್ದಾನೆಂಬುದು ಗೊತ್ತಿದ್ದರೂ, ವನದೇವತೆಗಳೇ ಮೊದಲಾದ ದೇವಯೋನಿಗಳು ಆ ವಿಷಯವನ್ನು ಶ್ರೀರಾಮನಿಗೆ ಹೇಳಲಿಲ್ಲ. ಗೋದಾವರೀನದಿಯೂ ಹೇಳಲಿಲ್ಲ (೭). ಆ ದೇವತೆಗಳು "ಎಲೌ ಗೋದಾವರಿ, ಶ್ರೀರಾಮನಿಗೆ ಆತನ ಪ್ರಿಯಾವೃತ್ತಾಂತವನ್ನು

ರಾವಣಸ್ಯ ಚ ತದ್ರೂಪಂ ಕರ್ಮಾಣಿ ಚ ದುರಾತ್ಮನಃ ।
ಧ್ಯಾತ್ವಾ ಭಯಾತ್ತು ವೈದೇಹೀಂ ಸಾ ನದೀ ನ ಶಶಂಸ ತಾವ್ ॥ ೯

ನಿರಾಶಸ್ತು ತಯಾ ನದ್ಯಾ ಸೀತಾಯಾ ದರ್ಶನೇ ಕೃತಃ ।
ಉವಾಚ ರಾಮಃ ಸೌಮಿತ್ರಿಂ ಸೀತಾದರ್ಶನಕರ್ಶಿತಃ ॥ ೧೦

ಏಷಾ ಗೋದಾವರೀ ಸೌಮ್ಯ ಕಿಂಚಿನ್ನ ಪ್ರತಿಭಾಷತೇ ।
ಕಿಂ ನು ಲಕ್ಷ್ಮಣ ವಕ್ಷ್ಯಾಮಿ ಸಮೇತ್ಯ ಜನಕಂ ವಚಃ ॥ ೧೧

ಮಾತರಂ ಚೈವ ವೈದೇಹ್ಯಾ ವಿನಾ ತಾಮಹಮಪ್ರಿಯಮ್ ।
ಯಾ ಮೇ ರಾಜ್ಯವಿಹೀನಸ್ಯ ವನೇ ವನ್ಯೇನ ಜೀವತಃ ॥ ೧೨

ಸರ್ವಂ ವ್ಯಪಾನಯಚ್ಛೋಕಂ ವೈದೇಹೀ ಕ್ವ ನು ಸಾ ಗತಾ ।
ಜ್ಞಾತಿಪಕ್ಷವಿಹೀನಸ್ಯ ರಾಜಪುತ್ರೀಮಪಶ್ಯತಃ ॥ ೧೩

ಮನ್ಯೇ ದೀರ್ಘಾ ಭವಿಷ್ಯಂತಿ ರಾತ್ರಯೋ ಮಮ ಜಾಗ್ರತಃ ।
ಮಂದಾಕಿನೀಂ ಜನಸ್ಥಾನಮಿಮಂ ಪ್ರಸ್ರವಣಂ ಗಿರಿಮ್ ॥ ೧೪

---

ಹೇಳು!" ಎಂದರು. ಶೋಕಾರ್ತನಾದ ಶ್ರೀರಾಮನು ಕೇಳಿದರೂ ಗೋದಾವರಿಯು ಸೀತೆಯ ಸುದ್ದಿಯನ್ನು ಹೇಳಲಿಲ್ಲ! (೮). ರಾವಣನ ಘೋರಾಕೃತಿಯನ್ನೂ ಆ ದುರಾತ್ಮನ ಕ್ರೂರಕೃತ್ಯಗಳನ್ನೂ ನೆನೆಸಿಕೊಂಡು ಗೋದಾವರಿಯು ತಲ್ಲಣಿಸಿದಳು! ಆತನ ಭಯದಿಂದ ಆ ನದೀದೇವತೆಯು ವೈದೇಹಿಯ ವಾರ್ತೆಯನ್ನು ಹೊರಗೆಡವಲಿಲ್ಲ! (೯). ಆ ನದಿಯ ಮೌನದಿಂದ ಶ್ರೀರಾಮನಿಗೆ ನಿರಾಸೆಯಾಯಿತು. ಸೀತಾದರ್ಶನಕ್ಕಾಗಿ ಹಾತೊರೆಯುತ್ತಿದ್ದ ಆತನು "ವತ್ಸ–ಲಕ್ಷ್ಮಣ, ಈ ಗೋದಾವರಿಯು ಯಾವ ಉತ್ತರವನ್ನೂ ಹೇಳುವುದಿಲ್ಲ. ಜನಕಮಹಾರಾಜನನ್ನು ಕಂಡಾಗ ನಾನು ಏನು ಹೇಳಲಿ, ಲಕ್ಷ್ಮಣ? (೧೦–೧೧). ನನ್ನ ತಾಯಿಗೆ ಏನು ಹೇಳಲಿ? ವೈದೇಹಿಯಿಲ್ಲವೆಂಬ ಕೆಟ್ಟಸುದ್ದಿಯನ್ನು ಹೇಗೆ ತಿಳಿಸಲಿ? ರಾಜ್ಯಭ್ರಷ್ಟನಾಗಿ ನಾನು ಕಾಡಿಗೆ ಬಂದೆ. ವನ್ಯಾಹಾರದಿಂದ ಹೊಟ್ಟೆಹೊರೆದುಕೊಂಡಿದ್ದೆ. ವೈದೇಹಿಯು ನನ್ನ ಶೋಕವೆಲ್ಲವನ್ನೂ ಹೋಗಲಾಡಿಸಿದ್ದಳು. ಅವಳು ಎಲ್ಲಿ ಹೋದಳೋ! ಇಲ್ಲಿ ಬಂಧುಗಳಿಲ್ಲ, ಮಿತ್ರರಿಲ್ಲ. ಈಗ ಆ ರಾಜಪುತ್ರಿಯೂ ಕಾಣದಾದಳು (೧೨–೧೩). ಇನ್ನುಮೇಲೆ ನನಗೆ ನಿದ್ರೆಯಿಲ್ಲದೆ ರಾತ್ರಿಗಳು

ಸರ್ವಾಣ್ಯನುಚರಿಷ್ಯಾಮಿ ಯದಿ ಸೀತಾ ಹಿ ದೃಶ್ಯತೇ ।
ಏತೇ ಮೃಗಾ ಮಹಾವೀರ್ಯಾ ಮಾಮೀಕ್ಷಂತೇ ಮುಹುರ್ಮುಹುಃ ॥
ವಕ್ತುಕಾಮಾ ಇವ ಹಿ ಮೇ ಇಂಗಿತಾನ್ಯುಪಲಕ್ಷಯೇ ।
ತಾಂಸ್ತು ದೃಷ್ಟ್ವಾ ನರವ್ಯಾಘ್ರೋ ರಾಘವಃ ಪ್ರತ್ಯುವಾಚ ಹ ॥ ೧೬
ಕ್ವ ಸೀತೇತಿ ನಿರೀಕ್ಷನ್ ವೈ ಬಾಷ್ಪಸಂರುದ್ಧಯಾ ಗಿರಾ ।
ಏವಮುಕ್ತಾ ನರೇಂದ್ರೇಣ ತೇ ಮೃಗಾಃ ಸಹಸೋತ್ಥಿತಾಃ ॥ ೧೭
ದಕ್ಷಿಣಾಭಿಮುಖಾಃ ಸರ್ವೇ ದರ್ಶಯಂತೋ ನಭಃಸ್ಥಲಮ್ ।
ಮೈಥಿಲೀ ಹ್ರಿಯಮಾಣಾ ಸಾ ದಿಶಂ ಯಾಮನ್ವಪದ್ಯತ ॥ ೧೮
ತೇನ ಮಾರ್ಗೇಣ ಧಾವಂತೋ ನಿರೀಕ್ಷಂತೇ ನರಾಧಿಪಮ್ ।
ಯೇನ ಮಾರ್ಗಂ ಚ ಭೂಮಿಂ ಚ ನಿರೀಕ್ಷಂತೇ ಸ್ಮ ತೇ ಮೃಗಾಃ ॥ ೧೯
ಪುನಶ್ಚ ಮಾರ್ಗಮಿಚ್ಛಂತೋ ಲಕ್ಷ್ಮಣೇನೋಪಲಕ್ಷಿತಾಃ ।
ತೇಷಾಂ ವಚನಸರ್ವಸ್ವಂ ಲಕ್ಷಯಾಮಾಸ ಚೇಂಗಿತಮ್ ॥ ೨೦

---

ದೀರ್ಘವಾಗಿ ಪರಿಣಮಿಸುತ್ತವೆ! ಸೀತೆಯು ದೊರಕುವುದಾದರೆ ಮಂದಾಕಿನೀ ನದಿ, ಜನಸ್ಥಾನ, ಪ್ರಸ್ರವಣಗಿರಿ—ಇವೆಲ್ಲವನ್ನೂ ಹುಡುಕುತ್ತ ಸುತ್ತುವೆನು. ಲಕ್ಷ್ಮಣ, ಬಲಶಾಲಿಗಳಾದ ಈ ಮೃಗಗಳು ನನ್ನನ್ನು ಮತ್ತೆಮತ್ತೆ ನೋಡುತ್ತಿವೆ (೧೪–೧೫). ಇವುಗಳ ಇಂಗಿತಗಳನ್ನು ಗಮನಿಸಿದರೆ ನನಗೆ ಏನನ್ನೋ ಹೇಳಬೇಕೆಂದಿರುವಂತೆ ಕಾಣುತ್ತದೆ" ಎಂದನು. ಕಣ್ಣೀರು ಉಕ್ಕಿ ಮಾತು ತೊದಲುತ್ತಿರಲು, ಶ್ರೀರಾಮನು ಆ ಮೃಗಗಳನ್ನು ನೋಡುತ್ತ "ಮೃಗಗಳೆ, ಸೀತೆ ಎಲ್ಲಿ?" ಎಂದು ಕೇಳಿದನು. ಕೂಡಲೇ ಆ ಮೃಗಗಳು ದಕ್ಷಿಣದಿಕ್ಕಿಗೆ ಹೊರಟವು (೧೬–೧೭). ಮೈಥಿಲಿಯು ಯಾವ ದಿಕ್ಕಿಗೆ ಒಯ್ಯಲ್ಪಟ್ಟಳೋ ಆ ದಕ್ಷಿಣದಿಕ್ಕಿಗೆ ಅಭಿಮುಖವಾಗಿ, ಆಕಾಶವನ್ನು ತೋರಿಸುತ್ತ ಓಡಿದವು. ಓಡುವಾಗ ಮುಖವನ್ನು ತಿರುಗಿಸಿ ಶ್ರೀರಾಮನನ್ನು ನೋಡುತ್ತಿದ್ದವು. ಆ ಮೃಗಗಳು ಆಕಾಶಮಾರ್ಗವನ್ನೂ ಭೂಮಿಯನ್ನೂ ನೋಡುತ್ತ ಹೋದುದರಿಂದ, ಆ ದಿಕ್ಕಿನಲ್ಲಿ ಪುನಃ ಸೀತೆಯ ಮಾರ್ಗಣವನ್ನು ಕೈಗೊಳ್ಳಬೇಕಾಗಿ ಅವು ಇಚ್ಛಿಸುತ್ತವೆಯೆಂದು ಲಕ್ಷ್ಮಣನು ಊಹಿಸಿದನು (೧೮–೧೯). ಮೃಗಗಳ ಭಾಷಾಸರ್ವಸ್ವವೆನಿಸಿದ ಇಂಗಿತವನ್ನು ಲಕ್ಷ್ಮಣನು

ಉವಾಚ ಲಕ್ಷ್ಮಣೋ ಜ್ಯೇಷ್ಠಂ ಧೀಮಾನ್ ಭ್ರಾತರಮಾರ್ತವತ್ ।
ಕ್ವ ಸೀತೇತಿ ತ್ವಯಾ ಪೃಷ್ಟಾ ಯಥೇಮೇ ಸಹಸೋತ್ಥಿತಾಃ ॥ ೨೧

ದರ್ಶಯಂತಿ ಕ್ಷಿತಿಂ ಚೈವ ದಕ್ಷಿಣಾಂ ಚ ದಿಶಂ ಮೃಗಾಃ ।
ಸಾಧು ಗಚ್ಛಾವಹೈ ದೇವ ದಿಶಮೇತಾಂ ಹಿ ನೈರ್ಋತೀಮ್ ॥ ೨೨

ಯದಿ ಸ್ಯಾದಾಗಮಃ ಕಶ್ಚಿದಾರ್ಯಾ ವಾ ಸಾಥ ಲಕ್ಷ್ಯತೇ ।
ಬಾಢಮಿತ್ಯೇವ ಕಾಕುತ್ಸ್ಥಃ ಪ್ರಸ್ಥಿತೋ ದಕ್ಷಿಣಾಂ ದಿಶಮ್ ॥ ೨೩

ಲಕ್ಷ್ಮಣಾನುಗತಃ ಶ್ರೀಮಾನ್ ವೀಕ್ಷಮಾಣೋ ವಸುಂಧರಾಮ್ ।
ಏವಂ ಸಂಭಾಷಮಾಣೌ ತಾವನ್ಯೋನ್ಯಂ ಭ್ರಾತರಾವುಭೌ ॥ ೨೪

ವಸುಂಧರಾಯಾಂ ಪತಿತಂ ಪುಷ್ಪಮಾರ್ಗಮಪಶ್ಯತಾಮ್ ।
ತಾಂ ಪುಷ್ಪವೃಷ್ಟಿಂ ಪತಿತಾಂ ದೃಷ್ಟ್ವಾ ರಾಮೋ ಮಹೀತಲೇ ॥ ೨೫

ಉವಾಚ ಲಕ್ಷ್ಮಣಂ ವೀರೋ ದುಃಖಿತೋ ದುಃಖಿತಂ ವಚಃ ।
ಅಭಿಜಾನಾಮಿ ಪುಷ್ಪಾಣಿ ತಾನೀಮಾನೀಹ ಲಕ್ಷ್ಮಣ ॥ ೨೬

ಅಪಿನದ್ಧಾನಿ ವೈದೇಹ್ಯಾ ಮಯಾ ದತ್ತಾನಿ ಕಾನನೇ ।
ಮನ್ಯೇ ಸೂರ್ಯಶ್ಚ ವಾಯುಶ್ಚ ಮೇದಿನೀ ಚ ಯಶಸ್ವಿನೀ ॥ ೨೭

---

ಗ್ರಹಿಸಿದನು. ವಿಷಣ್ಣನಾಗಿದ್ದ ಆ ಮೇಧಾವಿಯು "ಅಣ್ಣ, 'ಸೀತೆ ಎಲ್ಲಿ?' ಎಂದು ನೀನು ಕೇಳಿದೊಡನೆ ಈ ಮೃಗಗಳು ಥಟ್ಟನೆ ಇಲ್ಲಿಂದ ಹೊರಟವು. ಇವು ಸ್ಪಷ್ಟವಾಗಿ ನೆಲವನ್ನೂ ದಕ್ಷಿಣದಿಕ್ಕನ್ನೂ ತೋರಿಸುತ್ತಿವೆ. ಆದ್ದರಿಂದ, ಪ್ರಭು, ನಾವು ದಕ್ಷಿಣದಿಕ್ಕಿಗೆ ಹೋಗೋಣ (೨೦–೨೨). ಯಾವುದಾದರೂ ಗುರುತು ಸಿಕ್ಕೀತು. ದೇವಿಯಾದರೂ ಗೋಚರಿಸಬಹುದು" ಎಂದನು. 'ಆಗಲಿ' ಎಂದು ನುಡಿದು ಕಾಕುತ್ಸ್ಥನು ಲಕ್ಷ್ಮಣನೊಡನೆ ದಕ್ಷಿಣದಿಕ್ಕಿಗೆ ಹೊರಟನು. ಅಣ್ಣತಮ್ಮಂದಿರಿಬ್ಬರೂ ಸೀತಾವಿಷಯವಾಗಿ ಸಂಭಾಷಿಸುತ್ತ ಹೋಗುವಾಗ, ನೆಲದಮೇಲೆ ದಾರಿಯುದ್ದಕ್ಕೂ ಹರಿದುಬಿದ್ದ ಹೂಗಳನ್ನು ನೋಡಿದರು. ಹೂಗಳನ್ನು ಗಮನಿಸಿ ನೋಡಿ ಶ್ರೀರಾಮನು ದುಃಖಿತನಾದನು (೨೩–೨೫). ತನ್ನಂತೆಯೇ ದುಃಖಿತನಾದ ಲಕ್ಷ್ಮಣನನ್ನು ನೋಡಿ ಆ ವೀರನು "ತಮ್ಮ, ನಾನು ಗುರುತಿಸಬಲ್ಲೆ, ಇವೇ ಆ ಹೂಗಳು! ವೈದೇಹಿಯು ಮುಡಿದಿದ್ದ ಹೂಗಳು. ನಾನೇ ಇವನ್ನು

ಅಭಿರಕ್ಷಂತಿ ಪುಷ್ಪಾಣಿ ಪ್ರಕುರ್ವಂತೋ ಮಮ ಪ್ರಿಯಮ್ ।
ಏವಮುಕ್ತ್ವಾ ಮಹಾಬಾಹುಂ ಲಕ್ಷ್ಮಣಂ ಪುರುಷರ್ಷಭಃ ॥ ೨೮

ಉವಾಚ ರಾಮೋ ಧರ್ಮಾತ್ಮಾ ಗಿರಿಂ ಪ್ರಸ್ರವಣಾಕುಲಮ್ ।
ಕಚ್ಚಿತ್ ಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ ॥ ೨೯

ರಾಮಾ ರಮ್ಯೇ ವನೋದ್ದೇಶೇ ಮಯಾ ವಿರಹಿತಾ ತ್ವಯಾ ।
ಕ್ರುದ್ಧೋಽಬ್ರವೀದ್ಗಿರಿಂ ತತ್ರ ಸಿಂಹಃ ಕ್ಷುದ್ರಮೃಗಂ ಯಥಾ ॥ ೩೦

ತಾಂ ಹೇಮವರ್ಣಾಂ ಹೇಮಾಭಾಂ ಸೀತಾಂ ದರ್ಶಯ ಪರ್ವತ ।
ಯಾವತ್ ಸಾನೂನಿ ಸರ್ವಾಣಿ ನ ತೇ ವಿಧ್ವಂಸಯಾಮ್ಯಹಮ್ ॥ ೩೧

ಏವಮುಕ್ತಸ್ತು ರಾಮೇಣ ಪರ್ವತೋ ಮೈಥಿಲೀಂ ಪ್ರತಿ ।
ದರ್ಶಯನ್ನಿವ ತಾಂ ಸೀತಾಂ ನಾದರ್ಶಯತ ರಾಘವೇ ॥ ೩೨

---

ಕಿತ್ತುತಂದು ಮುಡಿಸಿದ್ದೆ! ಸೂರ್ಯನೂ ವಾಯುವೂ ಕೀರ್ತಿಶಾಲಿನಿಯಾದ ಭೂದೇವಿಯೂ ನನಗೋಸ್ಕರ ಈ ಹೂಗಳನ್ನು ರಕ್ಷಿಸಿದ್ದಾರೆಂದು ತೋರುತ್ತದೆ. ನನಗೆ ಪ್ರಿಯವಾಗಲೆಂದು ಹೀಗೆ ಮಾಡಿದ್ದಾರೆ" ಎಂದು ನುಡಿದನು (೨೬–೨೮). ಅನಂತರ ಆ ಪುರುಷಶ್ರೇಷ್ಠನು ಗಿರಿನದಿಗಳಿಂದ ಆಕುಲವಾದ ಪ್ರಸ್ರವಣಪರ್ವತವನ್ನು ನೋಡಿ "ಎಲೈ ಪರ್ವತರಾಜ, ಸರ್ವಾಂಗಸುಂದರಿಯಾದ ಒಬ್ಬ ಯುವತಿಯನ್ನು ನೋಡಿದೆಯಾ? ಅವಳು ನನ್ನಿಂದ ವಿರಹಿತಳಾಗಿ ಈ ಅರಣ್ಯದಲ್ಲಿ ಒಂಟಿಯಾಗಿದ್ದಳು" ಎಂದು ಕೇಳಿದನು. ಬೆಟ್ಟದಿಂದ ಪ್ರತಿಧ್ವನಿ ಮಾತ್ರ ಬಂದಿತು)* (೨೯–೩೦). ಆಗ ಶ್ರೀರಾಮನು ಕ್ರುದ್ಧನಾಗಿ, ಸಿಂಹವು ಕ್ಷುದ್ರಮೃಗವನ್ನು ಕಂಡಂತೆ ಪರ್ವತವನ್ನು ಧಿಕ್ಕರಿಸಿ, "ಎಲೈ ಪರ್ವತವೆ, ಸುವರ್ಣವರ್ಣೆಯೂ ಚಿನ್ನದ ಪುತ್ಥಳಿಯೂ ಆದ ನನ್ನ ಸೀತೆಯನ್ನು ತೋರಿಸು! ಇಲ್ಲದಿದ್ದರೆ ನಿನ್ನ ಸಕಲಸಾನುಗಳನ್ನೂ ಧ್ವಂಸ ಮಾಡುವೆನು!" ಎಂದನು (೩೧). ಪ್ರಸ್ರವಣಗಿರಿಯು ರಾಘವನಿಗೆ ಸೀತೆಯನ್ನು ತೋರಿಸುವುದೋ ಎಂಬಂತೆ ಪ್ರತಿಧ್ವನಿಯ ಮೂಲಕ ಸೂಚಿಸಿದಂತೆ

---

* ಅನುಬಂಧವನ್ನು ನೋಡಿ.

ತತೋ ದಾಶರಥೀ ರಾಮ ಉವಾಚ ಚ ಶಿಲೋಚ್ಚಯಮ್ ।
ಮಮ ಬಾಣಾಗ್ನಿನಿರ್ದಗ್ಧೋ ಭಸ್ಮೀಭೂತೋ ಭವಿಷ್ಯಸಿ ॥ ೩೩

ಅಸೇವ್ಯಃ ಸರ್ವತಶ್ಚೈವ ನಿಸ್ತೃಣದ್ರುಮಪಲ್ಲವಃ ।
ಇಮಾಂ ವಾ ಸರಿತಂ ಚಾದ್ಯ ಶೋಷಯಿಷ್ಯಾಮಿ ಲಕ್ಷ್ಮಣ ॥ ೩೪

ಯದಿ ನಾಖ್ಯಾತಿ ಮೇ ಸೀತಾಮದ್ಯ ಚಂದ್ರನಿಭಾನನಾಮ್ ।
ಏವಂ ಸ ರುಷಿತೋ ರಾಮೋ ದಿಧಕ್ಷನ್ನಿವ ಚಕ್ಷುಷಾ ॥ ೩೫

ದದರ್ಶ ಭೂಮೌ ನಿಷ್ಕ್ರಾಂತಂ ರಾಕ್ಷಸಸ್ಯ ಪದಂ ಮಹತ್ ।
ತ್ರಸ್ತಾಯಾ ರಾಮಕಾಂಕ್ಷಿಣ್ಯಾಃ ಪ್ರಧಾವಂತ್ಯಾ ಇತಸ್ತತಃ ॥ ೩೬

ರಾಕ್ಷಸೇನಾನುವೃತ್ತಾಯಾ ಮೈಥಿಲ್ಯಾಶ್ಚ ಪದಾನ್ಯಥ ।
ಸ ಸಮೀಕ್ಷ್ಯ ಪರಿಕ್ರಾಂತಂ ಸೀತಾಯಾ ರಾಕ್ಷಸಸ್ಯ ಚ ॥ ೩೭

ಭಗ್ನಂ ಧನುಶ್ಚ ತೂಣೀ ಚ ವಿಕೀರ್ಣಂ ಬಹುಧಾ ರಥಮ್ ।
ಸಂಭ್ರಾಂತಹೃದಯೋ ರಾಮಃ ಶಶಂಸ ಭ್ರಾತರಂ ಪ್ರಿಯಮ್ ॥ ೩೮

---

ಕಂಡರೂ ಸೀತೆಯನ್ನು ತೋರಿಸಲಿಲ್ಲ! ಆಗ ಶ್ರೀರಾಮನು ಪಾಷಾಣಮಯವಾದ ಪರ್ವತವನ್ನು ನೋಡಿ "ಎಲೈ, ನನ್ನ ಬಾಣಾಗ್ನಿಯಿಂದ ಸುಟ್ಟು ಬೂದಿಯಾಗುವೆ! (೩೨–೩೩). ನಿನ್ನಲ್ಲಿರುವ ಹುಲ್ಲು, ಮರ, ಚಿಗುರುಗಳೊಂದೂ ಉಳಿಯುವುದಿಲ್ಲ. ಆಗ ಯಾರೂ ನಿನ್ನನ್ನು ಆಶ್ರಯಿಸುವುದಿಲ್ಲ. ಚಂದ್ರಾನನೆಯಾದ ನನ್ನ ಸೀತೆಯ ಸುದ್ದಿಯನ್ನು ಹೇಳದಿದ್ದರೆ, ಲಕ್ಷ್ಮಣ, ಈ ನದಿಯನ್ನೂ ಒಣಗಿಸಿಬಿಡುವೆನು" ಎಂದು ಗರ್ಜಿಸಿದನು. ಕ್ರುದ್ಧನಾದ ಶ್ರೀರಾಮನು ಆ ಗಿರಿನದಿಗಳನ್ನು ಸುಡುವನೋ ಎಂಬಂತೆ ಉರಿಗಣ್ಣಿನಿಂದ ನೋಡಿದನು. (೩೪–೩೫). ಅಷ್ಟರಲ್ಲಿ ನೆಲದಮೇಲೆ ರಾಕ್ಷಸನ ದೊಡ್ಡ ಹೆಜ್ಜೆಯ ಗುರುತು ಕಾಣಿಸಿತು. ಹಾಗೆಯೇ ಮೈಥಿಲಿಯ ಪಾದಚಿಹ್ನೆಗಳೂ ಕಂಡವು. (ರಾವಣನು ಜಟಾಯುವನ್ನು ಕಡಿದುರುಳಿಸಿದಾಗ) ಮೈಥಿಲಿಯು ತಲ್ಲಣಿಸಿ, ಶ್ರೀರಾಮನ ದರ್ಶನವಾದೀತೆಂದು ಆಶ್ರಮದ ಕಡೆಗೆ ಓಡುತ್ತಿದ್ದಳು. ಆಗ ರಾವಣನು ಅವಳನ್ನು ಹಿಡಿಯಲು ಅಟ್ಟಿಕೊಂಡು ಬಂದಾಗ ಸಂಭವಿಸಿದ ಮೈಥಿಲಿ ಮತ್ತು ರಾವಣನ ಹೆಜ್ಜೆಯ ಗುರುತುಗಳೇ ಅವಾಗಿದ್ದವು (೩೬–೩೭). ಅಲ್ಲದೆ ಅಲ್ಲಿ ಒಂದು ಧನುಸ್ಸೂ ಬತ್ತಳಿಕೆಯೂ ಮುರಿದು ಬಿದ್ದಿದ್ದವು. ರಥವು

*

ಪಶ್ಯ ಲಕ್ಷ್ಮಣ ವೈದೇಹ್ಯಾಃ ಶೀರ್ಣಾಃ ಕನಕಬಿಂದವಃ ।
ಭೂಷಣಾನಾಂ ಹಿ ಸೌಮಿತ್ರೇ ಮಾಲ್ಯಾನಿ ವಿವಿಧಾನಿ ಚ ॥ ೩೯

ತಪ್ತಬಿಂದುನಿಕಾಶೈಶ್ಚ ಚಿತ್ರೈಃ ಕ್ಷತಜಬಿಂದುಭಿಃ ।
ಆವೃತಂ ಪಶ್ಯ ಸೌಮಿತ್ರೇ ಸರ್ವತೋ ಧರಣೀತಲಮ್ ॥ ೪೦

ಮನ್ಯೇ ಲಕ್ಷ್ಮಣ ವೈದೇಹೀ ರಾಕ್ಷಸೈಃ ಕಾಮರೂಪಿಭಿಃ ।
ಭಿತ್ತ್ವಾ ಭಿತ್ತ್ವಾ ವಿಭಕ್ತಾ ವಾ ಭಕ್ಷಿತಾ ವಾ ಭವಿಷ್ಯತಿ ॥ ೪೧

ತಸ್ಯಾ ನಿಮಿತ್ತಂ ವೈದೇಹ್ಯಾ ದ್ವಯೋರ್ವಿವದಮಾನಯೋಃ ।
ಬಭೂವ ಯುದ್ಧಂ ಸೌಮಿತ್ರೇ ಘೋರಂ ರಾಕ್ಷಸಯೋರಿಹ ॥ ೪೨

ಮುಕ್ತಾಮಣಿಚಿತಂ ಚೇದಂ ತಪನೀಯವಿಭೂಷಿತಮ್ ।
ಧರಣ್ಯಾಂ ಪತಿತಂ ಸೌಮ್ಯ ಕಸ್ಯ ಭಗ್ನಂ ಮಹದ್ಧನುಃ ॥ ೪೩

ರಾಕ್ಷಸಾನಾಮಿದಂ ವತ್ಸ ಸುರಾಣಾಮಥವಾಪಿ ವಾ ।
ತರುಣಾದಿತ್ಯಸಂಕಾಶಂ ವೈದೂರ್ಯಗುಲಿಕಾಚಿತಮ್ ॥ ೪೪

---

ಚೂರುಚೂರಾಗಿತ್ತು. ಅವುಗಳನ್ನು ನೋಡಿ ಶ್ರೀರಾಮನು ಸಂಭ್ರಾಂತನಾಗಿ ತನ್ನ ಪ್ರೀತಿಯ ತಮ್ಮನಾದ ಲಕ್ಷ್ಮಣನಿಗೆ ಈ ಪ್ರಕಾರ ಹೇಳಿದನು (೩೮) : "ಲಕ್ಷ್ಮಣ, ಇತ್ತನೋಡು! ವೈದೇಹಿಯು ತೊಟ್ಟಿದ್ದ ಭೂಷಣಗಳ ಚಿನ್ನದ ಚೂರುಗಳಿವು. ಅವಳು ಮುಡಿದಿದ್ದ ನಾನಾಬಗೆಯ ಹೂವುಗಳಿವು. ಸೌಮಿತ್ರಿ, ಕಾಯಿಸಿದ ಚಿನ್ನದ ಬಿಂದುಗಳಂತೆ ರಕ್ತದ ಹನಿಗಳು ವಿವಿಧಾಕಾರವಾಗಿ ನೆಲದಮೇಲೆ ಹರಡಿರುವುದನ್ನು ನೋಡು! (೩೯–೪೦). ಕಾಮರೂಪಿಗಳಾದ ರಾಕ್ಷಸರು ವೈದೇಹಿಯನ್ನು, ತಮ್ಮ, ಹರಿಹರಿದು ಹಂಚಿಕೊಂಡಿರಬಹುದು; ಹಿಸಿದು ತಿಂದಿರಬಹುದು! ರಾಕ್ಷಸರಿಬ್ಬರಿಗೆ ವೈದೇಹಿಗೋಸ್ಕರ ಜಗಳವುಂಟಾಗಿ ಘೋರಯುದ್ಧವೇ ಇಲ್ಲಿ ನಡೆದಿರಬೇಕು (೪೧–೪೨). ವತ್ಸ, ಮುರಿದುಬಿದ್ದಿರುವ ಮಹತ್ತರವಾದ ಈ ಧನುಸ್ಸು ಯಾರದಿರಬಹುದು? ಮುತ್ತಿನಮಣಿಗಳಿಂದಲೂ ಚಿನ್ನದಿಂದಲೂ ಭೂಷಿತವಾದ ಈ ಧನುಸ್ಸು ನೆಲದಮೇಲೆ ಬಿದ್ದಿರುವುದಲ್ಲವೆ? (೪೩). ಇದೇನು ರಾಕ್ಷಸರ ಧನುಸ್ಸೆ? ದೇವತೆಗಳದೆ? ಲಕ್ಷ್ಮಣ, ಇಲ್ಲಿ

ವಿಶೀರ್ಣಂ ಪತಿತಂ ಭೂಮೌ ಕವಚಂ ಕಸ್ಯ ಕಾಂಚನಮ್ ।
ಛತ್ರಂ ಶತಶಲಾಕಂ ಚ ದಿವ್ಯಮಾಲ್ಯೋಪಶೋಭಿತಮ್ ॥ ೪೫

ಭಗ್ನದಂಡಮಿದಂ ಕಸ್ಯ ಭೂಮೌ ಸಮ್ಯಙ್ನಿಪಾತಿತಮ್ ।
ಕಾಂಚನೋರಶ್ಛದಾಶ್ಚೇಮೇ ಪಿಶಾಚವದನಾಃ ಖರಾಃ ॥ ೪೬

ಭೀಮರೂಪಾ ಮಹಾಕಾಯಾಃ ಕಸ್ಯ ವಾ ನಿಹತಾ ರಣೇ ।
ದೀಪ್ತಪಾವಕಸಂಕಾಶೋ ದ್ಯುತಿಮಾನ್ ಸಮರಧ್ವಜಃ ॥ ೪೭

ಅಪವಿದ್ಧಶ್ಚ ಭಗ್ನಶ್ಚ ಕಸ್ಯ ಸಾಂಗ್ರಾಮಿಕೋ ರಥಃ ।
ರಥಾಕ್ಷಮಾತ್ರಾ ವಿಶಿಖಾಸ್ತಪನೀಯವಿಭೂಷಣಾಃ ॥ ೪೮

ಕಸ್ಯೇಮೇಽಭಿಹತಾ ಬಾಣಾಃ ಪ್ರಕೀರ್ಣಾ ಘೋರಕರ್ಮಣಃ ।
ಶರಾವರೌ ಶರೈಃ ಪೂರ್ಣೌ ವಿಧ್ವಸ್ತೌ ಪಶ್ಯ ಲಕ್ಷ್ಮಣ ॥ ೪೯

ಪ್ರತೋದಾಭೀಷುಹಸ್ತೋಽಯಂ ಕಸ್ಯಾಯಂ ಸಾರಥಿರ್ಹತಃ ।
ಕಸ್ಯೇಮೌ ಪುರುಷವ್ಯಾಘ್ರ ಶಯಾತೇ ನಿಹತೌ ಯುಧಿ ॥ ೫೦

---

ಬಿದ್ದಿರುವ ಬಂಗಾರದ ಕವಚ ಯಾರದಿರಬಹುದು ? ಬಾಲಸೂರ್ಯನಂತೆ ಬೆಳಗುತ್ತ, ವೈಡೂರ್ಯಮಣಿಗಳಿಂದ ಇದು ಅಲಂಕೃತವಾಗಿದೆ. ದಿವ್ಯಮಾಲ್ಯಗಳಿಂದ ಶೋಭಿಸುವ ಶತಶಲಾಕೆಗಳ ಈ ಶ್ವೇತಚ್ಛತ್ರ ಯಾರದು ? (೪೪–೪೫). ಈ ಛತ್ರದ ದಂಡವು ಮುರಿದು ಚೂರಾಗಿ ನೆಲದಲ್ಲಿ ಬಿದ್ದಿದೆಯಲ್ಲ ? ಲಕ್ಷ್ಮಣ, (ಇಲ್ಲಿ ನೋಡು) ಚಿನ್ನದ ಎದೆಕಟ್ಟುಗಳಿರುವ ಪಿಶಾಚಮುಖದ ಖರಗಳು ಯುದ್ಧದಲ್ಲಿ ಸತ್ತುಬಿದ್ದಿವೆ. ಭೀಕರಾಕೃತಿಯ ಮಹಾಶರೀರದ ಈ ಖರಗಳು ಯಾರವು ? ರಣರಂಗದಲ್ಲಿ ನಾಯಕನನ್ನು ಸೂಚಿಸುವ ಧ್ವಜದಿಂದ ವಿರಾಜಿಸುವ ಅಗ್ನಿ ಸಂಕಾಶವಾದ ಈ ರಥವು ಯಾರದಿರಬಹುದು ? (೪೬–೪೭). ಯಾರ ರಥವು ಹೀಗೆ ಹೊಡೆದುರುಳಿಸಲ್ಪಟ್ಟಿರಬಹುದು ? ರಥದ ಅಚ್ಚಿನಂತಿರುವ ಕನಕಭೂಷಿತಗಳಾದ ಬಾಣಗಳು ಪೆಟ್ಟಿನಿಂದ ಅಲಗುಮುರಿದು ಚದರಿ ಬಿದ್ದಿವೆ. ಇವು ಯಾವ ಘೋರಕರ್ಮಿಯ ಬಾಣಗಳಾಗಿರಬಹುದು ? ಲಕ್ಷ್ಮಣ, ಶರಪೂರ್ಣಗಳಾದ ಎರಡು ಬತ್ತಳಿಕೆಗಳು ಪುಡಿಪುಡಿಯಾಗಿರುವುದನ್ನು ನೋಡು (೪೮–೪೯). ಚಾಟಿಯನ್ನು ಲಗಾಮನ್ನೂ ಕೈಯಲ್ಲಿ ಹಿಡಿದು ಸತ್ತುಬಿದ್ದಿರುವ ಈ ಸಾರಥಿ ಯಾರಕಡೆಯವನು ? ವತ್ಸ–ಲಕ್ಷ್ಮಣ, ಇಬ್ಬರು

ಚಾಮರಗ್ರಾಹಿಣೌ ಸೌಮ್ಯ ಸೋಷ್ಣೀಷಮಣಿಕುಂಡಲೌ |
ಪದವೀ ಪುರುಷಸ್ಯೈಷಾ ವ್ಯಕ್ತಂ ಕಸ್ಯಾಪಿ ರಕ್ಷಸಃ || ೫೧

ವೈರಂ ಶತಗುಣಂ ಪಶ್ಯ ಮಮೇದಂ ಜೀವಿತಾಂತಕಮ್ |
ಸುಘೋರಹೃದಯೈಃ ಸೌಮ್ಯ ರಾಕ್ಷಸೈಃ ಕಾಮರೂಪಿಭಿಃ || ೫೨

ಹೃತಾ ಮೃತಾ ವಾ ಸೀತಾ ಸಾ ಭಕ್ಷಿತಾ ವಾ ತಪಸ್ವಿನೀ |
ನ ಧರ್ಮಸ್ತ್ರಾಯತೇ ಸೀತಾಂ ಹ್ರಿಯಮಾಣಾಂ ಮಹಾವನೇ || ೫೩

ಭಕ್ಷಿತಾಯಾಂ ಹಿ ವೈದೇಹ್ಯಾಂ ಹೃತಾಯಾಮಪಿ ಲಕ್ಷ್ಮಣ |
ಕೇ ಹಿ ಲೋಕೇಽಪ್ರಿಯಂ ಕರ್ತುಂ ಶಕ್ತಾಃ ಸೌಮ್ಯ ಮಮೇಶ್ವರಾಃ ||

ಕರ್ತಾರಮಪಿ ಲೋಕಾನಾಂ ಶೂರಂ ಕರುಣವೇದಿನಮ್ |
ಅಜ್ಞಾನಾದವಮನ್ಯೇರನ್ ಸರ್ವಭೂತಾನಿ ಲಕ್ಷ್ಮಣ || ೫೫

ಮೃದುಂ ಲೋಕಹಿತೇ ಯುಕ್ತಂ ದಾಂತಂ ಕರುಣವೇದಿನಮ್ |
ನಿರ್ವೀರ್ಯ ಇತಿ ಮನ್ಯಂತೇ ನೂನಂ ಮಾಂ ತ್ರಿದಶೇಶ್ವರಾಃ || ೫೬

---

ಚಾಮರಗ್ರಾಹಿಗಳು ಯುದ್ಧದಲ್ಲಿ ಹತರಾಗಿ ಮಲಗಿರುವರಲ್ಲ, ಇವರು ಯಾರ ಪಕ್ಷದವರು ? ಇವರು ಉಷ್ಣೀಷವನ್ನೂ ಮಣಿಕುಂಡಲಗಳನ್ನೂ ಧರಿಸಿದ್ದಾರೆ. ಇದು ಯಾವನೋ ಒಬ್ಬ ರಾಕ್ಷಸನ ಹೆಜ್ಜೆಯ ಗುರುತೇ ಸರಿ (೫೦–೫೧). ಕ್ರೂರಹೃದಯರಾದ ರಾಕ್ಷಸರೊಡನೆ, ತಮ್ಮ, ನನ್ನ ವೈರವು ನೂರ್ಮಡಿಯಾಗಿ ಬೆಳೆಯಿತು ! ರಾಕ್ಷಸರಿಗೆ ಇದು ಪ್ರಾಣವನ್ನು ತೆರಬೇಕಾದ ಮಹಾವೈರ ! ಅನಾಥೆಯಾದ ಸೀತೆ ರಾಕ್ಷಸರಿಂದ ಹೃತಳಾದಳೋ ಮೃತಳಾದಳೋ ಭಕ್ಷಿತಳಾದಳೋ ? ಈ ಗೊಂಡಾರಣ್ಯದಲ್ಲಿ ಸೀತೆಯು ಅಪಹರಿಸಲ್ಪಡುವಾಗ ಧರ್ಮವೂ ಅವಳನ್ನು ರಕ್ಷಿಸದೆ ಹೋಯಿತು ! (೫೨–೫೩). ಇರಲಿ ; ಲಕ್ಷ್ಮಣ, ವೈದೇಹಿಯು ಭಕ್ಷಿತಳೇ ಆದರೂ ಅಪಹೃತಳೇ ಆದರೂ, ಈ ಜಗತ್ತಿನಲ್ಲಿ ನನಗೆ ಅಹಿತವನ್ನು ಮಾಡಲು ಯಾರಿಗೆ ಸಾಮರ್ಥ್ಯವುಂಟು ? ಲೋಕಗಳನ್ನೇ ಸೃಜಿಸಬಲ್ಲ ಶೂರನಾಗಿದ್ದರೂ ಮನುಷ್ಯನು ದೈನ್ಯವನ್ನು ಪ್ರಕಟಿಸುತ್ತಿದ್ದರೆ, ಸಕಲರೂ ಅವನ ಮಹಿಮೆಯನ್ನರಿಯದೆ ಅವಮಾನಪಡಿಸುತ್ತಾರೆ (೫೪–೫೫). ನಾನು ಲೋಕಕಲ್ಯಾಣದಲ್ಲಿ ನಿರತನಾಗಿ ಮೃದುಸ್ವಭಾವದವನಾಗಿದ್ದೇನೆ. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ದೈನ್ಯದಿಂದ ವರ್ತಿಸುತ್ತಿದ್ದೇನೆ. ಆದ್ದರಿಂದ ನಾನು ನಿರ್ವೀರ್ಯನೆಂದು ದೇವತೆಗಳು

ಮಾಂ ಪ್ರಾಪ್ಯ ಹಿ ಗುಣೋ ದೋಷಃ ಸಂವೃತ್ತಃ ಪಶ್ಯ ಲಕ್ಷ್ಮಣ ।
ಅದ್ಯೈವ ಸರ್ವಭೂತಾನಾಂ ರಕ್ಷಸಾಮಭವಾಯ ಚ ॥ ೫೭

ಸಂಹೃತ್ಯೈವ ಶಶಿಜ್ಯೋತ್ಸ್ನಾಂ ಮಹಾನ್ ಸೂರ್ಯ ಇವೋದಿತಃ ।
ಸಂಹೃತ್ಯೈವ ಗುಣಾನ್ ಸರ್ವಾನ್ ಮಮ ತೇಜಃ ಪ್ರಕಾಶಯೇ ॥ ೫೮

ನೈವ ಯಕ್ಷಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಕಿಂನರಾ ವಾ ಮನುಷ್ಯಾ ವಾ ಸುಖಂ ಪ್ರಾಪ್ಸ್ಯಂತಿ ಲಕ್ಷ್ಮಣ ॥ ೫೯

ಮಮಾಸ್ತ್ರಬಾಣಸಂಪೂರ್ಣಮಾಕಾಶಂ ಪಶ್ಯ ಲಕ್ಷ್ಮಣ ।
ನಿಃಸಂಪಾತಂ ಕರಿಷ್ಯಾಮಿ ಹ್ಯದ್ಯ ತ್ರೈಲೋಕ್ಯಚಾರಿಣಾಮ್ ॥ ೬೦

ಸಂನಿರುದ್ಧಗ್ರಹಗಣಮಾವಾರಿತನಿಶಾಕರಮ್ ।
ವಿಪ್ರನಷ್ಟಾನಲಮರುದ್ಭಾಸ್ಕರದ್ಯುತಿ ಸಂವೃತಮ್ ॥ ೬೧

ವಿನಿರ್ಮಥಿತಶೈಲಾಗ್ರಂ ಶುಷ್ಯಮಾಣಜಲಾಶಯಮ್ ।
ಧ್ವಸ್ತದ್ರುಮಲತಾಗುಲ್ಮಂ ವಿಪ್ರಣಾಶಿತಸಾಗರಮ್ ॥ ೬೨

---

ಭಾವಿಸಿರುವಹಾಗಿದೆ ! (೫೬). ಲಕ್ಷ್ಮಣ, ಗುಣವು ನನ್ನನ್ನು ಸೇರಿ ದೋಷವಾಗಿ ಪರಿಣಮಿಸಿತು, ನೋಡು ! ಲಕ್ಷ್ಮಣ, ಈಗಲೇ, ಸಕಲಭೂತಗಳನ್ನೂ ರಾಕ್ಷಸರನ್ನೂ ಕೊಂದೆಸೆಯುವವನು. ತೇಜೋಮಯವಾದ ಸೂರ್ಯನು ಚಂದ್ರನ ಕಾಂತಿಯನ್ನು ಬದಿಗೊತ್ತಿ ಉದಿತನಾಗುವಂತೆ, ನನ್ನ ಸಕಲಶಾಂತ ಗುಣಗಳನ್ನೂ ಬದಿಗೊತ್ತಿ ನನ್ನ ತೇಜಸ್ಸು ಏನೆಂಬುದನ್ನು ತೋರಿಸಿಕೊಡುವೆನು ! (೫೭–೫೮). ಯಕ್ಷಗಂಧರ್ವರೂ ಪಿಶಾಚರಾಕ್ಷಸರೂ ಕಿನ್ನರ ಮನುಷ್ಯರೂ ಇನ್ನು ಸುಖವೇನೆಂಬುದನ್ನು ಕಾಣುವುದಿಲ್ಲ ! ನನ್ನ ಮಂತ್ರಾಸ್ತ್ರಗಳೂ ಶರಪರಂಪರೆಗಳೂ ಗಗನದಲ್ಲಿ ಕಿಕ್ಕಿರಿದು ತರುಬುವುದನ್ನು ನೋಡುತ್ತಿರು, ಲಕ್ಷ್ಮಣ. ಮೂರುಲೋಕಗಳಲ್ಲಿ ಸಂಚರಿಸುವ ಸಕಲಜೀವಿಗಳಿಗೆ ಅಲ್ಲಾಡಲೂ ಸ್ಥಳವಿಲ್ಲದಂತೆ ಎಸಗುತ್ತೇನೆ ! (೫೯–೬೦). ಗ್ರಹಗಣಗಳು ಮಿಸುಕಾಡದಂತೆ, ಚಂದ್ರನು ಆಚ್ಛಾದಿತನಾಗುವಂತೆ, ಅಗ್ನಿವಾಯುಗಳು ವಿಧ್ವಸ್ತವಾಗುವಂತೆ, ಸೂರ್ಯಮಂಡಲವು ಮಾಸಿಹೋಗುವಂತೆ ಮಾಡುವೆನು ! (೬೧). ಶೈಲಶಿಖರಗಳು ಪುಡಿಪುಡಿಯಾಗುವಂತೆ, ಜಲಾಶಯಗಳು ಶೋಷಿಸುವಂತೆ, ವೃಕ್ಷಲತಾಗುಲ್ಮಗಳು ನಿರ್ಮೂಲವಾಗುವಂತೆ,

ತ್ರೈಲೋಕ್ಯಂ ತು ಕರಿಷ್ಯಾಮಿ ಸಂಯುಕ್ತಂ ಕಾಲಧರ್ಮಣಾ ।
ನ ತಾಂ ಕುಶಲಿನೀಂ ಸೀತಾಂ ಪ್ರದಾಸ್ಯಂತಿ ಯದೀಶ್ವರಾಃ ॥ ೬೩
ಅಸ್ಮಿನ್ ಮುಹೂರ್ತೇ ಸೌಮಿತ್ರೇ ಮಮ ದ್ರಕ್ಷ್ಯಂತಿ ವಿಕ್ರಮಮ್ ।
ನಾಕಾಶಮುತ್ಪತಿಷ್ಯಂತಿ ಸರ್ವಭೂತಾನಿ ಲಕ್ಷ್ಮಣ ॥ ೬೪
ಮಮ ಚಾಪಗುಣೋನ್ಮುಕ್ತೈರ್ಬಾಣಜಾಲೈರ್ನಿರಂತರಮ್ ।
ಅರ್ದಿತಂ ಮಮ ನಾರಾಚೈರ್ಧ್ವಸ್ತಭ್ರಾಂತಮೃಗದ್ವಿಜಮ್ ॥ ೬೫
ಸಮಾಕುಲಮಮರ್ಯಾದಂ ಜಗತ್ ಪಶ್ಯಾದ್ಯ ಲಕ್ಷ್ಮಣ ।
ಆಕರ್ಣಪೂರ್ಣೈರಿಷುಭಿರ್ಜೀವಲೋಕಂ ದುರಾಸದೈಃ ॥ ೬೬
ಕರಿಷ್ಯೇ ಮೈಥಿಲೀಹೇತೋರಪಿಶಾಚಮರಾಕ್ಷಸಮ್ ।
ಮಮ ರೋಷಪ್ರಯುಕ್ತಾನಾಂ ಸಾಯಕಾನಾಂ ಬಲಂ ಸುರಾಃ ॥ ೬೭
ದ್ರಕ್ಷ್ಯಂತ್ಯದ್ಯ ವಿಮುಕ್ತಾನಾಮಮರ್ಷಾದ್ದೂರಗಾಮಿನಾಮ್ ।
ನೈವ ದೇವಾ ನ ದೈತೇಯಾ ನ ಪಿಶಾಚಾ ನ ರಾಕ್ಷಸಾಃ ॥ ೬೮

---

ಸಮುದ್ರವು ನಿಶ್ಶೇಷವಾಗುವಂತೆ ನನ್ನ ವಿಕ್ರಮವನ್ನು ಮೆರೆಸುವೆನು! (೬೨). ಮೂರುಲೋಕಗಳನ್ನೂ ನಿರ್ನಾಮಗೊಳಿಸುವೆನು! ಸೀತೆಯನ್ನು ಕ್ಷೇಮವಾಗಿ ದೇವತೆಗಳು ತಂದೊಪ್ಪಿಸದಿದ್ದರೆ, ಲಕ್ಷ್ಮಣ, ನನ್ನ ಪರಾಕ್ರಮವೇನೆಂಬುದನ್ನು ಈ ಕ್ಷಣದಲ್ಲಿ ಅವರು ಕಾಣುವರು (೬೩). ಯಾವ ಭೂತಗಳೂ ಆಕಾಶಕ್ಕೆ ನೆಗೆದೂ ತಪ್ಪಿಸಿಕೊಳ್ಳಲಾರವು. ನನ್ನ ಧನುಸ್ಸಿನ ಹೆದೆಯಿಂದ ಚಿಮ್ಮಿಹೋದ ಬಾಣಜಾಲಗಳಿಂದ ಆಕಾಶವು ನೀರಂಧ್ರವಾಗಿ ಮುಚ್ಚಿಹೋಗುವುದು. ನನ್ನ ನಾರಾಚಗಳಿಂದ ಸಮಸ್ತಮೃಗಪಕ್ಷಿಗಳೂ ವಿಧ್ವಸ್ತವಾಗಿಹೋಗುತ್ತವೆ (೬೪–೬೫). ಲಕ್ಷ್ಮಣ, ಈ ಜಗತ್ತು ಸಕಲಮರ್ಯಾದೆಗಳನ್ನೂ ಮೀರಿ ಅಲ್ಲೋಲಕಲ್ಲೋಲವಾಗುವುದನ್ನು ನೋಡುತ್ತಿರು. ನನ್ನ ಮೈಥಿಲಿಗೋಸ್ಕರ ಈಗ ಆಕರ್ಣಾಂತವಾಗಿ ಸೆಳೆದುಬಿಡುವ ದುರ್ಧರ್ಷಗಳಾದ ಶರಗಳಿಂದ, ಈ ಜೀವಲೋಕದಲ್ಲಿ ಪಿಶಾಚಗಳನ್ನೂ ರಾಕ್ಷಸರನ್ನೂ ಹೇಳಹೆಸರಿಲ್ಲದಂತೆ ಮಾಡುವೆನು! ರೋಷಾವಿಷ್ಟನಾದ ನನ್ನ ಸಾಯಕಗಳ ಬಲುಮೆ ಏನೆಂಬುದು ಇಂದು ದೇವತೆಗಳಿಗೆ ತಿಳಿದೀತು! (೬೬–೬೭). ಕ್ರೋಧದಿಂದ ಹೊರಚಿಮ್ಮುವ ದೂರಗಾಮಿಗಳಾದ ನನ್ನ ಬಾಣಗಳ

ಭವಿಷ್ಯಂತಿ ಮಮ ಕ್ರೋಧಾತ್ ತ್ರೈಲೋಕ್ಯೇ ವಿಪ್ರಣಾಶಿತೇ ।
ದೇವದಾನವಯಕ್ಷಾಣಾಂ ಲೋಕಾ ಯೇ ರಕ್ಷಸಾಮಪಿ ॥ ೬೯

ಬಹುಧಾ ನಿಪತಿಷ್ಯಂತಿ ಬಾಣೌಘೈಃ ಶಕಲೀಕೃತಾಃ ।
ನಿರ್ಮರ್ಯಾದಾನಿಮಾನ್ ಲೋಕಾನ್ ಕರಿಷ್ಯಾಮ್ಯದ್ಯ ಸಾಯಕೈಃ ॥

ಹೃತಾಂ ಮೃತಾಂ ವಾ ಸೌಮಿತ್ರೇ ನ ದಾಸ್ಯಂತಿ ಮಮೇಶ್ವರಾಃ ।
ತಥಾರೂಪಾಂ ಹಿ ವೈದೇಹೀಂ ನ ದಾಸ್ಯಂತಿ ಯದಿ ಪ್ರಿಯಾಮ್ ॥ ೭೧

ನಾಶಯಾಮಿ ಜಗತ್ ಸರ್ವಂ ತ್ರೈಲೋಕ್ಯಂ ಸಚರಾಚರಮ್ ।
ಯಾವದ್ದರ್ಶನಮಸ್ಯಾ ವೈ ತಾಪಯಾಮಿ ಚ ಸಾಯಕೈಃ ॥ ೭೨

ಇತ್ಯುಕ್ತ್ವಾ ರೋಷತಾಮ್ರಾಕ್ಷಃ ಸ್ಫುರಮಾಣೋಷ್ಠಸಂಪುಟಃ ।
ವಲ್ಕಲಾಜಿನಮಾಬಧ್ಯ ಜಟಾಭಾರಮಬಂಧಯತ್ ॥ ೭೩

ತಸ್ಯ ಕ್ರುದ್ಧಸ್ಯ ರಾಮಸ್ಯ ತಥಾಭೂತಸ್ಯ ಧೀಮತಃ ।
ತ್ರಿಪುರಂ ಜಘ್ನುಷಃ ಪೂರ್ವಂ ರುದ್ರಸ್ಯೇವ ಬಭೌ ತನುಃ ॥ ೭೪

---

ಬಲುಮೆ ಅವರಿಗೆ ಗೊತ್ತಾದೀತು! ರೋಷದಿಂದ ನಾನು ಲೋಕತ್ರಯ ವನ್ನೂ ಧೂಳೆಬ್ಬಿಸಲು, ಯಾರು ಉಳಿದಾರು? ದೇವದೈತ್ಯರಲ್ಲಿ, ಪಿಶಾಚ ರಾಕ್ಷಸರಲ್ಲಿ ಯಾರೂ ಉಳಿಯುವುದಿಲ್ಲ (೬೮–೬೮). ದೇವ ದಾನವ ಯಕ್ಷ ರಾಕ್ಷಸರ ಲೋಕಗಳೆಲ್ಲವೂ ನನ್ನ ಬಾಣಪರಂಪರೆಯ ಹೊಡೆತದಿಂದ ತುಂಡು ತುಂಡಾಗಿ ಉರುಳಿಬೀಳುವುವು. ಸಮಸ್ತಲೋಕಗಳನ್ನೂ ಅಸ್ತ್ರಜಾಲಗಳಿಂದ ಕ್ಷೋಭೆಗೊಳಿಸುವೆನು. ಸೌಮಿತ್ರಿ, ದೇವಾದಿಗಳು ಸೀತೆಯನ್ನು ಕರೆತಂದು ಸಮರ್ಪಿಸಲು ಸಮರ್ಥರು. ಅವಳು ಹೃತಳಾಗಿರಲಿ–ಮೃತಳಾಗಿರಲಿ, ನನ್ನ ಕಾಂತೆಯನ್ನು ಮೊದಲಿದ್ದಂತೆ ಕ್ಷೇಮವಾಗಿ ಅವರು ತಂದೊಪ್ಪಿಸದಿದ್ದರೆ, ಈ ಜಗತ್ತನ್ನೇ ನಾಶಮಾಡುತ್ತೇನೆ (೭೦–೭೧). ಚರಾಚರಾತ್ಮಕವಾದ ಲೋಕತ್ರಯವನ್ನೂ ಧ್ವಂಸಪಡಿಸುತ್ತೇನೆ. ಸೀತೆಯ ದರ್ಶನವಾಗುವ ವರೆಗೂ ಅಸ್ತ್ರಗಳಿಂದ ಜಗತ್ತಿಗೆ ಕಿಚ್ಚುಹಚ್ಚಿ ಉರಿಸುತ್ತೇನೆ!" ಎಂದು ವೀರವಾಣಿಯಿಂದ ಅಬ್ಬರಿಸಿದನು. ರೋಷದಿಂದ ಶ್ರೀರಾಮನ ಕಣ್ಣುಗಳು ಕಿಡಿಗೆದರಿದವು. ತುಟಿಗಳು ಅದುರಿದುವು. ಅವನು ತನ್ನ ವಲ್ಕಲ ಮತ್ತು ಕೃಷ್ಣಾಜಿನಗಳನ್ನು ಬಿಗಿಪಡಿಸಿ ಜಟೆಯನ್ನು ಬಿಗಿದುಕಟ್ಟಿದನು (೭೨–೭೩). ಕ್ರೋಧೋದ್ರಿಕ್ತನಾದ ಶ್ರೀರಾಮನ ಆಕೃತಿಯು ತ್ರಿಪುರಸಂಹಾರಕ್ಕೆ

ಲಕ್ಷ್ಮಣಾದಥ ಚಾದಾಯ ರಾಮೋ ನಿಷ್ಪೀಡ್ಯ ಕಾರ್ಮುಕಮ್ ।
ಶರಮಾದಾಯ ಸಂದೀಪ್ತಂ ಘೋರಮಾಶೀವಿಷೋಪಮಮ್ ॥ ೬೫

ಸಂದಧೇ ಧನುಷಿ ಶ್ರೀಮಾನ್ ರಾಮಃ ಪರಪುರಂಜಯಃ ।
ಯುಗಾಂತಾಗ್ನಿರಿವ ಕ್ರುದ್ಧ ಇದಂ ವಚನಮಬ್ರವೀತ್ ॥ ೬೬

ಯಥಾ ಜರಾ ಯಥಾ ಮೃತ್ಯುರ್ಯಥಾ ಕಾಲೋ ಯಥಾ ವಿಧಿಃ ।
ನಿತ್ಯಂ ನ ಪ್ರತಿಹನ್ಯಂತೇ ಸರ್ವಭೂತೇಷು ಲಕ್ಷ್ಮಣ ॥ ೬೭

ತಥಾಽಹಂ ಕ್ರೋಧಸಂಯುಕ್ತೋ ನ ನಿವಾರ್ಯೋಽಸ್ಮ್ಯಸಂಶಯಮ್॥

ಪುರೇವ ಮೇ ಚಾರುದತೀಮನಿಂದಿತಾಂ
ದಿಶಂತಿ ಸೀತಾಂ ಯದಿ ನಾದ್ಯ ಮೈಥಿಲೀಮ್ ।
ಸದೇವಗಂಧರ್ವಮನುಷ್ಯಪನ್ನಗಂ
ಜಗತ್ ಸಶೈಲಂ ಪರಿವರ್ತಯಾಮ್ಯಹಮ್ ॥ ೬೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುಃಷಷ್ಟಿತಮಃ ಸರ್ಗಃ

---

ಉದ್ಯುಕ್ತನಾದ ಪರಮೇಶ್ವರನ ಆಕಾರದಂತೆ ಪ್ರಜ್ವಲಿಸಿತು. ಅವನು ಲಕ್ಷ್ಮಣನ ಕೈಯಿಂದ ಧನುಸ್ಸನ್ನು ಸೆಳೆದುಕೊಂಡು, ಕಾಲಕೂಟದಂತೆ ಘೋರವಾಗಿ ಪ್ರಜ್ವಲಿಸುವ ಶರವೊಂದನ್ನು ಅದಕ್ಕೆ ಅಳವಡಿಸಿದನು (೬೪–೬೫). ಆ ವೀರಾಗ್ರಣಿಯು ಪ್ರಳಯಕಾಲಾಗ್ನಿಯಂತೆ ಸಿಡಿದೆದ್ದು "ಲಕ್ಷ್ಮಣ, ಈ ಜಗತ್ತಿನಲ್ಲಿ ಮುಪ್ಪು, ಮರಣ, ಕಾಲಧರ್ಮ, ಅದೃಷ್ಟಗಳನ್ನು ಯಾರೂ ತಡೆದು ನಿಲ್ಲಿಸಲಾರರು. ಹಾಗೆಯೇ ಕ್ರೋಧೋದ್ದೀಪಿತನಾದ ನನ್ನನ್ನು ಯಾರಿಗೂ ತಡೆಯಲು ಸಾಧ್ಯವಿಲ್ಲ, ನಿಸ್ಸಂಶಯ! (೬೬–೬೭). ಸುಂದರವಾದ ದಂತಪಂಕ್ತಿಯುಳ್ಳವಳೂ ನಿರ್ದೋಷಳೂ ಆದ ಮೈಥಿಲಿಯನ್ನು ಮೊದಲಿದ್ದಂತೆ ಕ್ಷೇಮವಾಗಿ ತಂದೊಪ್ಪಿಸದಿದ್ದರೆ, ದೇವ ಗಂಧರ್ವ ಮನುಷ್ಯ ಪನ್ನಗರಿಂದಲೂ ಪರ್ವತಪಂಕ್ತಿಗಳಿಂದಲೂ ಸಮೇತವಾದ ಈ ಪ್ರಪಂಚವನ್ನು ತಲೆಕೆಳಗುಮಾಡುತ್ತೇನೆ" ಎಂದು ಆರ್ಭಟಿಸಿದನು (೬೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರವತ್ತುನಾಲ್ಕನೆಯ ಸರ್ಗ

---

## ಪಂಚಷಷ್ಟಿತಮಃ ಸರ್ಗಃ

### ಕ್ರೋಧಸಂಹಾರಪ್ರಾರ್ಥನಾ

ತಪ್ಯಮಾನಂ ತಥಾ ರಾಮಂ ಸೀತಾಹರಣಕರ್ಶಿತಮ್ ।
ಲೋಕಾನಾಮಭವೇ ಯುಕ್ತಂ ಸಂವರ್ತಕಮಿವಾನಲಮ್ ॥ ೧

ವೀಕ್ಷಮಾಣಂ ಧನುಃ ಸಜ್ಯಂ ನಿಃಶ್ವಸಂತಂ ಪುನಃ ಪುನಃ ।
ದಗ್ಧುಕಾಮಂ ಜಗತ್ ಸರ್ವಂ ಯುಗಾಂತೇ ತು ಯಥಾ ಹರಮ್ ॥ ೨

ಅದೃಷ್ಟಪೂರ್ವಂ ಸಂಕ್ರುದ್ಧಂ ದೃಷ್ಟ್ವಾ ರಾಮಂ ತು ಲಕ್ಷ್ಮಣಃ ।
ಅಬ್ರವೀತ್ಪ್ರಾಂಜಲಿರ್ವಾಕ್ಯಂ ಮುಖೇನ ಪರಿಶುಷ್ಯತಾ ॥ ೩

ಪುರಾ ಭೂತ್ವಾ ಮೃದುರ್ದಾಂತಃ ಸರ್ವಭೂತಹಿತೇ ರತಃ ।
ನ ಕ್ರೋಧವಶಮಾಪನ್ನಃ ಪ್ರಕೃತಿಂ ಹಾತುಮರ್ಹಸಿ ॥ ೪

### ಸರ್ಗ ೬೫

ಕ್ರೋಧವನ್ನು ಉಪಸಂಹರಿಸಬೇಕೆಂದು ಶ್ರೀರಾಮನಲ್ಲಿ ಲಕ್ಷ್ಮಣನ ಪ್ರಾರ್ಥನೆ.

ಹೀಗೆ ಶ್ರೀರಾಮನು ಸೀತಾಪಹಾರದಿಂದ ದುಃಖಿತನಾಗಿ ಸಂತಪಿಸುತ್ತ ಪ್ರಳಯಕಾಲಾಗ್ನಿಯಂತೆ ಸಂಕ್ರುದ್ಧನಾಗಿ, ನಿಖಿಲಲೋಕಗಳನ್ನೂ ಧ್ವಂಸ ಮಾಡಲು ಉದ್ಯುಕ್ತನಾದನು. ಹೆದೆಯೇರಿಸಿದ ಕೋದಂಡವನ್ನು ಮತ್ತೆ ಮತ್ತೆ ನೋಡುತ್ತ, ನಿಡಿದಾಗಿ ಉಸಿರೆಳೆಯುತ್ತ, ಕಾಲಾಗ್ನಿರುದ್ರನಂತೆ ಸಮಸ್ತ ಜಗತ್ತನ್ನೂ ಸುಟ್ಟು ಬೂದಿಮಾಡಲುದ್ದೇಶಿಸಿದನು (೧–೨). ಶ್ರೀರಾಮನು ಆ ಪರಿಯಲ್ಲಿ ಕೋಪೋದ್ದೀಪಿತನಾದುದನ್ನು ಲಕ್ಷ್ಮಣನು ಎಂದೂ ಕಂಡಿರಲಿಲ್ಲ. ಆತನ ಕೋಪೋದ್ರೇಕವನ್ನು ಕಂಡು ಲಕ್ಷ್ಮಣನ ಬಾಯಿ ಒಣಗಿತು.! ಅವನು ಕೈಮುಗಿದುಕೊಂಡು "ಶ್ರೀರಾಮ, ನೀನು ಇದುವರೆಗೆ ಮೃದುಸ್ವಭಾವದವನಾಗಿ ಇಂದ್ರಿಯಗಳನ್ನು ನಿಗ್ರಹಿಸಿದ್ದೀಯೆ. ಸಕಲಪ್ರಾಣಿಗಳ ಕಲ್ಯಾಣಕ್ಕಾಗಿ ನಿರತನಾಗಿದ್ದೀಯೆ. ಈಗ ಕ್ರೋಧಕ್ಕೆ ವಶನಾಗಿ ನಿನ್ನ ಸಹಜಗುಣವನ್ನು ಮೀರಿಹೋಗುವುದು ತರವಲ್ಲ (೩–೪).

ಚಂದ್ರೇ ಲಕ್ಷ್ಮೀಃ ಪ್ರಭಾ ಸೂರ್ಯೇ ಗತಿರ್ವಾಯೌ ಭುವಿ ಕ್ಷಮಾ ।
ಏತಚ್ಚ ನಿಯತಂ ಸರ್ವಂ ತ್ವಯಿ ಚಾನುತ್ತಮಂ ಯಶಃ ॥ ೫

ಏಕಸ್ಯ ನಾಪರಾಧೇನ ಲೋಕಾನ್ ಹಂತುಂ ತ್ವಮರ್ಹಸಿ ।
ನ ತು ಜಾನಾಮಿ ಕಸ್ಯಾಯಂ ಭಗ್ನಃ ಸಾಂಗ್ರಾಮಿಕೋ ರಥಃ ॥ ೬

ಕೇನ ವಾ ಕಸ್ಯ ವಾ ಹೇತೋಃ ಸಾಯುಧಃ ಸಪರಿಚ್ಛದಃ ।
ಖುರನೇಮಿಕ್ಷತಶ್ಚಾಯಂ ಸಿಕ್ತೋ ರುಧಿರಬಿಂದುಭಿಃ ॥ ೭

ದೇಶೋ ನಿರ್ವೃತ್ತಸಂಗ್ರಾಮಃ ಸುಘೋರಃ ಪಾರ್ಥಿವಾತ್ಮಜ ।
ಏಕಸ್ಯ ತು ವಿಮರ್ದೋಽಯಂ ನ ದ್ವಯೋರ್ವದತಾಂ ವರ ॥ ೮

ನ ಹಿ ವೃತ್ತಂ ಹಿ ಪಶ್ಯಾಮಿ ಬಲಸ್ಯ ಮಹತಃ ಪದಮ್ ।
ನೈಕಸ್ಯ ತು ಕೃತೇ ಲೋಕಾನ್ ವಿನಾಶಯಿತುಮರ್ಹಸಿ ॥ ೯

ಯುಕ್ತದಂಡಾ ಹಿ ಮೃದವಃ ಪ್ರಶಾಂತಾ ವಸುಧಾಧಿಪಾಃ ।
ಸದಾ ತ್ವಂ ಸರ್ವಭೂತಾನಾಂ ಶರಣ್ಯಃ ಪರಮಾ ಗತಿಃ ॥ ೧೦

---

ಚಂದ್ರಮನದಲ್ಲಿ ಕಾಂತಿಯೂ ಭಾಸ್ಕರನಲ್ಲಿ ಪ್ರಕಾಶವೂ ವಾಯುವಿನಲ್ಲಿ ನಿರಂತರ ಸಂಚಾರವೂ ಭೂಮಿಯಲ್ಲಿ ತಾಳ್ಮೆಯೂ ಸಹಜವಾಗಿವೆ. ಹಾಗೆ ನಿನ್ನಲ್ಲಿ ಲೋಕೋತ್ತರವಾದ ಕೀರ್ತಿ ಸ್ಥಿರವಾಗಿ ನಿಂತಿದೆ (೫). ಯಾವನೋ ಒಬ್ಬನ ಅಪರಾಧಕ್ಕಾಗಿ ಸಕಲಜೀವಿಗಳನ್ನೂ ನೀನು ಕೊಲ್ಲುವುದು ಯುಕ್ತ ವಲ್ಲ. ಮುರಿದುಬಿದ್ದಿರುವ ಈ ಯುದ್ಧೋಪಯೋಗಿ ರಥವು ಯಾರದೆಂದು ಮಾತ್ರ ತಿಳಿಯದು. ಆಯುಧಗಳಿಂದಲೂ ಇತರ ಯುದ್ಧಸಾಮಗ್ರಿಗಳಿಂದಲೂ ಯುಕ್ತವಾದ ಈ ರಥವನ್ನು ಯಾವನು ಏತಕ್ಕೋಸ್ಕರ ಭಗ್ನಗೊಳಿಸಿರುವನೋ ಗೊತ್ತಾಗುವುದಿಲ್ಲ. ಈ ಪ್ರದೇಶಗಳಲ್ಲಿ ಖುರಗಳ ಮತ್ತು ರಥನೇಮಿಯ ಚಿಹ್ನೆಗಳಿವೆ. ರಕ್ತದ ಹನಿಗಳ ಕಲೆಯಿದೆ (೬–೭). ರಾಜಪುತ್ರ, ಇಲ್ಲಿ ಘೋರವಾದ ಕಾಳಗವು ನಡೆದಿದೆ. (ಒಂದೇ ರಥ, ಒಬ್ಬನದೇ ಪಾದ ಚಿಹ್ನೆ–ಇರುವುದರಿಂದ) ಒಬ್ಬ ಪುರುಷನ ತುಳಿದಾಟವಿದು ; ಇಬ್ಬರದಲ್ಲ. ಏಕೆಂದರೆ, ಇಲ್ಲಿ ದೊಡ್ಡ ಸೈನ್ಯದ ಹೆಜ್ಜೆಯ ಸುಳಿವು ಕಾಣಿಸುವುದಿಲ್ಲ. ಆದ್ದರಿಂದ, ಅಣ್ಣ, ಒಬ್ಬನಿಗೋಸ್ಕರ ಸಕಲಜೀವಿಗಳನ್ನೂ ನೀನು ಕೊಲ್ಲುವುದು ಯುಕ್ತವಾಗದು (೮–೯). ಭೂಪಾಲರು ಮೃದುಸ್ವಭಾವದವರೂ ಶಾಂತರೂ

ಕೋ ನು ದಾರಪ್ರಣಾಶಂ ತೇ ಸಾಧು ಮನ್ಯೇತ ರಾಘವ ।
ಸರಿತಃ ಸಾಗರಾಃ ಶೈಲಾ ದೇವಗಂಧರ್ವದಾನವಾಃ ॥ ೧೧

ನಾಲಂ ತೇ ವಿಪ್ರಿಯಂ ಕರ್ತುಂ ದೀಕ್ಷಿತಸ್ಯೇವ ಸಾಧವಃ ।
ಯೇನ ರಾಜನ್ ಹೃತಾ ಸೀತಾ ತಮನ್ವೇಷಿತುಮರ್ಹಸಿ ॥ ೧೨

ಮದ್ದ್ವಿತೀಯೋ ಧನುಷ್ಪಾಣಿಃ ಸಹಾಯೈಃ ಪರಮರ್ಷಿಭಿಃ ।
ಸಮುದ್ರಂ ಚ ವಿಚೇಷ್ಯಾಮಃ ಪರ್ವತಾಂಶ್ಚ ವನಾನಿ ಚ ॥ ೧೩

ಗುಹಾಶ್ಚ ವಿವಿಧಾ ಘೋರಾ ನದೀಃ ಪದ್ಮವನಾನಿ ಚ ।
ದೇವಗಂಧರ್ವಲೋಕಾಂಶ್ಚ ವಿಚೇಷ್ಯಾಮಃ ಸಮಾಹಿತಾಃ ॥ ೧೪

ಯಾವನ್ನಾಧಿಗಮಿಷ್ಯಾಮಸ್ತವ ಭಾರ್ಯಾಪಹಾರಿಣಮ್ ।
ನ ಚೇತ್ ಸಾಮ್ನಾ ಪ್ರದಾಸ್ಯಂತಿ ಪತ್ನೀಂ ತೇ ತ್ರಿದಶೇಶ್ವರಾಃ ॥ ೧೫

---

ಆಗಿದ್ದು ಅಪರಾಧಕ್ಕೆ ತಕ್ಕ ದಂಡನೆಯನ್ನು ವಿಧಿಸಬೇಕಲ್ಲವೆ? ಸಕಲಪ್ರಾಣಿಗಳಿಗೂ ನೀನು ಅಭಯದಾತನಾಗಿದ್ದೀಯೆ; ಪರಮಗತಿಯಾಗಿದ್ದೀಯೆ (೧೦). ಶ್ರೀರಾಮ, ನಿನಗೆ ಪತ್ನೀವಿರಹವಾದುದು ಸರಿಯೆಂದು ಯಾವನು ತಾನೇ ಭಾವಿಸಿಯಾನು? ನದೀ, ಸಮುದ್ರ, ಪರ್ವತಗಳಾಗಲಿ ದೇವ, ಗಂಧರ್ವ, ದಾನವರಾಗಲಿ ನಿನಗೆ ಕೇಡನ್ನು ಬಯಸಲಾರರು (ಕೇಡುಮಾಡಲು ಶಕ್ತರಲ್ಲ) (೧೧). ಯಜ್ಞದೀಕ್ಷಿತನಾದ ಯಜಮಾನನಿಗೆ ಯಾವ ಸಜ್ಜನರು ತಾನೇ ಕೇಡನ್ನು ಚಿಂತಿಸಿಯಾರು? ಆದ್ದರಿಂದ, ಪ್ರಭು, ಯಾವನು ಸೀತಾದೇವಿಯನ್ನು ಅಪಹರಿಸಿರುವನೋ ಅವನನ್ನು ಕಂಡುಹಿಡಿಯಬೇಕು (೧೨). ಧನುರ್ಧಾರಿಯಾಗಿ ನನ್ನೊಡನೆ ಅಪರಾಧಿಯನ್ನು ಅನ್ವೇಷಿಸು. ಈ ವನದಲ್ಲಿರುವ ಮಹರ್ಷಿಗಳೂ ಈ ಕಾರ್ಯದಲ್ಲಿ ನೆರವಾಗುತ್ತಾರೆ. ಸಮುದ್ರ, ಪರ್ವತ, ವನಗಳನ್ನು ನಾವು ಅರಸೋಣ (೧೩). ಎಲ್ಲಾ ಬಗೆಯ ಭೀಕರವಾದ ಗುಹೆಗಳನ್ನೂ ನದಿಗಳನ್ನೂ ತಾವರೆಯ ಕೊಳಗಳನ್ನೂ ಹುಡುಕೋಣ. ಕೊನೆಗೆ ದೇವಲೋಕ ಗಂಧರ್ವಲೋಕಗಳಿಗೂ ಹೋಗಿ ಶೋಧಿಸೋಣ. ಸಮಾಧಾನದಿಂದ ಈ ಕಾರ್ಯವನ್ನು ಸಾಧಿಸಬೇಕು (೧೪). ನಿನ್ನ ಪತ್ನಿಯನ್ನು ಅಪಹರಿಸಿದವನು ಸಿಕ್ಕುವವರೆಗೂ ನಾವು ಪ್ರಯತ್ನಿಸಬೇಕು.

ಕೋಸಲೇಂದ್ರ ತತಃ ಪಶ್ಚಾತ್ ಪ್ರಾಪ್ತಕಾಲಂ ಕರಿಷ್ಯಸಿ ॥

ಶೀಲೇನ ಸಾಮ್ನಾ ವಿನಯೇನ ಸೀತಾಂ
ನಯೇನ ನ ಪ್ರಾಪ್ಸ್ಯಸಿ ಚೇನ್ನರೇಂದ್ರ ।
ತತಃ ಸಮುತ್ಸಾದಯ ಹೇಮಪುಂಖೈ-
ರ್ಮಹೇಂದ್ರವಜ್ರಪ್ರತಿಮೈಃ ಶರೌಘೈಃ ॥ ೧೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಪಂಚಷಷ್ಟಿತಮಃ ಸರ್ಗಃ

ಕಡೆಯಲ್ಲಿ, ಕೋಸಲೇಶ್ವರ, ದೇವತೆಗಳು ಸಾಮೋಪಾಯಕ್ಕೆ ಮಣಿದು ನಿನ್ನ ಪತ್ನಿಯನ್ನು ತಂದೊಪ್ಪಿಸದಿದ್ದರೆ, ಆಗ ಯೋಗ್ಯವಾದ ಮುಂದಿನ ಮಾರ್ಗವನ್ನು ನೀನು ಕೈಗೊಳ್ಳಬಹುದು (೧೭). ನಿನ್ನ ಒಳ್ಳೆಯ ನಡತೆಗೆ, ಒಳ್ಳೆಯ ಮಾತಿಗೆ, ವಿನಯಕ್ಕೆ, ನೀತಿಗೆ–ಸೀತಾದೇವಿಯು ಲಭಿಸದೇಹೋದ ಪಕ್ಷದಲ್ಲಿ, ಹೇ ಸ್ವಾಮಿ, ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಸುವರ್ಣ ಪುಂಖಾಂಕಿತಶರಪರಂಪರೆಗಳಿಂದ ನಿನ್ನ ಶತ್ರುಗಳನ್ನು ನಿರ್ನಾಮಗೊಳಿಸು !" ಎಂದು ಹೇಳಿದನು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೈದನೆಯ ಸರ್ಗ

## ಷಟ್‌ಷಷ್ಟಿತಮಃ ಸರ್ಗಃ

### ಔಚಿತ್ಯಪ್ರಬೋಧನಮ್

**ತಂ ತಥಾ ಶೋಕಸಂತಪ್ತಂ ವಿಲಪಂತಮನಾಥವತ್ ।**
**ಮೋಹೇನ ಮಹತಾವಿಷ್ಟಂ ಪರಿದ್ಯೂನಮಚೇತಸಮ್ ॥ ೧**

**ತತಃ ಸೌಮಿತ್ರಿರಾಶ್ವಾಸ್ಯ ಮುಹೂರ್ತಾದಿವ ಲಕ್ಷ್ಮಣಃ ।**
**ರಾಮಂ ಸಂಬೋಧಯಾಮಾಸ ಚರಣೌ ಚಾಭಿಪೀಡಯನ್ ॥ ೨**

**ಮಹತಾ ತಪಸಾ ರಾಮ ಮಹತಾ ಚಾಪಿ ಕರ್ಮಣಾ ।**
**ರಾಜ್ಞಾ ದಶರಥೇನಾಸಿ ಲಬ್ಧೋಽಮೃತಮಿವಾಮರೈಃ ॥ ೩**

**ತವ ಚೈವ ಗುಣೈರ್ಬದ್ಧಸ್ತ್ವದ್ವಿಯೋಗಾನ್ಮಹೀಪತಿಃ ।**
**ರಾಜಾ ದೇವತ್ವಮಾಪನ್ನೋ ಭರತಸ್ಯ ಯಥಾ ಶ್ರುತಮ್ ॥ ೪**

### ಸರ್ಗ ೬೬

ಲಕ್ಷ್ಮಣನು ಅನೇಕ ನಿದರ್ಶನಗಳೊಡನೆ ಶ್ರೀರಾಮನನ್ನು ಸಂತೈಸಿ ಔಚಿತ್ಯವನ್ನು ತಿಳಿಸುವುದು.

ಶ್ರೀರಾಮನು ಶೋಕಸಂತಪ್ತನಾಗಿ ದಿಕ್ಕಿಲ್ಲದವನಂತೆ ವಿಲಪಿಸುತ್ತ ವ್ಯಾಮೋಹಗೊಂಡಿದ್ದನು. ಸೀತಾವಿರಹದುಃಖದಿಂದ ಬಳಲಿ ಮುಂದೇನು ಮಾಡಬೇಕೆಂದು ತೋರದವನಾಗಿದ್ದನು. (ಕಡೆಗೆ ಸಂಕ್ರುದ್ಧನಾಗಲು) ಸೌಮಿತ್ರಿಯು ಶ್ರೀರಾಮನಿಗೆ ಸ್ವಲ್ಪ ಹೊತ್ತು ಸಮಾಧಾನ ಹೇಳಿ, ಆತನ ಕಾಲುಗಳೆರಡನ್ನೂ ಹಿಡಿದುಕೊಂಡು ಈ ಪ್ರಕಾರ ತಿಳಿಸಿದನು (೧–೨): "ಶ್ರೀರಾಮ, ದಶರಥಮಹಾರಾಜನು ಮಹತ್ತರವಾದ ವ್ರತಗಳನ್ನೂ ಪುತ್ರ ಕಾಮೇಷ್ಟಿ ಮಹಾಯಾಗವನ್ನೂ ಆಚರಿಸಿ, ನಿನ್ನನ್ನು ಪಡೆದಿದ್ದಾನೆ. (ಬಹು ಪ್ರಯಾಸದಿಂದ) ದೇವತೆಗಳಿಗೆ ಅಮೃತವು ಲಭಿಸಿದಂತೆ, ಮಹಾರಾಜನಿಗೆ ನೀನು ಪುತ್ರನಾಗಿ ಲಭಿಸಿದೆ (೩). ಮಹಾರಾಜನು ನಿನ್ನ ಸದ್ಗುಣಗಳಿಗೆ ವಶನಾಗಿ ಮುಗ್ಧನಾಗಿದ್ದನು. ಭರತನಿಂದ ನಾವು ಕೇಳಿದಂತೆ, ಆ ಮಹೀ ಪಾಲನು ನಿನ್ನ ವಿಯೋಗದುಃಖವನ್ನು ಸಹಿಸಲಾರದೆ ಸ್ವರ್ಗಸ್ಥನಾದನು.

ಸ್ಪೃಶಂತ್ಯನಿಲವದ್ರಾಜನ್ ಕ್ಷಣೇನ ನ ಭವಂತಿ ಚ ।
ಆಶ್ವಸಿಹಿ ನರಶ್ರೇಷ್ಠ ಪ್ರಾಣಿನಃ ಕಸ್ಯ ನಾಪದಃ ॥ ೫
ಯದಿ ದುಃಖಮಿದಂ ಪ್ರಾಪ್ತಂ ಕಾಕುತ್ಸ್ಥ ನ ಸಹಿಷ್ಯಸೇ ।
ಪ್ರಾಕೃತಶ್ಚಾಲ್ಪಸತ್ತ್ವಶ್ಚ ಇತರಃ ಕಃ ಸಹಿಷ್ಯತೇ ॥ ೬
ದುಃಖಿತೋ ಹಿ ಭವಾನ್ ಲೋಕಾಂಸ್ತೇಜಸಾ ಯದಿ ಧಕ್ಷ್ಯತೇ ।
ಆರ್ತಾಃ ಪ್ರಜಾ ನರವ್ಯಾಘ್ರ ಕ್ವ ನು ಯಾಸ್ಯಂತಿ ನಿರ್ವೃತಿಮ್ ॥ ೭
ಲೋಕಸ್ವಭಾವ ಏವೈಷ ಯಯಾತಿರ್ನಹುಷಾತ್ಮಜಃ ।
ಗತಃ ಶಕ್ರೇಣ ಸಾಲೋಕ್ಯಮನಯಸ್ತಂ ಸಮಸ್ಪೃಶತ್ ॥ ೮
ಮಹರ್ಷಿರ್ಯೋ ವಸಿಷ್ಠಸ್ತು ಯಃ ಪಿತುರ್ನಃ ಪುರೋಹಿತಃ ।
ಅಹ್ನಾ ಪುತ್ರಶತಂ ಜಜ್ಞೇ ತಥೈವಾಸ್ಯ ಪುನರ್ಹತಮ್ ॥ ೯
ಯಾ ಚೇಯಂ ಜಗತಾಂ ಮಾತಾ ದೇವೀ ಲೋಕನಮಸ್ಕೃತಾ ।
ಅಸ್ಯಾಶ್ಚ ಚಲನಂ ಭೂಮೇರ್ದೃಶ್ಯತೇ ಕೋಸಲೇಶ್ವರ ॥ ೧೦

---

ಹೇ ಪುರುಷೋತ್ತಮ, ಗಾಳಿಯ ಸ್ಪರ್ಶದಂತೆ ಕಷ್ಟವು ಬಂದು ತಾಗುತ್ತದೆ, ಹೋಗುತ್ತದೆ. ಸಮಾಧಾನವನ್ನು ತಂದುಕೊ; ವಿಪತ್ತುಗಳು ಯಾರಿಗೆ ಬರುವುದಿಲ್ಲ? (೪–೫). ಈಗ ಒದಗಿರುವ ಈ ದುಃಖವನ್ನು ನೀನೇ ತಡೆದುಕೊಳ್ಳದಿದ್ದರೆ, ಪಾಮರನೂ ಅಲ್ಪಸತ್ತ್ವನೂ ಆದ ಇನ್ನೊಬ್ಬ ಮನುಷ್ಯನು ತಡೆದುಕೊಂಡಾನೆ? ನೀನು ದುಃಖಾರ್ತನಾಗಿ ತೇಜೋಬಲದಿಂದ ಲೋಕಗಳೆಲ್ಲವನ್ನೂ ಸುಟ್ಟು ಬೂದಿಮಾಡಲು ಉದ್ಯುಕ್ತನಾದರೆ, ಪುರುಷಶ್ರೇಷ್ಠ, ವಿಪತ್ತಿಗೆ ಸಿಕ್ಕುವ ಪ್ರಜೆಗಳು ಯಾರ ಮರೆಹೋಗಬೇಕು? (೬–೭). ಲೋಕಸ್ವಭಾವವೇ ಹೀಗಿದೆ; ನಹುಷಪುತ್ರನಾದ ಯಯಾತಿಯು ದೇವೇಂದ್ರನೊಡನೆ ಸ್ವರ್ಗಲೋಕವನ್ನೇರಿದನು; ಆದರೆ ಅವಿವೇಕದಿಂದ ಪುನಃ ಭೂಮಿಗೆ ಉರುಳಿದನು (೮). ನಮ್ಮ ತಂದೆಯ ಪುರೋಹಿತರಾದ ವಸಿಷ್ಠಮಹರ್ಷಿಗಳಿಗೆ ನೂರುಮಂದಿ ಪುತ್ರರು ಜನಿಸಿದರು. ಹಾಗೆಯೇ ಒಂದು ದಿನ ಎಲ್ಲರೂ ಹತರಾದರು * (೯). ಸಕಲರಿಗೂ ತಾಯಿಯೆನಿಸಿ ಜಗದ್ವಂದ್ಯಳಾಗಿರುವ ಭೂದೇವಿಗೆ ಕೂಡ ಚಲನೆಯಾಗಿ ಭೂಕಂಪವಾಗುವುದು ಕಂಡು

---

* ಅನುಬಂಧವನ್ನು ನೋಡಿ.

ಯೌ ಧರ್ಮೌ ಜಗತಾಂ ನೇತ್ರೇ ಯತ್ರ ಸರ್ವಂ ಪ್ರತಿಷ್ಠಿತಮ್ ।
ಆದಿತ್ಯಚಂದ್ರೌ ಗ್ರಹಣಮಭ್ಯುಪೇತೌ ಮಹಾಬಲೌ ॥ ೧೧

ಸುಮಹಾಂತ್ಯಪಿ ಭೂತಾನಿ ದೇವಾಶ್ಚ ಪುರುಷರ್ಷಭ ।
ನ ದೇವಸ್ಯ ಪ್ರಮುಂಚಂತಿ ಸರ್ವಭೂತಾನಿ ದೇಹಿನಃ ॥ ೧೨

ಶಕ್ರಾದಿಷ್ವಪಿ ದೇವೇಷು ವರ್ತಮಾನೌ ನಯಾನಯೌ ।
ಶ್ರೂಯೇತೇ ನರಶಾರ್ದೂಲ ನ ತ್ವಂ ವ್ಯಥಿತುಮರ್ಹಸಿ ॥ ೧೩

ನಷ್ಟಾಯಾಮಪಿ ವೈದೇಹ್ಯಾಂ ಹೃತಾಯಾಮಪಿ ರಾಘವ ।
ಶೋಚಿತುಂ ನಾರ್ಹಸೇ ವೀರ ಯಥಾನ್ಯಃ ಪ್ರಾಕೃತಸ್ತಥಾ ॥ ೧೪

ತ್ವದ್ವಿಧಾ ನ ಹಿ ಶೋಚಂತಿ ಸತತಂ ಸತ್ಯದರ್ಶಿನಃ ।
ಸುಮಹತ್ಸ್ವಪಿ ಕೃಚ್ಛ್ರೇಷು ರಾಮಾನಿರ್ವಿಣ್ಣದರ್ಶನಾಃ ॥ ೧೫

ತತ್ತ್ವತೋ ಹಿ ನರಶ್ರೇಷ್ಠ ಬುದ್ಧ್ಯಾ ಸಮನುಚಿಂತಯ ।
ಬುದ್ಧ್ಯಾ ಯುಕ್ತಾ ಮಹಾಪ್ರಾಜ್ಞಾ ವಿಜಾನಂತಿ ಶುಭಾಶುಭೇ ॥ ೧೬

---

ಬರುತ್ತದೆ. ಮಹಾಬಲರಾದ ಸೂರ್ಯಚಂದ್ರರಿಗೂ ಗ್ರಹಣವು ಸಂಭವಿಸುತ್ತದೆ. ಅವರು ಧರ್ಮಪ್ರವರ್ತಕರಾಗಿ ಜಗತ್ತಿನ ಕಣ್ಣುಗಳಾಗಿದ್ದಾರೆ. ಲೋಕಸ್ಥಿತಿಯೆಲ್ಲವೂ ಅವರಿಗೆ ಅಧೀನವಾಗಿದೆ (೧೦-೧೧). (ನಳನೇ ಮೊದಲಾದ) ಮಹಾಪುರುಷರೂ ದೇವತೆಗಳೂ ದೈವದಿಂದ ತಪ್ಪಿಸಿಕೊಳ್ಳಲಾರದೆ ಹೋದರು. (ದೇಹ ಇರುವವರೆಗೆ ಕಷ್ಟವು ತಪ್ಪಿದ್ದಲ್ಲ.) ಸಕಲರಿಗೂ ದೇಹವಿದೆಯಲ್ಲವೆ ? (೧೨). ದೇವೇಂದ್ರನೇ ಮೊದಲಾದ ದೇವತೆಗಳಿಗೂ ಸಹ ಧರ್ಮಾಧರ್ಮನಿಮಿತ್ತವಾಗಿ ಸುಖದುಃಖಗಳು ಬರುತ್ತವೆಯೆಂದು ಕೇಳಿದ್ದೇವೆ. ಅಣ್ಣ, ನೀನು ಹೀಗೆ ವ್ಯಥೆಪಡುವುದು ಯುಕ್ತವಲ್ಲ. ವೈದೇಹಿಯು ಹೃತಳಾದರೂ ಒಂದುವೇಳೆ ಮೃತಳಾದರೂ ನೀನು ಶೋಕಿಸುವುದು ತರವಲ್ಲ. ವೀರಾಗ್ರಣಿಯಾದ ನೀನು ಸಾಮಾನ್ಯಮನುಷ್ಯನಂತೆ ದುಃಖಿಸುವುದು ಯುಕ್ತವಲ್ಲ (೧೩-೧೪). ಶ್ರೀರಾಮ, ತತ್ತ್ವಜ್ಞಾನಿಗಳಾದ ನಿನ್ನಂತಹವರು ಎಂದಿಗೂ ಶೋಕಿಸುವುದಿಲ್ಲ. ಎಂತಹ ವಿಪತ್ತುಗಳೇ ಒದಗಿದರೂ ಜ್ಞಾನಿಗಳ ವಿಚಾರಧಾರೆಯಲ್ಲಿ ನಿರಾಸೆಯು ಸುಳಿಯುವುದಿಲ್ಲ. ಪುರುಷಶ್ರೇಷ್ಠ, ಯಥಾರ್ಥವಾಗಿ ವಿಮರ್ಶಿಸಿ ನೋಡು. ವಿವೇಚನಾಶಕ್ತಿಯುಳ್ಳ ಮಹಾಪ್ರಾಜ್ಞರು ಯುಕ್ತಾಯುಕ್ತಗಳನ್ನು ವಿವೇಚಿಸಿ ತಿಳಿಯು

ಅದೃಷ್ಟಗುಣದೋಷಾಣಾಮಧ್ರುವಾಣಾಂ ಚ ಕರ್ಮಣಾಮ್ ।
ನಾಂತರೇಣ ಕ್ರಿಯಾಂ ತೇಷಾಂ ಫಲಮಿಷ್ಟಂ ಪ್ರವರ್ತತೇ ॥ ೧೭

ತ್ವಮೇವ ಹಿ ಪುರಾ ರಾಮ ಮಾಮೇವಂ ಬಹುಶೋಽನ್ವಶಾಃ ।
ಅನುಶಿಷ್ಯಾದ್ಧಿ ಕೋ ನು ತ್ವಾಮಪಿ ಸಾಕ್ಷಾದ್ಬೃಹಸ್ಪತಿಃ ॥ ೧೮

ಬುದ್ಧಿಶ್ಚ ತೇ ಮಹಾಪ್ರಾಜ್ಞ ದೇವೈರಪಿ ದುರನ್ವಯಾ ।
ಶೋಕೇನಾಭಿಪ್ರಸುಪ್ತಂ ತೇ ಜ್ಞಾನಂ ಸಂಬೋಧಯಾಮ್ಯಹಮ್ ॥

ದಿವ್ಯಂ ಚ ಮಾನುಷಂ ಚ ತ್ವಮಾತ್ಮನಶ್ಚ ಪರಾಕ್ರಮಮ್ ।
ಇಕ್ಷ್ವಾಕುವೃಷಭಾವೇಕ್ಷ್ಯ ಯತಸ್ವ ದ್ವಿಷತಾಂ ವಧೇ ॥ ೨೦

ಕಿಂ ತೇ ಸರ್ವವಿನಾಶೇನ ಕೃತೇನ ಪುರುಷರ್ಷಭ ।
ತಮೇವ ತ್ವಂ ರಿಪುಂ ಪಾಪಂ ವಿಜ್ಞಾಯೋದ್ಧರ್ತುಮರ್ಹಸಿ ॥ ೨೧

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಷಟ್ ಷಷ್ಟಿತಮಃ ಸರ್ಗಃ

---

ಬಲ್ಲರು (೧೫-೧೬). ಕರ್ಮಫಲಗಳಾದ ಸುಖದುಃಖಗಳೆಂಬ ಗುಣದೋಷಗಳು ಯಾವಾಗ ಬರುತ್ತವೆಯೆಂದು ಮೊದಲೇ ತಿಳಿದಿರುವುದಿಲ್ಲ. (ಫಲಭೋಗದಿಂದ ನಾಶವಾಗುವ) ಈ ಕರ್ಮಗಳು ಶಾಶ್ವತವಲ್ಲ. ಕರ್ಮಗಳನ್ನು ಹಿಂದೆ ಆಚರಿಸದೆ ಅವುಗಳ ಫಲವು ಎಂದಿಗೂ ಪ್ರಾಪ್ತವಾಗುವುದಿಲ್ಲ (೧೭). ಅಣ್ಣ, ಹಿಂದೆ ಈ ವಿಷಯವನ್ನು ನೀನೇ ಎಷ್ಟೋ ಸಲ ನನಗೆ ಬೋಧಿಸಿದ್ದೀಯೆ. ನಿನಗೆ ಹಿತೋಪದೇಶ ಮಾಡುವ ಸಾಮರ್ಥ್ಯ ಯಾರಿಗುಂಟು? ಸಾಕ್ಷಾತ್ ಬೃಹಸ್ಪತಿಗೂ ಇಲ್ಲ (೧೮). ಮಹಾಮೇಧಾವಿಯಾದ ನಿನ್ನ ಪ್ರಜ್ಞಾಶಕ್ತಿಯು ದೇವತೆಗಳಿಗೂ ದುರ್ಲಭ. ನಿನ್ನ ಬುದ್ಧಿಯು ಶೋಕದಿಂದ ಆವೃತವಾಗಿದೆ. ಆವರಣವನ್ನು ತೆಗೆದು ಆ ಬುದ್ಧಿಯನ್ನು ಬೆಳಗಿಸಲು ನಾನು ಯತ್ನಿಸುತ್ತಿದ್ದೇನೆ. (೧೯). ಇಕ್ಷ್ವಾಕುವಂಶೀಯರಲ್ಲಿ ಪರಮಶ್ರೇಷ್ಠನಾದವನು ನೀನು. ನಿನ್ನ ಪರಾಕ್ರಮವು ದೇವಲೋಕ ಮನುಷ್ಯಲೋಕಗಳನ್ನೂ ವ್ಯಾಪಿಸುವಂತಹುದು. ಸಮಯವರಿತು ಶತ್ರುನಾಶಕ್ಕಾಗಿ ಪ್ರಯತ್ನಿಸು. ಸಕಲಜೀವಿಗಳನ್ನೂ ನಾಶಮಾಡಿದ್ದರಿಂದ ನಿನಗೆ ಯಾವ ಪ್ರಯೋಜನ ಉಂಟು? (ಸೀತಾದೇವಿಯನ್ನಪಹರಿಸಿದ) ಪಾಪಿಯನ್ನು ಗೊತ್ತುಮಾಡಿ ಆ ಶತ್ರುವನ್ನು ಸಂಹರಿಸುವುದು ಯೋಗ್ಯವಾದುದು" ಎಂದು ನಿವೇದಿಸಿದನು (೨೦-೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತಾರನೆಯ ಸರ್ಗ

## ಸಪ್ತಷಷ್ಟಿತಮಃ ಸರ್ಗಃ

### ಗೃಧ್ರರಾಜದರ್ಶನಮ್

ಪೂರ್ವಜೋಽಪ್ಯುಕ್ತಮಾತ್ರಸ್ತು ಲಕ್ಷ್ಮಣೇನ ಸುಭಾಷಿತಮ್ ।
ಸಾರಗ್ರಾಹೀ ಮಹಾಸಾರಂ ಪ್ರತಿಜಗ್ರಾಹ ರಾಘವಃ ॥ ೧

ಸಂನಿಗೃಹ್ಯ ಮಹಾಬಾಹುಃ ಪ್ರವೃದ್ಧಂ ರೋಷಮಾತ್ಮನಃ ।
ಅವಷ್ಟಭ್ಯ ಧನುಶ್ಚಿತ್ರಂ ರಾಮೋ ಲಕ್ಷ್ಮಣಮಬ್ರವೀತ್ ॥ ೨

ಕಿಂ ಕರಿಷ್ಯಾವಹೇ ವತ್ಸ ಕ್ವ ವಾ ಗಚ್ಛಾವ ಲಕ್ಷ್ಮಣ ।
ಕೇನೋಪಾಯೇನ ಪಶ್ಯಾವ ಸೀತಾಮಿತಿ ವಿಚಿಂತಯ ॥ ೩

ತಂ ತಥಾ ಪರಿತಾಪಾರ್ತಂ ಲಕ್ಷ್ಮಣೋ ರಾಮಮಬ್ರವೀತ್ ।
ಇದಮೇವ ಜನಸ್ಥಾನಂ ತ್ವಮನ್ವೇಷಿತುಮರ್ಹಸಿ ॥ ೪

ರಾಕ್ಷಸೈರ್ಬಹುಭಿಃ ಕೀರ್ಣಂ ನಾನಾದ್ರುಮಲತಾಯುತಮ್ ।
ಸಂತೀಹ ಗಿರಿದುರ್ಗಾಣಿ ನಿರ್ದರಾಃ ಕಂದರಾಣಿ ಚ ॥ ೫

## ಸರ್ಗ ೬೭

ಜಟಾಯುದರ್ಶನ ; ರಾವಣವೃತ್ತಾಂತಶ್ರವಣ ; ಶ್ರೀರಾಮನ ದುಃಖ.

ಲಕ್ಷ್ಮಣನು ಈ ಪ್ರಕಾರವಾಗಿ ಸಾರವತ್ತಾದ ಹಿತವಚನವನ್ನಾಡಲು, ರಾಘವನು ಅಗ್ರಜನಾದರೂ ಸಾರಗ್ರಾಹಿಯಾದ್ದರಿಂದ ಅದೆಲ್ಲವೂ ಸರಿಯೆಂದು ಗ್ರಹಿಸಿದನು (೧). ಆ ವೀರಾಗ್ರಣಿಯು ತನ್ನ ಕೋಪೋದ್ರೇಕವನ್ನು ಸ್ತಿಮಿತಕ್ಕೆ ತಂದುಕೊಂಡು, ಕೋದಂಡವನ್ನೂರಿ ನಿಂತು "ವತ್ಸ–ಲಕ್ಷ್ಮಣ, ಈಗ ಏನು ಮಾಡೋಣ ? ಎಲ್ಲಿಗೆ ಹೋಗೋಣ ? 'ಯಾವ ಉಪಾಯವನ್ನವಲಂಬಿಸಿದರೆ ಸೀತೆಯನ್ನು ಕಾಣಲು ಸಾಧ್ಯವಾದೀತು ?' ಎಂಬುದನ್ನಾಲೋಚಿಸು" ಎಂದು ಹೇಳಿದನು (೨–೩). ವ್ಯಥಿತನಾದ ಶ್ರೀರಾಮನನ್ನು ನೋಡಿ ಲಕ್ಷ್ಮಣನು "ಅಣ್ಣಾ, ಈ ಜನಸ್ಥಾನವನ್ನೇ ಸರಿಯಾಗಿ ಅನ್ವೇಷಿಸಬೇಕು. ಇಲ್ಲಿ ರಾಕ್ಷಸರು ಬಹುಸಂಖ್ಯೆಯಲ್ಲಿ ಹರಡಿದ್ದಾರೆ. ನಾನಾಬಗೆಯ ಮರಬಳ್ಳಿಗಳು ತುಂಬಿವೆ. ದುರ್ಗಮವಾದ ಗಿರಿಪ್ರದೇಶಗಳೂ

*

ಗುಹಾಶ್ಚ ವಿವಿಧಾ ಘೋರಾ ನಾನಾಮೃಗಗಣಾಕುಲಾಃ ।
ಆವಾಸಾಃ ಕಿಂನರಾಣಾಂ ಚ ಗಂಧರ್ವಭವನಾನಿ ಚ ॥ ೬

ತಾನಿ ಯುಕ್ತೋ ಮಯಾ ಸಾರ್ಧಂ ಸಮನ್ವೇಷಿತುಮರ್ಹಸಿ ।
ತ್ವದ್ವಿಧಾ ಬುದ್ಧಿಸಂಪನ್ನಾ ಮಹಾತ್ಮಾನೋ ನರರ್ಷಭಾಃ ॥ ೭

ಆಪತ್ಸು ನ ಪ್ರಕಂಪಂತೇ ವಾಯುವೇಗೈರಿವಾಚಲಾಃ ।
ಇತ್ಯುಕ್ತಸ್ತದ್ವನಂ ಸರ್ವಂ ವಿಚಚಾರ ಸಲಕ್ಷ್ಮಣಃ ॥ ೮

ಕ್ರುದ್ಧೋ ರಾಮಃ ಶರಂ ಘೋರಂ ಸಂಧಾಯ ಧನುಷಿ ಕ್ಷುರಮ್ ।
ತತಃ ಪರ್ವತಕೂಟಾಭಂ ಮಹಾಭಾಗಂ ದ್ವಿಜೋತ್ತಮಮ್ ॥ ೯

ದದರ್ಶ ಪತಿತಂ ಭೂಮೌ ಕ್ಷತಜಾರ್ದ್ರಂ ಜಟಾಯುಷಮ್ ।
ತಂ ದೃಷ್ಟ್ವಾ ಗಿರಿಶೃಂಗಾಭಂ ರಾಮೋ ಲಕ್ಷ್ಮಣಮಬ್ರವೀತ್ ॥ ೧೦

ಅನೇನ ಸೀತಾ ವೈದೇಹೀ ಭಕ್ಷಿತಾ ನಾತ್ರ ಸಂಶಯಃ ।
ಗೃಧ್ರರೂಪಮಿದಂ ವ್ಯಕ್ತಂ ರಕ್ಷೋ ಭ್ರಮತಿ ಕಾನನಮ್ ॥ ೧೧

---

ಬಂಡೆಗಳೂ ಕಂದಕಗಳೂ ಇವೆ (೪–೫). ವಿವಿಧಮೃಗಗಳಿಂದ ಆಕುಲವಾದ ಘೋರ ಗುಹೆಗಳಿವೆ. ಕಿನ್ನರರೂ ಗಂಧರ್ವರೂ ವಾಸಿಸುವ ಸ್ಥಳಗಳಿವೆ. ನನ್ನೊಡನೆ ಇವೆಲ್ಲವನ್ನೂ ನೀನು ಅರಸುವುದು ಸಮುಚಿತ. ನಿನ್ನಂತಹ ಬುದ್ಧಿಶಾಲಿಗಳೂ ಮಹಾತ್ಮರೂ ಆದ ಪುರುಷಶ್ರೇಷ್ಠರು ಆಪತ್ತುಬಂದಾಗ ಎದೆಗುಂದುವುದಿಲ್ಲ ; ಬಿರುಗಾಳಿ ಬೀಸಿದರೂ ಬೆಟ್ಟಗಳು ಕದಲುವುದಿಲ್ಲ" ಎಂದನು. ಆಮೇಲೆ ಶ್ರೀರಾಮನು ಲಕ್ಷ್ಮಣಸಮೇತನಾಗಿ ಪುನಃ ಸೀತೆಯನ್ನರಸುತ್ತ ಅರಣ್ಯದಲ್ಲಿ ಸುತ್ತಾಡಿದನು (೬–೮). ರುಷ್ಟನಾದ ಶ್ರೀರಾಮನು ಕ್ಷುರಸದೃಶವಾದ ಘೋರಾಸ್ತ್ರವನ್ನು ಧನುಸ್ಸಿಗೆ ಹೂಡಿಯೇ ಇದ್ದನು. ಆ ಸಮಯದಲ್ಲಿ ಮಹಾತ್ಮನೂ ಪಕ್ಷಿಶ್ರೇಷ್ಠನೂ ಆದ ಜಟಾಯುವು ಭೂಮಿಯಲ್ಲಿ ಬಿದ್ದಿರುವುದು ಗೋಚರಿಸಿತು (೯). ರಕ್ತದಲ್ಲಿ ನೆನೆದು ಗಿರಿಶೃಂಗದಂತೆ ಮಹಾಕಾಯನಾಗಿದ್ದ ಜಟಾಯುವನ್ನು ನೋಡಿ ಶ್ರೀರಾಮನು "ಲಕ್ಷ್ಮಣ, ನಿಸ್ಸಂದೇಹವಾಗಿ ಈತನೇ ಸೀತೆಯನ್ನು ಭಕ್ಷಿಸಿದ್ದಾನೆ ! ರಾಕ್ಷಸನು ಗೃಧ್ರರೂಪವನ್ನು ಧರಿಸಿ ಕಾಡಿನಲ್ಲಿ ಅಲೆಯುತ್ತಿದ್ದಾನೆಂಬುದು

ಭಕ್ಷಯಿತ್ವಾ ವಿಶಾಲಾಕ್ಷೀಮಾಸ್ತೇ ಸೀತಾಂ ಯಥಾಸುಖಮ್ ।
ಏನಂ ವಧಿಷ್ಯೇ ದೀಪ್ತಾಸ್ಯೈ ರ್ಘೋರೈರ್ಬಾಣೈರಜಿಹ್ಮಗೈಃ ॥ ೧೨

ಇತ್ಯುಕ್ತ್ವಾಭ್ಯಪತದ್ಗೃಧ್ರಂ ಸಂಧಾಯ ಧನುಷಿ ಕ್ಷುರಮ್ ।
ಕ್ರುದ್ಧೋ ರಾಮಃ ಸಮುದ್ರಾಂತಾಂ ಚಾಲಯನ್ನಿವ ಮೇದಿನೀಮ್ ॥

ತಂ ದೀನಂ ದೀನಯಾ ವಾಚಾ ಸಫೇನಂ ರುಧಿರಂ ವಮನ್ ।
ಅಭ್ಯಭಾಷತ ಪಕ್ಷೀ ತು ರಾಮಂ ದಶರಥಾತ್ಮಜಮ್ ॥ ೧೪

ಯಾಮೋಷಧಿಮಿವಾಯುಷ್ಮನ್ನನ್ವೇಷಸಿ ಮಹಾವನೇ ।
ಸಾ ದೇವೀ ಮಮ ಚ ಪ್ರಾಣಾ ರಾವಣೇನೋಭಯಂ ಹೃತಮ್ ॥

ತ್ವಯಾ ವಿರಹಿತಾ ದೇವೀ ಲಕ್ಷ್ಮಣೇನ ಚ ರಾಘವ ।
ಹ್ರಿಯಮಾಣಾ ಮಯಾ ದೃಷ್ಟಾ ರಾವಣೇನ ಬಲೀಯಸಾ ॥ ೧೬

ಸೀತಾಮಭ್ಯವಪನ್ನೋಽಹಂ ರಾವಣಶ್ಚ ರಣೇ ಮಯಾ ।
ವಿಧ್ವಂಸಿತರಥಚ್ಛತ್ರಃ ಪಾತಿತೋ ಧರಣೀತಲೇ ॥ ೧೭

---

ಸ್ಪಷ್ಟವಾಗಿದೆ! (೧೦–೧೧). ಆ ವಿಶಾಲಾಕ್ಷಿಯನ್ನು ಭಕ್ಷಿಸಿ ಸುಖವಾಗಿ ಮಲಗಿದ್ದಾನೆ! ಇವನನ್ನು ಘೋರಾಸ್ತ್ರಗಳಿಂದ ಕೊಂದೆಸೆಯುವೆನು" ಎಂದು ಹೇಳುತ್ತ ದಢಾರನೆ ಮುಂದೆ ನುಗ್ಗಿದನು. ರೋಷಾವಿಷ್ಟನಾದ ಶ್ರೀರಾಮನು ಧನುಸ್ಸಿಗೆ ನಿಶಿತಾಸ್ತ್ರವನ್ನು ಹೂಡಿ ನುಗ್ಗಿದಾಗ, ಭೂಮಿಯು ಸಮುದ್ರಪರ್ಯಂತವಾಗಿ ನಡುಗಿದಂತಾಯಿತು! (೧೨–೧೩). ಅಷ್ಟರಲ್ಲಿ ನೊರೆನೊರೆಯಾಗಿ ರಕ್ತವನ್ನುಗುಳುತ್ತಿದ್ದ ಜಟಾಯುವು ದೈನ್ಯದಿಂದ "ಆಯುಷ್ಮನ್–ರಾಘವ, ಯಾವ ದೇವಿಯನ್ನು ಈ ಮಹಾರಣ್ಯದಲ್ಲಿ ದಿವ್ಯಮೂಲಿಕೆಯನ್ನರಸುವಂತೆ ಅರಸುತ್ತಿರುವೆಯೋ ಆ ಸೀತಾದೇವಿ ಮತ್ತು ನನ್ನ ಪ್ರಾಣ–ಇವೆರಡನ್ನೂ ರಾವಣನು ಅಪಹರಿಸಿದನು! (೧೪–೧೫). ನೀನೂ ಲಕ್ಷ್ಮಣನೂ ಇಲ್ಲದ ವೇಳೆಯಲ್ಲಿ ಬಲಾಢ್ಯನಾದ ರಾವಣನು ಆ ದೇವಿಯನ್ನು ಅಪಹರಿಸಿ ಒಯ್ಯುವುದನ್ನು ನಾನು ಕಂಡೆನು. ಸೀತೆಯ ರಕ್ಷಣೆಗಾಗಿ ನಾನು ಧಾವಿಸಿದೆನು. ರಾವಣನಿಗೂ ನನಗೂ ಹೊಡೆದಾಟ ನಡೆಯಿತು. ಅವನ ರಥಚ್ಛತ್ರ

ಏತದಸ್ಯ ಧನುರ್ಭಗ್ನಮೇತೇ ಚಾಸ್ಯ ಶರಾಸ್ತಥಾ ।
ಅಯಮಸ್ಯ ರಣೇ ರಾಮ ಭಗ್ನಃ ಸಾಂಗ್ರಾಮಿಕೋ ರಥಃ ॥ ೧೮
ಅಯಂ ತು ಸಾರಥಿಸ್ತಸ್ಯ ಮತ್ಪಕ್ಷನಿಹತೋ ಭುವಿ ।
ಪರಿಶ್ರಾಂತಸ್ಯ ಮೇ ಪಕ್ಷೌ ಛಿತ್ತ್ವಾ ಖಡ್ಗೇನ ರಾವಣಃ ॥ ೧೯
ಸೀತಾಮಾದಾಯ ವೈದೇಹೀಮುತ್ಪಪಾತ ವಿಹಾಯಸಮ್ ।
ರಕ್ಷಸಾ ನಿಹತಂ ಪೂರ್ವಂ ನ ಮಾಂ ಹಂತುಂ ತ್ವಮರ್ಹಸಿ ॥ ೨೦
ರಾಮಸ್ತಸ್ಯ ತು ವಿಜ್ಞಾಯ ಬಾಷ್ಪಪೂರ್ಣಮುಖಸ್ತದಾ ।
ದ್ವಿಗುಣೀಕೃತತಾಪಾರ್ತಃ ಸೀತಾಸಕ್ತಾಂ ಪ್ರಿಯಾಂ ಕಥಾಮ್ ॥ ೨೧
ಶ್ರುತ್ವಾ ಜಟಾಯುಷೋ ವಾಕ್ಯಂ ರಾಮಃ ಸೌಮಿತ್ರಿಣಾ ಸಹ ।
ಗೃಧ್ರರಾಜಂ ಪರಿಷ್ವಜ್ಯ ಪರಿತ್ಯಜ್ಯ ಮಹದ್ಧನುಃ ॥ ೨೨
ನಿಪಪಾತಾವಶೋ ಭೂಮೌ ರುರೋದ ಸಹಲಕ್ಷ್ಮಣಃ ।
ಏಕಮೇಕಾಯನೇ ದುರ್ಗೇ ನಿಃಶ್ವಸಂತಂ ಕಥಂಚನ ॥ ೨೩

---

ಗಳನ್ನು ನೆಲದಮೇಲೆ ಹೊಡೆದುರುಳಿಸಿದೆನು (೧೬–೧೭). ನಾನು ಮುರಿದು ಹಾಕಿದ ರಾವಣನ ಧನುಸ್ಸು ಅದು. ಅವು ಆತನ ಬಾಣಗಳು. ಶ್ರೀರಾಮ, ಅಲ್ಲಿ ಕಾಣುವ ಯುದ್ಧೋಪಯೋಗಿಯಾದ ರಥವನ್ನು ನಾನು ಭಗ್ನಗೊಳಿಸಿದೆನು. ಅದು ರಾವಣನ ರಥ (೧೮). ಅಲ್ಲಿ ನೆಲದಮೇಲೆ ಬಿದ್ದಿರುವವನು ಅವನ ಸಾರಥಿ. ರೆಕ್ಕೆಗಳಿಂದ ಬಡಿದು ಅವನನ್ನು ಕೊಂದಿದ್ದೇನೆ. ಹೀಗೆ ಯುದ್ಧಮಾಡಿ ನಾನು ಬಳಲಿದೆ. ಆಗ ರಾವಣನು ನನ್ನ ರೆಕ್ಕೆಗಳನ್ನು ಖಡ್ಗದಿಂದ ಕತ್ತರಿಸಿ, ಸೀತಾದೇವಿಯನ್ನೆತ್ತಿಕೊಂಡು ಆಕಾಶಮಾರ್ಗದಲ್ಲಿ ಹಾರಿಹೋದನು. ರಾಮ, ಆ ರಾಕ್ಷಸನು ನನ್ನನ್ನು ಮೊದಲೇ ಕೊಂದಿದ್ದಾನೆ. ಪುನಃ ನೀನು ಕೊಲ್ಲಬೇಕಾಗಿಲ್ಲ ! " ಎಂದನು " (೧೯–೨೦). ಜಟಾಯುವಿನ ಮಾತನ್ನು ಕೇಳಿ ಶ್ರೀರಾಮನಿಗೆ ಕಣ್ಣೀರು ಉಕ್ಕಿತು. ಅವನ ದುಃಖವು ಇಮ್ಮಡಿಸಿತು. ಸೀತಾವೃತ್ತಾಂತವನ್ನು ತಿಳಿಸುವ ಜಟಾಯುವಿನ ಹೇಳಿಕೆ ಶ್ರೀರಾಮನಿಗೆ ಪ್ರಿಯವೆನಿಸಿತು. ಅವನು ತನ್ನ ಮಹಾಧನುಸ್ಸನ್ನು ಕೆಳಗಿಟ್ಟು ಗೃಧ್ರರಾಜನನ್ನು ಆಲಿಂಗಿಸಿಕೊಂಡನು (೨೧–೨೨). ಚೈತನ್ಯ ಗುಂದಿ ನೆಲದಲ್ಲಿ ಕುಸಿದನು. ಕಣ್ಣೀರು ಹರಿಯಿತು. ಲಕ್ಷ್ಮಣನೂ ದುಃಖಿಸಿ

**ಸಮೀಕ್ಷ್ಯ ದುಃಖಿತತರೋ ರಾಮಃ ಸೌಮಿತ್ರಿಮಬ್ರವೀತ್ ।**
**ರಾಜ್ಯಾದ್ಭ್ರಂಶೋ ವನೇ ವಾಸಃ ಸೀತಾ ನಷ್ಟಾ ದ್ವಿಜೋ ಹತಃ ॥**

**ಈದೃಶೀಯಂ ಮಮಾಲಕ್ಷ್ಮೀರ್ನಿರ್ದಹೇದಪಿ ಪಾವಕಮ್ ।**
**ಸಂಪೂರ್ಣಮಪಿ ಚೇದದ್ಯ ಪ್ರತರೇಯಂ ಮಹೋದಧಿಮ್ ॥ ೨೫**

**ಸೋಽಪಿ ನೂನಂ ಮಮಾಲಕ್ಷ್ಮ್ಯಾ ವಿಶುಷ್ಯೇತ್ ಸರಿತಾಂ ಪತಿಃ ।**
**ನಾಸ್ತ್ಯಭಾಗ್ಯತರೋ ಲೋಕೇ ಮತ್ತೋಽಸ್ಮಿನ್ ಸಚರಾಚರೇ ॥ ೨೬**

**ಯೇನೇಯಂ ಮಹತೀ ಪ್ರಾಪ್ತಾ ಮಯಾ ವ್ಯಸನವಾಗುರಾ ।**
**ಅಯಂ ಪಿತೃವಯಸ್ಯೋ ಮೇ ಗೃಧ್ರರಾಜೋ ಜರಾನ್ವಿತಃ ॥ ೨೭**

**ಶೇತೇ ವಿನಿಹತೋ ಭೂಮೌ ಮಮ ಭಾಗ್ಯವಿಪರ್ಯಯಾತ್ ।**
**ಇತ್ಯೇವಮುಕ್ತ್ವಾ ಬಹುಶೋ ರಾಘವಃ ಸಹಲಕ್ಷ್ಮಣಃ ॥ ೨೮**

**ಜಟಾಯುಷಂ ಚ ಪಸ್ಪರ್ಶ ಪಿತೃಸ್ನೇಹಂ ವಿದರ್ಶಯನ್ ॥**

---

ದನು. ನಿರ್ಜನವೂ ದುರ್ಗಮವೂ ಆದ ವನಪ್ರದೇಶದಲ್ಲಿ ಏಕಾಕಿಯಾಗಿ ಮೇಲುಸಿರೆಳೆಯುತ್ತಿದ್ದ ಜಟಾಯುವನ್ನು ನೋಡಿ, ಶ್ರೀರಾಮನಿಗೆ ಬಹಳ ವ್ಯಥೆಯಾಯಿತು. ಅವನು ಸೌಮಿತ್ರಿಯ ಕಡೆಗೆ ತಿರುಗಿ "ಲಕ್ಷ್ಮಣ, ರಾಜ್ಯಭ್ರಷ್ಟನಾದೆನು. ವನವಾಸವು ಪ್ರಾಪ್ತವಾಯಿತು. ಸೀತೆ ಅಪಹೃತಳಾದಳು. ಈ ಪಕ್ಷಿರಾಜನು ಹತನಾದನು! (೨೩–೨೪). ನನ್ನ ದೌರ್ಭಾಗ್ಯವನ್ನು ನೋಡು! ಈ ದುರದೃಷ್ಟಪರಂಪರೆ ಬೆಂಕಿಯನ್ನೂ ಸುಟ್ಟು ಬೂದಿ ಮಾಡೀತು! ಈಗ ನಾನು ತುಂಬಿದ ಮಹಾಸಾಗರದಲ್ಲಿ ಧುಮುಕಿದರೆ, ಆ ನದೀಪತಿಯೂ ನನ್ನ ದೌರ್ಭಾಗ್ಯದಿಂದ ನೀರಿಲ್ಲದೆ ಒಣಗಿಹೋದಾನು! ಈ ಚರಾಚರಪ್ರಪಂಚದಲ್ಲಿ ನನಗಿಂತಲೂ ಹೆಚ್ಚಿನ ದುರ್ದೈವಿ ಇನ್ನೊಬ್ಬನಿಲ್ಲ (೨೫–೨೬). ವ್ಯಸನವೆಂಬ ದೊಡ್ಡ ತೊಡಕಿನ ಬಲೆಯಲ್ಲಿ ನಾನು ಸಿಕ್ಕಿ ಹೋದೆನು. ಈ ಗೃಧ್ರರಾಜನು ನಮ್ಮ ತಂದೆಯ ಮಿತ್ರ; ವಯಸ್ಸಾದವನು. ಇವನು ನನ್ನ ದುರದೃಷ್ಟದಿಂದ ಹತನಾಗಿ ನೆಲದಮೇಲೆ ಮಲಗಿರುವನಲ್ಲ!" ಎಂದು ಬಹುಪರಿಯಲ್ಲಿ ವಿಲಪಿಸಿದನು. ಜಟಾಯುವನ್ನು ತನ್ನ ತಂದೆಯಂತೆ ಪಿತೃವಾತ್ಸಲ್ಯದಿಂದ ಲಕ್ಷ್ಮಣನೊಡನೆ ಮುಟ್ಟಿಮುಟ್ಟಿ ತಡವರಿಸಿ ಸಂತೈಸಿ

ನಿಕೃತ್ತಪಕ್ಷಂ ರುಧಿರಾವಸಿಕ್ತಂ
ಸ ಗೃಧ್ರರಾಜಂ ಪರಿರಭ್ಯ ರಾಮಃ ।
ಕ್ವ ಮೈಥಿಲೀ ಪ್ರಾಣಸಮಾ ಮಮೇತಿ
ವಿಮುಚ್ಯ ವಾಚಂ ನಿಪಪಾತ ಭೂಮೌ ॥ ೨೯

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತಷಷ್ಟಿತಮಃ ಸರ್ಗಃ

---

## ಅಷ್ಟಷಷ್ಟಿತಮಃ ಸರ್ಗಃ

### ಜಟಾಯುಸ್ಸಂಸ್ಕಾರಃ

ರಾಮಃ ಸಂಪ್ರೇಕ್ಷ್ಯ ತಂ ಗೃಧ್ರಂ ಭುವಿ ರೌದ್ರೇಣ ಪಾತಿತಮ್ ।
ಸೌಮಿತ್ರಿಂ ಮಿತ್ರಸಂಪನ್ನಮಿದಂ ವಚನಮಬ್ರವೀತ್ ॥ ೧

ಮಮಾಯಂ ನೂನಮರ್ಥೇಷು ಯತಮಾನೋ ವಿಹಂಗಮಃ ।
ರಾಕ್ಷಸೇನ ಹತಃ ಸಂಖ್ಯೇ ಪ್ರಾಣಾಂಸ್ತ್ಯಜತಿ ದುಸ್ತ್ಯಜಾನ್ ॥ ೨

---

ದನು. (೨೭–೨೮). ಆ ಗೃಧ್ರರಾಜನ ರೆಕ್ಕೆಗಳು ಛಿನ್ನವಾಗಿದ್ದವು. ಅವನು ರಕ್ತದಲ್ಲಿ ನೆನೆದಿದ್ದನು. ಶ್ರೀರಾಮನು ಆ ಜಟಾಯುವನ್ನು ಅಪ್ಪಿಕೊಂಡು "ಅಪ್ಪಾ–ಜಟಾಯು, ನನ್ನ ಪ್ರಾಣಕಾಂತೆಯಾದ ಮೈಥಿಲಿ ಎಲ್ಲಿ?" ಎಂದು ಹೇಳುತ್ತ ನೆಲದಮೇಲೆ ಕುಸಿದುಬಿದ್ದನು (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೇಳನೆಯ ಸರ್ಗ

---

## ಸರ್ಗ ೬೮

### ಜಟಾಯುವು ಸೀತಾವೃತ್ತಾಂತವನ್ನು ಹೇಳುತ್ತ ಪ್ರಾಣಬಿಡುವುದು. ಜಟಾಯುವಿನ ಸಂಸ್ಕಾರ.

ಕ್ರೂರಿಯಾದ ರಾವಣನಿಂದ ಹೊಡೆದುರುಳಿಸಲ್ಪಟ್ಟ ಜಟಾಯುವನ್ನು ವೀಕ್ಷಿಸಿ, ಶ್ರೀರಾಮನು ಸ್ನೇಹಸಂಪನ್ನನಾದ ಸೌಮಿತ್ರಿಯನ್ನು ಕರೆದು "ಲಕ್ಷ್ಮಣ, ನನಗೆ ಉಪಕಾರಮಾಡಲು ಪ್ರಯತ್ನಿಸಿದ ಈ ಪಕ್ಷಿರಾಜನು ಯುದ್ಧದಲ್ಲಿ ರಾಕ್ಷಸನ ಹಿಂಸೆಗೆ ಬಲಿಯಾಗಿದ್ದಾನೆ. ಹೋಗಲಾರದ ಪ್ರಾಣ

ಅತಿಖಿನ್ನಃ ಶರೀರೇಽಸ್ಮಿನ್ ಪ್ರಾಣೋ ಲಕ್ಷ್ಮಣ ವಿದ್ಯತೇ ।
ತಥಾ ಸ್ವರವಿಹೀನೋಽಯಂ ವಿಕ್ಲವಂ ಸಮುದೀಕ್ಷತೇ ॥ ೩

ಜಟಾಯೋ ಯದಿ ಶಕ್ನೋಷಿ ವಾಕ್ಯಂ ವ್ಯಾಹರಿತುಂ ಪುನಃ ।
ಸೀತಾಮಾಖ್ಯಾಹಿ ಭದ್ರಂ ತೇ ವಧಮಾಖ್ಯಾಹಿ ಚಾತ್ಮನಃ ॥ ೪

ಕಿಂನಿಮಿತ್ತೋಽಹರತ್ ಸೀತಾಂ ರಾವಣಸ್ತಸ್ಯ ಕಿಂ ಮಯಾ ।
ಅಪರಾಧಂ ತು ಯಂ ದೃಷ್ಟ್ವಾ ರಾವಣೇನ ಹೃತಾ ಪ್ರಿಯಾ ॥ ೫

ಕಥಂ ತಚ್ಚಂದ್ರಸಂಕಾಶಂ ಮುಖಮಾಸೀನ್ಮನೋಹರಮ್ ।
ಸೀತಯಾ ಕಾನಿ ಚೋಕ್ತಾನಿ ತಸ್ಮಿನ್ ಕಾಲೇ ದ್ವಿಜೋತ್ತಮ ॥ ೬

ಕಥಂವೀರ್ಯಃ ಕಥಂರೂಪಃ ಕಿಂಕರ್ಮಾ ಸ ಚ ರಾಕ್ಷಸಃ ।
ಕ್ವ ಚಾಸ್ಯ ಭವನಂ ತಾತ ಬ್ರೂಹಿ ಮೇ ಪರಿಪೃಚ್ಛತಃ ॥ ೭

ತಮುದ್ವೀಕ್ಷ್ಯ ಸ ಧರ್ಮಾತ್ಮಾ ವಿಲಪಂತಮನಾಥವತ್ ।
ವಾಚಾ ವಿಕ್ಲವಯಾ ರಾಮಂ ಜಟಾಯುರಿದಮಬ್ರವೀತ್ ॥ ೮

---

ವನ್ನು ಬಿಡುವುದರಲ್ಲಿದ್ದಾನೆ (೧–೨). ಅತಿಯಾಗಿ ಬಳಲಿದ್ದಾನೆ. ದೇಹದಲ್ಲಿ ಇನ್ನೂ ಪ್ರಾಣವಿದೆ. ಧ್ವನಿಯು ಉಡುಗಿದೆ. ವಿಹ್ವಲನಾಗಿ ನೋಡುತ್ತಿದ್ದಾನೆ. ಅಪ್ಪಾ–ಜಟಾಯು, ನಿನಗೆ ಮಾತಾಡುವ ಶಕ್ತಿ ಇದೆಯೇ? ಇದ್ದರೆ ಸೀತೆಯ ವಿಷಯವನ್ನು ಹೇಳು; ನಿನಗೆ ಮರಣಬಂದ ಪ್ರಕಾರವನ್ನು ಹೇಳು. ನಿನಗೆ ಸದ್ಗತಿಯಾಗಲಿ (೩–೫). ರಾವಣನು ಸೀತೆಯನ್ನು ಏಕೆ ಅಪಹರಿಸಿದನಂತೆ? ಅವನಿಗೆ ನಾನು ಮಾಡಿದ್ದೇನು? ನನ್ನ ಯಾವ ಅಪರಾಧವನ್ನು ಕಂಡು ರಾವಣನು ನನ್ನ ಪ್ರಿಯೆಯನ್ನು ಅಪಹರಿಸಿದನು? (೫). ಚಂದ್ರಸಂಕಾಶ ವಾದ ಸೀತೆಯ ಮನೋಹರ ಮುಖವು ಆ ಸಮಯದಲ್ಲಿ ಹೇಗಿತ್ತು? ಪಕ್ಷಿರಾಜ, ಸೀತೆಯು ಆಗ ಏನು ಹೇಳುತ್ತಿದ್ದಳು? (೬). ಆ ರಾಕ್ಷಸನ ಪರಾಕ್ರಮ ಎಂತಹುದು? ಅವನ ಆಕೃತಿ ಹೇಗಿದೆ? ಆತನ ಉದ್ಯೋಗ ವೇನು? ಅಪ್ಪಾ–ಜಟಾಯು, ಅವನ ವಾಸಸ್ಥಳ ಎಲ್ಲಿದೆ? ನನಗೆ ಉತ್ತರ ಹೇಳು" ಎಂದನು. ಹೀಗೆ ಅನಾಥನಂತೆ ವಿಲಪಿಸುತ್ತಿದ್ದ ಶ್ರೀರಾಮನನ್ನು ಮುಖವೆತ್ತಿ ನೋಡಿ, ಧರ್ಮಾತ್ಮನಾದ ಜಟಾಯುವು ಈ ಪ್ರಕಾರ ನುಡಿದನು

ಹೃತಾ ಸಾ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ।
ಮಾಯಾಮಾಸ್ಥಾಯ ವಿಪುಲಾಂ ವಾತದುರ್ದಿನಸಂಕುಲಾಮ್ ॥ ೯

ಪರಿಶ್ರಾಂತಸ್ಯ ಮೇ ತಾತ ಪಕ್ಷೌ ಛಿತ್ತ್ವಾ ಸ ರಾಕ್ಷಸಃ ।
ಸೀತಾಮಾದಾಯ ವೈದೇಹೀಂ ಪ್ರಯಾತೋ ದಕ್ಷಿಣಾಂ ದಿಶಮ್ ॥ ೧೦

ಉಪರುಧ್ಯಂತಿ ಮೇ ಪ್ರಾಣಾ ದೃಷ್ಟಿರ್ಭ್ರಮತಿ ರಾಘವ ।
ಪಶ್ಯಾಮಿ ವೃಕ್ಷಾನ್ ಸೌವರ್ಣಾನುಶೀರಕೃತಮೂರ್ಧಜಾನ್ ॥ ೧೧

ಯೇನ ಯಾತೋ ಮುಹೂರ್ತೇನ ಸೀತಾಮಾದಾಯ ರಾವಣಃ ।
ವಿಪ್ರಣಷ್ಟಂ ಧನಂ ಕ್ಷಿಪ್ರಂ ತತ್ಸ್ವಾಮೀ ಪ್ರತಿಪದ್ಯತೇ ॥ ೧೨

ವಿಂದೋ ನಾಮ ಮುಹೂರ್ತೋಽಸೌ ಸ ಚ ಕಾಕುತ್ಸ್ಥ ನಾಬುಧತ್ ।
ತ್ವತ್ಪ್ರಿಯಾಂ ಜಾನಕೀಂ ಹೃತ್ವಾ ರಾವಣೋ ರಾಕ್ಷಸೇಶ್ವರಃ ॥ ೧೩

ಝಷವದ್ಬಡಿಶಂ ಗೃಹ್ಯ ಕ್ಷಿಪ್ರಮೇವ ವಿನಶ್ಯತಿ ।
ನ ಚ ತ್ವಯಾ ವ್ಯಥಾ ಕಾರ್ಯಾ ಜನಕಸ್ಯ ಸುತಾಂ ಪ್ರತಿ ॥ ೧೪

---

(೭-೮) : "ರಾಕ್ಷಸರಾಜನಾದ ರಾವಣನು ಅವಳನ್ನು ಅಪಹರಿಸಿದ್ದಾನೆ. ಆ ದುರಾತ್ಮನು ಮಾಯೆಯಿಂದ ಬಿರುಗಾಳಿಯನ್ನು ಮೇಘರಾಶಿಯನ್ನೂ ಉತ್ಪಾದಿಸಿ (ದಿಕ್ಕುಗೆಡಿಸಿ) ಸೀತಾದೇವಿಯನ್ನು ಅಪಹರಿಸಿಕೊಂಡು ಹೋದನು (೯). ವತ್ಸ–ರಾಮ, ಯುದ್ಧಮಾಡಿ ಬಳಲಿದ ನನ್ನ ರೆಕ್ಕೆಗಳನ್ನು ಕತ್ತರಿಸಿ ಆ ರಾಕ್ಷಸನು ವೈದೇಹಿಯನ್ನೆತ್ತಿಕೊಂಡು ದಕ್ಷಿಣದಿಕ್ಕಿಗೆ ಹೋದನು. ಅಬ್ಬಾ! ನನ್ನ ಪ್ರಾಣವು ಮರಣಯಾತನೆಗೆ ಸಿಕ್ಕಿ ತೊಳಲುತ್ತಿದೆ. ಕಣ್ಣು ಮಂಜಾಗಿ ಸುತ್ತುತ್ತಿದೆ. ಲಾವಂಚವು ಕೇಶದಂತೆ ಬೆಳೆದಿರುವ ಚಿನ್ನದ ಮರಗಳು ಕಾಣಿಸುತ್ತಿವೆ* (೧೦–೧೧). ರಾಘವ, ಯಾವ ಮುಹೂರ್ತದಲ್ಲಿ ರಾವಣನು ಸೀತೆಯನ್ನಪಹರಿಸಿದನೊ, ಆ ಮುಹೂರ್ತದಲ್ಲಿ ನಷ್ಟವಾದ ವಸ್ತು ಬೇಗನೆ ಅದರ ಸ್ವಾಮಿಗೆ ಹಿಂದಿರುಗುತ್ತದೆ. ಅದು 'ವಿಂದ' ಎಂಬ ಮುಹೂರ್ತವಾಗಿತ್ತು. ರಾವಣನಿಗೆ ಅದು ತಿಳಿಯಲಿಲ್ಲ. ನಿನ್ನ ಕಾಂತೆಯಾದ ಜಾನಕಿಯನ್ನು ಅಪಹರಿಸಿದ ರಾವಣನು ಶೀಘ್ರದಲ್ಲಿ ಸಾಯುವನು (೧೨–೧೩). ಗಾಳವನ್ನು ನುಂಗಿದ ಮೀನಿನಂತೆ ನಾಶವಾಗುವನು. ಜನಕ

---

* ಇದು ಮರಣಚಿಹ್ನೆ.

ವೈದೇಹ್ಯಾ ರಂಸ್ಯಸೇ ಕ್ಷಿಪ್ರಂ ಹತ್ವಾ ತಂ ರಾಕ್ಷಸಂ ರಣೇ ।
ಅಸಂಮೂಢಸ್ಯ ಗೃಧ್ರಸ್ಯ ರಾಮಂ ಪ್ರತ್ಯನುಭಾಷತಃ ॥ ೧೪

ಆಸ್ಯಾತ್ ಸುಸ್ರಾವ ರುಧಿರಂ ಮ್ರಿಯಮಾಣಸ್ಯ ಸಾಮಿಷಮ್ ।
ಪುತ್ರೋ ವಿಶ್ರವಸಃ ಸಾಕ್ಷಾದ್ಭ್ರಾತಾ ವೈಶ್ರವಣಸ್ಯ ಚ ॥ ೧೫

ಇತ್ಯುಕ್ತ್ವಾ ದುರ್ಲಭಾನ್ ಪ್ರಾಣಾನ್ ಮುಮೋಚ ಪತಗೇಶ್ವರಃ ।
ಬ್ರೂಹಿ ಬ್ರೂಹೀತಿ ರಾಮಸ್ಯ ಬ್ರುವಾಣಸ್ಯ ಕೃತಾಂಜಲೇಃ ॥ ೧೬

ತ್ಯಕ್ತ್ವಾ ಶರೀರಂ ಗೃಧ್ರಸ್ಯ ಜಗ್ಮುಃ ಪ್ರಾಣಾ ವಿಹಾಯಸಮ್ ।
ಸ ನಿಕ್ಷಿಪ್ಯ ಶಿರೋ ಭೂಮೌ ಪ್ರಸಾರ್ಯ ಚರಣೌ ತದಾ ॥ ೧೭

ವಿಕ್ಷಿಪ್ಯ ಚ ಶರೀರಂ ಸ್ವಂ ಪಪಾತ ಧರಣೀತಲೇ ।
ತಂ ಗೃಧ್ರಂ ಪ್ರೇಕ್ಷ್ಯ ತಾಮ್ರಾಕ್ಷಂ ಗತಾಸುಮಚಲೋಪಮಮ್ ॥ ೧೮

ರಾಮಃ ಸುಬಹುಭಿರ್ದುಃಖೈರ್ದೀನಃ ಸೌಮಿತ್ರಿಮಬ್ರವೀತ್ ।
ಬಹೂನಿ ರಕ್ಷಸಾಂ ವಾಸೇ ವರ್ಷಾಣಿ ವಸತಾ ಸುಖಮ್ ॥ ೨೦

---

ಪುತ್ರಿಯ ವಿಷಯವಾಗಿ ವ್ಯಥೆಪಡಬೇಡ. ಆ ರಾಕ್ಷಸನನ್ನು ರಣರಂಗದಲ್ಲಿ ನೀನು ಸಂಹರಿಸಿ, ಶೀಘ್ರದಲ್ಲಿಯೇ ಜಾನಕಿಯೊಡನೆ ವಿಹರಿಸುವೆ" ಎಂದನು. ಹೀಗೆ (ಮರಣಕಾಲದಲ್ಲಿಯೂ) ಮರವೆಯಿಲ್ಲದೆ ಜಟಾಯುವು ಸರಿಯಾಗಿ ಮಾತನಾಡುತ್ತಿರಲು, ಅವನ ಬಾಯಿಂದ ಗರಣೆಗರಣೆಯಾಗಿ ರಕ್ತ ಸುರಿಯಿತು (೧೪–೧೫). ಆ ಪಕ್ಷಿರಾಜನು "ರಾವಣನು ವಿಶ್ರವಸ್ಸಿನ ಔರಸಪುತ್ರ; ಕುಬೇರನ ತಮ್ಮ" ಎಂದು ಹೇಳಿ ಕಡೆಯುಸಿರೆಳೆದು ಪ್ರಾಣಬಿಟ್ಟನು. ಶ್ರೀರಾಮನು ಕೈಮುಗಿದುಕೊಂಡು "ಅಪ್ಪಾ–ಜಟಾಯು, ಹೇಳು ಹೇಳು!" ಎನ್ನುತ್ತಿರುವಾಗಲೇ ಜಟಾಯುವಿನ ಪ್ರಾಣಪಕ್ಷಿಯು ದೇಹವನ್ನು ಬಿಟ್ಟು ಗಗನವನ್ನಡರಿತು! (೧೬–೧೭). ಜಟಾಯುವಿನ ತಲೆ ನೆಲದಮೇಲೆ ಒರಗಿತು. ಕಾಲುಗಳು ಚಾಚಿಕೊಂಡವು. ದೇಹವು ಸೆಟೆದು ಭೂಮಿಯಲ್ಲುರುಳಿತು. (ರಕ್ತವು ಕದಡಿ) ಕಣ್ಣು ಕೆಂಪಾಗಿತ್ತು ಪ್ರಾಣಹೋಗಿತ್ತು. ಪರ್ವತಾಕಾರದಲ್ಲಿ ಮೃತನಾಗಿಬಿದ್ದ ಜಟಾಯುವನ್ನು ನೋಡಿ ಶ್ರೀರಾಮನು ಬಹುವಿಧದಲ್ಲಿ ಹಲುಬುತ್ತ ಅತ್ತನು (೧೮–೧೯) ಕಡೆಗೆ ದೈನ್ಯದಿಂದ ಸೌಮಿತ್ರಿಯನ್ನು ನೋಡಿ ಶ್ರೀರಾಮನು "ಲಕ್ಷ್ಮಣ, ರಾಕ್ಷಸರು ನೆಲೆಸಿರುವ

ಅನೇನ ದಂಡಕಾರಣ್ಯೇ ವಿಶೀರ್ಣಮಿಹ ಪಕ್ಷಿಣಾ ।
ಅನೇಕವಾರ್ಷಿಕೋ ಯಸ್ತು ಚಿರಕಾಲಸಮುತ್ಥಿತಃ ॥ ೨೧

ಸೋಽಯಮದ್ಯ ಹತಃ ಶೇತೇ ಕಾಲೋ ಹಿ ದುರತಿಕ್ರಮಃ ।
ಪಶ್ಯ ಲಕ್ಷ್ಮಣ ಗೃಧ್ರೋಽಯಮುಪಕಾರೀ ಹತಶ್ಚ ಮೇ ॥ ೨೨

ಸೀತಾಮಭ್ಯವಪನ್ನೋ ವೈ ರಾವಣೇನ ಬಲೀಯಸಾ ।
ಗೃಧ್ರರಾಜ್ಯಂ ಪರಿತ್ಯಜ್ಯ ಪಿತೃಪೈತಾಮಹಂ ಮಹತ್ ॥ ೨೩

ಮಮ ಹೇತೋರಯಂ ಪ್ರಾಣಾನ್ ಮುಮೋಚ ಪತಗೇಶ್ವರಃ ।
ಸರ್ವತ್ರ ಖಲು ದೃಶ್ಯಂತೇ ಸಾಧವೋ ಧರ್ಮಚಾರಿಣಃ ॥ ೨೪

ಶೂರಾಃ ಶರಣ್ಯಾಃ ಸೌಮಿತ್ರೇ ತಿರ್ಯಗ್ಯೋನಿಗತೇಷ್ವಪಿ ।
ಸೀತಾಹರಣಜಂ ದುಃಖಂ ನ ಮೇ ಸೌಮ್ಯ ತಥಾಗತಮ್ ॥ ೨೫

ಯಥಾ ವಿನಾಶೇ ಗೃಧ್ರಸ್ಯ ಮತ್ಕೃತೇ ಚ ಪರಂತಪ ।
ರಾಜಾ ದಶರಥಃ ಶ್ರೀಮಾನ್ ಯಥಾ ಮಮ ಮಹಾಯಶಾಃ ॥ ೨೬

---

ಈ ದಂಡಕಾರಣ್ಯದಲ್ಲಿಯೂ ಸಹ ಈ ಪಕ್ಷಿರಾಜನು ಬಹುವರ್ಷಗಳಿಂದ ಸುಖವಾಗಿದ್ದನು. ಈಗ ಈ ಪ್ರಕಾರದಲ್ಲಿ ಗಾಯಗೊಂಡು ಹತನಾದನು (೨೦). ಚಿರಕಾಲದವರೆಗೆ ಬದುಕಿ ಬಾಳಿ ವೃದ್ಧನಾಗಿದ್ದಾನೆ. ಇಂತಹವನೂ ಈ ದಿನ ಹತನಾಗಿ ಮಲಗಿದನಲ್ಲ! ಕಾಲವನ್ನು ಮೀರುವುದು ಯಾರಿಗೂ ಶಕ್ಯವಲ್ಲ. ಲಕ್ಷ್ಮಣ, ಈ ಗೃಧ್ರರಾಜನು ನನಗೆ ಉಪಕಾರಮಾಡಲು ಹೋಗಿ ಸಾವಿಗೆ ಒಳಗಾದ್ದನ್ನು ನೋಡು (೨೧–೨೨). ಸೀತೆಯನ್ನು ಬಿಡಿಸಲು ಹೋಗಿ ಪ್ರಬಲನಾದ ರಾವಣನಿಂದ ಹತನಾದನು. ಪಿತೃಪಿತಾಮಹಪರಂಪರೆಯಿಂದ ಬಂದ ಗೃಧ್ರರಾಜ್ಯವನ್ನು ತ್ಯಜಿಸಿ, ಈ ಪಕ್ಷಿರಾಜನು ನನಗೋಸ್ಕರ ಪ್ರಾಣವನ್ನು ತೊರೆದಿದ್ದಾನೆ. ಧರ್ಮನಿಷ್ಠರಾದ ಸಾಧುಗಳು ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತಾರೆ (೨೩–೨೪). ಸೌಮಿತ್ರಿ, ತಿರ್ಯಗ್ಜಂತುಗಳಲ್ಲಿಯೂ ಶೂರರೂ ಶರಣಾಗತರಕ್ಷಕರೂ ಇದ್ದಾರೆ, ನೋಡು. ವತ್ಸ, ಈಗ ನನಗೆ ಸೀತಾಪಹಾರದಿಂದಾದ ದುಃಖವೂ ಅಷ್ಟಾಗಿ ಕಾಣುವುದಿಲ್ಲ. ಈ ಪಕ್ಷಿಯು ನನಗೋಸ್ಕರ ಪ್ರಾಣವನ್ನು ಒಪ್ಪಿಸಿತಲ್ಲ ಎಂಬ ದುಃಖವು ನನ್ನನ್ನು ಅತಿಯಾಗಿ ಪೀಡಿಸುತ್ತಿದೆ (೨೫). ಕೀರ್ತಿಶಾಲಿಯಾದ ದಶರಥಮಹಾರಾಜನು

**ಪೂಜನೀಯಶ್ಚ ಮಾನ್ಯಶ್ಚ ತಥಾಯಂ ಪತಗೇಶ್ವರಃ ।**
**ಸೌಮಿತ್ರೇ ಹರ ಕಾಷ್ಠಾನಿ ನಿರ್ಮಥಿಷ್ಯಾಮಿ ಪಾವಕಮ್ ॥ ೨೭**

**ಗೃಧ್ರರಾಜಂ ದಿಧಕ್ಷಾಮಿ ಮತ್ಕೃತೇ ನಿಧನಂ ಗತಮ್ ।**
**ನಾಥಂ ಪತಗಲೋಕಸ್ಯ ಚಿತಾಮಾರೋಪಯಾಮ್ಯಹಮ್ ॥ ೨೮**

**ಇಮಂ ಧಕ್ಷ್ಯಾಮಿ ಸೌಮಿತ್ರೇ ಹತಂ ರೌದ್ರೇಣ ರಕ್ಷಸಾ ।**
**ಯಾ ಗತಿರ್ಯಜ್ಞಶೀಲಾನಾಮಾಹಿತಾಗ್ನೇಶ್ಚ ಯಾ ಗತಿಃ ॥ ೨೯**

**ಅಪರಾವರ್ತಿನಾಂ ಯಾ ಚ ಯಾ ಚ ಭೂಮಿಪ್ರದಾಯಿನಾಮ್ ।**
**ಮಯಾ ತ್ವಂ ಸಮನುಜ್ಞಾತೋ ಗಚ್ಛ ಲೋಕಾನನುತ್ತಮಾನ್ ॥ ೩೦**

**ಗೃಧ್ರರಾಜ ಮಹಾಸತ್ತ್ವ ಸಂಸ್ಕೃತಶ್ಚ ಮಯಾ ವ್ರಜ ।**
**ಏವಮುಕ್ತ್ವಾ ಚಿತಾಂ ದೀಪ್ತಾಮಾರೋಪ್ಯ ಪತಗೇಶ್ವರಮ್ ॥ ೩೧**

**ದದಾಹ ರಾಮೋ ಧರ್ಮಾತ್ಮಾ ಸ್ವಬಂಧುಮಿವ ದುಃಖಿತಃ ।**
**ರಾಮೋಽಥ ಸಹಸೌಮಿತ್ರಿರ್ವನಂ ಗತ್ವಾ ಸ ವೀರ್ಯವಾನ್ ॥ ೩೨**

---

ನನಗೆ ಹೇಗೆ ಪೂಜ್ಯನೋ ಸಮ್ಮಾನ್ಯನೋ, ಹಾಗೆಯೇ ಈ ಪಕ್ಷಿರಾಜನು ನನಗೆ ಪೂಜ್ಯನು, ಸಮ್ಮಾನ್ಯನು. ತಮ್ಮ, ಒಣಕಟ್ಟಿಗೆಗಳನ್ನು ತೆಗೆದುಕೊಂಡು ಬಾ; ಬೆಂಕಿಯನ್ನು ಉತ್ಪಾದಿಸುವೆನು (೨೬–೨೭). ನನಗೋಸ್ಕರ ಪ್ರಾಣವನ್ನು ತೊರೆದ ಈ ಪಕ್ಷಿರಾಜನಿಗೆ ಅಗ್ನಿ ಸಂಸ್ಕಾರವನ್ನು ಮಾಡುವೆನು. ಪಕ್ಷಿಗಳಿಗೆ ಅಧಿಪತಿಯಾದ ಜಟಾಯುವನ್ನು ಚಿತೆಯಮೇಲಿಡುವೆನು (೨೮). ಕ್ರೂರನಾದ ರಾಕ್ಷಸನಿಂದ ಹತನಾದ ಈತನಿಗೆ ದಹನಸಂಸ್ಕಾರವನ್ನು ಮಾಡುವೆನು" ಎಂದನು. (ಅನಂತರ ಲಕ್ಷ್ಮಣನು ಚಿತೆಯನ್ನು ಸಿದ್ಧಪಡಿಸಿದನು.) ಶ್ರೀರಾಮನು "ಪಕ್ಷಿರಾಜ–ಜಟಾಯು, ಪಂಚಮಹಾಯಜ್ಞಗಳನ್ನು ಆಚರಿಸುವ ಗೃಹಸ್ಥರಿಗೂ ಆಹಿತಾಗ್ನಿಗಳಿಗೂ ಯಾವ ಸದ್ಗತಿಯು ದೊರಕುವುದೋ, ಯುದ್ಧದಲ್ಲಿ ಹಿಂದೆಗೆಯದ ವೀರರಿಗೂ ಭೂದಾನಮಾಡುವವರಿಗೂ ಯಾವ ಸದ್ಗತಿಯು ದೊರಕುವುದೋ, ಅದು ನಿನಗೆ ದೊರಕಲಿ. ನಾನು ನಿನಗೆ ಅನುಜ್ಞೆಕೊಟ್ಟಿದ್ದೇನೆ. ನಿನಗೆ ಪುಣ್ಯಲೋಕವು ಪ್ರಾಪ್ತವಾಗಲಿ! (೨೯–೩೦). ಮಹಾಸತ್ತ್ವ—ಗೃಧ್ರರಾಜ, ನನ್ನಿಂದ ಅಗ್ನಿಸಂಸ್ಕಾರವನ್ನು ಪಡೆದು ನೀನು ಪುಣ್ಯಲೋಕವನ್ನು ಸೇರು" ಎಂದು ಹೇಳಿ, ಆ ಚಿತೆಯಲ್ಲಿ ಜಟಾಯುವಿನ ಕಳೇಬರವನ್ನಿಟ್ಟನು (೩೧). ಧರ್ಮಾತ್ಮನಾದ ಶ್ರೀರಾಮನು

ಸ್ಥೂಲಾನ್ ಹತ್ವಾ ಮಹಾರೋಹೀನನುತಸ್ತಾರ ತಂ ದ್ವಿಜಮ್ ।
ರೋಹಿಮಾಂಸಾನಿ ಚೋತ್ಕೃತ್ಯ ಪೇಶೀಕೃತ್ಯ ಮಹಾಯಶಾಃ ॥ ೩೩

ಶಕುನಾಯ ದದೌ ರಾಮೋ ರಮ್ಯೇ ಹರಿತಶಾದ್ವಲೇ ।
ಯತ್ತತ್ ಪ್ರೇತಸ್ಯ ಮರ್ತ್ಯಸ್ಯ ಕಥಯಂತಿ ದ್ವಿಜಾತಯಃ ॥ ೩೪

ತತ್ ಸ್ವರ್ಗಗಮನಂ ತಸ್ಯ ಪಿತ್ರ್ಯಂ ರಾಮೋ ಜಜಾಪ ಹ ।
ತತೋ ಗೋದಾವರೀಂ ಗತ್ವಾ ನದೀಂ ನರವರಾತ್ಮಜೌ ॥ ೩೫

ಉದಕಂ ಚಕ್ರತುಸ್ತಸ್ಮೈ ಗೃಧ್ರರಾಜಾಯ ತಾವುಭೌ ।
ಶಾಸ್ತ್ರದೃಷ್ಟೇನ ವಿಧಿನಾ ಜಲಂ ಗೃಧ್ರಾಯ ರಾಘವೌ ॥ ೩೬

ಸ್ನಾತ್ವಾ ತೌ ಗೃಧ್ರರಾಜಾಯ ಉದಕಂ ಚಕ್ರತುಸ್ತದಾ ॥

ಸ ಗೃಧ್ರರಾಜಃ ಕೃತವಾನ್ ಯಶಸ್ಕರಂ
ಸುದುಷ್ಕರಂ ಕರ್ಮ ರಣೇ ನಿಪಾತಿತಃ ।

---

ತನ್ನ ಬಂಧುವಿಗೆ ದಹನಸಂಸ್ಕಾರ ಮಾಡುವಂತೆ ದುಃಖಿಸುತ್ತ, ಚಿತೆಗೆ ಅಗ್ನಿಸ್ಪರ್ಶಮಾಡಿ ದಹಿಸಿದನು. ಆಮೇಲೆ ಲಕ್ಷ್ಮಣನೊಡನೆ ವನದೊಳಗೆ ಹೋಗಿ ದೊಡ್ಡ ದೊಡ್ಡ ಜಿಂಕೆಗಳನ್ನು ಕೊಂದು ತಂದು ಜಟಾಯುವಿಗೆ ಪಿಂಡವನ್ನರ್ಪಿಸುವುದಕ್ಕಾಗಿ ದರ್ಭೆಗಳನ್ನು ಹರಡಿದನು. ಜಿಂಕೆಗಳ ಮಾಂಸ ದಿಂದ ಪಿಂಡಗಳನ್ನು ನಿರ್ಮಿಸಿದನು (೩೨–೩೩). ಶ್ರೀರಾಮನು ಹಚ್ಚನೆಯ ಹುಲ್ಲುಗಾವಲಿನಲ್ಲಿ ಆ ಪಕ್ಷಿಗೆ ಪಿಂಡಗಳನ್ನರ್ಪಿಸಿದನು. ಮೃತನಾದ ಮನುಷ್ಯನಿಗೆ ಸದ್ಗತಿಯಾಗಲೆಂದು ಯಾವ ಪಿತೃಮೇಧಮಂತ್ರಗಳನ್ನು ದ್ವಿಜರು ಹೇಳಿದ್ದಾರೆಯೋ ಆ ಮಂತ್ರಗಳನ್ನು ಶ್ರೀರಾಮನು ಜಪಿಸಿದನು. ಅನಂತರ ಶ್ರೀರಾಮಲಕ್ಷ್ಮಣರಿಬ್ಬರೂ ಗೋದಾವರೀನದಿಗೆ ಹೋದರು (೩೪–೩೫). ಅಲ್ಲಿ ಅವರಿಬ್ಬರೂ ಸ್ನಾನಮಾಡಿ ಶಾಸ್ತ್ರೋಕ್ತವಾದ ವಿಧಿಯಂತೆ ಜಟಾಯುವಿಗೆ ಜಲತರ್ಪಣವನ್ನಿತ್ತರು * (೩೬). ಆ ಗೃಧ್ರರಾಜನು

---

* 'ಪಾಠಕ್ರಮಾದರ್ಥಕ್ರಮೋ ಬಲೀಯಾನ್' ಎಂಬ ನ್ಯಾಯವುಂಟು. ಆದ್ದರಿಂದ ಮೊದಲು ದಹನ, ಸ್ನಾನ, ತರ್ಪಣ, ಅನಂತರ ಪಿಂಡದಾನ ಎಂಬ ಕ್ರಮ ವನ್ನು ಊಹಿಸಿಕೊಳ್ಳಬೇಕು. ಮನುಷ್ಯೇತರಪ್ರಾಣಿಗೂ ಸ್ನೇಹದಿಂದ ದಾಹಾದಿ ಸಂಸ್ಕಾರವನ್ನು ಮಾಡಬಹುದೆಂದು ಈ ಪ್ರಕರಣದಿಂದ ವ್ಯಕ್ತವಾಗುತ್ತದೆ.

ಮಹರ್ಷಿಕಲ್ಪೇನ ಚ ಸಂಸ್ಕೃತಸ್ತದಾ
ಜಗಾಮ ಪುಣ್ಯಾಂ ಗತಿಮಾತ್ಮನಃ ಶುಭಾಮ್ ॥ ೩೭

ಕೃತೋದಕೌ ತಾವಪಿ ಪಕ್ಷಿಸತ್ತಮೇ
ಸ್ಥಿರಾಂ ಚ ಬುದ್ಧಿಂ ಪ್ರಣಿಧಾಯ ಜಗ್ಮತುಃ ।
ಪ್ರವೇಶ್ಯ ಸೀತಾಧಿಗಮೇ ತತೋ ಮನೋ
ವನಂ ಸುರೇಂದ್ರಾವಿವ ವಿಷ್ಣುವಾಸವೌ ॥ ೩೮

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಅಷ್ಟಷಷ್ಟಿತಮಃ ಸರ್ಗಃ

ಯಶಸ್ಕರವೂ ಅನ್ಯದುಷ್ಕರವೂ ಆದ ಕಾರ್ಯವನ್ನು ರಣರಂಗದಲ್ಲಿ ಮಾಡಿ ಮಡಿದನು. ಆಮೇಲೆ ಮಹರ್ಷಿಸದೃಶನಾದ ಶ್ರೀರಾಮನಿಂದ ಉತ್ತರಕ್ರಿಯೆಯನ್ನು ಪಡೆದು ಶುಭಕರವಾದ ಪುಣ್ಯಲೋಕವನ್ನು ಸೇರಿದನು (೩೭). ಶ್ರೀರಾಮಲಕ್ಷ್ಮಣರು ಆ ಪಕ್ಷಿರಾಜನಿಗೆ ಉದಕಕ್ರಿಯೆಯನ್ನು ನಡೆಸಿ ಮುಂದೆ ಹೊರಟರು. ಜಟಾಯು ಮಾಡಿದ ಉಪಕಾರದ ಸ್ಮರಣೆಯು ಅವರ ಹೃದಯದಲ್ಲಿ ಸ್ಥಿರವಾಗಿ ನಿಂತಿತು. ದೇವತೆಗಳಿಗೆ ಅಧೀಶ್ವರರಾದ ಮಹೇಂದ್ರೋಪೇಂದ್ರರಂತಿದ್ದ ಆ ರಾಜಪುತ್ರರು ಸೀತಾದೇವಿಯನ್ನು ಅರಸುವುದಕ್ಕಾಗಿ ವನದಲ್ಲಿ ಪ್ರಯಾಣಮಾಡಿದರು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೆಂಟನೆಯ ಸರ್ಗ

## ಏಕೋನಸಪ್ತತಿತಮಃ ಸರ್ಗಃ

### ಕಬಂಧಗ್ರಾಹಃ

ಕೃತ್ವೈವಮುದಕಂ ತಸ್ಮೈ ಪ್ರಸ್ಥಿತೌ ರಾಮಲಕ್ಷ್ಮಣೌ ।
ಅವೇಕ್ಷಂತೌ ವನೇ ಸೀತಾಂ ಪಶ್ಚಿಮಾಂ ಜಗ್ಮತುರ್ದಿಶಮ್ ॥ ೧

ತೌ ದಿಶಂ ದಕ್ಷಿಣಾಂ ಗತ್ವಾ ಶರಚಾಪಾಸಿಧಾರಿಣೌ ।
ಅವಿಪ್ರಹತಮೈಕ್ಷ್ವಾಕೌ ಪಂಥಾನಂ ಪ್ರತಿಜಗ್ಮತುಃ ॥ ೨

ಗುಲ್ಮೈರ್ವೃಕ್ಷೈಶ್ಚ ಬಹುಭಿರ್ಲತಾಭಿಶ್ಚ ಪ್ರವೇಷ್ಟಿತಮ್ ।
ಆವೃತಂ ಸರ್ವತೋ ದುರ್ಗಂ ಗಹನಂ ಘೋರದರ್ಶನಮ್ ॥ ೩

ವ್ಯತಿಕ್ರಮ್ಯ ತು ವೇಗೇನ ಗೃಹೀತ್ವಾ ದಕ್ಷಿಣಾಂ ದಿಶಮ್ ।
ಸುಭೀಮಂ ತನ್ಮಹಾರಣ್ಯಂ ವ್ಯತಿಯಾತೌ ಮಹಾಬಲೌ ॥ ೪

ತತಃ ಪರಂ ಜನಸ್ಥಾನಾತ್ತ್ರಿಕ್ರೋಶಂ ಗಮ್ಯ ರಾಘವೌ ।
ಕ್ರೌಂಚಾರಣ್ಯಂ ವಿವಿಶತುರ್ಗಹನಂ ತೌ ಮಹೌಜಸೌ ॥ ೫

### ಸರ್ಗ ೬೯

ಅಯೋಮುಖಿ ಎಂಬ ರಾಕ್ಷಸಿಯ ಪ್ರಸಂಗ. ಕಬಂಧನು ತನ್ನ ಬಾಹುಗಳಿಂದ ಶ್ರೀರಾಮಲಕ್ಷ್ಮಣರನ್ನು ಬಂಧಿಸುವುದು.

ಶ್ರೀರಾಮಲಕ್ಷ್ಮಣರು ಜಟಾಯುವಿಗೆ ಉದಕಕ್ರಿಯೆಯನ್ನು ಮಾಡಿ ಸೀತೆಯನ್ನು ಅನ್ವೇಷಿಸುತ್ತ ದಕ್ಷಿಣದಿಕ್ಕಿಗೆ ಹೋಗುವಾಗ ಸ್ವಲ್ಪ ಪಶ್ಚಿಮದ ಕಡೆಗೆ ವಾಲಿದರು. * ಅವರು ಶರ, ಚಾಪ, ಖಡ್ಗಗಳನ್ನು ಧರಿಸಿ ಜನಸಂಚಾರ ಶೂನ್ಯವಾದ ದಾರಿಯನ್ನು ಹಿಡಿದು ಹೋಗುತ್ತಿದ್ದರು (೧–೨). ಆ ವನ ಮಾರ್ಗವು ಪೊದೆ, ಮರ, ಬಳ್ಳಿಗಳಿಂದ ನಿಬಿಡವಾಗಿ ದುರ್ಗಮವೂ ಭಯಾನಕವೂ ಆಗಿತ್ತು. ಬಲಾಢ್ಯರಾದ ಆ ವೀರರು ದಟ್ಟವಾದ ಆ ಗೊಂಡಾರಣ್ಯವನ್ನು ಬೇಗಬೇಗನೆ ಅತಿಕ್ರಮಿಸುತ್ತ ದಕ್ಷಿಣದಿಕ್ಕನ್ನು ಹಿಡಿದು ಹೋಗುತ್ತಿದ್ದರು (೩–೪). ರಘುಕುಲೋತ್ಪನ್ನರಾದ ಆ ಓಜಸ್ವಿಗಳು ಜನಸ್ಥಾನದಿಂದ ಮೂರು ಹರದಾರಿಗಳಷ್ಟು ದೂರವನ್ನತಿಕ್ರಮಿಸಿ ಗಭೀರ

---

* ನೈರ್ಋತ್ಯದಿಕ್ಕಿಗೆ ಹೋದರೆಂದು ಅಭಿಪ್ರಾಯ.

ನಾನಾಮೇಘಘನಪ್ರಖ್ಯಂ ಪ್ರಹೃಷ್ಟಮಿವ ಸರ್ವತಃ ।
ನಾನಾವರ್ಣೈಃ ಶುಭೈಃ ಪುಷ್ಪೈಃ ಮೃಗಪಕ್ಷಿಗಣೈರ್ವೃತಮ್ ॥ ೬

ದಿದೃಕ್ಷಮಾಣೌ ವೈದೇಹೀಂ ತದ್ವನಂ ತೌ ವಿಚಿಕ್ಯತುಃ ।
ತತ್ರ ತತ್ರಾವತಿಷ್ಠಂತೌ ಸೀತಾಹರಣಕರ್ಶಿತೌ ॥ ೭

ತತಃ ಪೂರ್ವೇಣ ತೌ ಗತ್ವಾ ತ್ರಿಕ್ರೋಶಂ ಭ್ರಾತರೌ ತದಾ ।
ಕ್ರೌಂಚಾರಣ್ಯಮತಿಕ್ರಮ್ಯ ಮತಂಗಾಶ್ರಮಮಂತರೇ ॥ ೮

ದೃಷ್ಟ್ವಾ ತು ತದ್ವನಂ ಘೋರಂ ಬಹುಭೀಮಮೃಗದ್ವಿಜಮ್ ।
ನಾನಾಸತ್ತ್ವಸಮಾಕೀರ್ಣಂ ಸರ್ವಂ ಗಹನಪಾದಪಮ್ ॥ ೯

ದದೃಶಾತೇ ಗಿರೌ ತತ್ರ ದರೀಂ ದಶರಥಾತ್ಮಜೌ ।
ಪಾತಾಲಸಮಗಂಭೀರಾಂ ತಮಸಾ ನಿತ್ಯಸಂವೃತಾಮ್ ॥ ೧೦

ಆಸಾದ್ಯ ತೌ ನರವ್ಯಾಘ್ರೌ ದರ್ಯಾಸ್ತಸ್ಯಾವಿದೂರತಃ ।
ದದೃಶಾತೇ ಮಹಾರೂಪಾಂ ರಾಕ್ಷಸೀಂ ವಿಕೃತಾನನಾಮ್ ॥ ೧೧

---

ವಾದ ಕ್ರೌಂಚಾರಣ್ಯವನ್ನು ಪ್ರವೇಶಿಸಿದರು. ಆ ಕ್ರೌಂಚಾರಣ್ಯವು ನಾನಾ ವರ್ಣದ ಮೇಘಸಮೂಹದಂತೆ ವೃಕ್ಷನಿಬಿಡವಾಗಿ ವಿವಿಧವರ್ಣದ ಸುಂದರ ಕುಸುಮಗಳಿಂದಲೂ ಮೃಗಪಕ್ಷಿಗಳಿಂದಲೂ ತುಂಬಿ ನಲಿಯುವಂತಿತ್ತು (೫–೬). ಸೀತಾಪಹರಣದಿಂದ ಖಿನ್ನರಾದ ಆ ರಾಜಪುತ್ರರು ವೈದೇಹಿಗಾಗಿ ಆ ವನವನ್ನು ಶೋಧಿಸುತ್ತ, ಅಲ್ಲಲ್ಲಿ ವಿಶ್ರಮಿಸಿಕೊಳ್ಳುತ್ತ ನಡೆದರು. ಆ ಸೋದರರು ಕ್ರೌಂಚಾರಣ್ಯವನ್ನು ದಾಟಿ ಮತಂಗಾಶ್ರಮದ ಪೂರ್ವದಿಕ್ಕಿನಲ್ಲಿ (ದಕ್ಷಿಣದ ಕಡೆಗೆ) ಮೂರು ಹರದಾರಿ ನಡೆದು ಮಧ್ಯದಲ್ಲಿ ಇನ್ನೊಂದು ವನವನ್ನು ಕಂಡರು (೭–೮). ಭೀಕರವಾದ ವನ್ಯಮೃಗಗಳಿಂದಲೂ ಪಕ್ಷಿಗಳಿಂದಲೂ ಸರ್ಪ ಮುಂತಾದ ನಾನಾ ಜಂತುಗಳಿಂದಲೂ ತುಂಬಿ, ಮರಗಳಿಂದ ದಟ್ಟವಾಗಿದ್ದ ಆ ವನವು ಘೋರವಾಗಿತ್ತು. ಅಲ್ಲಿದ್ದ ಒಂದು ಬೆಟ್ಟದಲ್ಲಿ ಆ ದಶರಥಕುಮಾರರಿಗೆ ಒಂದು ದರಿಯು ಗೋಚರಿಸಿತು. ಆ ದರಿಯು ಪಾತಾಳಕ್ಕೆ ಹೋಗಿದೆಯೋ ಎಂಬಂತೆ ಬಹಳ ಆಳವಾಗಿದ್ದು ಕತ್ತಲಿಂದ ವ್ಯಾಪ್ತವಾಗಿತ್ತು (೯–೧೦). ಪುರುಷಶ್ರೇಷ್ಠರಾದ ಶ್ರೀರಾಮಲಕ್ಷ್ಮಣರು ಅದರ ಬಳಿಗೆ ಹೋದರು. ಅದರ ಸಮೀಪದಲ್ಲಿ ಅವರಿಗೆ ಒಬ್ಬ ರಾಕ್ಷಸಿಯು

ಭಯದಾಮಲ್ಪಸತ್ತ್ವಾನಾಂ ಬೀಭತ್ಸಾಂ ರೌದ್ರದರ್ಶನಾಮ್ ।
ಲಂಬೋದರೀಂ ತೀಕ್ಷ್ಣದಂಷ್ಟ್ರಾಂ ಕರಾಲಾಂ ಪರುಷತ್ವಚಮ್ ॥ ೧೨

ಭಕ್ಷಯಂತೀಂ ಮೃಗಾನ್ ಭೀಮಾನ್ ವಿಕಟಾಂ ಮುಕ್ತಮೂರ್ಧಜಾಂ ।
ಪ್ರೈಕ್ಷೇತಾಂ ತೌ ತತಸ್ತತ್ರ ಭ್ರಾತರೌ ರಾಮಲಕ್ಷ್ಮಣೌ ॥ ೧೩

ಸಾ ಸಮಾಸಾದ್ಯ ತೌ ವೀರೌ ವ್ರಜಂತಂ ಭ್ರಾತುರಗ್ರತಃ ।
ಏಹಿ ರಂಸ್ಯಾವಹೇತ್ಯುಕ್ತ್ವಾ ಸಮಾಲಂಬತ ಲಕ್ಷ್ಮಣಮ್ ॥ ೧೪

ಉವಾಚ ಚೈನಂ ವಚನಂ ಸೌಮಿತ್ರಿಮುಪಗೂಹ್ಯ ಸಾ ।
ಅಹಂ ತ್ವಯೋಮುಖೀ ನಾಮ ಲಾಭಸ್ತೇ ತ್ವಮಸಿ ಪ್ರಿಯಃ ॥ ೧೫

ನಾಥ ಪರ್ವತಕೂಟೇಷು ನದೀನಾಂ ಪುಲಿನೇಷು ಚ ।
ಆಯುಃಶೇಷಮಿಮಂ ವೀರ ತ್ವಂ ಮಯಾ ಸಹ ರಂಸ್ಯಸೇ ॥ ೧೬

ಏವಮುಕ್ತಸ್ತು ಕುಪಿತಃ ಖಡ್ಗಮುದ್ಧೃತ್ಯ ಲಕ್ಷ್ಮಣಃ ।
ಕರ್ಣನಾಸಸ್ತನಂ ಚಾಸ್ಯಾ ನಿಚಕರ್ತಾರಿಸೂದನಃ ॥ ೧೭

---

ಕಾಣಿಸಿದಳು! ಮಹಾಶರೀರದ ಆ ರಾಕ್ಷಸಿಯ ಮುಖವು ವಿಕಾರವಾಗಿತ್ತು (೧೧). ಜುಗುಪ್ಸೆಯನ್ನು ಹುಟ್ಟಿಸುವ ಅವಳ ಘೋರಾಕೃತಿಯನ್ನು ನೋಡಿದರೆ ಸಾಮಾನ್ಯಜನರು ಹೆದರಿ ತತ್ತರಿಸಿಹೋಗುತ್ತಿದ್ದರು. ಜೋಲು ಹೊಟ್ಟೆಯ ಆ ಕರಾಳಿಗೆ ತೀಕ್ಷ್ಣವಾದ ಕೋರೆಯಹಲ್ಲುಗಳಿದ್ದವು. ಅವಳ ಚರ್ಮವು ದೊರಗುದೊರಗಾಗಿದ್ದಿತು. ಸೊಟ್ಟಸೊಟ್ಟಾದ ಬೊಜ್ಜು ದೇಹದ ಆ ರಾಕ್ಷಸಿಯು ಕೂದಲನ್ನು ಕೆದರಿಕೊಂಡು ಕ್ರೂರಮೃಗಗಳನ್ನು ತಿನ್ನುತ್ತ ಕುಳಿತಿರುವುದನ್ನು ರಾಮಲಕ್ಷ್ಮಣರು ನೋಡಿದರು (೧೨–೧೩). ಲಕ್ಷ್ಮಣನು ಶ್ರೀರಾಮನ ಮುಂದುಗಡೆ ಹೋಗುತ್ತಿದ್ದನು. ಆ ರಾಕ್ಷಸಿಯು ನೇರವಾಗಿ ಅವರೆಡೆಗೆ ಬಂದು ಲಕ್ಷ್ಮಣನನ್ನು ನೋಡಿ "ಬಾ! ನಾವಿಬ್ಬರೂ ಆನಂದದಿಂದ ವಿಹರಿಸೋಣ!" ಎಂದು ಹೇಳುತ್ತ ಅವನನ್ನು ಹಿಡಿದುಕೊಂಡಳು! (೧೪). ಅವಳು ಲಕ್ಷ್ಮಣನನ್ನು ಅಪ್ಪಿಕೊಂಡು "ನಾನು ಅಯೋಮುಖಿ ಎಂಬವಳು. ನಾನು ದೊರಕಿದ್ದು ನಿನಗೆ ದೊಡ್ಡ ಲಾಭ! ನಿನ್ನಲ್ಲಿ ನನಗೆ ಪ್ರೀತಿಯುಂಟಾಗಿದೆ! ನಾಥ, ಗಿರಿಶೃಂಗಗಳಲ್ಲಿಯೂ ನದಿಗಳ ಮರಳುದಿಣ್ಣೆಗಳಲ್ಲಿಯೂ ನನ್ನೊಡನೆ ವಿಹರಿಸು! ವೀರಾಗ್ರೇಸರ, ನಿನ್ನ ಆಯುಸ್ಸೆಲ್ಲವನ್ನೂ ನನ್ನೊಂದಿಗೆ ರಮಿಸುತ್ತ ಕಳೆಯಬಹುದು!" ಎಂದಳು (೧೫–೧೬). ಆಗ ಲಕ್ಷ್ಮಣನು

ಕರ್ಣನಾಸೇ ನಿಕೃತ್ತೇ ತು ವಿಸ್ವರಂ ಸಾ ವಿನದ್ಯ ಚ ।
ಯಥಾಗತಂ ಪ್ರದುದ್ರಾವ ರಾಕ್ಷಸೀ ಭೀಮದರ್ಶನಾ ॥ ೧೮

ತಸ್ಯಾಂ ಗತಾಯಾಂ ಗಹನಂ ವಿಶಂತೌ ವನಮೋಜಸಾ ।
ಆಸೇದತುರಮಿತ್ರಘ್ನೌ ಭ್ರಾತರೌ ರಾಮಲಕ್ಷ್ಮಣೌ ॥ ೧೯

ಲಕ್ಷ್ಮಣಸ್ತು ಮಹಾತೇಜಾಃ ಸತ್ತ್ವವಾನ್ ಶೀಲವಾನ್ ಶುಚಿಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಭ್ರಾತರಂ ದೀಪ್ತತೇಜಸಮ್ ॥ ೨೦

ಸ್ಪಂದತೇ ಮೇ ದೃಢಂ ಬಾಹುರುದ್ವಿಗ್ನಮಿವ ಮೇ ಮನಃ ।
ಪ್ರಾಯಶಶ್ಚಾಪ್ಯನಿಷ್ಟಾನಿ ನಿಮಿತ್ತಾನ್ಯುಪಲಕ್ಷಯೇ ॥ ೨೧

ತಸ್ಮಾತ್ ಸಜ್ಜೀಭವಾರ್ಯ ತ್ವಂ ಕುರುಷ್ವ ವಚನಂ ಹಿತಮ್ ।
ಮಮೈವ ಹಿ ನಿಮಿತ್ತಾನಿ ಸದ್ಯಃ ಶಂಸಂತಿ ಸಂಭ್ರಮಮ್ ॥ ೨೨

ಏಷ ವಂಚುಲಕೋ ನಾಮ ಪಕ್ಷೀ ಪರಮದಾರುಣಃ ।
ಆವಯೋರ್ವಿಜಯಂ ಯುದ್ಧೇ ಶಂಸನ್ನಿವ ವಿನರ್ದತಿ ॥ ೨೩

---

ಕ್ರುದ್ಧನಾಗಿ ಖಡ್ಗವನ್ನು ಸೆಳೆದು ಆ ರಾಕ್ಷಸಿಯ ಕಿವಿ ಮೂಗು ಮೊಲೆಗಳನ್ನು ಕೊಯ್ದು ಹಾಕಿದನು. ಕಿವಿ ಮೂಗುಗಳನ್ನು ಕೊಯ್ದೊಡನೆ ಅಯೋಮುಖಿಯು ಅಪಸ್ವರದಿಂದ ಅರಚುತ್ತ ಬಂದದಾರಿಹಿಡಿದು ಕಾಡಿನೊಳಗೆ ಓಡಿಹೋದಳು! (೧೬–೧೮). ಅನಂತರ ಶತ್ರುಸಂಹಾರಕರಾದ ರಾಮಲಕ್ಷ್ಮಣರು ತಮ್ಮ ತೇಜೋಬಲದಿಂದ ಯಾವುದನ್ನೂ ಲೆಕ್ಕಿಸದೆ ಆ ವನದಲ್ಲಿ ಮುಂದೆ ಹೋಗುತ್ತಿದ್ದರು. ಆಗ ಮಹಾತೇಜಸ್ವಿಯೂ ಧೀರನೂ ಶೀಲವಂತನೂ ಸಚ್ಚಾರಿತ್ರನೂ ಆದ ಲಕ್ಷ್ಮಣನು ಅಣ್ಣನಿಗೆ ಕೈಮುಗಿದು "ಅಣ್ಣ, ನನ್ನ ಎಡದೋಳು ಸ್ಪಷ್ಟವಾಗಿ ಅದುರುತ್ತಿದೆ. ಮನಸ್ಸು ಕಳವಳಿಸುತ್ತಿದೆ. ಇನ್ನೂ ಕೆಲವು ಕೆಟ್ಟ ಶಕುನಗಳು ತೋರುತ್ತಿವೆ (೧೯–೨೧). ಆದ್ದರಿಂದ, ಅಣ್ಣ, ಸಿದ್ಧನಾಗಿರು. ನನ್ನ ಹಿತವಾಕ್ಯವನ್ನು ನಡೆಸು. ನನಗಾಗುವ ದುರ್ನಿಮಿತ್ತಗಳು ಸದ್ಯದಲ್ಲಿಯೇ ಯಾವುದೋ ಭಯವು ಸನ್ನಿಹಿತವಾಗಿದೆಯೆಂದು ಸೂಚಿಸುತ್ತವೆ (೨೨). ಈ ವಂಚುಲಕಪಕ್ಷಿಯು ಭಯಂಕರವಾಗಿ ಕೂಗುತ್ತಿದೆ. ಮುಂದೆ ನಡೆಯುವ ಯುದ್ಧದಲ್ಲಿ ನಮಗೆ ವಿಜಯವಾಗುವುದೆಂದು ಅದು ಸೂಚಿಸುವಂತಿದೆ" ಎಂದು ನಿವೇದಿಸಿದನು. ಆಮೇಲೆ

*

ತಯೋರನ್ವೇಷತೋರೇವಂ ಸರ್ವಂ ತದ್ವನಮೋಜಸಾ ।
ಸಂಜಜ್ಞೇ ವಿಪುಲಃ ಶಬ್ದಃ ಪ್ರಭಂಜನ್ನಿವ ತದ್ವನಮ್ ॥ ೨೪

ಸಂವೇಷ್ಟಿತಮಿವಾತ್ಯರ್ಥಂ ಗಗನಂ ಮಾತರಿಶ್ವನಾ ।
ವನಸ್ಯ ತಸ್ಯ ಶಬ್ದೋಽಭೂದ್ದಿವಮಾಪೂರಯನ್ನಿವ ॥ ೨೫

ತಂ ಶಬ್ದಂ ಕಾಂಕ್ಷಮಾಣಸ್ತು ರಾಮಃ ಕಕ್ಷೇ ಸಹಾನುಜಃ ।
ದದರ್ಶ ಸುಮಹಾಕಾಯಂ ರಾಕ್ಷಸಂ ವಿಪುಲೋರಸಮ್ ॥ ೨೬

ಆಸೇದತುಸ್ತತಸ್ತತ್ರ ತಾವುಭೌ ಪ್ರಮುಖೇ ಸ್ಥಿತಮ್ ।
ವಿವೃದ್ಧಮಶಿರೋಗ್ರೀವಂ ಕಬಂಧಮುದರೇಮುಖಮ್ ॥ ೨೭

ರೋಮಭಿರ್ನಿಚಿತೈಸ್ತೀಕ್ಷ್ಣೈರ್ಮಹಾಗಿರಿಮಿವೋಚ್ಛ್ರಿತಮ್ ।
ನೀಲಮೇಘನಿಭಂ ರೌದ್ರಂ ಮೇಘಸ್ತನಿತನಿಃಸ್ವನಮ್ ॥ ೨೮

ಅಗ್ನಿಜ್ವಾಲಾನಿಕಾಶೇನ ಲಲಾಟಸ್ಥೇನ ದೀಪ್ಯತಾ ।
ಮಹಾಪಕ್ಷ್ಮೇಣ ಪಿಂಗೇನ ವಿಪುಲೇನಾಯತೇನ ಚ ॥ ೨೯

---

ಅವರಿಬ್ಬರೂ ನಿರ್ಭೀತಿಯಿಂದ ಆ ವನದಲ್ಲಿ ಸೀತಾದೇವಿಯನ್ನು ಅನ್ವೇಷಿಸ ತೊಡಗಿದರು. ಆಗ ಅರಣ್ಯವೇ ಮುರಿದುಬೀಳುವುದೋ ಎಂಬಂತೆ ದೊಡ್ಡ ಗರ್ಜನೆಯೊಂದು ಕೇಳಿಸಿತು (೨೩–೨೪). ಅಂತರಿಕ್ಷವು ಗಾಳಿಯಿಂದ ಸುಯ್ಯನೆ ತುಂಬಿಹೋದಂತಾಯಿತು. ಅರಣ್ಯದಲ್ಲಿ ಸಿಡಿದೆದ್ದ ಶಬ್ದವು ದೇವ ಲೋಕವನ್ನು ವ್ಯಾಪಿಸಿದಂತಾಯಿತು. ಆಗ ಶ್ರೀರಾಮನು ಆ ಶಬ್ದದ ಮೂಲ ವೇನೆಂದು ಅರಿಯುವುದಕ್ಕಾಗಿ ತಮ್ಮನೊಡನೆ ವನದಲ್ಲಿ ಹೋಗುತ್ತಿರುವಾಗ, ಬಹುದೊಡ್ಡ ದೇಹವಿರತಕ್ಕ ವಿಶಾಲವಕ್ಷಃಸ್ಥಳವುಳ್ಳ ಒಬ್ಬ ರಾಕ್ಷಸನು ಗೋಚರಿ ಸಿದನು (೨೫–೨೬). ಅವರೀರ್ವರೂ ಎದುರಿಗೆ ನಿಂತಿದ್ದ ಅವನ ಕಡೆಗೆ ಹೋದರು. ಆ ರಾಕ್ಷಸನು ಮಹಾಕಾಯನಾಗಿದ್ದನಲ್ಲದೆ, ಅವನ ಬಾಯಿ ಹೊಟ್ಟೆಯಲ್ಲಿತ್ತು. ತಲೆ ಮತ್ತು ಕುತ್ತಿಗೆಗಳೆರಡೂ ಇರಲಿಲ್ಲ! ಅವನೊಬ್ಬ ತಲೆಯಿಲ್ಲದ ಕಬಂಧನಾಗಿದ್ದನು (೨೭). ಅವನು ಪರ್ವತದಂತೆ ಉನ್ನತ ನಾಗಿದ್ದನಲ್ಲದೆ ಅವನ ರೋಮಗಳು ಚೂಪಾಗಿ ನಿಮಿರಿ ನಿಂತಿದ್ದವು. ನೀಲ ಮೇಘದಂತೆ ಕರ್ರಗೆ ರೌದ್ರಾಕಾರನಾಗಿ, ಗುಡುಗಿನಂತೆ ಗಟ್ಟಿಯಾಗಿ ಗರ್ಜಿಸು ತ್ತಿದ್ದನು. (ಶಿರಸ್ಸು ಉದರದಲ್ಲಿ ಇದ್ದುದರಿಂದ) ಎದೆಯ ಬಳಿ ಹಣೆಯಲ್ಲಿ

ಏಕೇನೋರಸಿ ಘೋರೇಣ ನಯನೇನಾಶುದರ್ಶಿನಾ ।
ಮಹಾದಂಷ್ಟ್ರೋಪಪನ್ನಂ ತಂ ಲೇಲಿಹಾನಂ ಮಹಾಮುಖಮ್ ॥ ೩೦

ಭಕ್ಷಯಂತಂ ಮಹಾಘೋರಾನೃಕ್ಷಸಿಂಹಮೃಗದ್ವಿಪಾನ್ ।
ಘೋರೌ ಭುಜೌ ವಿಕುರ್ವಾಣಮುಭೌ ಯೋಜನಮಾಯತೌ ॥ ೩೧

ಕರಾಭ್ಯಾಂ ವಿವಿಧಾನ್ ಗೃಹ್ಯ ಋಕ್ಷಾನ್ ಪಕ್ಷಿಗಣಾನ್ ಮೃಗಾನ್ ।
ಆಕರ್ಷಂತಂ ವಿಕರ್ಷಂತಮನೇಕಾನ್ ಮೃಗಯೂಥಪಾನ್ ॥ ೩೨

ಸ್ಥಿತಮಾವೃತ್ಯ ಪಂಥಾನಂ ತಯೋರ್ಭ್ರಾತ್ರೋಃ ಪ್ರಪನ್ನಯೋಃ ।
ಅಥ ತೌ ಸಮಭಿಕ್ರಮ್ಯ ಕ್ರೋಶಮಾತ್ರೇ ದದರ್ಶತುಃ ॥ ೩೩

ಮಹಾಂತಂ ದಾರುಣಂ ಭೀಮಂ ಕಬಂಧಂ ಭುಜಸಂವೃತಮ್ ।
ಕಬಂಧಮಿವ ಸಂಸ್ಥಾನಾದತಿಘೋರಪ್ರದರ್ಶನಮ್ ॥ ೩೪

---

ಒಂದು ಕಣ್ಣು ಅಗ್ನಿಜ್ವಾಲೆಯಂತೆ ಕಂಗೊಳಿಸುತ್ತಿತ್ತು. ಬಹು ದೊಡ್ಡದೂ ನೀಳವೂ ಆದ ಪಿಂಗವರ್ಣದ ಆ ಕಣ್ಣಿಗೆ ವಿಶಾಲವಾದ ರೆಪ್ಪೆಯಿತ್ತು (೨೮–೨೯). ಭೀಕರವಾದ ಆ ಕಣ್ಣಿಗೆ ತೀಕ್ಷ್ಣ ದೃಷ್ಟಿಯಿತ್ತು. ಆ ರಾಕ್ಷಸನು ಕೋರೆದಾಡೆಗಳಿರುವ ಅಗಲವಾದ ಬಾಯನ್ನು ನಾಲಿಗೆಯಿಂದ ನೆಕ್ಕಿ ನೇವರಿಸುತ್ತಿದ್ದನು. ಕರಡಿ, ಸಿಂಹ, ಜಿಂಕೆ, ಆನೆ ಮುಂತಾದ ಮಹಾಮೃಗಗಳನ್ನು ಹಿಡಿದು ಆತನು ಭಕ್ಷಿಸುತ್ತಿದ್ದನು. ಸುಮಾರು ಒಂದು ಯೋಜನ ಉದ್ದವಿದ್ದ ಘೋರಾಕಾರದ ಎರಡು ತೋಳುಗಳನ್ನು ವಿಕಾರವಾಗಿ ನೀಡುತ್ತ ಬಾಗಿಸುತ್ತ ಇದ್ದನು (೩೦–೩೧). ಕರಡಿ, ಪಕ್ಷಿ, ಜಿಂಕೆ ಮುಂತಾದ ವಿವಿಧ ಪ್ರಾಣಿಗಳನ್ನು ಎರಡು ಕೈಗಳಿಂದ ತನ್ನೆಡೆಗೆ ಎಳೆಯುತ್ತ ತಳ್ಳುತ್ತ ಇದ್ದನು. ಆ ರಾಕ್ಷಸನು ಅಣ್ಣತಮ್ಮಂದಿರಾದ ರಾಮಲಕ್ಷ್ಮಣರ ದಾರಿಯನ್ನಡ್ಡಗಟ್ಟಿ ಎದುರಿಗೆ ನಿಂತಿದ್ದನು. ರಾಮಲಕ್ಷ್ಮಣರು ಒಂದು ಹರದಾರಿಯಷ್ಟು ನಡೆದುಹೋದ ಮೇಲೆ ಈ ರೀತಿಯಲ್ಲಿದ್ದ ರಾಕ್ಷಸನು ಗೋಚರಿಸಿದನು (೩೨–೩೩). ಅತ್ಯಂತ ಕ್ರೂರಿಯೂ ಭೀಮಕಾಯನೂ ಆದ ಆ ರಾಕ್ಷಸನು ಬಾಹುಗಳಿಂದ ವನ್ಯ ಪ್ರಾಣಿಗಳನ್ನು ಬಾಚಿಕೊಳ್ಳುತ್ತಿದ್ದನು. ಆ ಘೋರರೂಪಿಯು ಶಿರಸ್ಸಿಲ್ಲದ ಕಬಂಧಾಕಾರನಾದ್ದರಿಂದ ಕಬಂಧನೆಂದು ಹೆಸರುಪಡೆದಿದ್ದನು. (೩೪).

ಸ ಮಹಾಬಾಹುರತ್ಯರ್ಥಂ ಪ್ರಸಾರ್ಯ ವಿಪುಲೌ ಭುಜೌ ।
ಜಗ್ರಾಹ ಸಹಿತಾವೇವ ರಾಘವೌ ಪೀಡಯನ್ ಬಲಾತ್ ॥ ೩೫

ಖಡ್ಗಿನೌ ದೃಢಧನ್ವಾನೌ ತಿಗ್ಮತೇಜೋವಪುರ್ಧರೌ ।
ಭ್ರಾತರೌ ವಿವಶಂ ಪ್ರಾಪ್ತೌ ಕೃಷ್ಯಮಾಣೌ ಮಹಾಬಲೌ ॥ ೩೬

ತತ್ರ ಧೈರ್ಯೇಣ ಶೂರಸ್ತು ರಾಘವೋ ನೈವ ವಿವ್ಯಥೇ ।
ಬಾಲ್ಯಾದನಾಶ್ರಯತ್ವಾಚ್ಚ ಲಕ್ಷ್ಮಣಸ್ತ್ವತಿವಿವ್ಯಥೇ ॥ ೩೭

ಉವಾಚ ಚ ವಿಷಣ್ಣಃ ಸನ್ ರಾಘವಂ ರಾಘವಾನುಜಃ ।
ಪಶ್ಯ ಮಾಂ ವೀರ ವಿವಶಂ ರಾಕ್ಷಸಸ್ಯ ವಶಂ ಗತಮ್ ॥ ೩೮

ಮಯೈಕೇನ ವಿನಿರ್ಮುಕ್ತಃ ಪರಿಮುಂಚಸ್ವ ರಾಘವ ।
ಮಾಂ ಹಿ ಭೂತಬಲಿಂ ದತ್ತ್ವಾ ಪಲಾಯಸ್ವ ಯಥಾಸುಖಮ್ ॥ ೩೯

ಅಧಿಗಂತಾಸಿ ವೈದೇಹೀಮಚಿರೇಣೇತಿ ಮೇ ಮತಿಃ ।
ಪ್ರತಿಲಭ್ಯ ಚ ಕಾಕುತ್ಸ್ಥ ಪಿತೃಪೈತಾಮಹೀಂ ಮಹೀಮ್ ॥ ೪೦

---

ಆಗ ದೀರ್ಘಬಾಹುವಾದ ಕಬಂಧನು ನೀಳವಾದ ತನ್ನ ಕೈಗಳನ್ನು ಚಾಚಿ ರಾಮಲಕ್ಷ್ಮಣರನ್ನು ಬಲವಾಗಿ ಅಮುಕಿಹಿಡಿದನು. ಖಡ್ಗಧಾರಿಗಳೂ ಧನುಷ್ಪಾಣಿಗಳೂ ಪ್ರಖರತೇಜೋವಂತರೂ ಆದ ಆ ಸೋದರರು ಮಹಾಬಲಾಢ್ಯರಾದರೂ ಕಬಂಧನ ಎಳೆತಕ್ಕೆ ಸಿಕ್ಕಿ ವಿವಶರಾದರು (೩೫–೩೬). ಆ ಸಮಯದಲ್ಲಿ ಶೂರನಾದ ಶ್ರೀರಾಮನು ಧೈರ್ಯವನ್ನವಲಂಬಿಸಿ ಸ್ವಲ್ಪವೂ ವ್ಯಥೆಪಡದೆ ಇದ್ದನು. ಆದರೆ ಲಕ್ಷ್ಮಣನು ಶ್ರೀರಾಮನ ಆಶ್ರಯವೂ ತಪ್ಪಿತೆಂದು ಧೈರ್ಯಗೆಟ್ಟು ಬಹಳ ವಿಷಣ್ಣನಾದನು (೩೭). ಅವನು ರಾಘವನನ್ನು ಕುರಿತು "ಅಣ್ಣ, ನಾನು ರಾಕ್ಷಸನ ವಶವಾಗಿರುವುದನ್ನು ನೋಡು! ನಾನು ಪರಾಧೀನನಾದೆ! ನೀನು ನನ್ನೊಬ್ಬನಿಂದ ವಿಯುಕ್ತನಾಗಿ ನಿನ್ನನ್ನು ತಪ್ಪಿಸಿಕೊ. ನನ್ನನ್ನು ಭೂತಬಲಿಯಾಗಿ ಕೊಟ್ಟು ಸುಖವೆನಿಸಿದ ಕಡೆಗೆ ಪಲಾಯನಮಾಡು (೩೮–೩೯). ಶೀಘ್ರದಲ್ಲಿ ವೈದೇಹಿಯು ನಿನಗೆ ದೊರೆಯುವಳೆಂದು ನನ್ನ ನಂಬಿಕೆ. ಶ್ರೀರಾಮ, ವಂಶಪರಂಪರೆಯಿಂದ ಬಂದ ರಾಜ್ಯದಲ್ಲಿ ನೀನು ನೆಲೆಸಿದಾಗ ನನ್ನನ್ನು ಸ್ಮರಿಸಿಕೊಳ್ಳುತ್ತಿರು!"

ತತ್ರ ಮಾಂ ರಾಮ ರಾಜ್ಯಸ್ಥಃ ಸ್ಮರ್ತುಮರ್ಹಸಿ ಸರ್ವದಾ ।
ಲಕ್ಷ್ಮಣೇನೈವಮುಕ್ತಸ್ತು ರಾಮಃ ಸೌಮಿತ್ರಿಮಬ್ರವೀತ್ ॥ ೪೧

ಮಾ ಸ್ಮ ತ್ರಾಸಂ ಕೃಥಾ ವೀರ ನ ಹಿ ತ್ವಾದೃಗ್ವಿಷೀದತಿ ।
ಏತಸ್ಮಿನ್ನಂತರೇ ಕ್ರೂರೋ ಭ್ರಾತರೌ ರಾಮಲಕ್ಷ್ಮಣೌ ॥ ೪೨

ಪಪ್ರಚ್ಛ ಘನನಿರ್ಘೋಷಃ ಕಬಂಧೋ ದಾನವೋತ್ತಮಃ ।
ಕೌ ಯುವಾಂ ವೃಷಭಸ್ಕಂಧೌ ಮಹಾಖಡ್ಗಧನುರ್ಧರೌ ॥ ೪೩

ಘೋರಂ ದೇಶಮಿಮಂ ಪ್ರಾಪ್ತೌ ದೈವೇನ ಮಮ ಚಾಕ್ಷುಷೌ ।
ವದತಂ ಕಾರ್ಯಮಿಹ ವಾಂ ಕಿಮರ್ಥಂ ಚಾಗತೌ ಯುವಾಮ್ ॥ ೪೪

ಇಮಂ ದೇಶಮನುಪ್ರಾಪ್ತೌ ಕ್ಷುಧಾರ್ತಸ್ಯೇಹ ತಿಷ್ಠತಃ ।
ಸಬಾಣಚಾಪಖಡ್ಗೌ ಚ ತೀಕ್ಷ್ಣಶೃಂಗಾವಿವರ್ಷಭೌ ॥ ೪೫

ಮಮಾಸ್ಯಮನುಸಂಪ್ರಾಪ್ತೌ ದುರ್ಲಭಂ ಜೀವಿತಂ ಪುನಃ ।
ತಸ್ಯ ತದ್ವಚನಂ ಶ್ರುತ್ವಾ ಕಬಂಧಸ್ಯ ದುರಾತ್ಮನಃ ॥ ೪೬

---

ಎಂದು ಹಲುಬಿದನು. ಆಗ ಶ್ರೀರಾಮನು "ವೀರಾಗ್ರಣಿ–ಲಕ್ಷ್ಮಣ, ಅಂಜಬೇಡ. ನಿನ್ನಂತಹ ಶೂರನು ಹೀಗೆ ವ್ಯಥೆಪಡಬಾರದು" ಎಂದು ಹೇಳಿದನು (೪೦–೪೧). ಅಷ್ಟರಲ್ಲಿ ಕಬಂಧನೆಂಬ ಆ ದಾನವನು ರಾಮ ಲಕ್ಷ್ಮಣರನ್ನುದ್ದೇಶಿಸಿ ಗುಡುಗಿನಂತೆ ಗಂಭೀರವಾದ ಸ್ವರದಿಂದ "ಎಲೈ, ಯಾರು ನೀವು? ಗೂಳಿಯ ಹೆಗಲಂತೆ ಹೆಗಲುಳ್ಳ ನೀವು ಖಡ್ಗವನ್ನೂ ಧನುಸ್ಸನ್ನೂ ಹಿಡಿದಿದ್ದೀರಿ. ಭಯಂಕರವಾದ ಈ ಅರಣ್ಯಕ್ಕೆ ಬಂದು ನನ್ನ ಸುದೈವದಿಂದ ಕಣ್ಣಿಗೆ ಬಿದ್ದಿರಿ! ಎಲೈ, ಮಾತಾಡಿರಿ! ನೀವು ಇಲ್ಲಿ ಮಾಡ ಬೇಕಾದ್ದೇನಿದೆ? ಏಕೆ ಬಂದಿದ್ದೀರಿ? (೪೨–೪೪). ಇಲ್ಲಿ ನಾನು ಹಸಿದು ನಿಂತಿರಲಾಗಿ ನನ್ನ ಭಾಗ್ಯದಿಂದ ಬಂದಿದ್ದೀರಿ! ಬಾಣ ಬಿಲ್ಲು ಕತ್ತಿಗಳನ್ನು ಹಿಡಿದಿದ್ದರೂ ನೀವು ನನಗೆ ಹರಿತವಾದ ಕೊಂಬುಗಳಿರುವ ಎರಡು ಗೂಳಿ ಗಳಿದ್ದಂತೆಯೇ ಸರಿ! (೪೫). ನನ್ನ ಬಾಯಿಗೆ ತುತ್ತಾದಿರಿ! ನೀವು ಬದುಕುವುದು ಅಶಕ್ಯ" ಎಂದನು. ದುರಾತ್ಮನಾದ ಕಬಂಧನ ನುಡಿಯನ್ನು ಕೇಳಿ ಶ್ರೀರಾಮನ ಮುಖವು ಕಾಂತಿಗುಂದಿತು. ಅವನು ಲಕ್ಷ್ಮಣನಿಗೆ

ಉವಾಚ ಲಕ್ಷ್ಮಣಂ ರಾಮೋ ಮುಖೇನ ಪರಿಶುಷ್ಯತಾ ।
ಕೃಚ್ಛ್ರಾತ್ ಕೃಚ್ಛ್ರತರಂ ಪ್ರಾಪ್ಯ ದಾರುಣಂ ಸತ್ಯವಿಕ್ರಮ ॥ ೪೭
ವ್ಯಸನಂ ಜೀವಿತಾಂತಾಯ ಪ್ರಾಪ್ತಮಪ್ರಾಪ್ಯ ತಾಂ ಪ್ರಿಯಾಮ್ ।
ಕಾಲಸ್ಯ ಸುಮಹದ್ವೀರ್ಯಂ ಸರ್ವಭೂತೇಷು ಲಕ್ಷ್ಮಣ ॥ ೪೮
ತ್ವಾಂ ಚ ಮಾಂ ಚ ನರವ್ಯಾಘ್ರ ವ್ಯಸನೈಃ ಪಶ್ಯ ಮೋಹಿತೌ ।
ನಾಽತಿಭಾರೋಽಸ್ತಿ ದೈವಸ್ಯ ಸರ್ವಭೂತೇಷು ಲಕ್ಷ್ಮಣ ॥ ೪೯
ಶೂರಾಶ್ಚ ಬಲವಂತಶ್ಚ ಕೃತಾಸ್ತ್ರಾಶ್ಚ ರಣಾಜಿರೇ ।
ಕಾಲಾಭಿಪನ್ನಾಃ ಸೀದಂತಿ ಯಥಾ ವಾಲುಕಸೇತವಃ ॥ ೫೦

ಇತಿ ಬ್ರುವಾಣೋ ದೃಢಸತ್ಯವಿಕ್ರಮೋ
ಮಹಾಯಶಾ ದಾಶರಥಿಃ ಪ್ರತಾಪವಾನ್ ।
ಅವೇಕ್ಷ್ಯ ಸೌಮಿತ್ರಿಮುದಗ್ರಪೌರುಷಂ
ಸ್ಥಿರಾಂ ತದಾ ಸ್ವಾಂ ಮತಿಮಾತ್ಮನಾಕರೋತ್ ॥ ೫೧

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕೋನಸಪ್ತತಿತಮಃ ಸರ್ಗಃ

---

"ಲಕ್ಷ್ಮಣ, ನಿನ್ನ ಊಹೆ ಸತ್ಯವಾಯಿತು. ಕಷ್ಟದಮೇಲೆ ಕಷ್ಟವನ್ನನುಭವಿಸುತ್ತಿರುವ ನಮಗೆ ಸೀತೆಯೂ ದೊರಕದೆ, ಈಗ ದಾರುಣವಾದ ಪ್ರಾಣಸಂಕಟವೂ ಪ್ರಾಪ್ತವಾಯಿತು (೪೬–೪೭). ಸಕಲಪ್ರಾಣಿಗಳಲ್ಲಿಯೂ ದುರ್ನಿವಾರವಾಗಿ ಮೆರೆಯುವ ಕಾಲದ ಮಹಿಮೆಯನ್ನು ನೋಡು! ನೀನೂ ನಾನೂ ವ್ಯಸನಪರಂಪರೆಗಳಿಂದ ಕಂಗೆಟ್ಟುಹೋದೆವು. ಲಕ್ಷ್ಮಣ, ದೈವಕ್ಕೆ ಭಾರವಾದದ್ದು–ಅಸಾಧ್ಯವಾದದ್ದು ಎಂಬುದೇ ಇಲ್ಲ (೪೮–೪೯). ರಣರಂಗದಲ್ಲಿ ಶೂರರೂ ಬಲಾಢ್ಯರೂ ಅಸ್ತ್ರವಿದ್ಯಾಕೋವಿದರೂ ಆಗಿದ್ದರೂ ದುಷ್ಕಾಲವು ಒತ್ತಿಬಂದಾಗ ನಾಶಹೊಂದುತ್ತಾರೆ. ಮರಳಿನ ಸೇತುವೆಗಳಂತೆ ವಿಧ್ವಸ್ತರಾಗುತ್ತಾರೆ" ಎಂದು ಹೇಳಿದನು (೫೦). ಹೀಗೆ ಹೇಳುತ್ತಿರುವಾಗಲೇ ಸತ್ಯಸಂಧನೂ ವಿಖ್ಯಾತಕೀರ್ತಿಯೂ ಪ್ರತಾಪಶಾಲಿಯೂ ಆದ ಶ್ರೀರಾಮನು ಪ್ರಚಂಡನಾದ ಸೌಮಿತ್ರಿಯನ್ನು ನೋಡುತ್ತಿದ್ದನು. ಸೌಮಿತ್ರಿಯ ಪೌರುಷವು ಉಬ್ಬುತ್ತಿರುವುದನ್ನು ಕಂಡು, ತಾನು ಮುಂದೆ ಮಾಡಬೇಕಾದ್ದೇನೆಂಬುದನ್ನು ದೃಢವಾಗಿ ನಿಶ್ಚಯಿಸಿಕೊಂಡನು (೫೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಅರುವತ್ತೊಂಬತ್ತನೆಯ ಸರ್ಗ

## ಸಪ್ತತಿತಮಃ ಸರ್ಗಃ

### ಕಬಂಧಬಾಹುಚ್ಛೇದಃ

ತೌ ತು ತತ್ರ ಸ್ಥಿತೌ ದೃಷ್ಟ್ವಾ ಭ್ರಾತರೌ ರಾಮಲಕ್ಷ್ಮಣೌ ।
ಬಾಹುಪಾಶಪರಿಕ್ಷಿಪ್ತೌ ಕಬಂಧೋ ವಾಕ್ಯಮಬ್ರವೀತ್ ॥ ೧

ತಿಷ್ಠತಃ ಕಿಂ ನು ಮಾಂ ದೃಷ್ಟ್ವಾ ಕ್ಷುಧಾರ್ತಂ ಕ್ಷತ್ರಿಯರ್ಷಭೌ ।
ಆಹಾರಾರ್ಥಂ ತು ಸಂದಿಷ್ಟೌ ದೈವೇನ ಗತಚೇತಸೌ ॥ ೨

ತಚ್ಛ್ರುತ್ವಾ ಲಕ್ಷ್ಮಣೋ ವಾಕ್ಯಂ ಪ್ರಾಪ್ತಕಾಲಂ ಹಿತಂ ತದಾ ।
ಉವಾಚಾರ್ತಿಂ ಸಮಾಪನ್ನೋ ವಿಕ್ರಮೇ ಕೃತನಿಶ್ಚಯಃ ॥ ೩

ತ್ವಾಂ ಚ ಮಾಂ ಚ ಪುರಾ ತೂರ್ಣಮಾದತ್ತೇ ರಾಕ್ಷಸಾಧಮಃ ।
ತಸ್ಮಾದಸಿಭ್ಯಾಮಸ್ಯಾಶು ಬಾಹೂ ಛಿಂದಾವಹೈ ಗುರೂ ॥ ೪

## ಸರ್ಗ ೭೦

ಕಬಂಧನ ಬಾಹುಗಳನ್ನು ಛೇದಿಸುವುದು. ಲಕ್ಷ್ಮಣನಿಂದ ಸ್ವವೃತ್ತಾಂತಕಥನ.
ಕಬಂಧನು ತನ್ನ ವೃತ್ತವನ್ನು ಹೇಳಲಾರಂಭಿಸುವುದು

ಕಬಂಧನು ತನ್ನ ಬಾಹುಪಾಶದಲ್ಲಿ ಸಿಕ್ಕಿಬಿದ್ದ ರಾಮಲಕ್ಷ್ಮಣರನ್ನು ನೋಡಿ "ಎಲೈ ಕ್ಷತ್ರಿಯೋತ್ತಮರೆ, ಕ್ಷುಧಿತನಾದ ನನ್ನನ್ನು ನೋಡುತ್ತ ನಿಂತರೆ ಏನಾದೀತು? ಬುದ್ಧಿಗೆಟ್ಟಿರುವ ನಿಮ್ಮನ್ನು ದೈವವು ನನ್ನ ಆಹಾರಕ್ಕಾಗಿ ಕಳಿಸಿಕೊಟ್ಟಿದೆ!" ಎಂದನು (೧–೨). ವಿಪತ್ತಿಗೆ ಒಳಗಾಗಿದ್ದ ಲಕ್ಷ್ಮಣನು ಆ ವಾಕ್ಯವನ್ನು ಕೇಳಿ ಪರಾಕ್ರಮವನ್ನು ಮೆರೆಸಲೇಬೇಕೆಂದು ನಿಶ್ಚಯಿಸಿ, ಶ್ರೀರಾಮನಿಗೆ ಕಾಲೋಚಿತವಾದ ಹಿತವಾಕ್ಯವನ್ನಾಡಿದನು: "ರಾಘವ, ಈ ರಾಕ್ಷಸಾಧಮನು ನಮ್ಮಿಬ್ಬರನ್ನೂ ನಿಶ್ಚಯವಾಗಿ* ಶೀಘ್ರದಲ್ಲಿಯೇ ನುಂಗುವನು. ಆದ್ದರಿಂದ ಈತನ ದಪ್ಪವಾದ ಈ ತೋಳುಗಳನ್ನು

---

* ಮೂಲದಲ್ಲಿರುವ 'ಪುರಾ' ಶಬ್ದವು ನಿಶ್ಚಯದ್ಯೋತಕ. 'ಯಾವತ್ ಪುರಾ ನಿಪಾತಯೋರ್ಲಟ್' (ಪಾ. ಸೂ., ೩-೩-೪).

ಭೀಷಣೋಽಯಂ ಮಹಾಕಾಯೋ ರಾಕ್ಷಸೋ ಭುಜವಿಕ್ರಮಃ ।
ಲೋಕಂ ಹ್ಯತಿಜಿತಂ ಕೃತ್ವಾ ಹ್ಯಾವಾಂ ಹಂತುಮಿಹೇಚ್ಛತಿ ॥ ೫
ನಿಶ್ಚೇಷ್ಟಾನಾಂ ವಧೋ ರಾಜನ್ ಕುತ್ಸಿತೋ ಜಗತೀಪತೇಃ ।
ಕ್ರತುಮಧ್ಯೋಪನೀತಾನಾಂ ಪಶೂನಾಮಿವ ರಾಘವ ॥ ೬
ಏತತ್ ಸಂಜಲ್ಪಿತಂ ಶ್ರುತ್ವಾ ತಯೋಃ ಕ್ರುದ್ಧಸ್ತು ರಾಕ್ಷಸಃ ।
ವಿದಾರ್ಯಾಸ್ಯಂ ತತೋ ರೌದ್ರಂ ತೌ ಭಕ್ಷಯಿತುಮಾರಭತ್ ॥ ೭
ತತಸ್ತೌ ದೇಶಕಾಲಜ್ಞೌ ಖಡ್ಗಾಭ್ಯಾಮೇವ ರಾಘವೌ ।
ಅಚ್ಛಿಂದತಾಂ ಸುಸಂಹೃಷ್ಟೌ ಬಾಹೂ ತಸ್ಯಾಂಸದೇಶತಃ ॥ ೮
ದಕ್ಷಿಣೋ ದಕ್ಷಿಣಂ ಬಾಹುಮಸಕ್ತಮಸಿನಾ ತತಃ ।
ಚಿಚ್ಛೇದ ರಾಮೋ ವೇಗೇನ ಸವ್ಯಂ ವೀರಸ್ತು ಲಕ್ಷ್ಮಣಃ ॥ ೯
ಸ ಪಪಾತ ಮಹಾಬಾಹುಶ್ಛಿನ್ನಬಾಹುರ್ಮಹಾಸ್ವನಃ ।
ಖಂ ಚ ಗಾಂ ಚ ದಿಶಶ್ಚೈವ ನಾದಯನ್ ಜಲದೋ ಯಥಾ ॥ ೧೦

---

ಖಡ್ಗಗಳಿಂದ ಕತ್ತರಿಸೋಣ (೩–೪). ಮಹಾಕಾಯನಾದ ಈ ರಾಕ್ಷಸನು ಭೀಕರನಾಗಿದ್ದಾನೆ. ಮುಖ್ಯವಾಗಿ ಇವನ ಬಲವೆಲ್ಲವೂ ಬಾಹುಗಳಲ್ಲಿದೆ. ಲೋಕವನ್ನು ಗೆದ್ದು ಪೀಡಿಸಿ, ಈಗ ನಮ್ಮನ್ನು ಕೊಲ್ಲಬೇಕೆಂದು ಸಂಕಲ್ಪಿಸಿದ್ದಾನೆ (೫). (ಇವನ ಬಾಹುಗಳನ್ನು ಕತ್ತರಿಸಿದರೆ ಸಾಕು, ವಧಿಸುವುದು ಬೇಡ.) ಯಾಗಶಾಲೆಗೆ ಕರೆತಂದ ಪಶುಗಳಂತೆ ಪ್ರತೀಕಾರ ಮಾಡಲು ಅಸಮರ್ಥರಾದವರನ್ನು ವಧಿಸುವುದು ಭೂಪಾಲರಿಗೆ ಯೋಗ್ಯವಲ್ಲ" ಎಂದನು (೬). ಹೀಗೆ ಅವರಿಬ್ಬರೂ ಮಾತನಾಡಿಕೊಳ್ಳುವುದನ್ನು ಕೇಳಿ ಆ ರಾಕ್ಷಸನು ಕೋಪಗೊಂಡು ಭೀಷಣವಾದ ಬಾಯನ್ನು ತೆರೆದು ರಾಮಲಕ್ಷ್ಮಣರನ್ನು ಭಕ್ಷಿಸಲು ಪ್ರಯತ್ನಿಸಿದನು (೭). ಆಗ ದೇಶಕಾಲಜ್ಞರಾದ ರಾಮಲಕ್ಷ್ಮಣರು ಉತ್ಸಾಹದಿಂದ ಬೇಗಬೇಗನೆ ಖಡ್ಗಗಳಿಂದ ಕಬಂಧನ ತೋಳುಗಳನ್ನು ಹೆಗಲಿನ ಬಳಿ ಕತ್ತರಿಸಿದರು. ಕಬಂಧನ ಬಲಗಡೆಗಿದ್ದ ಶ್ರೀರಾಮನು ಅವನ ಬಲದೋಳನ್ನೂ ವೀರನಾದ ಲಕ್ಷ್ಮಣನು ಎಡದೋಳನ್ನೂ ಲೆಕ್ಕಿಸದೆ ವೇಗವಾಗಿ ಕತ್ತರಿಸಿ ಕೆಡವಿದರು (೮–೯). ದೀರ್ಘಬಾಹುವಾದ ಕಬಂಧನ ಎರಡು ಬಾಹುಗಳೂ ತುಂಡರಿಸಿಬೀಳಲು, ಮೇಘವು ಗುಡುಗುವಂತೆ

ಸ ನಿಕೃತ್ತೌ ಭುಜೌ ದೃಷ್ಟ್ವಾ ಶೋಣಿತೌದಪರಿಪ್ಲುತಃ ।
ದೀನಃ ಪಪ್ರಚ್ಛ ತೌ ವೀರೌ ಕೌ ಯುವಾಮಿತಿ ದಾನವಃ ॥ ೧೧

ಇತಿ ತಸ್ಯ ಬ್ರುವಾಣಸ್ಯ ಲಕ್ಷ್ಮಣಃ ಶುಭಲಕ್ಷಣಃ ।
ಶಶಂಸ ರಾಘವಂ ತಸ್ಯ ಕಬಂಧಸ್ಯ ಮಹಾಬಲಃ ॥ ೧೨

ಅಯಮಿಕ್ಷ್ವಾಕುದಾಯಾದೋ ರಾಮೋ ನಾಮ ಜನೈಃ ಶ್ರುತಃ ।
ಅಸ್ಯೈವಾವರಜಂ ವಿದ್ಧಿ ಭ್ರಾತರಂ ಮಾಂ ಚ ಲಕ್ಷ್ಮಣಮ್ ॥ ೧೩

ಮಾತ್ರಾ ಪ್ರತಿಹತೇ ರಾಜ್ಯೇ ರಾಮ ಪ್ರವ್ರಾಜಿತೋ ವನಮ್ ।
ಮಯಾ ಸಹ ಚರತ್ಯೇಷ ಭಾರ್ಯಯಾ ಚ ಮಹದ್ವನಮ್ ॥ ೧೪

ಅಸ್ಯ ದೇವಪ್ರಭಾವಸ್ಯ ವಸತೋ ವಿಜನೇ ವನೇ ।
ರಕ್ಷಸಾಪಹೃತಾ ಭಾರ್ಯಾ ಯಾಮಿಚ್ಛಂತಾವಿಹಾಗತೌ ॥ ೧೫

ತ್ವಂ ತು ಕೋ ವಾ ಕಿಮರ್ಥಂ ವಾ ಕಬಂಧಸದೃಶೋ ವನೇ ।
ಆಸ್ಯೇನೋರಸಿ ದೀಪ್ತೇನ ಭಗ್ನಜಂಘೋ ವಿವೇಷ್ಟಸೇ ॥ ೧೬

---

ಭೂಮ್ಯಾಕಾಶಗಳೂ ದಶದಿಕ್ಕುಗಳೂ ಮೊಳಗುವಂತೆ ಅವನು ಅರಚುತ್ತ ನೆಲದ ಮೇಲೆ ಕುಸಿದುಬಿದ್ದನು (೧೦). ಆ ದಾನವನು ರಕ್ತದ ಹೊಳೆಯಲ್ಲಿ ನೆನೆದು ಹೋದನು. ಕತ್ತರಿಸಿಬಿದ್ದ ತನ್ನ ತೋಳುಗಳನ್ನು ನೋಡಿ ಕಬಂಧನು ದೈನ್ಯದಿಂದ "ಎಲೈ ವೀರರೆ, ನೀವು ಯಾರು?" ಎಂದು ಕೇಳಿದನು. ಆಗ ಶುಭಲಕ್ಷಣನಾದ ಲಕ್ಷ್ಮಣನು ಕಬಂಧನಿಗೆ ಶ್ರೀರಾಮನನ್ನು ತೋರಿಸಿ "ಅಯ್ಯಾ, ಇವನು ಇಕ್ಷ್ವಾಕುವಂಶದಲ್ಲಿ ಜನಿಸಿದ ರಾಜಪುತ್ರ. ಶ್ರೀರಾಮನೆಂದು ಹೆಸರು. ನಾನು ಇವನ ತಮ್ಮನೆಂದು ತಿಳಿ. ನನ್ನ ಹೆಸರು ಲಕ್ಷ್ಮಣ (೧೧–೧೨). ಚಿಕ್ಕತಾಯಿಯ ಪ್ರೇರಣೆಯಿಂದ ಶ್ರೀರಾಮನಿಗೆ ರಾಜ್ಯಭ್ರಂಶವೂ ವನವಾಸವೂ ಪ್ರಾಪ್ತವಾದವು. ಇವನು ನನ್ನನ್ನೂ ತನ್ನ ಪತ್ನಿಯನ್ನೂ ಜೊತೆಗೂಡಿ ಮಹತ್ತರವಾದ ಈ ವನದಲ್ಲಿ ಸಂಚರಿಸುತ್ತಿದ್ದಾನೆ (೧೩–೧೪). ಒಂದುಸಲ ವನದ ಆಶ್ರಮದಲ್ಲಿ ನಾವಿಬ್ಬರೂ ಇಲ್ಲದಾಗ ದೇವತಾಸದೃಶನಾದ ಈತನ ಪತ್ನಿಯನ್ನು ರಾಕ್ಷಸನೊಬ್ಬನು ಅಪಹರಿಸಿದನು. ಆಕೆಯನ್ನು ಅರಸುತ್ತ ನಾವು ಇಲ್ಲಿಗೆ ಬಂದೆವು. ನೀನು ಯಾರು? ಏಕೆ ಹೀಗೆ ಕಬಂಧಾಕಾರದಲ್ಲಿದ್ದೀಯೆ? ಎದೆಯ ಬಳಿ (ಹೊಟ್ಟೆಯಲ್ಲಿ) ನಿನ್ನ

ಏವಮುಕ್ತಃ ಕಬಂಧಸ್ತು ಲಕ್ಷ್ಮಣೇನೋತ್ತರಂ ವಚಃ ।
ಉವಾಚ ಪರಮಪ್ರೀತಸ್ತದಿಂದ್ರವಚನಂ ಸ್ಮರನ್ ॥ ೧೭

ಸ್ವಾಗತಂ ವಾಂ ನರವ್ಯಾಘ್ರೌ ದಿಷ್ಟ್ಯಾ ಪಶ್ಯಾಮಿ ವಾಮಹಮ್ ।
ದಿಷ್ಟ್ಯಾ ಚೇಮೌ ನಿಕೃತ್ತೌ ಮೇ ಯುವಾಭ್ಯಾಂ ಬಾಹುಬಂಧನೌ ॥ ೧೮

ವಿರೂಪಂ ಯಚ್ಚ ಮೇ ರೂಪಂ ಪ್ರಾಪ್ತಂ ಹ್ಯವಿನಯಾದ್ಯಥಾ ।
ತನ್ಮೇ ಶೃಣು ನರವ್ಯಾಘ್ರ ತತ್ತ್ವತಃ ಶಂಸತಸ್ತವ ॥ ೧೯

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಸಪ್ತತಿತಮಃ ಸರ್ಗಃ

ಮುಖವು ಪ್ರಜ್ವಲಿಸುತ್ತಿದೆಯಲ್ಲ! ಮೊಳಕಾಲುಗಳು ಮುರಿದು ಗುಜ್ಜಾರಿಯಾಗಿವೆ! ಈ ಕಾಡಿನಲ್ಲಿ ಹೊರಳುತ್ತ ಅಲೆಯುವುದೇಕೆ?" ಎಂದು ಕೇಳಿದನು (೧೫–೧೬). ಲಕ್ಷ್ಮಣನ ಉತ್ತರವನ್ನು ಕೇಳಿ ಕಬಂಧನಿಗೆ ಆನಂದವಾಯಿತು! ಅವನಿಗೆ ದೇವೇಂದ್ರನ ವಚನವು ಸ್ಮರಣೆಗೆ ಬಂದಿತು. ಕಬಂಧನು "ಪುರುಷಶ್ರೇಷ್ಠರೆ, ನಿಮಗೆ ಸ್ವಾಗತ! ನಿಮ್ಮನ್ನು ನೋಡುವುದು ನನ್ನ ಭಾಗ್ಯದಿಂದ. ಈ ಹೆಗಲುಗಳನ್ನು ಕಡಿದು ಬಂಧನದಂತಿದ್ದ ಬಾಹುಗಳನ್ನು ಕಳಚಿದಿರಿ! (೧೭–೧೮). ಹೇ ಪುರುಷೋತ್ತಮ–ಶ್ರೀರಾಮ, ನನ್ನ ಅವಿವೇಕದಿಂದ ಈ ಕುರೂಪವು ನನಗೆ ಹೇಗೆ ಗಂಟುಬಿದ್ದಿತು ಎಂಬುದನ್ನು ಯಥಾರ್ಥವಾಗಿ ವಿವರಿಸುತ್ತೇನೆ ಆಲಿಸು" ಎಂದು ಹೇಳಿದನು (೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತನೆಯ ಸರ್ಗ

## ಏಕಸಪ್ತತಿತಮಃ ಸರ್ಗಃ

### ಕಬಂಧಶಾಪಾಖ್ಯಾನಮ್

ಪುರಾ ರಾಮ ಮಹಾಬಾಹೋ ಮಹಾಬಲಪರಾಕ್ರಮಮ್ ।
ರೂಪಮಾಸೀನ್ಮಮಾಚಿಂತ್ಯಂ ತ್ರಿಷು ಲೋಕೇಷು ವಿಶ್ರುತಮ್ ॥ ೧

ಯಥಾ ಸೂರ್ಯಸ್ಯ ಸೋಮಸ್ಯ ಶಕ್ರಸ್ಯ ಚ ಯಥಾ ವಪುಃ ।
ಸೋಽಹಂ ರೂಪಮಿದಂ ಕೃತ್ವಾ ಲೋಕವಿತ್ರಾಸನಂ ಮಹತ್ ॥ ೨

ಋಷೀನ್ ವನಗತಾನ್ ರಾಮ ತ್ರಾಸಯಾಮಿ ತತಸ್ತತಃ ।
ತತಃ ಸ್ಥೂಲಶಿರಾ ನಾಮ ಮಹರ್ಷಿಃ ಕೋಪಿತೋ ಮಯಾ ॥ ೩

ಸಂಚಿನ್ವನ್ ವಿವಿಧಂ ವನ್ಯಂ ರೂಪೇಣಾನೇನ ಧರ್ಷಿತಃ ।
ತೇನಾಹಮುಕ್ತಃ ಪ್ರೇಕ್ಷ್ಯೈವಂ ಘೋರಶಾಪಾಭಿಧಾಯಿನಾ ॥ ೪

## ಸರ್ಗ ೭೧

ಕಬಂಧನು ತನ್ನ ಶಾಪವೃತ್ತಾಂತವನ್ನು ತಿಳಿಸಿ ತನ್ನ ದೇಹವನ್ನು ದಹಿಸಬೇಕೆಂದು ಪ್ರಾರ್ಥಿಸುವುದು.

ಕಬಂಧನು ಹೇಳಿದನು ! "ಮಹಾಬಾಹು-ಶ್ರೀರಾಮ, ಪೂರ್ವದಲ್ಲಿ ನನಗೆ ಬಲಪರಾಕ್ರಮಗಳಿಂದ ಕೂಡಿದ ದಿವ್ಯರೂಪವಿತ್ತು. ನನ್ನ ಸೌಂದರ್ಯವು ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿತ್ತು. ಅದರ ವೈಭವ ಎಷ್ಟೆಂದು ಈಗ ಊಹಿಸಲು ಶಕ್ಯವಿಲ್ಲ (೧). ಸೂರ್ಯ ಚಂದ್ರ ದೇವೇಂದ್ರರ ದೇಹ ದಂತೆ ನನ್ನ ದೇಹವು ತೇಜೋಮಯವಾಗಿದ್ದಿತ್ತು. ಹಾಗಿದ್ದ ನಾನು ಅತ್ಯಂತ ಲೋಕಭಯಂಕರವಾದ ಈ ರೂಪವನ್ನು ಧರಿಸಿ, ಶ್ರೀರಾಮ, ವನದಲ್ಲಿದ್ದ ಋಷಿಗಳನ್ನು ಹೆದರಿಸುತ್ತಿದ್ದೆನು. ಒಂದು ಸಲ ಸ್ಥೂಲಶಿರನೆಂಬ ಮಹರ್ಷಿಯು ನನ್ನ ಚೇಷ್ಟೆಯಿಂದ ಕ್ರುದ್ಧನಾದನು (೨-೩). ಆತನು ಕಾಡಿನಲ್ಲಿರುವ ಸಮಿತ್ತು ದರ್ಭೆ ಮುಂತಾದುವುಗಳನ್ನು ಸಂಗ್ರಹಿಸುತ್ತಿರುವಾಗ, ನಾನು ಈ ಘೋರರೂಪದಿಂದ ಹೋಗಿ ಅಂಜಿಸಿದೆನು. ಆ ಋಷಿಯು ನನ್ನನ್ನು ನೋಡಿ ಭೀಕರವಾದ ಶಾಪವನ್ನು ಕೊಡಲುದ್ದೇಶಿಸಿ, 'ಎಲೈ ನೀಚ, ಲೋಕನಿಂದಿತ

ಏತದೇವ ನೃಶಂಸಂ ತೇ ರೂಪಮಸ್ತು ವಿಗರ್ಹಿತಮ್ ।
ಸ ಮಯಾ ಯಾಚಿತಃ ಕ್ರುದ್ಧಃ ಶಾಪಸ್ಯಾಂತೋ ಭವೇದಿತಿ ॥ ೫

ಅಭಿಶಾಪಕೃತಸ್ಯೇತಿ ತೇನೇದಂ ಭಾಷಿತಂ ವಚಃ ।
ಯದಾ ಛಿತ್ವಾ ಭುಜೌ ರಾಮಸ್ತ್ವಾಂ ದಹೇದ್ವಿಜನೇ ವನೇ ॥ ೬

ತದಾ ತ್ವಂ ಪ್ರಾಪ್ಸ್ಯಸೇ ರೂಪಂ ಸ್ವಮೇವ ವಿಪುಲಂ ಶುಭಮ್ ।
ಶ್ರಿಯಾ ವಿರಾಜಿತಂ ಪುತ್ರಂ ದನೋಸ್ತ್ವಂ ವಿದ್ಧಿ ಲಕ್ಷ್ಮಣ ॥ ೭

ಇಂದ್ರಕೋಪಾದಿದಂ ರೂಪಂ ಪ್ರಾಪ್ತಮೇವಂ ರಣಾಜಿರೇ ।
ಅಹಂ ಹಿ ತಪಸೋಗ್ರೇಣ ಪಿತಾಮಹಮತೋಷಯಮ್ ॥ ೮

ದೀರ್ಘಮಾಯುಃ ಸ ಮೇ ಪ್ರಾದಾತ್ತತೋ ಮಾಂ ವಿಭ್ರಮೋಽ
ಸ್ಪೃಶತ್ ।
ದೀರ್ಘಮಾಯುರ್ಮಯಾ ಪ್ರಾಪ್ತಂ ಕಿಂ ಮೇ ಶಕ್ರಃ ಕರಿಷ್ಯತಿ ॥ ೯

ಇತ್ಯೇವಂ ಬುದ್ಧಿಮಾಸ್ಥಾಯ ರಣೇ ಶಕ್ರಮಧರ್ಷಯಮ್ ।
ತಸ್ಯ ಬಾಹುಪ್ರಮುಕ್ತೇನ ವಜ್ರೇಣ ಶತಪರ್ವಣಾ ॥ ೧೦

---

ವಾದ ಈ ಕರಾಳರೂಪವೇ ನಿನಗೆ ಶಾಶ್ವತವಾಗಲಿ!' ಎಂದು ಶಪಿಸಿದನು. ಆಗ ನಾನು 'ಸ್ವಾಮಿ, ನನ್ನ ತಪ್ಪಿನಿಂದ ನನಗೆ ಈ ಶಾಪ ಬಂದಿತು. ಇದಕ್ಕೆ ಒಂದು ಅವಧಿಯಿರುವಂತೆ ಅನುಗ್ರಹಿಸಬೇಕು' ಎಂಬುದಾಗಿ ಕ್ರುದ್ಧನಾದ ಆ ಋಷಿಯನ್ನು ಬೇಡಿಕೊಂಡೆನು (೪–೫). ಅದನ್ನು ಕೇಳಿ ಆ ಮಹರ್ಷಿಯು 'ಶ್ರೀರಾಮನು ನಿನ್ನ ತೋಳುಗಳನ್ನು ಕತ್ತರಿಸಿ ನಿರ್ಜನವಾದ ವನದಲ್ಲಿ ನಿನ್ನನ್ನು ಯಾವಾಗ ಸುಡುವನೋ, ಆಗ ನಿನ್ನ ಮೊದಲಿನ ಉತ್ತಮರೂಪವನ್ನು ಪಡೆಯುವೆ' ಎಂದು ನುಡಿದನು. ಲಕ್ಷ್ಮಣ, ನಾನು ದನು ಎಂಬುವನ ಪುತ್ರ. ನನಗೆ ಉತ್ತಮವಾದ ರೂಪಸಂಪತ್ತು ಇದ್ದಿತೆಂದು ತಿಳಿ (೬–೭). ಇಂದ್ರನ ಕೋಪದಿಂದ ರಣಾಂಗದಲ್ಲಿ ನನಗೆ ಈ ಕಬಂಧರೂಪವು ಬಂದಿತು; ನಾನು ಉಗ್ರವಾದ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಸಂತೋಷಪಡಿಸಿದ್ದೆನು. ಆತನು ನನಗೆ ಪ್ರಸನ್ನನಾಗಿ ದೀರ್ಘಾಯುಸ್ಸನ್ನು ಅನುಗ್ರಹಿಸಿದ್ದನು. ನನಗೆ ಅದರಿಂದ ದುರಹಂಕಾರ ಬಂದಿತು. 'ನಾನು ದೀರ್ಘಾಯುವನ್ನು ಪಡೆದಿದ್ದೇನೆ. ಇಂದ್ರನು ಏನು ಮಾಡಿಯಾನು!' ಎಂಬ ಬುದ್ಧಿ ಹುಟ್ಟಿತು (೮–೯). ಈ ಕೊಬ್ಬಿನಿಂದ ನಾನು ರಣರಂಗದಲ್ಲಿ ಇಂದ್ರನನ್ನು ಎದುರಿಸಿದೆನು.

ಸಕ್ಥಿನೀ ಚೈವ ಮೂರ್ಧಾ ಚ ಶರೀರೇ ಸಂಪ್ರವೇಶಿತಮ್ ।
ಸ ಮಯಾ ಯಾಚ್ಯಮಾನಃ ಸನ್ನಾನಯದ್ಯಮಸಾದನಮ್ ॥ ೧೧
ಪಿತಾಮಹವಚಃ ಸತ್ಯಂ ತದಸ್ತ್ವಿತಿ ಮಮಾಬ್ರವೀತ್ ।
ಅನಾಹಾರಃ ಕಥಂ ಶಕ್ರೋ ಭಗ್ನಸಕ್ಥಿಶಿರೋಮುಖಃ ॥ ೧೨
ವಜ್ರೇಣಾಭಿಹತಃ ಕಾಲಂ ಸುದೀರ್ಘಮಪಿ ಜೀವಿತುಮ್ ।
ಏವಮುಕ್ತಸ್ತು ಮೇ ಶಕ್ರೋ ಬಾಹೂ ಯೋಜನಮಾಯತೌ ॥ ೧೩
ಪ್ರಾದಾದಾಸ್ಯಂ ಚ ಮೇ ಕುಕ್ಷೌ ತೀಕ್ಷ್ಣದಂಷ್ಟ್ರಮಕಲ್ಪಯತ್ ।
ಸೋಽಹಂ ಭುಜಾಭ್ಯಾಂ ದೀರ್ಘಾಭ್ಯಾಂ ಸಂಕ್ಷಿಪ್ಯಾಸ್ಮಿನ್ ವನೇಚರಾನ್ ॥
ಸಿಂಹದ್ವಿಪಮೃಗವ್ಯಾಘ್ರಾನ್ ಭಕ್ಷಯಾಮಿ ಸಮಂತತಃ ।
ಸ ತು ಮಾಮಬ್ರವೀದಿಂದ್ರೋ ಯದಾ ರಾಮಃ ಸಲಕ್ಷ್ಮಣಃ ॥ ೧೫
ಛೇತ್ಸ್ಯತೇ ಸಮರೇ ಬಾಹೂ ತದಾ ಸ್ವರ್ಗಂ ಗಮಿಷ್ಯಸಿ ।
ಅನೇನ ವಪುಷಾ ರಾಮ ವನೇಽಸ್ಮಿನ್ ರಾಜಸತ್ತಮ ॥ ೧೬

---

ಇಂದ್ರನು ತನ್ನ ಕೈಯಲ್ಲಿದ್ದ ನೂರು ಏಣುಗಳುಳ್ಳ ವಜ್ರಾಯುಧದಿಂದ ನನ್ನನ್ನು ಅಪ್ಪಳಿಸಿ ಹೊಡೆದನು. ಆ ಹೊಡೆತಕ್ಕೆ ನನ್ನ ತೊಡೆಗಳೂ ತಲೆಯೂ ದೇಹದ ಮಧ್ಯಭಾಗದಲ್ಲಿ ಹುದುಗಿಹೋದವು! ಆಗ ನಾನು ಪ್ರಾರ್ಥಿಸಿಕೊಂಡರೂ ಇಂದ್ರನು ನನ್ನನ್ನು ಯಮಲೋಕಕ್ಕೆ ಕಳಿಸಲಿಲ್ಲ! (೧೦–೧೧), 'ಬ್ರಹ್ಮದೇವನ ಮಾತು ಸತ್ಯವಾಗುವುದು. ನೀನು ದೀರ್ಘಾಯುವಾಗಿ ಉಳಿಯುವೆ' ಎಂದು ಹೇಳಿದನು. ಆಗ ನಾನು 'ದೇವೇಂದ್ರ, ವಜ್ರಾಯುಧದ ಪ್ರಹಾರದಿಂದ ನನ್ನ ತೊಡೆ, ಶಿರಸ್ಸು, ಬಾಯಿಗಳು ಭಗ್ನವಾದವು. (ನಡೆಯಲು ಕಾಲಿಲ್ಲ; ತಿನ್ನಲು ಬಾಯಿಲ್ಲ.) ಆಹಾರವಿಲ್ಲದೆ ನಾನು ಬಹುಕಾಲ ಬದುಕುವುದು ಹೇಗೆ?' ಎಂದು ಕೇಳಿದೆನು. ಅದನ್ನು ಕೇಳಿ ಇಂದ್ರನು ನನಗೆ ಒಂದು ಯೋಜನದಷ್ಟು ಉದ್ದವಾದ ಈ ಎರಡು ತೋಳುಗಳನ್ನು ಅನುಗ್ರಹಿಸಿದನು (೧೨–೧೩). ಹರಿತವಾದ ಕೋರೆಹಲ್ಲುಗಳಿರುವ ಬಾಯನ್ನು ನನ್ನ ಹೊಟ್ಟೆಯಲ್ಲಿಯೇ ನಿರ್ಮಿಸಿದನು. ಹೀಗೆ ನಾನು ಈ ದೀರ್ಘಬಾಹುಗಳಿಂದ ವನದಲ್ಲಿ ಸಂಚರಿಸುವ ಸಿಂಹ, ಆನೆ, ಜಿಂಕೆ, ಹುಲಿ ಮುಂತಾದ ಪ್ರಾಣಿಗಳನ್ನು ಬರಸೆಳೆದು ತಿನ್ನುತ್ತಿದ್ದೇನೆ (೧೪–೧೫) ಅಲ್ಲದೆ ಇಂದ್ರನು ನನ್ನನ್ನು ಕುರಿತು 'ಶ್ರೀರಾಮನು ಲಕ್ಷ್ಮಣ ಸಮೇತನಾಗಿ

ಯದ್ಯತ್ ಪಶ್ಯಾಮಿ ಸರ್ವಸ್ಯ ಗ್ರಹಣಂ ಸಾಧು ರೋಚಯೇ ।
ಅವಶ್ಯಂ ಗ್ರಹಣಂ ರಾಮೋ ಮನ್ಯೇಽಹಂ ಸಮುಪೈಷ್ಯತಿ ॥ ೧೭

ಇಮಾಂ ಬುದ್ಧಿಂ ಪುರಸ್ಕೃತ್ಯ ದೇಹನ್ಯಾಸಕೃತಶ್ರಮಃ ।
ಸ ತ್ವಂ ರಾಮೋಽಸಿ ಭದ್ರಂ ತೇ ನಾಹಮನ್ಯೇನ ರಾಘವ ॥ ೧೮

ಶಕ್ಯೋ ಹಂತುಂ ಯಥಾತತ್ತ್ವಮೇವಮುಕ್ತಂ ಮಹರ್ಷಿಣಾ ।
ಅಹಂ ಹಿ ಮತಿಸಾಚಿವ್ಯಂ ಕರಿಷ್ಯಾಮಿ ನರರ್ಷಭ ॥ ೧೯

ಮಿತ್ರಂ ಚೈವೋಪದೇಕ್ಷ್ಯಾಮಿ ಯುವಾಭ್ಯಾಂ ಸಂಸ್ಕೃತೋಽಗ್ನಿನಾ ।
ಏವಮುಕ್ತಸ್ತು ಧರ್ಮಾತ್ಮಾ ದನುನಾ ತೇನ ರಾಘವಃ ॥ ೨೦

ಇದಂ ಜಗಾದ ವಚನಂ ಲಕ್ಷ್ಮಣಸ್ಯೋಪಶೃಣ್ವತಃ ।
ರಾವಣೇನ ಹೃತಾ ಭಾರ್ಯಾ ಮಮ ಸೀತಾ ಯಶಸ್ವಿನೀ ॥ ೨೧

---

ಬಂದು, ನಿನ್ನ ತೋಳುಗಳನ್ನು ಯುದ್ಧದಲ್ಲಿ ಯಾವಾಗ ಕತ್ತರಿಸುವನೋ ಆಗ ನೀನು ಸ್ವರ್ಗವನ್ನು ಸೇರುವೆ' ಎಂದು ಹೇಳಿದ್ದಾನೆ. ಶ್ರೀರಾಮ–ರಾಜೋತ್ತಮ, ನಾನು ಈ ವಿಕೃತವಾದ ದೇಹವನ್ನು ಹೊತ್ತು ಅರಣ್ಯದಲ್ಲಿ ಅಲೆಯುತ್ತ ಕಂಡಿದ್ದೆಲ್ಲವನ್ನೂ ಬರಸೆಳೆದು ಹಿಡಿಯಬೇಕೆಂದು ಉದ್ದೇಶಿಸಿದ್ದೆನು. ಒಂದಲ್ಲ ಒಂದು ದಿನ ಶ್ರೀರಾಮನು ನನ್ನ ಹಿಡಿತದಲ್ಲಿ ಸಿಕ್ಕುವನೆಂದೇ ನಂಬಿದ್ದೆನು (೧೬–೧೭). ಆದ್ದರಿಂದಲೇ ವಿಕೃತವಾದ ಈ ದೇಹವನ್ನು ತ್ಯಜಿಸುವುದಕ್ಕಾಗಿ ಶ್ರಮಪಡುತ್ತಿದ್ದೆನು. ರಾಘವ, ನಾನು ಹುಡುಕುತ್ತಿದ್ದ ಶ್ರೀರಾಮನೇ ನೀನಾಗಿರುವೆ. ನಿನಗೆ ಶುಭವಾಗಲಿ! ನೀನಲ್ಲದೆ ಇನ್ನೊಬ್ಬನಿಂದ ನನ್ನನ್ನು ಸಂಹರಿಸಲು ಶಕ್ಯವಿಲ್ಲ. ಆ ಮಹರ್ಷಿಯು ಈ ಪ್ರಕಾರ ಹೇಳಿದುದು ಸತ್ಯವೇ ಆಯಿತು. ಹೇ ಪುರುಷಶ್ರೇಷ್ಠ, ನಿಮಗೆ ನಾನು ಬುದ್ಧಿ ಸಹಾಯವೊಂದನ್ನು ಮಾಡುವೆನು (೧೮–೧೯). ನೀವಿಬ್ಬರೂ ನನಗೆ ಅಗ್ನಿಸಂಸ್ಕಾರವನ್ನು ಮಾಡಿರಿ; ಆಮೇಲೆ ನಿಮಗೆ ಯೋಗ್ಯವಾದ ಮಿತ್ರನೊಬ್ಬನನ್ನು ತೋರಿಸಿಕೊಡುವೆನು" ಎಂದನು. ಹೀಗೆ ದನುಪುತ್ರನಾದ ಕಬಂಧನು * ಹೇಳಲು, ಧರ್ಮಾತ್ಮನಾದ ರಾಘವನು ಸಮೀಪದಲ್ಲಿದ್ದ ಲಕ್ಷ್ಮಣನಿಗೂ ಕೇಳುವಂತೆ "ಅಯ್ಯಾ–ಕಬಂಧ, ಜನಸ್ಥಾನದಲ್ಲಿ ನಾನು ನನ್ನ ತಮ್ಮ

---

* ಅನುಬಂಧವನ್ನು ನೋಡಿ.

ನಿಷ್ಕ್ರಾಂತಸ್ಯ ಜನಸ್ಥಾನಾತ್ ಸಹ ಭ್ರಾತ್ರಾ ಯಥಾಸುಖಮ್ ।
ನಾಮಮಾತ್ರಂ ತು ಜಾನಾಮಿ ನ ರೂಪಂ ತಸ್ಯ ರಕ್ಷಸಃ ॥ ೨೨

ನಿವಾಸಂ ವಾ ಪ್ರಭಾವಂ ವಾ ವಯಂ ತಸ್ಯ ನ ವಿದ್ಮಹೇ ।
ಶೋಕಾರ್ತಾನಾಮನಾಥಾನಾಮೇವಂ ವಿಪರಿಧಾವತಾಮ್ ॥ ೨೩

ಕಾರುಣ್ಯಂ ಸದೃಶಂ ಕರ್ತುಮುಪಕಾರೇಣ ವರ್ತತಾಮ್ ।
ಕಾಷ್ಠಾನ್ಯಾದಾಯ ಶುಷ್ಕಾಣಿ ಕಾಲೇ ಭಗ್ನಾನಿ ಕುಂಜರೈಃ ॥ ೨೪

ಧಕ್ಷ್ಯಾಮಸ್ತ್ವಾಂ ವಯಂ ವೀರ ಶ್ವಭ್ರೇ ಮಹತಿ ಕಲ್ಪಿತೇ ।
ಸ ತ್ವಂ ಸೀತಾಂ ಸಮಾಚಕ್ಷ್ವ ಯೇನ ವಾ ಯತ್ರ ವಾ ಹೃತಾ ॥ ೨೫

ಕುರು ಕಲ್ಯಾಣಮತ್ಯರ್ಥಂ ಯದಿ ಜಾನಾಸಿ ತತ್ತ್ವತಃ ।
ಏವಮುಕ್ತಸ್ತು ರಾಮೇಣ ವಾಕ್ಯಂ ದನುರನುತ್ತಮಮ್ ॥ ೨೬

ಪ್ರೋವಾಚ ಕುಶಲೋ ವಕ್ತುಂ ವಕ್ತಾರಮಪಿ ರಾಘವಮ್ ।
ದಿವ್ಯಮಸ್ತಿ ನ ಮೇ ಜ್ಞಾನಂ ನಾಭಿಜಾನಾಮಿ ಮೈಥಿಲೀಮ್ ॥ ೨೭

---

ನೊಡನೆ ಆಶ್ರಮದಿಂದ ಹೊರಗೆ ಹೋಗಿದ್ದಾಗ, ರಾವಣನೆಂಬ ರಾಕ್ಷಸನು ನನ್ನ ಪತ್ನಿಯನ್ನು ಅಪಹರಿಸಿಕೊಂಡುಹೋಗಿದ್ದಾನೆ. ಆ ಯಶಸ್ವಿನಿಯ ಹೆಸರು ಸೀತೆ (೨೦–೨೧). ನನಗೆ ಆ ರಾಕ್ಷಸನ ಹೆಸರು ಮಾತ್ರ ಗೊತ್ತಿದೆ. ಅವನ ಆಕೃತಿಯನ್ನು ನಾನು ನೋಡಿಲ್ಲ. ಆತನ ವಾಸಸ್ಥಾನವಾಗಲಿ ಸಾಮರ್ಥ್ಯವಾಗಲಿ ನಮಗೆ ತಿಳಿಯದು. ಕಬಂಧ, ನಾವು ಶೋಕಾರ್ತರಾಗಿ ದಿಕ್ಕಿಲ್ಲದೆ ಅಲೆಯುತ್ತಿದ್ದೇವೆ. ನಿನಗೆ ಉಪಕಾರಮಾಡಲು ಸಿದ್ಧರಾಗಿರುವ ನಮ್ಮ ವಿಷಯದಲ್ಲಿ, ಹೇ ವೀರ, ನೀನು ದಯೆದೋರುವುದು ಉಚಿತವಲ್ಲವೆ? ಈ ಕಾಡಿನಲ್ಲಿ ಆನೆಗಳು ಮುರಿದೆಸೆದಿರುವ ಒಣಕಟ್ಟಿಗೆಗಳನ್ನು ತರುತ್ತೇವೆ (೨೨–೨೩). ದೊಡ್ಡ ಹಳ್ಳವನ್ನಗೆದು, ನೀನು ಹೇಳಿದ ಪ್ರಕಾರ ಅದರಲ್ಲಿ ನಿನಗೆ ಅಗ್ನಿಸಂಸ್ಕಾರಮಾಡುತ್ತೇವೆ. ಸೀತೆಯನ್ನು ಯಾರು ಎಲ್ಲಿಗೆ ಅಪಹರಿಸಿಕೊಂಡುಹೋಗಿದ್ದಾರೆಂಬುದನ್ನು ನೀನು ಹೇಳಬೇಕು. ಸತ್ಯಸ್ಥಿತಿಯು ನಿನಗೆ ತಿಳಿದಿದ್ದರೆ, ನಮಗೆ ಇದೊಂದು ಮಹೋಪಕಾರವನ್ನೆಸಗು” ಎಂದು ಕೇಳಿಕೊಂಡನು (೨೪–೨೬). ಆಗ ಸಂಭಾಷಣೆಯಲ್ಲಿ ಕುಶಲನಾದ ಕಬಂಧನು ವಾಕ್ಯವಿಶಾರದನಾದ ಶ್ರೀರಾಮನನ್ನುದ್ದೇಶಿಸಿ “ರಾಘವ, ಈಗ ನನಗೆ ದಿವ್ಯ

ಯಸ್ತ್ವಾಂ ಜ್ಞಾಸ್ಯತಿ ತಂ ವಕ್ಷ್ಯೇ ದಗ್ಧಃ ಸ್ವಂ ರೂಪಮಾಸ್ಥಿತಃ ।
ಅದಗ್ಧಸ್ಯ ತು ವಿಜ್ಞಾತುಂ ಶಕ್ತಿರಸ್ತಿ ನ ಮೇ ಪ್ರಭೋ ॥ ೨೮

ರಾಕ್ಷಸಂ ತಂ ಮಹಾವೀರ್ಯಂ ಸೀತಾ ಯೇನ ಹೃತಾ ತವ ।
ವಿಜ್ಞಾನಂ ಹಿ ಮಮ ಭ್ರಷ್ಟಂ ಶಾಪದೋಷೇಣ ರಾಘವ ॥ ೨೯

ಸ್ವಕೃತೇನ ಮಯಾ ಪ್ರಾಪ್ತಂ ರೂಪಂ ಲೋಕವಿಗರ್ಹಿತಮ್ ।
ಕಿಂತು ಯಾವನ್ನ ಯಾತ್ಯಸ್ತಂ ಸವಿತಾ ಶ್ರಾಂತವಾಹನಃ ॥ ೩೦

ತಾವನ್ಮಾಮವಟೇ ಕ್ಷಿಪ್ತ್ವಾ ದಹ ರಾಮ ಯಥಾವಿಧಿ ।
ದಗ್ಧಸ್ತ್ವಯಾಹಮವಟೇ ನ್ಯಾಯೇನ ರಘುನಂದನ ॥ ೩೧

ವಕ್ಷ್ಯಾಮಿ ತಮಹಂ ವೀರ ಯಸ್ತಂ ಜ್ಞಾಸ್ಯತಿ ರಾಕ್ಷಸಮ್ ।
ತೇನ ಸಖ್ಯಂ ಚ ಕರ್ತವ್ಯಂ ನ್ಯಾಯವೃತ್ತೇನ ರಾಘವ ॥ ೩೨

ಕಲ್ಪಯಿಷ್ಯತಿ ತೇ ಪ್ರೀತಃ ಸಾಹಾಯ್ಯಂ ಲಘುವಿಕ್ರಮಃ ।
ನ ಹಿ ತಸ್ಯಾಸ್ತ್ಯವಿಜ್ಞಾತಂ ತ್ರಿಷು ಲೋಕೇಷು ರಾಘವ ॥ ೩೩

---

ಜ್ಞಾನವಿಲ್ಲ. ನನಗೆ ಮೈಥಿಲಿಯ ವಿಷಯ ತಿಳಿಯದು. ನನ್ನನ್ನು ನೀವು ದಹಿಸಿದಮೇಲೆ ನನ್ನ ನಿಜರೂಪವನ್ನು ಧರಿಸಿ, ಮೈಥಿಲಿಯ ಸುಳಿವನ್ನು ತಿಳಿಯಬಲ್ಲವನು ಯಾರೆಂದು ಹೇಳುವೆನು! ಪ್ರಭು, ನನ್ನನ್ನು ದಹಿಸುವ ವರೆಗೆ ಅದನ್ನರಿಯುವ ಶಕ್ತಿ ನನಗಿಲ್ಲ (೨೭–೨೮). ನಿನ್ನ ಸೀತೆಯನ್ನಪ ಹರಿಸಿದ ಪರಾಕ್ರಮಿಯಾದ ರಾಕ್ಷಸನು ಯಾರೆಂಬ ಅರಿವು ಈಗ ನನಗಿಲ್ಲ. ರಾಘವ, ಶಾಪದೋಷದಿಂದ ನನ್ನ ದಿವ್ಯಜ್ಞಾನವು ನಷ್ಟವಾಗಿದೆ (೨೯). ನನ್ನ ಅಪರಾಧದಿಂದಲೇ ನಾನು ಲೋಕನಿಂದಿತವಾದ ಈ ರೂಪವನ್ನು ಪಡೆದೆನು. ಆದರೆ ಸೂರ್ಯನ ವಾಹನವು ಬಳಲಿ ಅವನು ಅಸ್ತಂಗತನಾಗು ವುದರೊಳಗೆ, ಶ್ರೀರಾಮ, ನನ್ನನ್ನು ಹಳ್ಳಕ್ಕೆಸೆದು ಯಥಾವಿಧಿಯಾಗಿ ಸುಟ್ಟು ಬಿಡು. ಹೀಗೆ ನಾನು ಹಳ್ಳದಲ್ಲಿ ಭಸ್ಮವಾದಮೇಲೆ, ರಘುನಂದನ, ಆ ರಾಕ್ಷಸ ನನ್ನು ತಿಳಿಯಬಲ್ಲ ಪುರುಷನು ಯಾರೆಂದು ಹೇಳುವೆನು. ನೀತಿವಂತ ನಾದ ಆ ಪುರುಷನೊಡನೆ ನೀನು ಸ್ನೇಹವನ್ನು ಬೆಳೆಸು (೩೦–೩೨). ಆ ಪರಾಕ್ರಮಿಯು ಸಂಪ್ರೀತನಾಗಿ ನಿನಗೆ ನೆರವು ನೀಡುವನು. ಈ ಮೂರು ಲೋಕಗಳಲ್ಲಿಯೂ ಅವನಿಗೆ ಪರಿಚಯವಿಲ್ಲದ ಸ್ಥಳವಿಲ್ಲ.

ಸರ್ವಾನ್ ಪರಿಸೃತೋ ಲೋಕಾನ್ ಪುರಾಸೌ ಕಾರಣಾಂತರೇ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಏಕಸಪ್ತತಿತಮಃ ಸರ್ಗಃ

---

## ದ್ವಿಸಪ್ತತಿತಮಃ ಸರ್ಗಃ

### ಸೀತಾಧಿಗಮೋಪಾಯಃ

ಏವಮುಕ್ತೌ ತು ತೌ ವೀರೌ ಕಬಂಧೇನ ನರೇಶ್ವರೌ ।
ಗಿರಿಪ್ರದರಮಾಸಾದ್ಯ ಪಾವಕಂ ವಿಸಸರ್ಜತುಃ ॥ ೧

ಲಕ್ಷ್ಮಣಸ್ತು ಮಹೋಲ್ಕಾಭಿರ್ಜ್ವಲಿತಾಭಿಃ ಸಮಂತತಃ ।
ಚಿತಾಮಾದೀಪಯಾಮಾಸ ಸಾ ಪ್ರಜಜ್ವಾಲ ಸರ್ವತಃ ॥ ೨

ತಚ್ಛರೀರಂ ಕಬಂಧಸ್ಯ ಘೃತಪಿಂಡೋಪಮಂ ಮಹತ್ ।
ಮೇದಸಾ ಪಚ್ಯಮಾನಸ್ಯ ಮಂದಂ ದಹತಿ ಪಾವಕಃ ॥ ೩

---

ರಾಘವ, ಒಂದಾನೊಂದು ಕಾರಣದಿಂದ ಆತನು ಮೂರು ಲೋಕಗಳನ್ನೂ ಸುತ್ತಿದ್ದಾನೆ" ಎಂದು ನುಡಿದನು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತೊಂದನೆಯ ಸರ್ಗ

---

## ಸರ್ಗ ೭೨

ಕಬಂಧನು ದಿವ್ಯರೂಪವನ್ನು ಪಡೆಯುವುದು. ಶ್ರೀರಾಮನಿಗೆ ಸುಗ್ರೀವನು ತಕ್ಕ ಮಿತ್ರನೆಂದೂ, ಅವನ ನೆರವಿನಿಂದ ಸೀತೆಯನ್ನು ಮರಳಿ ಪಡೆಯಬಹುದೆಂದೂ ಕಬಂಧನು ಶ್ರೀರಾಮನಿಗೆ ತಿಳಿಸುವುದು.

ಕಬಂಧನ ನುಡಿಯನ್ನು ಕೇಳಿ ವೀರರಾದ ಆ ರಾಜಪುತ್ರರು ಬೆಟ್ಟದ ಒಂದು ಕೊರಕಲಿಗೆ ಅವನನ್ನು ಸಾಗಿಸಿ ಬೆಂಕಿಯನ್ನು ಉತ್ಪಾದಿಸಿದರು. ಲಕ್ಷ್ಮಣನು ಚಿತೆಯನ್ನು ನಿರ್ಮಿಸಿ ಸುತ್ತಲೂ ಉರಿಯುವ ದೊಡ್ಡಕೊಳ್ಳಿಗಳಿಂದ ಅದಕ್ಕೆ ಬೆಂಕಿಯನ್ನು ಹಚ್ಚಿದನು. ಬೆಂಕಿಯು ಪ್ರಜ್ವಲಿಸಿತು (೧–೨). ಮೇದಸ್ಸಿನಿಂದ ಕೊಬ್ಬಿದ ಕಬಂಧನ ದೊಡ್ಡ ಕಳೇವರವು ಹೆಪ್ಪು

ಸ ವಿಧೂಯ ಚಿತಾಮಾಶು ವಿಧೂಮೋಽಗ್ನಿರಿವೋತ್ಥಿತಃ ।
ಅರಜೇ ವಾಸಸೀ ಬಿಭ್ರನ್ಮಾಲಾಂ ದಿವ್ಯಾಂ ಮಹಾಬಲಃ ॥ ೪

ತತಶ್ಚಿತಾಯಾ ವೇಗೇನ ಭಾಸ್ವರೋ ವಿಮಲಾಂಬರಃ ।
ಉತ್ಪಪಾತಾಶು ಸಂಹೃಷ್ಟಃ ಸರ್ವಪ್ರತ್ಯಂಗಭೂಷಣಃ ॥ ೫

ವಿಮಾನೇ ಭಾಸ್ವರೇ ತಿಷ್ಠನ್ ಹಂಸಯುಕ್ತೇ ಯಶಸ್ಕರೇ ।
ಪ್ರಭಯಾ ಚ ಮಹಾತೇಜಾ ದಿಶೋ ದಶ ವಿರಾಜಯನ್ । ೬

ಸೋಽಂತರಿಕ್ಷಗತೋ ರಾಮಂ ಕಬಂಧೋ ವಾಕ್ಯಮಬ್ರವೀತ್ ।
ಶೃಣು ರಾಘವ ತತ್ತ್ವೇನ ಯಥಾ ಸೀತಾಮವಾಪ್ಸ್ಯಸಿ ॥ ೭

ರಾಮ ಷಡ್ಯುಕ್ತಯೋ ಲೋಕೇ ಯಾಭಿಃ ಸರ್ವಂ ವಿಮೃಶ್ಯತೇ ।
ಪರಿಮೃಷ್ಟೋ ದಶಾಂತೇನ ದಶಾಭಾಗೇನ ಸೇವ್ಯತೇ ॥ ೮

---

ಗಟ್ಟಿದ ತುಪ್ಪದ ರಾಶಿಯಂತಿತ್ತು! ಬೆಂಕಿಯು ಆ ದೇಹವನ್ನು ಮೆಲ್ಲನೆ ಸುಡಲಾರಂಭಿಸಿತು. ಅನಂತರ ಒಬ್ಬ ಪುರುಷನು ಧೂಮವಿಲ್ಲದ ಅಗ್ನಿಯಂತೆ ಬೆಳಗುತ್ತ ಚಿತೆಯಿಂದ ಹೊರಟನು. ಆತನು ಬಲಾಢ್ಯನಾಗಿದ್ದನಲ್ಲದೆ, ಶುಭ್ರವಸ್ತ್ರಗಳನ್ನುಟ್ಟು ದಿವ್ಯಮಾಲೆಗಳನ್ನು ಧರಿಸಿದ್ದನು (೩–೪). ಸಂತುಷ್ಟನಾಗಿದ್ದ ಆ ತೇಜಸ್ವಿಯು ಕೂಡಲೆ ಚಿತೆಯನ್ನು ಬಿಟ್ಟು ಗಗನವನ್ನಡರಿದನು. ಸಕಲದಿವ್ಯಾಭರಣಗಳನ್ನೂ ಧರಿಸಿದ್ದ ಆ ಪುರುಷನು ಹಂಸಯುಕ್ತವಾದ ಒಂದು ದಿವ್ಯ ವಿಮಾನದಲ್ಲಿ ಕುಳಿತನು. ಆ ತೇಜೋವಂತನು ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗಿಸುತ್ತಿದ್ದನು (೫–೬). ಅವನೇ ಕಬಂಧ. ಆತನು ಅಂತರಿಕ್ಷದಲ್ಲಿದ್ದು ಶ್ರೀರಾಮನನ್ನು ಸಂಬೋಧಿಸಿ ಹೀಗೆಂದನು : "ಶ್ರೀರಾಮ, ನಿನಗೆ ಸೀತಾದೇವಿಯು ಹೇಗೆ ದೊರೆಯುವಳೆಂದು ಯಥಾರ್ಥವಾಗಿ ಹೇಳುವೆನು, ಕೇಳು : ಯಾವ ಕಾರ್ಯವನ್ನು ಸಾಧಿಸುವುದಕ್ಕಾದರೂ ಸಂಧಿ, ವಿಗ್ರಹ ಮೊದಲಾದ ಆರು ಯುಕ್ತಿಗಳುಂಟು.* ಸಕಲ ವಿಷಯಗಳೂ ಇವುಗಳ ವಿಚಾರಕ್ಕೆ ಒಳಪಟ್ಟಿವೆ. ದುರವಸ್ಥೆಗೊಳಗಾದ ಮನುಷ್ಯನು ತನ್ನಂತೆ ದುರವಸ್ಥೆಗೊಳಗಾದವನಿಂದ ಸಹಕಾರವನ್ನು ಪಡೆಯು

---

* ಅನುಬಂಧವನ್ನು ನೋಡಿ.

ದಶಾಭಾಗಗತೋ ಹೀನಸ್ತ್ವಂ ಹಿ ರಾಮ ಸಲಕ್ಷ್ಮಣಃ ।
ಯತ್ಕೃತೇ ವ್ಯಸನಂ ಪ್ರಾಪ್ತಂ ತ್ವಯಾ ದಾರಪ್ರಧರ್ಷಣಮ್ ॥ ೯

ತದವಶ್ಯಂ ತ್ವಯಾ ಕಾರ್ಯಃ ಸ ಸುಹೃತ್ ಸುಹೃದಾಂ ವರ ।
ಅಕೃತ್ವಾ ಹಿ ನ ತೇ ಸಿದ್ಧಿಮಹಂ ಪಶ್ಯಾಮಿ ಚಿಂತಯನ್ ॥ ೧೦

ಶ್ರೂಯತಾಂ ರಾಮ ವಕ್ಷ್ಯಾಮಿ ಸುಗ್ರೀವೋ ನಾಮ ವಾನರಃ ।
ಭ್ರಾತ್ರಾ ನಿರಸ್ತಃ ಕ್ರುದ್ಧೇನ ವಾಲಿನಾ ಶಕ್ರಸೂನುನಾ ॥ ೧೧

ಋಷ್ಯಮೂಕೇ ಗಿರಿವರೇ ಪಂಪಾಪರ್ಯಂತಶೋಭಿತೇ ।
ನಿವಸತ್ಯಾತ್ಮವಾನ್ ವೀರಶ್ಚತುರ್ಭಿಃ ಸಹ ವಾನರೈಃ ॥ ೧೨

ವಾನರೇಂದ್ರೋ ಮಹಾವೀರ್ಯಸ್ತೇಜೋವಾನಮಿತಪ್ರಭಃ ।
ಸತ್ಯಸಂಧೋ ವಿನೀತಶ್ಚ ಧೃತಿಮಾನ್ ಮತಿಮಾನ್ ಮಹಾನ್ ॥ ೧೩

ದಕ್ಷಃ ಪ್ರಗಲ್ಭೋ ದ್ಯುತಿಮಾನ್ ಮಹಾಬಲಪರಾಕ್ರಮಃ ।
ಭ್ರಾತ್ರಾ ವಿವಾಸಿತೋ ರಾಮ ರಾಜ್ಯಹೇತೋರ್ಮಹಾಬಲಃ ॥ ೧೪

---

ತ್ತಾನೆ (೭–೮). ಶ್ರೀರಾಮ, ನೀನು ರಾಜ್ಯವನ್ನೂ ಪತ್ನಿಯನ್ನೂ ಕಳೆದುಕೊಂಡು ಲಕ್ಷ್ಮಣಸಮೇತನಾಗಿ ದುರವಸ್ಥೆಗೆ ಒಳಗಾಗಿದ್ದೀಯೆ. ಈ ದುರ್ದೈವದಿಂದಲೇ ನೀನು ಭಾರ್ಯಾಪಹಾರದ ವ್ಯಸನದಲ್ಲಿ ಸಿಕ್ಕಿದ್ದೀಯೆ (೯). ನೀನು ಅರ್ಹರಾದವರಿಗೆ ಶ್ರೇಷ್ಠನಾದ ಮಿತ್ರನಾಗಬಲ್ಲೆ. ಆದ್ದರಿಂದ ನಾನು ಸೂಚಿಸ ತಕ್ಕವನೊಬ್ಬನೊಡನೆ ನೀನು ಮೈತ್ರಿಯನ್ನು ಬೆಳೆಸಬೇಕು. ಹಾಗಿಲ್ಲದೆ ನಿನ್ನ ಕಾರ್ಯವು ಸಿದ್ಧಿಸುವ ಬಗೆ ನನಗೆ ತೋರುವುದಿಲ್ಲ (೧೦). ಶ್ರೀರಾಮ, ಅಂತಹವನು ಯಾರೆಂಬುದನ್ನು ಹೇಳುವೆನು, ಕೇಳು : ಸುಗ್ರೀವನೆಂಬ ಒಬ್ಬ ವಾನರೋತ್ತಮನಿದ್ದಾನೆ. ಅವನಿಗೆ ಇಂದ್ರಪುತ್ರನಾದ ವಾಲಿಯೆಂಬ ಅಣ್ಣನಿದ್ದಾನೆ. ವಾಲಿಯು ಕಾರಣಾಂತರದಿಂದ ಕ್ರುದ್ಧನಾಗಿ ಸುಗ್ರೀವನನ್ನು ದೇಶದಿಂದ ಹೊರಗೆ ಅಟ್ಟಿದ್ದಾನೆ (೧೧). ಈಗ ಸುಗ್ರೀವನು ಪಂಪಾ ಸರೋವರದ ತೀರದಲ್ಲಿ ಶೋಭಿಸುವ ಋಷ್ಯಮೂಕಪರ್ವತದಲ್ಲಿ ನಾಲ್ವರು ವಾನರೋತ್ತಮರೊಡನೆ ವಾಸವಾಗಿದ್ದಾನೆ. ಆ ವಾನರೇಂದ್ರನು ಧೀರನೂ ಮಹಾವೀರನೂ ತೇಜಸ್ವಿಯೂ ಪ್ರಭಾವಶಾಲಿಯೂ ಆದವನು. ಅವನು ಸತ್ಯಸಂಧ, ವಿನೀತ, ಸ್ಥೈರ್ಯವುಳ್ಳವನು, ಬಹಳ ಬುದ್ಧಿವಂತ (೧೨–೧೩). ಆ ಸುಗ್ರೀವನು ಕಾರ್ಯದಕ್ಷ, ಸಾಹಸಿ, ಓಜಸ್ವಿ, ಮಹಾಪರಾಕ್ರಮಿ.

ಸ ತೇ ಸಹಾಯೋ ಮಿತ್ರಂ ಚ ಸೀತಾಯಾಃ ಪರಿಮಾರ್ಗಣೇ ।
ಭವಿಷ್ಯತಿ ಹಿ ಹೇ ರಾಮ ಮಾ ಚ ಶೋಕೇ ಮನಃ ಕೃಥಾಃ ॥ ೧೫

ಭವಿತವ್ಯಂ ಹಿ ಯಚ್ಚಾಪಿ ನ ತಚ್ಛಕ್ಯಮಿಹಾನ್ಯಥಾ ।
ಕರ್ತುಮಿಕ್ಷ್ವಾಕುಶಾರ್ದೂಲ ಕಾಲೋ ಹಿ ದುರತಿಕ್ರಮಃ ॥ ೧೬

ಗಚ್ಛ ಶೀಘ್ರಮಿತೋ ರಾಮ ಸುಗ್ರೀವಂ ತಂ ಮಹಾಬಲಮ್ ।
ವಯಸ್ಯಂ ತಂ ಕುರು ಕ್ಷಿಪ್ರಮಿತೋ ಗತ್ವಾದ್ಯ ರಾಘವ ॥ ೧೭

ಅದ್ರೋಹಾಯ ಸಮಾಗಮ್ಯ ದೀಪ್ಯಮಾನೇ ವಿಭಾವಸೌ ।
ಸ ಚ ತೇ ನಾವಮಂತವ್ಯಃ ಸುಗ್ರೀವೋ ವಾನರಾಧಿಪಃ ॥ ೧೮

ಕೃತಜ್ಞಃ ಕಾಮರೂಪೀ ಚ ಸಹಾಯಾರ್ಥೀ ಚ ವೀರ್ಯವಾನ್ ।
ಶಕ್ತೌ ಹ್ಯದ್ಯ ಯುವಾಂ ಕರ್ತುಂ ಕಾರ್ಯಂ ತಸ್ಯ ಚಿಕೀರ್ಷಿತಮ್ ॥ ೧೯

ಕೃತಾರ್ಥೋ ವಾಕೃತಾರ್ಥೋ ವಾ ಕೃತ್ಯಂ ತವ ಕರಿಷ್ಯತಿ ।
ಸ ಋಕ್ಷರಜಸಃ ಪುತ್ರಃ ಪಂಪಾಮಟತಿ ಶಂಕಿತಃ ॥ ೨೦

---

ಹೀಗಿದ್ದರೂ, ಶ್ರೀರಾಮ, ಸುಗ್ರೀವನ ಅಣ್ಣನಾದ ವಾಲಿಯು ರಾಜ್ಯನಿಮಿತ್ತವಾಗಿ ಅವನನ್ನು ಹೊರಗಟ್ಟಿದ್ದಾನೆ. ಆ ಸುಗ್ರೀವನು ನಿನಗೆ ಮಿತ್ರನಾಗಿ ಸೀತಾದೇವಿಯನ್ನು ಹುಡುಕುವುದಕ್ಕೆ ಸಹಾಯಮಾಡುವನು. ನೀನು ಶೋಕಿಸಬೇಡ (೧೪–೧೫). ಭವಿತವ್ಯವನ್ನು ತಪ್ಪಿಸಲು ಯಾರಿಗೂ ಶಕ್ಯವಿಲ್ಲ. ಇಕ್ಷ್ವಾಕುವಂಶತಿಲಕ, ಕಾಲವನ್ನು ಅತಿಕ್ರಮಿಸಲು ಯಾರಿಂದಲೂ ಆಗದು. ಆದ್ದರಿಂದ, ಶ್ರೀರಾಮ, ಮಹಾಬಲನಾದ ಸುಗ್ರೀವನ ಬಳಿಗೆ ಬೇಗನೆ ಹೋಗು. ಆದಷ್ಟು ಬೇಗನೆ ಸುಗ್ರೀವನನ್ನು ನಿನ್ನ ಮಿತ್ರನನ್ನಾಗಿ ಮಾಡಿಕೊ (೧೬–೧೭). ಯಾರಿಗೂ ದ್ರೋಹವಾಗದಂತೆ ಅಗ್ನಿಸಾಕ್ಷಿಕವಾಗಿ ಸ್ನೇಹವನ್ನು ಬೆಳೆಸು. ವಾನರೇಶ್ವರನಾದ ಸುಗ್ರೀವನನ್ನು ಉಪೇಕ್ಷೆಯಿಂದ ಕಡೆಗಾಣಿಸಬೇಡ. ಆ ವೀರನು ನಿನಗೆ ಕೃತಜ್ಞನಾಗಿ ನಡೆದುಕೊಳ್ಳುವನು. ಮನಸ್ಸು ಬಂದಂತೆ ರೂಪವನ್ನು ಧರಿಸುವ ಶಕ್ತಿ ಅವನಿಗುಂಟು. ಅವನಿಗೂ ನಿನ್ನ ನೆರವು ಬೇಕಾಗಿದೆ. ನೀನೂ ಲಕ್ಷ್ಮಣನೂ ಸುಗ್ರೀವನ ಇಷ್ಟಾರ್ಥವನ್ನು ನೆರವೇರಿಸಿಕೊಡಲು ಸಮರ್ಥರಾಗಿದ್ದೀರಿ (೧೮–೧೯). ಸುಗ್ರೀವನ ಇಷ್ಟಾರ್ಥವು ನೆರವೇರಲಿ–ನೆರವೇರದಿರಲಿ, ಅವನು ನಿನ್ನ ಕಾರ್ಯವನ್ನು ನಡೆಸಿಕೊಡು

ಭಾಸ್ಕರಸ್ಯೌರಸಃ ಪುತ್ರೋ ವಾಲಿನಾ ಕೃತಕಿಲ್ಬಿಷಃ ।
ಸಂನಿಧಾಯಾಯುಧಂ ಕ್ಷಿಪ್ರಮೃಷ್ಯಮೂಕಾಲಯಂ ಕಪಿಮ್ ॥ ೨೧

ಕುರು ರಾಘವ ಸತ್ಯೇನ ವಯಸ್ಯಂ ವನಚಾರಿಣಮ್ ।
ಸ ಹಿ ಸ್ಥಾನಾನಿ ಸರ್ವಾಣಿ ಕಾರ್ತ್ಸ್ನ್ಯೇನ ಕಪಿಕುಂಜರಃ ॥ ೨೨

ನರಮಾಂಸಾಶಿನಾಂ ಲೋಕೇ ನೈಪುಣ್ಯಾದಧಿಗಚ್ಛತಿ ।
ನ ತಸ್ಯಾವಿದಿತಂ ಲೋಕೇ ಕಿಂಚಿದಸ್ತಿ ಹಿ ರಾಘವ ॥ ೨೩

ಯಾವತ್ ಸೂರ್ಯಃ ಪ್ರತಪತಿ ಸಹಸ್ರಾಂಶುರರಿಂದಮ ।
ಸ ನದೀರ್ವಿಪುಲಾನ್ ಶೈಲಾನ್ ಗಿರಿದುರ್ಗಾಣಿ ಕಂದರಾನ್ ॥ ೨೪

ಅನ್ವೀಷ್ಯ ವಾನರೈಃ ಸಾರ್ಧಂ ಪತ್ನೀಂ ತೇಽಧಿಗಮಿಷ್ಯತಿ ।
ವಾನರಾಂಶ್ಚ ಮಹಾಕಾಯಾನ್ ಪ್ರೇಷಯಿಷ್ಯತಿ ರಾಘವ ॥ ೨೫

---

ವನು. ಅವನು ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರ; ವಾಲಿಯ ಭಯದಿಂದ ಪಂಪಾಸರೋವರದ ಎಲ್ಲೆಯಲ್ಲಿಯೇ ಸುತ್ತುತ್ತಿದ್ದಾನೆ (೨೦). ಅವನು ಸೂರ್ಯನ ಔರಸಪುತ್ರ. ವಾಲಿಯಿಂದ ಅವನಿಗೆ ಅನ್ಯಾಯವಾಗಿದೆ. ರಾಘವ, ಋಷ್ಯಮೂಕದಲ್ಲಿ ನೆಲೆಸಿರುವ ಆ ವಾನರನೊಡನೆ ಆಯುಧಸಾಕ್ಷಿಕವಾಗಿಯೂ ಪ್ರತಿಜ್ಞಾಪೂರ್ವಕವಾಗಿ ಸಖ್ಯವನ್ನು ಬೆಳೆಸು. ಆ ಕಪಿಶ್ರೇಷ್ಠನು ಈ ಜಗತ್ತಿನಲ್ಲಿರುವ ಸಮಸ್ತ ಪ್ರದೇಶಗಳನ್ನೂ ಸಮಗ್ರವಾಗಿ ಬಲ್ಲನು (೨೧–೨೨). ನರಮಾಂಸಭಕ್ಷಕರಾದ ರಾಕ್ಷಸರ ನಿವಾಸಕ್ಕೂ ಹೋಗಿ ಚಾತುರ್ಯದಿಂದ ಅವರ ಗುಟ್ಟನ್ನು ತಿಳಿಯಬಲ್ಲನು. ರಾಘವ, ಈ ಲೋಕದಲ್ಲಿ ಸುಗ್ರೀವನಿಗೆ ತಿಳಿಯದ ಒಂದು ಸ್ಥಳವೂ ಇಲ್ಲ. ಸಹಸ್ರಕಿರಣನಾದ ಭಾಸ್ಕರನು ಎಲ್ಲಿಯವರಗೆ ಬೆಳಕನ್ನು ಬೀರುವನೋ ಅಲ್ಲಿಯವರೆಗೆ ಅವನು ಹೋಗಿ ನಿನ್ನ ಪತ್ನಿಯನ್ನು ಅರಸಬಲ್ಲನು. ನದಿಗಳು, ವಿಶಾಲವಾದ ಪರ್ವತಗಳು, ಪರ್ವತಗಳೇ ಕೋಟೆಯಂತಿರುವ ಮಧ್ಯಪ್ರದೇಶಗಳು, ಕಂದಕಗಳು ಮೊದಲಾದವನ್ನು ಹುಡುಕಬಲ್ಲನು (೨೩–೨೪). ವಾನರರೊಡನೆ ಸೇರಿ ಸೀತಾದೇವಿಯಿರುವ ಸ್ಥಳವನ್ನು ನಿನಗೋಸ್ಕರ ಕಂಡುಹಿಡಿಯುವನು. ರಾಘವ, ನಿನ್ನ ವಿರಹದಿಂದ ಶೋಕಾತುರಳಾಗಿರುವ ಸೀತಾದೇವಿಯನ್ನು ಅರಸುವುದಕ್ಕಾಗಿ ಮಹಾ

ದಿಶೋ ವಿಚೇತುಂ ತಾಂ ಸೀತಾಂ ತ್ವದ್ವಿಯೋಗೇನ ಶೋಚತೀಮ್ ।
ಸ ಜ್ಞಾಸ್ಯತಿ ವರಾರೋಹಾಂ ನಿರ್ಮಲಾಂ ರಾವಣಾಲಯೇ ॥ ೨೬

ಸ ಮೇರುಶೃಂಗಾಗ್ರಗತಾಮನಿಂದಿತಾಂ
ಪ್ರವಿಶ್ಯ ಪಾತಾಲತಲೇಽಪಿ ವಾ ಶ್ರಿತಾಮ್ ।
ಪ್ಲವಂಗಮಾನಾಂ ಪ್ರವರಸ್ತವ ಪ್ರಿಯಾಂ
ನಿಹತ್ಯ ರಕ್ಷಾಂಸಿ ಪುನಃ ಪ್ರದಾಸ್ಯತಿ ॥ ೨೭

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ದ್ವಿಸಪ್ತತಿತಮಃ ಸರ್ಗಃ

ಕಾಯರಾದ ಕಪಿಗಳನ್ನು ಸುಗ್ರೀವನು ದಿಕ್ಕುದಿಕ್ಕುಗಳಿಗೆ ಕಳಿಸುವನು. ಪತಿವ್ರತೆಯಾದ ಆ ದೇವಿಯು ರಾವಣನ ಯಾವ ಭವನದಲ್ಲಿರುವಳೆಂಬುದನ್ನು ಕಂಡುಹಿಡಿಯುವನು (೨೫–೨೬). ಶ್ರೀರಾಮ, ಆ ಸಾಧ್ವಿಯು ಮೇರು ಶಿಖರದ ತುದಿಯಲ್ಲಿರಲಿ, ಪಾತಾಳದ ಬುಡದಲ್ಲಿರಲಿ, ಆ ವಾನರೋತ್ತಮನು ಅಲ್ಲಿಗೆ ಹೋಗಿ, ರಾಕ್ಷಸರನ್ನು ಸದೆಬಡಿದು ನಿನ್ನ ಕಾಂತೆಯನ್ನು ತಂದು ನಿನಗೊಪ್ಪಿಸುವನು" ಎಂದು ಹೇಳಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತೆರಡನೆಯ ಸರ್ಗ

## ತ್ರಿಸಪ್ತತಿತಮಃ ಸರ್ಗಃ

### ಋಷ್ಯಮೂಕಮಾರ್ಗಕಥನಮ್

ದರ್ಶಯಿತ್ವಾ ತು ರಾಮಾಯ ಸೀತಾಯಾಃ ಪರಿಮಾರ್ಗಣೇ ।
ವಾಕ್ಯಮನ್ವರ್ಥಮರ್ಥಜ್ಞಃ ಕಬಂಧಃ ಪುನರಬ್ರವೀತ್ ॥ ೧

ಏಷ ರಾಮ ಶಿವಃ ಪಂಥಾ ಯತ್ರೈತೇ ಪುಷ್ಪಿತಾ ದ್ರುಮಾಃ ।
ಪ್ರತೀಚೀಂ ದಿಶಮಾಶ್ರಿತ್ಯ ಪ್ರಕಾಶಂತೇ ಮನೋರಮಾಃ ॥ ೨

ಜಂಬೂಪ್ರಿಯಾಲಪನಸಪ್ಲಕ್ಷನ್ಯಗ್ರೋಧತಿಂದುಕಾಃ ।
ಅಶ್ವತ್ಥಾಃ ಕರ್ಣಿಕಾರಾಶ್ಚ ಚೂತಾಶ್ಚಾನ್ಯೇ ಚ ಪಾದಪಾಃ ॥ ೩

ಧನ್ವನಾ ನಾಗವೃಕ್ಷಾಶ್ಚ ತಿಲಕಾ ನಕ್ತಮಾಲಕಾಃ ।
ನೀಲಾಶೋಕಾಃ ಕದಂಬಾಶ್ಚ ಕರವೀರಾಶ್ಚ ಪುಷ್ಪಿತಾಃ ॥ ೪

ಅಗ್ನಿಮುಖ್ಯಾ ಅಶೋಕಾಶ್ಚ ಸುರಕ್ತಾಃ ಪಾರಿಭದ್ರಕಾಃ ।
ತಾನಾರುಹ್ಯಾಥವಾ ಭೂಮೌ ಪಾತಯಿತ್ವಾ ಚ ತಾನ್ ಬಲಾತ್ ॥ ೫

### ಸರ್ಗ ೭೩

ಕಬಂಧನು ಋಷ್ಯಮೂಕಪರ್ವತಕ್ಕೆ ಹೋಗುವ ಮಾರ್ಗವನ್ನು ಶ್ರೀರಾಮನಿಗೆ ವಿವರಿಸುವುದು. ಸುಗ್ರೀವನೊಡನೆ ಸ್ನೇಹವನ್ನು ಬೆಳೆಸಬೇಕೆಂದು ಹೇಳಿ ಅವನು ಸ್ವರ್ಗಕ್ಕೆ ಹೋಗುವುದು.

ಕಾರ್ಯಜ್ಞನಾದ ಕಬಂಧನು ಶ್ರೀರಾಮನಿಗೆ ಸೀತಾನ್ವೇಷಣೆಯ ಉಪಾಯವನ್ನು ತಿಳಿಸಿ ಪುನಃ ಹೀಗೆಂದನು : "ಶ್ರೀರಾಮ, ಇತ್ತ ಪಶ್ಚಿಮ ದಿಕ್ಕಿನಲ್ಲಿ ಮರಗಳು ಅರಳಿ ಮನೋರಮವಾಗಿ ಶೋಭಿಸುತ್ತವೆಯಲ್ಲ, ಇದು ನಿನಗೆ ಶುಭಕರವಾದ ಮಾರ್ಗ (೧–೨). ಇಲ್ಲಿ ನೇರಿಳೆ, ಪ್ರಿಯಾಲ, ಹಲಸು. ಪ್ಲಕ್ಷ, ಆಲ, ತುಂಬುರ, ಅರಳಿ, ಕಣಗಿಲೆ, ಮಾವು ಮೊದಲಾದ ಮರಗಳಿವೆ, ಅಲ್ಲದೆ ಧನ್ವನ, ನಾಗಕೇಸರ, ತಿಲಕ, ನಕ್ತಮಾಲ, ನಿಲಾಶೋಕ, ಈಚಲು ಮತ್ತು ಕರವೀರಗಳು ಅರಳಿವೆ (೩–೪). ಗೇರು, ಅಶೋಕ, ರಕ್ತಚಂದನ ಮತ್ತು ಮಂದಾರವೃಕ್ಷಗಳಿವೆ. ಹಣ್ಣುಗಳಿರುವ ಮರಗಳನ್ನು ಹತ್ತಿ

ಫಲಾನ್ಯಮೃತಕಲ್ಪಾನಿ ಭಕ್ಷಯಂತೌ ಗಮಿಷ್ಯಥಃ ।
ತದತಿಕ್ರಮ್ಯ ಕಾಕುತ್ಸ್ಥ ವನಂ ಪುಷ್ಪಿತಪಾದಪಮ್ ॥ ೬

ನಂದನಪ್ರತಿಮಂ ಚಾನ್ಯತ್ ಕುರವೋ ಹ್ಯುತ್ತರಾ ಇವ ।
ಸರ್ವಕಾಮಫಲಾ ಯತ್ರ ಪಾದಪಾಸ್ತು ಮಧುಸ್ರವಾಃ ॥ ೭

ಸರ್ವೇ ಚ ಋತವಸ್ತತ್ರ ವನೇ ಚೈತ್ರರಥೇ ಯಥಾ ।
ಫಲಭಾರಾನತಾಸ್ತತ್ರ ಮಹಾವಿಟಪಧಾರಿಣಃ ॥ ೮

ಶೋಭಂತೇ ಸರ್ವತಸ್ತತ್ರ ಮೇಘಪರ್ವತಸಂನಿಭಾಃ ।
ತಾನಾರುಹ್ಯಾಥವಾ ಭೂಮೌ ಪಾತಯಿತ್ವಾ ಯಥಾಸುಖಮ್ ॥ ೯

ಫಲಾನ್ಯಮೃತಕಲ್ಪಾನಿ ಲಕ್ಷ್ಮಣಸ್ತೇ ಪ್ರದಾಸ್ಯತಿ ।
ಚಂಕ್ರಮಂತೌ ವರಾನ್ ದೇಶಾನ್ ಶೈಲಾಚ್ಛೈಲಂ ವನಾದ್ವನಮ್ ॥

ತತಃ ಪುಷ್ಕರಿಣೀಂ ವೀರೌ ಪಂಪಾಂ ನಾಮ ಗಮಿಷ್ಯಥಃ ।
ಅಶರ್ಕರಾಮವಿಭ್ರಂಶಾಂ ಸಮತೀರ್ಥಾಮಶೈವಲಾಮ್ ॥ ೧೧

---

ಅಥವಾ ಮರಗಳನ್ನು ಉರುಳಿಸಿ ಅಮೃತದಂತೆ ಸಿಹಿಯಾದ ಹಣ್ಣುಗಳನ್ನು ನೀವೀರ್ವರೂ ಭಕ್ಷಿಸುತ್ತ ಪ್ರಯಾಣಮಾಡಿರಿ. ಪುಷ್ಪಿತವೃಕ್ಷಗಳಿರುವ ಆ ವನವನ್ನು ದಾಟಿ ಮುಂದೆ ಹೋಗಿರಿ (೫–೬). ಅನಂತರ ಉತ್ತರ ಕುರುದೇಶದಂತೆಯೂ ನಂದನವನದಂತೆಯೂ ಇರುವ ಇನ್ನೊಂದು ವನವನ್ನು ಸೇರುವಿರಿ. ಅಲ್ಲಿ ನಿಮಗೆ ಮರಗಳಲ್ಲಿ ಬೇಕುಬೇಕಾದ ಹಣ್ಣುಗಳು ದೊರೆಯುತ್ತವೆ; ಜೇನು ಸುರಿಯುತ್ತದೆ! ಕುಬೇರನ ಚೈತ್ರರಥವನದಲ್ಲಿರುವಂತೆ ಸಕಲ ಋತುಗಳೂ ಅಲ್ಲಿ ಏಕಕಾಲದಲ್ಲಿ ನಡೆಯುತ್ತವೆ (ಸಕಲ ಋತುಗಳ ಫಲ ಪುಷ್ಪಗಳೂ ದೊರೆಯುತ್ತವೆ). ದೊಡ್ಡ ದೊಡ್ಡ ಕೊಂಬೆಗಳಿರುವ ಮರಗಳು ಹಣ್ಣಿನ ಭಾರದಿಂದ ಬಳುಕುತ್ತವೆ (೭–೮). ಆ ಮರಗಳು ಮೇಘದಂತೆಯೂ ಪರ್ವತದಂತೆಯೂ ಸಾಂದ್ರವಾಗಿ ವಿಶಾಲೋನ್ನತವಾಗಿವೆ. ಶ್ರೀರಾಮ, ಲಕ್ಷ್ಮಣನು ತನಗೆ ಸೌಕರ್ಯವಾದಂತೆ ಆ ಮರಗಳನ್ನು ಹತ್ತಿಯೋ ಉರುಳಿಸಿಯೋ ಅಮೃತಸದೃಶವಾದ ಹಣ್ಣುಗಳನ್ನು ಕಿತ್ತು ನಿನಗೆ ಕೊಡುವನು! ಹೀಗೆ, ಎಲೈ ವೀರರೆ, ಶೈಲದಿಂದ ಶೈಲಕ್ಕೂ ವನದಿಂದ ವನಕ್ಕೂ ಉತ್ತಮಪ್ರದೇಶಗಳಲ್ಲಿ ಸಂಚರಿಸುತ್ತ ಹೋಗಿರಿ (೯–೧೦). ಮುಂದೆ ಪಂಪಾ ಎಂಬ ಪುಷ್ಕರಿಣಿಯನ್ನು ಸೇರುವಿರಿ. ಆ ಸರೋವರದಲ್ಲಿ ಜಾರುವ ನೊರಜು

ರಾಮ ಸಂಜಾತವಾಲೂಕಾಂ ಕಮಲೋತ್ಪಲಶಾಲಿನೀಮ್ ।
ತತ್ರ ಹಂಸಾಃ ಪ್ಲವಾಃ ಕ್ರೌಂಚಾಃ ಕುರರಾಶ್ಚೈವ ರಾಘವ ॥ ೧೨
ವಲ್ಗುಸ್ವನಾ ನಿಕೂಜಂತಿ ಪಂಪಾಸಲಿಲಗೋಚರಾಃ ।
ನೋದ್ವಿಜಂತೇ ನರಾನ್ ದೃಷ್ಟ್ವಾ ವಧಸ್ಯಾಕೋವಿದಾಃ ಪುರಾ ॥ ೧೩
ಘೃತಪಿಂಡೋಪಮಾನ್ ಸ್ಥೂಲಾಂಸ್ತಾನ್ ದ್ವಿಜಾನ್ ಭಕ್ಷಯಿಷ್ಯಥಃ ।
ರೋಹಿತಾನ್ ವಕ್ರತುಂಡಾಂಶ್ಚ ನಡಮೀನಾಂಶ್ಚ ರಾಘವ ॥ ೧೪
ಪಂಪಾಯಾಮಿಷುಭಿರ್ಮತ್ಸ್ಯಾಂಸ್ತತ್ರ ರಾಮ ವರಾನ್ ಹತಾನ್ ।
ನಿಸ್ತ್ವಕ್ಪಕ್ಷಾನಯಸ್ತಪ್ತಾನಕೃಶಾನೇಕಕಂಟಕಾನ್ ॥ ೧೫
ತವ ಭಕ್ತ್ಯಾ ಸಮಾಯುಕ್ತೋ ಲಕ್ಷ್ಮಣಃ ಸಂಪ್ರದಾಸ್ಯತಿ ।
ಭೃಶಂ ತೇ ಖಾದತೋ ಮತ್ಸ್ಯಾನ್ ಪಂಪಾಯಾಃ ಪುಷ್ಪಸಂಚಯೇ ॥
ಪದ್ಮಗಂಧಿ ಶಿವಂ ವಾರಿ ಸ್ವಾದು ಶೀತಮನಾಮಯಮ್ ।
ಉದ್ಧೃತ್ಯ ಸತತಾಕ್ಲಿಷ್ಟಂ ರೌಪ್ಯಸ್ಫಾಟಿಕಸಂನಿಭಮ್ ॥ ೧೭

---

ಕಲ್ಲುಗಳಿಲ್ಲ. ದಡವು ಕುಸಿದಿಲ್ಲ. ಇಳಿಯುವ ಸ್ಥಳಗಳಲ್ಲಿ ನೀರು ಒಂದೇ ಮಟ್ಟದಲ್ಲಿದೆ. ಪಾಚಿ ಕಟ್ಟಿಲ್ಲ (೧೧). ಶ್ರೀರಾಮ, ಅದರ ತಳದಲ್ಲಿ ಕಲ್ಲು-ಹರಳಿದೆಯೇ ಹೊರತು ಕೆಸರಿಲ್ಲ. ಪಂಪಾಸರೋವರದಲ್ಲಿ ತಾವರೆ, ನೈದಿಲೆಗಳು ತುಂಬಿವೆ. ಹಂಸ, ಕಾರಂಡವ, ಕ್ರೌಂಚ, ಕುರರ ಮುಂತಾದ ಹಕ್ಕಿಗಳು ಮಂಜುಳಸ್ವರದಲ್ಲಿ ಕೂಗುತ್ತವೆ. ಮನುಷ್ಯರನ್ನು ಕಂಡರೂ ಅವು ಹೆದರುವುದಿಲ್ಲ. ಏಕೆಂದರೆ, ಇದುವರೆಗೆ ಯಾರೂ ಬೇಟೆಯಾಡಿ ಕೊಂದದ್ದು ಅವುಗಳಿಗೆ ಗೊತ್ತಿಲ್ಲ (೧೨-೧೩). ರಾಘವ, ಹೆರೆದುಪ್ಪದಂತಿರುವ ದೊಡ್ಡ ದೊಡ್ಡ ಆ ಹಕ್ಕಿಗಳನ್ನು ನೀವು ಭಕ್ಷಿಸಬಹುದು. ಲಕ್ಷ್ಮಣನು ರೋಹಿತ, ವಕ್ರತುಂಡ, ನಡಮೀನ ಮೊದಲಾದ ಉತ್ತಮಜಾತಿಯ ಮೀನುಗಳನ್ನು ಬಾಣಗಳಿಂದ ಹೊಡೆದು ತರುವನು. ಅವುಗಳ ಚರ್ಮ, ರೆಕ್ಕೆ, ಮುಳ್ಳುಗಳನ್ನು ತೆಗೆದು ಕಬ್ಬಿಣದ ಶೂಲದಲ್ಲಿ ಬೇಯಿಸಿ ಭಕ್ತಿಯಿಂದ ನಿನಗೆ ಕೊಡುವನು. ಆ ಮೀನುಗಳನ್ನು ನೀನು ಯಥೇಷ್ಟವಾಗಿ ತಿನ್ನಬಹುದು! (೧೪-೧೫). ಪಂಪಾಸರೋವರದ ಪುಷ್ಪರಾಶಿಯ ಮಧ್ಯದಲ್ಲಿರುವ ಶುಭಜಲವು ಪದ್ಮಗಂಧಿಯಾಗಿರುತ್ತದೆ. ರುಚಿಕರವೂ ಶೀತಲವೂ ಆದ ಆ ನೀರು ಆರೋಗ್ಯಕರವಾದದ್ದು.

ಅಸೌ ಪುಷ್ಕರಪರ್ಣೇನ ಲಕ್ಷ್ಮಣಃ ಪಾಯಯಿಷ್ಯತಿ ।
ಸ್ಥೂಲಾನ್ ಗಿರಿಗುಹಾಶಯ್ಯಾನ್ ವಾನರಾನ್ ವನಚಾರಿಣಃ ॥ ೧೮

ಸಾಯಾಹ್ನೇ ವಿಚರನ್ ರಾಮ ದರ್ಶಯಿಷ್ಯತಿ ಲಕ್ಷ್ಮಣಃ ।
ಅಪಾಂ ಲೋಭಾದುಪಾವೃತ್ತಾನ್ ವೃಷಭಾನಿವ ನರ್ದತಃ ॥ ೧೯

ರೂಪಾನ್ವಿತಾಂಶ್ಚ ಪಂಪಾಯಾಂ ದ್ರಕ್ಷ್ಯಸಿ ತ್ವಂ ನರೋತ್ತಮ ।
ಸಾಯಾಹ್ನೇ ವಿಚರನ್ ರಾಮ ವಿಟಪೀಮಾಲ್ಯಧಾರಿಣಃ ॥ ೨೦

ಶೀತೋದಕಂ ಚ ಪಂಪಾಯಾ ದೃಷ್ಟ್ವಾ ಶೋಕಂ ವಿಹಾಸ್ಯಸಿ ।
ಸುಮನೋಭಿಶ್ಚಿತಾಸ್ತತ್ರ ತಿಲಕಾ ನಕ್ತಮಾಲಕಾಃ ॥ ೨೧

ಉತ್ಪಲಾನಿ ಚ ಫುಲ್ಲಾನಿ ಪಂಕಜಾನಿ ಚ ರಾಘವ ।
ನ ತಾನಿ ಕಶ್ಚಿನ್ಮಾಲ್ಯಾನಿ ತತ್ರಾರೋಪಯಿತಾ ನರಃ ॥ ೨೨

ನ ಚ ವೈ ಮ್ಲಾನತಾಂ ಯಾಂತಿ ನ ಚ ಶೀರ್ಯಂತಿ ರಾಘವ ।
ಮತಂಗಶಿಷ್ಯಾಸ್ತತ್ರಾಸನ್ನೃಷಯಃ ಸುಸಮಾಹಿತಾಃ ॥ ೨೩

---

ಅದು ಯಾವಾಗಲೂ ಬೆಳ್ಳಿಯಂತೆಯೂ ಸ್ಫಟಿಕದಂತೆಯೂ ನಿರ್ಮಲವಾಗಿರುತ್ತದೆ (೧೭). ಲಕ್ಷ್ಮಣನು ತಾವರೆಯೆಲೆಯ (ದೊನ್ನೆಯಲ್ಲಿ) ಆ ನೀರನ್ನು ತಂದು ನಿನಗೆ ಕುಡಿಯಲು ಕೊಡುವನು! ಗಿರಿಗುಹೆಗಳಲ್ಲಿ ವಾಸಿಸುವ ಕಪಿಗಳು ವನದಲ್ಲಿ ಸಂಚರಿಸುತ್ತ ಬರುತ್ತವೆ (೧೮). ಶ್ರೀರಾಮ, ಸಾಯಂಕಾಲದಲ್ಲಿ ನೀನು ಅಡ್ಡಾಡುವಾಗ ಲಕ್ಷ್ಮಣನು ಅವುಗಳನ್ನು ನಿನಗೆ ತೋರಿಸುವನು! ಆ ಕಪಿಗಳು ನೀರು ಕುಡಿಯುವ ಆಸೆಯಿಂದ (ಆ ಪುಷ್ಕರಿಣಿಯ ಬಳಿಗೆ) ಬರುತ್ತವೆ. ಗೂಳಿಗಳು ಗುಟರುಹಾಕುವಂತೆ ಅವು ವಚಗುಟ್ಟುತ್ತವೆ! (೧೯). ಆ ಕಪಿಗಳು ನೋಡುವುದಕ್ಕೆ ಅಂದವಾಗಿರುತ್ತವೆ! ಪಂಪಾತೀರದಲ್ಲಿ ನೀನು ಸಂಜೆಯ ಹೊತ್ತು ಸಂಚರಿಸುವಾಗ ಕಪಿಗಳು ಮರದ ಕೊಂಬೆಗಳನ್ನು ಹೂಮಾಲೆಯಂತೆ ಧರಿಸಿರುವುದನ್ನು ಕಾಣಬಹುದು! ಅಲ್ಲದೆ ಪಂಪಾಸರೋವರದ ಶೀತಲೋದಕವನ್ನು ನೋಡುತ್ತಿದ್ದರೆ, ನಿನ್ನ ಶೋಕವು ಕಡಿಮೆಯಾಗುವುದು. ಅಲ್ಲಿರುವ ತಿಲಕವೃಕ್ಷಗಳೂ ನಕ್ತಮಾಲಗಳೂ ಹೂಗಳಿಂದ ತುಂಬಿರುತ್ತವೆ (೨೦–೨೧). ರಾಘವ, ಅಲ್ಲಿ ನೈದಿಲೆಗಳೂ ತಾವರೆಗಳೂ ಚೆನ್ನಾಗಿ ಅರಳಿರುತ್ತವೆ. ಆ ಹೂಗಳನ್ನು ಯಾವ ಮನುಷ್ಯನೂ ಬಿಡಿಸುವುದಿಲ್ಲ, ಮುಡಿಯುವುದಿಲ್ಲ! ಆ ಹೂಗಳು

ತೇಷಾಂ ಭಾರಾಭಿತಪ್ತಾನಾಂ ವನ್ಯಮಾಹರತಾಂ ಗುರೋಃ ।
ಯೇ ಪ್ರಪೇತುರ್ಮಹೀಂ ತೂರ್ಣಂ ಶರೀರಾತ್ ಸ್ವೇದಬಿಂದವಃ ॥ ೨೪

ತಾನಿ ಜಾತಾನಿ ಮಾಲ್ಯಾನಿ ಮುನೀನಾಂ ತಪಸಾ ತದಾ ।
ಸ್ವೇದಬಿಂದುಸಮುತ್ಥಾನಿ ನ ವಿನಶ್ಯಂತಿ ರಾಘವ ॥ ೨೫

ತೇಷಾಮದ್ಯಾಪಿ ತತ್ರೈವ ದೃಶ್ಯತೇ ಪರಿಚಾರಿಣೀ ।
ಶ್ರಮಣೀ ಶಬರೀ ನಾಮ ಕಾಕುತ್ಸ್ಥ ಚಿರಜೀವಿನೀ ॥ ೨೬

ತ್ವಾಂ ತು ಧರ್ಮೇ ಸ್ಥಿತಾ ನಿತ್ಯಂ ಸರ್ವಭೂತನಮಸ್ಕೃತಮ್ ।
ದೃಷ್ಟ್ವಾ ದೇವೋಪಮಂ ರಾಮ ಸ್ವರ್ಗಲೋಕಂ ಗಮಿಷ್ಯತಿ ॥ ೨೭

ತತಸ್ತದ್ರಾಮ ಪಂಪಾಯಾಸ್ತೀರಮಾಶ್ರಿತ್ಯ ಪಶ್ಚಿಮಮ್ ।
ಆಶ್ರಮಸ್ಥಾನಮತುಲಂ ಗುಹ್ಯಂ ಕಾಕುತ್ಸ್ಥ ಪಶ್ಯಸಿ ॥ ೨೮

ನ ತತ್ರಾಕ್ರಮಿತುಂ ನಾಗಾಃ ಶಕ್ನುವಂತಿ ತಮಾಶ್ರಮಮ್ ।
ವಿವಿಧಾಸ್ತತ್ರ ವೈ ನಾಗಾ ವನೇ ತಸ್ಮಿಂಶ್ಚ ಪರ್ವತೇ ॥ ೨೯

---

ಬಾಡುವುದೂ ಇಲ್ಲ, ಉದುರುವುದೂ ಇಲ್ಲ! ಅಲ್ಲಿ ಮತಂಗಮುನಿಯ ಶಿಷ್ಯರೂ ಶಾಂತಚಿತ್ತರೂ ಆದ ಕೆಲವು ಋಷಿಗಳಿದ್ದರು (೨೨–೨೩). ಅವರು ತಮ್ಮ ಗುರುವಿಗೋಸ್ಕರ ಕಾಡಿನಲ್ಲಿರುವ ಫಲ, ಮೂಲ, ಸಮಿತ್ತು ಮುಂತಾದವುಗಳನ್ನು ಹೊತ್ತುತರುತ್ತಿದ್ದರು. ಭಾರವನ್ನು ಹೊತ್ತು ಬಳಲಿದ ಆ ಋಷಿಗಳ ಮೈಯಿಂದ ನೆಲಕ್ಕೆ ಬಿದ್ದ ಬೆವರುಹನಿಗಳು ಅವರ ತಪಃಪ್ರಭಾವ ದಿಂದ ಹೂಗಳಾದವು. ಋಷಿಗಳ ಬೆವರುಹನಿಗಳಿಂದ ಹುಟ್ಟಿದ ಆ ಹೂಗಳು ಬಾಡಿ ನಾಶವಾಗುವುದಿಲ್ಲ (೨೪–೨೫). ಕಾಕುತ್ಸ್ಥ, ಆ ಋಷಿಗಳ ಪರಿಚರ್ಯೆ ಯನ್ನು ಮಾಡುತ್ತಿದ್ದ ಒಬ್ಬ ಶ್ರಮಣಿಯನ್ನು ಈಗಲೂ ಅಲ್ಲಿ ಕಾಣಬಹುದು. ಅವಳ ಹೆಸರು ಶಬರಿ. ಅವಳು ದೀರ್ಘಾಯುಸ್ಸನ್ನು ಪಡೆದು ಜೀವಿಸಿದ್ದಾಳೆ (೨೬). ಸದಾ ಧರ್ಮನಿಷ್ಠಳಾದ ಆ ಶಬರಿಯು ದೇವತಾಸದೃಶನೂ ಸರ್ವ ವಂದ್ಯನೂ ಆದ ನಿನ್ನ ದರ್ಶನವನ್ನು ಪಡೆದು ಸ್ವರ್ಗವನ್ನು ಸೇರ ಬೇಕೆಂದಿದ್ದಾಳೆ. ಆದ್ದರಿಂದ, ಕಾಕುತ್ಸ್ಥ, ಪಂಪಾಸರೋವರದ ಪಶ್ಚಿಮ ತೀರಕ್ಕೆ ಹೋದರೆ ಅದ್ಭುತವೂ ಗೋಪ್ಯವೂ ಆದ ಮತಂಗಾಶ್ರಮವನ್ನು ನೋಡುವೆ (೨೭–೨೮). ಆ ವನದಲ್ಲಿಯೂ ಸಮೀಪದಲ್ಲಿರುವ ಋಷ್ಯಮೂಕ

ಋಷೇಸ್ತತ್ರ ಮತಂಗಸ್ಯ ವಿಧಾನಾತ್ತಚ್ಚ ಕಾನನಮ್ ।
ಮತಂಗವನಮಿತ್ಯೇವ ವಿಶ್ರುತಂ ರಘುನಂದನ ॥ ೩೦

ತಸ್ಮಿನ್ನಂದನಸಂಕಾಶೇ ದೇವಾರಣ್ಯೋಪಮೇ ವನೇ ।
ನಾನಾವಿಹಗಸಂಕೀರ್ಣೇ ರಂಸ್ಯಸೇ ರಾಮ ನಿರ್ವೃತಃ ॥ ೩೧

ಋಷ್ಯಮೂಕಶ್ಚ ಪಂಪಾಯಾಃ ಪುರಸ್ತಾತ್ ಪುಷ್ಪಿತದ್ರುಮಃ ।
ಸುದುಃಖಾರೋಹಣೋ ನಾಮ ಶಿಶುನಾಗಾಭಿರಕ್ಷಿತಃ ॥ ೩೨

ಉದಾರೋ ಬ್ರಹ್ಮಣಾ ಚೈವ ಪೂರ್ವಕಾಲೇ ವಿನಿರ್ಮಿತಃ ।
ಶಯಾನಃ ಪುರುಷೋ ರಾಮ ತಸ್ಯ ಶೈಲಸ್ಯ ಮೂರ್ಧನಿ ॥ ೩೪

ಯತ್ಸ್ವಪ್ನೇ ಲಭತೇ ವಿತ್ತಂ ತತ್ ಪ್ರಬುದ್ಧೋಽಧಿಗಚ್ಛತಿ ।
ನ ತ್ವೇನಂ ವಿಷಮಾಚಾರಃ ಪಾಪಕರ್ಮಾಧಿರೋಹತಿ ॥ ೩೪

---

ಪರ್ವತದಲ್ಲಿಯೂ ಬೇಕಾದಷ್ಟು ಕಾಡಾನೆಗಳಿವೆ. ಆದರೆ ಆಶ್ರಮಕ್ಕೆ ಬಾಧೆಯನ್ನು ಕೊಡಲು ಅವುಗಳಿಗೆ ಸಾಮರ್ಥ್ಯವಿಲ್ಲ. ಮತಂಗಋಷಿಯ ಪ್ರಭಾವವೇ ಅದಕ್ಕೆ ಕಾರಣ. ಆದ್ದರಿಂದ ಆ ವನವು ಮತಂಗವನವೆಂದು ವಿಖ್ಯಾತವಾಗಿದೆ (೨೯–೩೦). ನಂದನವನವೇ ಮೊದಲಾದ ದೇವೋದ್ಯಾನದಂತಿರುವ ಮತಂಗವನದಲ್ಲಿ ನಾನಾಬಗೆಯ ಹಕ್ಕಿಗಳು ವಿಹರಿಸುತ್ತವೆ. ರಘುನಂದನ, ಅಲ್ಲಿ ನೀನು ಮನಃಶಾಂತಿಯನ್ನು ಪಡೆಯುವೆ. ಪಂಪಾ ಸರೋವರದ ಪೂರ್ವದಿಕ್ಕಿಗೆ ಪುಷ್ಪಿತದ್ರುಮಗಳಿರುವ ಋಷ್ಯಮೂಕ ಗಿರಿಯಿದೆ. ಅದನ್ನು ಹತ್ತುವುದು ಕಷ್ಟ. ಅಲ್ಲಿ ಶಿಶುನಾಗರೆಂಬ ರಾಕ್ಷಸರು* ಬೆಟ್ಟಕ್ಕೆ ಕಾವಲಾಗಿದ್ದಾರೆ (೩೧–೩೨). ಪುರಾತನಕಾಲದಲ್ಲಿ ಬ್ರಹ್ಮನು ಅದನ್ನು ಪ್ರಶಸ್ತವಾದ ಪರ್ವತವಾಗಿರಲೆಂದು ಸೃಜಿಸಿದ್ದಾನೆ. ಅದರ ಶಿಖರದಲ್ಲಿ ಮಲಗಿದ ಪುರುಷನಿಗೆ ಸ್ವಪ್ನದಲ್ಲಿ ಧನಲಾಭವಾದರೆ, ಎಚ್ಚರವಾದಮೇಲೆ ಸತ್ಯವಾಗಿಯೂ ಆ ಧನವು ಲಭಿಸುತ್ತದೆ. ಧರ್ಮವಿರುದ್ಧವಾಗಿ ನಡೆಯುವ ಪಾಪಿಯು ಆ ಋಷ್ಯಮೂಕಗಿರಿಯನ್ನು ಹತ್ತುವುದಿಲ್ಲ (೩೩–೩೪).

---

* ‘ಶಿಶುನಾಗ’ ಎಂಬ ಶಬ್ದಕ್ಕೆ ಆನೆಯ ಮರಿಗಳೆಂದೂ ಸರ್ಪದ ಮರಿಗಳೆಂದೂ ವ್ಯಾಖ್ಯಾನಕಾರರು ಅರ್ಥವನ್ನು ಬರೆದಿದ್ದಾರೆ. ಕ್ಷೇಮೇಂದ್ರನ ರಾಮಾಯಣ ಮಂಜರಿಯ ಆಧಾರದಿಂದ ಇಲ್ಲಿ ಆ ಹೆಸರಿನ ರಾಕ್ಷಸರೆಂದು ಅರ್ಥಮಾಡಿದೆ.

ಯಸ್ತು ತಂ ವಿಷಮಾಚಾರಃ ಪಾಪಕರ್ಮಾಧಿರೋಹತಿ ।
ತತ್ರೈವ ಪ್ರಹರಂತ್ಯೇನಂ ಸುಪ್ತಮಾದಾಯ ರಾಕ್ಷಸಾಃ ॥ ೩೫

ತತ್ರಾಪಿ ಶಿಶುನಾಗಾನಾಮಾಕ್ರಂದಃ ಶ್ರೂಯತೇ ಮಹಾನ್ ।
ಕ್ರೀಡತಾಂ ರಾಮ ಪಂಪಾಯಾಂ ಮತಂಗಾರಣ್ಯವಾಸಿನಾವ್ ॥ ೩೬

ಸಿಕ್ತಾ ರುಧಿರಧಾರಾಭಿಃ ಸಂಹತ್ಯ ಪರಮದ್ವಿಪಾಃ ।
ಪ್ರಚರಂತಿ ಪೃಥಕ್ಕೀರ್ಣಾ ಮೇಘವರ್ಣಾಸ್ತರಸ್ವಿನಃ ॥ ೩೭

ತೇ ತತ್ರ ಪೀತ್ವಾ ಪಾನೀಯಂ ವಿಮಲಂ ಶೀತಮವ್ಯಯವ್ ।
ನಿರ್ವೃತಾಃ ಸಂವಿಗಾಹಂತೇ ವನಾನಿ ವನಗೋಚರಾಃ ॥ ೩೮

ಋಕ್ಷಾಂಶ್ಚ ದ್ವೀಪಿನಶ್ಚೈವ ನೀಲಕೋಮಲಕಪ್ರಭಾನ್ ।
ರುರೂನಪೇತಾಪಜಯಾನ್ ದೃಷ್ಟ್ವಾ ಶೋಕಂ ಪ್ರಹಾಸ್ಯಸಿ ॥ ೩೯

ರಾಮ ತಸ್ಯ ತು ಶೈಲಸ್ಯ ಮಹತೀ ಶೋಭತೇ ಗುಹಾ ।
ಶಿಲಾಪಿಧಾನಾ ಕಾಕುತ್ಸ್ಥ ದುಃಖಂ ಚಾಸ್ಯಾಃ ಪ್ರವೇಶನವ್ ॥ ೪೦

---

ಯಾವನಾದರೂ ಪಾಪಿಯು ಹತ್ತಿದರೆ, ಅವನು ಪರ್ವತಶಿಖರದಲ್ಲಿ ಮಲಗಿದಾಗ ಆ ರಾಕ್ಷಸರು ಬಂದು ಕೊಂದುಹಾಕುತ್ತಾರೆ. ಮತಂಗಾರಣ್ಯದಲ್ಲಿ ಕ್ರೀಡಿಸುತ್ತಿರುವ ಶಿಶುನಾಗರ ಕೋಲಾಹಲಶಬ್ದವು ಪಂಪಾಸರೋವರದವರೆಗೆ ಕೇಳಿಸುತ್ತದೆ (೩೫–೩೬). ಮೇಘದಂತೆ ಕಪ್ಪಾಗಿರುವ ಬಲಶಾಲಿಗಳಾದ ಮದ್ದಾನೆಗಳು ಕಾದಾಡಿ ರಕ್ತಧಾರೆಗಳಿಂದ ನೆನೆದು ಅತ್ತಿತ್ತ ಚದರಿಹೋಗುತ್ತವೆ. ಆ ವನ್ಯಜಂತುಗಳು ಪಂಪಾಸರೋವರದಲ್ಲಿ ಸರ್ವದಾ ದೊರೆಯುವ ಶೀತಲವಾದ ವಿಮಲಜಲವನ್ನು ಕುಡಿದು ತೃಪ್ತಿಹೊಂದಿ ವನದೊಳಗೆ ಸಾಗುತ್ತವೆ (೩೭–೩೮). ಆ ವನದಲ್ಲಿ ಕರಡಿಗಳನ್ನೂ ಹುಲಿಗಳನ್ನೂ ನೀಲಮಣಿಗಳಂತಿರುವ ಜಯಶಾಲಿಗಳಾದ ಜಿಂಕೆಗಳನ್ನೂ ನೋಡಿದರೆ, ರಾಘವ, ನಿನ್ನ ಶೋಕವು ಕಡಿಮೆಯಾಗುವುದು. ಋಷ್ಯಮೂಕಗಿರಿಯಲ್ಲಿ ಒಂದು ದೊಡ್ಡ ಗುಹೆಯಿದೆ. ಒಂದು ಬಂಡೆಯು ಅದನ್ನು ಮುಚ್ಚುವ ಬಾಗಿಲಾಗಿದೆ.

ತಸ್ಯಾ ಗುಹಾಯಾಃ ಪ್ರಾಗ್ದ್ವಾರೇ ಮಹಾನ್ ಶೀತೋದಕೋ ಹ್ರದಃ ।
ಫಲಮೂಲಾನ್ವಿತೋ ರಮ್ಯೋ ನಾನಾಮೃಗಸಮಾವೃತಃ ॥ ೪೧

ತಸ್ಯಾಂ ವಸತಿ ಸುಗ್ರೀವಶ್ಚತುರ್ಭಿಃ ಸಹ ವಾನರೈಃ ।
ಕದಾಚಿಚ್ಛಿಖರೇ ತಸ್ಯ ಪರ್ವತಸ್ಯಾವತಿಷ್ಠತೇ ॥ ೪೨

ಕಬಂಧಸ್ತ್ವನುಶಾಸ್ಯೈವಂ ತಾವುಭೌ ರಾಮಲಕ್ಷ್ಮಣೌ ।
ಸ್ರಗ್ವೀ ಭಾಸ್ಕರವರ್ಣಾಭಃ ಖೇ ವ್ಯರೋಚತ ವೀರ್ಯವಾನ್ ॥ ೪೩

ತಂ ತು ಖಸ್ಥಂ ಮಹಾಭಾಗಂ ಕಬಂಧಂ ರಾಮಲಕ್ಷ್ಮಣೌ ।
ಪ್ರಸ್ಥಿತೌ ತ್ವಂ ವ್ರಜಸ್ವೇತಿ ವಾಕ್ಯಮೂಚತುರಂತಿಕೇ ॥ ೪೪

ಗಮ್ಯತಾಂ ಕಾರ್ಯಸಿದ್ಧ್ಯರ್ಥಮಿತಿ ತಾವಬ್ರವೀತ್ ಸ ಚ ।
ಸುಪ್ರೀತೌ ತಾವನುಜ್ಞಾಪ್ಯ ಕಬಂಧಃ ಪ್ರಸ್ಥಿತಸ್ತದಾ ॥ ೪೫

ಸ ತತ್ ಕಬಂಧಃ ಪ್ರತಿಪದ್ಯ ರೂಪಂ
ವೃತಃ ಶ್ರಿಯಾ ಭಾಸ್ಕರತುಲ್ಯದೇಹಃ ।

---

ಅದನ್ನು ಪ್ರವೇಶಿಸುವುದು ಬಹಳ ಕಠಿಣ (೩೯–೪೦). ಆ ಗುಹೆಯ ಪೂರ್ವ ದ್ವಾರದಲ್ಲಿ ಶೀತೋದಕದಿಂದ ಕದಡಿದ ದೊಡ್ಡ ಕೊಳವಿದೆ. ಆದರೆ ತೀರವು ಫಲಮೂಲಗಳಿಂದಲೂ ನಾನಾಮೃಗಗಳಿಂದಲೂ ರಮಣೀಯವಾಗಿದೆ (೪೧). ಸುಗ್ರೀವನು ನಾಲ್ವರು ವಾನರರೊಡನೆ ಆ ಗುಹೆಯಲ್ಲಿ ವಾಸಮಾಡುತ್ತಾನೆ. ಕೆಲವು ಸಲ ಆ ಪರ್ವತದ ಶಿಖರದಮೇಲೆ ಬಂದು ಕುಳಿತುಕೊಳ್ಳುವುದುಂಟು" ಎಂದನು. ಕಬಂಧನು ಈ ಪ್ರಕಾರ ರಾಮಲಕ್ಷ್ಮಣರಿಗೆ ತಿಳಿಸಿ, ಹೂಮಾಲೆಯನ್ನು ಧರಿಸಿದವನಾಗಿ ಸೂರ್ಯನಂತೆ ಬೆಳಗುತ್ತ ಗಗನದಲ್ಲಿ ಕ್ಷಣಕಾಲ ನಿಂತಿದ್ದನು (೪೨–೪೩). ಶ್ರೀರಾಮಲಕ್ಷ್ಮಣರು ತಮ್ಮ ಸಮೀಪದಲ್ಲಿಯೇ ಗಗನವನ್ನಡರಿ ನಿಂತಿದ್ದ ಮಹಾತ್ಮನಾದ ಕಬಂಧನನ್ನು ಕುರಿತು "ಮಹಾಭಾಗ, ನಾವು (ಸುಗ್ರೀವನ ಬಳಿಗೆ) ಹೊರಟೆವು. ನೀನು (ಪುಣ್ಯಲೋಕಕ್ಕೆ) ಪ್ರಯಾಣ ಬೆಳೆಸು" ಎಂದರು (೪೪). "ನೀವೂ ಪ್ರಯಾಣ ಬೆಳೆಸಿರಿ. ಕಾರ್ಯಸಿದ್ಧಿಯಾಗಲಿ!" ಎಂಬುದಾಗಿ ಕಬಂಧನು ಸುಪ್ರೀತರಾದ ರಾಮ-ಲಕ್ಷ್ಮಣರಿಗೆ ತಿಳಿಸಿ ಅವರ ಅನುಜ್ಞೆಯನ್ನು ಪಡೆದು, ತನ್ನ ಲೋಕಕ್ಕೆ ಪ್ರಯಾಣಮಾಡಿದನು (೪೫). ಈ ರೀತಿಯಲ್ಲಿ ಕಬಂಧನು ತನ್ನ ನಿಜರೂಪ

ನಿದರ್ಶಯನ್ ರಾಮಮವೇಕ್ಷ್ಯ ಖಸ್ಥಃ
ಸಖ್ಯಂ ಕುರುಷ್ವೇತಿ ತದಾಭ್ಯುವಾಚ ॥ ೪೬

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ತ್ರಿಸಪ್ತತಿತಮಃ ಸರ್ಗಃ

---

## ಚತುಃಸಪ್ತತಿತಮಃ ಸರ್ಗಃ

### ಶಬರೀಸ್ವರ್ಗಪ್ರಾಪ್ತಿಃ

ತೌ ಕಬಂಧೇನ ತಂ ಮಾರ್ಗಂ ಪಂಪಾಯಾ ದರ್ಶಿತಂ ವನೇ ।
ಪ್ರತಸ್ಥತುರ್ದಿಶಂ ಗೃಹ್ಯ ಪ್ರತೀಚೀಂ ನೃವರಾತ್ಮಜೌ ॥ ೧

ತೌ ಶೈಲೇಷ್ವಾಚಿತಾನೇಕಾನ್ ಕ್ಷೌದ್ರಕಲ್ಪಫಲಾನ್ ದ್ರುಮಾನ್ ।
ವೀಕ್ಷಂತೌ ಜಗ್ಮತುರ್ದ್ರಷ್ಟುಂ ಸುಗ್ರೀವಂ ರಾಮಲಕ್ಷ್ಮಣೌ ॥ ೨

---

ವನ್ನು ಪಡೆದು ಸೂರ್ಯನಂತೆ ಪ್ರಜ್ವಲಿಸುವ ದೇಹವುಳ್ಳವನಾದನು. ಅವನು ಆಕಾಶದಲ್ಲಿ ನಿಂತು ಶ್ರೀರಾಮನಿಗೆ ಋಷ್ಯಮೂಕದ ಮಾರ್ಗ ಮೊದಲಾದುದನ್ನು ತಿಳಿಸಿ, ಹೋಗುವಾಗ "ಶ್ರೀರಾಮ, ಸುಗ್ರೀವನೊಡನೆ ಸಖ್ಯವನ್ನು ಬೆಳೆಸು!" ಎಂದು ಮತ್ತೊಮ್ಮೆ ಹೇಳಿದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತುಮೂರನೆಯ ಸರ್ಗ

---

## ಸರ್ಗ ೭೪

ಮತಂಗಾಶ್ರಮ ಗಮನ ; ಶಬರಿಯಿಂದ ಸತ್ಕಾರ ; ಶಬರಿಯ ಸ್ವರ್ಗಗಮನ

ಆ ರಾಜಕುಮಾರರು ಪಶ್ಚಿಮಾಭಿಮುಖವಾಗಿ ಹೊರಟು ಕಬಂಧನು ತೋರಿಸಿದ ಮಾರ್ಗವನ್ನು ಹಿಡಿದು, ಪಂಪಾಸರೋವರದ ಕಡೆಗೆ ವನದಲ್ಲಿ ಪ್ರಯಾಣಮಾಡಿದರು (೧). ದಾರಿಯಲ್ಲಿದ್ದ ಶೈಲಪ್ರದೇಶಗಳಲ್ಲಿ ವಿವಿಧ ವೃಕ್ಷಗಳು ಜೇನುತುಪ್ಪದಂತೆ ಸಿಹಿಯಾದ ಹಣ್ಣುಗಳನ್ನು ಹೊತ್ತು ನಿಂತಿದ್ದವು. ರಾಮಲಕ್ಷ್ಮಣರು ಆ ವೃಕ್ಷಗಳನ್ನು ನೋಡುತ್ತ ಸುಗ್ರೀವನನ್ನು ಕಾಣುವ

**ಕೃತ್ವಾ ಚ ಶೈಲಪೃಷ್ಠೇ ತು ತೌ ವಾಸಂ ರಾಮಲಕ್ಷ್ಮಣೌ ।**
**ಪಂಪಾಯಾಃ ಪಶ್ಚಿಮಂ ತೀರಂ ರಾಘವಾವುಪತಸ್ಥತುಃ ॥** ೩

**ತೌ ಪುಷ್ಕರಿಣ್ಯಾಃ ಪಂಪಾಯಾಸ್ತೀರಮಾಸಾದ್ಯ ಪಶ್ಚಿಮಮ್ ।**
**ಅಪಶ್ಯತಾಂ ತತಸ್ತತ್ರ ಶಬರ್ಯಾ ರಮ್ಯಮಾಶ್ರಮಮ್ ॥** ೪

**ತೌ ತಮಾಶ್ರಮಮಾಸಾದ್ಯ ದ್ರುಮೈರ್ಬಹುಭಿರಾವೃತಮ್ ।**
**ಸುರಮ್ಯಮಭಿವೀಕ್ಷಂತೌ ಶಬರೀಮಭ್ಯುಪೇಯತುಃ ॥** ೫

**ತೌ ಚ ದೃಷ್ಟ್ವಾ ತದಾ ಸಿದ್ಧಾ ಸಮುತ್ಥಾಯ ಕೃತಾಂಜಲಿಃ ।**
**ರಾಮಸ್ಯ ಪಾದೌ ಜಗ್ರಾಹ ಲಕ್ಷ್ಮಣಸ್ಯ ಚ ಧೀಮತಃ ॥** ೬

**ಪಾದ್ಯಮಾಚಮನೀಯಂ ಚ ಸರ್ವಂ ಪ್ರಾದಾದ್ಯಥಾವಿಧಿ ।**
**ತಾಮುವಾಚ ತತೋ ರಾಮಃ ಶ್ರಮಣೀಂ ಸಂಶಿತವ್ರತಾಮ್ ॥** ೭

**ಕಚ್ಚಿತ್ತೇ ನಿರ್ಜಿತಾ ವಿಘ್ನಾಃ ಕಚ್ಚಿತ್ತೇ ವರ್ಧತೇ ತಪಃ ।**
**ಕಚ್ಚಿತ್ತೇ ನಿಯತಃ ಕ್ರೋಧ ಆಹಾರಶ್ಚ ತಪೋಧನೇ ॥** ೮

---

ತವಕದಿಂದ ಮುಂದೆ ಹೋದರು (೨). (ಆ ರಾತ್ರಿ) ಒಂದು ಪರ್ವತದ ಬುಡದಲ್ಲಿ ವಾಸವಾಗಿದ್ದು, (ಮಾರನೆಯ ದಿನ) ಪಂಪಾಸರೋವರದ ಪಶ್ಚಿಮ ತೀರವನ್ನು ಸೇರಿದರು. ಅಲ್ಲಿ ರಾಮಲಕ್ಷ್ಮಣರು ಶಬರಿಯ ರಮ್ಯವಾದ ಆಶ್ರಮವನ್ನು ಕಂಡರು. ವೃಕ್ಷಸಮೂಹದಿಂದ ಪರಿವೃತವಾದ ಆಶ್ರಮದ ರಮ್ಯತೆಯನ್ನು ವೀಕ್ಷಿಸುತ್ತ ಅವರು ಶಬರಿಯಿದ್ದಲ್ಲಿಗೆ ಹೋದರು (೩–೪). ಯೋಗಸಿದ್ಧಳಾದ ಶಬರಿಯು ಅವರೀರ್ವರನ್ನು ಕಂಡೊಡನೆ ಕೈಮುಗಿದು ಎದ್ದುನಿಂತು, ಶ್ರೀರಾಮನ ಪಾದಗಳಿಗೆ ನಮಸ್ಕರಿಸಿ ಲಕ್ಷ್ಮಣನ ಪಾದಗಳಿಗೂ ನಮಸ್ಕರಿಸಿದಳು. ಅವರಿಗೆ ಪಾದ್ಯವನ್ನೂ ಆಚಮನೀಯಾದಿಗಳನ್ನೂ ವಿಧಿವತ್ತಾಗಿ ಕೊಟ್ಟು ಸತ್ಕರಿಸಿದಳು (೫–೬). ಶ್ರೀರಾಮನು ವ್ರತನಿಷ್ಠಳಾದ ಶ್ರಮಣಿಯನ್ನು ಕುರಿತು, "ಹೇ ತಪೋಧನೆ, ತಪೋವಿಘ್ನಗಳಾದ ಮನೋವಿಕಾರಗಳೆಲ್ಲವನ್ನೂ ಗೆದ್ದಿರುವೆಯಾ? ನಿನ್ನ ತಪಸ್ಸು ವರ್ಧಿಸುತ್ತಿರುವುದೆ? ಕೋಪವನ್ನು ಜಯಿಸಿರುವೆಯಾ? ಆಹಾರವನ್ನು ನಿಯಂತ್ರಿಸಿರು

ಕಚ್ಚಿತ್ತೇ ನಿಯಮಾಃ ಪ್ರಾಪ್ತಾಃ ಕಚ್ಚಿತ್ತೇ ಮನಸಃ ಸುಖಮ್ ।
ಕಚ್ಚಿತ್ತೇ ಗುರುಶುಶ್ರೂಷಾ ಸಫಲಾ ಚಾರುಭಾಷಿಣಿ ॥ ೯

ರಾಮೇಣ ತಾಪಸೀ ಪೃಷ್ಟಾ ಸಾ ಸಿದ್ಧಾ ಸಿದ್ಧಸಂಮತಾ ।
ಶಶಂಸ ಶಬರೀ ವೃದ್ಧಾ ರಾಮಾಯ ಪ್ರತ್ಯುಪಸ್ಥಿತಾ ॥ ೧೦

ಅದ್ಯ ಪ್ರಾಪ್ತಾ ತಪಃಸಿದ್ಧಿಸ್ತವ ಸಂದರ್ಶನಾನ್ಮಯಾ ।
ಅದ್ಯ ಮೇ ಸಫಲಂ ತಪ್ತಂ ಗುರವಶ್ಚ ಸುಪೂಜಿತಾಃ ॥ ೧೧

ಅದ್ಯ ಮೇ ಸಫಲಂ ಜನ್ಮ ಸ್ವರ್ಗಶ್ಚೈವ ಭವಿಷ್ಯತಿ ।
ತ್ವಯಿ ದೇವವರೇ ರಾಮ ಪೂಜಿತೇ ಪುರುಷರ್ಷಭ ॥ ೧೨

ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ ।
ಗಮಿಷ್ಯಾಮ್ಯಕ್ಷಯಾನ್ ಲೋಕಾಂಸ್ತ್ವತ್ಪ್ರಸಾದಾದರಿಂದಮ ॥ ೧೩

ಚಿತ್ರಕೂಟಂ ತ್ವಯಿ ಪ್ರಾಪ್ತೇ ವಿಮಾನೈರತುಲಪ್ರಭೈಃ ।
ಇತಸ್ತೇ ದಿವಮಾರೂಢಾ ಯಾನಹಂ ಪರ್ಯಚಾರಿಷಮ್ ॥ ೧೪

---

ವೆಯಾ? (೭–೮). ವ್ರತಗಳೆಲ್ಲವನ್ನೂ ನಡೆಸಿರುವೆಯಾ? ನಿನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆಯೆ? ತಪಸ್ವಿನಿ, ನಿನ್ನ ಗುರುಶುಶ್ರೂಷೆಯು ಸಫಲವಾಯಿತೆ?" ಎಂದು ಕೇಳಿದನು. ಈ ರೀತಿಯಲ್ಲಿ ಶ್ರೀರಾಮನು ಪ್ರಶ್ನೆ ಮಾಡಲು, ತಪಸ್ಸಿದ್ಧಳೂ ಸಿದ್ಧಸಮ್ಮಾನ್ಯಳೂ ವೃದ್ಧಳೂ ಆದ ಶಬರಿಯು ಶ್ರೀರಾಮನಿಗೆ ಅಭಿಮುಖವಾಗಿ ನಿಂತು ಹೀಗೆಂದಳು (೯–೧೦): "ಶ್ರೀರಾಮ, ಈಗ ನಿನ್ನ ದರ್ಶನವಾದ್ದರಿಂದ ನನ್ನ ತಪಸ್ಸು ಸಿದ್ಧಿಸಿತು! ಈಗ ನನ್ನ ತಪಸ್ಸು ಸಫಲವಾಯಿತು! ನನ್ನ ಗುರುಶುಶ್ರೂಷೆಗೆ ಉತ್ತಮವಾದ ಫಲ ದೊರೆಯಿತು! ನಾನು ಹುಟ್ಟಿದುದು ಇಂದು ಸಾರ್ಥಕವಾಯಿತು! ಇನ್ನು ನನಗೆ ಸದ್ಗತಿಯಾಗುವುದು. ಹೇ ಪುರುಷೋತ್ತಮ, ದೇವೋತ್ತಮನಾದ ನೀನು ನನ್ನಿಂದ ಪೂಜೆಯನ್ನು ಕೈಗೊಂಡರೆ, ಸಕಲವೂ ನನಗೆ ಸಿದ್ಧಿಸಿದಂತೆಯೇ (೧೧–೧೨). ರಘುನಂದನ, ಸೌಮ್ಯವಾದ ನಿನ್ನ ವೀಕ್ಷಣದಿಂದ ನಾನು ಪರಿಶುದ್ಧಳಾದೆನು. ನಿನ್ನ ಅನುಗ್ರಹದಿಂದ ಶಾಶ್ವತವಾದ ಸದ್ಗತಿಯನ್ನು ಪಡೆಯುವೆನು. ನೀನು ಚಿತ್ರಕೂಟಕ್ಕೆ ಬಂದಾಗ, ನಾನು ಶುಶ್ರೂಷಿಸುತ್ತಿದ್ದ ನನ್ನ ಗುರುಗಳು ದಿವ್ಯಪ್ರಕಾಶವನ್ನು ಬೀರುವ ವಿಮಾನ

ತೈಶ್ಚಾಹಮುಕ್ತಾ ಧರ್ಮಜ್ಞೈರ್ಮಹಾಭಾಗೈರ್ಮಹರ್ಷಿಭಿಃ ।
ಆಗಮಿಷ್ಯತಿ ತೇ ರಾಮಃ ಸುಪುಣ್ಯಮಿಮಮಾಶ್ರಮಮ್ ॥ ೧೩

ಸ ತೇ ಪ್ರತಿಗ್ರಹೀತವ್ಯಃ ಸೌಮಿತ್ರಿಸಹಿತೋಽತಿಥಿಃ ।
ತಂ ಚ ದೃಷ್ಟ್ವಾ ವರಾನ್ ಲೋಕಾನಕ್ಷಯಾಂಸ್ತ್ವಂ ಗಮಿಷ್ಯಸಿ ॥ ೧೪

ಮಯಾ ತು ವಿವಿಧಂ ವನ್ಯಂ ಸಂಚಿತಂ ಪುರುಷರ್ಷಭ ।
ತವಾರ್ಥೇ ಪುರುಷವ್ಯಾಘ್ರ ಪಂಪಾಯಾಸ್ತೀರಸಂಭವಮ್ ॥ ೧೭


ಏವಮುಕ್ತಃ ಸ ಧರ್ಮಾತ್ಮಾ ಶಬರ್ಯಾ ಶಬರೀಮಿದಮ್ ।
ರಾಘವಃ ಪ್ರಾಹ ವಿಜ್ಞಾನೇ ತಾಂ ನಿತ್ಯಮಬಹಿಷ್ಕೃತಾಮ್ ॥ ೧೮

ದನೋಃ ಸಕಾಶಾತ್ತತ್ತ್ವೇನ ಪ್ರಭಾವಂ ತೇ ಮಹಾತ್ಮನಃ ।
ಶ್ರುತಂ ಪ್ರತ್ಯಕ್ಷಮಿಚ್ಛಾಮಿ ಸಂದ್ರಷ್ಟುಂ ಯದಿ ಮನ್ಯಸೇ ॥ ೧೯

ಏತತ್ತು ವಚನಂ ಶ್ರುತ್ವಾ ರಾಮವಕ್ತ್ರಾದ್ವಿನಿಃಸೃತಮ್ ।
ಶಬರೀ ದರ್ಶಯಾಮಾಸ ತಾವುಭೌ ತದ್ವನಂ ಮಹತ್ ॥ ೨೦

---

ಗಳನ್ನೇರಿ ಸ್ವರ್ಗಕ್ಕೆ ಹೊರಟುಹೋದರು (೧೩–೧೪). ಧರ್ಮಜ್ಞರೂ ಮಹಾತ್ಮರೂ ಆದ ಆ ಮಹರ್ಷಿಗಳು ನನಗೆ 'ಎಲೌ ಶಬರಿ, (ಸ್ವಲ್ಪ ಕಾಲದ ಮೇಲೆ) ಶ್ರೀರಾಮನು ಈ ಪುಣ್ಯಾಶ್ರಮಕ್ಕೆ ಬರುವನು. ಲಕ್ಷ್ಮಣಸಮೇತನಾಗಿ ಬರುವ ಆತನನ್ನು ನೀನು ಅತಿಥಿಯೆಂದು ಸತ್ಕರಿಸಬೇಕು. ಶ್ರೀರಾಮನ ದರ್ಶನವಾದಮೇಲೆ ನಿನಗೆ ಶಾಶ್ವತವಾದ ಸದ್ಗತಿಯು ಲಭಿಸುವುದು' ಎಂದು ಹೇಳಿದ್ದರು (೧೫–೧೬). ನಾನು, ಹೇ ಪುರುಷೋತ್ತಮ, ಪಂಪಾತೀರದಲ್ಲಿ ದೊರೆಯುವ ಫಲಮೂಲಾದಿ ವನ್ಯಾಹಾರವನ್ನು ನಿನಗೋಸ್ಕರ ಸಂಗ್ರಹಿಸಿದ್ದೇನೆ" ಎಂದು ನುಡಿದಳು. ಆಗ ಧರ್ಮಾತ್ಮನಾದ ರಾಘವನು ಸಂತತ ಜ್ಞಾನನಿಷ್ಠಳಾದ ಶಬರಿಯನ್ನು ನೋಡಿ "ಶಬರಿ, ದನುವಂಶೀಯನಾದ ಕಬಂಧನಿಂದ ನಿನ್ನ ಗುರುವೂ ಮಹಾತ್ಮನೂ ಆದ ಮತಂಗಮುನಿಯ ಪ್ರಭಾವವನ್ನು ಕೇಳಿದ್ದೇನೆ. ನಿನಗೆ ಒಪ್ಪಿಗೆಯಾದರೆ ಅದನ್ನು ಈಗ ಪ್ರತ್ಯಕ್ಷವಾಗಿ ನೋಡಬೇಕೆಂದಿದ್ದೇನೆ" ಎಂದನು (೧೭–೧೯). ಶ್ರೀರಾಮನ ಬಾಯಿಂದ ಈ ಮಾತು ಬಂದೊಡನೆ ಶಬರಿಯು ರಾಮಲಕ್ಷ್ಮಣರಿಗೆ ಮಹತ್ತರವಾದ ಆ ವನವನ್ನು ತೋರಿಸಿದಳು. "ರಘುನಂದನ, ಇತ್ತ ನೋಡು!




ಶಬರಿಯ ಸತ್ಕಾರ

ಪಶ್ಯ ಮೇಘಘನಪ್ರಖ್ಯಂ ಮೃಗಪಕ್ಷಿಸಮಾಕುಲಮ್ ।
ಮತಂಗವನಮಿತ್ಯೇವ ವಿಶ್ರುತಂ ರಘುನಂದನ ॥ ೨೧

ಇಹ ತೇ ಭಾವಿತಾತ್ಮಾನೋ ಗುರವೋ ಮೇ ಮಹಾವನೇ ।
ಜುಹವಾಂಚಕ್ರಿರೇ ದೇಹಂ ಮಂತ್ರವನ್ಮಂತ್ರಪೂಜಿತಮ್ ॥ ೨೨

ಇಯಂ ಪ್ರತ್ಯಕ್ಸ್ಥಲೀ ವೇದಿರ್ಯತ್ರ ತೇ ಮೇ ಸುಸತ್ಕೃತಾಃ ।
ಪುಷ್ಪೋಪಹಾರಂ ಕುರ್ವಂತಿ ಶ್ರಮಾದುದ್ವೇಪಿಭಿಃ ಕರೈಃ ॥ ೨೩

ತೇಷಾಂ ತಪಃಪ್ರಭಾವೇಣ ಪಶ್ಯಾದ್ಯಾಪಿ ರಘೂದ್ವಹ ।
ದ್ಯೋತಯಂತಿ ದಿಶಃ ಸರ್ವಾಃ ಶ್ರಿಯಾ ವೇದ್ಯೋಽತುಲಪ್ರಭಾಃ ॥ ೨೪

ಅಶಕ್ನುವದ್ಭಿಸ್ತೈರ್ಗಂತುಮುಪವಾಸಶ್ರಮಾಲಸೈಃ ।
ಚಿಂತಿತೇಽಭ್ಯಾಗತಾನ್ ಪಶ್ಯ ಸಹಿತಾನ್ ಸಪ್ತಸಾಗರಾನ್ ॥ ೨೫

ಕೃತಾಭಿಷೇಕೈಸ್ತೈರ್ನ್ಯಸ್ತಾ ವಲ್ಕಲಾಃ ಪಾದಪೇಷ್ವಿಹ ।
ಅದ್ಯಾಪಿ ನಾವಶುಷ್ಯಂತಿ ಪ್ರದೇಶೇ ರಘುನಂದನ ॥ ೨೬

---

ಸಾಂದ್ರವಾದ ಮೇಘಮಂಡಲದಂತೆ ವಿರಾಜಿಸುವ ಈ ವನವು ಮೃಗಪಕ್ಷಿಗಳಿಂದ ಸಮಾವೃತವಾಗಿದೆ. ಇದು 'ಮತಂಗವನ'ವೆಂದು ವಿಖ್ಯಾತವಾಗಿದೆ (೨೦–೨೧). ಈ ಮಹಾವನದಲ್ಲಿ ಆತ್ಮವಿದರಾದ ನನ್ನ ಗುರುಗಳು ಮಂತ್ರಪರಿಶುದ್ಧವಾದ ತಮ್ಮ ದೇಹವನ್ನು ವಿಧಿವತ್ತಾಗಿ ಆತ್ಮಾರ್ಪಣ ಮಾಡಿದರು. ಪಶ್ಚಿಮಾಭಿಮುಖವಾಗಿ ನಿಮ್ನವಾಗಿರುವ ಈ ವೇದಿಕೆಯಲ್ಲಿ ನನ್ನ ಗುರುಗಳು ಪೂಜೆಮಾಡುತ್ತಿದ್ದರು. ಅವರು ನನ್ನ ಶುಶ್ರೂಷೆಯನ್ನು ಕೈಗೊಂಡು ಬಳಲಿಕೆಯಿಂದ ನಡುಗುತ್ತಿದ್ದ ಕೈಗಳಿಂದ ಇಲ್ಲಿ ಹೂಗಳನ್ನರ್ಪಿಸಿ ಪೂಜಿಸುತ್ತಿದ್ದರು (೨೨–೨೩). ರಘೂತ್ತಮ, ದಿವ್ಯಪ್ರಭಾಮಂಡಿತವಾದ ಈ ವೇದಿಕೆಗಳು ಈಗಲೂ ಅವರ ತಪೋಮಹಿಮೆಯಿಂದ ದಿಗ್‌ದಿಗಂತರಗಳನ್ನು ಬೆಳಗಿಸುತ್ತಿವೆ, ನೋಡು! ಉಪವಾಸಾದಿವ್ರತಗಳಿಂದ ಬಳಲಿದ ನನ್ನ ಗುರುಗಳಿಗೆ ಸಮುದ್ರಸ್ನಾನಕ್ಕಾಗಿ ತೆರಳುವ ಶಕ್ತಿ ಇರಲಿಲ್ಲ. ಅವರ ಧ್ಯಾನಮಾತ್ರದಿಂದ ಸಪ್ತಸಮುದ್ರಗಳೂ ಇಲ್ಲಿಗೇ ಬಂದು ಸೇರಿರುವುದನ್ನು ನೋಡು! (೨೪–೨೫). ನನ್ನ ಗುರುಗಳು ಇಲ್ಲಿ ಸ್ನಾನಮಾಡಿ ನಾರುಮಡಿಗಳನ್ನು ಈ ಮರಗಳಲ್ಲಿ ಹರಡಿದ್ದಾರೆ. ರಘುನಂದನ, ಅವು ಈಗಲೂ

ದೇವಕಾರ್ಯಾಣಿ ಕುರ್ವದ್ಭಿರ್ಯಾನೀಮಾನಿ ಕೃತಾನಿ ವೈ ।
ಪುಷ್ಪೈಃ ಕುವಲಯೈಃ ಸಾರ್ಧಂ ಮ್ಲಾನತ್ವಂ ನೋಪಯಾಂತಿ ವೈ ॥

ಕೃತ್ಸ್ನಂ ವನಮಿದಂ ದೃಷ್ಟಂ ಶ್ರೋತವ್ಯಂ ಚ ಶ್ರುತಂ ತ್ವಯಾ ।
ತದಿಚ್ಛಾಮ್ಯಭ್ಯನುಜ್ಞಾತಾ ತ್ಯಕ್ತುಮೇತತ್ ಕಲೇವರಮ್ ॥ ೨೮

ತೇಷಾಮಿಚ್ಛಾಮ್ಯಹಂ ಗಂತುಂ ಸಮೀಪಂ ಭಾವಿತಾತ್ಮನಾಮ್ ।
ಮುನೀನಾಮಾಶ್ರಮೋ ಯೇಷಾಮಹಂ ಚ ಪರಿಚಾರಿಣೀ ॥ ೨೯

ಧರ್ಮಿಷ್ಠಂ ತು ವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ಪ್ರಹರ್ಷಮತುಲಂ ಲೇಭೇ ಆಶ್ಚರ್ಯಮಿತಿ ಚಾಬ್ರವೀತ್ ॥ ೩೦

ತಾಮುವಾಚ ತತೋ ರಾಮಃ ಶಬರೀಂ ಸಂಶಿತವ್ರತಾಮ್ ।
ಅರ್ಚಿತೋಽಹಂ ತ್ವಯಾ ಭಕ್ತ್ಯಾ ಗಚ್ಛ ಕಾಮಂ ಯಥಾಸುಖಮ್ ॥

ಇತ್ಯುಕ್ತಾ ಜಟಿಲಾ ವೃದ್ಧಾ ಚೀರಕೃಷ್ಣಾಜಿನಾಂಬರಾ ।
ತಸ್ಮಿನ್ ಮುಹೂರ್ತೇ ಶಬರೀ ದೇಹಂ ಜೀರ್ಣಂ ಜಿಹಾಸತೀ ॥ ೩೨

---

ಒಣಗಿಲ್ಲ! ದೇವತಾರ್ಚನೆಯನ್ನು ಮಾಡುವಾಗ ನನ್ನ ಗುರುಗಳು ನೈದಿಲೆ ಮುಂತಾದ ಹೂಗಳನ್ನು ಇಲ್ಲಿ ಸಮರ್ಪಿಸಿದ್ದಾರೆ. ಅವು ಇನ್ನೂ ಬಾಡದೆ ಹೊಚ್ಚಹೊಸದಾಗಿವೆ, ನೋಡು! (೨೬–೨೭). ಶ್ರೀರಾಮ, ಈ ಮತಂಗ ವನವನ್ನು ನೀನು ಸಮಗ್ರವಾಗಿ ನೋಡಿದೆ. ಕೇಳಬೇಕಾದ್ದನ್ನು ಕೇಳಿದೆ. ಈಗ ನನಗೆ ಅನುಜ್ಞೆಯನ್ನು ಕೊಡು; ಈ ಕಳೇಬರವನ್ನು ತ್ಯಜಿಸಬೇಕೆಂದಿದ್ದೇನೆ (೨೮). ಇದು ಯಾರ ಆಶ್ರಮವೋ, ನಾನು ಯಾರ ಭಕ್ತಳಾದ ದಾಸಿಯೋ–ಅಂತಹ ಜ್ಞಾನಿಗಳಾದ ಮಹರ್ಷಿಗಳ ಸಾನ್ನಿಧ್ಯವನ್ನು ಸೇರಿಕೊಳ್ಳಬೇಕೆಂದಿದ್ದೇನೆ" ಎಂದು ನಿವೇದಿಸಿದಳು (೨೯). ಧರ್ಮಯುಕ್ತವಾದ ಶಬರಿಯ ನುಡಿಯನ್ನಾಲಿಸಿ, ಶ್ರೀರಾಮನಿಗೂ ಲಕ್ಷ್ಮಣನಿಗೂ ಅತ್ಯಾನಂದವಾಯಿತು. "ಆಶ್ಚರ್ಯವಿದು!" ಎಂಬ ಸೊಲ್ಲು ಅವರ ಬಾಯಿಂದ ಹೊರಟಿತು (೩೦–೩೧). ಅನಂತರ ವ್ರತನಿಷ್ಠಳಾದ ಶಬರಿಯನ್ನು ನೋಡಿ ಶ್ರೀರಾಮನು "ಧರ್ಮಚಾರಿಣಿ, ನನ್ನನ್ನು ಭಕ್ತಿಯಿಂದ ಅರ್ಚಿಸಿದ್ದೀಯೆ. ಇಚ್ಛೆಬಂದಲ್ಲಿಗೆ ಸುಖವಾಗಿ ತೆರಳು" ಎಂದನು. ಆಗ ನಾರುಬಟ್ಟೆ–ಕೃಷ್ಣಾಜಿನಗಳನ್ನುಟ್ಟು ಜಟಾಧಾರಿಣಿಯಾಗಿ ಮುದುಕಿಯಾಗಿದ್ದ ಶಬರಿಗೆ ತನ್ನ ಜೀರ್ಣ

ಅನುಜ್ಞಾತಾ ತು ರಾಮೇಣ ಹುತ್ವಾತ್ಮಾನಂ ಹುತಾಶನೇ ।
ಜ್ವಲತ್ಪಾವಕಸಂಕಾಶಾ ಸ್ವರ್ಗಮೇವ ಜಗಾಮ ಸಾ ॥ ೩೩

ದಿವ್ಯಾಭರಣಸಂಯುಕ್ತಾ ದಿವ್ಯಮಾಲ್ಯಾನುಲೇಪನಾ ।
ದಿವ್ಯಾಂಬರಧರಾ ತತ್ರ ಬಭೂವ ಪ್ರಿಯದರ್ಶನಾ ॥ ೩೪

ವಿರಾಜಯಂತೀ ತಂ ದೇಶಂ ವಿದ್ಯುತ್ಸೌದಾಮನೀ ಯಥಾ ।
ಯತ್ರ ತೇ ಸುಕೃತಾತ್ಮಾನೋ ವಿಹರಂತಿ ಮಹರ್ಷಯಃ ॥ ೩೫

ತತ್ಪುಣ್ಯಂ ಶಬರೀ ಸ್ಥಾನಂ ಜಗಾಮಾತ್ಮಸಮಾಧಿನಾ ॥

ಇತಿ ಶ್ರೀಮದ್ರಾಮಾಯಣೇ ಅರಣ್ಯಕಾಂಡೇ ಚತುಃಸಪ್ತತಿತಮಃ ಸರ್ಗಃ

ವಾದ ದೇಹವನ್ನು ಆ ಕ್ಷಣದಲ್ಲಿಯೇ ತೊರೆಯಬೇಕೆಂದು ಇಚ್ಛೆಯಾಯಿತು (೩೧–೩೨). ಶ್ರೀರಾಮನ ಅನುಜ್ಞೆಯಾದೊಡನೆ ಅವಳು ಅಗ್ನಿಯಲ್ಲಿ ತನ್ನ ದೇಹವನ್ನರ್ಪಿಸಿದಳು. ಅಗ್ನಿಯಂತೆ ಬೆಳಗುವ ದಿವ್ಯದೇಹವನ್ನು ಪಡೆದು ಶಬರಿಯು ಸ್ವರ್ಗವನ್ನು ಸೇರಿದಳು (೩೩). ದಿವ್ಯವಾದ ಆಭರಣಗಳನ್ನು ತೊಟ್ಟು, ಮಾಲ್ಯಗಳನ್ನು ಮುಡಿದು, ಚಂದನವನ್ನು ಹಚ್ಚಿಕೊಂಡು, ದಿವ್ಯವಸ್ತ್ರವನ್ನುಟ್ಟ ಶಬರಿಯು ದಿವ್ಯಸುಂದರಿಯಾಗಿ ಕಂಗೊಳಿಸಿದಳು! ಮಿಂಚುವ ಮಿಂಚಿನಂತೆ ಆ ಪ್ರದೇಶವನ್ನು ಝಗ್ ಎಂದು ಬೆಳಗಿಸುತ್ತ ಆ ಶಬರಿಯು ಸ್ವರ್ಗವನ್ನೇರಿದಳು. ಪುಣ್ಯಾತ್ಮರಾದ ಆ ಮಹರ್ಷಿಗಳು ವಿಹರಿಸುತ್ತಿದ್ದ ಪುಣ್ಯಲೋಕವನ್ನು ತನ್ನ ತಪೋಬಲದಿಂದ ಸೇರಿದಳು (೩೪–೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತನಾಲ್ಕನೆಯ ಸರ್ಗ

## ಪಂಚಸಪ್ತತಿತಮಃ ಸರ್ಗಃ

### ಪಂಪಾದರ್ಶನಮ್

ದಿವಂ ತು ತಸ್ಯಾಂ ಯಾತಾಯಾಂ ಶಬರ್ಯಾಂ ಸ್ವೇನ ತೇಜಸಾ ।
ಲಕ್ಷ್ಮಣೇನ ಸಹ ಭ್ರಾತ್ರಾ ಚಿಂತಯಾಮಾಸ ರಾಘವಃ ॥ ೧

ಸ ಚಿಂತಯಿತ್ವಾ ಧರ್ಮಾತ್ಮಾ ಪ್ರಭಾವಂ ತಂ ಮಹಾತ್ಮನಾಮ್ ।
ಹಿತಕಾರಿಣಮೇಕಾಗ್ರಂ ಲಕ್ಷ್ಮಣಂ ರಾಘವೋಽಬ್ರವೀತ್ ॥ ೨

ದೃಷ್ಟೋಽಯಮಾಶ್ರಮಃ ಸೌಮ್ಯ ಬಹ್ವಾಶ್ಚರ್ಯಃ ಕೃತಾತ್ಮನಾಮ್ ।
ವಿಶ್ವಸ್ತಮೃಗಶಾರ್ದೂಲೋ ನಾನಾವಿಹಗಸೇವಿತಃ ॥ ೩

ಸಪ್ತಾನಾಂ ಚ ಸಮುದ್ರಾಣಾಮೇಷು ತೀರ್ಥೇಷು ಲಕ್ಷ್ಮಣ ।
ಉಪಸ್ಪೃಷ್ಟಂ ಚ ವಿಧಿವತ್ ಪಿತರಶ್ಚಾಪಿ ತರ್ಪಿತಾಃ ॥ ೪

ಪ್ರಣಷ್ಟಮಶುಭಂ ತತ್ತತ್ ಕಲ್ಯಾಣಂ ಸಮುಪಸ್ಥಿತಮ್ ।
ತೇನ ತತ್ತ್ವೇನ ಹೃಷ್ಟಂ ಮೇ ಮನೋ ಲಕ್ಷ್ಮಣ ಸಂಪ್ರತಿ ॥ ೫

### ಸರ್ಗ ೭೫

ಶ್ರೀರಾಮನು ಲಕ್ಷ್ಮಣಸಮೇತನಾಗಿ ಪಂಪಾಸರೋವರಕ್ಕೆ ಹೋಗಿ
ಅದರ ಸೌಂದರ್ಯವನ್ನು ವೀಕ್ಷಿಸುವುದು.

ಶಬರಿಯು ತನ್ನ ತಪೋಬಲದಿಂದ ಸ್ವರ್ಗವನ್ನು ಸೇರಲಾಗಿ, ಧರ್ಮಾತ್ಮನಾದ ರಾಘವನು ಅಲ್ಲಿದ್ದ ಮಹಾತ್ಮರ ತಪಃಪ್ರಭಾವವನ್ನು ತಮ್ಮನೊಡನೆ ಸಮೀಕ್ಷಿಸಿದನು. ಆ ಧರ್ಮಾತ್ಮನು ಅದರ ವಿಷಯವಾಗಿ ಆಲೋಚಿಸುತ್ತ, ಹಿತಕಾರಿಯೂ ಏಕಾಗ್ರಚಿತ್ತನೂ ಆಗಿದ್ದ ಲಕ್ಷ್ಮಣನನ್ನು ನೋಡಿ ಹೀಗೆಂದನು (೧–೨) : "ಸೌಮ್ಯ, ಪುಣ್ಯಾತ್ಮರ ಅತ್ಯದ್ಭುತವಾದ ಈ ಆಶ್ರಮವನ್ನು ನಾವು ನೋಡಿದೆವು. ಜಿಂಕೆಗಳೂ ಹುಲಿಗಳೂ ಇಲ್ಲಿ ಅನ್ಯೋನ್ಯ ವಿಶ್ವಾಸದಿಂದಿವೆ! ನಾನಾ ಬಗೆಯ ಹಕ್ಕಿಗಳು ವಾಸವಾಗಿವೆ. ಸಪ್ತಸಮುದ್ರಗಳೂ ನೆಲೆಸಿರುವ ಈ ತೀರ್ಥಗಳಲ್ಲಿ ನಾವು ಸ್ನಾನಮಾಡಿದ್ದಾಯಿತು. ವಿಧಿವತ್ತಾಗಿ ಪಿತೃಗಳಿಗೆ ತರ್ಪಣವನ್ನರ್ಪಿಸಿದ್ದಾಯಿತು (೩–೪). ನಮ್ಮ ದೋಷವೆಲ್ಲವೂ ತೊಡೆದುಹೋಯಿತು. ಮಂಗಳವು ಉಪಸ್ಥಿತವಾಯಿತು. ಲಕ್ಷ್ಮಣ,

ಹೃದಯೇ ಹಿ ನರವ್ಯಾಘ್ರ ಶುಭಮಾವಿರ್ಭವಿಷ್ಯತಿ ।
ತದಾಗಚ್ಛ ಗಮಿಷ್ಯಾವಃ ಪಂಪಾಂ ತಾಂ ಪ್ರಿಯದರ್ಶನಾಮ್ ॥ ೬

ಋಷ್ಯಮೂಕೋ ಗಿರಿರ್ಯತ್ರ ನಾತಿದೂರೇ ಪ್ರಕಾಶತೇ ।
ಯಸ್ಮಿನ್ ವಸತಿ ಧರ್ಮಾತ್ಮಾ ಸುಗ್ರೀವೋಽಂಶುಮತಃ ಸುತಃ ॥ ೭

ನಿತ್ಯಂ ವಾಲಿಭಯತ್ರಸ್ತಶ್ಚತುರ್ಭಿಃ ಸಹ ವಾನರೈಃ ।
ಅಭಿತ್ವರೇ ಚ ತಂ ದ್ರಷ್ಟುಂ ಸುಗ್ರೀವಂ ವಾನರರ್ಷಭಮ್ ॥ ೮

ತದಧೀನಂ ಹಿ ಮೇ ಸೌಮ್ಯ ಸೀತಾಯಾಃ ಪರಿಮಾರ್ಗಣಮ್ ।
ಏವಂ ಬ್ರುವಾಣಂ ತಂ ಧೀರಂ ರಾಮಂ ಸೌಮಿತ್ರಿರಬ್ರವೀತ್ ॥ ೯

ಗಚ್ಛಾವಸ್ತ್ವರಿತಂ ತತ್ರ ಮಮಾಪಿ ತ್ವರತೇ ಮನಃ ।
ಆಶ್ರಮಾತ್ತು ತತಸ್ತಸ್ಮಾನ್ನಿಷ್ಕ್ರಮ್ಯ ಸ ವಿಶಾಂಪತಿಃ ॥ ೧೦

ಆಜಗಾಮ ತತಃ ಪಂಪಾಂ ಲಕ್ಷ್ಮಣೇನ ಸಹ ಪ್ರಭುಃ ।
ಸ ದದರ್ಶ ತತಃ ಪುಣ್ಯಾಮುದಾರಜಲಸೇವಿತಾಮ್ ॥ ೧೧

---

ನಿಜವಾಗಿಯೂ ಈಗ ನನ್ನ ಮನಸ್ಸಿಗೆ ಉಲ್ಲಾಸವಾಗಿದೆ. ಒಳ್ಳೆಯದಾಗುವುದೆಂಬ ಶುಭಚಿಂತನೆಯು ಹೃದಯದಲ್ಲಿ ಆವಿರ್ಭವಿಸುತ್ತಿದೆ. ಆದ್ದರಿಂದ ರಮಣೀಯವಾದ ಪಂಪಾಸರೋವರದ ಬಳಿಗೆ ಹೋಗೋಣ, ಬಾ (೫–೬). ಸಮೀಪದಲ್ಲಿ ಋಷ್ಯಮೂಕಗಿರಿಯು ಕಾಣಿಸುತ್ತಿದೆ. ಸೂರ್ಯಪುತ್ರನಾದ ಧರ್ಮಾತ್ಮ ಸುಗ್ರೀವನು ಅಲ್ಲಿ ವಾಸವಾಗಿದ್ದಾನೆ. ಅವನು ವಾಲಿಭಯದಿಂದ ಕಂಗಾಲಾಗಿ ನಾಲ್ವರು ವಾನರರೊಡನೆ ಅಲ್ಲಿದ್ದಾನಲ್ಲವೆ? ವಾನರೋತ್ತಮನಾದ ಸುಗ್ರೀವನ ಸಂದರ್ಶನಮಾಡಲು ತ್ವರೆಪಡುತ್ತಿದ್ದೇನೆ (೭–೮). ವತ್ಸ, ಸೀತೆಯ ಅನ್ವೇಷಣೆ ಅವನ ಅಧೀನವಾಗಿದೆಯಲ್ಲವೆ?" ಎಂದನು. ಹೀಗೆ ಧೈರ್ಯವನ್ನವಲಂಬಿಸಿ ಹೇಳುತ್ತಿದ್ದ ಶ್ರೀರಾಮನನ್ನು ನೋಡಿ ಸೌಮಿತ್ರಿಯು "ಅಣ್ಣ, ತ್ವರಿತವಾಗಿ ಅಲ್ಲಿಗೆ ಹೋಗೋಣ. ಸುಗ್ರೀವನನ್ನು ಸಂದರ್ಶಿಸಬೇಕೆಂದು ನನ್ನ ಮನಸ್ಸೂ ಉತ್ಸುಕವಾಗಿದೆ" ಎಂದನು (೯–೧೦). ಅನಂತರ ಪ್ರಜಾಪಾಲನದಕ್ಷನಾದ ಆ ಮಹಾಪುರುಷನು ಮತಂಗಾಶ್ರಮದಿಂದ ಹೊರಟು ಲಕ್ಷ್ಮಣನೊಡನೆ ಪಂಪಾಸರೋವರದ ಕಡೆಗೆ ಬಂದನು.

ನಾನಾದ್ರುಮಲತಾಕೀರ್ಣಾಂ ಪಂಪಾಂ ಪಾನೀಯವಾಹಿನೀಮ್ ।
ಪದ್ಮೈಃ ಸೌಗಂಧಿಕೈಸ್ತಾಮ್ರಾಂ ಶುಕ್ಲಾಂ ಕುಮುದಮಂಡಲೈಃ ॥ ೧೨

ನೀಲಾಂ ಕುವಲಯೋದ್ಘಾಟೈರ್ಬಹುವರ್ಣಾಂ ಕುಥಾಮಿವ ।
ಸ ತಾಮಾಸಾದ್ಯ ವೈ ರಾಮೋ ದೂರಾದುದಕವಾಹಿನೀಮ್ ॥ ೧೩

ಮತಂಗಸರಸಂ ನಾಮ ಹ್ರದಂ ಸಮವಗಾಹತ ।
ಅರವಿಂದೋತ್ಪಲವತೀಂ ಪದ್ಮಸೌಗಂಧಿಕಾಯುತಾಮ್ ॥ ೧೪

ಪುಷ್ಪಿತಾಮ್ರವಣೋಪೇತಾಂ ಬರ್ಹಿಣೋದ್ಘುಷ್ಟನಾದಿತಾಮ್ ।
ತಿಲಕೈರ್ಬೀಜಪೂರೈಶ್ಚ ಧವೈಃ ಶುಕ್ಲದ್ರುಮೈಸ್ತಥಾ ॥ ೧೫

ಪುಷ್ಪಿತೈಃ ಕರವೀರೈಶ್ಚ ಪುಂನಾಗೈಶ್ಚ ಸುಪುಷ್ಪಿತೈಃ ।
ಮಾಲತೀಕುಂದಗುಲ್ಮೈಶ್ಚ ಭಂಡೀರೈರ್ನಿಚುಲೈಸ್ತಥಾ ॥ ೧೬

---

ಪಾನಯೋಗ್ಯವಾದ ಅಗಾಧಜಲದಿಂದ ಪೂರ್ಣವಾಗಿದ್ದ ಪುಣ್ಯಕರವಾದ ಆ ಪುಷ್ಕರಿಣಿಯು ದೂರದಲ್ಲಿ ಶ್ರೀರಾಮನಿಗೆ ಕಾಣಿಸಿತು. ತೀರದಲ್ಲಿ ನಾನಾ ವೃಕ್ಷಗಳೂ ಬಳ್ಳಿಗಳೂ ಬೆಳೆದಿದ್ದವು. ಪದ್ಮಗಳಿಂದಲೂ ಸೌಗಂಧಿಕಪುಷ್ಪ ಗಳಿಂದಲೂ ಆ ಸರೋವರವು ಕೆಲವು ಕಡೆ ಕೆಂಪಾಗಿಯೂ ಕುಮುದಮಂಡಲ ಗಳಿಂದ ಕೆಲವು ಕಡೆ ಬಿಳುಪಾಗಿಯೂ ರಂಜಿಸುತ್ತಿತ್ತು (೧೧–೧೨). ನೀಲೋತ್ಪಲಗಳಿಂದ ಕೆಲವು ಕಡೆ ಕಪ್ಪಾಗಿಯೂ ರಂಜಿಸುತ್ತಿದ್ದ ಆ ಪುಷ್ಕರಿಣಿಯು, ವಿವಿಧವರ್ಣಗಳಿಂದ ಶೋಭಿಸುವ ಚಿತ್ರಕಂಬಳದಂತೆ ರಮಣೀಯವಾಗಿ ಕಾಣಿಸಿತು. ಶ್ರೀರಾಮನು ದಾರಿಯಲ್ಲಿ ಮತಂಗಸರಸ ವೆಂಬ ಪುಣ್ಯತೀರ್ಥದಲ್ಲಿ ಸ್ನಾನಮಾಡಿದನು. ಆಮೇಲೆ ಮುಂದೆ ಬರುತ್ತಿರಲು ಕೆಂದಾವರೆ, ಉತ್ಪಲ, ಬಿಳಿದಾವರೆ, ಕಹ್ಲಾರ–ಮುಂತಾದ ಪುಷ್ಪಗಳಿಂದ ವಿರಾಜಿಸುವ ಪಂಪಾಸರೋವರವು ಸ್ಪಷ್ಟವಾಗಿ ಗೋಚರಿಸಿತು (೧೩–೧೪). ಸುತ್ತಲೂ ಅರಳಿದ ಮಾವಿನಮರಗಳಿದ್ದವು. ನವಿಲುಗಳ ಕೇಕಾರವವು ಪ್ರತಿಧ್ವನಿಸುತ್ತಿತ್ತು. ತಿಲಕ, ದಾಳಿಂಬೆ, ಧವ, ಬಿಳಿಯ ಮತ್ತಿ, ಕುಸುಮಿತ ಕರವೀರ, ಪುಷ್ಪಿತಪುನ್ನಾಗ—ಇತ್ಯಾದಿ ವೃಕ್ಷಗಳು ಗೋಚರಿಸುತ್ತಿದ್ದವು. ಮಲ್ಲಿಗೆ ಜಾಜಿಗಳ ಪೊದೆಗಳೂ ಆಲದಮರ, ನಿಚುಲ, ಅಶೋಕ, ಸಪ್ತಪರ್ಣ, ಕೇದಗೆ, ತಾಳೆ—ಮೊದಲಾದ ವೃಕ್ಷಜಾತಿಗಳು ಸುತ್ತಲೂ ಬೆಳೆದಿದ್ದವು.

ಅಶೋಕೈಃ ಸಪ್ತಪರ್ಣೈಶ್ಚ ಕೇತಕೈರತಿಮುಕ್ತಕೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಪ್ರಮದಾಮಿವ ಭೂಷಿತಾಮ್ ॥ ೧೭

ಸಮೀಕ್ಷಮಾಣೌ ಪುಷ್ಪಾಢ್ಯಂ ಸರ್ವತೋ ವಿಪುಲದ್ರುಮಮ್ ।
ಕೋಯಷ್ಟಿಕೈಶ್ಚಾರ್ಜುನಕೈಃ ಶತಪತ್ರೈಶ್ಚ ಕೀರಕೈಃ ॥ ೧೮

ಏತೈಶ್ಚಾನ್ಯೈಶ್ಚ ವಿಹಗೈರ್ನಾದಿತಂ ತು ವನಂ ಮಹತ್ ।
ತತೋ ಜಗ್ಮತುರವ್ಯಗ್ರೌ ರಾಘವೌ ಸುಸಮಾಹಿತೌ ॥ ೧೯

ತದ್ವನಂ ಚೈವ ಸರಸಃ ಪಶ್ಯಂತೌ ಶಕುನೈರ್ಯುತಮ್ ।
ಸ ದದರ್ಶ ತತಃ ಪಂಪಾಂ ಶೀತವಾರಿನಿಧಿಂ ಶುಭಾಮ್ ॥ ೨೦

ಪ್ರಹೃಷ್ಟನಾನಾಶಕುನಾಂ ಪಾದಪೈರುಪಶೋಭಿತಾಮ್ ।
ಸ ರಾಮೋ ವಿವಿಧಾನ್ ವೃಕ್ಷಾನ್ ಸರಾಂಸಿ ವಿವಿಧಾನಿ ಚ ॥ ೨೧

ಪಶ್ಯನ್ ಕಾಮಾಭಿಸಂತಪ್ತೋ ಜಗಾಮ ಪರಮಂ ಹ್ರದಮ್ ।
ಪುಷ್ಪಿತೋಪವನೋಪೇತಾಂ ಸಾಲಚಂಪಕಶೋಭಿತಾಮ್ ॥ ೨೨

ಷಟ್ಪದೌಘಸಮಾವಿಷ್ಟಾಂ ಶ್ರೀಮತೀಮತುಲಪ್ರಭಾಮ್ ।
ಸ್ಫಟಿಕೋಪಮತೋಯಾಢ್ಯಾಂ ಶ್ಲಕ್ಷ್ಣವಾಲುಕಸಂಯುತಾಮ್ ॥

---

ಹೀಗೆ ಬಳ್ಳಿ, ಹೂವು ಮತ್ತು ವೃಕ್ಷಗಳಿಂದ ರಮಣೀಯವಾದ ಪಂಪಾ ಸರೋವರವು ಒಡವೆಗಳಿಂದ ಅಲಂಕರಿಸಿಕೊಂಡಿರುವ ತರುಣಿಯಂತೆ ಕಾಣಿಸುತ್ತಿತ್ತು (೧೫–೧೭). ಶ್ರೀರಾಮಲಕ್ಷ್ಮಣರು ಶಾಂತಚಿತ್ತರಾಗಿ ಹೂಗಳಿಂದಲೂ ವೃಕ್ಷರಾಶಿಗಳಿಂದಲೂ ಶೋಭಿಸುತ್ತಿದ್ದ ಅರಣ್ಯವನ್ನು ನೋಡುತ್ತ ಹೋದರು. ಕೋಯಷ್ಟಿಕವೆಂಬ ಚಿಕ್ಕಜಾತಿಯ ಬಿಳಿಯ ಕೊಕ್ಕರೆ, ಬಿಳಿಯ ನವಿಲು, ಮರಕುಟಕ, ಗಿಳಿ–ಮುಂತಾದ ನಾನಾಜಾತಿಯ ಪಕ್ಷಿಗಳ ಕಲಕಲರವದಿಂದ ವನವು ತುಂಬಿತ್ತು (೧೮–೧೯). ಶ್ರೀರಾಮನು ವಿವಿಧವೃಕ್ಷಗಳನ್ನೂ ಕೊಳಗಳನ್ನೂ ವೀಕ್ಷಿಸುತ್ತ ಹೋಗಿ, ಶೀತಳಜಲಭರಿತವಾಗಿ ನೀರುಹಕ್ಕಿಗಳಿಂದ ಮನೋಹರವಾದ ಪಂಪಾಸರೋವರವನ್ನು ಕಂಡನು. ಅದು ಸಾಲ, ಸಂಪಗೆ ಮೊದಲಾದ ಪುಷ್ಪಿತತರುಗಳಿಂದಲೂ ದುಂಬಿಗಳಿಂದಲೂ ರಮಣೀಯವಾಗಿ ಅನುಪಮ ಸೌಂದರ್ಯ ವಿರಾಜಿತವಾಗಿದ್ದಿತು. ಜಲವು ಸ್ಫಟಿಕದಂತೆ ನಿರ್ಮಲವಾಗಿದ್ದಿತು. ನುಣುಪಾದ ಮರಳು ಹರಡಿದ್ದಿತು (೨೦–೨೩).

ಸ ತಾಂ ದೃಷ್ಟ್ವಾ ಪುನಃ ಪಂಪಾಂ ಪದ್ಮಸೌಗಂಧಿಕೈರ್ಯುತಾಮ್ ।
ಇತ್ಯುವಾಚ ತದಾ ವಾಕ್ಯಂ ಲಕ್ಷ್ಮಣಂ ಸತ್ಯವಿಕ್ರಮಃ ॥ ೨೪

ಅಸ್ಯಾಸ್ತೀರೇ ತು ಪೂರ್ವೋಕ್ತಃ ಪರ್ವತೋ ಧಾತುಮಂಡಿತಃ ।
ಋಷ್ಯಮೂಕ ಇತಿ ಖ್ಯಾತಃ ಪುಣ್ಯಃ ಪುಷ್ಪಿತಪಾದಪಃ ॥ ೨೫

ಹರೇರೃಕ್ಷರಜೋನಾಮ್ನಃ ಪುತ್ರಸ್ತಸ್ಯ ಮಹಾತ್ಮನಃ ।
ಅಧ್ಯಾಸ್ತೇ ತಂ ಮಹಾವೀರ್ಯಃ ಸುಗ್ರೀವ ಇತಿ ವಿಶ್ರುತಃ ॥ ೨೬

ಸುಗ್ರೀವಮಭಿಗಚ್ಛ ತ್ವಂ ವಾನರೇಂದ್ರಂ ನರರ್ಷಭ ।
ಇತ್ಯುವಾಚ ಪುನರ್ವಾಕ್ಯಂ ಲಕ್ಷ್ಮಣಂ ಸತ್ಯವಿಕ್ರಮಮ್ ॥ ೨೭

ರಾಜ್ಯಭ್ರಷ್ಟೇನ ದೀನೇನ ತಸ್ಯಾಮಾಸಕ್ತಚೇತಸಾ ।
ಕಥಂ ಮಯಾ ವಿನಾ ಶಕ್ಯಂ ಸೀತಾಂ ಲಕ್ಷ್ಮಣ ಜೀವಿತುಮ್ ॥ ೨೮

ಇತ್ಯೇವಮುಕ್ತ್ವಾ ಮದನಾಭಿಪೀಡಿತಃ
ಸ ಲಕ್ಷ್ಮಣಂ ವಾಕ್ಯಮನನ್ಯಚೇತಸಮ್ ।
ವಿವೇಶ ಪಂಪಾಂ ನಲಿನೀಂ ಮನೋಹರಾಂ
ರಘೂತ್ತಮಃ ಶೋಕವಿಷಾದಯಂತ್ರಿತಃ ॥ ೨೯

---

ಶ್ರೀರಾಮನು ಆ ಪಂಪಾಸರೋವರವನ್ನು ನೋಡಿ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ, ಇದರ ತೀರದಲ್ಲಿ ಧಾತುಮಂಡಿತವಾದ ಋಷ್ಯಮೂಕಗಿರಿಯಿದೆ. ಅದು ಪವಿತ್ರವೂ ಅರಳಿದ ಮರಗಳಿಂದ ಭೂಷಿತವೂ ಆಗಿದೆ (೨೪–೨೫). ಅಲ್ಲಿಯೇ ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರನೂ ಮಹಾವೀರನೂ ಆದ ಸುಗ್ರೀವನು ವಾಸವಾಗಿದ್ದಾನಲ್ಲವೆ? ಲಕ್ಷ್ಮಣ, ವಾನರೇಂದ್ರನಾದ ಸುಗ್ರೀವನ ಬಳಿಗೆ ಹೋಗಿ ಅವನನ್ನು ಸಂದರ್ಶಿಸು" ಎಂದು ಹೇಳಿದನು (೨೬–೨೭). ಪುನಃ ಲಕ್ಷ್ಮಣನಿಗೆ "ವತ್ಸ, ಈಗ ನಾನು ರಾಜ್ಯಭ್ರಷ್ಟನಾಗಿ ದೀನಸ್ಥಿತಿಯಲ್ಲಿದ್ದೇನೆ. ಸೀತೆಯಲ್ಲಿ ನನ್ನ ಮನಸ್ಸು ನೆಟ್ಟುಹೋಗಿದೆ. ಸೀತೆಯಿಲ್ಲದೆ ನಾನು ಜೀವಿಸುವುದು ಹೇಗೆ?" ಎಂದು ವಿಲಪಿಸಿದನು (೨೮). ರಘುಕುಲತಿಲಕನು ಕಾಮಸಂತಪ್ತನಾಗಿ ಲಕ್ಷ್ಮಣನಿಗೆ ಆ ಮಾತನ್ನು ಹೇಳಿದನು. ಲಕ್ಷ್ಮಣನು ಏಕಾಗ್ರಚಿತ್ತನಾಗಿ ಶ್ರೀರಾಮನ ಪರಿಸ್ಥಿತಿಯನ್ನು ಗಮನಿಸುತ್ತಿದ್ದನು. ಶೋಕದಿಂದಲೂ ಆಯಾಸದಿಂದಲೂ ಪರವಶನಾಗಿದ್ದ ಶ್ರೀರಾಮನು ಮನೋಹರವಾದ ಪಂಪಾಸರೋವರದಲ್ಲಿ ಸ್ನಾನಕ್ಕಾಗಿ

ತತೋ ಮಹದ್ವರ್ತ್ಮ ಸುದೂರಸಂಕ್ರಮಃ
ಕ್ರಮೇಣ ಗತ್ವಾ ಪ್ರತಿಕೂಲಧನ್ವನಮ್ ।
ದದರ್ಶ ಪಂಪಾಂ ಶುಭದರ್ಶಕಾನನಾ-
ಮನೇಕನಾನಾವಿಧಪಕ್ಷಿಜಾಲಕಾಮ್ ॥ ೩೦

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ ಅರಣ್ಯಕಾಂಡೇ ಪಂಚಸಪ್ತತಿತಮಃ ಸರ್ಗಃ

## ಅರಣ್ಯಕಾಂಡಃ ಸಂಪೂರ್ಣಃ

ಇಳಿದನು (೨೯) ಈ ರೀತಿಯಲ್ಲಿ ಬಹುದೂರದವರೆಗೆ ದಾರಿಯನ್ನು ನಡೆದು ಕಬಂಧನಿದ್ದ ವಿಘ್ನಬಹುಳವಾದ ಗೊಂಡಾರಣ್ಯವನ್ನು ದಾಟಿ, ಅಂದವಾದ ವನದಿಂದಲೂ ನಾನಾವಿಧ ಪಕ್ಷಿಗಳಿಂದಲೂ ಮನೋಜ್ಞವಾದ ಪಂಪಾ ಸರೋವರವನ್ನು ಶ್ರೀರಾಮಚಂದ್ರನು ಸಮೀಕ್ಷಿಸಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಎಪ್ಪತ್ತೈದನೆಯ ಸರ್ಗ

—ಅರಣ್ಯಕಾಂಡವು ಸಂಪೂರ್ಣವಾಯಿತು—

ಜಟಿಲಂ ಚೀರವಸನಂ ದಂಡಕಾರಣ್ಯವಾಸಿನಮ್ ।
ಮುನಿವೇಷಧರಂ ಧ್ಯಾಯೇದಾರಣ್ಯೇ ಕಾಂಡ ಉತ್ತಮೇ ॥

ಜಟಾಯೋರುದ್ಧರ್ತಾ ಜನಕತನಯಾಕೀಲಿತಮನಾಃ
ಪದಂ ಪ್ರಾಪ್ತಾ ಯಸ್ಮಾಧಮಕುಲಭವಾ ಚಾಪಿ ಶಬರೀ ।
ಸಸೌಮಿತ್ರಿಃ ಸ್ತುತ್ಯೋ ವಿಮಲಧಿಷಣೈರ್ವೇದವಚಸಾ-
ಮಗಮ್ಯಃ ಶ್ರೀರಾಮೋ ಲಸತು ಮಮ ಚಿತ್ತೇ ರಘುಪತಿಃ ॥

ಲೋಕಾಭಿರಾಮಃ ರಣರಂಗಧೀರಂ
ರಾಜೀವನೇತ್ರಂ ರಘುವಂಶನಾಥಮ್ ।
ಕಾರುಣ್ಯರೂಪಂ ಕರುಣಾಕರಂ ತಂ
ಶ್ರೀರಾಮಚಂದ್ರಂ ಶರಣಂ ಪ್ರಪದ್ಯೇ ॥

ಆರಾಮಃ ಕಲ್ಪವೃಕ್ಷಾಣಾಂ ವಿರಾಮಃ ಸಕಲಾಪದಾಮ್ ।
ಅಭಿರಾಮಸ್ತ್ರಿಲೋಕಾನಾಂ ರಾಮಃ ಶ್ರೀಮಾನ್ ಸ ನಃ ಪ್ರಭುಃ ॥

# ಅನುಬಂಧ

## ೧

## ಬ್ರಾಹ್ಮ್ಯಾಂಶ್ಚ ನಾಕಪೃಷ್ಠ್ಯಾಂಶ್ಚ ಪ್ರತಿಗೃಹ್ಣೀಷ್ವ ಮಾಮಕಾನ್

—ಪುಟ ೨೮

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥

—ಭ.ಗೀ.

ಇತ್ಯಾದಿ ವಚನದಂತೆ ಭಕ್ತನು ತನ್ನ ಕರ್ಮಫಲವೆಲ್ಲವನ್ನೂ ಭಗವಂತನಿಗೆ ಅರ್ಪಿಸುತ್ತಾನೆ. ಆದ್ದರಿಂದ ಶರಭಂಗಮುನಿಗಳು ತಪಸ್ಸಿನಿಂದ ಸಂಪಾದಿಸಿದ ಪುಣ್ಯಫಲಗಳನ್ನು ಶ್ರೀರಾಮನಿಗೆ ಅರ್ಪಿಸುವ ಉದ್ದೇಶದಿಂದ ಈ ಮಾತನ್ನು ಹೇಳಿದ್ದಾರೆ. ಶ್ರೀರಾಮನು ತಾನು ಕ್ಷತ್ರಿಯನೆಂದೂ ಪ್ರತಿಗ್ರಹವು ತನಗೆ ಅಯುಕ್ತವೆಂದೂ ತಿಳಿದು 'ಅಹಮೇವಾಹರಿಷ್ಯಾಮಿ' ಎಂದು ಉತ್ತರಿಸಿದ್ದಾನೆ. 'ನಿನಗೆ ಸಕಲಪುಣ್ಯಲೋಕಗಳನ್ನೂ ನಾನೇ ಸಂಪಾದಿಸಿಕೊಡುವೆನು' ಎಂದೂ ಕೆಲವರು ಅರ್ಥವನ್ನು ಮಾಡುತ್ತಾರೆ.

ಆದರೆ ಶರಭಂಗಮುನಿಗಳು ಅತಿಥಿಸತ್ಕಾರಬುದ್ಧಿಯಿಂದ ಪುಣ್ಯಲೋಕಗಳನ್ನು ಶ್ರೀರಾಮನಿಗೆ ಅರ್ಪಿಸಲು ಉದ್ಯುಕ್ತರಾದರು. 'ಅವರ ಮಹಾತಪಸ್ಸಿನ ಫಲವನ್ನು ನಾನು ಸ್ವೀಕರಿಸುವುದು ಅಯುಕ್ತ. ತಂದೆಯ ಆಜ್ಞೆಯಂತೆ ವನವಾಸವನ್ನು ನಡೆಸಲೇಬೇಕು. ನನ್ನ ಪ್ರಯತ್ನದಿಂದ ನಾನು ಸದ್ಗತಿಯನ್ನು ಕಂಡುಕೊಳ್ಳಬೇಕೇ ವಿನಾ ಇತರರ ಶ್ರಮದಿಂದ ನಾನು ಸುಖವನ್ನು ಅನುಭವಿಸತಕ್ಕದ್ದಲ್ಲ' ಎಂಬುದು ಶ್ರೀರಾಮನ ದೃಢವಾದ ನಿಲುವು.

## ೨

## ದಂತೋಲೂಖಲಿನಶ್ಚೈವ........ಪಂಚತಪೋಽನ್ವಿತಾಃ

—ಪುಟಗಳು ೩೧—೩೨

೧. ವೈಖಾನಸರು – ಬ್ರಹ್ಮನ ನಖದಿಂದ ಜನಿಸಿದ ಋಷಿಗಳು; ವಾನಪ್ರಸ್ಥರು.

೨. ವಾಲಖಿಲ್ಯರು=ಬ್ರಹ್ಮನ ರೋಮದಿಂದ ಜನಿಸಿದವರು.

೩. ಸಂಪ್ರಕ್ಷಾಲರು—ಭಗವಂತನ ಪಾದಪ್ರಕ್ಷಾಲನದಿಂದ ಜನಿಸಿದವರು ; ಸದಾ ಶರೀರವನ್ನು ತೊಳೆದುಕೊಳ್ಳತಕ್ಕವರು ; ನಾಳೆಗೆ ಬೇಕಾದ ಆಹಾರವನ್ನು ಸಂಗ್ರಹಿಸಿಕೊಳ್ಳದ ಋಷಿಗಳು.

೪. ಮರೀಚಿಪರು—ಸೂರ್ಯಚಂದ್ರರ ಕಿರಣಗಳನ್ನು ಸೇವಿಸಿ ತಪಸ್ಸು ಮಾಡತಕ್ಕವರು.

೫. ಅಶ್ಮಕುಟ್ಟರು—ಕಲ್ಲಿನಿಂದ ಕುಟ್ಟಿದ ಆಹಾರವನ್ನು ಸೇವಿಸತಕ್ಕವರು, ಬೇಯಿಸದಿರುವ ಫಲಮೂಲಗಳನ್ನು ಮಾತ್ರ ಸೇವಿಸತಕ್ಕವರು.

೬. ಪತ್ರಾಹಾರರು—ಎಲೆಗಳನ್ನು ಮಾತ್ರ ತಿನ್ನತಕ್ಕವರು.

೭. ದಂತೋಲೂಖಲಿಗಳು—ಯಾವ ಸಲಕರಣೆಯನ್ನೂ ಬಳಸದೆ ಹಲ್ಲಿನಿಂದ ಮಾತ್ರವೇ ಆಹಾರವನ್ನು ಕಿತ್ತು ತಿನ್ನುವವರು.

೮. ಉನ್ಮಜ್ಜಕರು—ಕುತ್ತಿಗೆಯವರೆಗೆ ನೀರಲ್ಲಿ ಮುಳುಗಿ ತಪಸ್ಸನ್ನಾಚರಿಸತಕ್ಕವರು.

೯. ಗಾತ್ರಶಯ್ಯರು—ಹಾಸಿಗೆಯಿಲ್ಲದೆ ನೆಲದಮೇಲೆಯೇ ಮಲಗತಕ್ಕವರು.

೧೦. ಅಶಯ್ಯರು—ಮಲಗದೆ ಇರತಕ್ಕವರು, ನಿದ್ರೆಯನ್ನು ಬಿಟ್ಟವರು.

೧೧. ಅನವಕಾಶಿಕರು=ಒಂಟಿಗಾಲಿನಲ್ಲಿ ನಿಂತು ತಪಸ್ಸನ್ನು ಮಾಡುವವರು.

೧೨. ಸಲಿಲಾಹಾರರು—ನೀರನ್ನು ಮಾತ್ರ ಕುಡಿದು ಜೀವಿಸುವವರು.

೧೩. ವಾಯುಭಕ್ಷರು = ವಾಯುವನ್ನು ಮಾತ್ರ ಸೇವಿಸತಕ್ಕವರು, ಉಪವಾಸಿಗಳು.

೧೪. ಆಕಾಶನಿಲಯರು—ಬಯಲಿನಲ್ಲಿಯೇ ಇರತಕ್ಕವರು.

೧೫. ಸ್ಥಂಡಿಲಶಾಯಿಗಳು=ದರ್ಭೆ ಅಥವಾ ಮರಳನ್ನು ಹಾಸಿದ ನೆಲದ ಮೇಲೆ ಮಲಗತಕ್ಕವರು.

೧೬. ಊರ್ಧ್ವವಾಸಿಗಳು = ಉನ್ನತವಾದ ಗಿರಿಶಿಖರಾದಿಗಳಲ್ಲಿ ಮಾತ್ರ ನೆಲೆಸಿದವರು.

೧೭. ದಾಂತರು=ಇಂದ್ರಿಯಗಳನ್ನು ನಿಗ್ರಹಿಸಿದವರು (ಈ ಶಬ್ದವನ್ನು ಸಾಮಾನ್ಯಧರ್ಮಬೋಧಕವೆಂದು ಎಲ್ಲರಿಗೂ ಅನ್ವಯಿಸಬಹುದು).

೧೮. ಆರ್ದ್ರಪಟರು=ಸದಾ ಒದ್ದೆಯ ಬಟ್ಟೆಯನ್ನುಟ್ಟವರು.

೧೯. ಸಜಪರು=ಯಾವಾಗಲೂ ಜಪನಿಷ್ಠರು.

೨೦. ತಪೋನಿತ್ಯರು=ಸದಾ ವೇದಾಧ್ಯಯನತತ್ಪರರು.

೨೧. ಪಂಚತಪರು=ಪಂಚಾಗ್ನಿ ಮಧ್ಯದಲ್ಲಿ ತಪಸ್ಸನ್ನಾಚರಿಸುವವರು.

೩

## ತತ್ರ ರಾಜ್ಞಶ್ಚತುರ್ಭಾಗಃ ಪ್ರಜಾ ಧರ್ಮೇಣ ರಕ್ಷತಃ

—ಪುಟ ೩೩

ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವು ಕಂದಾಯವಾಗಿ ಸಲ್ಲತಕ್ಕದ್ದೆಂದು ಧರ್ಮಶಾಸ್ತ್ರವು ವಿಧಿಸುತ್ತದೆ. ಧನಸಂಪಾದನೆ ಇಲ್ಲದ ತಪಸ್ವಿಗಳ ವಿಷಯದಲ್ಲಿ ಹೇಗೆ? ಉಪವಾಸ ಭಿಕ್ಷಾಟನೆಗಳಿಂದ ಜೀವಿಸುವ ತಪಸ್ವಿಗಳ ಧರ್ಮಸಂಪಾದನೆಯಲ್ಲಿ ಆರನೆಯ ಒಂದು ಭಾಗವೂ, ರಾಜ್ಯದ ಅರಣ್ಯದಲ್ಲಿರುವ ಫಲಮೂಲಾದಿಗಳನ್ನು ಭಕ್ಷಿಸುವ ತಪಸ್ವಿಗಳ ಧರ್ಮದಲ್ಲಿ ನಾಲ್ಕನೆಯ ಒಂದು ಭಾಗವೂ ರಾಜನಿಗೆ ಸೇರುತ್ತದೆ. ರಾಜನಿಂದ ವೇತನಾದಿಗಳನ್ನು ಪಡೆದು ಜೀವಿಸುವವರ ಧರ್ಮದಲ್ಲಿ ಅರ್ಧ ಭಾಗವು ರಾಜನಿಗೆ ಸೇರುತ್ತದೆ.

ಇದೇ ರೀತಿಯಲ್ಲಿ ಪ್ರಜೆಗಳು ಅಧರ್ಮದಲ್ಲಿ ತೊಡಗಿದಾಗ ಅಧರ್ಮದ ಒಂದು ಭಾಗವೂ ರಾಜನಿಗೆ ಗಂಟುಬೀಳುತ್ತದೆ.

ಆದ್ದರಿಂದ ರಾಜನಿಗೆ ಸಲ್ಲತಕ್ಕದ್ದು ಆರನೆಯ ಒಂದು ಭಾಗವೆಂದೂ, ನಾಲ್ಕನೆಯ ಒಂದು ಭಾಗವೆಂದೂ ಅಲ್ಲಲ್ಲಿ ಹೇಳಿದ ವಾಕ್ಯಗಳಿಗೆ ವಿರೋಧವಿಲ್ಲ.

೪

## ಶ್ರೀಮಾನಕೃತದಾರಶ್ಚ........ಇತಿ ರಾಮೇಣ ಸಾ ಪ್ರೋಕ್ತಾ

—ಪುಟಗಳು ೧೧೧–೧೧೨

ಶ್ರೀರಾಮನು ಶೂರ್ಪಣಖಿಗೆ ಲಕ್ಷ್ಮಣನ ವಿಷಯವಾಗಿ 'ಅಕೃತದಾರಃ, ಅಪೂರ್ವೀ, ಭಾರ್ಯಯಾ ಚಾರ್ಥೀ' ಎಂದು ಹೇಳಿದ್ದಾನೆ. 'ಲಕ್ಷ್ಮಣನು

ಅವಿವಾಹಿತ, ದಾಂಪತ್ಯಸುಖಕ್ಕೆ ಹೊಸಬ, ಆತನಿಗೆ ಹೆಂಡತಿ ಬೇಕಾಗಿದೆ' ಎಂದು ಅದರ ಅರ್ಥವಾಗುತ್ತದೆ. ಇದು ಅಸತ್ಯವಲ್ಲವೆ? ಶ್ರೀರಾಮನ ಬಾಯಿಂದ ಸುಳ್ಳು ಬರಬಹುದೆ? ಎಂಬ ಶಂಕೆಯಿಂದ ವ್ಯಾಖ್ಯಾನಕಾರರು ಶ್ರೀರಾಮನ ಮಾತುಗಳಿಗೆ ಬೇರೆ ವಿಧದಲ್ಲಿ ಅರ್ಥಮಾಡುತ್ತಾರೆ.

ಅಕೃತದಾರ=ಅಸಹಕೃತದಾರ; ವನೇ ಅಸ್ವೀಕೃತದಾರ. ಲಕ್ಷ್ಮಣನು ತನ್ನೊಡನೆ ಪತ್ನಿಯನ್ನು ಕರೆತಂದಿಲ್ಲ; ಅರಣ್ಯದಲ್ಲಿ ಇನ್ನೊಬ್ಬಳನ್ನು ಮದುವೆ ಯಾಗಿಲ್ಲ.

ಅಪೂರ್ವೀ = ದೀರ್ಘಕಾಲದಿಂದ ಪತ್ನೀಸುಖವಿಲ್ಲದವನು; ಪೂರ್ವ ಭಾರ್ಯೆಯೊಡನೆ ಇಲ್ಲದವನು; ಪರಭಾರ್ಯಾಸುಖವಿಲ್ಲದವನು.

ಭಾರ್ಯಯಾ ಚಾರ್ಥೀ=ಸ್ವಪತ್ನಿಯನ್ನು ಬಯಸತಕ್ಕವನು, ಇತ್ಯಾದಿ.

ಹೀಗೆ ಶ್ರೀರಾಮನ ಬಾಯಿಂದ ಅಸತ್ಯವನ್ನು ನುಡಿಸಬಾರದೆಂದು ಬಹಳ ಶ್ರಮಿಸಿದ್ದಾರೆ. ಶೂರ್ಪಣಖಿಗೆ ಮಾತ್ರ ಅರ್ಥಾಂತರವೇ ತೋರಲೆಂದು ಈ ಬಗೆಯ ಮಾತುಗಳನ್ನು ಉಪಯೋಗಿಸಿದ್ದಾನೆಂದು ಹೇಳುತ್ತಾರೆ.

ಈ ಪರಿಶ್ರಮವೇಕೆಂಬುದು ತಿಳಿಯದು. ಆಗಲೂ ಶೂರ್ಪಣಖಿಯನ್ನು ಬೇಕೆಂದೇ ವಂಚಿಸಿದಂತಾಗಲಿಲ್ಲವೆ? ಈ ವಂಚನೆ ಶ್ರೀರಾಮನಿಗೆ ಯೋಗ್ಯವೊ? ಆದ್ದರಿಂದ ಇದೆಲ್ಲವೂ ಹಾಸ್ಯಕ್ಕಾಗಿ ಶ್ರೀರಾಮನು ಹೇಳಿದ ಮಾತು. ಹಾಸ್ಯದಲ್ಲಿ ಸ್ವಲ್ಪ ಅಸತ್ಯವು ಬೆರೆಯುವುದು ಸಹಜ. ಹಾಸ್ಯದಲ್ಲಿ ಅಸತ್ಯವು ದೋಷವಲ್ಲ. ಶ್ರೀರಾಮನು ಹಾಸ್ಯವನ್ನೇ ಮಾಡದ, ಹಾಸ್ಯವನ್ನರಿಯದ ಜಡಸ್ವಭಾವದವನೆ? ಆದ್ದರಿಂದಲೇ 'ಮನ್ಯತೇ ತದ್ವಚಃ ಸತ್ಯಂ ಪರಿಹಾಸಾವಿಚಕ್ಷಣಾ' (ಶ್ಲೋ. ೧೩) 'ಹಾಸ್ಯವನ್ನರಿಯದ ಶೂರ್ಪಣಖಿಯು ಆ ಮಾತನ್ನು ಸತ್ಯವೆಂದು ತಿಳಿದು ಕೊಂಡಳು' ಎಂದು ಹೇಳಿದೆ.

೫

ಸ ವೃತ್ರ ಇವ ವಜ್ರೇಣ ಫೇನೇನ ನಮುಚಿರ್ಯಥಾ ।
ಬಲೋ ವೇಂದ್ರಾಶನಿಹತೋ ನಿಪಪಾತ ಹತಃ ಖರಃ ॥

—ಪುಟ ೧೮೫

ಕಾವೇರೀತೀರದಲ್ಲಿದ್ದ ಶ್ವೇತಾರಣ್ಯದಲ್ಲಿ ಮಾರ್ಕಂಡೇಯನು ತಪಸ್ಸು

ಮಾಡುತ್ತಿರಲು, ಅವನ ಪ್ರಾಣವನ್ನು ತೆಗೆಯಲು ಬಂದ ಯಮನನ್ನು ಈಶ್ವರನು ನಿಗ್ರಹಿಸಿದ ಕಥೆಯೂ ವೃತ್ರಾಸುರನ ವಧೆಯೂ ಪ್ರಸಿದ್ಧವಾದವು.

ನಮುಚಿಯು ಕಶ್ಯಪನಿಂದ ದನುವಿನಲ್ಲಿ ಜನಿಸಿದ ಒಬ್ಬ ರಾಕ್ಷಸ. ಅವನು ಒದ್ದೆಯಾದ ವಸ್ತುವಿನಿಂದಲೂ ಒಣಗಿದ ವಸ್ತುವಿನಿಂದಲೂ ತನಗೆ ಮರಣವಾಗ ಬಾರದೆಂದು ಬ್ರಹ್ಮನಿಂದ ವರವನ್ನು ಪಡೆದಿದ್ದನು. ಇಂದ್ರನು ನೊರೆಯಿಂದ ಅವನನ್ನು ಸಂಹರಿಸಿದನು.

ಬಲಾಸುರನ ಕಥೆ ಎಲ್ಲಿ ಬಂದಿದೆಯೆಂಬುದು ತಿಳಿಯದು. ಬಲಿಚಕ್ರ ವರ್ತಿಯೇ ಬಲನೆಂದು ಕೆಲವರ ಅಭಿಪ್ರಾಯ. ಬಲಿಯು ಪ್ರಹ್ಲಾದಪುತ್ರನಾದ ವಿರೋಚನನ ಮಗ. ಬಲಿಯು ಇಂದ್ರನಿಂದ ಹತನಾಗಿ ಶುಕ್ರಾಚಾರ್ಯನ ಮೃತಸಂಜೀವಿನೀವಿದ್ಯೆಯಿಂದ ಪುನಃ ಬದುಕಿದನೆಂದು ಕಥೆ ಇದೆ.

೬

## ತದಿದಂ ಕಾಕತಾಲೀಯಂ ಘೋರಮಾಸಾದಿತಂ ಮಯಾ

—ಪುಟ ೨೫೦

ಕಾಕತಾಳೀಯ ಎಂಬುದು ಒಂದು ಲೌಕಿಕನ್ಯಾಯ. ಕಾಗೆಯು ತನ್ನ ಪಾಡಿಗೆ ಹಾರಿಹೋಗುತ್ತಿರುವಾಗ ಒಂದು ತಾಳೆಯಹಣ್ಣು ಅದರ ತಲೆಯಮೇಲೆ ಬಿದ್ದಿತು. ಕಾಗೆ ಸತ್ತುಹೋಯಿತು. ಕಾಗೆ ಆ ಸ್ಥಳದಲ್ಲಿ ಹಾರುವುದಕ್ಕೂ ತಾಳೆಯಹಣ್ಣು ಬೀಳುವುದಕ್ಕೂ ಯಾವ ನಿರ್ದಿಷ್ಟವಾದ ಕಾರಣವೂ ಇರಲಿಲ್ಲ. ಹೀಗೆ ಗೊತ್ತಾದ ಕಾರಣವಿಲ್ಲದೆ ಆಕಸ್ಮಿಕವಾಗಿ ನಡೆಯುವ ಘಟನೆ ಕಾಕತಾಳೀಯ. ಇದರ ಅರ್ಥವನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ: ಕಾಗೆಯ ತಲೆಯ ಮೇಲೆ ತಾಳೆಯಹಣ್ಣು ಬೀಳಲಿಲ್ಲ. ಕಾಗೆಯು ಬರುವುದಕ್ಕೂ ಹಣ್ಣು ಬೀಳು ವುದಕ್ಕೂ ಸರಿಹೋಯಿತು. ಕಾಗೆ ಹಣ್ಣನ್ನು ತಿಂದಿತು. ಒಟ್ಟಿನಲ್ಲಿ ಅಭಿಪ್ರಾಯ ಒಂದೇ. ಆಕಸ್ಮಿಕ ಘಟನೆಯು ಒಳ್ಳೆಯದಾದರೆ ಎರಡನೆಯ ವಿವರಣೆ. ಕೆಟ್ಟದಾದರೆ ಮೊದಲನೆಯ ವಿವರಣೆ.

೭

## ದಾರಿಯಲ್ಲಿ ಪಟ್ಟಣ....ನಗರ–ಇವೆಲ್ಲವನ್ನೂ ನೋಡುತ್ತ ಹೋದರು.

—ಪುಟ ೨೫೩

ನಗರ, ಪಟ್ಟಣಗಳಿಗಿರುವ ಭೇದವೇನು? ವಾಸ್ತುಶಾಸ್ತ್ರದಲ್ಲಿ ಹೀಗೆ ಹೇಳಿದೆ:

ನಗರ = ನಾನಾ ಶಿಲ್ಪಗಳಿಂದಲೂ ಕ್ರಯವಿಕ್ರಯಗಳನ್ನು ಮಾಡತಕ್ಕ ಜನರಿಂದಲೂ ತುಂಬಿರುವ ದೊಡ್ಡ ಊರು.

ಪಟ್ಟಣ = ದ್ವೀಪಾಂತರಗಳಿಂದ ಬಂದ ಸರಕುಗಳ ವ್ಯಾಪಾರಸ್ಥಳವಾಗಿದ್ದು ಸಮುದ್ರತೀರದಲ್ಲಿರುವ ನಗರ; ರೇವುಪಟ್ಟಣ.

೮

## ಪುಟಗಳು ೨೬೩, ೨೬೪ : ಶ್ಲೋಕಗಳು ೩೨, ೩೩.

ಶ್ಲೋಕ ೩೨ : ಕೋಶವನ್ನು ವರ್ಧಿಸತಕ್ಕ ವನ್ಯವಾದ ಧನವು ಜನರಿಗೆ ಅತ್ಯಂತ ಪ್ರಶಸ್ತವಾದುದು. ಬ್ರಹ್ಮಲೋಕವನ್ನು ಸೇರಿ ಬ್ರಹ್ಮಸ್ವರೂಪನಾದ ಶುಕ್ರನಿಗೆ ಸಂಕಲ್ಪಮಾತ್ರದಿಂದ ದೊರಕುವ ಸಕಲ ಭೋಗ್ಯವಸ್ತುವೂ ಹೇಗೆ ಅತ್ಯಂತ ಶ್ರೇಷ್ಠವಾಗಿರುವುದೋ ಹಾಗೆ. ಶುಕ್ರನೆಂದರೆ, ಮುಕ್ತನೆಂದು ಅರ್ಥ. 'ಸ ಪರ್ಯಗಾಚ್ಛುಕ್ರಮಕಾಯಮವ್ರಣಮ್' ಎಂಬ ಶ್ರುತಿಯು ಇದಕ್ಕೆ ಪ್ರಮಾಣ.

ಧನದಲ್ಲಿ ಶ್ರೇಷ್ಠವಾದುದೆಲ್ಲವೂ ಜನರ ಭಂಡಾರವನ್ನು ಬಲಪಡಿಸುತ್ತದೆ, ಮನುಷ್ಯರು ಮನೋರಥವಲ್ಲಿ ಕಲ್ಪಿಸಿಕೊಳ್ಳುವ ಐಶ್ವರ್ಯವೆಲ್ಲವೂ ಶುಕ್ರನ ಭಂಡಾರವನ್ನು ವೃದ್ಧಿಪಡಿಸುವಹಾಗೆ. 'ಮನುಷ್ಯೇಭ್ಯಃ ಸಮಾದತ್ತೇ ಶುಕ್ರಶ್ಚಿಂತಾರ್ಜಿತಂ ಧನಮ್' ಎಂದು ಉದ್ಯೋಗಪರ್ವದಲ್ಲಿ ಹೇಳಿದ ವಾಕ್ಯವು ಇದಕ್ಕೆ ಆಧಾರ.

ರಾಜ್ಯದಲ್ಲಿ ದೊರೆಯುವ ಧನಕ್ಕಿಂತ ವನದಲ್ಲಿ ದೊರೆಯುವ ಧನವು ಪ್ರಶಸ್ತವಾದದ್ದು. ಆದ್ದರಿಂದ ಸುವರ್ಣಮೃಗವನ್ನು ನಾವು ಸಂಗ್ರಹಿಸಬೇಕು.

ಶ್ಲೋಕ ೩೩ ; ವಿಚಾರವನ್ನು ಮಾಡದೆ ಮನುಷ್ಯನು ಯಾವುದನ್ನು ಸಂಪಾದಿಸಲು ಪ್ರಯತ್ನಿಸುವನೋ ಅದೇ ಅರ್ಥವೆನಿಸಿಕೊಳ್ಳುತ್ತದೆ.

## ೯

## ಕರ್ತವ್ಯಮಿಹ ತಿಷ್ಠಂತ್ಯಾ ಯತ್ಪ್ರಧಾನಸ್ತ್ವಮಾಗತಃ

—ಪುಟ ೨೭೫

'ಯಃ ರಾಮಃ ಪ್ರಧಾನಂ ಯಸ್ಯ ಸಃ ಯತ್ಪ್ರಧಾನಃ' ಎಂದು ವ್ಯಾಖ್ಯಾನಕಾರರು ವಿಗ್ರಹವನ್ನು ಬರೆಯುತ್ತಾರೆ. ಅವರು ಯತ್‌ಪದದಿಂದ ಶ್ರೀರಾಮನನ್ನು ಗ್ರಹಿಸುತ್ತಾರೆ. "ಲಕ್ಷ್ಮಣ, ನೀನು ಶ್ರೀರಾಮನನ್ನು ಪ್ರಧಾನವಾಗಿಟ್ಟುಕೊಂಡು ಬಂದವನು. ಆತನೇ ಪ್ರಾಣಸಂಶಯಕ್ಕೀಡಾದ ಮೇಲೆ ನಾನು ಇಲ್ಲಿ ಬದುಕಿದ್ದು ಫಲವೇನು?" ಎಂದು ಅರ್ಥವನ್ನು ಹೇಳುತ್ತಾರೆ.

ಆದರೆ ಪ್ರಕೃತದಲ್ಲಿ ಲಕ್ಷ್ಮಣನಿಗೆ ಶ್ರೀರಾಮನೇ ಪ್ರಧಾನನೆಂದು ಹೇಳುವುದರ ಉದ್ದೇಶವೇನು? ಸೀತೆಯು ತಾನು ಬದುಕಿರಬಾರದೆಂದು ಹೇಳುವ ಅಂಶಕ್ಕೆ ಅದು ಸಾಧಕವೆ? ಆದ್ದರಿಂದ, ಯತ್ ಪದದಿಂದ ಸೀತೆಯನ್ನು ಗ್ರಹಿಸುವುದು ಉತ್ತಮ. "ನೀನು ನನ್ನನ್ನು ಗುರಿಯಾಗಿಟ್ಟುಕೊಂಡು ಬಂದಿದ್ದೀಯೆ. ಶ್ರೀರಾಮನೂ ಪ್ರಾಣಸಂಕಟಕ್ಕೀಡಾದರೆ, ನಾನು ಇಲ್ಲಿದ್ದು ಆಗಬೇಕಾದ್ದೇನು? ಜೀವಿಸಿದ್ದರೂ ಫಲವೇನು?" ಎಂದು ತಾತ್ಪರ್ಯ.

## ೧೦

## ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ

—ಪುಟ ೨೯೧

ಶ್ರೀರಾಮ ಮತ್ತು ಸೀತಾದೇವಿಯರ ವಯೋವಿಷಯವನ್ನು ಬಾಲಕಾಂಡದ ೫ನೆಯ ಅನುಬಂಧದಲ್ಲಿ ವಿಸ್ತಾರವಾಗಿ ಬರೆದಿದೆ. ಇಲ್ಲಿ ಹೇಳಬೇಕಾದ್ದೇನೆಂದರೆ, ಅಕ್ಷರಾರ್ಥವನ್ನು ಹಿಡಿದರೆ ವಯೋವಿಷಯದಲ್ಲಿ ಪರಸ್ಪರ ವಿರೋಧವು ಕಂಡುಬರುತ್ತದೆ. ವಯಸ್ಸಿನಲ್ಲಿರುವ ಅಲ್ಪಭೇದವನ್ನು ಗಮನಿಸದೆ ತಾತ್ಪರ್ಯದ ಕಡೆಗೆ ಲಕ್ಷಿಸಬೇಕು. ಅನಾಸ್ಥೆಯಿಂದ ವ್ಯತ್ಯಾಸವನ್ನು ಗಣಿಸದೆ ವಯಸ್ಸಿನ ಪ್ರಸ್ತಾವ ಅಲ್ಲಲ್ಲಿ ಬಂದಿದೆ. 'ನಮ್ಮಿಬ್ಬರಿಗೂ ಒಳ್ಳೆಯ ತಾರುಣ್ಯವಿದ್ದಾಗಲೇ ರಾಜಭೋಗವನ್ನು ಬಿಟ್ಟು ಅರಣ್ಯಕ್ಕೆ ಬರಬೇಕಾಯಿತು' ಎಂಬ ಅಭಿಪ್ರಾಯದಿಂದ ಸೀತೆಯು ಹೀಗೆ ಹೇಳಿದ್ದಾಳೆ.

೧೧

## ಸರ್ವಲಕ್ಷಣಸಂಪನ್ನಂ ನ್ಯಗ್ರೋಧಪರಿಮಂಡಲಮ್

—ಪುಟ ೨೯೫

ನ್ಯಗ್ರೋಧವೆಂದರೆ ಆಲದಮರ. ಅದು ತನ್ನನ್ನು ಆಶ್ರಯಿಸಿದವರ ತಾಪವನ್ನು ಕಳೆದು ತಂಪನ್ನು ಕೊಡುತ್ತದೆ. ಹಾಗೆ ಶ್ರೀರಾಮನು ತನ್ನನ್ನು ಆಶ್ರಯಿಸಿದವರ ತಾಪವನ್ನು ಕಳೆದು ಸೌಖ್ಯವನ್ನು ಕೊಡತಕ್ಕವನಾದ್ದರಿಂದ ನ್ಯಗ್ರೋಧಪರಿಮಂಡಲನೆಂದು ವ್ಯಾಖ್ಯಾನಕಾರರು ಬರೆದಿದ್ದಾರೆ. ಆದರೆ 'ನ್ಯಗ್ರೋಧಪರಿಮಂಡಲ' ಎಂಬುದು ಸಾಮುದ್ರಿಕಶಾಸ್ತ್ರದ ಪಾರಿಭಾಷಿಕಶಬ್ದ. ಭಟ್ಟಿಕಾವ್ಯದಲ್ಲಿ ಈ ಶಬ್ದದ ಪ್ರಯೋಗವಿದೆ (೫–೧೮). ಅದಕ್ಕೆ ವ್ಯಾಖ್ಯಾನ ಬರೆಯುತ್ತ ಭಟ್ಟಿಮಲ್ಲಿಕನು—

**ಪ್ರಸಾರಿತಭುಜಸ್ಯೇಹ ಮಧ್ಯಭಾಗದ್ವಯಾಂತರಮ್ ।**
**ಉಚ್ಛ್ರಾಯೇಣ ಸಮಂ ಯಸ್ಯ ನ್ಯಗ್ರೋಧಪರಿಮಂಡಲಃ ॥**

ಎಂಬ ಲಕ್ಷಣ ಶ್ಲೋಕವನ್ನು ಉದಾಹರಿಸಿದ್ದಾನೆ. ಮತ್ಸ್ಯಪುರಾಣದಲ್ಲಿ—

**ವ್ಯಾಮೇನ ಉಚ್ಛ್ರಯೋ ಯಸ್ಯ ಅಥ ಊರ್ಧ್ವಶ್ಚ ದೇಹಿನಃ ।**
**ಸಮೋಚ್ಛ್ರಾಯ ಪರೀಣಾಹೋ ನ್ಯಗ್ರೋಧಪರಿಮಂಡಲಃ ॥**

(೧೧೮)

ಎಂದು ಹೇಳಿದೆ. "ಒಬ್ಬ ಮನುಷ್ಯನು ಎರಡು ತೋಳುಗಳನ್ನೂ ನೀಡಿದಾಗ ಎಷ್ಟು ಉದ್ದವಾಗುತ್ತದೆಯೋ (ಒಂದುಮಾರು) ಅಷ್ಟೇ ಆತನು ಎತ್ತರವಾಗಿದ್ದರೆ ನ್ಯಗ್ರೋಧಪರಿಮಂಡಲ ಎಂದು ಹೆಸರು". ಕೃತಯುಗದಲ್ಲಿ ಚಕ್ರವರ್ತಿಗಳು ನ್ಯಗ್ರೋಧಪರಿಮಂಡಲರಾಗಿದ್ದರು—ಎಂದು ವರ್ಣನೆ ಇದೆ. ಲಕ್ಷಣಸಂಪನ್ನೆಯಾದ ಸ್ತ್ರೀಯನ್ನು 'ನ್ಯಗ್ರೋಧಪರಿಮಂಡಲಾ' ಎಂದು ಹೇಳಿದ್ದಾರೆ.

**೧. ಸ್ತನೌ ಸುಕಠಿನೌ ಯಸ್ಯಾ ನಿತಂಬೇ ಚ ವಿಶಾಲತಾ ।**
**ಮಧ್ಯೇ ಕ್ಷೀಣಾ ಭವೇದ್ಯಾ ಸಾ ನ್ಯಗ್ರೋಧಪರಿಮಂಡಲಾ ॥**

(ಶಬ್ದ ಕಲ್ಪದ್ರುಮ)

**೨. ದೂರ್ವಾಕಾಂಡಮಿವ ಶ್ಯಾಮಾ ನ್ಯಗ್ರೋಧಪರಿಮಂಡಲಾ॥**

(ಭರತಮಲ್ಲಿಕ)

೧೨

## ತೃಣಮಂತರತಃ ಕೃತ್ವಾ ರಾವಣಂ ಪ್ರತ್ಯಭಾಷತ

—ಪುಟ ೩೫೨

ಸೀತಾದೇವಿಯು ಹುಲ್ಲುಕಡ್ಡಿಯನ್ನು ನಡುವೆ ಹಿಡಿದು ರಾವಣನೊಡನೆ ಮಾತನಾಡಿದಳು. ಈ ವಿಷಯವು ಸುಂದರಕಾಂಡದಲ್ಲಿಯೂ ಬಂದಿದೆ (ಸುಂದರ., ೨೧–೩). ಹುಲ್ಲುಕಡ್ಡಿಯನ್ನು ನಡುವೆ ಹಿಡಿಯುವ ಉದ್ದೇಶವೇನು? ಪತಿವ್ರತಾ ಸ್ತ್ರೀಯು ಸಾಕ್ಷಾತ್ತಾಗಿ ಪರಪುರುಷನೊಡನೆ ಮಾತನಾಡಬಾರದೆಂಬ ವಿಧಿಗೆ ಅನುಗುಣವಾಗಿ ಹುಲ್ಲುಕಡ್ಡಿಯನ್ನು ಹಿಡಿದಳು ಎಂದು ವ್ಯಾಖ್ಯಾನಕಾರರು ಬರೆಯುತ್ತಾರೆ. ಸ್ಪಷ್ಟವಾಗಿ ದುರುದ್ದೇಶದಿಂದ ಬಂದು ಸಂಭಾಷಿಸುವ ಪುರುಷನು ಪರಪುರುಷನೆಂದು ತಿಳಿಯಬೇಕಾಗುತ್ತದೆ. ಏಕೆಂದರೆ, ಲಕ್ಷ್ಮಣ, ಹನುಮಂತ, ವಿಭೀಷಣ—ಇವರೊಡನೆ ಸಂಭಾಷಿಸುವಾಗ ಹುಲ್ಲುಕಡ್ಡಿಯನ್ನು ಹಿಡಿದ ವೃತ್ತಾಂತ ಬಂದಿಲ್ಲ. ರಾವಣನು ಸಂನ್ಯಾಸಿವೇಷದಿಂದ ಬಂದಾಗಲೂ ಇದರ ಪ್ರಸ್ತಾವವಿಲ್ಲ. 'ತೃಣಮಂತರತಃ ಕೃತ್ವಾ' ಎಂಬುದಕ್ಕೆ ಬಹು ಬಗೆಯಲ್ಲಿ ಸೀತೆಯ ಆಶಯವನ್ನು ವಿವರಿಸುತ್ತಾರೆ:

೧. ರಾವಣ, ನಿನ್ನ ಯೋಗ್ಯತೆ ಒಂದು ಹುಲ್ಲುಕಡ್ಡಿಯಷ್ಟು.

೨. ಹುಲ್ಲಿನೊಡನಾದರೂ ಮಾತನಾಡಿಯೇನು, ನಿನ್ನೊಡನೆ ಮಾತನಾಡಲಾರೆ.

೩. ಶ್ರೀರಾಮನೆದುರಿಗೆ ನೀನು ಹುಲ್ಲಿಗೆ ಸಮಾನ.

೪. ಹುಲ್ಲನ್ನು ಸುಡುವಂತೆ ಶ್ರೀರಾಮನು ನಿನ್ನನ್ನು ಸುಟ್ಟುಹಾಕುವನು, ಇತ್ಯಾದಿ.

ಅಪರಿಚಿತರೊಡನೆ ಅನ್ಯಾಭಿಮುಖರಾಗಿ ಮಾತಾಡುವುದು ಸ್ತ್ರೀಯರ ಸ್ವಭಾವ. ಇದು ಸ್ವಭಾವವರ್ಣನೆ ಎನ್ನಬಹುದು.

೧೩

## ಬೆಟ್ಟದಿಂದ ಪ್ರತಿಧ್ವನಿ ಮಾತ್ರ ಬಂದಿತು

—ಪುಟ ೪೦೨

ಈ ಸಂದರ್ಭದಲ್ಲಿ ಬೆಟ್ಟದಿಂದ ಶ್ರೀರಾಮನು ಹೇಳಿದಂತೆಯೇ ಪ್ರತಿಧ್ವನಿ

ಬಂದಿತೆಂದೂ, ಅದನ್ನು ಕೇಳಿ ಶ್ರೀರಾಮನು ಕ್ರುದ್ಧನಾದನೆಂದೂ ಊಹಿಸುವುದು ಕಾವ್ಯದೃಷ್ಟಿಯಿಂದ ರಮ್ಯವಾಗಿದೆ.

ಕಚ್ಚಿತ್ ಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ ।
ರಾಮಾ ರಮ್ಯೇ ವನೋದ್ದೇಶೇ ಮಯಾ ವಿರಹಿತಾ ತ್ವಯಾ ॥

ಎಂದೊಡನೆ ಅದರಂತೆಯೇ ಪ್ರತಿಧ್ವನಿಯುಂಟಾಯಿತು. ಪ್ರತಿಧ್ವನಿಯ ಅರ್ಥ ಹೀಗೆ: ಕ್ಷಿತಿಭೃತಾಂ ನಾಥ – ರಾಜಾಧಿರಾಜ–ಶ್ರೀರಾಮ, ರಮ್ಯವಾದ ಈ ಆರಣ್ಯದಲ್ಲಿ ಸರ್ವಾಂಗಸುಂದರಿಯಾದ ಒಬ್ಬ ಯುವತಿಯನ್ನು ನೋಡಿದೆಯಾ ? ಅವಳು ನನ್ನಿಂದ ವಿರಹಿತಳಾಗಿ ಒಂಟಿಯಾಗಿದ್ದಳು !

ತನ್ನ ಮಾತನ್ನು ತನಗೇ ಪರ್ವತವು ತಿರುಗಿಸಿ ಹೇಳಿದ್ದರಿಂದ ಶ್ರೀರಾಮನಿಗೆ ಕೋಪ ಬಂದಿತು !

ವಿಕ್ರಮೋರ್ವಶೀಯದ ನಾಲ್ಕನೆಯ ಅಂಕದಲ್ಲಿ ಪುರೂರವನು ಊರ್ವಶಿಯನ್ನರಸುತ್ತ ಪರ್ವತವನ್ನುದ್ದೇಶಿಸಿ ಹೀಗಿಯೇ ಕೇಳುತ್ತಾನೆ. ಕಾಳಿದಾಸನು ಈ ಶ್ಲೋಕವನ್ನೇ ಸ್ವಲ್ಪ ಪರಿವರ್ತಿಸಿ ಉಪಯೋಗಿಸಿಕೊಂಡಿದ್ದಾನೆ :

" ಪುರೂರವಾಃ—
ಸರ್ವಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ ।
ರಾಮಾ ರಮ್ಯೇ ವನಾಂತೇಽಸ್ಮಿನ್ ಮಯಾ ವಿರಹಿತಾ ತ್ವಯಾ ॥
(ತಥೈವ ಪ್ರತಿಶಬ್ದಂ ಶೃಣೋತಿ । ಆಕರ್ಣ್ಯ ಸಹರ್ಷಮ್)
ಕಥಂ ಯಥಾಕ್ರಮಂ ದೃಷ್ಟೇತ್ಯಾಹ । "

೧೪

## ಅಹ್ನಾ ಪುತ್ರಶತಂ ಜಜ್ಞೇ ತಥೈವಾಸ್ಯ ಪುನರ್ಹತಮ್

—ಪುಟ ೪೧೬

ಇಕ್ಷ್ವಾಕುವಂಶದಲ್ಲಿ ಕಲ್ಮಾಷಪಾದನೆಂಬ ಒಬ್ಬ ರಾಜನಿದ್ದನು. ಅವನು ಒಂದುಸಲ ಬೇಟೆಯಾಡಿ ದಣಿದು ಬರುತ್ತಿದ್ದಾಗ, ಎದುರಿಗೆ ವಸಿಷ್ಠರ ಪುತ್ರನಾದ ಶಕ್ತಿ ಎಂಬ ಋಷಿಯು ಬಂದನು. ರಾಜನು ಶಕ್ತಿಯನ್ನು ಕುರಿತು ತನಗೆ ದಾರಿಯನ್ನು ಬಿಟ್ಟು ಪಕ್ಕದಲ್ಲಿ ಹೋಗಬೇಕೆಂದು ತಿಳಿಸಿದನು. ಶಕ್ತಿಯು

"ರಾಜ, ನಾನು ಬ್ರಾಹ್ಮಣ. ನನಗೆ ನೀನು ದಾರಿಯನ್ನು ಬಿಡಬೇಕೇ ವಿನಾ ನಾನು ನಿನಗೆ ದಾರಿಯನ್ನು ಬಿಟ್ಟು ಸರಿಯುವುದು ಯುಕ್ತವಲ್ಲ" ಎಂದು ಹೇಳಿದನು. ಕಲ್ಮಾಷಪಾದನಿಗೆ ಕೋಪ ಬಂದಿತು. ಅವನು ಚಾಟಿಯಿಂದ ಶಕ್ತಿಯನ್ನು ಹೊಡೆದನು. ಶಕ್ತಿಯು ಕುಪಿತನಾಗಿ "ರಾಜ, ರಾಕ್ಷಸನಂತೆ ನಡೆದುಕೊಂಡಿದ್ದೀಯೆ. ನೀನು ರಾಕ್ಷಸನೇ ಆಗು" ಎಂದು ಶಪಿಸಿದನು.

ವಸಿಷ್ಠರಮೇಲೆ ದ್ವೇಷವನ್ನು ಸಾಧಿಸುತ್ತಿದ್ದ ವಿಶ್ವಾಮಿತ್ರನಿಗೆ ಈ ವೃತ್ತಾಂತವು ತಿಳಿಯಿತು. ಅವನು ಕಿಂಕರನೆಂಬ ರಾಕ್ಷಸನನ್ನು ಕಳಿಸಿ, ಕಲ್ಮಾಷಪಾದನಲ್ಲಿ ಆವಿಷ್ಟನಾಗುವಂತೆ ಪ್ರೇರಿಸಿದನು.

ರಾಕ್ಷಸಾವಿಷ್ಟನಾದ ಆ ರಾಜನು ಒಬ್ಬ ಬ್ರಾಹ್ಮಣನಿಗೆ ನರಮಾಂಸವನ್ನು ಊಟಕ್ಕೆ ಹಾಕಿಸಿದನು. ಆದರಿಂದ ಕುಪಿತನಾದ ಆ ಬ್ರಾಹ್ಮಣನು 'ನೀನು ರಾಕ್ಷಸನಾಗು' ಎಂದು ರಾಜನನ್ನು ಶಪಿಸಿದನು.

ಹೀಗೆ ಕಲ್ಮಾಷಪಾದನಲ್ಲಿ ರಾಕ್ಷಸಗುಣಗಳು ಏಕೀಭವಿಸಿದವು. ಅವನು ತನ್ನನ್ನು ಮೊದಲು ಶಪಿಸಿದ ಶಕ್ತಿಯನ್ನೂ ಅವನ ತಮ್ಮಂದಿರಾದ ತೊಂಬತ್ತೊಂಬತ್ತು ಮಂದಿ ವಸಿಷ್ಠಪುತ್ರರನ್ನೂ ಭಕ್ಷಿಸಿದನು.

(ಮಹಾಭಾರತ, ಆದಿಪರ್ವ—. ೭೫)

೧೫

## ಏವಮುಕ್ತಸ್ತು ಧರ್ಮಾತ್ಮಾ ದನುನಾ ತೇನ ರಾಘವಃ

—ಪುಟ ೪೪೮

ಕಬಂಧನನ್ನು ಈ ಸರ್ಗದ ಏಳನೆಯ ಶ್ಲೋಕದಲ್ಲಿ 'ದನುಪುತ್ರ'ನೆಂದು ಹೇಳಿದೆ. ಈಗ ದನು ಎಂದು ವ್ಯವಹರಿಸಲಾಗಿದೆ. ಮುಂದೆ ಕಿಷ್ಕಿಂಧಾಕಾಂಡದಲ್ಲಿ 'ಏವಮುಕ್ತ್ವಾ ದನುಃ ಸ್ವರ್ಗಂ ಭ್ರಾಜಮಾನೋ ಗತಃ ಸುಖಮ್' (೪–೧೬) ಎಂಬುದಾಗಿ ಲಕ್ಷ್ಮಣನು ಕಬಂಧನನ್ನು ದನುವೆಂದೇ ಕರೆಯುವನು. ಕಬಂಧನು ದನುವೆ? ದನುಪುತ್ರನೆ?

ಇದಕ್ಕೆ ಸಮಾಧಾನವೇನೆಂದರೆ, ದನುವಿನ ಮಗನಾದ ಕಬಂಧನಿಗೂ ದನುವೆಂದು ಹೆಸರಿರಬಹುದು. ತಂದೆಮಕ್ಕಳಿಗೆ ಒಂದೇ ಹೆಸರಿರುವುದು

ಅಸಂಭವವೇನಲ್ಲ. ಅಲ್ಲದೆ ಅಂಕಿತನಾಮವು ಬೇರೆ ಇದ್ದರೂ ಔಪಚಾರಿಕವಾಗಿ ತಂದೆಯ ಹೆಸರಿನಿಂದ ಮಗನನ್ನು ವ್ಯವಹರಿಸುವ ರೂಢಿಯುಂಟು.

ಆದರೆ ಈ ಸರ್ಗದ ಏಳನೆಯ ಶ್ಲೋಕದಲ್ಲಿ—

ಶ್ರಿಯಾ ವಿರಾಜಿತಂ ಪುತ್ರಂ ದನುಂ ತ್ವಂ ವಿದ್ಧಿ ಲಕ್ಷ್ಮಣ'

ಎಂದು ಪಾಠಾಂತರವು ದೊರೆಯುತ್ತದೆ. ಆಗ 'ಕಬಂಧನು ಶ್ರೀ ಎಂಬವಳ ಅಥವಾ ಶ್ರೀ ಎಂಬವನ ಮಗ. ಅವನ ಹೆಸರು ದನು' ಎಂದು ಅರ್ಥವಾಗುತ್ತದೆ. ಕ್ಷೇಮೇಂದ್ರನ ರಾಮಾಯಣಮಂಜರಿಯು ಈ ಪಾಠಾಂತರಕ್ಕೆ ಸಂವಾದಿಯಾಗಿದೆ. ಅದರಲ್ಲಿ 'ದನುರ್ನಾಮ ಶ್ರಿಯಃ ಪುತ್ರಃ ಪೂರ್ವಜೋ ರೂಪವಾನಹಮ್' ಎಂದು ಸ್ಪಷ್ಟವಾಗಿ ಹೇಳಿದೆ.

(ರಾ. ಮಂಜರೀ, ಅರಣ್ಯ. ೧೦೮೦)

೧೬

**ರಾಮ ಷಡ್ಯುಕ್ತಯೋ ಲೋಕೇ ಯಾಭಿಃ ಸರ್ವಂ ವಿಮೃಶ್ಯತೇ**

—ಪುಟ ೪೫೨

ಆರು ಉಪಾಯಗಳು : ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀ ಭಾವ ಮತ್ತು ಸಮಾಶ್ರಯ. ಇವುಗಳಿಗೆ ಷಾಡ್ಗುಣ್ಯಗಳೆಂದೂ ಹೆಸರಿದೆ. ಅರ್ಥವಿವರಣೆಗೆ ಅಯೋಧ್ಯಾಕಾಂಡದ ೮೫೦ ನೆಯ ಪುಟವನ್ನು ನೋಡಿ.

ದಶಾಂತೇನ = ದುರ್ದೆಸೆಯ ಪರಿಪಾಕದಿಂದ, ಪರಿಮೃಷ್ಟಃ = ಸಂಬಂಧ ಹೊಂದಿದವನು, ದಶಾಭಾಗೇನ = ದುರ್ದೆಸೆಯ ಅಂಶವನ್ನು ಹೊಂದಿದ ಪುರುಷನಿಂದ, ಸೇವ್ಯತೇ = ಸೇವಿಸಲ್ಪಡುತ್ತಾನೆ. ಇದು ರಾಜನೀತಿ. ತ್ವಂ — ನೀನು, ದಶಾಭಾಗಗತಃ = ದುರ್ದೆಸೆಯನ್ನು ಹೊಂದಿದ್ದೀಯೆ. ಆದ್ದರಿಂದ, ಹೀನಃ = ಸೀತಾವಿಯುಕ್ತನಾಗಿರುವೆ.

ಕಷ್ಟದಲ್ಲಿರುವವನು ಕಷ್ಟಕ್ಕೆ ಸಿಕ್ಕಿದವನೊಡನೆ ಒಪ್ಪಂದಮಾಡಿಕೊಳ್ಳುವುದು ನೀತಿ. ಆದ್ದರಿಂದ ನೀನು ಸುಗ್ರೀವನನ್ನು ಸಮಾಶ್ರಯಿಸುವುದು ಯುಕ್ತವೆಂದು ಅಭಿಪ್ರಾಯ.

